ವಿಷಯಾನುಕ್ರಮಣಿಕೆ

ಶ್ರೀ ಜಯಚಾಮರಾಜೇಂದ್ರ ಗ್ರಂಥರತ್ನಮಾಲಾ

ಸಂಖ್ಯೆ—೫೦

ಶ್ರೀ ಬ್ರಹ್ಮವೈವರ್ತ ಮಹಾಪುರಾಣಂ

(ಕನ್ನಡ ಅನುವಾದ ಸಹಿತ)

ಸಂಚಿಕೆ ೮

ಅನುವಾದಕ :

ಸಾಹಿತ್ಯ ಮತ್ತು ಕನ್ನಡ ವಿದ್ವಾನ್

ಚಿಟ್ಟದಪುರದ ಸುಬ್ರಾಯರ ಮಗ ಕೃಷ್ಣಪ್ಪ,

ಸಂಸ್ಕೃತ ಪಂಡಿತ,

ಮರಿಮಲ್ಲಪ್ಪ ಹೈಸ್ಕೂಲ್, ಮೈಸೂರು.

ಶ್ರೀ ಶಾರದಾ ಪ್ರೆಸ್,

ಮೈಸೂರು,

೧೯೫೦

ಪೀಠಿಕೆ

ಶ್ರೀಕೃಷ್ಣಜನ್ಮಖಂಡದ ಈ ದ್ವಿತೀಯ ಸಂಪುಟದಲ್ಲಿ ಶ್ರೀಕೃಷ್ಣನ ಅದ್ಭುತವಾದ ಲೀಲಾವಿಲಾಸಗಳು ವರ್ಣಿತವಾಗಿವೆ. ಇವರಲ್ಲಿ ಬಂದಿರುವ 'ಕಾಲೀಯ ಸರ್ಪ ದಮನ' ಮತ್ತು 'ಗೋವರ್ಧನೋದ್ಧರಣ'ವು 'ಪವಾಡ'ವಾಗಿ ತೋರುವುದಾದರೂ ಅವುಗಳಿಗೆ ಪೌರಾಣಿಕವಾದ ಹಿನ್ನೆಲೆಯು ಸಾಕಾದಷ್ಟಿದೆ. ಕಲಾವತಿಯ ಇತಿಹಾಸ ನಿರೂಪಣೆಯಲ್ಲಿ ಪಾತಿವ್ರತ್ಯದ ಮಾಹಾತ್ಮ್ಯವೂ, ತಿಲೋತ್ತಮೆ ಮತ್ತು ಸಾಹಸಿಕರ ಕಥಾಪ್ರಸ್ತಾವದಲ್ಲಿ ಕಾಮಾರ್ತರ ದುಷ್ಪರಿಣಾಮವೂ. ಅಂಬರೀಷ ಮಹಾರಾಜನ ಕಥಾಪ್ರಸಂಗದಲ್ಲಿ ಏಕಾದಶೀವ್ರತದ ವೈಶಿಷ್ಟ್ಯವೂ ಸವಿಸ್ತರವಾಗಿ ನಿರೂಪಿತವಾಗಿವೆ.

'ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಂ |
ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ' ||

ಎಂದು ಗೀತೆಯಲ್ಲಿ ಹೇಳಿರುವಂತೆ ಬಕ, ಕೇಶಿ, ಪ್ರಲಂಬ, ಧೇನುಕ, ಕಂಸ ಮುಂತಾದ ರಾಕ್ಷಸರನ್ನು ನಾಶಗೊಳಿಸಿ, ಅಂಬರೀಷನೇ ಮುಂತಾದ ಸಾಧುಗಳನ್ನು ರಕ್ಷಿಸಿ. 'ಗೌರೀವ್ರತ,' 'ಏಕಾದಶೀವ್ರತ' ಮುಂತಾದ ವ್ರತಗಳನ್ನು ಬೋಧಿಸುವುದರ ಮೂಲಕ ಧರ್ಮಸಂಸ್ಥಾಪನೆಯನ್ನು ಮಾಡಿರುವ ಅವತಾರಪುರುಷನಾದ ಶ್ರೀಕೃಷ್ಣನ ಮಹಿಮೆಯು ಅಪಾರವಾದುದು.

ಈ ಸಂಪುಟದಲ್ಲಿರುವ ಗೋಪೀವಸ್ತ್ರಾಪಹಾರ ಮತ್ತು ರಾಸಕ್ರೀಡಾಪ್ರಕರಣಗಳನ್ನು ಓದಿ ಅರ್ಥಮಾಡಿಕೊಳ್ಳುವವರಿಗೆ ಜಗತ್ತು ಅದ್ವೈತತತ್ವಾತ್ಮಕವಾದುದೆಂಬುದು ಸ್ಪಷ್ಟವಾಗದಿರದು.

ಈ ರೀತಿಯಾದ ಧಾರ್ಮಿಕಗ್ರಂಥಗಳನ್ನು ಕರ್ಣಾಟಕ ಭಾಷೆಗೆ ಅನುವಾದ ಮಾಡಿಸಿ ಜ್ಞಾನಾಭಿಲಾಷಿಗಳಿಗೆ ಮಹದುಪಕಾರವನ್ನು ಮಾಡುತ್ತಿರುವ ಪರಮ ಕರುಣಾಳುಗಳೂ, ಪ್ರಜಾನುರಾಗಿಗಳೂ, ವಿದ್ವದಭಿಮಾನಿಗಳೂ, ಪರಮೋದಾರಿಗಳೂ ಕರ್ಣಾಟಕ ರತ್ನಸಿಂಹಾಸನಾಧೀಶ್ವರರೂ ಆದ **ಶ್ರೀಮಜ್ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್, ಜಿ.ಸಿ.ಬಿ., ಜಿ.ಸಿ.ಎಸ್.ಐ.,** ಮಹಾಪ್ರಭುಗಳವರು ಬಂಧುಮಿತ್ರ ಕಳತ್ರಾದಿಗಳೊಡನೆಯೂ, ಪುತ್ರಪೌತ್ರಾದಿಗಳೊಡನೆಯೂ ಚಿರಕಾಲ ಸುಖವಾಗಿದ್ದು ಧರ್ಮದಿಂದ ರಾಜ್ಯವನ್ನು ಪರಿಪಾಲಿಸಲೆಂದು ಲೀಲಾಮಾನುಷ ರೂಪಿಯಾದ ಶ್ರೀಕೃಷ್ಣಪರಮಾತ್ಮನನ್ನು ಅನನ್ಯಭಕ್ತಿಯಿಂದ ಪ್ರಾರ್ಥಿಸುವ,

ವಿಕೃತಿ ಸಂ|| ದ
ಭಾದ್ರಪದ ಶುಕ್ಲ ಸಪ್ತಮೀ
ಸೋಮವಾರ.

ಅನುವಾದಕ,
ಬಿ. ಎಸ್. ಕೃಷ್ಣಪ್ಪ.

ವಿಷಯಾನುಕ್ರಮಣಿಕೆ

— ॥ ಓಂ ॥—

—॥ ಶ್ರೀ ಗಣೇಶಾಯ ನಮಃ ॥—

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಶ್ರೀಕೃಷ್ಣಜನ್ಮಖಂಡೇ

॥ ಸಪ್ತದಶೋಽಧ್ಯಾಯಃ ॥

॥ ಶ್ರೀ ನಾರಾಯಣ ಉವಾಚ ॥

ಸುಪ್ತೇಷು ವ್ರಜನಂದೇಷು ನಕ್ತಂ ಬೃಂದಾವನೇ ವನೇ ।
ಸುನಿದ್ರಿತೇ ಚ ನಿದ್ರೇಶೇ ಮಾತೃವಕ್ಷಃಸ್ಥಲಸ್ಥಿತೇ ॥ ೧ ॥

ನಿದ್ರಿತಾಸು ಚ ಗೋಪೀಷು ರಮ್ಯತಲ್ಪಸ್ಥಿತಾಸು ಚ ।
ಯೂನಾಂ ಚ ಸುಖಸಂಯೋಗಾನುಷಕ್ತಮಾನಸಾಸು ಚ ॥ ೨ ॥

ಕಾಸುಚಿಚ್ಛಿಶುಯುಕ್ತಾಸು ಸಖೀಯುಕ್ತಾಸು ಕಾಸುಚಿತ್ ।
ಕಾಸುಚಿಚ್ಛಕಟಸ್ಥಾಸು ಸ್ಯಂದನಸ್ಥಾಸು ಕಾಸುಚಿತ್ ॥ ೩ ॥

ಹದಿನೇಳನೆಯ ಅಧ್ಯಾಯವು

೧-೫. ಶ್ರೀನಾರಾಯಣ :—ಹಿಂದೆ ಹೇಳಿದಂತೆ ಬೃಂದಾವನದಲ್ಲಿ ನಂದ ಗೋಪನೂ ಇತರ ಗೋಪಾಲಕರೂ ರಾತ್ರಿ ಮಲಗಲಾಗಿ, ನಿದ್ರಾಧಿಪತಿಯಾದ ಶ್ರೀಕೃಷ್ಣನೂ ಕೂಡ ಯಶೋದೆಯ ತೊಡೆಯಮೇಲೆ ಮಲಗಿರಲಾಗಿ, ಗೋಪಿಯರೆಲ್ಲರೂ ರಮ್ಯವಾದ ಹಾಸಿಗೆಗಳಲ್ಲಿ ಮಲಗಿ ಯುವಕರಾದ ತಮ್ಮ ಪತಿಗಳ ಸಂಭೋಗಸುಖದಿಂದ ಮೈಮರೆತಿರಲಾಗಿ, ಕೆಲವರು ಮಕ್ಕಳೊಡನೆಯೂ, ಕೆಲವರು ಸಖಿಯರೊಡನೆಯೂ, ಕೆಲವರು ಗಾಡಿಗಳಲ್ಲಿಯೂ, ಮತ್ತೆ ಕೆಲವರು ರಥಗಳಲ್ಲಿಯೂ, ಮಲಗಿ ನಿದ್ರಿಸುತ್ತಿರಲಾಗಿ, ಬೃಂದಾವನವೆಲ್ಲ ಪೂರ್ಣಚಂದ್ರಿಕೆಯಿಂದ ತುಂಬಿ

ಪೂರ್ಣೇಂದು ಕೌಮುದೀಯುಕ್ತೇ ಸ್ವರ್ಗಾದಪಿ ಮನೋಹರೇ ।
ನಾನಾಪ್ರಕಾರಕುಸುಮವಾಯುನಾ ಸುರಭೀಕೃತೇ ॥ ೪ ॥

ಸರ್ವಪ್ರಾಣಿನಿ ನಿಶ್ಚೇಷ್ಟೇ ಮುಹೂರ್ತೇ ಪಂಚಮೇ ಗತೇ ।
ತತ್ರಾಜಗಾಮ ಭಗವಾನ್ ಚ್ಛಿಲ್ಪಿನಾಂಚ ಗುರೋರ್ಗುರುಃ ॥ ೫ ॥

ಬಿಭ್ರದ್ದಿವ್ಯಾಂಶುಕಂ ಸೂಕ್ಷ್ಮಂ ರತ್ನಮಾಲ್ಯಂ ಮನೋಹರಂ ।
ರತ್ನಾಲಂಕಾರಮತುಲಂ ಶ್ರೀಮನ್ಮಕರಕುಂಡಲಂ ॥ ೬ ॥

ಜ್ಞಾನೇನ ವಯಸಾ ವೃದ್ಧೋ ದರ್ಶನೀಯಃ ಕಿಶೋರವತ್ ।
ಅತೀವ ಸುಂದರಃ ಶ್ರೀಮಾನ್ಕಾಮದೇವ ಸಮಪ್ರಭಃ ॥ ೭ ॥

ವಿಶಿಷ್ಟ ಶಿಲ್ಪನಿಪುಣೈಃ ಸಾರ್ಧಂ ಶಿಲ್ಪತ್ರಿಕೋಟಿಭಿಃ ।
ಮಣಿರತ್ನೈ ರ್ಹೇಮರತ್ನೈರ್ಲೋಹಾಸ್ತ್ರಯುತಹಸ್ತಕೈಃ ॥ ೮ ॥

ಸ್ವರ್ಗಕ್ಕಿಂತ ಮನೋಹರವಾಗಿರಲಾಗಿ, ವಾಯುವು ವಿವಿಧ ಕುಸುಮಗಳ ಸೌಗಂಧ್ಯವನ್ನು ಎಲ್ಲೆಡೆಯಲ್ಲೂ ಪಸರಿಸುತ್ತಿರಲಾಗಿ, ಸಕಲಪ್ರಾಣಿಗಳೂ ನಿಶ್ಚೇಷ್ಟರಾಗಿ ಮಲಗಿ ಐದು ಮುಹೂರ್ತಗಳು ಕಳೆದಿರಲಾಗಿ, ಅಲ್ಲಿಗೆ ಶಿಲ್ಪಿಗಳ ಗುರುವರ್ಯನೂ ಪೂಜ್ಯನೂ ಆದ ವಿಶ್ವಕರ್ಮನು ಬಂದನು.

೬. ಆ ವಿಶ್ವಕರ್ಮನು ದಿವ್ಯವಾದ ಸೂಕ್ಷ್ಮವಸ್ತ್ರವನ್ನುಟ್ಟು, ಮನೋಹರವಾದ ರತ್ನಮಾಲೆಯನ್ನೂ, ಅನುಪಮವಾದ ರತ್ನಾಲಂಕಾರ ಮತ್ತು ರತ್ನಕುಂಡಲಗಳನ್ನೂ ಧರಿಸಿದ್ದನು.

೭. ಜ್ಞಾನ ಮತ್ತು ವಯಸ್ಸಿನಿಂದ ವೃದ್ಧನಾಗಿದ್ದರೂ, ಯುವಕನಂತೆ ದರ್ಶನೀಯನೂ, ಮನ್ಮಥನಂತೆ ತ್ರಿಲೋಕೈಕಸುಂದರನೂ ಆಗಿದ್ದನು.

೮-೯. ಅವನೊಡನೆ ಸಕಲಶಿಲ್ಪಗಳಲ್ಲೂ ನಿಪುಣರಾದ ಮೂರುಕೋಟಿ ಶಿಲ್ಪಿಗಳು ಕೈಯಲ್ಲಿ ಮಣಿ, ರತ್ನ, ಚಿನ್ನ, ಲೋಹ ಮತ್ತು ಆಯುಧಗಳನ್ನು ಧರಿಸಿ ಬಂದರು. ಕುಬೇರನ ವನಪಾಲಕರಾದ ಅನೇಕ ಯಕ್ಷರೂ ಅವರೊಡನೆ ಇದ್ದರು.

ಆಜಗ್ಮುರ್ಯಕ್ಷನಿಕರಾಃ ಕುಬೇರವನಕಿಂಕರಾಃ ।
ಸ್ಫಾಟಿಕಾರತ್ನವೇಷಾಶ್ಚ ದೀರ್ಘಸ್ಕಂಧಾಶ್ಚ ಕೇಚನ　　॥ ೯ ॥

ಪದ್ಮರಾಗಕರಾ ಕೇಚಿದಿಂದ್ರ ನೀಲಕರಾ ವರಾಃ ।
ಕೇಚಿತ್ಸ್ಯಮಂತಕ ಕರಾಶ್ಚಂದ್ರ ಕಾಂತಕರಾಸ್ತಥಾ　　॥ ೧೦ ॥

ಸೂರ್ಯಕಾಂತ ಕರಾಶ್ಚಾನ್ಯೇ ಪ್ರಭಾಕರಕರಾ ವರಾ।
ಕೇಚಿತ್ಪರಶುಹಸ್ತಾಶ್ಚ ಲೋಹಸಾರಕರಾ ವರಾಃ　　॥ ೧೧ ॥

ಕೇಚಿಚ್ಚ ಗಂಧಸಾರಾಣಾಂ ಮಣೀಂದ್ರಾಣಾಂ ಚ ವಾಹಕಾಃ ।
ಕೇಚಿಚ್ಚಾಮರಹಸ್ತಾಶ್ಚ ಕೇಚಿದ್ದರ್ಪಣವಾಹಕಾಃ　　॥ ೧೨ ॥

ಸ್ವರ್ಣಪಾತ್ರಘಟಾದೀನಾಂ ವಾಹಕಾಶ್ಚೈವ ಕೇಚನ ।
ವಿಶ್ವಕರ್ಮಾ ಚ ಸಾಮಗ್ರೀಂ ದೃಷ್ಟ್ವಾತು ಸುಮನೋಹರಾಂ　　॥ ೧೩ ॥

ಅವರಲ್ಲಿ ಕೆಲವರು ಸ್ಫಟಿಕ ಮತ್ತು ರತ್ನ ಳನ್ನು ಹೆಗಲ ಮೇಲೆ ಹೊತ್ತು ತರುತ್ತಿದ್ದುದ ರಿಂದ ದೀರ್ಘವಾದ ಹೆಗಲುಳ್ಳವರಾಗಿದ್ದರು.

೧೦. ಕೆಲವರು ಪದ್ಮರಾಗರತ್ನಗಳನ್ನೂ, ಕೆಲವರು ಇಂದ್ರನೀಲರತ್ನ ಗಳನ್ನೂ, ಕೆಲವರು ಸ್ಯಮಂತಕಮಣಿಗಳನ್ನೂ, ಕೆಲವರು ಚಂದ್ರಕಾಂತಮಣಿ ಗಳನ್ನೂ ಕೈಯ್ಯಲ್ಲಿ ಧರಿಸಿ ಬರುತ್ತಿದ್ದರು.

೧೧. ಕೆಲವರ ಕೈಯ್ಯಲ್ಲಿ ಸೂರ್ಯಕಾಂತಿಮಣಿಗಳೂ, ಕೆಲವರ ಕೈಯ್ಯಲ್ಲಿ ಪ್ರಭಾಕರರತ್ನಗಳೂ, ಮತ್ತೆ ಕೆಲವರ ಕೈಯ್ಯಲ್ಲಿ ಕೊಡಲಿಗಳೂ, ಕೆಲವರ ಕೈಯ್ಯಲ್ಲಿ ಶ್ರೇಷ್ಠವಾದ ಲೋಹಗಳೂ ಇದ್ದವು.

೧೨. ಕೆಲವರು ಗಂಧದಮರಗಳನ್ನೂ, ಶ್ರೇಷ್ಠವಾದ ಮಣಿಗಳನ್ನೂ ಹೊತ್ತು ತರುತ್ತಿದ್ದರು. ಕೆಲವರ ಕೈಯ್ಯಲ್ಲಿ ಚಾಮರಗಳೂ ಮತ್ತೆ ಕೆಲವರ ಕೈಯ್ಯಲ್ಲಿ ಕನ್ನಡಿ ಗಳೂ ಪ್ರಕಾಶಿಸುತ್ತಿದ್ದವು.

೧೩. ಕೆಲವರು ಸುವರ್ಣಪಾತ್ರೆಗಳನ್ನೂ ಕಲಶಗಳನ್ನೂ ತರುತ್ತಿದ್ದರು. ವಿಶ್ವಕರ್ಮನು ಮನೋಹರವಾದ ಈ ಸಾಧನ ಸಾಮಗ್ರಿಗಳನ್ನೆಲ್ಲ ನೋಡಿದನು.

ನಗರಂ ಕರ್ತುಮಾರೇಭೇ ಧ್ಯಾತ್ವಾ ಕೃಷ್ಣಂ ಶುಭೇಕ್ಷಣಂ ।
ಪಂಚ ಯೋಜನವಿಸ್ತೀರ್ಣಂ ಭಾರತೇ ಶ್ರೇಷ್ಠ ಮುತ್ತಮಂ ॥ ೧೪ ॥

ಪುಣ್ಯಕ್ಷೇತ್ರಂ ತೀರ್ಥಸಾರಮತಿಪ್ರಿಯತಮಂ ಹರೇಃ ।
ತತ್ರಸ್ಥಾನಾಂ ಮುಮುಕ್ಷೂಣಾಂ ಪರಂ ನಿರ್ವಾಣಕಾರಣಂ ॥ ೧೫ ॥

ಗೋಲೋಕಸ್ಯ ಚ ಸೋಪಾನಂ ಸರ್ವೇಷಾಂ ವಾಂಛಿತಪ್ರದಂ ।
ಚತುಷ್ಕೋಟಿಚತುಃಶಾಲಂ ತತ್ರೈವಾತಿಮನೋಹರಂ ॥ ೧೬ ॥

ಕಪಾಟಸ್ತಂಭಸೋಪಾನ ಸಹಿತೈಃ ಪ್ರಸ್ತರೈರ್ವರೈಃ ।
ಚಿತ್ರಪುತ್ತಲಿಕಾಪುಷ್ಪಕಲಶೋಜ್ಜ್ವಲ ಶೇಖರಂ ॥ ೧೭ ॥

ಶೈಲಜಾಶ್ಮವಿನಿರ್ಮಾಣ ವೇದಿಪ್ರಾಂಗಣ ಸಂಯುತಂ ।
ಶಿಲಾಪ್ರಾಕಾರಸಂಯುಕ್ತಂ ಪ್ರಚಕಾರಾಥ ಲೀಲಯಾ ॥ ೧೮ ॥

---

೧೪. ಅನಂತರ ಪ್ರಸನ್ನನಯನನಾದ ಶ್ರೀಕೃಷ್ಣನನ್ನು ಧ್ಯಾನಮಾಡಿ ಐದು ಯೋಜನ ವಿಸ್ತೀರ್ಣವೂ, ಭರತಖಂಡದಲ್ಲಿ ಅತ್ಯುತ್ತಮವೂ ಆದ ನಗರವೊಂದನ್ನು ನಿರ್ಮಿಸಲು ಪ್ರಾರಂಭಿಸಿದನು.

೧೫. ಪುಣ್ಯಕ್ಷೇತ್ರವೂ, ತೀರ್ಥಗಳಲ್ಲಿ ಅತ್ಯುತ್ತಮವೂ, ಶ್ರೀಹರಿಗೆ ಅತ್ಯಂತ ಪ್ರಿಯತಮವೂ ಆದ ಆ ನಗರದಲ್ಲಿ ವಾಸಿಸುವ ಮೋಕ್ಷಾಭಿಲಾಷಿಗಳಿಗೆ ಅದು ಮೋಕ್ಷಸಾಧನವಾಗಿದ್ದಿತು.

೧೬. ಗೋಲೋಕಪ್ರಾಪ್ತಿಗೆ ಸೋಪಾನಸದೃಶವೂ, ಸಕಲರ ಇಷ್ಟಾರ್ಥ ಪ್ರದವೂ ಆದ ಆ ನಗರದಲ್ಲಿ ಅತ್ಯಂತ ಮನೋಹರವಾದ ನಾಲ್ಕುಕೋಟಿ ಚತುಃಶಾಲೆಗಳನ್ನೂ (ನಾಲ್ಕು ದಿಕ್ಕಿನಲ್ಲೂ ಮನೆಗಳಿರುವ ಮಧ್ಯದ ಅಂಗಳ) ನಿರ್ಮಿಸಿದನು.

೧೭. ಬಾಗಿಲು, ಕಂಭ ಮತ್ತು ಸೋಪಾನಗಳಿಂದಲೂ, ಶ್ರೇಷ್ಠವಾದ ಕಲ್ಲು ಚಪ್ಪಡಿಗಳಿಂದಲೂ, ಚಿತ್ರ ಮತ್ತು ಕೊರೆದ ಬೊಂಬೆಗಳಿಂದಲೂ, ಮೇಲುಭಾಗದಲ್ಲಿ ಉಜ್ಜ್ವಲವಾದ ಕಲಶಗಳಿಂದಲೂ ಆ ನಗರವು ಮನೋಹರವಾಗಿದ್ದಿತು.

೧೮. ಪರ್ವತದ ಶಿಲೆಗಳಿಂದ ನಿರ್ಮಿತವಾದ ಜಗಲಿ ಮತ್ತು ಅಂಗಳಗಳಿಂದಲೂ, ಕಲ್ಲಿನ ಕೋಟೆಗಳಿಂದಲೂ ಶೋಭಿಸುತ್ತಿರುವ ನಗರವನ್ನು ವಿಶ್ವಕರ್ಮನು ಲೀಲಾಮಾತ್ರದಿಂದಲೇ ನಿರ್ಮಿಸಿದನು.

ಯಥೋಚಿತೈರ್ಬೃಹತ್ಕ್ಷುದ್ರ ದ್ವಾರದ್ವಯ ಸಮನ್ವಿತಂ।
ಸ್ಫಟಿಕಾಕಾರಮಣಿಭಿ ರ್ಮರ್ಯಾದಾ ಯುಕ್ತೋ ವಿನಿರ್ಮಿತೋ ॥ ೧೯ ॥

ಸೋಪಾನೈರ್ಗಂಧಸಾರಾಣಾಂ ಸ್ತಂಭೈಃ ಶಂಕುವಿನಿರ್ಮಿತೈಃ।
ಕಪಾಟೈರ್ಲೋಹಸಾರಾಣಾಂ ರಾಜತೈಃ ಕಲಶೋಜ್ಜ್ವಲೈಃ ॥ ೨೦ ॥

ವಜ್ರಸಾರವಿನಿರ್ಮಾಣ ಪ್ರಾಕಾರೈಃ ಪರಿಶೋಭಿತಂ।
ಕೃತ್ವಾऽಶ್ರಮಂ ವಲ್ಲವಾನಾಂ ಯಥಾಸ್ಥಾನಂ ಯಥೋಚಿತಂ।
ವೃಷಭಾನ್ವಾಲಯಂ ರಮ್ಯಂ ಕರ್ತುಮಾರಬ್ಧವಾನ್ ಪುನಃ ॥ ೨೧ ॥

ಪ್ರಾಕಾರಪರಿಖಾಯುಕ್ತಂ ಚತುರ್ದ್ವಾರಾನ್ವಿತಂ ಪರಂ।
ಚಾರುವಿಂಶಚ್ಚತುಃಶಾಲಂ ಮಹಾಮಣಿವಿನಿರ್ಮಿತಂ ॥ ೨೨ ॥

---

೧೯. ಸ್ಫಟಿಕಮಣಿಗಳಿಂದ ನಿರ್ಮಿತವಾದ, ದೊಡ್ಡದು ಮತ್ತು ಚಿಕ್ಕದಾದ ಎರಡು ವಿಧ ದ್ವಾರಗಳಿಂದ ಯಥೋಚಿತವಾಗಿ ಶೋಭಿಸುವ ಆ ನಗರವನ್ನು ವಿಶ್ವಕರ್ಮನು ವಿಲಾಸದಿಂದ ನಿರ್ಮಿಸಿದನು.

೨೦. ಉತ್ತಮವಾದ ಗಂಧದಮರದ ಸೋಪಾನಗಳಿಂದಲೂ, ಶಂಕು ನಿರ್ಮಿತವಾದ ಕಂಭಗಳಿಂದಲೂ, ಶ್ರೇಷ್ಠ ಲೋಹಗಳಿಂದ ನಿರ್ಮಿತವಾದ ಬಾಗಿಲುಗಳಿಂದಲೂ ಉಜ್ವಲವಾದ ರಜತ ಕಲಶಗಳಿಂದಲೂ ಆ ನಗರವು ವಿರಾಜಿಸುತ್ತಿತ್ತು.

೨೧. ಶ್ರೇಷ್ಠ ವಜ್ರಗಳಿಂದ ನಿರ್ಮಿತವಾದ ಪ್ರಾಕಾರಗಳಿಂದ ಪರಿವೃತವಾಗಿರುವ ದಿವ್ಯವಾದ ಆಶ್ರಮವೊಂದನ್ನು ವಿಶ್ವಕರ್ಮನು ಗೋಪರಿಗಾಗಿ ಕಾಲ ದೇಶಾನುಗುಣವಾಗಿ ನಿರ್ಮಿಸಿ, ಅನಂತರ ವೃಷಭಾನುವಿಗೋಸ್ಕರ ರಮ್ಯವಾದ ಮಂದಿರವನ್ನು ನಿರ್ಮಿಸಲು ಮೊದಲುಮಾಡಿದನು.

೨೨. ಕೋಟೆಕಂದಕಗಳಿಂದಲೂ, ನಾಲ್ಕು ಪ್ರಧಾನ ದ್ವಾರಗಳಿಂದಲೂ ಕೂಡಿ ಮಹಾಮಣಿಗಳಿಂದ ನಿರ್ಮಿತವಾದ ಇಪ್ಪತ್ತುನಾಲ್ಕು ಚತುಃಶಾಲೆಗಳಿಂದ ಆ ಮಂದಿರವು ಶೋಭಿಸುತ್ತಿತ್ತು.

ರತ್ನಸಾರವಿಕಾರೈಶ್ಚ ತೂಲಿಕಾನಿಕರೈರ್ವರೈಃ ।
ಸುವರ್ಣಾಕಾರಮಣಿಭಿರಾರೋಹೈ ರತಿಸುಂದರೈಃ ॥ ೨೩ ॥

ಲೋಹಸಾರಕಪಾಟೈಶ್ಚ ಶೋಭಿತಂ ಚಿತ್ರಕೃತ್ರಿಮೈಃ ।
ಮಂದಿರೇ ಮಂದಿರೇ ರಮ್ಯೇ ಸುವರ್ಣಕಲಶೋಜ್ಜ್ವಲಂ ॥ ೨೪ ॥

ತದಾಶ್ರಮೈಕದೇಶೇ ಚ ನಿರ್ಜನೇಽತಿ ಮನೋಹರೇ ।
ಚಾರುಚಂಪಕವೃಕ್ಷಾಣಾಮುದ್ಯಾನಾಭ್ಯಂತರೇ ಮುನೇ ॥ ೨೫ ॥

ಸಂಭೋಗಾರ್ಥಂ ಕಲಾವತ್ಯಾಃ ಸ್ವಾಮಿನಾ ಸಹ ಕೌತುಕಾತ್ ।
ವಿಶಿಷ್ಟೇನ ಮಣೀಂದ್ರೇಣ ಚಕಾರಾಟ್ಟಾಲಿಕಾಲಯಂ ॥ ೨೬ ॥

ಯುಕ್ತಂ ನವಭಿರಾರೋಹೈರಿಂದ್ರನೀಲವಿನಿರ್ಮಿತೈಃ ।
ಸ್ಥೂಣಾ ಕಪಾಟನಿಕರೈರ್ಗಂಧಸಾರವಿಕಾರಜೈಃ ।
ಅತ್ಯುಚ್ಛ್ರಿತಂ ಮನೋರಮ್ಯಂ ಸರ್ವತೋಽಪಿ ವಿಲಕ್ಷಣಂ ॥ ೨೭ ॥

೨೩-೨೪. ಶ್ರೇಷ್ಠರತ್ನಗಳಿಂದ ನಿರ್ಮಿತವಾದ ತೂಲಿಕೆ (ಬಣ್ಣ ಬಳಿಯುವ ಕುಂಚಿಕೆ) ಯ ಸಮೂಹದಿಂದಲೂ, ಒಳ್ಳೆಯ ಬಣ್ಣ ಮತ್ತು ಆಕಾರಗಳಿಂದ ಶೋಭಿಸುವ ಮಣಿಗಳಿಂದಲೂ, ಸುಂದರವಾದ ಮಹಡಿಯ ಮೆಟ್ಟಲುಗಳಿಂದಲೂ, ಲೋಹನಿರ್ಮಿತವಾದ ಬಾಗಿಲುಗಳಿಂದಲೂ, ಕೃತ್ರಿಮವಾದ ಚಿತ್ರಗಳಿಂದಲೂ ಕೂಡಿ ರಮ್ಯವಾಗಿರುವ ಆ ಮಂದಿರದ ಪ್ರತಿ ಕೊಠಡಿಗಳಲ್ಲೂ ಉಜ್ವಲವಾದ ಸುವರ್ಣ ಕಲಶವು ಶೋಭಿಸುತ್ತಿತ್ತು.

೨೫-೨೬. ಎಲೈ ನಾರದಮುನಿಯೇ, ಈ ರೀತಿಯಾದ ಆ ಮಂದಿರವನ್ನು ನಿರ್ಮಿಸಿದನಂತರ, ಆ ಆಶ್ರಮದ ನಿರ್ಜನವೂ, ಮನೋಹರವೂ ಆದ ಏಕದೇಶದಲ್ಲಿ, ಸುಂದರವಾದ ಸಂಪಿಗೆಯ ಉದ್ಯಾನಮಧ್ಯದಲ್ಲಿ ಕಲಾವತಿಯು ತನ್ನ ಪ್ರಿಯನೊಡನೆ ಸಂಭೋಗಸುಖವನ್ನು ನುಭವಿಸುವ ಸಲುವಾಗಿ ಶ್ರೇಷ್ಠವಾದ ಮಣಿಗಳಿಂದ ಮನೋಹರವಾದ ಮಹಡಿಯೊಂದನ್ನು ನಿರ್ಮಿಸಿದನು.

೨೭. ಆ ಮಹಡಿಯು ಇಂದ್ರನೀಲ ರತ್ನಗಳಿಂದ ನಿರ್ಮಿತವಾದ ಒಂಭತ್ತು ಸೋಪಾನಗಳಿಂದಲೂ, ಶ್ರೀಗಂಧದ ಮರದಿಂದ ನಿರ್ಮಿತವಾದ ಕಂಭ ಮತ್ತು ಬಾಗಿಲುಗಳಿಂದಲೂ, ಕೂಡಿ ಅತ್ಯುನ್ನತವೂ ಮನೋಹರವೂ ಆಗಿದ್ದುದಲ್ಲದೆ ಎಲ್ಲಕ್ಕಿಂತಲೂ ವಿಲಕ್ಷಣವಾಗಿದ್ದಿತು.

॥ ನಾರದ ಉವಾಚ ॥

ಕಲಾವತೀ ಕಾ ಭಗವನ್ಕಸ್ಯ ಪತ್ನೀ ಮನೋಹರಾ ।
ಯತ್ನತೋ ಯದ್ಗೃಹಂ ರಮ್ಯಂ ನಿರ್ಮಮೇ ಸುರಕಾರುಣಾ ॥ ೨೮ ॥

॥ ನಾರಾಯಣ ಉವಾಚ ॥

ಪಿತೄಣಾಂ ಮಾನಸೀ ಕನ್ಯಾ ಕಮಲಾಂಶಾ ಕಲಾವತೀ ।
ಸುಂದರೀ ವೃಷಭಾನಸ್ಯ ಪತಿವ್ರತಪರಾಯಣಾ ।
ಯಸ್ಯಾಶ್ಚ ತನಯಾ ರಾಧಾ ಕೃಷ್ಣಪ್ರಾಣಾಧಿಕಾ ಪ್ರಿಯಾ ॥ ೨೯ ॥

ಶ್ರೀಕೃಷ್ಣಾರ್ಧಾಂಶ ಸಂಭೂತಾ ತೇನ ತುಲ್ಯಾ ಚ ತೇಜಸಾ ।
ಯಸ್ಯಾಶ್ಚ ಚರಣಾಂಭೋಜರಜಃಪೂತಾ ವಸುಂಧರಾ ।
ಯಸ್ಯಾಂ ಚ ಸುದೃಢಾಂ ಭಕ್ತಿಂ ಸಂತೋ ವಾಂಛಂತಿ ಸಂತತಂ ॥ ೩೦ ॥

---

೨೮. ನಾರದ :—ಪೂಜ್ಯನೇ, ದೇವಶಿಲ್ಪಿಯಾದ ವಿಶ್ವಕರ್ಮನು ಪ್ರಯತ್ನ ಪೂರ್ವಕವಾಗಿ ರಮ್ಯವಾದ ಯಾರ ಮಂದಿರವನ್ನು ನಿರ್ಮಿಸಿದನೋ ಆ ಕಲಾವತಿಯು ಯಾರು ? ಯಾರ ಪುತ್ರಿಯು ?

೨೯. ನಾರಾಯಣ :—ಕಮಲಾಂಶದಿಂದ ಪಿತೃಗಳ ಮಾನಸಕನ್ಯೆಯಾಗಿ ಅವತರಿಸಿದವಳೇ ಕಲಾವತಿಯು. ಆ ಸುಂದರಿಯು ವೃಷಭಾನುವಿನ ಪತ್ನಿಯಾಗಿ ಪತಿವ್ರತೆಯರಲ್ಲಿ ಶ್ರೇಷ್ಠಳೆನಿಸಿದಳು. ಆಕೆಯ ಮಗಳೇ ಶ್ರೀಕೃಷ್ಣನ ಪ್ರಾಣಪ್ರಿಯಳಾದ ರಾಧಾದೇವಿಯು.

೩೦. ಶ್ರೀಕೃಷ್ಣನ ಅರ್ಧಾಂಶದಿಂದ ಸಂಭೂತಳೂ, ತೇಜಸ್ಸಿನಲ್ಲಿ ಅವನಿಗೆ ಸಮಾನಳೂ ಆದ ಆ ರಾಧಾದೇವಿಯ ಚರಣಕಮಲಗಳ ಧೂಳಿಯ ಸಂಪರ್ಕದಿಂದ ವಸುಂಧರೆಯು ಪವಿತ್ರಳಾಗುವಳು. ಆ ರಾಧಾದೇವಿಯಲ್ಲಿ ಸುದೃಢವಾದ ನಿರಂತರ ಭಕ್ತಿಯನ್ನು ಸತ್ಪುರುಷರು ಸರ್ವದಾ ಬಯಸುವರು.

॥ ನಾರದ ಉವಾಚ ॥

ಪಿತೄಣಾಂ ಮಾನಸೀಂ ಕನ್ಯಾಂ ವ್ರಜೇ ತಿಷ್ಠನ್ ಕಥಂ ಮುನೇ ।
ಮಾನವಃ ಕೇನ ಪುಣ್ಯೇನ ಕಥಮಾಪ ಸುದುರ್ಲಭಾಂ ॥ ೩೧ ॥

ವೃಷಭಾನುರ್ವ್ರಜಪತಿಃ ಪುರಾಽಽಸೀತ್ಕೋ ಮಹಾನಹೋ ।
ಕಸ್ಯ ವಾ ಕೇನ ತಪಸಾ ರಾಧಾ ಕನ್ಯಾ ಬಭೂವ ಹ ॥ ೩೨ ॥

॥ ಸೂತ ಉವಾಚ ॥

ನಾರದಸ್ಯ ವಚಃ ಶ್ರುತ್ವಾ ಮಹರ್ಷಿರ್ಜ್ಞಾನಿನಾಂ ವರಃ ।
ಪ್ರಹಸ್ಯೋವಾಚ ಪ್ರೀತ್ಯಾ ತಮಿತಿಹಾಸಂ ಪುರಾತನಂ ॥ ೩೩ ॥

॥ ನಾರಾಯಣ ಉವಾಚ ॥

ಬಭೂವುಃ ಕನ್ಯಕಾಸ್ತಿಸ್ರಃ ಪಿತೄಣಾಂ ಮಾನಸಾತ್ಪುರಾ ॥ ೩೪ ॥

ಕಲಾವತೀ ರತ್ನಮಾಲಾ ಮೇನಕಾಶ್ಚಾತಿದುರ್ಲಭಾಃ ।
ರತ್ನಮಾಲಾ ಚ ಜನಕಂ ವರಯಾಮಾಸ ಕಾಮುಕೀ ॥ ೩೫ ॥

೩೧–೩೨. ನಾರದ :— ಎಲೈ ಮಹಾಮುನಿಯೇ, ಮನುಜಸಾಮಾನ್ಯನಾದ ಆ ವೃಷಭಾನುವು ಗೋಲೋಕದಲ್ಲಿದ್ದುಕೊಂಡು ಪಿತೃಗಳ ಮಾನಸಕನ್ಯೆಯಾದ ಕಲಾವತಿಯನ್ನು ಪತ್ನಿಯಾಗಿ ಪಡೆದುದೆಂತು? ಆ ಮಹಾತ್ಮನಾದ ವೃಷಭಾನುವು ಪೂರ್ವದಲ್ಲಿ ಯಾರಾಗಿದ್ದನು? ಅವನ ತಂದೆಯಾರು? ಆ ವೃಷಭಾನುವಿನ ಯಾವ ತಪೋಮಹಿಮೆಯಿಂದ ರಾಧಾದೇವಿಯು ಅವನಿಗೆ ಕನ್ಯೆಯಾಗಿ ಅವತರಿಸಿದಳು?

೩೩. ಸೂತರು ಹೇಳಿದರು :—ನಾರದನ ಮಾತನ್ನು ಕೇಳಿ ಜ್ಞಾನಿಗಳಲ್ಲಿ ಶ್ರೇಷ್ಠನಾದ ನಾರಾಯಣಮಹರ್ಷಿಯು ನಸುನಕ್ಕು ಪ್ರೀತಿಪೂರ್ವಕವಾಗಿ ಪುರಾತನವಾದ ಆ ಇತಿಹಾಸವನ್ನು ಹೇಳಲಾರಂಭಿಸಿದನು.

೩೪–೩೫. ನಾರಾಯಣಮಹರ್ಷಿ :—ಪೂರ್ವದಲ್ಲಿ ಪಿತೃದೇವತೆಗಳ ಮನಸ್ಸಿನಿಂದ ಕಲಾವತಿ, ರತ್ನಮಾಲ, ಮತ್ತು ಮೇನಕೆ ಎಂಬ ಮೂವರು ಕನ್ಯೆಯರು ಅವತರಿಸಿದರು. ಅವರಲ್ಲಿ ಕಾಮುಕಿಯಾದ ರತ್ನಮಾಲೆ ಎಂಬುವಳು ಜನಕಮಹಾರಾಜನನ್ನು ವರಿಸಿದಳು.

ಶೈಲಾಧಿಪಂ ಹರೇರಂಶಂ ಮೇನಕಾ ಸಾ ಹಿಮಾಲಯಂ ।
ದುಹಿತಾ ರತ್ನಮಾಲಾಯಾ ಅಯೋನಿಸಂಭವಾ ಸತೀ ॥ ೩೬ ॥

ಶ್ರೀರಾಮಪತ್ನೀ ಶ್ರೀಃ ಸಾಕ್ಷಾತ್ಸೀತಾ ಸತ್ಯಪರಾಯಣಾ ।
ಕನ್ಯಕಾ ಮೇನಕಾಯಾಶ್ಚ ಪಾರ್ವತೀ ಸಾ ಪುರಾ ಸತೀ ॥ ೩೭ ॥

ಅಯೋನಿಸಂಭವಾ ಸಾ ಚ ಹರೇರ್ಮಾಯಾ ಸನಾತನೀ ।
ಸಾ ಲೇಭೇ ತಪಸಾ ದೇವಂ ಹರಂ ನಾರಾಯಣಾತ್ಮಕಂ ॥ ೩೮ ॥

ಕಲಾವತೀ ಸುಚಂದ್ರಂ ಚ ಮನುವಂಶಸಮುದ್ಭವಂ ।
ಸ ಚ ರಾಜಾ ಹರೇರಂಶಸ್ತಾಂ ಸಂಪ್ರಾಪ್ಯ ಕಲಾವತೀಂ ॥ ೩೯ ॥

ಮನ್ಯೇ ಗುಣವತಾಂ ಶ್ರೇಷ್ಠಮಾತ್ಮಾನಮತಿಸುಂದರಂ ।
ಅಹೋ ರೂಪಮಹೋ ವೇಷಮಹೋ ಅಸ್ಯಾ ನವಂ ವಯಃ ॥ ೪೦ ॥

---

೩೬. ಮೇನಕೆಯಾದರೋ ಶ್ರೀಹರಿಯ ಅಂಶಸಂಭೂತನೂ, ಪರ್ವತಗಳ ರಾಜನೂ, ಆದ ಹಿಮವಂತನನ್ನು ವರಿಸಿದಳು. ಅಯೋನಿಜೆಯೂ, ಪರಮ ಪತಿವ್ರತೆಯೂ ಆದ ಸೀತಾದೇವಿಯೇ ರತ್ನಮಾಲೆಯ ಪುತ್ರಿಯೆನಿಸಿದಳು.

೩೭–೩೮. ಸಾಕ್ಷಾಲ್ಲಕ್ಷ್ಮೀದೇವಿಯೇ ಸೀತಾದೇವಿಯಾಗಿ ಅವತರಿಸಿ ಶ್ರೀರಾಮನ ಪತ್ನಿಯಾಗಿ ಸತ್ಯಪರಾಯಣಳಾಗಿದ್ದಳು. ಶ್ರೀಹರಿಯ ಮಾಯಾ ಶಕ್ತಿಸ್ವರೂಪಿಣಿಯೂ, ಸನಾತನಿಯೂ ಆಗಿ ದಕ್ಷಬ್ರಹ್ಮನ ಪುತ್ರಿಯಾಗಿದ್ದ ದಾಕ್ಷಾಯಣಿಯೇ ಮೇನಕೆಯ ಗರ್ಭದಿಂದ ಅವತರಿಸಿ ಪಾರ್ವತೀ ಎಂಬ ಹೆಸರಿನಿಂದ ಪ್ರಖ್ಯಾತಳಾಗಿ ಅಯೋನಿಜೆಯೆನಿಸಿದಳು. ಆ ದೇವಿಯು ದೇವದೇವನೂ ನಾರಾಯಣಾತ್ಮಕನೂ ಆದ ಹರನನ್ನು ತಪಸ್ಸಿನಿಂದ ಪಡೆದಳು.

೩೯–೪೦. ಕಲಾವತಿಯೂ ಕೂಡ ಮನುವಂಶೋತ್ಪನ್ನನಾದ ಸುಚಂದ್ರನನ್ನು ವರಿಸಿದಳು. ಶ್ರೀಹರಿಯ ಅಂಶಸಂಭೂತನಾದ ಆ ರಾಜನೂ ಕೂಡ ಆ ಕಲಾವತಿಯ ಸುಂದರರೂಪಕ್ಕೂ, ವೇಷಭೂಷಣಗಳಿಗೂ ನವಯೌವನಕ್ಕೂ ಮನಸೋತು, ಆಕೆಯನ್ನು ಪಡೆದ ತಾನೇ ಧನ್ಯನೂ, ಸುಗುಣಿಯೂ ಸುಂದರನೂ, ಎಂದು ಭಾವಿಸಿದನು.

ಸುಕೋಮಲಾಂಗಂ ಲಲಿತಂ ಶರಚ್ಚಂದ್ರಾಧಿಕಾನನಂ ।
ಗಮನಂ ದುರ್ಲಭಮಹೋ ಗಜಖಂಜನ ಗಂಜನಂ ॥ ೪೧ ॥

ಕಟಾಕ್ಷೈರ್ಮೋಹಿತುಂ ಶಕ್ತಾ ಮುನೀಂದ್ರಾಣಾಂ ಚ ಮಾನಸಂ ।
ಶ್ರೋಣೀಯುಗ್ಮಂ ಸುಲಲಿತಂ ರಂಭಾಸ್ತಂಭವಿನಿರ್ಮಿತಂ ॥ ೪೨ ॥

ಸ್ತನದ್ವಯಂ ಸುಕಠಿನಮತಿಪೀನೋನ್ನತಂ ಮುನೇ ।
ನಿತಂಬಯುಗಲಂ ಚಾರು ರಥಚಕ್ರವಿನಿರ್ಮಿತಂ ॥ ೪೩ ॥

ಹಸ್ತೌ ಪಾದೌ ಚ ರಕ್ತೌ ಚ ಪಕ್ವಬಿಂಬಫಲಾಧರಂ ।
ಪಕ್ವದಾಡಿಮ ಬೀಜಾಭಂ ದಂತಪಂಕ್ತಿಮನೋಹರಂ ॥ ೪೪ ॥

ಶರನ್ಮಧ್ಯಾಹ್ನ ಪದ್ಮಾನಾಂ ಪ್ರಭಾಮೋಚನಲೋಚನಂ ।
ಭೂಷಣೈರ್ಭೂಷಿತಂ ರೂಪಂ ಕೃತಂ ಸದ್ರತ್ನಭೂಷಣಂ ॥ ೪೫ ॥

---

೪೧. ಆಕೆಯ ಅವಯವಗಳು ಅತ್ಯಂತ ಕೋಮಲವಾಗಿಯೂ, ಮುಖವು ಶರಚ್ಚಂದ್ರನಿಗಿಂತ ಮನೋಹರವಾಗಿಯೂ ಇದ್ದಿತು. ಆನೆಯಂತೆಯೂ, ಹಂಸದಂತೆಯೂ ಮನೋಹರವಾದ ಆಕೆಯ ನಡಿಗೆಯು ಇತರರಿಗೆ ದುರ್ಲಭವಾಗಿದ್ದಿತು.

೪೨. ಆಕೆಯು ತನ್ನ ಕಟಾಕ್ಷವಿಕ್ಷೇಪದಿಂದ ಮುನೀಂದ್ರರ ಮನಸ್ಸನ್ನೂ ಮೋಹಗೊಳಿಸಲು ಶಕ್ತಳಾಗಿದ್ದಳು. ಆಕೆಯ ಎರಡು ತೊಡೆಗಳು ಸುಲಲಿತವೂ ಕೋಮಲವೂ ಆದ ರಂಭಾ (ಬಾಳೆಯಕಂಭ) ಸ್ತಂಭದಂತಿದ್ದವು

೪೩. ಎಲೈ ಮುನಿಯೇ, ಆಕೆಯು ಪೀನೋನ್ನತವೂ ಅತ್ಯಂತ ಕಠಿಣವೂ ಆದ ಸ್ತನದ್ವಯದಿಂದಲೂ, ರಥಚಕ್ರದಂತೆ ವರ್ತುಳಾಕಾರವೂ, ಸುಂದರವೂ ಆದ ಎರಡು ನಿತಂಬ ಬಿಂಬಗಳಿಂದಲೂ ಶೋಭಿಸುತ್ತಿದ್ದಳು.

೪೪. ಕೈಕಾಲುಗಳು ಕೆಂಪಾಗಿಯೂ, ಮೃದುವಾಗಿಯೂ ಇದ್ದವು. ಕೆಳತುಟಿಯು ಪಕ್ವವಾದ ಬಿಂಬಫಲದಂತೆಯೂ, ಹಲ್ಲುಗಳ ಸಾಲು ಪಕ್ವವಾದ ದಾಳಿಂಬೆಬೀಜಗಳಂತೆಯೂ ಮನೋಹರವಾಗಿದ್ದಿತು.

೪೫. ಕಣ್ಣುಗಳು ಶರದೃತುವಿನ ಮಧ್ಯಾಹ್ನಕಾಲದ ಪದ್ಮಗಳ ಪ್ರಭೆಯನ್ನು ಮೀರುತ್ತಿದ್ದವು. ಸ್ವಭಾವಸುಂದರವಾದ ಆಕೆಯ ರೂಪವು ಒಳ್ಳೆಯ ರತ್ನಭೂಷಣಗಳಿಂದ ಅಲಂಕೃತವಾಗಿದ್ದಿತು

ಇತೀವ ಮುಕ್ತ್ವಾ ದೃಷ್ಟ್ವಾ ಚ ಕಾಮಬಾಣಪ್ರಪೀಡಿತಃ ।
ದಿವ್ಯಂ ಸ್ಯಂದನಮಾರುಹ್ಯ ಕಾಮುಕ್ಯಾ ಸಹ ಕಾಮುಕಃ ॥ ೪೬ ॥

ಕ್ರೀಡಾಂ ಚಕಾರ ರಹಸಿ ಸ್ಥಾನೇ ಸ್ಥಾನೇ ಮನೋಹರೇ ।
ರಮ್ಯಾಯಾಂ ಮಲಯದ್ರೋಣ್ಯಾಂ ಚಂದನಾಗುರು ವಾಯುನಾ ॥ ೪೭ ॥

ಚಾರುಚಂಪಕಪುಷ್ಪಾಣಾಂ ತಲ್ಪೇ ರತಿಸುಖಾವಹೇ ।
ಮಾಲತೀ ಮಲ್ಲಿಕಾನಾಂ ಚ ಪುಷ್ಪೋದ್ಯಾನೇಽತಿ ಪುಷ್ಪಿತೇ ॥ ೪೮ ॥

ಪುಷ್ಪಭದ್ರಾ ನದೀತೀರೇ ನಿರ್ಜನೇ ಕೇತಕೀವನೇ ।
ಪಶ್ಚಿಮಾಬ್ಧಿ ತಟಾಂತಸ್ಥ ಕಾನನೇ ಜಂತುವರ್ಜಿತೇ ॥ ೪೯ ॥

ನಂದನೇ ಮಂದರದ್ರೋಣ್ಯಾಂ ಕಾವೇರೀ ತೀರಜೇ ವನೇ ।
ಶೈಲೇ ಶೈಲೇ ಸುರಮ್ಯೇ ಚ ನದ್ಯಾಂ ನದ್ಯಾಂ ನದೇ ನದೇ ॥ ೫೦ ॥

---

೪೬. ಇದನ್ನು ತಿಳಿದು ನೋಡಿದ ಆ ಸುಚಂದ್ರನು ಮನ್ಮಥಬಾಣಕ್ಕೊಳಗಾಗಿ ಕಾಮುಕಿಯಾದ ಆಕೆಯೊಡನೆ ದಿವ್ಯವಾದ ರಥದಲ್ಲಿ ಕುಳಿತು ಹೊರಟನು.

೪೭. ಮನೋಹರವಾದ ಏಕಾಂತಸ್ಥಳಗಳಲ್ಲಿ ಆಕೆಯೊಡನೆ ಕ್ರೀಡಿಸ ಲಾರಂಭಿಸಿದನು. ಚಂದನ, ಅಗುರು ಮುಂತಾದವುಗಳಿಂದ ಸುಗಂಧಪೂರ್ಣವೂ, ಅತ್ಯಂತ ರಮ್ಯವೂ ಆದ ಮಲಯಪರ್ವತದ ಕಣಿವೆಯಲ್ಲಿ ಕೆಲವುಕಾಲ ಕ್ರೀಡಿಸಿದನು.

೪೮-೪೯. ರತಿಸುಖದಾಯಕವೂ, ಸುಂದರವೂ ಆದ ಸಂಪಿಗೆಹೂಗಳ ಹಾಸಿಗೆಯಲ್ಲಿಯೂ, ಚೆನ್ನಾಗಿ ವಿಕಾಸಗೊಂಡಿರುವ ಜಾಜಿ ಮತ್ತು ಮಲ್ಲಿಗೆ ಹೂಗಳ ಉದ್ಯಾನದಲ್ಲಿಯೂ, ಪಶ್ಚಿಮಸಮುದ್ರದ ದಡದಲ್ಲಿರುವ ನಿರ್ಜಂತುವಾದ ಕಾನನದಲ್ಲಿಯೂ, ಆಕೆಯೊಡನೆ ರತಿಕ್ರೀಡೆಯಾಡಿದನು.

೫೦-೫೧. ನಂದನವನದಲ್ಲಿಯೂ, ಮಂದರಪರ್ವತದ ಕಣಿವೆಯಲ್ಲಿಯೂ, ಕಾವೇರಿತೀರದ ಉಪವನದಲ್ಲಿಯೂ, ಮನೋಹರವಾದ ಬೆಟ್ಟಗಳಲ್ಲಿಯೂ, ನದೀನದಗಳಲ್ಲಿಯೂ, ದ್ವೀಪಗಳಲ್ಲಿಯೂ, ಆ ಸುಚಂದ್ರನು ಸುಂದರಿಯಾದ ಆ ಕಲಾವತಿ

ದ್ವೀಪೇ ದ್ವೀಪೇ ತು ರಹಸಿ ಸರೇಮೇ ವಾಮಯಾ ಸಹ |
ನವಸಂಗಮ ಸಂಯೋಗಾ ದ್ಬುಬುಧೇ ನ ದಿವಾನಿಶಂ || ೫೦ ||

ಏವಂ ವರ್ಷಸಹಸ್ರಂ ತದ್ಗತಮೇವ ಮುಹೂರ್ತವತ್ |
ಕೃತ್ವಾ ವಿಹಾರಂ ಸುಚಿರಂ ಸ ವಿರಕ್ತೋ ಬಭೂವ ಹ || ೫೧ ||

ಜಗಾಮ ತಪಸೇ ವಿಂಧ್ಯಶೈಲಂ ತೀರ್ಥಂ ತಯಾ ಸಹ |
ಭಾರತೇಽತಿಪ್ರಶಸ್ಯಂ ಚ ಪುಲಹಾಶ್ರಮ ಮುತ್ತಮಂ || ೫೩ ||

ತಪಸ್ತೇಪೇ ನೃಪಸ್ತತ್ರ ದಿವ್ಯವರ್ಷಸಹಸ್ರಕಂ |
ಮೋಕ್ಷಾಕಾಂಕ್ಷೀ ನಿಸ್ಪೃಹಶ್ಚ ನಿರಾಹಾರಃ ಕೃಶೋದರಃ || ೫೪ ||

ಮುರ್ಛಾಮಾಪ ಮುನಿಶ್ರೇಷ್ಠ ಧ್ಯಾತ್ವಾ ಕೃಷ್ಣಪದಾಂಬುಜಂ |
ತದ್ಗಾತ್ರವ್ಯಾಪ್ತವಲ್ಮೀಕಂ ಸಾಧ್ವೀ ದೂರಂ ಚಕಾರ ಸಾ || ೫೫ ||

ಯೊಡನೆ ಏಕಾಂತಸುಖವನ್ನನುಭವಿಸಿದನು. ಹೊಸದಾಗಿ ಸಂಭೋಗಸುಖದಲ್ಲಿ ಮಗ್ನನಾದ ಆ ಸುಚಂದ್ರನು ಹಗಲು ರಾತ್ರಿಗಳನ್ನೂ ಅರಿಯದಂತಾದನು.

೫೧ ಈ ರೀತಿ ಸಾವಿರವರ್ಷಗಳು ಒಂದು ಮುಹೂರ್ತದಂತೆ ಕಳೆದು ಹೋದವು. ಇಂತು ಬಹಳ ಕಾಲ ಆಕೆಯೊಡನೆ ವಿಹರಿಸಿದನಂತರ ಆ ಸುಚಂದ್ರನು ವಿರಕ್ತನಾದನು.

೫೩ ಅನಂತರ ಆಕೆಯೊಡನೆ ಭಾರತದಲ್ಲಿ ಪ್ರಶಸ್ತಪುಣ್ಯತೀರ್ಥವೆನಿಸಿದ, ವಿಂಧ್ಯಪರ್ವತದಲ್ಲಿದ್ದ ಪುಲಹಮಹರ್ಷಿಯ ಆಶ್ರಮಕ್ಕೆ ತಪಸ್ಸಿಗಾಗಿ ಹೋದನು.

೫೪. ಅಲ್ಲಿ ಆಹಾರರಹಿತನಾದುದರಿಂದ ಕೃಶೋದರನಾದ ಆ ರಾಜನು ನಿಷ್ಕಾಮನಾಗಿ ಮೋಕ್ಷವನ್ನು ಮಾತ್ರ ಬಯಸುತ್ತ, ದಿವ್ಯವಾದ ಸಾವಿರ ವರ್ಷಗಳ ಕಾಲ ತಪಸ್ಸುಮಾಡಿದನು.

೫೫. ಎಲೈ ಮುನಿಪೋತ್ತಮನೇ, ಆ ಸುಚಂದ್ರನು ಈ ರೀತಿ ಶ್ರೀಕೃಷ್ಣನ ಪಾದಕಮಲಗಳನ್ನು ಸ್ಮರಿಸುತ್ತ ಮೂರ್ಛೆಗೊಳ್ಳಲು, ಅವನ ಶರೀರಕ್ಕೆ ಹುತ್ತವು ವ್ಯಾಪಿಸಿತು. ಆಗ ಸಾಧ್ವೀಮಣಿಯಾದ ಅವನ ಪತ್ನಿಯು ಪತಿಯ ದೇಹದಿಂದ ಹುತ್ತವನ್ನು ದೂರಮಾಡಿದಳು.

ನಿಶ್ಚೇಷ್ಟಿತಂ ಪತಿಂ ದೃಷ್ಟ್ವಾ ತ್ಯಕ್ತಂ ಪ್ರಾಣೈಶ್ಚ ಪಂಚಭಿಃ ।
ಮಾಂಸಶೋಣಿತರಿಕ್ತಂ ತಮಸ್ಥಿಸಂಸಕ್ತವಿಗ್ರಹಂ ॥ ೫೬ ॥

ಉಚ್ಚೈ ರುರೋದ ಶೋಕಾರ್ತಾ ನಿರ್ಜನೇ ತು ಕಲಾವತೀ ।
ಹೇ ನಾಥ ನಾಥೇತ್ಯುಚ್ಚಾರ್ಯ ಕೃತ್ವಾ ವಕ್ಷಸಿ ಮೂರ್ಛಿತಂ ॥ ೫೭ ॥

ವಿಲಲಾಪ ಮಹಾದೀನಾ ಪತಿವ್ರತಪಾರಾಯಣಾ ।
ದೃಷ್ಟ್ವಾ ನೃಪಂ ನಿರಾಹಾರಂ ಕೃಶಂ ಧಮನಿಸಂಯುತಂ ॥ ೫೮ ॥

ಶ್ರುತ್ವಾ ಚ ರೋದನಂ ತಸ್ಯಾಃ ಕೃಪಯಾ ಚ ಕೃಪಾನಿಧಿಃ ।
ಆವಿರ್ಬಭೂವ ಜಗತಾಂ ವಿಧಾತಾ ಕಮಲೋದ್ಭವಃ ॥ ೫೯ ॥

ಕ್ರೋಡೇ ಕೃತ್ವಾ ಚ ತಂ ತೂರ್ಣಂ ರುರೋಧ ಭಗವಾನ್ ವಿಭುಃ ।
ಬ್ರಹ್ಮಾ ಕಮಂಡಲು ಜಲೇನಾಸಿಚ್ಯ ನೃಪವಿಗ್ರಹಂ ॥ ೬೦ ॥

೫೬-೫೭. ಪಂಚಪ್ರಾಣಗಳಿಂದ ವಿಮುಕ್ತನಾಗಿ, ರಕ್ತಮಾಂಸಗಳಿಂದ ರಹಿತನಾಗಿ, ಕೇವಲ ಮೂಳೆಗಳಿಂದ ಮಾತ್ರ ಕೂಡಿ ನಿಶ್ಚೇಷ್ಟನಾಗಿ ನಿರ್ಜನವಾದ ಆ ಕಾಡಿನಲ್ಲಿ ಮಲಗಿರುವ ಪತಿಯನ್ನು ನೋಡಿ, ದುಃಖಪೀಡಿತಳಾಗಿ ಆ ಕಲಾವತಿಯು ಮೂರ್ಛಿತನಾದ ಪತಿಯನ್ನು ಎದೆಗಪ್ಪಿಕೊಂಡು 'ಅಯ್ಯೋ ಪ್ರಾಣನಾಥನೇ, ಎಲ್ಲಿಗೆ ಹೋದೆ' ಎಂದು ಗಟ್ಟಿಯಾಗಿ ಅಳಲಾರಂಭಿಸಿದಳು.

೫೮. ಆಹಾರವಿಲ್ಲದೆ ಕೃಶನಾಗಿ ಎದ್ದು ಕಾಣುವ ನರಗಳಿಂದ ಮಾತ್ರ ಕೂಡಿರುವ ಪತಿಯನ್ನು ನೋಡಿ, ಮಹಾಪತಿವ್ರತೆಯಾದ ಆ ಕಲಾವತಿಯು ಅತಿ ದೀನಧ್ವನಿಯಿಂದ ಗೋಳಾಡುತ್ತಿದ್ದಳು.

೫೯. ಆಗ ಆಕೆಯ ಆ ದೀನಧ್ವನಿಯನ್ನು ಕೇಳಿ ದಯಾಮಯನೂ ಜಗತ್ಸೃಷ್ಟಿಕರ್ತನೂ, ಕಮಲಸಂಭವನೂ ಆದ ಬ್ರಹ್ಮನು ದಯೆಯಿಂದ ಆಕೆಗೆ ಪ್ರತ್ಯಕ್ಷನಾದನು.

೬೦. ವಿಶ್ವವ್ಯಾಪಕನಾದ ಆ ವಿಶ್ವಸೃಜನೂ ಕೂಡ ಆ ರಾಜನ ಶರೀರವನ್ನು ತನ್ನ ಎದೆಗೆ ಅಪ್ಪಿಕೊಂಡು ಕನಿಕರಗೊಂಡು ತನ್ನ ಕಮಂಡಲುವಿನ ಜಲದಿಂದ ಅವನ ಶರೀರವನ್ನು ಪ್ರೋಕ್ಷಿಸಿದನು.

ಜೀವಂ ಸಂಚಾರಯಾಮಾಸ ಬ್ರಹ್ಮಜ್ಞಾನೇನ ಬ್ರಹ್ಮವಿತ್ ।
ನೃಪೇಂದ್ರಃ ಚೇತನಾಂ ಲಬ್ಧ್ವಾ ಪುರೋ ದೃಷ್ಟ್ವಾ ಪ್ರಜಾಪತಿಂ ॥ ೬೧ ॥

ಪ್ರಣನಾಮ ಚ ತಂ ದೃಷ್ಟ್ವಾ ತಂ ಚ ಕಾಮಸಮಪ್ರಭಂ ।
ತಮುವಾಚೇತಿ ಸಂತುಷ್ಟೋ ವರಂ ವೃಣು ಯಥೇಪ್ಸಿತಂ ॥ ೬೨ ॥

ಸ ವಿಧೇರ್ವಚನಂ ಶ್ರುತ್ವಾ ವವ್ರೇ ನಿರ್ವಾಣಮೀಪ್ಸಿತಂ ।
ದಯಾನಿಧೇ ತ್ವಂ ದಯಯಾ ವರಂ ದಾತುಂ ಸಮುದ್ಯತಃ ॥ ೬೩ ॥

ಪ್ರಸನ್ನವದನಃ ಶ್ರೀಮಾನ್ ಸ್ಮೇರಾನನಸರೋರುಹಃ ।
ಕೃತ್ವಾನುಮಾನಂ ಮನಸಿ ಶುಷ್ಕಕಂಠೋಷ್ಠತಾಲುಕಾ ॥ ೬೪ ॥

ತಮುವಾಚ ಸತೀ ತ್ರಸ್ತಾ ವರಂ ದಾತುಂ ಸಮುದ್ಯತಂ ।

॥ ಕಲಾವತ್ಯುವಾಚ ॥

ಯದಿ ಮುಕ್ತಿಂ ನೃಪೇಂದ್ರಾಯ ಪದಾಸಿ ಕಮಲೋದ್ಭವ ॥ ೬೫ ॥

---

೬೧. ಬ್ರಹ್ಮತತ್ವವನ್ನರಿತ ಆ ಚತುರ್ಮುಖಬ್ರಹ್ಮನು ಬ್ರಹ್ಮಜ್ಞಾನದ ಪ್ರಭಾವದಿಂದ ಅವನ ಶರೀರದಲ್ಲಿ ಪ್ರಾಣವಾಯುವು ಚಲಿಸುವಂತೆ ಮಾಡಲು, ಆ ರಾಜನು ಸಚೇತನನಾಗಿ ತನ್ನ ಮುಂದೆ ಜಗತ್ಸೃಷ್ಟಿಕರ್ತನಾದ ಬ್ರಹ್ಮನು ನಿಂತಿರುವುದನ್ನು ನೋಡಿದನು.

೬೨. ಕೂಡಲೇ ಬ್ರಹ್ಮನಿಗೆ ವಂದಿಸಲು ಸಂತುಷ್ಟನಾದ ಬ್ರಹ್ಮನು ಮನ್ಮಥನಂತೆ ಮನೋಹರನಾದ ಆ ಸುಚಂದ್ರನನ್ನು ಕುರಿತು ನಿನಗಿಷ್ಟಬಂದ ವರವನ್ನು ಕೇಳೆಂದನು.

೬೩. ಬ್ರಹ್ಮನಾಡಿದ ಈ ಮಾತುಗಳನ್ನು ಕೇಳಿ ಆ ಸುಚಂದ್ರನು 'ಎಲೈ ದಯಾಮಯನೇ, ನೀನು ಕರುಣೆಯಿಂದ ನನಗೆ ವರವನ್ನು ಕೊಡುವುದಾದರೆ ನನಗೆ ಅಭೀಪ್ಸಿತವಾದ ನಿರ್ವಾಣಮುಕ್ತಿಯನ್ನು ಅನುಗ್ರಹಿಸು' ಎಂದನು.

೬೪–೬೬. ಆ ಮಾತನ್ನು ಕೇಳಿದ ಬ್ರಹ್ಮನು ತನ್ನ ನಗುಮುಖದಿಂದ ಮನಃಪ್ರಸಾದವನ್ನು ತೋರುತ್ತಿರಲು ಮಹಾಪತಿವ್ರತೆಯಾದ ಕಲಾವತಿಯು ಅದನ್ನು ಮನಸಿನಲ್ಲಿಯೇ ಊಹಿಸಿ 'ಎಲ್ಲಿ ತನ್ನ ಪತಿಗೆ ಮುಕ್ತಿಯನ್ನು ಕೊಡುವನೋ' ಎಂಬ ಭಯದಿಂದ ಒಣಗಿದ ಗಂಟಲುಳ್ಳವಳಾಗಿ ವರಪ್ರದಾನದಲ್ಲಿ ಉದ್ಯುಕ್ತನಾದ

ಅತೋಽಬಲಾಯಾ ಹೇ ಬ್ರಹ್ಮನ್ಕಾ ಗತಿರ್ಭವಿತಾ ವದ ।
ವಿನಾ ಕಾಂತಂ ಚ ಕಾಂತಾನಾಂ ಕಾ ಶೋಭಾ ಚತುರಾನನ　　॥ ೬೬ ॥

ವ್ರತಂ ಪತಿವ್ರತಾಯಾಶ್ಚ ಪತಿರೇವ ಶ್ರುತೌ ಶ್ರುತಂ ।
ಗುರುಶ್ಚಾಭೀಷ್ಟದೇವಶ್ಚ ತಪೋ ಧರ್ಮಮಯಃ ಪತಿಃ　　॥ ೬೭ ॥

ಸರ್ವೇಷಾಂ ಚ ಪ್ರಿಯತರೋ ನ ಬಂಧುಃ ಸ್ವಾಮಿನಃ ಪರಃ ।
ಸರ್ವಧರ್ಮಾತ್ಪರಾ ಬ್ರಹ್ಮನ್ಪತಿಸೇವಾ ಸುದುರ್ಲಭಾ　　॥ ೬೮ ॥

ಸ್ವಾಮಿಸೇವಾ ವಿಹೀನಾಯಾಃ ಸರ್ವಂ ತನ್ನಿಷ್ಫಲಂ ಭವೇತ್ ।
ವ್ರತಂ ದಾನಂ ತಪಃ ಪೂಜಾ ಜಪಹೋಮಾದಿಕಂ ಚ ಯತ್　　॥ ೬೯ ॥

ಬ್ರಹ್ಮನನ್ನು ಕುರಿತಿಂತೆಂದಳು. ಕಲಾವತಿ:—ಎಲೈ ಕಮಲಸಂಭವನೇ, ರಾಜಶ್ರೇಷ್ಠನಾದ ಸುಚಂದ್ರನಿಗೆ ನೀನು ಮುಕ್ತಿಯನ್ನು ಕೊಡುವುದಾದರೆ ಅಬಲೆಯೂ ಅವನ ಪತ್ನಿಯೂ ಆದ ನನಗೆ ಗತಿಯಾರೆಂಬುದನ್ನು ತಿಳುಹು. ಎಲೈ ಚತುರ್ಮುಖನೇ, ಕಾಂತನಿಲ್ಲದ ಕಾಂತೆಯರಿಗೆ ಕಾಂತಿಯುಂಟೇ ?

೬೭. ಪತಿವ್ರತೆಗೆ ಪತಿಯ ಅನುಸರಣೆಯೇ ವ್ರತವೆಂದು ಶ್ರುತ್ಯುಕ್ತವಾಗಿದೆ. ಅಷ್ಟೇ ಅಲ್ಲ. ಗುರುವೂ, ಇಷ್ಟದೇವತೆಯೂ ಪತಿಯೇ ಆಗಿರುವನು. ಪತಿಸೇವೆಯನ್ನುಳಿದು ಬೇರೆ ತಪಸ್ಸು ಮತ್ತು ಧರ್ಮವು ಪತಿವ್ರತೆಗಿಲ್ಲ.

೬೮. ಎಲ್ಲರಿಗಿಂತಲೂ ಪ್ರಿಯತಮನಾದ ಪತಿಗಿಂತ ಉತ್ತಮನಾದ ಬಂಧುವು ಪತಿವ್ರತೆಗೆ ಬೇರಾರೂ ಇಲ್ಲ. ಎಲೈ ಬ್ರಹ್ಮದೇವನೇ. ಎಲ್ಲರಿಗೂ ಸುಲಭವಲ್ಲದ ಪತಿಸೇವೆಯೆಂಬುದೇ ಪತಿವ್ರತಾಸ್ತ್ರೀಯರ ಪರಮಧರ್ಮವು.

೬೯. ಪತಿಸೇವೆಯನ್ನು ಮಾಡದಿರುವ ಹೆಂಗಸು ಮಾಡಿದ ವ್ರತ, ದಾನ, ತಪಸ್ಸು, ಪೂಜೆ, ಜಪ ಮತ್ತು ಹೋಮಾದಿಗಳು ನಿಷ್ಫಲವಾಗುವುವು.

ಸ್ನಾನಂ ಚ ಸರ್ವತೀರ್ಥೇಷು ಪೃಥಿವ್ಯಾಶ್ಚ ಪ್ರದಕ್ಷಿಣಂ ।
ದೀಕ್ಷಾ ಚ ಸರ್ವಯಜ್ಞೇಷು ಮಹಾದಾನಾನಿ ಯಾನಿ ಚ ॥ ೭೦ ॥

ಪಠನಂ ಸರ್ವವೇದಾನಾಂ ಸರ್ವಾಣಿ ಚ ತಪಾಂಸಿ ಚ ।
ವೇದಜ್ಞಾನಾಂ ಬ್ರಾಹ್ಮಣಾನಾಂ ಭೋಜನಂ ದೇವಸೇವನಂ । ೭೧ ॥

ಏತಾನಿ ಸ್ವಾಮಿಸೇವಾಯಾಃ ಕಲಾಂ ನಾರ್ಹಂತಿ ಷೋಡಶೀಂ ।
ಸ್ವಾಮಿಸೇವಾ ವಿಹೀನಾ ಯಾ ವದಂತಿ ಸ್ವಾಮಿನೇ ಕಟುಂ ॥ ೭೨ ॥

ಪತಂತಿ ಕಾಲಸೂತ್ರೇ ಚ ಯಾವಚ್ಚಂದ್ರದಿವಾಕರೌ ।
ಸರ್ಪಪ್ರಮಾಣಾಃ ಕೃಮಯೋ ದಂಶಂತಿ ಚ ದಿವಾನಿಶಂ ॥ ೭೩ ॥

ಸಂತ್ರತಂ ವಿಪರೀತಂ ಚ ಕುರ್ವಂತಿ ಶಬ್ದಮುಲ್ಬಣಂ ।
ಮೂತ್ರಶ್ಲೇಷ್ಮಪುರೀಷಾಣಾಂ ಕುರ್ವಂತಿ ಭಕ್ಷಣಂ ಮುದಾ ॥ ೭೪ ॥

೭೦-೭೩. ಸಕಲ ಪುಣ್ಯ ತೀರ್ಥಗಳಲ್ಲಿ ಸ್ನಾನಮಾಡುವುದು, ಭೂಮಂಡಲವನ್ನು ಪ್ರದಕ್ಷಿಣೆಮಾಡುವುದು, ಸಕಲಯಜ್ಞದೀಕ್ಷೆಯನ್ನೂ ಕೈಗೊಳ್ಳುವುದು, ಮಹಾದಾನಗಳನ್ನು ಮಾಡುವುದು, ಚತುರ್ವೇದಗಳನ್ನೂ ಪಠನಮಾಡುವುದು, ಎಲ್ಲಾ ವಿಧವಾದ ತಪಸ್ಸುಗಳನ್ನೂ ಆಚರಿಸುವುದು, ವೇದಜ್ಞರಾದ ಬ್ರಾಹ್ಮಣರಿಗೆ ಭೋಜನ ಮಾಡಿಸುವುದು, ದೇವರ ಸೇವೆಯನ್ನು ಮಾಡುವುದು ಈ ಪುಣ್ಯಕಾರ್ಯಗಳೆಲ್ಲವೂ ಪತಿಸೇವೆಮಾಡುವುದರ ಫಲದ ಹದಿನಾರನೆಯ ಒಂದಂಶ ಫಲವನ್ನೂ ಕೊಡಲಾರವು. ಯಾವ ಹೆಂಗಸರು ಪತಿಸೇವೆಮಾಡುವುದನ್ನು ಬಿಟ್ಟು ಪತಿಯನ್ನು ಕಟುವಚನಗಳಿಂದ ದೂಷಿಸುವರೋ ಅವರೆಲ್ಲರೂ ಚಂದ್ರಸೂರ್ಯರಿರುವವರೆಗೆ ಕಾಲಸೂತ್ರವೆಂಬ ನರಕದಲ್ಲಿ ನರಳುವರು. ಅವರನ್ನು ಸರ್ಪಾಕಾರದ ಕೃಮಿಗಳು ಹಗಲೂ ರಾತ್ರಿ ಅಲ್ಲಿ ಕಚ್ಚುವುವು.

೭೪. ಅಲ್ಲಿ ಯಾವಾಗಲೂ ಅತ್ಯುಲ್ಬಣವಾಗಿ ಸಂಕಟಪಡುತ್ತ ಮಲಮೂತ್ರಗಳನ್ನೂ ಶ್ಲೇಷ್ಮಗಳನ್ನೂ ತಿಂದುಕೊಂಡು ತೃಪ್ತರಾಗುವರು.

ಮುಖೇ ತಾಸಾಂ ದಧಾತ್ಯೇವಮುಲ್ಕಾಂ ಚ ಯಮಕಿಂಕರಾಃ ।
ಭುಕ್ತ್ವಾ ಭೋಗಂ ಚ ನರಕೇ ಕೃಮಿಯೋನಿಂ ಪ್ರಯಾಂತಿ ತಾಃ ॥ ೭೫ ॥

ಭಕ್ಷಂತಿ ಜನ್ಮ ಶತಕಂ ರಕ್ತಮಾಂಸಪುರೀಷಕಂ ।
ಶ್ರುತ್ವಾಹಂ ವಿದುಷಾಂ ವಕ್ತ್ರಾದ್ವೇದವಾಕ್ಯೇಷು ನಿಶ್ಚಿತಂ ॥ ೭೬ ॥

ಜಾನಾಮಿ ಕಿಂಚಿದಬಲಾ ತ್ವಂ ವೇದಜನಕೋ ವಿಭುಃ ।
ಗುರೋರ್ಗುರುಶ್ಚ ವಿದುಷಾಂ ಯೋಗಿನಾಂ ಚ ತಥಾ ಗುರುಃ ॥ ೭೭ ॥

ಸರ್ವಜ್ಞಮೇವಂ ಭೂತಂ ತ್ವಾಂ ಬೋಧಯಾಮಿ ಕಿಮಚ್ಯುತ ।
ಪ್ರಾಣಾಧಿಕೋಽಯಂ ಕಾಂತೋಽಯಂ ಯದಿ ಮುಕ್ತೋ ಬಭೂವ ಹ ॥

ಮಮ ಕೋ ರಕ್ಷಿತಾ ಬ್ರಹ್ಮನ್ಧರ್ಮಸ್ಯ ಯೌವನಸ್ಯ ಚ ।
ಕೌಮಾರೇ ರಕ್ಷಿತಾ ತಾತೋ ದತ್ವಾ ಪಾತ್ರಾಯ ಸತ್ಕೃತೀ ॥ ೭೯ ॥

---

೭೫. ಯಮನ ದೂತರು ಅವರ ಮುಖದಲ್ಲಿ ಉರಿಯುವ ಕೊಳ್ಳಿಯನ್ನಿಡುವರು. ಈ ರೀತಿ ಅವರು ನರಕಯಾತನೆಯನ್ನನುಭವಿಸಿ ಮುಂದೆ ಕೃಮಿಯ ಜನ್ಮವೆತ್ತುವರು.

೭೬. ಆಗಲೂ ಕೂಡ ನೂರುಜನ್ಮಗಳು ಕಳೆಯುವವರೆಗೆ ರಕ್ತಮಾಂಸಗಳನ್ನೂ ಮಲವನ್ನೂ ತಿನ್ನಬೇಕಾಗುವುದು. ವೇದವಾಕ್ಯಗಳಲ್ಲಿ ಈ ರೀತಿ ನಿಶ್ಚಿತವಾಗಿ ನಿರೂಪಿತವಾಗಿದೆಯೆಂದು ವಿದ್ವಾಂಸರ ಮುಖದಿಂದ ನಾನು ಕೇಳಿದ್ದೇನೆ.

೭೭. ಅಬಲೆಯಾದ ನಾನು ಅಲ್ಪ ಸ್ವಲ್ಪ ಧರ್ಮವನ್ನರಿತಿರುವೆನು. ನೀನಾದರೋ ವೇದಗಳಿಗೆ ಜನಕನೆನಿಸಿ ವಿಶ್ವವ್ಯಾಪಕನಾಗಿರುವೆ. ಅಷ್ಟೇ ಅಲ್ಲ. ಬೃಹಸ್ಪತ್ಯಾಚಾರ್ಯನಿಗೂ ಗುರುವೆನಿಸಿದ ನೀನು ವಿದ್ವಾಂಸರಿಗೂ, ಯೋಗಿಗಳಿಗೂ, ಜ್ಞಾನಿಗಳಿಗೂ ಶ್ರೇಷ್ಠನೆನಿಸಿರುವೆ.

೭೮-೭೯. ಈ ರೀತಿ ಸರ್ವಜ್ಞನೂ, ನಾಶರಹಿತನೂ ಆದ ನಿನಗೆ ನಾನು ಏನುಹೇಳಬಲ್ಲೆ. ನನ್ನ ಪ್ರಾಣಕ್ಕಿಂತಲೂ ಅಧಿಕನಾದ ನನ್ನ ಪತಿಯು ಮುಕ್ತನಾದರೆ, ಅಬಲೆಯಾದ ನನ್ನ ಧರ್ಮವನ್ನೂ, ಯೌವನವನ್ನೂ ರಕ್ಷಿಸುವವರಾರು? ಕುಮಾರಿಯಾಗಿರುವಾಗ ರಕ್ಷಿಸುವ ತಂದೆಯು ಮಗಳನ್ನು ಸತ್ಪಾತ್ರಕ್ಕೆ ಕೊಟ್ಟು ಕೃತಕೃತ್ಯನೆನಿಸುವನು.

ಸರ್ವದಾ ರಕ್ಷಿತಾ ಕಾಂತಸ್ತದಭಾವೇ ಚ ತತ್ಸುತಃ ।
ತ್ರಿಷ್ವವಸ್ಥಾಸು ನಾರೀಣಾಂ ತ್ರಾತಾರಶ್ಚ ತ್ರಯಃ ಸ್ಮೃತಾಃ ॥ ೮೦ ॥

ಯಾಃ ಸ್ವತಂತ್ರಾಶ್ಚ ತಾ ನಷ್ಟಾಃ ಸರ್ವಧರ್ಮಬಹಿಷ್ಕೃತಾಃ ।
ಅಸತ್ಕುಲಪ್ರಸೂತಾಸ್ತಾಃ ಕುಲಟಾ ದುಷ್ಟಮಾನಸಾಃ ॥ ೮೧ ॥

ಶತಜನ್ಮಕೃತಂ ಪುಣ್ಯಂ ತಾಸಾಂ ನಶ್ಯತಿ ಪದ್ಮಜ ।
ಪುತ್ರಸ್ನೇಹೋ ಯಥಾ ಬಾಲ್ಯೇ ತಥಾ ಯೂನಿ ಚ ವಾರ್ಧಕೇ ॥ ೮೨ ॥

ಪತಿವ್ರತಾನಾಂ ಕಾಂತೇ ಚ ಸರ್ವಕಾಲೇ ಸಮಾ ಸ್ಪೃಹಾ ।
ಸುತೇ ಸ್ತನಂಧಯೇ ಸ್ನೇಹೋ ಮಾತೄಣಾಂ ಚಾತಿಶೋಭತೇ ॥ ೮೩ ॥

---

೮೦. ಅನಂತರ ಪತಿಯೇ ಸರ್ವದಾ ರಕ್ಷಿಸುವವನು. ಪತಿರಹಿತಳಾದ ಸ್ತ್ರೀಯನ್ನು ಪುತ್ರನು ರಕ್ಷಿಸುವನು. ಬಾಲ್ಯ, ಯೌವನ ಮತ್ತು ವಾರ್ಧಕ್ಯವೆಂಬ ಮೂರು ಅವಸ್ಥೆಗಳಲ್ಲಿ ಕ್ರಮವಾಗಿ ತಂದೆ, ಪತಿ, ಮತ್ತು ಪುತ್ರರು ಹೆಂಗಸನ್ನು ಕಾಪಾಡುವರು.

೮೧. ಈ ಮೂವರ ರಕ್ಷಣೆಗೊಳಗಾಗದೆ ಸ್ವತಂತ್ರವಾಗಿ ಜೀವಿಸುವ ಸ್ತ್ರೀಯರು ಹಾಳಾಗುವರಲ್ಲದೆ ಸಕಲಧರ್ಮಗಳಿಂದಲೂ ಬಹಿಷ್ಕೃತರಾಗುವರು. ದುಷ್ಟವಂಶದಲ್ಲಿ ಹುಟ್ಟಿ ದುಷ್ಟಕಾರ್ಯದಲ್ಲಿ ನಿರತರಾಗಿರುವ ಸ್ತ್ರೀಯರು ಕುಲಟೆಯರೆನಿಸುವರು.

೮೨. ಎಲೈ ಪದ್ಮಸಂಭವನೇ, ಆ ದುಷ್ಟಸ್ತ್ರೀಯರ ನೂರು ಜನ್ಮಗಳ ಪುಣ್ಯವೂ ನಾಶವಾಗುವುದು. ಬಾಲಕನಾದ ಪುತ್ರನಲ್ಲಿ ಪ್ರೇಮವಿರುವಂತೆ ಯುವಕನೂ ವೃದ್ಧನೂ ಆದ ಪುತ್ರನಲ್ಲಿ ಪ್ರೇಮವಿರುವುದಿಲ್ಲ.

೮೩. ಪತಿವ್ರತಾಸ್ತ್ರೀಯರಿಗಾದರೋ ಎಲ್ಲ ಕಾಲದಲ್ಲೂ ಒಂದೇಸಮವಾದ ಪ್ರೇಮವು ತಮ್ಮ ಪತಿಯಲ್ಲಿರುವುದು. ಸ್ತನ್ಯಪಾನಮಾಡುವ ಶಿಶುವಿನಲ್ಲಿರುವ ತಾಯಿಯ ಪ್ರೇಮವು ಶೋಭಿಸುವುದು

ಪತಿಸ್ನೇಹಸ್ಯ ಸಾಧ್ವೀನಾಂ ಕಲಾಂ ನಾರ್ಹತಿ ಷೋಡಶೀಂ।
ಸ್ತನಾಂಧೇ ಸ್ತನದಾನಾಂತಮಿಷ್ಟಾನ್ನೇ ಭೋಜನಾವಧಿ ॥ ೮೪ ॥

ಕಾಂತೇ ಚಿತ್ತಂ ಸತೀನಾಂ ಚ ಸ್ವಪ್ನೇ ಜ್ಞಾನೇ ಚ ಸಂತತಂ।
ದುಃಖಾಂತೋ ಬಂಧುವಿಚ್ಛೇದೋ ಪುತ್ರಾಣಾಂ ಚ ತತೋಧಿಕಃ ॥ ೮೫ ॥

ಸುದಾರುಣಃ ಸ್ವಾಮಿನಶ್ಚ ದುಃಖಂ ನಾತಃ ಪರಂ ಸ್ತ್ರಿಯಃ।
ಅವಿದಗ್ಧಾ ಯಥಾ ದಗ್ಧಾ ಜ್ವಲದಗ್ನೌ ವಿಷಾದನೇ ॥ ೮೬ ॥

ತಥಾ ವಿದಗ್ಧಾ ದಗ್ಧಾ ಸ್ಯಾದ್ವಿದಗ್ಧವಿರಹಾನಲೇ।
ನಾನ್ನೇ ತೃಷ್ಣಾ ಜಲೇ ತೃಷ್ಣಾ ಸಾಧ್ವೀನಾಂ ಸ್ವಾಮಿನಂ ವಿನಾ ॥ ೮೭ ॥

ವಿರಹಾಗ್ನೌ ಮನೋ ದಗ್ಧಂ ವಹ್ನೌ ಶುಷ್ಕತೃಣಂ ಯಥಾ।
ನ ಹಿ ಕಾಂತಾತ್ಪರೋ ಬಂಧುರ್ನ ಹಿ ಕಾಂತಾತ್ಪರಃ ಪ್ರಿಯಃ ॥ ೮೮ ॥

---

೮೪. ಆದರೂ ಆ ಪ್ರೇಮವು ಸಾಧ್ವೀಮಣಿಯರು ತಮ್ಮ ಪತಿಯಲ್ಲಿಟ್ಟಿರುವ ಪ್ರೇಮದ ಹದಿನಾರನೆಯ ಒಂದಂಶಕ್ಕೂ ಎಣೆಯಲ್ಲ. ಸ್ತನ್ಯವನ್ನು ಬಯಸುವ ಶಿಶುವಿನಲ್ಲಿ ಮಾತೆಯ ಮನಸ್ಸು ಸ್ತನ್ಯಪಾನಮಾಡಿಸುವವರೆಗಿರುವುದು. ಇಷ್ಟವಾದ ಆಹಾರದಲ್ಲಿ ಹೊಟ್ಟೆತುಂಬುವವರೆಗೆ ಮನಸ್ಸಿರುವುದು.

೮೫. ಆದರೆ ಸಾಧ್ವೀಮಣಿಯರ ಮನಸ್ಸು ತಮ್ಮ ಪತಿಯಲ್ಲಿ ಸ್ವಪ್ನಕಾಲದಲ್ಲೂ ಜಾಗ್ರದವಸ್ಥೆಯಲ್ಲೂ ಸಂತತವಾಗಿರುವುದು. ಬಂಧು ವಿರಹವು ಸಕೃದ್ದುಃಖಕಾರಿಯಹುದು. ಮಕ್ಕಳ ವಿರಹದುಃಖವು ಅದಕ್ಕಿಂತಲೂ ಅಧಿಕವಾದುದು.

೮೬-೮೭. ಪತಿಯ ವಿರಹದುಃಖವು ಅತ್ಯಂತ ದಾರುಣವಾದುದು. ಅದಕ್ಕಿಂತ ಮಿಗಿಲಾದದುಃಖವು ಹೆಂಗಸರಿಗಿಲ್ಲ. ಅನಾಗರಿಕಳಾದ ಹೆಂಗಸು ಉರಿಯುವ ಅಗ್ನಿಯಿಂದಾಗಲೀ, ವಿಷಭಕ್ಷಣದಿಂದಾಗಲೀ ದಗ್ಧಳಾಗುವಂತೆ ನಾಗರಿಕಳಾದ ಸ್ತ್ರೀಯು ಪತಿಯ ವಿರಹಾಗ್ನಿಯಿಂದ ದಗ್ಧಳಾಗುವಳು. ಸಾಧ್ವೀಮಣಿಯರಿಗೆ ತಮ್ಮ ಪ್ರಿಯರನ್ನು ಬಿಟ್ಟು ಅನ್ನದಲ್ಲಾಗಲೀ ನೀರಿನಲ್ಲಾಗಲೀ ಆಶೆಯಿರುವುದಿಲ್ಲ.

೮೮. ಅಗ್ನಿಯಲ್ಲಿ ಒಣಹುಲ್ಲು ಬೂದಿಯಾಗುವಂತೆ ಪತಿವ್ರತೆಯರ ಮನಸ್ಸು ಪತಿಯ ವಿರಹಾಗ್ನಿಯಲ್ಲಿ ಬೆಂದುಹೋಗುವುದು. ಆದಕಾರಣ ಪತಿವ್ರತಾಸ್ತ್ರೀಯರಿಗೆ ಪತಿಗಿಂತ ಮೇಲಾದ ಬಂಧುವಾಗಲೀ, ಪ್ರಿಯನಾಗಲೀ ಬೇರೊಬ್ಬನಿಲ್ಲ.

ನ ಹಿ ಕಾಂತಾತ್ಪರೋ ದೇವೋ ನ ಹಿ ಕಾಂತಾತ್ಪರೋ ಗುರುಃ |
ನ ಹಿ ಕಾಂತಾತ್ಪರೋ ಧರ್ಮೋ ನ ಹಿ ಕಾಂತಾತ್ಪರಂ ಧನಂ || ೮೯ ||

ನ ಹಿ ಕಾಂತಾತ್ಪರಃ ಪ್ರಾಣಾ ನ ಹಿ ಕಾಂತಾತ್ಪರಃ ಸ್ತ್ರಿಯಾಃ |
ನಿಮಗ್ನಂ ಕೃಷ್ಣಪಾದಾಬ್ಜೇ ವೈಷ್ಣವಾನಾಂ ಯಥಾ ಮನಃ || ೯೦ ||

ಯಥೈಕಪುತ್ರೇ ಮಾತುಶ್ಚ ಯಥಾ ಸ್ತ್ರೀಷು ಚ ಕಾಮಿನಾಂ |
ಧನೇಷು ಕೃಪಣಾನಾಂ ಚ ಚಿರಕಾಲಾರ್ಜಿತೇಷು ಚ || ೯೧ ||

ಯಥಾ ಭಯೇಷು ಭೀತಾನಾಂ ಶಾಸ್ತ್ರೇಷು ವಿಬುಷಾಂ ಯಥಾ |
ಸ್ತನಾದಾನೇ ಶಿಶೂನಾಂ ಚ ಶಿಲ್ಪೇಷು ಶಿಲ್ಪಿನಾಂ ಯಥಾ || ೯೨ ||

---

೮೯. ಪ್ರಾಣಕಾಂತನಿಗಿಂತ ಮಿಗಿಲಾದ ದೇವರಾಗಲೀ, ಗುರುವಾಗಲೀ, ಸ್ತ್ರೀಯರಿಗೆ ಬೇರೊಬ್ಬನಿಲ್ಲ ಪತಿಸೇವೆಗಿಂತ ಮಿಗಿಲಾದ ಧರ್ಮವಿಲ್ಲ. ಹೆಂಗಸಿಗೆ ಪತಿಗಿಂತ ಮಿಗಿಲಾದ ಧನವಿಲ್ಲ.

೯೦. ಸ್ತ್ರೀಯರಿಗೆ ಪತಿಗಿಂತ ಪ್ರಾಣಗಳು ಹೆಚ್ಚಲ್ಲ. ಅಷ್ಟೇಕೆ ಪತಿಗಿಂತ ಮಿಗಿಲಾದ ವಸ್ತುವಾವುದೂ ಇಲ್ಲ. ವಿಷ್ಣುಭಕ್ತರ ಮನಸ್ಸು ಶ್ರೀಕೃಷ್ಣನ ಪಾದಕಮಲಗಳಲ್ಲಿ ಸರ್ವದಾ ನೆಲೆಸಿರುವಂತೆ ಪತಿವ್ರತಾಸ್ತ್ರೀಯರ ಮನಸ್ಸು ಸರ್ವದಾ ತಮ್ಮ ಪತಿಯಲ್ಲೇ ನೆಲೆಸಿರುವುದು.

೯೧. ಒಬ್ಬನೇ ಮಗನಲ್ಲಿ ತಾಯಿಯ ಮನಸ್ಸು ನೆಲೆಸಿರುವಂತೆಯೂ, ಕಾಮಿಗಳ ಮನಸ್ಸು ಸುಂದರ ಸ್ತ್ರೀಯರಲ್ಲಿ ಅನುರಕ್ತವಾಗಿರುವಂತೆಯೂ, ಬಹುಕಾಲದಿಂದ ಸಂಪಾದಿಸಿದ ಧನದಲ್ಲಿ ಕೃಪಣರ ಮನಸ್ಸು ನೆಲೆಸಿರುವಂತೆಯೂ, ಸ್ತ್ರೀಯರ ಮನಸ್ಸು ಪತಿಯಲ್ಲಿ ನೆಲೆಸಿರುವುದು.

೯೨. ಭೀತರಿಗೆ ಭಯಪ್ರದವಾದ ವಸ್ತುವಿನಲ್ಲಿಯೂ, ವಿದ್ವಾಂಸರಿಗೆ ಶಾಸ್ತ್ರದಲ್ಲಿಯೂ, ಮಕ್ಕಳಿಗೆ ಸ್ತನ್ಯಪಾನದಲ್ಲಿಯೂ, ಶಿಲ್ಪಶಾಸ್ತ್ರನಿಪುಣರಿಗೆ ಶಿಲ್ಪಕಲೆಯಲ್ಲಿಯೂ, ಮನಸ್ಸಿರುವಂತೆ ಪತಿವ್ರತೆಯರಿಗೆ ತಮ್ಮ ಪತಿಯಲ್ಲಿಯೇ ಮನಸ್ಸಿರುವುದು.

ಯಥಾ ಜಾರೇ ಪುಂಶ್ಚಲೀನಾಂ ಸಾಧ್ವೀನಾಂ ಚ ತಥಾ ಪ್ರಿಯೇ।
ತಂ ವಿನಾ ಜೀವಿತುಂ ಬ್ರಹ್ಮನ್ ಕ್ಷಣಮೇಕಂ ನ ಚ ಕ್ಷಮಂ ॥ ೯೩ ॥

ಮರಣಂ ಜೀವನಂ ತಾಸಾಂ ಜೀವನಂ ಮರಣಾಧಿಕಂ।
ಸದ್ಭರ್ತೃರಹಿತಾನಾಂ ಚ ಶೋಕೇನ ಹೃತಚೇತಸಾಂ।
ಅನ್ಯಶೋಕನಿಮಗ್ನಾನಾಂ ಕಾಲೇನ ಪಾನಭೋಜನಾತ್ ॥ ೯೪ ॥

ವಿಪರೀತಃ ಕಾಂತಶೋಕೋ ವರ್ಧತೇ ಭಕ್ಷಣಾದಹೋ।
ಕರ್ಮಚ್ಛಾಯಾ ಸತೀನಾಂ ಚ ಸಂಗಿನೀನಾಂ ಸತೀ ವರಾ ॥ ೯೫ ॥

ಇತರೇ ಭೋಗದೇಹಾಂತೇ ಸಾಧ್ವೀ ಜನ್ಮನಿ ಜನ್ಮನಿ।
ಕರೋಷಿ ಚೇಜ್ಜಗದ್ಧಾತರಿಮಂ ಮುಕ್ತಂ ಮಯಾ ವಿನಾ ॥ ೯೬ ॥

ತ್ವಾಂ ಶಪ್ತ್ವಾಹಂ ತ್ವಯಿ ವಿಭೋ ಪಶ್ಯ ದಾಸ್ಯಾಮಿ ಸ್ತ್ರೀವಧಂ।
ಶ್ರುತ್ವಾ ಕಲಾವತೀವಾಕ್ಯಮುವಾಚ ವಿಸ್ಮಿತೋ ವಿಧಿಃ।
ಹಿತಂ ಪೀಯೂಷಸದೃಶಂ ಭಯಸಂವಿಗ್ನಮಾನಸಃ ॥ ೯೭ ॥

---

೯೩. ಕುಲಟೆಯರಿಗೆ ಜಾರಪುರುಷನಲ್ಲಿ ಆಸಕ್ತಿಯಿರುವಂತೆ ಸಾಧ್ವೀಮಣಿಯರಿಗೆ ತಮ್ಮ ಪತಿಯಲ್ಲಿ ಪ್ರೇಮವಿರುವುದು. ಎಲೈ ಬ್ರಹ್ಮನೇ, ಪತಿವಿರಹಿತಳಾದ ಹೆಂಗಸು ಒಂದು ಕ್ಷಣಕಾಲವೂ ಜೀವಿಸಲಾರಳು.

೯೪–೯೫. ಯೋಗ್ಯನಾದ ಪತಿಯನ್ನು ಕಳೆದುಕೊಂಡು ದುಃಖಪೀಡಿತರಾದ ಸ್ತ್ರೀಯರಿಗೆ ಮರಣವೇ ಜೀವನವು. ಅವರು ಜೀವಿಸಿರುವುದಕ್ಕಿಂತ ಸಾಯುವುದೇ ಮೇಲು. ಇತರವಾದ ದುಃಖಕ್ಕೀಡಾದವರು ಅನ್ನಪಾನಗಳಿಂದ ಕಾಲಕ್ರಮದಲ್ಲಿ ಆ ದುಃಖವನ್ನು ಮರೆಯಬಹುದು ಆದರೆ ಪತಿವಿರಹದುಃಖವು ಇವಕ್ಕೆಲ್ಲ ವಿಪರೀತವಾದುದು. ಅದು ಅನ್ನಪಾನಾದಿಗಳಿಂದ ಇನ್ನೂ ವೃದ್ಧಿಗೊಳ್ಳುವುದು. ಗೃಹಣಿಯರಲ್ಲಿ ಪತಿವ್ರತೆಯರಿಗೆ ಕರ್ಮಬಂಧನವು ಹೆಚ್ಚಾಗಿರುವುದು. ಏಕೆಂದರೆ ಇತರರು ಭೋಗಶರೀರವು ಕಳೆದಮೇಲೆ ಕರ್ಮಬಂಧನದಲ್ಲಿರುವರು.

೯೬–೯೭ ಎಲೈ ಜಗತ್ಸೃಷ್ಟಿಕರ್ತನೇ, ನನ್ನನ್ನು ಬಿಟ್ಟು ನನ್ನ ಪತಿಯನ್ನು ಮುಕ್ತನನ್ನಾಗಿ ಮಾಡುವುದಾದರೆ ನಿನ್ನನ್ನು ಶಪಿಸಿ ನಿನಗೆ ಸ್ತ್ರೀವಧೆಯ ದೋಷವು ಬರುವಂತೆ ಮಾಡುವೆನು ಇಂತು ನುಡಿದ ಕಲಾವತಿಯ ಮಾತುಗಳನ್ನು ಕೇಳಿ ಆಶ್ಚರ್ಯಚಕಿತನಾದ ಬ್ರಹ್ಮನು ಮನಸ್ಸಿನಲ್ಲಿಯೇ ಭೀತಿಗೊಂಡು ಅಮೃತಸದೃಶವಾದ ಕೆಲವು ಹಿತನುಡಿಗಳನ್ನಾಡಿದನು.

॥ ಬ್ರಹ್ಮೋವಾಚ ॥

ವತ್ಸೇ ಮುಕ್ತಿಂ ನ ದಾಸ್ಯಾಮಿ ಸ್ವಾಮಿನಂ ಚ ತ್ವಯಾ ವಿನಾ ॥ ೯೮ ॥

ಮುಕ್ತಂ ಕರ್ತುಂ ತ್ವಯಾ ಸಾರ್ಧಂ ಸಾಂಪ್ರತಂ ನಾಹಮೀಶ್ವರಃ ।
ಮಾತರ್ಮುಕ್ತಿರ್ವಿನಾ ಭೋಗಾದ್ದುರ್ಲಭಾ ಸರ್ವಸಂಮತಾ ॥ ೯೯ ॥

ನಿರ್ವಾಣತಾಂ ಸಮಾಪ್ನೋತಿ ಭೋಗೀ ಭೋಗವಿಕೃಂತನೇ ।
ಕತಿವರ್ಷಂ ಸ್ವರ್ಗಭೋಗಂ ಕುರುಷ್ವ ಸ್ವಾಮಿನಾ ಸಹ ॥ ೧೦೦ ॥

ತತಸ್ತು ಯುವಯೋರ್ಜನ್ಮ ಭವಿತಾ ಭಾರತೇ ಸತಿ ।
ಯದಾ ಭವಿಷ್ಯತಿ ಸತೀ ಕನ್ಯಾ ತೇ ರಾಧಿಕಾ ಸ್ವಯಂ ॥ ೧೦೧ ॥

---

೯೮. ಬ್ರಹ್ಮ :—ಎಲೌ ವತ್ಸೆಯೇ, ನಿನ್ನನ್ನು ಬಿಟ್ಟು ನಿನ್ನ ಪತಿಗೆ ನಿಶ್ಚಯವಾಗಿಯೂ ಮುಕ್ತಿಯನ್ನು ಕೊಡುವುದಿಲ್ಲ

೯೯. ಎಲೌ ವತ್ಸೆಯೇ, ನಿನ್ನ ಪತಿಗೂ ನಿನಗೂ ಏಕಕಾಲದಲ್ಲಿ ಮುಕ್ತಿ ಕೊಡಲು ನಾನು ಅಸಮರ್ಥನಾಗಿದ್ದೇನೆ ತಾನುಮಾಡಿದ ಕರ್ಮದ ಫಲವನ್ನು ಭೋಗಿಸಿದ ಹೊರತು ಮುಕ್ತಿಯು ದುರ್ಲಭವೆಂಬುದು ಸರ್ವವಿದಿತವಾಗಿದೆ.

೧೦೦. ಭೋಗಿಯು ಭೋಗಸಮಾಪ್ತಿಯಾದ ನಂತರ ನಿರ್ವಾಣ ಮುಕ್ತಿಯನ್ನು ಹೊಂದುವನು. ಆದಕಾರಣ ನೀನು ನಿನ್ನ ಪತಿಯೊಡನೆ ಕೆಲವುಕಾಲ ಸ್ವರ್ಗಭೋಗವನ್ನನುಭವಿಸು.

೧೦೧–೧೦೨. ಅನಂತರ ನೀವಿಬ್ಬರೂ ಭಾರತದಲ್ಲಿ ಜನ್ಮವೆತ್ತುವಿರಿ. ಯಾವಾಗ ಮಹಾಪತಿವ್ರತೆಯಾದ ರಾಧಾದೇವಿಯು ನಿಮ್ಮ ಕನ್ಯೆಯಾಗಿ ಅವತರಿಸುವಳೋ ಆಗ ಆಕೆಯೊಡನೆ ನೀವೂ ಕೂಡ ಜೀವನ್ಮುಕ್ತರಾಗಿ ಗೋಲೋಕಕ್ಕೆ ಹೋಗುವಿರಿ. ಆದುದರಿಂದ ಎಲೈ ರಾಜೇಂದ್ರನೇ, ನೀನೂ ಕೂಡ ಸ್ವಲ್ಪಕಾಲ ನಿನ್ನ ಪ್ರಿಯೆಯೊಡನೆ ಸುಖಾನುಭವವನ್ನು ಮಾಡು.

ಜೀವನ್ಮುಕ್ತೌ ತಯಾ ಸಾರ್ಧಂ ಗೋಲೋಕಂ ಚ ಗಮಿಷ್ಯಥಃ ।
ಕತಿಕಾಲಂ ನೃಪಶ್ರೇಷ್ಠಂ ಭುಂಕ್ಷ್ವ ಭೋಗಂ ಸ್ತ್ರಿಯಾ ಸಹ　　॥ ೧೦೨ ॥

ಸಾಧ್ವೀ ವೈ ಸತ್ವಯುಕ್ತಾ ಚ ಮಾ ಮಾಂ ಶಪ್ತುಂ ತ್ವಮರ್ಹಸಿ ।
ಜೀವನ್ಮುಕ್ತಾಃ ಸಮಾಃ ಸಂತಃ ಕೃಷ್ಣಪಾದಾಬ್ಜಮಾನಸಾಃ　　॥ ೧೦೩ ॥

ವಾಂಛಂತಿ ಹರಿದಾಸ್ಯಂ ಚ ದುರ್ಲಭಂ ನ ಚ ನಿರ್ವೃತಿಂ ।
ಇತ್ಯುಕ್ತ್ವಾ ತೌ ವರೌ ದತ್ವಾ ಸಂತಸ್ಥೌ ಪುರತಸ್ತಯೋಃ　　॥ ೧೦೪ ॥

ಯಯತುಸ್ತೌ ತಂ ಪ್ರಣಮ್ಯ ಜಗಾಮ ಸ್ವಾಲಯಂ ವಿಧಿಃ ।
ಆಜಗ್ಮತುಸ್ತೌ ಕಾಲೇನ ಭುಕ್ತ್ವಾ ಭೋಗಂ ಚ ಭಾರತಂ　　॥ ೧೦೫ ॥

ಪರಂ ಪುಣ್ಯಪ್ರದಂ ದಿವ್ಯಂ ಬ್ರಹ್ಮಾದೀನಾಂ ಚ ವಾಂಛಿತಂ ।
ಸುಚಂದ್ರೋ ವೃಷಭಾನುಶ್ಚ ಲಲಾಭ ಜನ್ಮ ಗೋಕುಲೇ　　॥ ೧೦೬ ॥

---

೧೦೩. ಎಲೌ ಕಲಾವತಿಯೇ, ಸಾಧ್ವೀಮಣಿಯೂ, ಪತಿವ್ರತೆಯು ತೇಜಸ್ಸಿನಿಂದ ಕೂಡಿದವಳೂ ಆದ ನೀನು ನನ್ನನ್ನು ಶಪಿಸುವುದು ಯುಕ್ತವಲ್ಲ. ಶ್ರೀಕೃಷ್ಣನ ಪಾದಕಮಲಗಳಲ್ಲಿ ಭಕ್ತಿಯುಳ್ಳ ಸಂತರೆಲ್ಲರೂ ಜೀವನ್ಮುಕ್ತರಾಗುವುದರಿಂದ ಸಮಾನರೆನಿಸುವರು.

೧೦೪. ಅವರೆಲ್ಲರೂ ದುರ್ಲಭವಾದ ಶ್ರೀಹರಿಯ ಸೇವೆಯನ್ನು ಬಯಸುವರೇ ಹೊರತು ಮುಕ್ತಿಯನ್ನು ಬಯಸುವುದಿಲ್ಲ. ಬ್ರಹ್ಮನು ಈರೀತಿ ಹೇಳಿ ಅವರಿಬ್ಬರಿಗೂ ಅಭೀಪ್ಸಿತವಾದ ವರವನ್ನು ಕೊಟ್ಟು ಅವರ ಎದುರಿನಲ್ಲೇ ಹೊರಡಲುದ್ಯುಕ್ತನಾದನು.

೧೦೫. ಆಗ ಆ ರಾಜದಂಪತಿಗಳೂ ಕೂಡ ಅವನಿಗೆ ವಂದಿಸಿ ಹೊರಟು ಹೋದರು. ಇತ್ತ ವಿಧಿಯು ತನ್ನ ಲೋಕಕ್ಕೆ ಹಿಂತಿರುಗಿದನು ಆ ದಂಪತಿಗಳಿಬ್ಬರೂ ಕಾಲಕ್ರಮದಲ್ಲಿ ತಮ್ಮ ಕರ್ಮಫಲವನ್ನು ಪಭೋಗಿಸಿ ಭರತಖಂಡದಲ್ಲಿ ಅವತರಿಸಿದರು.

೧೦೬. ಸುಚಂದ್ರನು ಭರತಖಂಡದಲ್ಲಿ ಪುಣ್ಯಪ್ರದವಾದ ಮತ್ತು ಬ್ರಹ್ಮಾದಿಗಳಿಗೂ ಅಭೀಪ್ಸಿತವಾದ ದಿವ್ಯಜನ್ಮವನ್ನು ಗೋಕುಲದಲ್ಲಿ ಪಡೆದು, ವೃಷಭಾನುವೆಂದು ವಿಖ್ಯಾತನಾದನು.

ಪದ್ಮಾವತ್ಯಾಶ್ಚ ಜಠರೇ ಸುರಭಾನಸ್ಯ ರೇತಸಾ ।
ಜಾತಿಸ್ಮರೋ ಹರೇರಂಶಃ ಶುಕ್ಲಪಕ್ಷೇ ಯಥಾ ಶಶೀ ॥ ೧೦೭ ॥

ವವೃಧೇಽನುದಿನಂ ತತ್ರ ವ್ರಜಗೇಹೇ ವ್ರಜಾಧಿಪಃ ।
ಸರ್ವಜ್ಞಶ್ಚ ಮಹಾಯೋಗೀ ಹರಿಪಾದಾಬ್ಜಮಾನಸಃ ॥ ೧೦೮ ॥

ನಂದಬಂಧುರ್ವದಾನ್ಯಶ್ಚ ರೂಪವಾನ್ಗುಣವಾನ್ಸುಧೀಃ ।
ಕಲಾವತೀ ಕಾನ್ಯಕುಬ್ಜೇ ಬಭೂವಾಯೋನಿಸಂಭವಾ ॥ ೧೦೯ ॥

ಜಾತಿಸ್ಮರಾ ಮಹಾಸಾಧ್ವೀ ಸುಂದರೀ ಕಮಲಾಕಲಾ ।
ಕಾನ್ಯಕುಬ್ಜೇ ನೃಪಶ್ರೇಷ್ಠೋ ಭನಂದನ ಉರುಕ್ರಮಃ ॥ ೧೧೦ ॥

ಸ ತಾಂ ಪ್ರಾಪ್ಯಚ ಯಾಗಾಂತೇ ಯಜ್ಞಕುಂಡಸಮುತ್ಥಿತಾಂ ।
ನಗ್ನಾಂ ಹಸಂತೀಂ ರೂಪಾಢ್ಯಾಂ ಸ್ತನಾಂಧಾಮಿವ ಬಾಲಿಕಾಂ ॥ ೧೧೧ ॥

---

೧೦೭. ಅವನು ಸುರಭಾನುವಿನ ತೇಜಸ್ಸಿನಿಂದ ಪದ್ಮಾವತಿಯ ಗರ್ಭದಲ್ಲಿ ಶ್ರೀಹರಿಯ ಅಂಶದಿಂದ ಹುಟ್ಟಿ, ಜನ್ಮಾಂತರಸ್ಮರಣೆಯುಳ್ಳವನಾಗಿ, ಶುಕ್ಲಪಕ್ಷದ ಚಂದ್ರನಂತೆ ವೃದ್ಧಿಗೊಳ್ಳುತ್ತಿದ್ದನು.

೧೦೮. ಸರ್ವಜ್ಞನೂ, ಯೋಗನಿರತನೂ, ಶ್ರೀಹರಿಯ ಪಾದಕಮಲಗಳನು ಸರ್ವದಾ ಸ್ಮರಿಸುವವನೂ ಆದ ಆ ವೃಷಭಾನುವು ಸುರಭಾನುವೆಂಬ ಗೋಪನ ಮನೆಯಲ್ಲಿ ಈ ರೀತಿ ವೃದ್ಧಿಗೊಳ್ಳುತ್ತ ಗೋಪರಿಗೆಲ್ಲ ಅಧಿಪತಿಯೆನಿಸಿದನು.

೧೦೯. ಉದಾರಿಯೂ, ರೂಪವಂತನೂ, ಗುಣವಂತನೂ ಮತ್ತು ಬುದ್ಧಿವಂತನೂ ಆದ ಆ ವೃಷಭಾನುವು ನಂದಗೋಪನಿಗೆ ಆಪ್ತನಾಗಿದ್ದನು. ; ಇತ್ತ ಕಲಾವತಿಯು ಕಾನ್ಯಕುಬ್ಜದಲ್ಲಿ ಅಯೋನಿಜೆಯಾಗಿ ಅವತರಿಸಿದಳು.

೧೧೦. ಕಮಲಾಂಶಸಂಭೂತಳೂ, ಮಹಾಪತಿವ್ರತೆಯೂ ಆದ ಆ ಸುಂದರಿಯು ಜನ್ಮಾಂತರಸ್ಮರಣೆಯುಳ್ಳವಳಾಗಿದ್ದಳು. ಕಾನ್ಯಕುಬ್ಜದಲ್ಲಿ ಮಹಾಪರಾಕ್ರಮಿಯಾದ ಭನಂದನನೆಂಬ ರಾಜನಿದ್ದನು

೧೧೧. ಆ ರಾಜನು ಯಾಗದ ಕೊನೆಯಲ್ಲಿ ಯಜ್ಞಕುಂಡದಿಂದ ಉದ್ಭವಿಸಿದ ರೂಪಸಂಪನ್ನಳೂ, ಹಸನ್ಮುಖಿಯೂ, ವಸ್ತ್ರರಹಿತಳೂ, ಸ್ತನಾಕಾಂಕ್ಷಿಯೂ ಆದ ಸ್ತ್ರೀಶಿಶುವನ್ನು ನೋಡಿದನು.

ತೇಜಸಾ ಪ್ರಜ್ವಲಂತೀಂ ಚ ಪ್ರತಪ್ತಕನಕಪ್ರಭಾಂ ।
ಕೃತ್ವಾ ವಕ್ಷಸಿ ರಾಜೇಂದ್ರಃ ಸ್ವಕಾಂತಾಯೈ ದದೌ ಮುದಾ ॥ ೧೧೨ ॥

ಮಾಲಾವತೀ ಸ್ತನಂ ದತ್ವಾ ತಾಂ ಪುಪೋಷ ಪ್ರಹರ್ಷಿತಾ ।
ತದನ್ನಪ್ರಾಶನ ದಿನೇ ಸತಾಂ ಮಧ್ಯೇ ಶುಭೇ ಕ್ಷಣೇ ॥ ೧೧೩ ॥

ನಾಮಕರಣಕಾಲೇ ಚ ವಾಗ್ಬಭೂವಾಶರೀರಿಣೀ ।
ಕಲಾವತೀತಿ ಕನ್ಯಾಯಾಃ ನಾಮ ರಕ್ಷೇ ನೃಪೇತಿ ಚ ॥ ೧೧೪ ॥

ಇತ್ಯೇವಂ ವಚನಂ ಶ್ರುತ್ವಾ ತಚ್ಚಕಾರ ಮಹೀಪತಿಃ ।
ವಿಪ್ರೇಭ್ಯೋ ಭಿಕ್ಷುಕೇಭ್ಯಶ್ಚ ವಂದಿಭ್ಯಶ್ಚ ಧನಂ ದದೌ ॥ ೧೧೫ ॥

ಸರ್ವೇಭ್ಯೋ ಭೋಜಯಾಮಾಸ ಚಕಾರ ಸುಮಹೋತ್ಸವಂ ।
ಕಾಲೇನ ಸಾ ರೂಪವತೀ ಯೌವನಸ್ಥಾ ಬಭೂವ ಹ ॥ ೧೧೬ ॥

---

೧೧೨. ಪುಟಕ್ಕೆ ಹಾಕಿದ ಚಿನ್ನದಂತೆ ತೇಜೋಮಯಳಾದ ಆ ಬಾಲಿಕೆಯನ್ನು ಆ ರಾಜನು ಸಂತೋಷದಿಂದ ಎದೆಗಪ್ಪಿಕೊಂಡು ಕರೆದೊಯ್ದು, ತನ್ನ ಕಾಂತೆಗೆ ಕೊಟ್ಟನು.

೧೧೩-೧೧೪. ಅವನ ಪತ್ನಿಯಾದ ಮಾಲಾವತಿಯು ಸಂತುಷ್ಟಳಾಗಿ, ಆ ಶಿಶುವಿಗೆ ಸ್ತನ್ಯಪಾನ ಮಾಡಿಸಿ ಪೋಷಿಸುತ್ತಿದ್ದಳು. ಆ ಶಿಶುವಿಗೆ ಶುಭಲಗ್ನದಲ್ಲಿ ಸತ್ಪುರುಷರ ಸಮ್ಮುಖದಲ್ಲಿ ನಾಮಕರಣಮಾಡಿ ಅನ್ನಪ್ರಾಶನಮಾಡಿಸುವಾಗ 'ಎಲೈ ರಾಜನೇ, ನೀನು ಈ ಕನ್ಯೆಗೆ ಕಲಾವತಿ ಎಂಬ ಹೆಸರನ್ನೇ ಇಡು' ಎಂದು ಅಶರೀರ ವಾಣಿಯಾಯಿತು.

೧೧೫. ಈ ರೀತಿಯಾದ ಅಶರೀರವಾಣಿಯನ್ನು ಕೇಳಿ ಭನಂದನನು ಆ ಶಿಶುವಿಗೆ ಕಲಾವತಿ ಎಂದೇ ಹೆಸರಿಟ್ಟು, ಬ್ರಾಹ್ಮಣರಿಗೂ, ಭಿಕ್ಷುಕರಿಗೂ, ಹೊಗಳು ಭಂಟರಿಗೂ ಯಥೇಚ್ಛವಾಗಿ ದ್ರವ್ಯದಾನ ಮಾಡಿದನು.

೧೧೬. ಎಲ್ಲರಿಗೂ ತೃಪ್ತಿಯಾಗಿ ಊಟಮಾಡಿಸಿ, ನಾಮಕರಣಮಹೋತ್ಸವವನ್ನು ವಿಜೃಂಭಣೆಯಿಂದ ಮುಗಿಸಿದನು. ಕಾಲಕ್ರಮದಲ್ಲಿ ಆ ಕನ್ಯೆಯು ರೂಪವತಿಯೂ ಪ್ರಾಯಸಂಪನ್ನಳೂ ಆದಳು.

ಅತೀವ ಸುಂದರಶ್ಯಾಮಾ ಮುನಿಮಾನಸ ಮೋಹಿನೀ ।
ಚಾರುಚಂಪಕವರ್ಣಾಭಾ ಶರಚ್ಚಂದ್ರನಿಭಾನನಾ ॥ ೧೧೭ ॥

ಈಷದ್ಧಾಸ್ಯಪ್ರಸನ್ನಾಸ್ಯಾ ಪ್ರಫುಲ್ಲಪದ್ಮಲೋಚನಾ ।
ನಿತಂಬಶ್ರೋಣಿಭಾರಾರ್ತಾ ಸ್ತನಭಾರನತಾ ಸತೀ ॥ ೧೧೮ ॥

ಗಚ್ಛಂತೀ ರಾಜಮಾರ್ಗೇಣ ಗಜೇಂದ್ರಮಂದಗಾಮಿನೀ ।
ದದರ್ಶ ನಂದಃ ಪಥಿ ತಾಂ ಗಚ್ಛಂತೀಂ ಚ ಮುದಾನ್ವಿತಃ ॥ ೧೧೯ ॥

ಜಿತೇಂದ್ರಿಯಶ್ಚ ಜ್ಞಾನೀ ಚ ಮೂರ್ಛಾಮಾಪ ತಥಾಪಿ ಚ ।
ತ್ರಸ್ತೋ ಲೋಕಾನ್ ಪಥಿ ಗತಾನ್ ತೂರ್ಣಂ ಪಪ್ರಚ್ಛ ಸಾದರಂ ॥ ೧೨೦ ॥

---

೧೧೭. ಅತ್ಯಂತ ಸುಂದರಿಯೂ, ಯೌವನಮಧ್ಯಸ್ಥಳೂ, ಸುಂದರವಾದ ಸಂಪಿಗೆಯಂತಿರುವ ಮೈಬಣ್ಣದವಳೂ ಆದ ಆ ಕುಮಾರಿಯು ಮುನಿಗಳ ಮನಸ್ಸನ್ನೂ ಮೋಹಗೊಳಿಸುವಂತಿದ್ದಳು.

೧೧೮. ಮಂದಹಾಸದಿಂದ ಪ್ರಸನ್ನಮುಖಿಯೂ, ಅರಳಿದ ತಾವರೆಯಂತೆ ವಿಶಾಲವಾದ ಕಣ್ಣುಳ್ಳವಳೂ, ನಿತಂಬಗಳ ಭಾರದಿಂದ ಮಂದಗಮನೆಯೂ ಆದ ಆ ಕಲಾವತಿಯು ಸ್ತನಗಳ ಭಾರದಿಂದ ಸ್ವಲ್ಪ ಬಗ್ಗಿದ್ದಳು.

೧೧೯. ಆ ಕಲಾವತಿಯು ಒಮ್ಮೆ ರಾಜಮಾರ್ಗದಲ್ಲಿ ಗಜೇಂದ್ರನಂತೆ ಮಂದಗಮನದಿಂದ ಹೋಗುತ್ತಿರುವುದನ್ನು ನಂದಗೋಪನು ನೋಡಿ ಅತ್ಯಂತ ಪ್ರೀತಿಯುತನಾದನು.

೧೨೦. ಆ ನಂದಗೋಪನು ಜ್ಞಾನಿಯೂ ಜಿತೇಂದ್ರಿಯನೂ ಆಗಿದ್ದರೂ ಕೂಡ ಆಕೆಯ ಸೌಂದರ್ಯಕ್ಕೆ ಮನಸೋತು ಮೂರ್ಛೆಗೊಂಡನು. ಮೂರ್ಛೆ ತಿಳಿದನಂತರ ಭಯಗ್ರಸ್ತನಾಗಿ ಮಾರ್ಗದಲ್ಲಿ ಹೋಗುತ್ತಿದ್ದ ಪಥಿಕರನ್ನು ಕುರಿತು ಈ ರೀತಿ ಕೇಳಿದನು.

ಗಚ್ಛಂತೀ ಕಸ್ಯ ಕನ್ಯೇಯಮಿತಿ ಹೋವಾಚ ತಂ ಜನಃ ।
ಭನಂದನಸ್ಯ ನೃಪತೇಃ ಕನ್ಯಾ ನಾಮ ಕಲಾವತೀ ॥ ೧೨೧ ॥

ಕಮಲಾಕಲಯಾ ಧನ್ಯಾ ಸಂಭೂತಾ ನೃಪಮಂದಿರೇ ।
ಕೌತುಕೇನ ಚ ಗಚ್ಛಂತೀ ಕ್ರೀಡಾರ್ಥಂ ಸಖಿಮಂದಿರಂ ॥ ೧೨೨ ॥

ವ್ರಜಂ ವ್ರಜ ವ್ರಜಶ್ರೇಷ್ಠೇತ್ಯುಕ್ತ್ವಾ ಲೋಕೋ ಜಗಾಮ ಹ ।
ಪ್ರಹೃಷ್ಟಮಾನಸೋ ನಂದೋ ಜಗಾಮ ರಾಜಮಂದಿರಂ ॥ ೧೨೩ ॥

ಅವರುಹ್ಯ ರಥಾತ್ತೂರ್ಣಂ ವಿವೇಶ ನೃಪತೇಃ ಸಭಾಂ ।
ಉತ್ಥಾಯ ರಾಜಾ ಸಂಭಾಷ್ಯ ಸ್ವರ್ಣಸಿಂಹಾಸನಂ ದದೌ ॥ ೧೨೪ ॥

ಇಷ್ಟಾಲಾಪಂ ಬಹುತರಂ ಚಕಾರ ಚ ಪರಸ್ಪರಂ ।
ವಿನಯಾವನತೋ ನಂದಃ ಸಂಬಂಧೋಕ್ತಿಂ ಚಕಾರ ಹ ॥ ೧೨೫ ॥

---

೧೨೧. 'ಇಲ್ಲಿ ಹೋಗುತ್ತಿರುವ ಈ ಯುವತಿ ಯಾರು?' ಎಂದು ನಂದ ಗೋಪನು ಕೇಳಲು, 'ಈಕೆಯು ಭನಂದನನೆಂಬ ರಾಜನ ಮಗಳಾದ ಕಲಾವತಿ ಎಂಬುವಳು' ಎಂದು ದಾರಿಗರು ಉತ್ತರವಿತ್ತರು.

೧೨೨. 'ಧನ್ಯಳಾದ ಈಕೆಯು ಭನಂದನನ ಮಂದಿರದಲ್ಲಿ ಮಹಾಲಕ್ಷ್ಮಿಯ ಕಲೆಯಿಂದ ಅವತರಿಸಿರುವಳು. ಈಗ ಕುತೂಹಲದಿಂದ ಕೂಡಿ ಕ್ರೀಡಾರ್ಥವಾಗಿ ತನ್ನ ಸಖಿಯ ಮಂದಿರಕ್ಕೆ ಹೋಗುತ್ತಿದ್ದಾಳೆ

೧೨೩. ಎಲೈ ಗೋಪಶ್ರೇಷ್ಠನೇ, ನೀನು ಗೋಕುಲಕ್ಕೆ ಹಿಂತಿರುಗು ಎಂದು ಹೇಳಿ ದಾರಿಗರು ಹೊರಟುಹೋದರು. ಸಂತುಷ್ಟಾಂತರಂಗನಾದ ನಂದಗೋಪನು ಆ ರಾಜನ ಮಂದಿರಕ್ಕೇ ಹೊರಟನು

೧೨೪. ಅಲ್ಲಿ ರಥದಿಂದಿಳಿದು ಜಾಗ್ರತೆ ರಾಜಮಂದಿರದ ಒಳಹೊಕ್ಕನು. ಕೂಡಲೇ ಭನಂದನನು ಪ್ರತ್ಯುತ್ಥಾನಮಾಡಿ, ಅವನನ್ನು ಕುಶಲಪ್ರಶ್ನೆಗಳನ್ನು ಕೇಳಿ ಸ್ವರ್ಣಸಿಂಹಾಸನದಲ್ಲಿ ಕುಳ್ಳಿರಿಸಿದನು.

೧೨೫. ಅವರಿಬ್ಬರಿಗೂ ವಿಧವಿಧವಾದ ಸರಸಸಲ್ಲಾಪಗಳಾದವು. ಅನಂತರ ವಿನಯದಿಂದ ತಲೆಬಾಗಿದ ನಂದನು ಕನ್ಯಾಸಂಬಂಧವಾಗಿ ಮಾತನಾಡಲು ಪ್ರಕ್ರಮಿಸಿದನು.

॥ ನಂದ ಉವಾಚ ॥

ಶೃಣು ರಾಜೇಂದ್ರ ವಕ್ಷ್ಯಾಮಿ ವಿಶೇಷವಚನಂ ಶುಭಂ ।
ಸಂಬಂಧಂ ಕುರು ಕನ್ಯಾಯಾ ವಿಶಿಷ್ಟೇನ ಚ ಸಾಂಪ್ರತಂ ॥ ೧೨೬ ॥

ಸುರಭಾನುಸುತಃ ಶ್ರೀಮಾನ್ವೃಷಭಾನುರ್ವ್ರಜಾಧಿಪಃ ।
ನಾರಾಯಣಾಂಶೋ ಗುಣವಾನ್ಸುಂದರಶ್ಚ ಸುಪಂಡಿತಃ ॥ ೧೨೭ ॥

ಸ್ಥಿರಯೌವನಯುಕ್ತಶ್ಚ ಯೋಗೀ ಜಾತಿಸ್ಮರೋ ಯುವಾ ।
ಕನ್ಯಾ ತೇಽಯೋನಿಸಂಭೂತಾ ಯಜ್ಞಕುಂಡಸಮುದ್ಭವಾ ॥ ೧೨೮ ॥

ತ್ರೈಲೋಕ್ಯಮೋಹಿನೀ ಶಾಂತಾ ಕಮಲಾಂಶಾ ಕಲಾವತೀ ।
ಸ ಚ ಯೋಗ್ಯಸ್ತ್ವದ್ದುಹಿತುಸ್ತದ್ಯೋಗ್ಯಾ ತೇ ಚ ಕನ್ಯಕಾ ॥ ೧೨೯ ॥

---

೧೨೬. ನಂದ :—ಎಲೈ ರಾಜೇಂದ್ರನೇ, ಶುಭಕರವೂ, ಪ್ರಕೃತೋಚಿತವೂ ಆದ ಕೆಲವು ಮಾತುಗಳನ್ನು ಹೇಳುವೆನು, ಕೇಳು. ಈಗ ವಿಶೇಷ ಯೋಗ್ಯತೆಯುಳ್ಳ ಪುರುಷಶ್ರೇಷ್ಠನೊಡನೆ ನಿನ್ನ ಕನ್ಯೆಯ ಸಂಬಂಧವನ್ನು ಬೆಳೆಸುವವನಾಗು.

೧೨೭. ಸುರಭಾನುಪುತ್ರನಾದ ವೃಷಭಾನುವೆಂಬುವನು ಶ್ರೀಮಂತನೂ, ಗುಣವಂತನೂ, ಸುಂದರನೂ, ಸುಪಂಡಿತನೂ ಆಗಿರುವುನಲ್ಲದೆ ನಾರಾಯಣಾಂಶ ದಿಂದ ಅವತರಿಸಿ ಗೋಕುಲಕ್ಕೆ ಅಧಿಪತಿಯಾಗಿದ್ದಾನೆ.

೧೨೮. ಸ್ಥಿರಯೌವನದಿಂದ ಕೂಡಿದ ಆ ಯುವಕನು ಯೋಗಬಲದಿಂದ ಜನ್ಮಾಂತರಸ್ಮರಣೆಯುಳ್ಳವನಾಗಿದ್ದಾನೆ. ನಿನ್ನ ಕನ್ಯೆಯೂ ಕೂಡ ಯಜ್ಞಕುಂಡದಿಂದ ಆವಿರ್ಭವಿಸಿ ಅಯೋನಿಜೆಯೆನಿಸಿಕೊಂಡಿದ್ದಾಳೆ.

೧೨೯. ಕಮಲಾಂಶಸಂಭೂತಳಾದ ಈ ಕಲಾವತಿಯು ತ್ರಿಲೋಕಮೋಹಕ ವಾದ ಶಾಂತರೂಪದಿಂದ ಮನೋಹರಳಾಗಿದ್ದಾಳೆ. ಈ ನಿನ್ನ ಮಗಳಿಗೆ ಆ ವೃಷ ಭಾನುವೇ ಯೋಗ್ಯನು. ಅವನಿಗೆ ನಿನ್ನ ಮಗಳೇ ಅರ್ಹಳು.

ವಿದಗ್ಧಾಯಾ ವಿದಗ್ಧೇನ ಸಂಬಂಧೋ ಗುಣವಾನ್ನೃಪ ।
ಇತ್ಯೇವಮುಕ್ತ್ವಾ ನಂದಸ್ತು ವಿರರಾಮ ಚ ಸಂಸದಿ ॥ ೧೩೦ ॥

ಉವಾಚ ತಂ ನೃಪಶ್ರೇಷ್ಠೋ ವಿನಯಾವನತೋ ಮುನೇ ।
॥ ಭನಂದನ ಉವಾಚ ॥
ಸಂಬಂಧೋ ಹಿ ವಿಧಿವಶೋ ನ ಮೇ ಸಾಧ್ಯೋ ವ್ರಜಾಧಿಪ ॥ ೧೩೧ ॥

ಪ್ರಜಾಪತಿರ್ಯೋಗಕರ್ತಾ ಜನ್ಮದಾತಾಽಹಮೇವ ಚ ।
ಕಾಸ್ಯ ಪತ್ನೀ ಚ ಕನ್ಯಾ ವಾ ವರಃ ಕೋವಾ ಸ ಸಾಧನಃ ॥ ೧೩೨ ॥

ಕರ್ಮಾನುರೂಪಫಲದಃ ಸರ್ವೇಷಾಂ ಕಾರಣಂ ವಿಧಿಃ ।
ಭವಿತವ್ಯಂ ಕೃತಂ ಕರ್ಮ ತದಮೋಘಂ ಶ್ರುತೌ ಶ್ರುತಂ ॥ ೧೩೩ ॥

---

೧೩೦. ಎಲೈ ರಾಜೇಂದ್ರನೇ, ಪ್ರೌಢೆಯಾದ ಹೆಂಗಸಿಗೆ ಪ್ರೌಢನಾದ ಪುರುಷನೊಡನೆ ಸಂಬಂಧವಾಗುವುದುಚಿತವಲ್ಲವೇ? ಹೀಗೆ ಹೇಳಿ ನಂದಗೋಪನು ಆ ರಾಜಸಭೆಯಲ್ಲಿ ಮೌನವನ್ನು ವಹಿಸಲು ಆ ರಾಜೇಂದ್ರನು ವಿನಯದಿಂದ ತಲೆಬಾಗಿ ಅವನನ್ನು ಕುರಿತು ಇಂತೆಂದನು.

೧೩೧. ಭನಂದನ:—ಎಲೈ ಗೋಪಶ್ರೇಷ್ಠನಾದ ನಂದನೇ, ಸ್ತ್ರೀಪುರುಷ ಸಂಬಂಧವೆಂಬುವುದು ವಿಧಿಪ್ರೇರಿತವಾಗಿ ನಡೆಯಬೇಕೇ ಹೊರತು ಮನುಷ್ಯನ ಇಚ್ಛೆಯಂತೆ ನಡೆಯುವುದಿಲ್ಲ.

೧೩೨. ನಾನು ಈ ಕನ್ಯೆಗೆ ಜನ್ಮದಾತನಾದರೂ ಬ್ರಹ್ಮನು ಸಂಬಂಧವನ್ನು ಕಲ್ಪಿಸುವನು. ಯಾರು ಯಾರ ಹೆಂಡತಿಯೋ, ಯಾರ ಮಗಳೋ, ಯಾರು ಅವಳಿಗೆ ಉಚಿತನಾದ ವರನೋ ನಮಗೆ ತಿಳಿಯದು.

೧೩೩. ಎಲ್ಲರಿಗೂ ವಿಧಿಯು ಅವರವರ ಕರ್ಮಾನುಗುಣವಾದ ಫಲವನ್ನು ಕೊಡಲು ಕಾರಣನಾಗಿರುವನು. ಜನ್ಮಾಂತರದಲ್ಲಿ ಕೃತವಾದ ಕರ್ಮವೇ ಮುಂದೆ ನಿಶ್ಚಯವಾಗಿಯೂ ಫಲದಾಯಕವಾಗುವುದೆಂದು ಶ್ರುತ್ಯುಕ್ತವಾಗಿದೆ.

ಅನ್ಯಥಾ ನಿಷ್ಫಲಂ ಸರ್ವಮನೀಶಸ್ಯೋದ್ಯಮೋ ಯಥಾ ।
ವೃಷಭಾನುಪ್ರಿಯಾ ಧಾತ್ರಾ ಲಿಖಿತಾ ಚೇತ್ಸುತಾ ಮಮ ॥ ೧೩೪ ॥

ಪುರಾ ಭೂತ್ವೈವ ಕೋಽವಾಹಂ ಕೇನಾನ್ಯೇನ ನಿವಾರ್ಯತೇ ।
ಇತ್ಯೇವಮುಕ್ತ್ವಾ ರಾಜೇಂದ್ರೋ ವಿನಯಾನತಕಂಧರಃ ॥ ೧೩೫ ॥

ಮಿಷ್ಟಾನ್ನಂ ಭೋಜಯಾಮಾಸ ಸಾದರೇಣ ಚ ನಾರದ ।
ನೃಪಾನುಜ್ಞಾಮುಪಾದಾಯ ವ್ರಜರಾಜೋ ವ್ರಜಂ ಗತಃ ॥ ೧೩೬ ॥

ಗತ್ವಾ ಸ ಕಥಯಾಮಾಸ ಸುರಭಾನಸ್ಯ ಸಂಸದಿ ।
ಸುರಭಾನಶ್ಚ ಯತ್ನೇನ ನಂದನೇನ ಚ ಸಾದರಂ ॥ ೧೩೭ ॥

ಸಂಬಂಧಂ ಯೋಜಯಾಮಾಸ ಗರ್ಗದ್ವಾರಾ ಚ ಸತ್ವರಂ ।
ವಿವಾಹಕಾಲೇ ರಾಜೇಂದ್ರೋ ವಿಪುಲಂ ಯೌತುಕಂ ದದೌ ॥ ೧೩೮ ॥

೧೩೪-೧೩೫. ಅಶಕ್ತನ ಪ್ರಯತ್ನಗಳೆಲ್ಲ ನಿಷ್ಫಲವಾಗುವಂತೆ ವಿಧಿಯನ್ನು ನಂಬದವನ ಪ್ರಯತ್ನಗಳು ವಿಫಲವಾಗುವುವು. ನನ್ನ ಮಗಳು ವೃಷಭಾನುವಿನ ಪತ್ನಿಯಾಗಬೇಕೆಂದು ವಿಧಿಲಿಖಿತವಾಗಿದ್ದರೆ ಆಗಿಯೇ ಆಗುವಳು. ಅದನ್ನು ತಪ್ಪಿಸಲು ನನ್ನಿಂದಾಗಲೀ, ಮತ್ತೊಬ್ಬರಿಂದಾಗಲೀ ಸಾಧ್ಯವಿಲ್ಲ. ಹೀಗೆ ಹೇಳಿ ರಾಜನು ವಿನಯದಿಂದ ತಲೆಬಾಗಿ ವಂದಿಸಿದನು.

೧೩೬. ಎಲೈ ನಾರದನೇ, ಇಂತು ನುಡಿದು ಆ ರಾಜನು ನಂದಗೋಪನಿಗೆ ವಿಶ್ವಾಸಪೂರ್ವಕವಾಗಿ ಮಿಷ್ಟಾನ್ನವನ್ನು ಊಟಮಾಡಿಸಿದನು. ಅನಂತರ ಆ ರಾಜನ ಅನುಜ್ಞೆಯನ್ನು ಪಡೆದು ನಂದಗೋಪನು ಗೋಕುಲಕ್ಕೆ ತೆರಳಿದನು.

೧೩೭-೧೩೮. ಅಲ್ಲಿ ಸುರಭಾನುವಿನ ಮನೆಗೆ ಹೋಗಿ ಎಲ್ಲ ಸಮಾಚಾರವನ್ನೂ ತಿಳಿಸಿದನು. ಸುರಭಾನುವೂ ಕೂಡ ಆದರಯುಕ್ತನಾಗಿ ಗರ್ಗಮಹರ್ಷಿಯಮೂಲಕ ತನ್ನ ಮಗನಿಗೂ ಆ ಕನ್ನಿಕೆಗೂ ಪ್ರಯತ್ನಪೂರ್ವಕವಾಗಿ ಸಂಬಂಧಬೆಳೆಸಿದನು. ವಿವಾಹಕಾಲದಲ್ಲಿ ಕಲಾವತಿಯ ತಂದೆಯು ಮಗಳಿಗೆ ಯಥೇಚ್ಛವಾಗಿ ಬಳುವಳಿಯನ್ನು ಕೊಟ್ಟನು.

ಗಜರತ್ನಮಶ್ವರತ್ನಂ ರತ್ನಾನಿ ಮಣಿಭೂಷಣಂ ।
ವೃಷಭಾನುರ್ಮುದಾ ಯುಕ್ತಃ ಪ್ರಾಪ್ಯ ತಾಂ ಚ ಕಲಾವತೀಂ ॥ ೧೩೯ ॥

ರೇಮೇ ಸುನಿರ್ಜನೇ ರಮ್ಯೇ ಬುಬುಧೇ ನ ದಿವಾನಿಶಂ ।
ಚಕ್ಷುರ್ನಿಮೇಷವಿರಹಾದ್ವ್ಯಾಕುಲಾಂ ಸ್ವಾಮಿನಂ ವಿನಾ ॥ ೧೪೦ ॥

ವ್ಯಾಕುಲೋ ವೃಷಭಾನುಶ್ಚ ಕ್ಷಣೇನ ಚ ತಯಾ ವಿನಾ ।
ಜಾತಿಸ್ಮರಾ ಚ ಸಾ ಕನ್ಯಾ ಮಾಯಾಮಾನುಷರೂಪಿಣೀ ॥ ೧೪೧ ॥

ಜಾತಿಸ್ಮರೋ ಹರೇರಂಶಃ ವೃಷಭಾನೋ ಮುದಾನ್ವಿತಃ ।
ವವೃಧೇ ಚ ತಯೋಃ ಪ್ರೇಮ ನಿತ್ಯಂ ನಿತ್ಯಂ ನವಂ ನವಂ ॥ ೧೪೨ ॥

ಸದಾ ಸಕಾಮಾ ಸಾ ಪ್ರೌಢಾ ಸ ಚ ಕಾಮಸಮೋ ಯುವಾ ।
ತಯೋಃ ಕನ್ಯಾ ಚ ಕಾಲೇನ ರಾಧಿಕಾ ಸಾ ಬಭೂವ ಹ ॥ ೧೪೩ ॥

---

೧೩೯. ಶ್ರೇಷ್ಠವಾದ ಅನೇಕುದುರೆಗಳನ್ನೂ ರತ್ನಗಳನ್ನೂ ಮಣಿಭೂಷಣಗಳನ್ನೂ ಬಳುವಳಿಯಾಗಿ ಕೊಟ್ಟನು. ವೃಷಭಾನುವು ಆ ಕಲಾವತಿಯನ್ನು ಪಡೆದು ಅತ್ಯಂತಸಂತೋಷಭರಿತನಾದನು.

೧೪೦. ರಮ್ಯವಾದ ನಿರ್ಜನಪ್ರದೇಶದಲ್ಲಿ ಅವಳೊಡನೆ ರಮಿಸುತ್ತ ಹಗಲು ರಾತ್ರಿಯನ್ನೂ ಅರಿಯದಂತಾದನು. ಆ ಕಲಾವತಿಯು ರೆಪ್ಪೆಹೊಡೆಯುವಷ್ಟು ಕಾಲವೂ ಪತಿವಿಹರವನ್ನು ಸಹಿಸದಂತಾದಳು.

೧೪೧. ವೃಷಭಾನುವೂ ಕೂಡ ಕ್ಷಣಕಾಲವೂ ಕಲಾವತಿಯ ವಿಹರವನ್ನು ಸಹಿಸದಂತಾದನು. ಮಾಯಾಮಾನುಷರೂಪವನ್ನು ಧರಿಸಿದ್ದ ಆ ಕಲಾವತಿಯು ಜನ್ಮಾಂತರಸ್ಮರಣೆಯುಳ್ಳವಳಾಗಿದ್ದಳು.

೧೪೨. ಶ್ರೀಹರಿಯ ಅಂಶಸಂಭೂತನಾದ ವೃಷಭಾನನೂ ಕೂಡ ಜನ್ಮಾಂತರಸ್ಮರಣೆಯಿಂದ ಸಂತೋಷಭರಿತನಾಗಿದ್ದನು. ಆ ದಂಪತಿಗಳಿಗೆ ಪ್ರತಿನಿತ್ಯವೂ ಹೊಸಹೊಸದಾಗಿ ಪ್ರೇಮವು ವೃದ್ಧಿಗೊಳ್ಳುತ್ತಿತ್ತು.

೧೪೩. ಪ್ರೌಢೆಯಾದ ಆ ಕಲಾವತಿಯು ಸರ್ವದಾ ಸಕಾಮಳಾಗಿದ್ದಳು. ಯುವಕನಾದ ವೃಷಭಾನುವೂ ಕೂಡ ಮನ್ಮಥನಂತೆ ಕಾಮುಕನಾಗಿದ್ದನು. ಕಾಲಕ್ರಮದಲ್ಲಿ ಆ ದಂಪತಿಗಳಿಗೆ ಹಿಂದೆ ಸುದಾಮನ ಶಾಪಕ್ಕೊಳಗಾಗಿದ್ದ ರಾಧಾದೇವಿಯು ಶ್ರೀಕೃಷ್ಣನ ಅನುಜ್ಞೆಯಂತೆ ಕನ್ಯೆಯಾಗಿ ಅವತರಿಸಿದಳು.

ಅಯೋನಿಸಂಭವಾ ಸಾ ಚ ಕೃಷ್ಣಪ್ರಾಣಾಧಿಕಾ ಸತೀ ।
ಯಸ್ಯಾ ದರ್ಶನಮಾತ್ರೇಣ ತೌ ವಿಮುಕ್ತೌ ಬಭೂವತುಃ ॥ ೧೪೪ ॥

ಇತಿಹಾಸಶ್ಚ ಕಥಿತಃ ಪ್ರಕೃತಂ ಶೃಣು ಸಾಂಪ್ರತಂ ।
ಪಾಪೇಂಧನಾನಾಂ ದಾಹೇ ಚ ಜ್ವಲದಗ್ನಿಶಿಖೋಪಮಃ ॥ ೧೪೫ ॥

ವೃಷಭಾನಾಶ್ರಮಂ ಗತ್ವಾ ಶಿಲ್ಪಿನಾಂ ಪ್ರವರೋ ಮುದಾ ।
ಸ್ಥಾನಾಂತರಂ ವಿಶ್ವಕರ್ಮಾ ಜಗಾಮ ಸ್ವಗಣೈಃ ಸಹ ॥ ೧೪೬ ॥

ಕ್ರೋಶಮಾತ್ರಂ ಸ್ಥಲಂ ಚಾರು ಮನಸಾಲೋಚ್ಯ ತತ್ವವಿತ್ ।
ಆಶ್ರಮಂ ಕರ್ತುಮಾರೇಭೇ ನಂದಸ್ಯ ಸುಮಹಾತ್ಮನಃ ॥ ೧೪೭ ॥

---

೧೪೪. ಶ್ರೀಕೃಷ್ಣನ ಪ್ರಾಣಕ್ಕಿಂತ ಅಧಿಕಳಾದ ಆ ರಾಧೆಯು ಅಯೋನಿಜೆಯಾಗಿ ಅವತರಿಸಿದಳು. ಅವಳ ದರ್ಶನಮಾತ್ರದಿಂದಲೇ ಆ ದಂಪತಿಗಳು ಮುಕ್ತರಾದರು.

೧೪೫. ಪಾಪವೆಂಬ ಕಟ್ಟಿಗೆಯನ್ನು ಸುಡಲು ಉರಿಯುವ ಅಗ್ನಿಜ್ವಾಲೆಯಂತಿರುವ ಈ ಇತಿಹಾಸವನ್ನು ಹೇಳಿದುದಾಯಿತು. ಈಗ ಪ್ರಕೃತವಿಷಯವನ್ನು ಹೇಳುವೆನು ಕೇಳು.

೧೪೬. ಅನಂತರ ಶಿಲ್ಪಿಶ್ರೇಷ್ಠನಾದ ವಿಶ್ವಕರ್ಮನು ವೃಷಭಾನುವಿನ ಮಂದಿರಕ್ಕೆ ಹೋಗಿ ಆತಿಥ್ಯವನ್ನು ಸ್ವೀಕರಿಸಿ ಬಳಿಕ ತನ್ನ ಪರಿವಾರದೊಡನೆ ಸ್ಥಾನಾಂತರಕ್ಕೆ ಹೋದನು.

೧೪೭ ಅಲ್ಲಿ ತತ್ವಜ್ಞಾನಿಯಾದ ಅವನು ಸುಂದರವಾದ ಕ್ರೋಶ ಪರಿಮಾಣವುಳ್ಳ ಸ್ಥಳವನ್ನು ನೋಡಿ ಮಹಾತ್ಮನಾದ ನಂದನಿಗೆ ಮಂದಿರವನ್ನು ನಿರ್ಮಿಸಲಾರಂಭಿಸಿದನು.

ಕೃತ್ವಾನುಮಾನಂ ಬುದ್ಧ್ಯಾ ಚ ಸರ್ವತೋಽಪಿ ವಿಲಕ್ಷಣಂ ।
ಪರಿಖಾಭಿರ್ಗಭೀರಾಭಿಶ್ಚ ತುರ್ಭಿಃ ಸಂಯುತಂ ವರಂ ॥ ೧೪೮ ॥

ದುರ್ಲಂಘ್ಯಾಭಿರ್ವೈರಿಭಿಶ್ಚ ಖನಿತಾಭಿಶ್ಚ ಪ್ರಸ್ತರೈಃ ।
ಪುಷ್ಪೋದ್ಯಾನೈರ್ವೇಷ್ಟಿತಾಭಿಃ ಪಾರಾವಾರೇಷು ಪುಷ್ಪಿತೈಃ ॥ ೧೪೯ ॥

ಚಾರುಚಂಪಕವೃಕ್ಷೈಶ್ಚ ಪುಷ್ಪಿತೈಃ ಸುಮನೋಹರೈಃ ।
ಪರಿತೋ ವಾಸಿತಾಭಿಶ್ಚ ಸುಗಂಧಿವಾಯುನಾ ಮುನೇ ॥ ೧೫೦ ॥

ಆಮ್ರೈರ್ಗುಡಾಲ್ಯೈಃ ಪನಸೈಃ ಖರ್ಜೂರೈರ್ನಾರಿಕೇಲಕೈಃ ।
ದಾಡಿಮ್ಯೈಃ ಶ್ರೀಫಲೈರ್ಭೃಂಗ್ಯೈಃ ಜಂಭೀರೈರ್ನಾಗರಂಗಕೈಃ ॥ ೧೫೧ ॥

ತುಙ್ಗೈರಾಮ್ರಾತಕೈ ರ್ಜಂಬುಸಮೂಹೈಶ್ಚ ಫಲಾನ್ವಿತೈಃ ।
ಕದಲೀನಾಂ ಕೇತಕೀನಾಂ ಕದಂಬಾನಾಂ ಕದಂಬಕೈಃ ॥ ೧೫೨ ॥

ಸರ್ವತಃ ಶೋಭಿತಾಭಿಶ್ಚ ಫಲೈಸ್ತೈಃ ಪುಷ್ಪೈಸ್ತೈರಹೋ ।
ಕ್ರೀಡಾರ್ಹಾಭಿರ್ನಿಗೂಢಾಭಿರ್ವಾಂಛಿತಾಭಿಶ್ಚ ಸರ್ವದಾ ॥ ೧೫೩ ॥

೧೪೮-೧೪೯. ತನ್ನ ಬುದ್ಧಿಶಕ್ತಿಯಿಂದ ಊಹಿಸಿ ಎಲ್ಲಕ್ಕಿಂತಲೂ ವಿಲಕ್ಷಣವಾದ ಮಂದಿರವನ್ನು ನಿರ್ಮಿಸಿದನು. ಅದರ ನಾಲ್ಕು ದಿಕ್ಕಿನಲ್ಲೂ ಅತ್ಯಂತ ಗಂಭೀರವಾದ ಕಂದಕಗಳಿದ್ದವು. ಅವು ಒಂದೇ ಸಮನಾಗಿ ತೋಡಲ್ಪಟ್ಟು ಶತ್ರುಗಳಿಗೆ ದಾಟಲಸಾಧ್ಯವಾಗಿದ್ದವು. ಸುತ್ತಲೂ ಪುಷ್ಪಿತವಾದ ಪುಷ್ಪೋದ್ಯಾನಗಳಿದ್ದವು.

೧೫೦. ಎಲೈ ಮುನಿಯೇ, ಆ ಪುಷ್ಪೋದ್ಯಾನದಲ್ಲಿ ಸಂಪಿಗೆ ಹೂಗಳಿಲ್ಲಿ ಅರಳಿ ಅದರಸುವಾಸನೆಯಿಂದ ವಾಯುವು ಸುಗಂಧಿಯಾಗಿ ಸುತ್ತಲೂ ಪಸರಿಸುತ್ತಿತ್ತು.

೧೫೧-೧೫೩. ಆ ಮಂದಿರದ ಸುತ್ತಲೂ ಇದ್ದ ಉಪವನದಲ್ಲಿ ಮಾವಿನ ಮರಗಳೂ, ಕಬ್ಬಿನ ಜಲ್ಲೆಗಳೂ, ಹಲಸು, ಖರ್ಜೂರ ಮತ್ತು ತೆಂಗಿನಮರಗಳೂ ಕಂಗೊಳಿಸುತ್ತಿದ್ದವು. ದಾಳಿಂಬೆ, ಬಿಲ್ವ, ಭೃಂಗ, ನಿಂಬೆ ಮತ್ತು ಕಿತ್ತಳೆ ಮರಗಳೂ ಶೋಭಿಸುತ್ತಿದ್ದವು. ಉನ್ನತವಾದ ಕಿವಿಮಾವು, ನೇರಳೆ ಮುಂತಾದವೃಕ್ಷಗಳೂ, ಅಲ್ಲಿದ್ದವು. ಈ ವೃಕ್ಷಗಳೆಲ್ಲ ಫಲಪೂರ್ಣವಾಗಿದ್ದವು. ಬಾಳೆ ಮರಗಳೂ, ತಾಳೆ ಮತ್ತು ಕದಂಬವೃಕ್ಷಗಳೂ ಫಲಪುಷ್ಪಗಳಿಂದ ಕೂಡಿ ಸುತ್ತಲೂ ಮನೋಹರವಾಗಿದ್ದವು. ರತಿಕ್ರೀಡೆಗೆ ಯೋಗ್ಯವಾದ ಏಕಾಂತ ಸ್ಥಳಗಳಿಂದ ಆ ಉದ್ಯಾನವು ರಸಿಕರಿಗೆಲ್ಲ ಅಭೀಪ್ಸಿತವಾಗಿತ್ತು.

ಪರಿಖಾನಾಂ ರಹಃಸ್ಥಾನೇ ಚಕಾರ ಮಾರ್ಗಮುತ್ತಮಾಂ ।
ದುರ್ಗಮಂ ಪರನರ್ಗಾಣಾಂ ಸ್ವಾನಾಂ ಚ ಸುಗಮಂ ಸದಾ ॥ ೧೫೪ ॥

ಸಂಕೇತೇನ ಮಣಿಸ್ತಂಭೈಶ್ಚಾದಿಶ್ಯೈಃ ಸ್ವಲ್ಪಪಾಥಸಾ ।
ಸ್ತಂಭಸೀಮಾಕೃತಮಹೋ ನ ಸಂಕೀರ್ಣಂ ನ ವಿಸ್ತೃತಂ ॥ ೧೫೫ ॥

ಪರಿಖೋಪರಿಭಾಗೇ ಚ ಪ್ರಾಕಾರಂ ಸುಮನೋಹರಂ ।
ಧನುಃಶತಪ್ರಮಾಣಂ ಚ ಚಕಾರಾತಿಸಮುಚ್ಛ್ರಿತಂ ॥ ೧೫೬ ॥

ಪ್ರಸ್ತರಸ್ಯ ಪ್ರಮಾಣಂ ಚ ಪಂಚವಿಂಶತಿಹಸ್ತಕಂ ।
ಸಿಂದೂರಾಕಾರಮಣಿಭಿರ್ನಿರ್ಮಿತಂ ಚಾತಿಸುಂದರಂ ॥ ೧೫೭ ॥

ಬಾಹ್ಯೇ ದ್ವಾಭ್ಯಾಂ ಚ ಸಂಯುಕ್ತಮಂತರೇ ಸಪ್ತಭಿಸ್ತಥಾ ।
ದ್ವಾರ್ಭಿಶ್ಚ ಸನ್ನಿರುದ್ಧಾಭಿರ್ಮಣಿಸಾರಕಪಾಟಕೈಃ ॥ ೧೫೮ ॥

---

೧೫೪. ಸುತ್ತಲೂ ಇರುವ ಕಂದಕಗಳಲ್ಲಿ ಶತ್ರುವರ್ಗದವರಿಗೆ ದುರ್ಗಮವೂ ನಂದಗೋಪನ ಕಡೆಯವರಿಗೆ ಸುಗಮವೂ ಆದ ಸುರಂಗಮಾರ್ಗಗಳನ್ನು ಗೋಪ್ಯವಾಗಿ ಕಲ್ಪಿಸಿದನು.

೧೫೫. ಆ ಮಾರ್ಗಗಳ ಗುರುತಿಗಾಗಿ ರತ್ನಸ್ತಂಭಗಳನ್ನು ನೆಟ್ಟಿದ್ದನು ಆ ಕಂಭಗಳು ಸ್ವಲ್ಪ ನೀರಿನಿಂದ ಆವೃತವಾಗಿದ್ದವು. ಆ ಕಂಭಗಳ ಎಲ್ಲೆಕಟ್ಟುಗಳು ಅತಿ ಒತ್ತಾಗಿಯೂ, ಅತಿವಿಸ್ತಾರವಾಗಿಯೂ ಇರಲಿಲ್ಲ.

೧೫೬. ಈ ರೀತಿಯಾದ ಕಂದಕಗಳ ಮೇಲುಭಾಗದಲ್ಲಿ ನೂರುಧನುಸ್ಸಿನಷ್ಟು ಉನ್ನತವೂ ಮನೋಹರವೂ ಆದ ಪ್ರಾಕಾರವನ್ನೂ ಸುತ್ತಲೂ ನಿರ್ಮಿಸಿದನು.

೧೫೭. ಕೋಟೆಯ ಒಂದೊಂದು ಕಲ್ಲುಚಪ್ಪಡಿಗಳೂ, ಇಪ್ಪತ್ತೈದು ಮೊಳದಷ್ಟು ದೀರ್ಘವಾಗಿದ್ದವು. ಅವುಗಳಲ್ಲಿ ಚಂದ್ರವರ್ಣದ ಮಣಿಗಳನ್ನು ಮೆಟ್ಟಿದ್ದುದರಿಂದ ಬಹಳ ಮನೋಹರವಾಗಿದ್ದವು.

೧೫೮. ಆ ಕೋಟೆಯ ಹೊರಭಾಗದಲ್ಲಿ ಶ್ರೇಷ್ಠಮಣಿಗಳಿಂದ ನಿರ್ಮಿತವಾದ ಕದಗಳಿಂದ ಕೂಡಿದ ಎರಡು ಹೆಬ್ಬಾಗಿಲುಗಳೂ ಒಳಭಾಗದಲ್ಲಿ ಏಳು ದ್ವಾರಗಳೂ, ಶೋಭಿಸುತ್ತಿದ್ದವು.

ಹರಿನ್ಮಣೀನಾಂ ಕಲಶೈಶ್ಚಿತ್ರಯುಕ್ತೈರ್ವಿರಾಜಿತಂ ।
ಮಣಿಸಾರವಿಕಾರೈಶ್ಚ ಕಪಾಟೈಶ್ಚ ಸುಶೋಭಿತಂ ॥ ೧೫೯ ॥

ಸ್ವರ್ಣಸಾರವಿನಿರ್ಮಾಣಕಲಶೋಜ್ವಲಶೇಖರಂ ।
ನಂದಾಲಯಂ ವಿನಿರ್ಮಾಯ ಬಭ್ರಾಮ ನಗರಂ ಪುನಃ ॥ ೧೬೦ ॥

ರಾಜಮಾರ್ಗಾಂಶ್ಚ ವಿವಿಧಾನ್ಸ ಚ ಚಾರೂಂಶ್ಚಕಾರ ಹ ।
ರಕ್ತಭಾನುವಿಕಾರೈಶ್ಚ ವೇದಿಭಿಶ್ಚ ಸುಪತ್ತನ್ಯೈಃ ॥ ೧೬೧ ॥

ಪಾರಾವಾರೇ ಚ ಪರಿತಃ ನಿಬದ್ಧಾಂಶ್ಚ ಮನೋಹರಾನ್ ।
ವಾಣಿಜ್ಯಾರ್ಹೈಶ್ಚ ವಣಿಜಾಂ ಪರಿತೋ ಮಣಿಮಂಡಪೈಃ ॥ ೧೬೨ ॥

ಸರ್ವತೋ ದಕ್ಷಿಣೇ ವಾಮೇ ಜ್ವಲದ್ಭಿಶ್ಚ ವಿರಾಜಿತಾನ್ ।
ತತೋ ವೃಂದಾವನಂ ಗತ್ವಾ ನಿರ್ಮಮೇ ರಾಸಮಂಡಲಂ ॥ ೧೬೩ ॥

---

೧೫೯. ಆ ದ್ವಾರಗಳು ಚಿತ್ರಯುಕ್ತವಾದ ಮರಕತಮಣಿಗಳ ಕಲಶಗಳಿಂದಲೂ, ಶ್ರೇಷ್ಠವಾದ ಮಣಿಗಳನ್ನು ಮೆಟ್ಟಿರುವ ಕದಗಳಿಂದಲೂ ಕಂಗೊಳಿಸುತ್ತಿದ್ದವು.

೧೬೦. ಶ್ರೇಷ್ಠವಾದ ಸುವರ್ಣನಿರ್ಮಿತವಾದ ಕಲಶದಿಂದ ಆ ಮಂದಿರದ ಮೇಲುಭಾಗವು ಮನೋಹರವಾಗಿದ್ದಿತು. ಈ ರೀತಿಯಾದ ನಂದನ ಮಂದಿರವನ್ನು ನಿರ್ಮಿಸಿ, ಆ ವಿಶ್ವಕರ್ಮನು ಪುನಃ ನಗರವನ್ನು ಬಳಸಿ ಬಂದನು.

೧೬೧. ಆ ನಗರದ ರಾಜಮಾರ್ಗಗಳನ್ನೆಲ್ಲ ಸುಂದರವಾಗಿ ನಿರ್ಮಿಸಿ ಅಲ್ಲಲ್ಲೇ ಮಣಿಶಿಲೆಗಳ ವೇದಿಕೆಗಳನ್ನು ಮನೋಹರವಾಗಿ ಕಲ್ಪಿಸಿದನು.

೧೬೨. ಸುತ್ತಲಿನ ಸಮುದ್ರದ ತೀರದಲ್ಲಿ ವರ್ತಕರ ವ್ಯಾಪಾರಕ್ಕೆ ಯೋಗ್ಯವೂ ಮನೋಹರವೂ ಆದ ಮಣಿಮಂಟಪಗಳನ್ನು ವಿರಚಿಸಿದನು.

೧೬೩. ಎಡಬಲಗಳಲ್ಲಿ ಶೋಭಿಸುತ್ತಿದ್ದ ಪಟಗೃಹಗಳಿಂದ ಆ ಮಂಡಪಗಳು ಮನೋಹರವಾಗಿದ್ದವು. ಅನಂತರ ವಿಶ್ವಕರ್ಮನು ವೃಂದಾವನಕ್ಕೆ ಹೋಗಿ ರಾಸಮಂಡಲವನ್ನು ನಿರ್ಮಿಸಿದನು.

ಸುಂದರಂ ಮಂಡಲಾಕಾರಂ ಮಣಿಪ್ರಾಕಾರಸಂಯುತಂ ।
ಪರಿತೋ ಯೋಜನಾಯಾಮಂ ಮಣಿವೇದಿಭಿರನ್ವಿತಂ ॥ ೧೬೪ ॥

ಮಣಿಸಾರವಿಕಾರೈಶ್ಚ ಮಂಡಪೈರ್ನವಕೋಟಿಭಿಃ ।
ಶೃಂಗಾರಾರ್ಹೈಶ್ಚ ಚಿತ್ರಾರ್ಹೈ ರತಿತಲ್ಪಸಮನ್ವಿತೈಃ ॥ ೧೬೫ ॥

ನಾನಾಜಾತಿಪ್ರಸೂನಾನಾಂ ವಾಯುನಾ ಸುರಭೀಕೃತೈಃ ।
ರತ್ನಪ್ರದೀಪಸಂಯುಕ್ತೈಃ ಸುವರ್ಣಕಲಶೋಜ್ಜ್ವಲೈಃ ॥ ೧೬೬ ॥

ಪುಷ್ಪೋದ್ಯಾನೈಃ ಪುಷ್ಪಿತೈಶ್ಚ ಸರೋಭಿಶ್ಚ ಸುಶೋಭಿತಂ ।
ರಾಸಸ್ಥಲಂ ವಿನಿರ್ಮಾಯ ಜಗಾಮಾನ್ಯತ್ಸ್ಥಲಂ ಪುನಃ ॥ ೧೬೭ ॥

---

೧೬೪. ಮಂಡಲಾಕಾರವಾದ ಆ ರಾಸಮಂಡಲವು ಮಣಿನಿರ್ಮಿತವಾದ ಪ್ರಾಕಾರದಿಂದ ಕೂಡಿ, ಸುತ್ತಲೂ ಒಂದು ಯೋಜನ ದೀರ್ಘವಾಗಿದ್ದು ರತ್ನವೇದಿಕೆಗಳಿಂದ ರಾಜಿಸುತ್ತಿತ್ತು.

೧೬೫. ಶ್ರೇಷ್ಠಮಣಿಗಳಿಂದ ನಿರ್ಮಿತವಾದ ಒಂಭತ್ತುಕೋಟಿ ಮಂಡಪಗಳಿಂದಲೂ, ಶೃಂಗಾರರಸಾನುಭವಕ್ಕೆ ಯೋಗ್ಯವೂ, ಚಿತ್ರವಿಚಿತ್ರವೂ, ರತಿಸುಖದಾಯಕವೂ ಆದ ಶಯನಗಳಿಂದಲೂ ಆ ರಾಸಮಂಡಲವು ಕಂಗೊಳಿಸುತ್ತಿತ್ತು.

೧೬೬. ಅನೇಕ ಜಾತಿಯ ಹೂವುಗಳ ಸುವಾಸನೆಯನ್ನು ಬೀರುತ್ತಿದ್ದ ವಾಯುವಿನಿಂದ ಸುವಾಸಿತವಾದ ಆ ರಾಸಮಂಡಲದಲ್ಲಿ ರತ್ನದೀಪಗಳೂ, ಸುವರ್ಣಕಲಶಗಳೂ ಕಂಗೊಳಿಸುತ್ತಿದ್ದವು.

೧೬೭. ಚೆನ್ನಾಗಿ ಹೂಬಿಟ್ಟಿರುವ ಹೂದೋಟಗಳಿಂದಲೂ, ಮನೋಹರವಾದ ಸರೋವರಗಳಿಂದಲೂ ಕೂಡಿ ಶೋಭಿಸುತ್ತಿರುವ ರಾಸಮಂಡಲವನ್ನು ನಿರ್ಮಿಸಿ, ಮುಂದೆ ಸ್ಥಳಾಂತರಕ್ಕೆ ಹೊರಟನು.

ದೃಷ್ಟ್ವಾ ಬೃಂದಾವನಂ ರಮ್ಯಂ ಪರಿತುಷ್ಟೋ ಬಭೂವ ಹ ।
ಬೃಂದಾವನಾಭ್ಯಂತರೇ ಚ ಸ್ಥಾನೇ ಸ್ಥಾನೇ ಸುನಿರ್ಜನೇ　　॥ ೧೬೮ ॥

ಕೃತ್ವಾ ಪರಿಮಿತಂ ಬುದ್ಧ್ಯಾ ಮನಸಾಲೋಚ್ಯ ಯತ್ನತಃ ।
ವಿಲಕ್ಷಣಾನಿ ರಮ್ಯಾಣಿ ತತ್ರ ತ್ರಿಂಶದ್ವನಾನಿ ಚ　　॥ ೧೬೯ ॥

ರಾಧಾಮಾಧವಯೋರೇವ ಕ್ರೀಡಾರ್ಥಂ ಚ ವಿನಿರ್ಮಮೇ ।
ತತೋ ಮಧುವನಾಭ್ಯಾಶೇ ನಿರ್ಜನೇಽತಿ ಮನೋಹರೇ　　॥ ೧೭೦ ॥

ವಟಮೂಲಸಮೀಪೇ ಚ ಸರಸಃ ಪಶ್ಚಿಮೇ ತಟೇ ।
ಚಂಪಕೋದ್ಯಾನಪೂರ್ಣಾಯಾಂ ಕೇತಕೀವನಮಧ್ಯತಃ　　॥ ೧೭೧ ॥

ಪುನಸ್ತಯೋಶ್ಚ ಕ್ರೀಡಾರ್ಥಂ ಚಕಾರ ರತ್ನಮಂಡಪಂ ।
ಚತುರ್ಭಿರ್ವೇದಿಕಾಭಿಶ್ಚ ಪರೀತಮತಿಸುಂದರಂ　　॥ ೧೭೨ ॥

೧೬೮-೧೬೯. ಅಲ್ಲಿ ರಮ್ಯವಾದ ವೃಂದಾವನವನ್ನು ನೋಡಿ ಸಂತಸಗೊಂಡನು. ಆ ವೃಂದಾವನದ ಮಧ್ಯಭಾಗದಲ್ಲಿ ನಿರ್ಜನವಾದ ಪ್ರದೇಶಗಳನ್ನು ನೋಡಿ, ಮನಸ್ಸಿನಲ್ಲಿ ಚೆನ್ನಾಗಿ ಪರ್ಯಾಲೋಚಿಸಿ, ಬುದ್ಧಿಯಿಂದ ಒಂದೊಂದು ಪರಿಮಿತಿಯನ್ನು ಕಲ್ಪಿಸಿಕೊಂಡು, ಪರಸ್ಪರ ವಿಲಕ್ಷಣವೂ, ಮನೋಹರವೂ ಆದ ಮೂವತ್ತು ಉಪವನಗಳನ್ನು ಅಲ್ಲಲ್ಲಿ ನಿರ್ಮಿಸಿದನು.

೧೭೦-೧೭೨ ಈರೀತಿ ರಾಧಾ ಮಾಧವರ ವಿಹಾರಕ್ಕಾಗಿ ಉಪವನಗಳನ್ನು ನಿರ್ಮಿಸಿದನಂತರ, ನಿರ್ಜನವೂ, ಮನೋಹರವೂ, ಆದ ಮಧುವನದ ಸಮೀಪದಲ್ಲಿ ಆಲದ ಮರದ ಬುಡದಲ್ಲಿರುವ ಸರೋವರದ ಪಶ್ಚಿಮದಡದಲ್ಲಿ ಆ ರಾಧಾಮಾಧವರ ಕ್ರೀಡೆಗಾಗಿ ನಾಲ್ಕು ಜಗಲಿಗಳಿಂದ ಕೂಡಿ ಮನೋಹರವಾಗಿದ್ದ ರತ್ನಮಂಡಪವೊಂದನ್ನು ನಿರ್ಮಿಸಿದನು. ಅದರ ಸುತ್ತಲೂ ಸಂಪಿಗೆ ಮತ್ತು ಕೇತಕೀ ಪುಷ್ಪಗಳ ಉದ್ಯಾನವನಗಳಿದ್ದುವು.

ಸದ್ರತ್ನಸಾರರಚಿತೈ ರಾಜಿತಂ ತೂಲಿಕಾಶತೈಃ ।
ಅಮೂಲ್ಯರತ್ನರಚಿತೈರ್ನಾನಾಚಿತ್ರೇಣ ಚಿತ್ರಿತೈಃ ॥ ೧೭೩ ॥

ಕಪಾಟೈರ್ನವಭಿರ್ಯುಕ್ತಂ ನವದ್ವಾರೈರ್ಮನೋಹರೈಃ ।
ರತ್ನೇಂದ್ರಚಿತ್ರಕಲಶೈಃ ಕೃತ್ರಿಮೈಶ್ಚ ತ್ರಿಕೋಟಿಭಿಃ ॥ ೧೭೪ ॥

ಪರಿತಃ ಪರಿತೋ ಭಿತ್ತ್ಯಾಮೂರ್ಧ್ವಂ ಚ ಪರಿಶೋಭಿತಂ ।
ಮಹಾಮಣೀಂದ್ರವಿಕೃತೈರಾರೋಹೈರ್ನವಭಿರ್ವೃತಂ ॥ ೧೭೫ ॥

ಸದ್ರತ್ನಸಾರರಚಿತಕಲಶೋಜ್ಜ್ವಲ ಶೇಖರಂ ।
ಪತಾಕಾತೋರಣೈರ್ಯುಕ್ತಂ ಶೋಭಿತಂ ಶ್ವೇತಚಾಮರೈಃ ॥ ೧೭೬ ॥

ಸರ್ವತಃ ಪರಿತೋ ದೀಪ್ತಮಮೂಲ್ಯರತ್ನದರ್ಪಣೈಃ ।
ಧನುಃಪ್ರಮಾಣಶತಕಮೂರ್ಧ್ವಮಗ್ನಿಶಿಖೋಪಮಂ ॥ ೧೭೭ ॥

---

೧೭೩. ಶ್ರೇಷ್ಠರತ್ನಗಳಿಂದ ನಿರ್ಮಿತವಾಗಿರುವ ನೂರಾರು ಚಿತ್ರಕುಂಚಿಕೆಗಳಿಂದಲೂ, ಅಮೂಲ್ಯ ರತ್ನಗಳಿಂದ ರಚಿತವಾದ ನಾನಾವಿಧ ಚಿತ್ರಗಳಿಂದಲೂ ಆ ರತ್ನಮಂಡಪವು ಶೋಭಿಸುತ್ತಿತ್ತು

೧೭೪. ಮನೋಹರವಾದ ಒಂಭತ್ತು ದ್ವಾರಗಳಿಂದಲೂ, ಒಂಭತ್ತು ಕದಗಳಿಂದಲೂ, ವಿರಾಜಿಸುತ್ತಿದ್ದ ಆ ಮಂಡಪದಲ್ಲಿ ಕೃತ್ರಿಮವಾದ ಮೂರು ಕೋಟಿ ರತ್ನ ಕಲಶಗಳು ಕಂಗೊಳಿಸುತ್ತಿದ್ದವು.

೧೭೫-೧೭೬. ಸುತ್ತಲಿನ ಗೋಡೆಗಳಲ್ಲೂ ಮೇಲುಭಾವಣಿಗಳಲ್ಲೂ ಶ್ರೇಷ್ಠ ರತ್ನಗಳನ್ನು ಮೆಟ್ಟಿದ್ದರು. ಆ ಮಂಡಪವು ಒಂಭತ್ತು ಮಹಡಿಗಳಿಂದ ವಿರಾಜಿಸುತ್ತಿತ್ತು. ಶ್ರೇಷ್ಠರತ್ನಗಳನ್ನು ಮೆಟ್ಟಿದ್ದ ಕಲಶಗಳು ಆ ಮಂಡಪದ ಶಿಖರದಲ್ಲಿ ರಾರಾಜಿಸುತ್ತಿದ್ದವು. ಧ್ವಜತೋರಣಗಳೂ, ಶ್ವೇತಚಾಮರಗಳೂ, ಮೇಲುಭಾಗದಲ್ಲಿ ಪ್ರಕಾಶಿಸುತ್ತಿದ್ದವು.

೧೭೭-೧೮೦. ಅಮೂಲ್ಯವಾದ ರನ್ನಗನ್ನಡಿಗಳಿಂದ ಸುತ್ತಲೂ ದೇದೀಪ್ಯಮಾನವಾಗಿರುವ, ಮತ್ತು ನೂರು ಧನಸ್ಸುಗಳ ಪ್ರಮಾಣದಷ್ಟು ಉನ್ನತವಾಗಿಯೂ,

ಶತಹಸ್ತಪ್ರಮಾಣಂ ಚ ಪ್ರಸ್ತಾರಂ ವರ್ತುಲಾಕೃತಿಂ ।
ಶೋಭಿತಂ ರತ್ನತಲ್ಪೈಶ್ಚ ತದಭ್ಯಂತರಮುತ್ತಮಂ ॥ ೧೭೮ ॥

ವಹ್ನಿಶುದ್ಧಾಂಶುಕೈರ್ವಸ್ತ್ರೈ ರ್ಮಾಲಾಜಾಲಾವಿಚಿತ್ರಿತೈಃ ।
ಪಾರಿಜಾತಪ್ರಸೂನಾನಾಂ ಮಾಲ್ಯೋಪಧಾನಸಂಯುತೈಃ ॥ ೧೭೯ ॥

ಚಂದನಾಗುರುಕಸ್ತೂರೀ ಕುಂಕುಮೈಃ ಸುರಭೀಕೃತಂ ।
ನವಶೃಂಗಾರಯೋಗ್ಯೈಶ್ಚ ಕಾಮವರ್ಧನಕಾರಿಭಿಃ ॥ ೧೮೦ ॥

ಮಾಲತೀ ಚಂಪಕಾನಾಂ ಚ ಪುಷ್ಪರಾಜಿಭಿರನ್ವಿತಂ ।
ಸಕರ್ಪೂರೈಶ್ಚ ತಾಂಬೂಲೈಃ ಸದ್ರತ್ನಪಾತ್ರಸಂಸ್ಥಿತೈಃ ॥ ೧೮೧ ॥

ವಜ್ರಸಾರೇಣ ಖಚಿತೈರ್ಮುಕ್ತಾಜಾಲವಿಲಂಬಿತೈಃ ।
ರತ್ನಸಾರಘಟಾಕೀರ್ಣಂ ರತ್ನಪೀಠೈಃ ಸುಸಂಯುತಂ ॥ ೧೮೨ ॥

ಅಗ್ನಿಜ್ವಾಲೆಗೆ ಸದೃಶವಾಗಿಯೂ, ನೂರುಮೊಳ ಸುತ್ತಳತೆಯುಳ್ಳದ್ದಾಗಿಯೂ ಇರುವ, ಆವರಣದಿಂದಲೂ ಅದರ ಮಧ್ಯದಲ್ಲಿರುವ ರತ್ನಶಯನಗಳಿಂದಲೂ, ಶೋಭಿತವಾಗಿರುವ, ಆ ಮಂಡಪವು ಅಗ್ನಿಯಂತೆ ಪರಿಶುದ್ಧವಾದ ವಸ್ತ್ರಗಳಿಂದಲೂ. ಚಿತ್ರವಿಚಿತ್ರವಾದ ಅನೇಕ ಹೂಮಾಲೆಗಳಿಂದಲೂ, ಪಾರಿಜಾತಪುಷ್ಪಮಾಲೆಯ ದಿಂಬುಗಳಿಂದಲೂ, ಕಾಮವರ್ಧಕವೂ, ನವಸಂಗಮಾರ್ಹವೂ, ಸುವಾಸಿತವೂ ಆದ ಚಂದನ, ಅಗುರು, ಕಸ್ತೂರಿ ಮತ್ತು ಕುಂಕುಮಗಳಿಂದಲೂ ಪರಿಪೂರ್ಣವಾಗಿದ್ದಿತು.

೧೮೧–೧೮೨. ಜಾಜಿ, ಸಂಪಿಗೆ ಮುಂತಾದ ಪುಷ್ಪರಾಶಿಗಳಿಂದಲೂ, ರತ್ನದ ತಟ್ಟೆಯಲ್ಲಿರುವ ಪಚ್ಚಕರ್ಪೂರಾದಿಗಳಿಂದ ಸುವಾಸಿತವಾದ ತಾಂಬೂಲಗಳಿಂದಲೂ, ಶ್ರೇಷ್ಠವಜ್ರಗಳಿಂದ ಖಚಿತವಾದ ಮುತ್ತಿನ ತೋರಣಗಳಿಂದಲೂ, ರತ್ನಕಲಶಗಳಿಂದಲೂ, ರತ್ನಪೀಠಗಳಿಂದಲೂ ಆ ಮಂಡಪವು ಸುಸಜ್ಜಿತವಾಗಿದ್ದಿತು.

ರತ್ನಸಿಂಹಾಸನೈರ್ಯುಕ್ತಂ ರತ್ನಚಿತ್ರೇಣ ಚಿತ್ರಿತೈಃ ।
ಕ್ಷೀರಿಕೈಶ್ಚಂದ್ರಕಾಂತೈಶ್ಚ ಸುಸಿಕ್ತಂ ಜಲಬಿಂದುಭಿಃ । ೧೮೩ ॥

ಶೀತವಾಸಿತತೋಯೇನ ಸಂಯುಕ್ತಂ ಭೋಗವಸ್ತುಭಿಃ ।
ಕೃತ್ವಾ ರತಿಗೃಹಂ ರಮ್ಯಂ ನಗರಂ ಚ ಪುನರ್ಯಯೌ ॥ ೧೮೪ ॥

ಯಾನಿ ಯೇಷಾಂ ಮಂದಿರಾಣಿ ತನ್ನಾಮಾನಿ ಲಿಲೇಖ ಸಃ ।
ಮುದಾ ಯುಕ್ತೋ ವಿಶ್ವಕರ್ಮಾ ಶಿಷ್ಯೈರ್ಯಕ್ಷಗಣೈಃ ಸಹ ॥ ೧೮೫ ॥

ನಿದ್ರೇಶಂ ನಿದ್ರಿತಂ ನತ್ವಾ ಪ್ರಯಯೌ ಸ್ವಾಲಯಂ ಮುನೇ ।
ಸರ್ವತ್ರೈವಂ ಸುಕೃತಿನಾಂ ಸಮುಸ್ಥಂ ಭಗವತ್ಕೃಪಾ ॥ ೧೮೬ ॥

ನೇಹಾಽಽಶ್ಚರ್ಯಂ ಚ ನಗರಂ ಬಭೂವೇಶೇಚ್ಛಯಾ ಭುವಿ ।
ಇತ್ಯೇವಂ ಕಥಿತಂ ಸರ್ವಂ ಹರೇಶ್ಚರಿತಮಂಗಲಂ ।

೧೮೩-೧೮೪. ರತ್ನಚಿತ್ರಗಳಿಂದ ಚಿತ್ರಿತವಾದ ರತ್ನಸಿಂಹಾಸನಗಳಿಂದಲೂ, ಜಿನುಗುತ್ತಿರುವ ಜಲಕಣಗಳಿಂದ ವ್ಯಾಪ್ತವಾದ ಚಂದ್ರಶಿಲೆಗಳಿಂದಲೂ, ಶೈತ್ಯ ಸೌರಭ್ಯವಿಶಿಷ್ಟವಾದ ನೀರಿನಿಂದ ತೋಯಿಸಲ್ಪಟ್ಟ ಭೋಗವಸ್ತುಗಳಿಂದಲೂ, ರಮ್ಯ ವಾಗಿರುವ ರತಿಗೃಹವನ್ನು ನಿರ್ಮಿಸಿ ಪುನಃ ನಗರಿಗೆ ಹಿಂತಿರುಗಿದನು.

೧೮೫-೧೮೬. ಯಾವ ಯಾವ ಮಂದಿರವು ಯಾರು ಯಾರಿಗೆ ನಿರ್ಮಿತ ವಾಗಿರುವುದೋ ಅವರವರ ಹೆಸರುಗಳನ್ನು ಆಯಾಯ ಮಂದಿರದ ಬಾಗಿಲಿನಲ್ಲಿ ಬರೆದು ಆ ವಿಶ್ವಕರ್ಮನು ಶಿಷ್ಯರೊಡನೆಯೂ, ಯಕ್ಷರ ಸಮೂಹದೊಡನೆಯೂ, ನಿದ್ರೆಮಾಡುತ್ತಿದ್ದ ನಿದ್ರಾಧಿಪತಿಯಾದ ಶ್ರೀಕೃಷ್ಣನಿಗೆ ವಂದಿಸಿ ತನ್ನ ಲೋಕಕ್ಕೆ ಹಿಂತಿರುಗಿದನು. ಈ ರೀತಿ ಪುಣ್ಯವಂತರಿಗೆ ಎಲ್ಲವೂ ಭಗವತ್ಕೃಪೆಯಿಂದ ಕೈಗೂಡುವುವು.

೧೮೭. ಈಶ್ವರೇಚ್ಛಾಮಾತ್ರದಿಂದ ಭೂಲೋಕದಲ್ಲಿ ಇಂಥ ನಗರನಿರ್ಮಾಣ ವಾದುದರಲ್ಲಿ ಆಶ್ಚರ್ಯವೇನಿಲ್ಲ. ಈ ರೀತಿ ಮಂಗಳಕರವೂ, ಪಾಪನಾಶಕವೂ, ಸುಖದಾಯಕವೂ ಆದ ಶ್ರೀಹರಿಯ ಚರಿತ್ರೆಯನ್ನು ಹೇಳಿದೆನು. ಎಲೈ ನಾರದನೇ, ಮುಂದೆ ಏನು ಕೇಳಬೇಕೆಂದು ನೀನು ಬಯಸುವೆ?

ಸುಖದಂ ಪಾತಕಹರಂ ಕಿಂ ಭೂಯಃ ಶ್ರೋತುಮಿಚ್ಛಸಿ || ೧೮೭ ||

|| ನಾರದ ಉವಾಚ ||

ಕಥಂ ಬೃಂದಾವನಂ ನಾಮ ಕಾನನಸ್ಯಾಸ್ಯ ಭಾರತೇ |
ವ್ಯುತ್ಪತ್ತಿರಸ್ಯ ಸಂಜ್ಞಾ ವಾ ತತ್ವಂ ವದ ಸುತತ್ವವಿತ್ || ೧೮೮ ||

|| ಸೂತ ಉವಾಚ ||

ನಾರದಸ್ಯ ವಚಃ ಶ್ರುತ್ವಾ ಋಷಿರ್ನಾರಾಯಣೋ ಮುದಾ |
ಪ್ರಹಸ್ಯೋವಾಚ ನಿಖಿಲಂ ತತ್ವಮೇವಂ ಪುರಾತನಂ || ೧೮೯ ||

|| ನಾರಾಯಣ ಉವಾಚ ||

ಪುರಾ ಕೇದಾರನೃಪತಿಃ ಸಪ್ತದ್ವೀಪಪತಿಃ ಸ್ವಯಂ || ೧೯೦ ||

ಆಸೀತ್ಸತ್ಯಯುಗೇ ಬ್ರಹ್ಮನ್ಸತ್ಯಧರ್ಮರತಃ ಸದಾ |
ಸ ರೇಮೇ ಸಹ ನಾರೀಭಿಃ ಪುತ್ರಪೌತ್ರಗಣೈಃ ಸದಾ || ೧೯೧ ||

---

೧೮೮. ನಾರದ :—ಎಲೈ ತತ್ವಜ್ಞಾನಿಯಾದ ಮಹರ್ಷಿಯೇ, ಭರತ ಖಂಡದಲ್ಲಿರುವ ಈ ಕಾನನಕ್ಕೆ ಬೃಂದಾವನವೆಂಬ ಹೆಸರು ಬರಲು ಕಾರಣವೇನು? ಈ ಹೆಸರು ಅನ್ವರ್ಥವಾದುದೇ ಅಥವಾ ಅಂಕಿತವಾದುದೇ? ತತ್ವವನ್ನು ತಿಳಿಸು.

೧೮೯. ಸೂತಮಹರ್ಷಿ :—ನಾರದನ ಮಾತನ್ನು ಕೇಳಿ ಸಂತಸಗೊಂಡ ನಾರಾಯಣ ಮಹರ್ಷಿಯು ನಸುನಕ್ಕು, ಪುರಾತನವಾದ ಸಮಸ್ತ ತತ್ವವನ್ನೂ ವಿವರಿಸಿದನು.

೧೯೦-೧೯೧. ನಾರಾಯಣಮಹರ್ಷಿ :—ಪೂರ್ವದಲ್ಲಿ ಕೇದಾರನೆಂಬ ರಾಜ ರ್ಷಿಯು ಸಪ್ತದ್ವೀಪಗಳಿಗೂ ಒಡೆಯನಾಗಿದ್ದನು. ಸತ್ಯಯುಗದಲ್ಲಿದ್ದ ಆ ರಾಜನು ಸದಾ ಸತ್ಯಧರ್ಮಗಳಲ್ಲಿ ನಿರತನಾಗಿದ್ದನು. ಅಲ್ಲದೆ ಅನೇಕ ಸ್ತ್ರೀಯರೊಡನೆಯೂ, ಪುತ್ರಪೌತ್ರರೊಡನೆಯೂ ಅವನು ವಿಹರಿಸಿಕೊಂಡಿದ್ದನು.

ಪುತ್ರಾನಿವ ಪ್ರಜಾಃ ಸರ್ವಾಃ ಪಾಲಯಾಮಾಸ ಧಾರ್ಮಿಕಃ ।
ಕೃತ್ವಾ ಕ್ರತುಶತಂ ರಾಜಾ ಲೇಭೇ ನೇಂದ್ರತ್ವಮೀಪ್ಸಿತಂ ॥ ೧೯೨ ॥

ಕೃತ್ವಾ ನಾನಾವಿಧಂ ಪುಣ್ಯಂ ಫಲಾಕಾಂಕ್ಷೀ ನ ಚ ಸ್ವಯಂ ।
ನಿತ್ಯಂ ನೈಮಿತ್ತಿಕಂ ಸರ್ವಂ ಶ್ರೀಕೃಷ್ಣಪ್ರೀತಿಪೂರ್ವಕಂ ॥ ೧೯೩ ॥

ಕೇದಾರತುಲ್ಯೋ ರಾಜೇಂದ್ರೋ ನ ಭೂತೋ ಭವಿತಾ ಪುನಃ ।
ಪುತ್ರೇಷು ರಾಜ್ಯಂ ಸನ್ಯಸ್ಯ ಪ್ರಿಯಾಂ ತ್ರೈಲೋಕ್ಯಮೋಹಿನೀಂ ॥ ೧೯೪ ॥

ಜೈಗೀಷವ್ಯೋಪದೇಶೇನ ಜಗಾಮ ತಪಸೇ ವನಂ ।
ಹರೇರೈಕಾಂತಿಕೋ ಭಕ್ತೋ ಧ್ಯಾಯತೋ ಸಂತತಂ ಹರಿಂ ॥ ೧೯೫ ॥

ಶಶ್ವತ್ಸುದರ್ಶನಂ ಚಕ್ರಮಾಸ್ತೆ ಯತ್ಸನ್ನಿಧೌ ಮುನೇ ।
ಚಿರಂ ತಪ್ತ್ವಾ ಮುನಿಶ್ರೇಷ್ಠೋ ಗೋಲೋಕಂ ಚ ಜಗಾಮ ಸಃ ॥ ೧೯೬ ॥

---

೧೯೨. ಧರ್ಮಿಷ್ಠನಾದ ಆ ರಾಜನು ಪ್ರಜೆಗಳನ್ನೆಲ್ಲ ತನ್ನ ಮಕ್ಕಳಂತೆ ಪರಿಪಾಲಿಸಿಕೊಂಡಿದ್ದನು. ಅವನು ನೂರು ಯಾಗಗಳನ್ನು ಮಾಡಿದರೂ, ಲಬ್ಧವಾದ ಇಂದ್ರಪದವಿಯನ್ನು ಬಯಸಲಿಲ್ಲ.

೧೯೩. ಅಲ್ಲದೆ, ನಿತ್ಯನೈಮಿತ್ತಿಕವಾದ ನಾನಾವಿಧ ಪುಣ್ಯಕರ್ಮಗಳನ್ನು ಫಲಾಪೇಕ್ಷಾರಹಿತನಾಗಿ ಶ್ರೀಕೃಷ್ಣನ ಪ್ರೀತಿಗಾಗಿಯೇ ಆಚರಿಸಿದನು.

೧೯೪–೧೯೫. ಈ ರೀತಿ ಪ್ರಖ್ಯಾತಿಗೊಂಡ ಕೇದಾರನಿಗೆ ಸಮಾನನಾದ ರಾಜರ್ಷಿಯು ಹಿಂದೆ ಯಾವಾಗಲೂ ಇರಲಿಲ್ಲ; ಮುಂದೆಯೂ ಇರಲಾರರು. ಆ ರಾಜನು ತ್ರಿಲೋಕಮೋಹಕಳಾದ ತನ್ನ ಪತ್ನಿಯನ್ನೂ ಮತ್ತು ರಾಜ್ಯವನ್ನೂ ಪುತ್ರನಲ್ಲಿಟ್ಟು, ಜೈಗೀಷವ್ಯಮುನಿಯ ಉಪದೇಶದಿಂದ ತಪಸ್ಸುಮಾಡಲು ಕಾಡಿಗೆ ಹೋಗಿ, ಅನನ್ಯಭಕ್ತಿಯಿಂದ ಸರ್ವದಾ ಶ್ರೀಹರಿಯನ್ನು ಭಜಿಸತೊಡಗಿದನು.

೧೯೬. ಎಲೈ ನಾರದಮುನಿಯೇ, ಯಾರ ಸನ್ನಿಧಿಯಲ್ಲಿ ಸುದರ್ಶನವೆಂಬ ಚಕ್ರವು ಸರ್ವದಾ ನೆಲೆಸಿರುವುದೋ, ಅಂಥ ಶ್ರೀಹರಿಯನ್ನು ಚಿರಕಾಲ ಭಜಿಸಿ, ಆ ಮುನಿಶ್ರೇಷ್ಠನು ಗೋಲೋಕಕ್ಕೆ ಹೋಗಿ ಸೇರಿದನು.

ಕೇದಾರಂ ನಾಮ ತೀರ್ಥಂ ಚ ತನ್ನಾಮ್ನಾ ಚ ಬಭೂವ ಹ ।
ತತ್ರಾದ್ಯಾಪಿ ಮೃತಃ ಪ್ರಾಣೀ ಸದ್ಯೋ ಮುಕ್ತೋ ಭವೇದ್ಧ್ರುವಂ ॥ ೧೯೭ ॥

ಕಮಲಾಂಶಾ ತಸ್ಯ ಕನ್ಯಾ ನಾಮ್ನಾ ವೃಂದಾ ತಪಸ್ವಿನೀ ।
ನ ವವ್ರೇ ಸಾ ವರಂ ಕಂಚಿದ್ಯೋಗಶಾಸ್ತ್ರವಿಶಾರದಾ ॥ ೧೯೮ ॥

ದತ್ತೋ ದೂರ್ವಾಸಸಾ ತಸ್ಯೈ ಹರೇರ್ಮಂತ್ರಃ ಸುದುರ್ಲಭಃ ।
ಸಾ ವಿರಕ್ತಾ ಗೃಹಂ ತ್ಯಕ್ತ್ವಾ ಜಗಾಮ ತಪಸೇ ವನಂ ॥ ೧೯೯ ॥

ಷಷ್ಟಿವರ್ಷಸಹಸ್ರಾಣಿ ತಪಸ್ತೇಪೇ ಸುನಿರ್ಜನೇ ।
ಆವಿರ್ಬಭೂವ ಶ್ರೀಕೃಷ್ಣಸ್ತತ್ಪುರೋ ಭಕ್ತವತ್ಸಲಃ ॥ ೨೦೦ ॥

---

೧೯೭. ಆ ರಾಜರ್ಷಿಯ ಹೆಸರಿನಲ್ಲಿ ಪ್ರಖ್ಯಾತವಾದ ಕೇದಾರವೆಂಬ ಪುಣ್ಯ ತೀರ್ಥವು ಬದರಿಕಾಶ್ರಮದ ಸಮೀಪದಲ್ಲಿದೆ. ಈಗಲೂ ಅಲ್ಲಿ ಮೃತರಾದ ಜೀವಿಗಳು ಕೂಡಲೇ ಮುಕ್ತರಾಗುವುದರಲ್ಲಿ ಸಂದೇಹವಿಲ್ಲ.

೧೯೮. ಆ ರಾಜರ್ಷಿಯ ಮಗಳೇ ಕಮಲಾಂಶಸಂಭೂತಳೂ, ತಪೋನಿರತಳೂ ಆದ 'ವೃಂದಾ' ಎಂಬುವಳು. ಯೋಗಶಾಸ್ತ್ರನಿಷ್ಣಾತಳಾದ ಆಕೆಯು ಶ್ರೀಹರಿಯನ್ನು ಕುರಿತು ತಪಸ್ಸು ಮಾಡಿದರೂ ಯಾವ ವರವನ್ನೂ ಬೇಡಲಿಲ್ಲ.

೧೯೯. ದೂರ್ವಾಸಮಹರ್ಷಿಯು ಆ ಕನ್ಯೆಗೆ ಸರ್ವಸುಲಭವಲ್ಲದ ಶ್ರೀಹರಿಯ ಮಂತ್ರವನ್ನುಪದೇಶಿಸಿದನು. ಆ ಮಂತ್ರದ ಮಹಿಮೆಯಿಂದ ಆ ಕನ್ಯೆಯು ವಿರಕ್ತಳಾಗಿ ಮನೆಯನ್ನು ಬಿಟ್ಟು ಕಾಡಿಗೆ ಹೋದಳು.

೨೦೦. ನಿರ್ಜನವಾದ ಆ ಕಾಡಿನಲ್ಲಿ ಅರವತ್ತುಸಾವಿರ ವರ್ಷಗಳು ತಪಸ್ಸು ಮಾಡಿದಳು. ಆಗ ಭಕ್ತವತ್ಸಲನಾದ ಶ್ರೀಕೃಷ್ಣನು ಪ್ರತ್ಯಕ್ಷವಾಗಿ ಅವಳ ಮುಂದೆ ಕಾಣಿಸಿಕೊಂಡನು.

ಪ್ರಸನ್ನವದನಃ ಶ್ರೀಮಾನ್ವರಂ ವೃಣ್ವಿತ್ಯುವಾಚ ಸಃ ।
ದೃಷ್ಟ್ವಾ ಸಾ ರಾಧಿಕಾ ಕಾಂತಂ ಶಾಂತಂ ಸುಂದರವಿಗ್ರಹಂ ॥ ೨೦೧ ॥

ಮೂರ್ಛಾಂ ಸಂಪ್ರಾಪ ಸಾ ಸದ್ಯಃ ಕಾಮಬಾಣಪ್ರಪೀಡಿತಾ ।
ಸಾ ಚ ಶೀಘ್ರಂ ವರಂ ವವ್ರೇ ಪತಿಸ್ತ್ವಂ ಮೇ ಭವೇತಿ ಚ ॥ ೨೦೨ ॥

ಓಮಿತ್ಯುಕ್ತ್ವಾ ಚ ರಹಸಿ ಚಿರಂ ರೇಮೇ ತಯಾ ಸಹ ।
ಸಾ ಜಗಾಮ ಚ ಗೋಲೋಕಂ ಕೃಷ್ಣೇನ ಸಹ ಕೌತುಕಾತ್ ॥ ೨೦೩ ॥

ರಾಧಾ ಸಮಾ ಸಾ ಸೌಭಾಗ್ಯಾದ್ಗೋಪೀಶ್ರೇಷ್ಠಾ ಬಭೂವ ಹ ।
ವೃಂದಾ ಯತ್ರ ತಪಸ್ತೇಪೇ ತತ್ತು ವೃಂದಾವನಂ ಸ್ಮೃತಂ ॥ ೨೦೪ ॥

ವೃಂದಯಾಽತ್ರ ಕೃತಾ ಕ್ರೀಡಾ ತೇನ ವಾ ಮುನಿಪುಂಗವ ।
ಅಥಾನ್ಯಂ ಚೇತಿಹಾಸಂ ಚ ಶೃಣುಷ್ವ ವತ್ಸ ಪುಣ್ಯದಂ ॥ ೨೦೫ ॥

೨೦೧–೨೦೨. ಪ್ರಸನ್ನಮುಖನಾದ ಶ್ರೀಕೃಷ್ಣನು ವರವನ್ನು ಬೇಡೆನಲು, ರಾಧಾಪತಿಯೂ, ಪ್ರಶಾಂತನೂ, ಮನೋಹರನೂ ಆದ ಶ್ರೀಕೃಷ್ಣನನ್ನು ನೋಡಿ ಕಾಮಬಾಣಪೀಡಿತಳಾದ ಆ ಕನ್ಯೆಯು ಕೂಡಲೇ ಮೂರ್ಛೆಗೊಂಡಳು. ಸ್ವಲ್ಪ ಹೊತ್ತಿನಮೇಲೆ ಚೇತರಿಸಿಕೊಂಡೆದ್ದು, ಶ್ರೀಕೃಷ್ಣನನ್ನು ಕುರಿತು 'ನೀನೇ ನನಗೆ ಪತಿಯಾಗು. ಇದೇ ನಾನು ಬೇಡುವ ವರ' ಎಂದಳು.

೨೦೩. ಶ್ರೀಕೃಷ್ಣನು ಅದಕ್ಕೆ ಒಪ್ಪಿಗೆಯಿತ್ತು, ಅವಳೊಡನೆ ಏಕಾಂತದಲ್ಲಿ ಬಹಳಕಾಲ ಕ್ರೀಡಿಸಿದನು. ಅನಂತರ ಕುತೂಹಲಭರಿತಳಾಗಿ ಶ್ರೀಕೃಷ್ಣನೊಡನೆಯೇ ಗೋಲೋಕಕ್ಕೆ ತೆರಳಿದಳು.

೨೦೪. ಅಲ್ಲಿ ರಾಧಾದೇವಿಗೆ ಸದೃಶವಾದ ಸೌಭಾಗ್ಯವನ್ನು ಪಡೆದು, ಗೋಪಿಯರಲ್ಲಿ ಶ್ರೇಷ್ಠಳೆನಿಸಿದಳು. ಈ ರೀತಿ ಆ ವೃಂದಾದೇವಿಯು ತಪಸ್ಸು ಮಾಡಿದ ಸ್ಥಳವೇ ವೃಂದಾವನವೆನಿಸಿಕೊಂಡಿತು.

೨೦೫. ಎಲೈ ಮುನಿಶ್ರೇಷ್ಠನೇ, ವೃಂದಾದೇವಿಯು ಶ್ರೀಕೃಷ್ಣನೊಡನೆ ಅಲ್ಲಿ ರತಿಕ್ರೀಡೆಯಾಡಿದುದರಿಂದ ಆ ಸ್ಥಳವು ವೃಂದಾವನವೆನಿಸಿತು. ಎಲೈ ವತ್ಸನೇ, ಈಗ ಪುಣ್ಯಕರವಾದ ಮತ್ತೊಂದು ಇತಿಹಾಸವನ್ನು ಹೇಳುವೆನು, ಕೇಳುವವನಾಗು.

ಯೇನ ಬೃಂದಾವನಂ ನಾಮ ನಿಬೋಧ ಕಥ ತೇಯಾಮಿ ।
ಕುಶಧ್ವಜಸ್ಯ ಕನ್ಯೇ ದ್ವೇ ಧರ್ಮಶಾಸ್ತ್ರವಿಶಾರದೇ ॥ ೨೦೬ ॥

ತುಲಸೀ ವೇದವತ್ಯೌ ಚ ವಿರಕ್ತೇ ಭವಕರ್ಮಣಿ ।
ತಪಸ್ತಪ್ತ್ವಾ ವೇದವತೀ ಪ್ರಾಪ ನಾರಾಯಣಂ ಪರಂ ॥ ೨೦೭ ॥

ಸೀತಾ ಜನಕಕನ್ಯಾ ಸಾ ಸರ್ವತ್ರ ಪರಿಕೀರ್ತಿತಾ ।
ತುಲಸೀ ಚ ತಪಸ್ತಪ್ತ್ವಾ ವಾಂಛಾಂ ಕೃತ್ವಾ ಹರಿಂ ಪ್ರತಿ ॥ ೨೦೮ ॥

ದೈವಾದ್ದುರ್ವಾಸಸಃ ಶಾಪಾತ್ಪ್ರಾಪ್ಯ ಶಂಖಾಸುರಂ ಪ್ರತಿ ।
ಪಶ್ಚಾತ್ಸಂಪ್ರಾಪ್ಯ ಕಮಲಾಕಾಂತಂ ಕಾಂತಂ ಮನೋಹರಂ ॥ ೨೦೯ ॥

ಸಾ ಚೈವ ಹರಿಶಾಪೇನ ವೃಕ್ಷರೂಪಾ ಸುರೇಶ್ವರೀ ।
ತಸ್ಯಾಃ ಶಾಪೇನ ಚ ಹರಿಃ ಶಾಲಗ್ರಾಮೋ ಬಭೂವ ಹ ॥ ೨೧೦ ॥

೨೦೬–೨೦೭. ಈ ವನಕ್ಕೆ ವೃಂದಾವನವೆಂದು ಹೆಸರುಬರಲು ಬೇರೊಂದು ಕಾರಣವನ್ನು ಹೇಳುವೆನು ಕೇಳು. ಸಂಸಾರದಲ್ಲಿ ವಿರಕ್ತರೂ, ಧರ್ಮಶಾಸ್ತ್ರ ವಿಶಾರದರೂ, ಆದ ತುಳಸಿ ಮತ್ತು ವೇದವತಿ ಎಂಬ ಇಬ್ಬರು ಕನ್ಯೆಯರು ಕುಶಧ್ವಜನೆಂಬ ರಾಜನಿಗೆ ಮಕ್ಕಳಾಗಿ ಜನಿಸಿದರು. ಅವರಲ್ಲಿ ವೇದವತಿಯು ತಪಸ್ಸುಮಾಡಿ ಸರ್ವಶ್ರೇಷ್ಠನಾದ ನಾರಾಯಣನನ್ನು ಪಡೆದಳು.

೨೦೮. ಅವಳು ಜನಕರಾಜನ ಪುತ್ರಿಯಾದ ಸೀತೆಯಾಗಿ ತನ್ನ ಪಾತಿವ್ರತ್ಯ ದಿಂದ ಎಲ್ಲೆಲ್ಲೂ ಪ್ರಖ್ಯಾತಳಾದಳು. ತುಳಸೀದೇವಿಯೂ ಕೂಡ ಶ್ರೀಹರಿಯಲ್ಲಿ ಅತ್ಯಾಸಕ್ತಳಾಗಿ ಅವನನ್ನು ಕುರಿತು ತಪಸ್ಸುಮಾಡಿದಳು.

೨೦೯. ಆದರೆ ವಿಧಿವಶದಿಂದ ದೂರ್ವಾಸರ ಶಾಪಕ್ಕೊಳಗಾಗಿ ಶಂಖಚೂಡ ನೆಂಬ ಅಸುರನನ್ನು ಮದುವೆಯಾದಳು. ಶಾಪವಿಮೋಚನೆಯಾದನಂತರ ಸುಂದರನೂ, ಮನೋಹರನೂ ಆದ ಶ್ರೀಕೃಷ್ಣನನ್ನು ಪಡೆದಳು.

೨೧೦. ಸುರೇಶ್ವರಿಯಾದ ಆ ತುಳಸಿಯು ಶ್ರೀಹರಿಯ ಶಾಪದಿಂದ ವೃಕ್ಷಸ್ವರೂಪಳಾದಳು. ಶ್ರೀಹರಿಯೂ ಕೂಡ ಆ ತುಳಸಿಯ ಶಾಪದಿಂದ ಸಾಲಿಗ್ರಾಮ ಶಿಲೆಯಾದನು.

ತಥಾ ತಸ್ಥೌ ಚ ಸತತಂ ಶಿಲಾವಕ್ಷಸಿ ಸುಂದರೀ ।
ವಿಸ್ತೀರ್ಣಂ ಕಥಿತಂ ಸರ್ವಂ ತುಲಸೀಚರಿತಂ ಚ ತೇ ॥ ೨೧೧ ॥

ತಥಾಪಿ ಚ ಪ್ರಸಂಗೇನ ಕಿಂಚಿದುಕ್ತಂ ಮುನೇ ಪುನಃ ।
ತಸ್ಯಾಶ್ಚ ತಪಸಃ ಸ್ಥಾನಂ ತದಿದಂ ಚ ತಪೋಧನ ।
ತೇನ ಬೃಂದಾವನಂ ನಾಮ ಪ್ರವದಂತಿ ಮನೀಷಿಣಃ ॥ ೨೧೨ ॥

ಅಥವಾ ತೇ ಪ್ರವಕ್ಷ್ಯಾಮಿ ಪರಂ ಹೇತ್ವಂತರಂ ಶೃಣು ।
ಯೇನ ಬೃಂದಾವನಂ ನಾಮ ಪುಣ್ಯಕ್ಷೇತ್ರಸ್ಯ ಭಾರತೇ ॥ ೨೧೩ ॥

ರಾಧಾಷೋಡಶನಾಮ್ನಾಂ ಚ ವೃಂದಾ ನಾಮ ಶ್ರುತೌ ಶ್ರುತಂ ।
ತಸ್ಯಾಃ ಕ್ರೀಡಾವನಂ ರಮ್ಯಂ ತೇನ ಬೃಂದಾವನಂ ಸ್ಮೃತಂ ॥ ೨೧೪ ॥

---

೨೧೧. ಸುಂದರಿಯಾದ ಆ ತುಳಸಿಯು ವೃಕ್ಷಸ್ವರೂಪಳಾದರೂ ಶಿಲಾರೂಪನಾದ ಶ್ರೀಹರಿಯ ವಕ್ಷಃಸ್ಥಲವನ್ನು ಸರ್ವದಾ ಆಶ್ರಯಿಸಲು ಬಯಸುವಳು. ಈ ರೀತಿ ವಿಸ್ತಾರವಾದ ತುಳಸಿಯ ಚರಿತ್ರೆಯನ್ನು ಪ್ರಕೃತಿಖಂಡದಲ್ಲಿ ತಿಳಿಸಿದೆನು. ಈಗ ಪುನಃ ಪ್ರಸಂಗವಶದಿಂದ ಸಂಗ್ರಹವಾಗಿ ತಿಳಿಸಿದೆನು.

೨೧೨. ಎಲೈ ತಪೋಧನನೇ, ಆ ತುಳಸೀದೇವಿಯು ಈ ವನದಲ್ಲೇ ತಪಸ್ಸು ಮಾಡಿದಳು. ಆದ ಕಾರಣದಿಂದಲೂ ಈ ವನಕ್ಕೆ ಬೃಂದಾವನವೆಂದು ಹೆಸರಾಯಿತೆಂದು ಬಲ್ಲವರು ಹೇಳುವರು

೨೧೩. ಅಲ್ಲದೆ ಈ ಪುಣ್ಯವನಕ್ಕೆ ಬೃಂದಾವನವೆಂಬ ಹೆಸರು ಭರತ ಖಂಡದಲ್ಲೆಲ್ಲ ಪ್ರಖ್ಯಾತವಾಗಲು ಬೇರೊಂದು ಕಾರಣವನ್ನೂ ಹೇಳುವೆನು. ಸಾವಧಾನದಿಂದ ಕೇಳು.

೨೧೪. ರಾಧಾದೇವಿಯ ಶ್ರುತಿಪ್ರಸಿದ್ಧವಾದ ಹದಿನಾರು ಹೆಸರುಗಳಲ್ಲಿ ವೃಂದಾ ಎಂಬುದೊಂದು.ಆ ವೃಂದೆಯ ಕ್ರೀಡಾವನವಾದುದರಿಂದ ಈ ವನವನ್ನು ವೃಂದಾವನವೆಂಬುವರು.

ಗೋಲೋಕೇ ಪ್ರೀತಯೇ ತಸ್ಯಾಃ ಕೃಷ್ಣೇನ ನಿರ್ಮಿತಂ ಪುರಾ ।
ಕ್ರೀಡಾರ್ಥಂ ಭುವಿ ತನ್ನಾಮ್ನಾ ವನಂ ಬೃಂದಾವನಂ ಸ್ಮೃತಂ ॥ ೨೧೫ ॥

॥ ನಾರದ ಉವಾಚ ॥

ಕಾನಿ ಷೋಡಶನಾಮಾನಿ ರಾಧಿಕಾಯಾ ಜಗದ್ಗುರೋ ।
ತಾನಿ ಮೇ ವದ ಶಿಷ್ಯಾಯ ಶ್ರೋತುಂ ಕೌತೂಹಲಂ ಮಮ ॥ ೨೧೬ ॥

ಶ್ರುತಂ ನಾಮ್ನಾಂ ಸಹಸ್ರಂ ಚ ಸಾಮವೇದೇ ನಿರೂಪಿತಂ ।
ತಥಾಪಿ ಶ್ರೋತುಮಿಚ್ಛಾಮಿ ತ್ವತ್ತೋ ನಾಮಾನಿ ಷೋಡಶ ॥ ೨೧೭ ॥

ಅಭ್ಯಂತರಾಣಿ ತೇಷಾಂ ವಾ ತದನ್ಯಾನ್ಯೇವ ಮೇ ಪ್ರಭೋ ।
ಅಹೋ ಪುಣ್ಯಸ್ವರೂಪಾಣಿ ಭಕ್ತಾನಾಂ ವಾಂಛಿತಾನಿ ಚ ॥ ೨೧೮ ॥

---

೨೧೫. ಪೂರ್ವದಲ್ಲಿ ಶ್ರೀಕೃಷ್ಣನು ವೃಂದಾದೇವಿಯ ಪ್ರೀತಿಗೋಸ್ಕರ ಗೋಲೋಕದಲ್ಲಿ ಸುಂದರವನವನ್ನು ನಿರ್ಮಿಸಿದನು ಭೂಲೋಕದಲ್ಲೂ ಕ್ರೀಡಾರ್ಥವಾಗಿ ನಿರ್ಮಿತವಾದ ಈ ವನಕ್ಕೆ ವೃಂದಾವನವೆಂಬ ಹೆಸರು ಪ್ರಸಿದ್ಧವಾಯಿತು.

೨೧೬. ನಾರದ; —ಎಲೈ ಜಗದ್ಗುರುವೇ, ರಾಧಾದೇವಿಯ ಹದಿನಾರು ದಿವ್ಯ ನಾಮಗಳಾವುವು? ಅವುಗಳನ್ನು ಶಿಷ್ಯನಾದ ನನಗೆ ಹೇಳು. ಅವನ್ನು ಕೇಳಲು ನನಗೆ ಬಹಳ ಕುತೂಹಲವಾಗಿದೆ.

೨೧೭. ಸಾಮವೇದದಲ್ಲಿ ನಿರೂಪಿತವಾದ ದೇವಿಯ ಸಹಸ್ರನಾಮಗಳನ್ನು ಕೇಳಿದ್ದೇನೆ. ಈಗ ನಿನ್ನಿಂದ ಹದಿನಾರು ದಿವ್ಯನಾಮಗಳನ್ನು ಕೇಳಬೇಕೆಂದು ಬಯಸುತ್ತಿದ್ದೇನೆ.

೨೧೮. ಆ ಹದಿನಾರು ಹೆಸರುಗಳು ಆ ಸಹಸ್ರನಾಮಗಳಲ್ಲಿಯೇ ಅಡಕವಾಗಿವೆಯೇ? ಅಥವಾ ಅವುಗಳೇ ಬೇರೆಯೇ? ಭಕ್ತರ ಇಷ್ಟಾರ್ಥವು ಪುಣ್ಯಫಲಪ್ರದಗಳಾಗಿರುವುವಲ್ಲವೇ?

ನಾಮಾನಿ ತೇಷಾಂ ವ್ಯುತ್ಪತ್ತಿಂ ಸರ್ವೇಷಾಂ ದುರ್ಲಭಾನಿ ಚ ।
ಪಾವನಾನಿ ಜಗನ್ಮಾತುಃ ಜಗತಾಮಪಿ ಕಾರಣಂ || ೨೦೯ ||

|| ಶ್ರೀ ನಾರಾಯಣ ಉವಾಚ ||

ರಾಧಾ ರಾಸೇಶ್ವರೀ ರಾಸವಾಸಿನೀ ರಸಿಕೇಶ್ವರೀ ।
ಕೃಷ್ಣಪ್ರಾಣಾಧಿಕಾ ಕೃಷ್ಣಪ್ರಿಯಾ ಕೃಷ್ಣಸ್ವರೂಪಿಣೀ || ೨೧೦ ||

ಕೃಷ್ಣವಾಮಾಂಗಸಂಭೂತಾ ಪರಮಾನಂದರೂಪಿಣೀ ।
ಕೃಷ್ಣಾ ವೃಂದಾವನೀ ವೃಂದಾ ವೃಂದಾವನವಿನೋದಿನೀ || ೨೧೧ ||

ಚಂದ್ರಾವತೀ ಚಂದ್ರಕಾಂತಾ ಶತಚಂದ್ರನಿಭಾನನಾ ।
ನಾಮಾನ್ಯೇತಾನಿ ಸಾರಾಣಿ ತೇಷಾಮಭ್ಯಂತರಾಣಿ ಚ || ೨೧೨ ||

ರಾಧೇತ್ಯೇವಂ ಚ ಸಂಸಿದ್ಧಾ ರಾಕಾರೋ ದಾನವಾಚಕಃ ।
ಸ್ವಯಂ ನಿರ್ವಾಣದಾತ್ರೀ ಯಾ ಸಾ ರಾಧಾ ಪರಿಕೀರ್ತಿತಾ || ೨೧೩ ||

---

೨೦೯. ಜಗತ್ಸೃಷ್ಟಿಗೇ ಕಾರಣಳಾದ ಆ ಜಗನ್ಮಾತೆಯ ಪಾವನತರವಾದ ದಿವ್ಯನಾಮಗಳನ್ನೂ ಅವುಗಳ ಅನ್ವರ್ಥತೆಯನ್ನೂ ನನಗೆ ವಿವರಿಸು. ಆ ದಿವ್ಯ ನಾಮಗಳು ಎಲ್ಲರಿಗೂ ದುರ್ಲಭವಾದವುಗಳು.

೨೧೦–೨೧೨. ಶ್ರೀನಾರಾಯಣ :— ಎಲೈ ನಾರದಮುನಿಯೇ "ರಾಧೆ, ರಾಸೇಶ್ವರಿ, ರಾಸವಾಸಿನಿ, ರಸಿಕೇಶ್ವರಿ, ಕೃಷ್ಣಪ್ರಾಣಾಧಿಕೆ, ಕೃಷ್ಣಪ್ರಿಯೆ, ಕೃಷ್ಣಸ್ವರೂಪಿಣಿ, ಕೃಷ್ಣವಾಮಾಂಗಸಂಭೂತೆ, ಪರಮಾನಂದರೂಪಿಣಿ, ಕೃಷ್ಣೆ, ವೃಂದಾವನಿ, ವೃಂದೆ, ವೃಂದಾವನವಿನೋದಿನಿ, ಚಂದ್ರಾವತಿ, ಚಂದ್ರಕಾಂತೆ, ಶತಚಂದ್ರನಿಭಾನನೆ" ಸಾರತರವಾದ ಈ ಹದಿನಾರು ದಿವ್ಯನಾಮಗಳು ಆ ಸಹಸ್ರನಾಮಗಳಲ್ಲಿಯೇ ಅಡಕವಾಗಿವೆ.

೨೧೩. 'ರಾ' ಧಾತುವು ದಾನಾರ್ಥದಲ್ಲಿಯೂ, 'ಧಾ' ಧಾತುವು ಧಾರಣಾರ್ಥದಲ್ಲಿಯೂ ಪ್ರಸಿದ್ಧವಾಗಿರುವುದರಿಂದ ದಾನಧಾರಣೆಗಳಲ್ಲಿ ಸಮರ್ಥಳಾಗಿ ಎಲ್ಲರಿಗೂ ಸುಖಪ್ರದಳಾಗಿರುವವಳೇ 'ರಾಧೆ' ಎಂದು ಪ್ರಖ್ಯಾತಳಾಗಿರುವಳು.

ರಾಸೇಶ್ವರಸ್ಯ ಪತ್ನೀಯಂ ತೇನ ರಾಸೇಶ್ವರೀ ಸ್ಮೃತಾ ।
ರಾಸೇ ಚ ವಾಸೋ ಯಸ್ಯಾಶ್ಚ ತೇನ ಸಾ ರಾಸವಾಸಿನೀ ॥ ೨೨೪ ॥

ಸರ್ವಾಸಾಂ ರಸಿಕಾನಾಂ ಚ ದೇವೀನಾಮೀಶ್ವರೀ ಪರಾ ।
ಪ್ರವದಂತಿ ಪುರಾ ಸಂತಸ್ತೇನ ತಾಂ ರಸಿಕೇಶ್ವರೀಂ ॥ ೨೨೫ ॥

ಪ್ರಾಣಾಧಿಕಾ ಪ್ರೇಯಸೀ ಸಾ ಕೃಷ್ಣಸ್ಯ ಪರಮಾತ್ಮನಃ ।
ಕೃಷ್ಣಪ್ರಾಣಾಧಿಕಾ ಸಾ ಚ ಕೃಷ್ಣೇನ ಪರಿಕೀರ್ತಿತಾ ॥ ೨೨೬ ॥

ಕೃಷ್ಣಸ್ಯಾತಿಪ್ರಿಯಾ ಕಾಂತಾ ಕೃಷ್ಣೋ ವಾಽಸ್ಯಾಃ ಪ್ರಿಯಃ ಸದಾ ।
ಸರ್ವೈರ್ದೇವಗಣೈರುಕ್ತಾ ತೇನ ಕೃಷ್ಣಪ್ರಿಯಾ ಸ್ಮೃತಾ ॥ ೨೨೭ ॥

ಕೃಷ್ಣರೂಪಂ ಸನ್ನಿಧಾತುಂ ಯಾ ಶಕ್ತಾ ಚಾವಲೀಲಯಾ ।
ಸರ್ವಾಂಶೈಃ ಕೃಷ್ಣಸದೃಶೀ ತೇನ ಕೃಷ್ಣಸ್ವರೂಪಿಣೀ ॥ ೨೨೮ ॥

---

೨೨೪. ರಾಸೇಶ್ವರನ ಪತ್ನಿಯಾದುದರಿಂದ 'ರಾಸೇಶ್ವರಿ' ಎಂದು ಹೆಸರಾಂತಳು. ರಾಸಮಂಡಲದಲ್ಲಿ ವಾಸಮಾಡುವುದರಿಂದ ಆಕೆಯು 'ರಾಸವಾಸಿನಿ' ಎನಿಸಿಕೊಂಡಳು

೨೨೫. ರಸಜ್ಞರಾದ ಸಕಲ ದೇವಿಯರಿಗೂ ಪರಮೇಶ್ವರಿಯಾದುದರಿಂದ ಪುರಾವಿದರು ಆಕೆಯನ್ನು 'ರಸಿಕೇಶ್ವರಿ' ಎಂದು ಕರೆಯುವರು.

೨೨೬. ಆ ದೇವಿಯು ಶ್ರೀಕೃಷ್ಣಪರಮಾತ್ಮನಿಗೆ ಪ್ರಾಣಕ್ಕಿಂತಲೂ ಹೆಚ್ಚು ಪ್ರಿಯಳಾದುದರಿಂದ ಶ್ರೀಕೃಷ್ಣನು ಆಕೆಯನ್ನು 'ಕೃಷ್ಣಪ್ರಾಣಾಧಿಕ'ಳೆಂದು ಕರೆದನು.

೨೨೭. ಶ್ರೀಕೃಷ್ಣನಿಗೆ ಅತ್ಯಂತ ಪ್ರಿಯತಮಳಾದ ಕಾಂತೆಯೆಂದೂ, ಶ್ರೀಕೃಷ್ಣನು ರಾಧೆಗೆ ಅತ್ಯಂತ ಪ್ರಿಯತಮನೆಂದೂ, ಸಕಲ ದೇವತೆಗಳೂ ಹೇಳುವುದರಿಂದ ಆ ದೇವಿಯನ್ನು 'ಕೃಷ್ಣಪ್ರಿಯ' ಎನ್ನುವರು.

೨೨೮. ಯಾವದೇವಿಯು ಲೀಲಾಮಾತ್ರದಿಂದ ಶ್ರೀಕೃಷ್ಣನ ದಿವ್ಯಸ್ವರೂಪವನ್ನು ಸನ್ನಿಧಾನ ಮಾಡಿಕೊಳ್ಳಬಲ್ಲಳೋ, ಯಾರು ಸಕಲಾಂಶಗಳಿಂದ ಶ್ರೀಕೃಷ್ಣನಿಗೆ ಸಮಾನಳಾಗಿರುವಳೋ ಆ ದೇವಿಯನ್ನು 'ಕೃಷ್ಣಸ್ವರೂಪಿಣಿ' ಎನ್ನುವರು.

ವಾಮಾಂಗಾರ್ಧೇನ ಕೃಷ್ಣಸ್ಯ ಯಾ ಸಂಭೂತಾ ಪರಾ ಸತೀ ।
ಕೃಷ್ಣವಾಮಾಂಗಸಂಭೂತಾ ತೇನ ಕೃಷ್ಣೇನ ಕೀರ್ತಿತಾ ॥ ೨೨೯ ॥

ಪರಮಾನಂದರಾಶಿಶ್ಚ ಸ್ವಯಂ ಮೂರ್ತಿಮತೀ ಸತೀ ।
ಶ್ರುತಿಭಿಃ ಕೀರ್ತಿತಾ ತೇನ ಪರಮಾನಂದರೂಪಿಣೀ ॥ ೨೩೦ ॥

ಕೃಷಿರ್ಮೋಕ್ಷಾರ್ಥವಚನೋ ನ ಏವೋತ್ಕೃಷ್ಟವಾಚಕಃ ।
ಆಕಾರೋ ದಾತೃವಚನಸ್ತೇನ ಕೃಷ್ಣಾ ಪ್ರಕೀರ್ತಿತಾ ॥ ೨೩೧ ॥

ಅಸ್ತಿ ಬೃಂದಾವನಂ ಯಸ್ಯಾಸ್ತೇನ ಬೃಂದಾವನೀ ಸ್ಮೃತಾ ।
ವೃಂದಾವನಸ್ಯಾಧಿದೈವೀ ತೇನ ವಾಽಥ ಪ್ರಕೀರ್ತಿತಾ ॥ ೨೩೨ ॥

ಸಂಘಃ ಸಖೀನಾಂ ವೃಂದಃ ಸ್ಯಾದಕಾರೋಽಪ್ಯಸ್ತಿವಾಚಕಃ ।
ಸಖೀವೃಂದೋಽಸ್ತಿ ಯಸ್ಯಾಶ್ಚ ಸಾ ವೃಂದಾ ಪರಿಕೀರ್ತಿತಾ ॥ ೨೩೩ ॥

---

೨೨೯. ಪರಮ ಪತಿವ್ರತೆಯಾದ ಯಾವ ದೇವಿಯು ಶ್ರೀಕೃಷ್ಣನ ವಾಮ ಭಾಗದಿಂದ ಅವತರಿಸಿದಳೋ ಆ ದೇವಿಯನ್ನು 'ಕೃಷ್ಣವಾಮಾಂಗಸಂಭೂತ'ಳೆಂದು ಶ್ರೀಕೃಷ್ಣನು ಕರೆದನು

೨೩೦. ಮೂರ್ತಿವೆತ್ತಿರುವ ಪರಮಾನಂದ ರಾಶಿಯೋ ಎಂಬಂತಿರುವ ಆ ದೇವಿಯನ್ನು ಶ್ರುತಿಗಳು 'ಪರಮಾನಂದರೂಪಿಣಿ'ಯೆಂದು ಸಾರುತ್ತಿರುವುವು.

೨೩೧. 'ಕೃಷ್ಣಾ' ಎಂಬ ಪದವನ್ನು ಬಿಡಿಸಿ ನೋಡಿದರೆ 'ಕೃಷ್+ನ್+ಆ' ಎಂಬ ವರ್ಣಗಳು ಕಾಣುವುವು. ಇವುಗಳಲ್ಲಿ 'ಕೃಷ್' ಎಂದರೆ ಮೋಕ್ಷವೆಂದೂ, 'ನ್' ಎಂದರೆ ಉತ್ಕೃಷ್ಟವೆಂದೂ, 'ಆ' ಎಂದರೆ ದಾನಮಾಡುವುದೆಂದೂ ಅರ್ಥ ವಾಗುವುದರಿಂದ ಉತ್ಕೃಷ್ಟವಾದ ಮೋಕ್ಷವನ್ನು ಕೊಡುವಾಕೆಯೇ 'ಕೃಷ್ಣಾ' ಎನಿಸಿರುವಳು.

೨೩೨. ಯಾವದೇವಿಗೆ ವೃಂದಾವನವೇ ನೆಲೆಯಾಗಿರುವುದೋ ಆ ದೇವಿಯನ್ನು 'ವೃಂದಾವನಿ' ಎನ್ನುವರು. ಅಥವಾ ವೃಂದಾವನದ ಅಧಿದೇವತೆಯಾದುದರಿಂದಲೇ ಆಕೆಯನ್ನು 'ವೃಂದಾವನಿ' ಎನ್ನಬಹುದು.

೨೩೩. ಗೆಳತಿಯರ ಗುಂಪನ್ನು 'ವೃಂದ' ಎನ್ನಬಹುದು 'ಆ' ಕಾರವು (ಅಸ್ತಿ) 'ಇದೆ' ಎಂಬರ್ಥವನ್ನು ಕೊಡುವುದು. ಆದುದರಿಂದ ಯಾರಿಗೆ ಗೆಳತಿಯರ ಗುಂಪು ಇದೆಯೋ ಆ ದೇವಿಯನ್ನು 'ವೃಂದಾ' ಎನ್ನುವರು.

ವೃಂದಾವನೇ ವಿನೋದಶ್ಚ ಸೋಽಸ್ಯಾ ಹ್ಯಸ್ತಿ ಚ ತತ್ರ ವೈ ।
ವೇದಾ ವದಂತಿ ತಾಂ ತೇನ ಬೃಂದಾವನವಿನೋದಿನೀಂ ॥ ೨೩೪ ॥

ನಖಚಂದ್ರಾವಲೀವಕ್ತ್ರ ಚಂದ್ರೋಽಸ್ತಿ ಯತ್ರ ಸಂತತಂ ।
ತೇನ ಚಂದ್ರಾವಲೀ ಸಾ ಚ ಕೃಷ್ಣೇನ ಪರಿಕೀರ್ತಿತಾ ॥ ೨೩೫ ॥

ಚಂದ್ರತುಲ್ಯಾ ಕಾಂತಿರಸ್ತಿ ಸದಾ ಯಸ್ಯಾ ದಿವಾನಿಶಂ ।
ಸಾ ಚಂದ್ರಕಾಂತಾ ಹರ್ಷೇಣ ಹರಿಣಾ ಪರಿಕೀರ್ತಿತಾ ॥ ೨೩೬ ॥

ಶರಚ್ಚಂದ್ರಪ್ರಭಾ ಯಸ್ಯಾಶ್ಚಾನನೇಽಸ್ತಿ ದಿವಾನಿಶಂ ।
ಮುನಿನಾ ಕೀರ್ತಿತಾ ತೇನ ಶರಚ್ಚಂದ್ರಪ್ರಭಾನನಾ ॥ ೨೩೭ ॥

ಇದಂ ಷೋಡಶನಾಮೋಕ್ತಮರ್ಥವ್ಯಾಖ್ಯಾನಸಂಯುತಂ ।
ನಾರಾಯಣೇನ ಯದ್ದತ್ತಂ ಬ್ರಹ್ಮಣೇ ನಾಭಿಪಂಕಜೇ ॥ ೨೩೮ ॥

---

೨೩೪. ಯಾವ ದೇವಿಗೆ ವೃಂದಾವನದಲ್ಲೇ ವಿನೋದವುಂಟಾಗುವುದೆಂದು ವೇದಗಳು ಸಾರಿಹೇಳುವುವೋ ಆ ದೇವಿಯನ್ನು 'ವೃಂದಾವನ ವಿನೋದಿನಿ' ಎಂದು ಕರೆಯುವರು.

೨೩೫. ಹೊಳಪಾದ ಉಗುರುಗಳೆಂಬ ಅರ್ಧ ಚಂದ್ರಗಳ ಸಾಲೂ, ಮುಖವೆಂಬ ಚಂದ್ರನೂ ಯಾರಲ್ಲಿ ಸರ್ವದಾ ನೆಲೆಯಾಗಿರುವುದೋ ಆ ದೇವಿಯನ್ನು 'ಚಂದ್ರಾವಳಿ' ಎಂದು ಶ್ರೀಕೃಷ್ಣನು ಕರೆದನು.

೨೩೬. ಯಾವ ದೇವಿಗೆ ಹಗಲೂ ರಾತ್ರಿ ಒಂದೇ ಸಮನಾಗಿ ಚಂದ್ರನಂತೆ ಕಾಂತಿ ಇರುವುದೋ, ಆ ದೇವಿಯನ್ನು ಶ್ರೀ ಹರಿಯು ಹರ್ಷದಿಂದ 'ಚಂದ್ರಕಾಂತೆ' ಎಂದು ಕರೆದನು.

೨೩೭. ಯಾರ ಮುಖದಲ್ಲಿ ಹಗಲೂ ರಾತ್ರಿ ಶರಚ್ಚಂದ್ರನ ಪ್ರಭೆಯು ಬೆಳಗುವುದೋ, ಆ ದೇವಿಯು 'ಶರಚ್ಚಂದ್ರಪ್ರಭಾನನೆ' ಎಂದು ವಿಖ್ಯಾತಳಾದಳು.

೨೩೮. ಅರ್ಥವ್ಯುತ್ಪತ್ತಿ ಸಹಿತವಾದ ಈ ದಿವ್ಯಷೋಡಶ ನಾಮಗಳನ್ನು ಶ್ರೀಮನ್ನಾರಾಯಣನು ತನ್ನ ನಾಭಿಕಮಲದಲ್ಲಿರುವ ಬ್ರಹ್ಮನಿಗೆ ಉಪದೇಶಿಸಿದನು.

ಬ್ರಹ್ಮಣಾ ಚ ಪುರಾದತ್ತಂ ಧರ್ಮಾಯ ಜನಕಾಯ ಮೇ ।
ಧರ್ಮೇಣ ಕೃಪಯಾ ದತ್ತಂ ಮಹ್ಯಮಾದಿತ್ಯಪರ್ವಣಿ ॥ ೨೩೯ ॥

ಪುಷ್ಕರೇ ಚ ಮಹಾತೀರ್ಥೇ ಪುಣ್ಯಾಹೇ ದೇವಸಂಸದಿ ।
ರಾಧಾಪ್ರಭಾವಪ್ರಸ್ತಾವೇ ಸುಪ್ರಸನ್ನೇನ ಚೇತಸಾ ॥ ೨೪೦ ॥

ಇದಂ ಸ್ತೋತ್ರಂ ಮಹಾಪುಣ್ಯಂ ತುಭ್ಯಂ ದತ್ತಂ ಮಹಾಮುನೇ ।
ನಿಂದಕಾಯಾವೈಷ್ಣವಾಯ ನ ದಾತವ್ಯಂ ಮಹಾಮುನೇ ॥ ೨೪೧ ॥

ಯಾವಜ್ಜೀವಮಿದಂ ಸ್ತೋತ್ರಂ ತ್ರಿಸಂಧ್ಯಂ ಯಃ ಪಠೇನ್ನರಃ ।
ರಾಧಾಮಾಧವಯೋಃ ಪಾದಪದ್ಮೇ ಭಕ್ತಿರ್ಭವೇದಿಹ ॥ ೨೪೨ ॥

---

೨೩೯. ಅನಂತರ ಬ್ರಹ್ಮನು ನನ್ನ ತಂದೆಯಾದ ಧರ್ಮನಿಗೆ ಉಪದೇಶಿಸಿದನು. ಧರ್ಮದೇವನೂ ಕೂಡ ದಯೆಯಿಟ್ಟು ನನಗೆ ಸೂರ್ಯಗ್ರಹಣದ ದಿವಸ ಈ ದಿವ್ಯ ನಾಮಗಳನ್ನು ಉಪದೇಶಿಸಿದನು.

೨೪೦. ಪುಷ್ಕರ ಮಹಾಕ್ಷೇತ್ರದಲ್ಲಿ ಪುಣ್ಯದಿವಸವೊಂದರಲ್ಲಿ ದೇವತೆಗಳ ಸಭೆಯು ಸೇರಿ, ರಾಧಾದೇವಿಯ ಪ್ರಭಾವವನ್ನು ವರ್ಣಿಸುತ್ತಿದ್ದಾಗ ನನ್ನ ತಂದೆಯಾದ ಧರ್ಮದೇವನು ಪ್ರಸನ್ನಮನಸ್ಕನಾಗಿ, ನನಗೆ ಈ ದಿವ್ಯನಾಮಗಳನ್ನು ಉಪದೇಶಿಸಿದನು.

೨೪೧. ಎಲೈ ಮಹರ್ಷಿಯೇ, ಮಹಾ ಪುಣ್ಯಕರವಾದ ಈ ದಿವ್ಯಸ್ತೋತ್ರವನ್ನು ನಾನು ನಿನಗೆ ಉಪದೇಶಿಸಿರುವೆನು. ಪರನಿಂದೆ ಮಾಡುವವನಿಗೂ, ವಿಷ್ಣುಭಕ್ತನಲ್ಲದವನಿಗೂ ಈ ಸ್ತೋತ್ರವನ್ನು ಉಪದೇಶಿಸಕೂಡದು.

೨೪೨. ಬದುಕಿರುವವರೆಗೂ ಯಾವ ಮನುಜನು ತ್ರಿಸಂಧ್ಯೆಯಲ್ಲೂ ಈ ಸ್ತೋತ್ರವನ್ನು ಪಠಿಸುವನೋ, ಆತನಿಗೆ ರಾಧಾಕೃಷ್ಣರ ಪಾದಕಮಲಗಳಲ್ಲಿ ದೃಢವಾದ ಭಕ್ತಿಯು ಉದಯಿಸುವುದು.

ಅಂತೇ ಲಭೇತ್ತಯೋರ್ದಾಸ್ಯಂ ಶಶ್ವತ್ಸಹಚರೋ ಭವೇತ್ ।
ಅಣಿಮಾದಿಕಸಿದ್ಧಿಂ ಚ ಸಂಪ್ರಾಪ್ಯ ನಿತ್ಯವಿಗ್ರಹಂ ॥ ೨೪೩ ॥

ವ್ರತದಾನೋಪವಾಸೈಶ್ಚ ಸರ್ವೈರ್ನಿಯಮಪೂರ್ವಕೈಃ ।
ಚತುರ್ಣಾಂ ಚೈವ ವೇದಾನಾಂ ಪಾಠೈಃ ಸರ್ವಾರ್ಥಸಂಯುತೈಃ ॥ ೨೪೪ ॥

ಸರ್ವೇಷಾಂ ಯಜ್ಞತೀರ್ಥಾನಾಂ ಕರಣೈರ್ವಿಧಿಬೋಧಿತೈಃ ।
ಪ್ರದಕ್ಷಿಣೇನ ಭೂಮೇಶ್ಚ ಕೃತ್ಸ್ನಾಯಾ ಏವ ಸಪ್ತಧಾ ॥ ೨೪೫ ॥

ಶರಣಾಗತರಕ್ಷಾಯಾಮಜ್ಞಾನಾಂ ಜ್ಞಾನದಾನತಃ ।
ದೇವಾನಾಂ ವೈಷ್ಣವಾನಾಂ ಚ ದರ್ಶನೇನಾಪಿ ಯತ್ಫಲಂ ॥ ೨೪೬ ॥

ತದೇವ ಸ್ತೋತ್ರಪಾಠಸ್ಯ ಕಲಾಂ ನಾರ್ಹತಿ ಷೋಡಶೀಂ ।
ಸ್ತೋತ್ರಸ್ಯಾಸ್ಯ ಪ್ರಭಾವೇಣ ಜೀವನ್ಮುಕ್ತೋ ಭವೇನ್ನರಃ ॥ ೨೪೭ ॥

---

೨೪೩ ಅಲ್ಲದೆ ಅಂತ್ಯಕಾಲದಲ್ಲಿ ರಾಧಾಕೃಷ್ಣರ ಸೇವಾಸುಖವನ್ನು ಹೊಂದಿ, ಅಣಿಮಾದ್ಯಷ್ಟಸಿದ್ಧಿಗಳನ್ನು ಪಡೆಯುವನು.

೨೪೪–೨೪೭. ನಿಯಮಪೂರ್ವಕವಾದ ಸಕಲ ವ್ರತದಾನೋಪವಾಸಾದಿಗಳಿಂದಲೂ, ಅರ್ಥಸಹಿತವಾದ ಚತುರ್ವೇದಗಳ ಪಠನದಿಂದಲೂ, ಪುಣ್ಯತೀರ್ಥಗಳಲ್ಲಿ ವಿಧ್ಯುಕ್ತವಾಗಿ ಸಕಲ ಯಜ್ಞಗಳನ್ನಾಚರಿಸುವುದರಿಂದಲೂ, ಸಮಸ್ತನಾದ ಭೂಮಂಡಲವನ್ನು ಏಳುಸಾರಿ ಪ್ರದಕ್ಷಿಣೆ ಮಾಡುವುದರಿಂದಲೂ, ಶರಣಾಗತರನ್ನು ರಕ್ಷಿಸುವುದರಿಂದಲೂ, ಅಜ್ಞರಿಗೆ ಜ್ಞಾನದಾನ ಮಾಡುವುದರಿಂದಲೂ, ದೇವತೆಗಳ ಮತ್ತು ವಿಷ್ಣುಭಕ್ತರ ದರ್ಶನದಿಂದಲೂ ಯಾವ ಪುಣ್ಯಫಲವು ದೊರೆಯುವುದೋ, ಅವೆಲ್ಲವೂ ಈ ಸ್ತೋತ್ರಪಠನದಿಂದ ದೊರಕುವ ಪುಣ್ಯದ ಹದಿನಾರನೆಯ ಒಂದು ಭಾಗಕ್ಕೂ ಎಣೆಯಲ್ಲ. ಈ ಸ್ತೋತ್ರದ ಮಹಿಮೆಯಿಂದ ಮನುಜನು ಜೀವನ್ಮುಕ್ತನಾಗುವುದರಲ್ಲಿ ಸಂಶಯವಿಲ್ಲ.

॥ ನಾರದ ಉವಾಚ ॥

ಸಂಪ್ರಾಪ್ತಂ ಪರಮಾಶ್ಚರ್ಯಂ ಸ್ತೋತ್ರಂ ಸರ್ವಸುದುರ್ಲಭಂ ।
ಕವಚಂ ಚಾಪಿ ದೇವ್ಯಾಶ್ಚ ಸಂಸಾರವಿಜಯಂ ಪ್ರಭೋ ॥ ೨೪೮ ॥

ಕೃತಂ ಸ್ತೋತ್ರಂ ಸುಯಜ್ಞೇನ ಪ್ರಾಪ್ತಂ ತದಪಿ ದುರ್ಲಭಂ ।
ಶ್ರುತ್ವಾ ಕೃಷ್ಣಕಥಾಂ ಚಿತ್ರಾಂ ತ್ವತ್ಪಾದಾಬ್ಜ ಪ್ರಸಾದತಃ ॥ ೨೪೯ ॥

ಅಧುನಾ ಶ್ರೋತುಮಿಚ್ಛಾಮಿ ಯದ್ರಹಸ್ಯಂ ಚ ತದ್ವದ ।
ಪ್ರಾತಶ್ಚ ನಗರಂ ದೃಷ್ಟ್ವಾ ಕಿಮೂಚುರ್ಬಲ್ಲವಾ ಮುನೇ ॥ ೨೫೦ ॥

॥ ಶ್ರೀ ನಾರಾಯಣ ಉವಾಚ ॥

ಗತಾಯಾಂ ತತ್ರ ಯಾಮಿನ್ಯಾಂ ಗತೇ ಚ ವಿಶ್ವಕರ್ಮಣಿ ।
ಅರುಣೋದಯವೇಲಾಯಾಂ ಜನಾಃ ಸರ್ವೇ ಜಜಾಗರುಃ ॥ ೨೫೧ ॥

---

೨೪೮. ನಾರದ:—ಎಲೈ ಮಹರ್ಷಿಯೇ, ಪರಮಾಶ್ಚರ್ಯಕರವೂ, ಸರ್ವ ದುರ್ಲಭವೂ ಆದ ದೇವಿಯ ಸ್ತೋತ್ರವನ್ನೂ, ಸಂಸಾರವಿಜಯವೆಂಬ ಕವಚವನ್ನೂ ನಿನ್ನ ಅನುಗ್ರಹದಿಂದ ಪಡೆದಂತಾಯಿತು.

೨೪೯-೨೫೦. ದುರ್ಲಭವಾದ ಮತ್ತು ಸುಯಜ್ಞನಿಂದ ಕೃತವಾದ ಸ್ತೋತ್ರವನ್ನೂ ತಿಳಿದಂತಾಯಿತು. ನಿನ್ನ ಚರಣಕಮಲಗಳ ಅನುಗ್ರಹದಿಂದ ಚಿತ್ರವಾದ ಮತ್ತು ದಿವ್ಯವಾದ ಶ್ರೀಕೃಷ್ಣಕಥೆಯನ್ನು ಕೇಳಿ, ಈಗ ರಹಸ್ಯವಾದ ಮುಂದಿನ ಕಥೆಯನ್ನೂ ಕೇಳ ಬಯಸುತ್ತೇನೆ. ಎಲೈ ಮುನಿಯೇ, ಪ್ರಾತಃಕಾಲದಲ್ಲಿ ಆ ದಿವ್ಯ ನಗರವನ್ನು ನೋಡಿ ಗೋಪರೆಲ್ಲ ಏನು ಹೇಳಿದರು?

೨೫೧. ಶ್ರೀನಾರಾಯಣ:—ಮೇಲೆ ಹೇಳಿದಂತೆ ಆ ಅರಣ್ಯದಲ್ಲಿ ರಾತ್ರಿಯು ಕಳೆಯಲಾಗಿ, ವಿಶ್ವಕರ್ಮನೂ ತನ್ನ ಶಿಲ್ಪಚಾತುರ್ಯವನ್ನು ತೋರಿ ಕಣ್ಮರೆಯಾಗಲಾಗಿ, ಅರುಣೋದಯಕಾಲದಲ್ಲಿ ಗೋಪರೆಲ್ಲರೂ ಎಚ್ಚೆತ್ತರು.

ಉತ್ಥಾಯ ದೃಷ್ಟ್ವಾ ನಗರಂ ಸರ್ವೇಭ್ಯೋऽಪಿ ವಿಲಕ್ಷಣಂ ।
ಕಿಮಾಶ್ಚರ್ಯಂ ಕಿಮಾಶ್ಚರ್ಯಂ ಇತ್ಯೂಚುರ್ವ್ರಜವಾಸಿನಃ ॥ ೨೫೨ ॥

ಕಾಂಶ್ಚಿದ್ಗೋಪಾನ್ಕೇಚಿದೂಚುಃ ಕುತ ಏತದಭೂದಿದಂ ।
ನ ಜಾನೇ ಕೇನ ರೂಪೇಣ ಕೋ ಭೂಮೌ ಪ್ರಭವೇದಿತಿ ॥ ೨೫೩ ॥

ಬುಬುಧೇ ಮನಸಾ ನಂದೋ ಗರ್ಗವಾಕ್ಯಮನುಸ್ಮರನ್ ।
ಶ್ರೀಹರೇರಿಚ್ಛಯಾ ಸರ್ವಂ ಜಗದೇತಚ್ಚರಾಚರಂ ॥ ೨೫೪ ॥

ಬ್ರಹ್ಮಾದಿತೃಣಪರ್ಯಂತಂ ಯಸ್ಯ ಭ್ರೂಭಂಗಲೀಲಯಾ ।
ಆವಿರ್ಭೂತಂ ತಿರೋಭೂತಂ ತಸ್ಯಾಸಾಧ್ಯಂ ಚ ಕಿಂ ಕುತಃ ॥ ೨೫೫ ॥

ವಿವರೇಷ್ವೇವ ಯಲ್ಲೋಮ್ನಾಂ ಬ್ರಹ್ಮಾಂಡಾನ್ಯಖಿಲಾನಿ ಚ ।
ಈಶಸ್ಯ ತಸ್ಯ ಮಹಾವಿಷ್ಣೋಃ ಕಿಮಸಾಧ್ಯಂ ಹರೇರಹೋ ॥ ೨೫೬ ॥

---

೨೫೨. ಎದ್ದಕೂಡಲೇ ಎಲ್ಲಕ್ಕೂ ವಿಲಕ್ಷಣವಾದ ಆ ದಿವ್ಯನಗರಿಯನ್ನು ನೋಡಿ, ವ್ರಜನಿವಾಸಿಗಳೆಲ್ಲರೂ ಅತ್ಯಾಶ್ಚರ್ಯಭರಿತರಾದರು.

೨೫೩. ಕೆಲವರು ಕೆಲವು ಗೋಪರನ್ನು ಕುರಿತು 'ಈ ನಗರಿಯು ಎಲ್ಲಿಂದ ಬಂತು' ಎಂದು ಕೇಳಲು, 'ಇದು ನಮಗೆ ತಿಳಿಯದು. ಯಾರು ಯಾವ ರೂಪದಿಂದ ಭೂಮಿಯಲ್ಲಿ ಅವತರಿಸುವರೋ ಕಾಣೆವು' ಎಂದರು.

೨೫೪. ನಂದಗೋಪನಾದರೋ ಗರ್ಗಮಹರ್ಷಿಯ ಮಾತನ್ನು ಸ್ಮರಿಸಿಕೊಂಡು, ಚರಾಚರವಾದ ಈ ಜಗತ್ತೆಲ್ಲವೂ ಶ್ರೀಹರಿಯ ಇಚ್ಛೆಯಂತೆ ನಡೆಯುವುದೆಂದನು.

೨೫೫. ಯಾವ ಪರಮಾತ್ಮನ ಲೀಲಾಮಾತ್ರವಾದ ಭ್ರೂಭಂಗದಿಂದಲೇ ಬ್ರಹ್ಮನೇ ಮೊದಲಾಗಿ ಹುಲ್ಲುಗರಿಯವರೆಗಿನ ಸಕಲ ಜೀವಿಗಳೂ ಆವಿರ್ಭಾವ ತಿರೋಭಾವಗಳನ್ನು ಹೊಂದುವುವೋ, ಅಂಥ ಪರಮಾತ್ಮನಿಗೆ ಅಸಾಧ್ಯವಾವುದು ?

೨೫೬. ಯಾರ ರೋಮಕೂಪಗಳಲ್ಲಿ ನಿಖಿಲಬ್ರಹ್ಮಾಂಡವೂ ಅಡಗಿರುವುದೋ, ಸರ್ವೇಶ್ವರನಾದ ಆ ಮಹಾವಿಷ್ಣುವಿಗೆ ಅಸಾಧ್ಯವಾದುದಾವುದು ?

ಬ್ರಹ್ಮಾನಂತೇಶಧರ್ಮಾಶ್ಚ ಧ್ಯಾಯಂತೇ ಯತ್ಪದಾಂಬುಜಂ ।
ಕಿಮಸಾಧ್ಯಂ ತದೀಶಸ್ಯ ಮಾಯಾಮಾನುಷರೂಪಿಣಃ ॥ ೨೫೭ ॥

ಭ್ರಾಮಂ ಭ್ರಾಮಂ ತನ್ನಗರಂ ದರ್ಶಂ ದರ್ಶಂ ಗೃಹಂ ಗೃಹಂ ।
ಪಾಠಂ ಪಾಠಂ ಚ ನಾಮಾನಿ ಸರ್ವೇಭ್ಯೋ ನಿಲಯಂ ದದೌ ॥ ೨೫೮ ॥

ಕೃತ್ವಾ ಶುಭಕ್ಷಣಂ ನಂದೋ ವೃಷಭಾನುಶ್ಚ ಕೌತುಕೀ ।
ಚಕಾರ ಸಗಣೈಃ ಸಾರ್ಧಂ ಮುದಾಽಽಶ್ರಮನಿವೇಶನಂ ॥ ೨೫೯ ॥

ಸರ್ವೇ ಬೃಂದಾವನಸ್ಥಾಶ್ಚ ಪ್ರಸನ್ನವದನೇಕ್ಷಣಾಃ ।
ಮುದಾ ಪ್ರವೇಶನಂ ಚಕ್ರುಃ ಸ್ವಂಸ್ವಮಾಶ್ರಮಮುತ್ತಮಂ ॥ ೨೬೦ ॥

ಸರ್ವೇ ಮುಮುದಿರೇ ಗೋಪಾಃ ಸ್ವೇ ಸ್ವೇ ಸ್ಥಾನೇ ಮನೋಹರೇ ।
ಬಾಲಕಾ ಬಾಲಿಕಾಶ್ಚೈವ ಚಿಕ್ರೀಡುಶ್ಚ ಪ್ರಹರ್ಷಿತಾಃ ॥ ೨೬೧ ॥

---

೨೫೭. ಬ್ರಹ್ಮ, ಆದಿಶೇಷ, ಈಶ ಮತ್ತು ಧರ್ಮ ಮುಂತಾದವರೆಲ್ಲರೂ ಯಾರ ಪಾದಕಮಲಗಳನ್ನು ಸರ್ವದಾ ಸ್ಮರಿಸುವರೋ, ಅಂಥ ಮಾಯಾಮಾನುಷ ರೂಪಿಯಾದ ಸರ್ವೇಶ್ವರನಿಗೆ ಅಸಾಧ್ಯವಾವುದು ?

೨೫೮. ಅನಂತರ ಆ ನಂದಗೋಪನು ಆ ನಗರವನ್ನೆಲ್ಲ ಸುತ್ತುತ್ತ, ಪ್ರತಿಯೊಂದು ಮನೆಯನ್ನೂ ನೋಡಿ, ಅಲ್ಲಿ ಬರೆದಿರುವ ಹೆಸರುಗಳನ್ನೆಲ್ಲ ಓದಿ, ಎಲ್ಲರಿಗೂ ಅವರವರ ಮನೆಯನ್ನು ಕೊಟ್ಟನು.

೨೫೯. ಕುತೂಹಲಿಗಳಾದ ನಂದ ಮತ್ತು ವೃಷಭಾನುವು ಶುಭಮುಹೂರ್ತದಲ್ಲಿ ತಮ್ಮ ಪರಿವಾರದೊಡನೆ ಆ ಆಶ್ರಮದಲ್ಲಿ ನಿವಾಸಮಾಡಲಾರಂಭಿಸಿದರು.

೨೬೦. ಅನಂತರ ವೃಂದಾವನದಲ್ಲಿದ್ದ ಗೋಪರೆಲ್ಲರೂ ಪ್ರಸನ್ನಮುಖರಾಗಿ, ತಮ್ಮ ತಮ್ಮ ಮಂದಿರಕ್ಕೆ ಸಂತೋಷದಿಂದ ಪ್ರವೇಶಮಾಡಿ ನೆಲೆಸಿದರು.

೨೬೧. ತಮ್ಮ ತಮ್ಮ ಮನೋಹರವಾದ ಮನೆಗಳಲ್ಲಿದ್ದುಕೊಂಡು, ಸಕಲ ಗೋಪರೂ ಸಂತೋಷಭರಿತರಾದರು. ಬಾಲಕ ಬಾಲಕಿಯರೆಲ್ಲರೂ ಹರ್ಷಪೂರ್ಣರಾಗಿ ಕ್ರೀಡಿಸಲಾರಂಭಿಸಿದರು.

ಶ್ರೀಕೃಷ್ಣೋ ಬಲದೇವಶ್ಚ ಶಿಶುಭಿಃ ಸಹ ಕೌತುಕಾತ್ ।
ಕ್ರೀಡಾಂ ಚಕಾರ ತತ್ರೈವ ಸ್ಥಾನೇ ಸ್ಥಾನೇ ಮನೋಹರೇ ॥ ೨೬೨ ॥

ಇತ್ಯೇವಂ ಕಥಿತಂ ಸರ್ವಂ ನಿರ್ಮಾಣಂ ನಗರಸ್ಯ ಚ ।
ಅಬಲಾನಾಂ ವನೇ ರಾಸಮಂಡಲಸ್ಯ ಚ ನಾರದ ॥ ೨೬೩ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ನಾರಾಯಣನಾರದಸಂವಾದೇ
ಶ್ರೀ ಬೃಂದಾವನ ನಗರವರ್ಣನಂ ನಾಮ
ಸಪ್ತದಶೋಽಧ್ಯಾಯಃ

೨೬೨- ಶ್ರೀಕೃಷ್ಣಬಲರಾಮರೂ ಕೂಡ ಕುತೂಹಲದಿಂದ ಆ ಬಾಲಕರೊಡನೆ ಆಯಾಯ ಮನೋಹರವಾದ ಸ್ಥಾನಗಳಲ್ಲಿ ಕ್ರೀಡಿಸಲಾರಂಭಿಸಿದರು.

೨೬೩. ಎಲೈ ನಾರದನೇ, ಈ ರೀತಿ ಆ ವೃಂದಾವನದಲ್ಲಿ ಸುಂದರವಾದ ನಗರ ನಿರ್ಮಾಣವಾದುದನ್ನೂ, ರಾಸಮಂಡಲವು ರಚಿತವಾದುವನ್ನೂ ನಿನಗೆ ವಿವರಿಸಿಯಾಯಿತು.

ಇಲ್ಲಿಗೆ ಬ್ರಹ್ಮವೈವರ್ತ ಮಹಾಪುರಾಣದ ಶ್ರೀಕೃಷ್ಣಜನ್ಮಖಂಡದಲ್ಲಿ
ವೃಂದಾವನ ಮತ್ತು ನಗರವರ್ಣನಾತ್ಮಕವಾದ
ಹದಿನೇಳನೆಯ ಅಧ್ಯಾಯವು ಮುಗಿದುದು.

ಹದಿನೇಳನೆಯ ಅಧ್ಯಾಯದ ಸಾರಾಂಶ

ಒಮ್ಮೆ ನಂದಗೋಪನು ತನ್ನ ಬಂಧುಬಳಗದವರೊಡನೆಯೂ, ಬಾಲಕನಾದ ಶ್ರೀಕೃಷ್ಣನೊಡನೆಯೂ ಬೃಂದಾವನದಲ್ಲಿ ಮಲಗಿ ನಿದ್ರಿಸುತ್ತಿದ್ದಾಗ, ದೇವಶಿಲ್ಪಿ ಯಾದ ವಿಶ್ವಕರ್ಮನು ತನ್ನ ಪರಿವಾರದೊಡನೆ, ನಗರ ನಿರ್ಮಾಣಕ್ಕೆ ಬೇಕಾದ ಸಕಲ ಸಾಮಗ್ರಿಗಳನ್ನೂ ತೆಗೆದುಕೊಂಡು ಅಲ್ಲಿಗೆ ಬಂದು, ಆ ಗೋಪರೆಲ್ಲರ ನಿವಾಸಕ್ಕೆ ಯೋಗ್ಯವಾದ ದಿವ್ಯನಗರಿಯೊಂದನ್ನು ಕ್ಷಣಮಾತ್ರದಲ್ಲಿ ನಿರ್ಮಿಸಿದನು. ಅನಂತರ ವೃಷಭಾನು ಮತ್ತು ಕಲಾವತಿಯ ವಿಹಾರಕ್ಕಾಗಿ ದಿವ್ಯಭವನವೊಂದನ್ನು ರಚಿಸಿದನು. ಅಂತೆಯೇ ನಂದಗೋಪ ಯಶೋದೆಯರ ನಿವಾಸಕ್ಕೆ ಯೋಗ್ಯವೂ, ರಾಧಾಕೃಷ್ಣರ ವಿಹಾರಕ್ಕೆ ಅನುಗುಣವೂ ಆದ ಬೇರೆ ಬೇರೆ ಮಂದಿರಗಳನ್ನೂ, ಮಂಡಪಗಳನ್ನೂ ವೈಭವಪೂರ್ಣವಾಗಿ ರಚಿಸಿ, ನಿದ್ರೆಮಾಡುತ್ತಿದ್ದ ಶ್ರೀಹರಿಗೆ ವಂದಿಸಿ, ತನ್ನ ಪರಿವಾರದೊಡನೆ ಹಿಂತಿರುಗಿದನು. ಪ್ರಾತಃಕಾಲದಲ್ಲಿ ಎಲ್ಲರೂ ಎದ್ದು, ನಗರವನ್ನು ನೋಡಿ ಅತ್ಯಾಶ್ಚರ್ಯಭರಿತರಾಗಿ, ತಮತಮಗೆ ಸಿದ್ಧಗೊಳಿಸಿದ್ದ ಮಂದಿರದಲ್ಲಿ ಸುಖವಾಗಿ ನೆಲೆಸಿದರು.

ಪೂರ್ವದಲ್ಲಿ ಪಿತೃದೇವತೆಗಳ ಮನಸ್ಸಿನಿಂದ ಕಲಾವತಿ, ರತ್ನಮಾಲೆ, ಮತ್ತು ಮೇನಕೆ ಎಂಬ ಮೂವರು ಕನ್ಯೆಯರು ಅವತರಿಸಿದರು. ಅವರಲ್ಲಿ ಕಾಮುಕಿಯಾದ ರತ್ನಮಾಲೆಯು ಜನಕಮಹಾರಾಜನನ್ನೂ, ಮೇನಕೆಯು ಹಿಮವಂತನನ್ನೂ ವರಿಸಿದರು. ಆ ರತ್ನಮಾಲೆಯ ಮಂದಿರದಲ್ಲಿ ಮಹಾಲಕ್ಷ್ಮಿಯು ಅವತರಿಸಿ ಸೀತಾದೇವಿಯೆಂದೂ, ಮೇನಕೆಯ ಮಂದಿರದಲ್ಲಿ ದಾಕ್ಷಾಯಣಿಯು ಅವತರಿಸಿ ಪಾರ್ವತಿಯೆಂದೂ, ಪ್ರಖ್ಯಾತರಾಗಿ ಪತಿವ್ರತಾಶಿರೋಮಣಿಗಳೆನಿಸಿದರು. ಕಲಾವತಿಯು ಮನುವಂಶೋತ್ಪನ್ನನಾದ ಸುಚಂದ್ರನೆಂಬ ರಾಜನನ್ನು ವರಿಸಿ ಅವನೊಡನೆ ಚಿರಕಾಲ ವಿಹರಿಸಿಕೊಂಡಿದ್ದಳು ಸುಚಂದ್ರನು ಸಾವಿರಾರು ವರ್ಷಗಳ ಕಾಲ ಆಕೆಯೊಡನೆ ರತಿಸುಖವನ್ನನುಭವಿಸಿ ವಿರಕ್ತನಾಗಿ, ವಿಂಧ್ಯಪರ್ವತದ ತಪ್ಪಲಿನಲ್ಲಿರುವ ಪುಲಹ ಮಹರ್ಷಿಯ ಆಶ್ರಮದಲ್ಲಿ ನಿದ್ರಾಹಾರಗಳನ್ನು ತೊರೆದು ಮೋಕ್ಷಕಾಮಿಯಾಗಿ ತಪಸ್ಸು ಮಾಡಲಾರಂಭಿಸಿದನು. ಅಲ್ಲಿ ತಪಸ್ಸು ಮಾಡುತ್ತಿದ್ದಂತೆಯೇ ಅವನ ಮೈಮೇಲೆ ಹುತ್ತ ಬೆಳೆಯಲು, ಅವನ ಪತ್ನಿಯಾದ ಕಲಾವತಿಯು ಆ ಹುತ್ತವನ್ನು ತೆಗೆದು ಪತಿಯ ದೇಹವನ್ನು ರಕ್ಷಿಸುತ್ತಿದ್ದಳು. ಇಂತು ಬಹುಕಾಲ ಪತಿ ಶುಶ್ರೂಷೆ ಮಾಡಿಕೊಂಡು, ಪತಿಯ ಆ ದುಃಸ್ಥಿತಿಯನ್ನು ನೋಡಿ ಮರಗು

ತ್ತಿರುವ ಆ ಕಲಾವತಿಗೆ ಚತುರ್ಮುಖಬ್ರಹ್ಮನು ಪ್ರತ್ಯಕ್ಷನಾಗಿ, ಅವಳ ಪತಿಯಾದ ಸುಚಂದ್ರನ ದೇಹದ ಮೇಲೆ ತನ್ನ ಕಮಂಡಲು ಜಲವನ್ನು ಚುಮುಕಿಸಿ, ಚೇತನಗೊಳಿಸಿದನು. ಸಚೇತನನಾದ ಸುಚಂದ್ರನು ತನ್ನ ಮುಂದೆ ಚತುರ್ಮುಖನನ್ನು ನೋಡಿ ಭಕ್ತಿಯಿಂದ ವಂದಿಸಿ ತನಗೆ ಮುಕ್ತಿಯನ್ನು ಅನುಗ್ರಹಿಸಬೇಕೆಂದು ಬೇಡಿದನು. ಅದರಂತೆಯೇ ಬ್ರಹ್ಮನು ಮುಕ್ತಿಯನ್ನು ಅನುಗ್ರಹಿಸುವುದರಲ್ಲಿದ್ದನು. ಅಷ್ಟರೊಳಗೆ ಕಲಾವತಿಯು 'ಸ್ತ್ರೀಯರಿಗೆ ಪತಿಯೇ ಪರದೈವನಾದುದರಿಂದ ತನ್ನನ್ನು ಬಿಟ್ಟು ತನ್ನ ಪತಿಗೆ ಮಾತ್ರ ಮುಕ್ತಿಯನ್ನು ಕೊಡಕೂಡದೆಂದೂ, ಇನ್ನೂ ಕೆಲವು ಕಾಲ ಅವನೊಡನೆ ತಾನು ಸುಖಪಡಲು ಬಯಸುತ್ತಿರುವುದರಿಂದ ಅವನನ್ನು ತನ್ನೊಡನೆ ಕಳುಹಿಸಿಕೊಡಬೇಕೆಂದೂ' ಬೇಡಿಕೊಂಡಳು. ಅದರಂತೆ ಬ್ರಹ್ಮನು ಅನುಗ್ರಹ ಮಾಡಲು ಆ ಕಲಾವತಿ ಮತ್ತು ಸುಚಂದ್ರರು ಇನ್ನೂ ಕೆಲವುಕಾಲ ಸ್ವರ್ಗಭೋಗವನ್ನನುಭವಿಸಿ, ಬ್ರಹ್ಮನ ವರದಂತೆ ಮತ್ತೊಮ್ಮೆ ಭರತಖಂಡದಲ್ಲಿ ಜನ್ಮವೆತ್ತಿದರು. ಸುಚಂದ್ರನು ಸುರಭಾನು ಮತ್ತು ಪದ್ಮಾವತಿಯರ ಮಗನಾಗಿ ವೃಷಭಾನುವೆಂಬ ಹೆಸರಿನಿಂದಲೂ, ಕಲಾವತಿಯು ಭನಂದನನೆಂಬ ರಾಜನ ಯಜ್ಞಕುಂಡಲದಲ್ಲಿ ಅವತರಿಸಿ 'ಕಲಾವತಿ' ಎಂಬ ಹೆಸರಿನಿಂದಲೂ, ಪ್ರಖ್ಯಾತರಾದರು. ಕಾಲಕ್ರಮೇಣ ಇವರಿಬ್ಬರಿಗೂ ವಿವಾಹವಾಗಲು ಸುದಾಮನ ಶಾಪಕ್ಕೊಳಗಾಗಿದ್ದ ರಾಧಾದೇವಿಯು ಅಯೋನಿಜೆಯಾಗಿ ಅವತರಿಸಿ ಇವರ ಪುತ್ರಿಯೆನಿಸಿದಳು.

ಸತ್ಯಯುಗದಲ್ಲಿ ಧರ್ಮದಿಂದ ರಾಜ್ಯಪರಿಪಾಲನೆ ಮಾಡುತ್ತಿದ್ದ ಕೇದಾರನೆಂಬ ರಾಜರ್ಷಿಯ ಮಗಳಾದ ವೃಂದಾದೇವಿಯು, ದೂರ್ವಾಸಮಹರ್ಷಿಯಿಂದ ವಿಷ್ಣು ಮಂತ್ರೋಪದೇಶವನ್ನು ಪಡೆದು, ಅರವತ್ತು ಸಾವಿರ ವರ್ಷಗಳ ಕಾಲ ತಪಸ್ಸನ್ನಾಚರಿಸಿದ, ನಂತರ ಪ್ರತ್ಯಕ್ಷನಾದ ಶ್ರೀಕೃಷ್ಣನನ್ನು ಕುರಿತು 'ಶ್ರೀಕೃಷ್ಣನೇ ತನಗೆ ಪತಿಯಾಗಬೇಕೆಂದು' ವರವನ್ನು ಬೇಡಿದಳು. ಅದರಂತೆ ಶ್ರೀಕೃಷ್ಣನು ಬೃಂದೆಯನ್ನು ವರಿಸಿ ಆಕೆಯೊಡನೆ ವಿಹರಿಸಿದ ಸ್ಥಳವೇ ಬೃಂದಾವನವೆಂದು ಪ್ರಸಿದ್ಧವಾಯಿತು.

— || ಓಂ ||—

—|| ಶ್ರೀ ಗಣೇಶಾಯ ನಮಃ ||—

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಶ್ರೀಕೃಷ್ಣಜನ್ಮಖಂಡೇ

|| ಅಷ್ಟಾದಶೋಽಧ್ಯಾಯಃ ||

|| ಶೌನಕ ಉವಾಚ ||

ಅಹೋ ಕಿಮದ್ಭುತಂ ಸೂತ ರಹಸ್ಯಂ ಸುಮನೋಹರಂ।
ಶ್ರುತಂ ಕೃಷ್ಣಸ್ಯ ಚರಿತಂ ಸುಖದಂ ಮೋಕ್ಷದಂ ಪರಂ || ೧ ||

|| ಸೂತ ಉವಾಚ ||

ಶ್ರುತ್ವಾ ನಗರನಿರ್ಮಾಣಂ ನಾರದೋ ಮುನಿಸತ್ತಮಃ।
ಪಪ್ರಚ್ಛ ಕೃಷ್ಣಚರಿತಮಾಪರಂ ಸುಮನೋಹರಂ || ೨ ||

ಹದಿನೆಂಟನೆಯ ಅಧ್ಯಾಯವು

೧. ಶೌನಕಮಹರ್ಷಿ :—ಎಲೈ ಸೂತಮಹರ್ಷಿಯೇ, ಅತ್ಯದ್ಭುತವೂ, ಗೋಪ್ಯವೂ ಮನೋಹರವೂ, ಪರಮಸುಖ ಮತ್ತು ಮೋಕ್ಷದಾಯಕವೂ ಆದ ಶ್ರೀಕೃಷ್ಣಚರಿತ್ರೆಯನ್ನು ಕೇಳಿ ಆನಂದಿಸಿದೆನು.

೨. ಸೂತಮಹರ್ಷಿ :—ಮುನಿಶ್ರೇಷ್ಠನಾದ ನಾರದನು ನಾರಾಯಣ ಮಹರ್ಷಿಯಿಂದ ನಗರನಿರ್ಮಾಣದ ಅದ್ಭುತ ಚರಿತ್ರೆಯನ್ನು ಕೇಳಿದ ನಂತರ ಮುಂದೆ ಮನೋಹರವಾದ ಶ್ರೀಕೃಷ್ಣಚರಿತ್ರೆಯನ್ನು ವಿವರಿಸಬೇಕೆಂದು ವಿಜ್ಞಾಪಿಸಿ ಕೊಂಡನು.

|| ನಾರದ ಉವಾಚ ||

ಶ್ರೀಕೃಷ್ಣಾಖ್ಯಾನಚರಿತಂ ಪೀಯೂಷಮೃಷಿಸತ್ತಮ ।
ಜ್ಞಾನಸಿಂಧೋ ನಿಗದ ಮಾಂ ಶಿಷ್ಯಂ ಚ ಶರಣಾಗತಂ || ೩ ||

ನಾರದಸ್ಯ ವಚಃ ಶ್ರುತ್ವಾ ಮುದಾ ನಾರಾಯಣ ಸ್ಸ್ವಯಂ ||
ಉವಾಚ ಪರಮಿಾಶಸ್ಯ ಚರಿತಂ ಪರಮಾದ್ಭುತಂ || ೪ ||

|| ಶ್ರೀನಾರಯಣ ಉವಾಚ ||

ಏಕದಾ ಬಾಲಕೈಃ ಸಾರ್ಧಂ ಬಲೇನ ಸಹ ಮಾಧವಃ ।
ಜಗಾಮ ಶ್ರೀಮಧುವನಂ ಯಮುನಾತೀರನೀರಜಂ || ೫ ||

ಫಿಚೇರುರ್ಗೋಸಹಸ್ರೈಶ್ಚ ಚಿಕ್ರೀಡುರ್ಬಾಲಕಾಸ್ತಥಾ ।
ವಿಶ್ರಾಂತಾಸ್ತೃಟ್‌ಪರೀತಾಶ್ಚ ಕ್ಷುದಾ ಚ ಪರಿಪೀಡಿತಾಃ || ೬ ||

---

೩. ನಾರದ ಮಹರ್ಷಿ;—ಎಲೈ ಋಷಿವರ್ಯನೇ, ಶ್ರೀಕೃಷ್ಣಚರಿತ್ರೆಯು ಅಮೃತಕ್ಕೆ ಸಮಾನವಾದುದು. ಎಲೈ ಜ್ಞಾನಸಾಗರನೇ, ಶರಣಾಗತನೂ ಶಿಷ್ಯನೂ ಆದ ನನಗೆ ಮುಂದಿನ ಚರಿತ್ರೆಯನ್ನು ದಯವಿಟ್ಟು ಹೇಳುವವನಾಗು

೪. ಈ ರೀತಿಯಾದ ನಾರದನ ಮಾತನ್ನು ಕೇಳಿ, ಸಂತಸಗೊಂಡ ನಾರಾಯಣ ಮಹರ್ಷಿಯು ಮುಂದೆ ಅತ್ಯದ್ಭುತವಾದ ಶ್ರೀಕೃಷ್ಣನಚರಿತ್ರೆಯನ್ನು ವರ್ಣಿಸಲಾರಂಭಿಸಿದನು-

೫. ಶ್ರೀನಾರಾಯಣ :—ಒಮ್ಮೆ ಮಾಧವನು ಬಲರಾಮನೊಡನೆಯೂ ಇತರ ಗೋಪಬಾಲರೊಡನೆಯೂ, ಯಮುನಾತೀರದಲ್ಲಿರುವ ಮಧುವನಕ್ಕೆ ತೆರಳಿದನು.

೬. ಅಲ್ಲಿ ಸಾವಿರಾರು ಗೋವುಗಳನ್ನು ಮೇಯಿಸುತ್ತಾ ಎಲ್ಲ ಬಾಲಕರೊಡನೆ ಕ್ರೀಡಿಸಿ ಬಳಲಿ ಹಸಿವು ಬಾಯಾರಿಕೆಗಳಿಂದ ಪೀಡಿತನಾದನು· ಇತರ ಬಾಲಕರೂ ಬಳಲಿ ಬೆಂಡಾಗಿ ಬಸವಳಿದರು.

ತಮೂಚುರ್ಗೋಪಶಿಶವಃ ಶ್ರೀಕೃಷ್ಣಂ ಪರಯಾ ಮುದಾ ।
ಕ್ಷುಧಾಸ್ಮಾನ್ಬಾಧತೇ ಕೃಷ್ಣ ಕಿಂ ಕುರ್ಮೋ ಬ್ರೂಹಿ ಕಿಂಕರಾನ್ ॥ ೭ ॥

ಶಿಶೂನಾಂ ವಚನಂ ಶ್ರುತ್ವಾ ತಾನುವಾಚ ದಯಾನಿಧಿಃ ।
ಹಿತಂ ತಥ್ಯಂ ಚ ವಚನಂ ಪ್ರಸನ್ನವದನೇಕ್ಷಣಃ ॥ ೮ ॥

॥ ಶ್ರೀ ಕೃಷ್ಣ ಉವಾಚ ॥

ಬಾಲಾ ಗಚ್ಛತ ವಿಪ್ರಾಣಾಂ ಯಜ್ಞಸ್ಥಾನಂ ಸುಖಾವಹಂ ।
ಅನ್ನಂ ಯಾಚತ ತಾನ್ ಶೀಘ್ರಂ ಬ್ರಾಹ್ಮಣಾಂಶ್ಚ ಕ್ರತೂನ್ಮುಖಾನ್ ॥ ೯ ॥

ವಿಪ್ರಾ ಆಂಗಿರಸಾಃ ಸರ್ವೇ ಸ್ವಾಶ್ರಮೇ ಶ್ರೀವನಾಂತಿಕೇ ।
ಯಜ್ಞಂ ಕುರ್ವಂತಿ ವಿಪ್ರಾಶ್ಚ ಶ್ರುತಿ ಸ್ಮೃತಿ ವಿಶಾರದಾಃ ॥ ೧೦ ॥

---

೭. ಆಗ ಗೋಪಬಾಲಕರೆಲ್ಲರೂ ಶ್ರೀಕೃಷ್ಣನನ್ನು ಕುರಿತಿಂತೆಂದರು. ' ಎಲೈ ಶ್ರೀಕೃಷ್ಣನೇ, ನಮ್ಮನ್ನು ಹಸಿವು ಪೀಡಿಸುತ್ತಿದೆ. ನಿನ್ನ ಸೇವಕರಾದ ನಾವು ಈಗೇನುಮಾಡೋಣ? ದಯವಿಟ್ಟು ಹೇಳು.

೮. ಈ ರೀತಿಯಾದ ಆ ಬಾಲಕರ ಮಾತನ್ನು ಕೇಳಿ ದಯಾಮಯನಾದ ಶ್ರೀಕೃಷ್ಣನು ಪ್ರಸನ್ನಮುಖನಾಗಿ ಹಿತವೂ ಸತ್ಯವೂ ಆದ ಕೆಲವು ಮಾತುಗಳ ನ್ನಾಡಿದನು.

೯. ಶ್ರೀಕೃಷ್ಣ :— ಎಲೈ ಬಾಲಕರೇ, ನೀವೆಲ್ಲರೂ ಬ್ರಾಹ್ಮಣರು ಯಾಗ ಮಾಡುವ ಪವಿತ್ರವಾದ ಸ್ಥಳಕ್ಕೆ ಹೋಗಿ, ಯಜ್ಞಕರ್ಮದಲ್ಲಿ ನಿರತರಾದ ಬ್ರಾಹ್ಮಣರನ್ನು ಕುರಿತು ಅನ್ನವನ್ನು ಬೇಡುವವರಾಗಿ.

೧೦. ಅಂಗಿರಸ ಗೋತ್ರೋತ್ಪನ್ನರೂ, ಶ್ರುತಿಸ್ಮೃತಿವಿಶಾರದರೂ ಆದ ಬ್ರಾಹ್ಮಣರು ಶ್ರೀವನದ ಸಮೀಪದಲ್ಲಿರುವ ತಮ್ಮ ಆಶ್ರಮದಲ್ಲಿ ಯಜ್ಞಕರ್ಮ ವನ್ನಾಚರಿಸುತ್ತಿರುವರು.

ನಿಸ್ಪೃಹಾ ವೈಷ್ಣವಾಃ ಸರ್ವೇ ಮಾಂ ಯಜನ್ತಿ ಮುಮುಕ್ಷವಃ ।
ಮಾಯಯಾ ಮಾಂ ನ ಜಾನಂತಿ ಮಾಯಾಮಾನುಷರೂಪಿಣಂ ॥ ೧೧ ॥

ನ ಚೇದ್ದದತಿ ಯುಷ್ಮಭ್ಯಂ ಅನ್ನಂ ವಿಪ್ರಾಃ ಕ್ರತೂನ್ಮುಖಾಃ ।
ತತ್ಕಾಂತಾ ಯಾಚತ ಕ್ಷಿಪ್ರಂ ದಯಾಯುಕ್ತಾಃ ಶಿಶೂನ್ಪ್ರತಿ ॥ ೧೨ ॥

ಶ್ರೀಕೃಷ್ಣವಚನಂ ಶ್ರುತ್ವಾ ಯಯುರ್ಬಾಲಕಪುಂಗವಾಃ ।
ಪುರತೋ ಬ್ರಾಹ್ಮಣಾನಾಂ ಚ ತಸ್ಥುರಾನಮ್ರಕಂಧರಾಃ ॥ ೧೩ ॥

ಇತ್ಯೂಚುರ್ಬಾಲಕಾಃ ಶೀಘ್ರಮನ್ನಂ ದತ್ತ ದ್ವಿಜೋತ್ತಮಾಃ ।
ನ ಶುಶ್ರುವುರ್ದ್ವಿಜಾಃ ಕೇಚಿತ್ಕೇಚಚ್ಛ್ರುತ್ವಾ ಸ್ಥಿರಾಃ ಸ್ಥಿತಾಃ ॥ ೧೪ ॥

ತೇ ಯಯೂ ರಂಧನಾಗಾರಂ ಬ್ರಾಹ್ಮಣ್ಯೋ ಯತ್ರ ಪಾಚಿಕಾಃ ।
ಗತ್ವಾ ಬಾಲಾ ವಿಪ್ರಭಾರ್ಯಾಃ ಪ್ರಣೇಮುರ್ನತಕಂಧರಾಃ ॥ ೧೫ ॥

---

೧೧. ಆಶಾರಹಿತರಾದ ಆ ವಿಷ್ಣುಭಕ್ತರೆಲ್ಲರೂ ಮೋಕ್ಷಕಾಮಿಗಳಾಗಿ ನನ್ನನ್ನು ಕುರಿತು ಯಾಗಮಾಡುತ್ತಿದ್ದಾರೆ. ಮಾಯೆಯ ಮೋಹಕ್ಕೊಳಗಾಗಿ ಮಾಯಾ ಮಾನುಷರೂಪಿಯಾದ ನನ್ನನ್ನು ಅವರು ಅರಿಯರು.

೧೨. ಯಜ್ಞಕಾರ್ಯದಲ್ಲಿ ನಿರತರಾದ ಆ ಬ್ರಾಹ್ಮಣರು ನಿಮಗೆ ಅನ್ನವನ್ನು ಕೊಡದಿದ್ದರೆ ಅವರ ಪತ್ನಿಯರನ್ನು ಬೇಡುವವರಾಗಿ. ಆ ಮಾತೆಯರು ಶಿಶುಗಳಲ್ಲಿ ಬಹಳ ದಯೆಯುಳ್ಳವರು.

೧೩. ಹೀಗೆಂದ ಶ್ರೀಕೃಷ್ಣನ ಮಾತನ್ನು ಕೇಳಿ, ಆ ಬಾಲಕರೆಲ್ಲರೂ ಯಾಗ ಮಂಟಪಕ್ಕೆ ಹೋಗಿ ಆ ಬ್ರಾಹ್ಮಣರ ಮುಂದೆ ವಿನಯದಿಂದ ತಲೆಬಾಗಿ ನಿಂತರು.

೧೪. ಎಲೈ ಬ್ರಾಹ್ಮಣೋತ್ತಮರೇ, ಹಸಿವಿನಿಂದ ಪೀಡಿತರಾದ ನಮಗೆ ಅನ್ನದಾನಮಾಡಿ ಎಂದು ಬೇಡಿದರು. ಈ ಮಾತನ್ನು ಅಲ್ಲಿದ್ದ ಕೆಲವು ದ್ವಿಜರು ಕಿವಿಗೆ ಹಾಕಿಕೊಳ್ಳಲೇ ಇಲ್ಲ. ಕೆಲವರು ಕೇಳಿಯೂ ಕೇಳದಂತೆ ಸುಮ್ಮನಿದ್ದರು.

೧೫. ಆಗ ಅವರ ಪತ್ನಿಯರು ಅಡಿಗೆಮಾಡುತ್ತಿದ್ದ ಸ್ಥಳಕ್ಕೇ ಆ ಬಾಲಕರು ಹೋಗಿ ಆ ಬ್ರಾಹ್ಮಣಪತ್ನಿಯರಿಗೆ ವಿನಯದಿಂದ ತಲೆಬಾಗಿ ವಂದಿಸಿದರು

ನತ್ವೋಚುರ್ಬಾಲಕಾಃ ಸರ್ವೇ ವಿಪ್ರಭಾರ್ಯಾಃ ಪತಿವ್ರತಾಃ ।
ಅನ್ನಂ ದತ್ತ ಮಾತರೋಽಸ್ಮಾನ್ಕ್ಷುಧಾರ್ತಾನ್ಬಾಲಕಾನಪಿ ॥ ೧೬ ॥

ಬಾಲಾನಾಂ ವಚನಂ ಶ್ರುತ್ವಾ ದೃಷ್ಟ್ವಾ ತಾಂಶ್ಚ ಮನೋಹರಾನ್ ।
ಪಪ್ರಚ್ಛುಃ ಸಾದರಂ ಸಾಧ್ವ್ಯಃ ಸ್ಮೇರಾನನ ಸರೋರುಹಾಃ ॥ ೧೭ ॥

॥ ವಿಪ್ರಪತ್ನ್ಯ ಊಚುಃ ॥

ಕೇ ಯೂಯಂ ಪ್ರೇಷಿತಾ ಕೇನ ಕಾನಿ ನಾಮಾನಿ ಕೋವಿದಾಃ ।
ದಾಸ್ಯಾಮೋಽನ್ನಂ ಬಹುವಿಧಂ ವ್ಯಂಜನೈಃ ಸಹಿತಂ ವರಂ ॥ ೧೮ ॥

ಬ್ರಾಹ್ಮಣೀನಾಂ ವಚಃ ಶ್ರುತ್ವಾ ತಾ ಊಚುಸ್ತೇ ಮುದಾನ್ವಿತಾಃ ।
ಸ್ನಿಗ್ಧಾ ಹಸಂತಃ ಸ್ಮಿತಾಶ್ಚ ಸರ್ವೇ ಗೋಪಾಲಬಾಲಕಾಃ ॥ ೧೯ ॥

---

೧೬. ಈ ರೀತಿ ವಂದಿಸಿದನಂತರ ಪರಮಪತಿವ್ರತೆಯರಾದ ಆ ಬ್ರಾಹ್ಮಣ ಪತ್ನಿಯರನ್ನು ಕುರಿತು 'ಎಲೌ ಮಾತೆಯರೇ, ಹಸಿವಿನಿಂದ ಪೀಡಿತರಾದ ನಮಗೆ ಅನ್ನದಾನಮಾಡುವವರಾಗಿ' ಎಂದು ಬೇಡಿಕೊಂಡರು.

೧೭. ಆ ಬಾಲಕರ ಮಾತುಗಳನ್ನು ಕೇಳಿ, ಅವರ ಮುದ್ದುಮುಖವನ್ನು ನೋಡಿ ಆ ಸಾಧ್ವೀಮಣಿಯರು ಪ್ರಸನ್ನವದನೆಯರಾಗಿ ಆದರಪೂರ್ವಕವಾಗಿ ಈ ಮಾತುಗಳನ್ನು ಹೇಳಿದರು.

೧೮. ಬ್ರಾಹ್ಮಣ ಪತ್ನಿಯರು :—ಎಲೈ ಬಾಲಕರೇ, ನೀವು ಯಾರು? ನಿಮ್ಮನ್ನು ಇಲ್ಲಿಗೆ ಕಳುಹಿಸಿದವರಾರು? ಜ್ಞಾನಿಗಳಾದ ನಿಮ್ಮ ಹೆಸರೇನು? ನಿಮಗೆ ವಿವಿಧ ಪರಿಕರಗಳಿಂದ ಕೂಡಿದ ಅಮೃತಾನ್ನವನ್ನೀಯುವೆವು.

೧೯. ಬ್ರಾಹ್ಮಣಪತ್ನಿಯರಾಡಿದ ಈ ಮಾತುಗಳನ್ನು ಕೇಳಿ ಆ ಗೋಪ ಬಾಲಕರೆಲ್ಲರೂ ಸಂತೋಷಭರಿತರಾಗಿ ನಗುನಗುತ್ತಾ ಮುಂದೆ ಹೇಳುವ ಕೆಲವು ವಿನಯನುಡಿಗಳನ್ನಾಡಿದರು.

ಪ್ರೇಷಿತಾ ರಾಮಕೃಷ್ಣಾಭ್ಯಾಂ ವಯಂ ಕ್ಷುತ್ಪೀಡಿತಾ ಭೃಶಂ।
ದತ್ತಾನ್ನಂ ಮಾತರೋಽಸ್ಮಭ್ಯಂ ಕ್ಷಿಪ್ರಂ ಯಾಮಸ್ತದಂತಿಕಂ　　॥ ೨೦ ॥

ಇತೋ ವಿದೂರೇ ಭಾಂಡೀರೇ ವನಾಭ್ಯಂತರಮೇವ ಚ।
ವಟಮೂಲೇ ಮಧುವನೇ ವಸಂತೌ ರಾಮಕೇಶವೌ　　॥ ೨೧ ॥

ವಿಶ್ರಾಂತೌ ಕ್ಷುಧಿತೌ ತೌ ಚ ಯಾಚೇತೇಽನ್ನಂ ಚ ಮಾತರಃ।
ಕಿಮುದೇಯಮದೇಯಂ ವಾ ಶೀಘ್ರಂ ವದತ ನೋಽಧುನಾ　　॥ ೨೨ ॥

ಗೋಪಾನಾಂ ವಚನಂ ಶ್ರುತ್ವಾ ಹೃಷ್ಟಾನಂದಾಶ್ರುಲೋಚನಾಃ।
ಪುಲಕಾಂಕಿತಸರ್ವಾಂಗಾಸ್ತತ್ಪಾದಾಬ್ಜಮನೋರಥಾಃ　　॥ ೨೩ ॥

---

೨೦. ಬಾಲಕರು :—ಎಲೌ ಮಾತೆಯರೇ, ಹಸಿವಿನಿಂದ ಪೀಡಿತರಾದ ನಾವು ಬಲರಾಮಕೃಷ್ಣರಿಂದ ಪ್ರೇರಿತರಾಗಿ ಇಲ್ಲಿಗೆ ಬಂದೆವು. ಆದಕಾರಣ ನಮಗೆ ಜಾಗ್ರತೆ ಅನ್ನವನ್ನು ಉಣಬಡಿಸಿ, ನಾವು ಪುನಃ ಅವರ ಸಮೀಪಕ್ಕೆ ಹೋಗಬೇಕು.

೨೧. ಇಲ್ಲಿಗೆ ಸ್ವಲ್ಪ ದೂರದಲ್ಲಿರುವ ಭಾಂಡೀರವೆಂಬ ವನದ ಅಂತರ್ಗತವಾದ ಮಧುವನದಲ್ಲಿ ಆಲದಮರದಕೆಳಗೆ ಬಲರಾಮಕೃಷ್ಣರು ವಿಹರಿಸುತ್ತಿದ್ದಾರೆ.

೨೨. ಅವರೂ ಕೂಡ ಆಟವಾಡಿ ಬಳಲಿ ಹಸಿವಿನಿಂದ ಪೀಡಿತರಾಗಿ ಅನ್ನವನ್ನು ಬೇಡುತ್ತಿದಾರೆ. ಎಲೌ ಮಾತೆಯರೇ, ನೀವು ನಮಗೆ ಅನ್ನದಾನ ಮಾಡುವಿರೋ ಇಲ್ಲವೋ ಎಂಬುದನ್ನು ದಯವಿಟ್ಟು ಹೇಳಿ.

೨೩. ಆ ಗೋಪಾಲಕರ ಮಾತನ್ನು ಕೇಳಿ ಸಂತಸಗೊಂಡ ಆ ವಿಪ್ರಪತ್ನಿಯರು ರೋಮಾಂಚಿತ ಶರೀರರಾಗಿ ಕಣ್ಣುಗಳಲ್ಲಿ ಆನಂದಬಾಷ್ಪವನ್ನು ಸುರಿಸುತ್ತ ಶ್ರೀಕೃಷ್ಣನ ಪಾದಕಮಲಗಳನ್ನು ಸ್ಮರಿಸಿಕೊಂಡರು

ನಾನಾವ್ಯಂಜನಸಂಯುಕ್ತಂ ಶಾಲ್ಯನ್ನಂ ಸುಮನೋಹರಂ ।
ಪಾಯಸಂ ಪಿಷ್ಟಕಂ ಸ್ವಾದು ದಧಿ ಕ್ಷೀರಂ ಘೃತಂ ಮಧು ॥ ೨೪ ॥

ರೌಪ್ಯೇ ಕಾಂಸ್ಯೇ ರಾಜತೇ ಚ ಪಾತ್ರೇ ಕೃತ್ವಾ ಮುದಾನ್ವಿತಾಃ ।
ತಾಃ ಸರ್ವಾ ವಿಪ್ರಪತ್ನ್ಯಶ್ಚ ಪ್ರಯಯುಃ ಕೃಷ್ಣಸನ್ನಿಧಿಂ ॥ ೨೫ ॥

ನಾನಾಮನೋರಥಂ ಕೃತ್ವಾ ಮನಸಾ ಗಮನೋತ್ಸುಕಾಃ ।
ಪತಿವ್ರತಾಸ್ತಾ ಧನ್ಯಾಶ್ಚ ಶ್ರೀಕೃಷ್ಣದರ್ಶನೋತ್ಸುಕಾಃ ॥ ೨೬ ॥

ಶ್ರೀಕೃಷ್ಣಂ ದದೃಶುರ್ಗತ್ವಾ ರಾಮಂ ಚ ಸಹ ಬಾಲಕಂ ।
ವಟಮೂಲೇ ವಸಂತಂ ತಮುಡುಮಧ್ಯೇ ಯಥೋಡುಪಂ ॥ ೨೭ ॥

ಶ್ಯಾಮಂ ಕಿಶೋರವಯಸಂ ಪೀತಕೌಶೇಯವಾಸಸಂ ।
ಸುಂದರಂ ಸಸ್ಮಿತಂ ಶಾಂತಂ ರಾಧಾಕಾಂತಂ ಮನೋಹರಂ ॥ ೨೮ ॥

೨೪-೨೫. ಅಲ್ಲದೆ ಅನೇಕ ಪರಿಕರಗಳಿಂದ ಕೂಡಿದ ಮಧುರವಾದ ಶಾಲ್ಯಾನ್ನವನ್ನೂ ಪಾಯಸ ಮತ್ತು ತಂಬಿಟ್ಟನ್ನೂ ಮೊಸರು, ಹಾಲು, ತುಪ್ಪ ಮತ್ತು ಜೇನುತುಪ್ಪವನ್ನೂ ಬೆಳ್ಳಿ ಮತ್ತು ಕಂಚಿನ ಪಾತ್ರೆಗಳಲ್ಲಿಟ್ಟುಕೊಂಡು ಸಂತೋಷಭರಿತರಾಗಿ ಆ ವಿಪ್ರಪತ್ನಿಯರೆಲ್ಲರೂ ಶ್ರೀಕೃಷ್ಣನ ಸನ್ನಿಧಿಗೆ ತೆರಳಿದರು.

೨೬. ಮನಸ್ಸಿನಲ್ಲಿ ಅನೇಕ ಅಭಿಲಾಷೆಗಳನ್ನು ಹೊಂದಿ, ಮನೋವೇಗದಲ್ಲೇ ಹೋಗಲಿಚ್ಛೆಯುಳ್ಳ ಆ ಪತಿವ್ರತಾಶಿರೋಮಣಿಯರೆಲ್ಲರೂ 'ಎಂದಿಗೆ ಶ್ರೀಕೃಷ್ಣನ ದರ್ಶನವನ್ನು ಪಡೆದು ಧನ್ಯರಾಗುವೆವು' ಎಂದುಕೊಂಡರು.

೨೭. ಮಧುವನಕ್ಕೆ ಹೋಗಿ ವಟವೃಕ್ಷದ ಕೆಳಗೆ ಗೋಪಾಲಬಾಲಕರ ಮಧ್ಯದಲ್ಲಿರುವ ಶ್ರೀಕೃಷ್ಣನನ್ನೂ, ಬಲರಾಮನನ್ನೂ ನೋಡಿ ನಕ್ಷತ್ರಗಳ ಮಧ್ಯದಲ್ಲಿ ಬೆಳಗುವ ಚಂದ್ರನನ್ನು ನೋಡಿದಂತೆ ಆನಂದಿಸಿದರು.

೨೮. ಶ್ಯಾಮವರ್ಣನೂ, ನವಯುವಕನೂ, ಪೀತಾಂಬರಧಾರಿಯೂ, ಸುಂದರನೂ, ಸ್ಮಿತವದನನೂ, ಶಾಂತನೂ, ಮನೋಹರನೂ ಆದ ರಾಧಾಕಾಂತನನ್ನು ನೋಡಿದರು.

ಶರತ್ಪಾರ್ವಣ ಚಂದ್ರಾಸ್ಯಂ ರತ್ನಾಲಂಕಾರಭೂಷಿತಂ।
ರತ್ನಕುಂಡಲಯುಗ್ಮಾಭ್ಯಾಂ ಗಂಡಸ್ಥಲವಿರಾಜಿತಂ　॥ ೨೯ ॥

ರತ್ನಕೇಯೂರವಲಯ ರತ್ನನೂಪುರಭೂಷಿತಂ ।
ಆಜಾನುಲಂಬಿತಾಂ ಶುಭ್ರಾಂ ಬಿಭ್ರತಂ ರತ್ನಮಾಲಿಕಾಂ　॥ ೩೦ ॥

ಮಾಲತೀಮಾಲಯಾ ಕಂಠವಕ್ಷಃಸ್ಥಲವಿರಾಜಿತಂ ।
ಚಂದನಾಗುರುಕಸ್ತೂರೀ ಕುಂಕುಮಾಂಚಿತವಿಗ್ರಹಂ　॥ ೩೧ ॥

ಸುನಖಂ ಸುಕಪೋಲಂ ಚ ಪಕ್ವಬಿಂಬಾಧರಂ ವರಂ ।
ಪಕ್ವದಾಡಿಮಬೀಜಾಭಂ ಬಿಭ್ರತಂ ದಂತಮುತ್ತಮಂ　॥ ೩೨ ॥

ಶಿಖಿಪಿಚ್ಛಸಮಾಯುಕ್ತಂ ಬದ್ಧಚೂಡಂ ಪರಾತ್ಪರಂ ।
ಕದಂಬಪುಷ್ಪಯುಗ್ಮಾಭ್ಯಾಂ ಕರ್ಣಮೂಲೇ ವಿರಾಜಿತಂ　॥ ೩೩ ॥

---

೨೯. ಶರತ್ಪೂರ್ಣಿಮಾಚಂದ್ರನಂತಿರುವ ಮುಖದಿಂದ ಮನೋಹರನಾಗಿ ರತ್ನಾಲಂಕಾರಗಳನ್ನು ತೊಟ್ಟು ಕಪೋಲದಲ್ಲಿ ಪ್ರತಿಬಿಂಬಿತವಾಗಿರುವ ರತ್ನ ಕುಂಡಲಗಳಿಂದ ಆ ಶ್ರೀಕೃಷ್ಣನು ಶೋಭಿಸುತ್ತಿದ್ದನು.

೩೦. ರತ್ನನಿರ್ಮಿತವಾದ ಬಾಹುಪುರಿ, ಕಂಕಣ ಮತ್ತು ಕಾಲ್ಗೊಲಸುಗಳಿಂದ ಭೂಷಿತನಾಗಿ, ಮಂಡಿಯವರೆಗೆ ಜೋಲಾಡುವ ಮನೋಹರವಾದ ರತ್ನಮಾಲಿಕೆಯನ್ನು ಧರಿಸಿದ್ದನು.

೩೧. ವಕ್ಷಃಸ್ಥಲದಲ್ಲಿ ಜಾಜೀಹೂಮಾಲೆಯನ್ನು ಧರಿಸಿ ಶರೀರಕ್ಕೆಲ್ಲ ಚಂದನ, ಅಗುರು, ಕಸ್ತೂರಿ ಮತ್ತು ಕುಂಕುಮಕೇಸರಿಯನ್ನು ಲೇಪಿಸಿಕೊಂಡಿದ್ದನು.

೩೨. ಹೊಳಪಾದ ಉಗುರುಗಳಿಂದಲೂ, ಕಪೋಲಸ್ಥಲದಿಂದಲೂ ಶೋಭಿತನಾಗಿ ಪಕ್ವವಾದ ಬಿಂಬಫಲದಂತಿರುವ ಕೆಳತುಟಿಯಿಂದಲೂ ಪಕ್ವವಾದ ದಾಳಿಂಬೆ ಬೀಜದಂತಿರುವ ಹಲ್ಲುಗಳ ಸಾಲಿನಿಂದಲೂ ಕೂಡಿ ಮನೋಹರನಾಗಿದ್ದನು.

೩೩. ತಲೆಗೂದಲನ್ನು ಬಾಚಿಕಟ್ಟಿ ಶಿಖೆಯಲ್ಲಿ ನವಿಲುಗರಿಯನ್ನು ಸಿಕ್ಕಿಸಿಕೊಂಡಿದ್ದನು. ಕಿವಿಯ ಮೇಲೆ ಎರಡು ಕದಂಬಪುಷ್ಪದ ಗೊಂಚಲನ್ನು ಧರಿಸಿದ್ದನು.

ಧ್ಯಾನಾಸಾಧ್ಯಂ ಯೋಗಿನಾಂ ಚ ಭಕ್ತಾನುಗ್ರಹಕಾತರಂ ।
ಬ್ರಹ್ಮೇಶಧರ್ಮಶೇಷೇಂದ್ರೈಃ ಸ್ತೂಯಮಾನಂ ಮುನೀಶ್ವರೈಃ ॥ ೩೪ ॥

ದೃಷ್ಟ್ವೈವಮೀಶ್ವರಂ ಭಕ್ತ್ಯಾ ಪ್ರಣೇಮುರ್ದ್ವಿಜಯೋಷಿತಃ ।
ಸ್ವಾನಾಂ ಜ್ಞಾನಾನುರೂಪಂ ಚ ತುಷ್ಟುವುರ್ಮಧುಸೂದನಂ ॥ ೩೫ ॥

॥ ವಿಪ್ರಪತ್ನ್ಯ ಊಚುಃ ॥

ತ್ವಂ ಬ್ರಹ್ಮ ಪರಮಂ ಧಾಮ ನಿರೀಹೋ ನಿರಹಂಕೃತಿಃ ।
ನಿರ್ಗುಣಶ್ಚ ನಿರಾಕಾರಃ ಸಾಕಾರಃ ಸಗುಣಃ ಸ್ವಯಂ ॥ ೩೬ ॥

ಸಾಕ್ಷಿರೂಪಶ್ಚ ನಿರ್ಲಿಪ್ತಃ ಪರಮಾತ್ಮಾ ನಿರಾಕೃತಿಃ ।
ಪ್ರಕೃತಿಃ ಪುರುಷಸ್ತ್ವಂ ಚ ಕಾರಣಂ ಚ ತಯೋಃ ಪರಂ ॥ ೩೭ ॥

---

೩೪. ಯೋಗಿಗಳ ಧ್ಯಾನಕ್ಕೂ ಅಗಮ್ಯನಾದ ಆ ಪರಮಾತ್ಮನು ಭಕ್ತಾನುಗ್ರಹಪರನಾಗಿದ್ದನು. ಬ್ರಹ್ಮ, ಈಶ, ಧರ್ಮ, ಶೇಷ ಮತ್ತು ಇಂದ್ರನೇ ಮುಂತಾದ ದೇವತೆಗಳೂ, ಮುನೀಂದ್ರರೂ ಆ ಪರಮಾತ್ಮನನ್ನು ಸ್ತುತಿಸುತ್ತಿದ್ದರು.

೩೫. ಈ ರೀತಿಯಾದ ಪರಮಾತ್ಮನನ್ನು ನೋಡಿ ಆ ದ್ವಿಜಪತ್ನಿಯರೆಲ್ಲರೂ ಭಕ್ತಿಯಿಂದ ಸಾಷ್ಟಾಂಗವೆರಗಿದರು ಅಲ್ಲದೆ ತಮ್ಮ ತಮ್ಮ ಜ್ಞಾನಕ್ಕೆ ಅನುಗುಣವಾಗಿ ಮಧುಸೂದನನನ್ನು ಸ್ತುತಿಸಿದರು.

೩೬. ವಿಪ್ರಪತ್ನಿಯರು :—ಎಲೈ ಮಧುಸೂದನನೇ, ಇಚ್ಛಾರಹಿತನೂ, ನಿರಹಂಕಾರನೂ ಆದ ನೀನೇ ಪರಬ್ರಹ್ಮಸ್ವರೂಪನಾಗಿರುವೆ. ನಿರ್ಗುಣನೂ, ನಿರಾಕಾರನೂ ಆದ ನೀನೇ ಭಕ್ತಾನುಗ್ರಹಕ್ಕಾಗಿ ಸಗುಣನೂ, ಸಾಕಾರನೂ ಆಗುವೆ.

೩೭. ವಿಷಯಗಳ ಸಂಗರಹಿತನೂ, ಸಾಕ್ಷಿಸ್ವರೂಪನೂ, ನಿರಾಕಾರನೂ ಆದ ನೀನೇ ಪರಮಾತ್ಮನೆನಿಸುವೆ. ಪ್ರಕೃತಿರೂಪದಿಂದಲೂ, ಪುರುಷರೂಪದಿಂದಲೂ ತೋರುವ ನೀನೇ ಅವರಿಬ್ಬರಿಗೂ ಮೇಲಾಗಿ ಆದಿಕಾರಣನಾಗಿರುವೆ.

ಸೃಷ್ಟಿಸ್ಥಿತ್ಯಂತವಿಷಯೇ ಯೇ ಚ ದೇವಾಸ್ತ್ರಯಃ ಸ್ಮೃತಾಃ ।
ತೇ ತ್ವದಂಶಾಃ ಸರ್ವಬೀಜಾ ಬ್ರಹ್ಮವಿಷ್ಣುಮಹೇಶ್ವರಾಃ ॥ ೩೮ ॥

ಯಸ್ಯ ಲೋಮ್ನಾಂ ಚ ವಿವರೇ ಚಾಖಿಲಂ ವಿಶ್ವಮೀಶ್ವರ ।
ಮಹಾವಿರಾಣ್ಮಹಾವಿಷ್ಣುಸ್ತ್ವಂ ತಸ್ಯ ಜನಕೋ ವಿಭೋ ॥ ೩೯ ॥

ತೇಜಸ್ತ್ವಂ ಚಾಪಿ ತೇಜಸ್ವೀ ಜ್ಞಾನಂ ಜ್ಞಾನೀ ಚ ತತ್ಪರಃ ।
ವೇದೇಽನಿರ್ವಚನೀಯಸ್ತ್ವಂ ಕಸ್ತ್ವಾಂ ಸ್ತೋತುಮಿಹೇಶ್ವರಃ ॥ ೪೦ ॥

ಮಹದಾದಿಸೃಷ್ಟಿಸೂತ್ರಂ ಪಂಚತನ್ಮಾತ್ರಮೇವ ಚ ।
ಬೀಜಂ ತ್ವಂ ಸರ್ವಶಕ್ತೀನಾಂ ಸರ್ವಶಕ್ತಿಸ್ವರೂಪಕಃ ॥ ೪೧ ॥

---

೩೮. ಸೃಷ್ಟಿಸ್ಥಿತಿಲಯಗಳಿಗೆ ಕಾರಣನೆನಿಸಿದ ಯಾವ ಬ್ರಹ್ಮ ವಿಷ್ಣು ಮಹೇಶ್ವರರೆಂಬ ತ್ರಿಮೂರ್ತಿಗಳುಂಟೋ ಅವರೂ ಕೂಡ ಸರ್ವಕಾರಣನಾದ ನಿನ್ನ ಅಂಶದಿಂದಲೇ ಅವತರಿಸಿದರು.

೩೯. ಎಲೈ ವಿಶ್ವವ್ಯಾಪಕನೇ, ಯಾರ ರೋಮ ಕೂಪಗಳಲ್ಲಿ ನಿಖಿಲವಾದ ವಿಶ್ವವೂ ಐಕ್ಯವಾಗಿರುವುದೋ ಮಹಾವಿರಾಡ್ರೂಪನಾದ ಆ ಮಹಾವಿಷ್ಣುವಿಗೂ ಕೂಡ ನೀನೇ ಜನಕನೆನಿಸುವೆ.

೪೦. ತೇಜೋರೂಪನೂ, ತೇಜಸ್ಸುಳ್ಳವನೂ, ಜ್ಞಾನಸ್ವರೂಪನೂ, ಜ್ಞಾನಿಯೂ ಎನಿಸುವ ನೀನೇ ಇವುಗಳೆಲ್ಲಕ್ಕಿಂತಲೂ ಮಿಗಿಲಾಗಿರುವೆ. ಚತುರ್ವೇದಗಳೇ ನಿನ್ನನ್ನು ವರ್ಣಿಸಲಾಗದಿರುವಾಗ ನಿನ್ನನ್ನು ಸ್ತುತಿಸಲು ಸಮರ್ಥರಾರು?

೪೧. ಮಹತ್ತು ಮತ್ತು ಅಹಂಕಾರವೆಂಬ ತತ್ವಸ್ವರೂಪನೂ, ಪೃಥಿವಿ, ಅಪ್ಪು, ತೇಜಸ್ಸು, ವಾಯು ಮತ್ತು ಆಕಾಶವೆಂಬ ಪಂಚತನ್ಮಾತ್ರಸ್ವರೂಪನೂ ನೀನೇ ಆಗಿರುವೆ. ಸರ್ವಶಕ್ತಿಸ್ವರೂಪನಾದ ನೀನು ಸಕಲ ಶಕ್ತಿಗಳಿಗೂ ಬೀಜರೂಪನಾಗಿರುವೆ.

ಸರ್ವಶಕ್ತೀಶ್ವರಃ ಸರ್ವಃ ಸರ್ವಶಕ್ತ್ಯಾಶ್ರಯಃ ಮುದಾ ।
ತ್ವಮನೀಹಃ ಸ್ವಯಂಜ್ಯೋತಿಃ ಸರ್ವಾನಂದಃ ಸನಾತನಃ ॥ ೪೨ ॥

ಅಹೋಽಪ್ಯಾಕಾರಹೀನಸ್ತ್ವಂ ಸರ್ವವಿಗ್ರಹವಾನಪಿ ।
ಸರ್ವೇಂದ್ರಿಯಾಣಾಂ ವಿಷಯಂ ಜಾನಾಸಿ ನೇಂದ್ರಿಯೀ ಭವಾನ್ ॥ ೪೩ ॥

ಸರಸ್ವತೀ ಜಡೀಭೂತಾ ಯತ್ಸ್ತೋತ್ರೇ ಯನ್ನಿರೂಪಣೇ ।
ಜಡೀಭೂತೋ ಮಹೇಶಶ್ಚ ಶೇಷೋ ಧರ್ಮೋ ವಿಧಿಃ ಸ್ವಯಂ ॥ ೪೪ ॥

ಪಾರ್ವತೀ ಕಮಲಾ ರಾಧಾ ಸಾವಿತ್ರೀ ವೇದಸೂರಪಿ ।
ವೇದಶ್ಚ ಜಡತಾಂ ಯಾತಿ ಕೇ ವಾ ಶಕ್ತಾ ವಿಪಶ್ಚಿತಃ ॥ ೪೫ ॥

ವಯಂ ಕಿಂ ಸ್ತವನಂ ಕುರ್ಮಃ ಸ್ತ್ರಿಯಃ ಪ್ರಾಣೇಶ್ವರೇಶ್ವರ ।
ಪ್ರಸನ್ನೋ ಭವ ನೋ ದೇವ ದೀನಬಂಧೋ ಕೃಪಾಂ ಕುರು ॥ ೪೬ ॥

---

೪೨. ಸಕಲ ಶಕ್ತಿಗಳಿಗೆ ಒಡೆಯನೂ, ಸಕಲಶಕ್ತಿಗಳಿಗೆ ಆಶ್ರಯನೂ ಆದ ನೀನು ಇಚ್ಛಾರಹಿತನೂ, ಸ್ವಯಂಜ್ಯೋತಿಃಸ್ವರೂಪನೂ, ಸಕಲರಿಗೂ ಆನಂದ ದಾಯಕನೂ ಅನಾದಿಯೂ ಎನಿಸಿರುವೆ.

೪೩. ನೀನು ನಿರಾಕಾರನಾದರೂ ಕೂಡ ಭಕ್ತಾನುಗ್ರಹಕ್ಕಾಗಿ ಸಕಲವಿಗ್ರವನ್ನೂ ಧರಿಸುವೆ. ನೀನು ಇಂದ್ರಿಯರಹಿತನಾದರೂ ಸಕಲೇಂದ್ರಿಯಗಳ ವಿಷಯವನ್ನೂ ಬಲ್ಲವನಾಗಿರುವೆ.

೪೪. ಯಾವ ನಿನ್ನ ಸ್ವರೂಪವನ್ನು ನಿರೂಪಣೆ ಮಾಡಲು ಮತ್ತು ಸ್ತುತಿಸಲು ಸರಸ್ವತಿಯೇ ಮೂಕಳಾಗುವಳೋ ಅಂಥ ನಿನ್ನನ್ನು ಮಹೇಶನೂ, ಶೇಷನೂ, ಧರ್ಮಪುರುಷನೂ, ಮತ್ತು ಬ್ರಹ್ಮನೂ ಸ್ತುತಿಸಬಲ್ಲರೇ?

೪೫. ಪಾರ್ವತಿ, ಲಕ್ಷ್ಮಿ, ರಾಧೆ ಮತ್ತು ವೇದಮಾತೆಯಾದ ಸಾವಿತ್ರೀ ದೇವಿಯರೂ, ಚತುರ್ವೇದಗಳೂ, ನಿನ್ನನ್ನು ಸ್ತುತಿಸಲಾರದೆ ಜಡತ್ವವನ್ನು ಹೊಂದುವಾಗ ಯಾವ ವಿದ್ವಾಂಸರು ತಾನೇ ನಿನ್ನನ್ನು ಸ್ತುತಿಸಬಲ್ಲರು.

೪೬. ಹೀಗಿರುವಾಗ ನಮ್ಮ ಪ್ರಾಣೇಶ್ವರರಿಗೂ ಈಶ್ವರನಾದ ಎಲೈ ಪರಮಾತ್ಮನೇ, ಅಜ್ಞಾನಿಗಳಾದ ನಾವು ನಿನ್ನನ್ನು ಎಂತು ಸ್ತುತಿಸೋಣ? ದೀನಬಂಧುವಾದ ಎಲೈ ದೇವನೇ, ನಮ್ಮಲ್ಲಿ ಪ್ರಸನ್ನನಾಗಿ ದಯೆಯನ್ನು ತೋರು.

ಇತಿ ಪೇತುಶ್ಚ ತಾ ವಿಪ್ರಪತ್ನ್ಯಸ್ತಚ್ಚರಣಾಂಬುಜೇ ।
ಅಭಯಂ ಪ್ರದದೌ ತಾಭ್ಯಃ ಪ್ರಸನ್ನವದನೇಕ್ಷಣಃ ॥ ೪೭ ॥

ವಿಪ್ರಪತ್ನೀಕೃತಂ ಸ್ತೋತ್ರಂ ಪೂಜಾಕಾಲೇ ಚ ಯಃ ಪಠೇತ್ ।
ಸ ಗತಿಂ ವಿಪ್ರಪತ್ನೀನಾಂ ಲಭತೇ ನಾತ್ರ ಸಂಶಯಃ ॥ ೪೮ ॥

॥ ನಾರಾಯಣ ಉವಾಚ ॥

ತಾಃ ಪದಾಂಭೋಜಪತಿತಾ ದೃಷ್ಟ್ವಾ ಶ್ರೀ ಮಧುಸೂದನಃ ।
ವರಂ ವೃಣುತ ಕಲ್ಯಾಣಂ ಭವಿತಾ ಚೇತ್ಯುವಾಚ ಹ ॥ ೪೯ ॥

ಶ್ರೀಕೃಷ್ಣಸ್ಯ ವಚಃ ಶ್ರುತ್ವಾ ವಿಪ್ರಪತ್ನ್ಯೋ ಮುದಾನ್ವಿತಾಃ ।
ತಮೂಚುರ್ವಚನಂ ಭಕ್ತ್ಯಾ ಭಕ್ತಿನಮ್ರಾತ್ಮಕಂಧರಾಃ ॥ ೫೦ ॥

---

೪೭. ಈ ರೀತಿಯಾಗಿ ಸ್ತುತಿಸಿ ಆ ವಿಪ್ರಪತ್ನಿಯರೆಲ್ಲರೂ ಆ ಪರಮಾತ್ಮನ ಚರಣಕಮಲಗಳಲ್ಲಿ ಸಾಷ್ಟಾಂಗವೆರಗಿದರು. ಆಗ ಪ್ರಸನ್ನವಾದ ಮುಖ ಮತ್ತು ಕಟಾಕ್ಷದಿಂದ ಪರಮಾತ್ಮನು ಅವರಿಗೆ ಅಭಯಕೊಟ್ಟನು.

೪೮. ವಿಪ್ರಪತ್ನಿಯರು ಹೇಳಿದ ಈ ದಿವ್ಯ ಸ್ತೋತ್ರವನ್ನು ಪೂಜಾಕಾಲದಲ್ಲಿ ಪಠನೆಮಾಡುವ ಮನುಷ್ಯನು ಆ ವಿಪ್ರಪತ್ನಿಯರಿಗೆ ದೊರೆತ ಸದ್ಗತಿಯನ್ನು ಪಡೆಯುವುದರಲ್ಲಿ ಸಂದೇಹವಿಲ್ಲ.

೪೯. ನಾರಾಯಣ:—ಆಗ ಮಧುಸೂದನನು ತನ್ನ ಪಾದಕಮಲಗಳ ಮೇಲೆ ಬಿದ್ದಿರುವ ಆ ಸ್ತ್ರೀಯರನ್ನು ನೋಡಿ ಕನಿಕರಗೊಂಡು 'ನಿಮಗೆ ಇಷ್ಟವಾದ ವರವನ್ನು ಬೇಡಿ, ನಿಮಗೆ ಕಲ್ಯಾಣವಾಗುವುದು' ಎಂದನು.

೫೦ ಈ ರೀತಿಯಾದ ಶ್ರೀಕೃಷ್ಣನ ಮಾತನ್ನು ಕೇಳಿ ಆ ವಿಪ್ರಪತ್ನಿಯರೆಲ್ಲರೂ ಸಂತೋಷಗೊಂಡು ಭಕ್ತಿಯಿಂದ ತಲೆಬಾಗಿ ವಿನಯದಿಂದ ಮುಂದೆ ಹೇಳುವ ಈ ಮಾತುಗಳನ್ನು ಹೇಳಿದರು.

॥ ದ್ವಿಜಪತ್ನ್ಯ ಊಚುಃ ॥

ವರಂ ಕೃಷ್ಣ ನ ಗೃಹ್ಣೀಮೋ ನಃ ಸ್ಪೃಹಾ ತ್ವತ್ಪದಾಂಬುಜೇ ।
ದೇಹಿ ತ್ವಂ ದಾಸ್ಯಮಸ್ಮಭ್ಯಂ ದೃಢಾಂ ಭಕ್ತಿಂ ಸುದುರ್ಲಭಾಂ ॥ ೫೧ ॥

ಪಶ್ಯಾಮೋಽನುಕ್ಷಣಂ ವಕ್ತ್ರಸರೋಜಂ ತವ ಕೇಶವ ।
ಅನುಗ್ರಹಂ ಕುರು ವಿಭೋ ನ ಯಾಸ್ಯಾಮೋ ಗೃಹಂ ಪುನಃ ॥ ೫೨ ॥

ದ್ವಿಜಪತ್ನೀವಚಃ ಶ್ರುತ್ವಾ ಶ್ರೀಕೃಷ್ಣಃ ಕರುಣಾನಿಧಿಃ ।
ಓಮಿತ್ಯುಕ್ತ್ವಾ ತ್ರಿಲೋಕೇಶಸ್ತಸ್ಥೌ ಬಾಲಕಸಂಸದಿ ॥ ೫೩ ॥

ಪ್ರದತ್ತಂ ವಿಪ್ರಪತ್ನೀಭಿರ್ಮಿಷ್ಟಮನ್ನಂ ಸುಧೋಪಮಂ ।
ಬಾಲಕಾನ್ಭೋಜಯಿತ್ವಾ ತು ಸ್ವಯಂ ಚ ಬುಭುಜೇ ವಿಭುಃ ॥ ೫೪ ॥

---

೫೧. ದ್ವಿಜಪತ್ನಿಯರು :—ಎಲೈ ಶ್ರೀಕೃಷ್ಣಪರಮಾತ್ಮನೇ, ನಾವು ವರವನ್ನು ಬೇಡುವುದಿಲ್ಲ. ನಮಗೆ ನಿನ್ನ ಪಾದಕಮಲಗಳ ಸೇವೆಯಲ್ಲಿ ಅತ್ಯಾಸಕ್ತಿಯಿರುವುದು. ನಮಗೆ ಸರ್ವಸುಲಭವಲ್ಲದ ನಿನ್ನ ದಾಸ್ಯವನ್ನೂ, ದೃಢಭಕ್ತಿಯನ್ನೂ ದಯಪಾಲಿಸು.

೫೨. ಎಲೈ ಕೇಶವನೇ, ನಿನ್ನ ಮುಖಕಮಲವನ್ನು ನಾವು ಸರ್ವದಾ ನೋಡ ಬಯಸುವೆವು. ಎಲೈ ವಿಭುವೇ, ನಮಗೆ ಅನುಗ್ರಹ ಮಾಡು. ನಾವು ಮನೆಗೆ ಪುನಃ ಹಿಂತಿರುಗಿ ಹೋಗುವುದಿಲ್ಲ.

೫೩. ದ್ವಿಜಪತ್ನಿಯರಾಡಿದ ಆ ಮಾತುಗಳನ್ನು ಕೇಳಿ ಕರುಣಾಮಯನಾದ ಶ್ರೀಕೃಷ್ಣನು 'ಹಾಗೆಯೇ ಆಗಲಿ' ಎಂದು ಹೇಳಿ ತ್ರಿಲೋಕಾಧಿಪತಿಯಾದ ಅವನು ಬಾಲಕರ ಗುಂಪಿಗೆ ಸೇರಿದನು.

೫೪. ಅನಂತರ ಆ ವಿಪ್ರಪತ್ನಿಯರಿಂದ ಕೊಡಲ್ಪಟ್ಟ ಅಮೃತಕ್ಕೆ ಸಮಾನ ವಾದ ಮಿಷ್ಟಾನ್ನವನ್ನು ಆ ವಿಭುವು ಬಾಲಕರಿಗೆಲ್ಲ ಹಂಚಿಕೊಟ್ಟು ತಾನೂ ತೃಪ್ತಿಯಾಗಿ ತಿಂದನು.

ಏತಸ್ಮಿನ್ನಂತರೇ ತತ್ರ ಶಾತಕುಂಭಂ ರಥಂ ಪರಂ ।
ದದೃಶುರ್ವಿಪ್ರಪತ್ನ್ಯಶ್ಚ ಪತಂತಂ ಗಗನಾದಹೋ ॥ ೫೫ ॥

ರತ್ನದರ್ಪಣಸಂಯುಕ್ತಂ ರತ್ನಸಾರಪರಿಚ್ಛದಂ ।
ರತ್ನಸ್ತಂಭೈರ್ನಿಬದ್ಧಂ ಚ ಸದ್ರತ್ನಕಲಶೋಜ್ಜ್ವಲಂ ॥ ೫೬ ॥

ಶ್ವೇತಚಾಮರಸಂಯುಕ್ತಂ ವಹ್ನಿಶುದ್ಧಾಂಶುಕಾನ್ವಿತಂ ।
ಪಾರಿಜಾತಪ್ರಸೂನಾನಾಂ ಮಾಲಾಜಾಲೈರ್ವಿರಾಜಿತಂ ॥ ೫೭ ॥

ಶತಚಕ್ರಸಮಾಯುಕ್ತಂ ಮನೋಯಾಯಿ ಮನೋಹರಂ ।
ವೇಷ್ಟಿತಂ ಪಾರ್ಷದೈರ್ದಿವ್ಯೈರ್ವನಮಾಲಾವಿಭೂಷಿತೈಃ ॥ ೫೮ ॥

ಪೀತವಸ್ತ್ರಪರೀಧಾನೈ ರತ್ನಾಲಂಕಾರಭೂಷಿತೈಃ ।
ನವಯೌವನಸಂಪನ್ನೈಃ ಶ್ಯಾಮಲೈಃ ಸುಮನೋಹರೈಃ ॥ ೫೯ ॥

---

೫೫. ಈ ಸಮಯದಲ್ಲಿ ಅಲ್ಲಿ ಅಂತರಿಕ್ಷದಿಂದ ಇಳಿದು ಬರುತ್ತಿದ್ದ ಚಿನ್ನದ ರಥವೊಂದನ್ನು ಆ ವಿಪ್ರಪತ್ನಿಯರು ನೋಡಿದರು.

೫೬. ಆ ರಥವು ರತ್ನಗನ್ನಡಿಗಳಿಂದಲೂ, ಶ್ರೇಷ್ಠರತ್ನಗಳ ಪರಿಕರಗಳಿಂದಲೂ ಕೂಡಿದ್ದುದಲ್ಲದೆ ರತ್ನಸ್ತಂಭಗಳಿಂದ ನಿರ್ಮಿತವಾಗಿ ಶ್ರೇಷ್ಠರತ್ನಗಳ ಕಲಶದಿಂದ ಶೋಭಿಸುತ್ತಿದ್ದಿತು.

೫೭ ಬಿಳಿದಾದ ಚಾಮರಗಳಿಂದಲೂ, ಅಗ್ನಿಯಂತೆ ಪರಿಶುದ್ಧವಾದ ವಸ್ತ್ರಗಳಿಂದಲೂ ಶೋಭಿಸುತ್ತಿದ್ದ ಆ ರಥವು ಪಾರಿಜಾತಪುಷ್ಪಗಳ ಮಾಲೆಗಳಿಂದ ಅಲಂಕೃತವಾಗಿದ್ದಿತು.

೫೮. ನೂರುಚಕ್ರಗಳಿಂದ ಕೂಡಿ ಮನೋಹರವಾಗಿದ್ದ ಆ ರಥವು ಮನೋ ವೇಗದಿಂದ ಹೋಗಬಲ್ಲುದಾಗಿದ್ದಿತು. ಆ ರಥದಲ್ಲಿ ವನಮಾಲೆಯನ್ನು ಧರಿಸಿದ್ದ ದಿವ್ಯಪಾರ್ಷದರು ತುಂಬಿದ್ದರು.

೫೯. ಅವರೆಲ್ಲರೂ ಪೀತಾಂಬರವನ್ನು ಧರಿಸಿ, ರತ್ನಾಲಂಕಾರಗಳನ್ನು ತೊಟ್ಟಿದ್ದರು. ನವಯೌವನಸಂಪನ್ನರೂ, ಶ್ಯಾಮಲವರ್ಣರೂ ಆದ ಆ ಪಾರ್ಷದರು ಬಹಳ ಮನೋಹರರಾಗಿದ್ದರು.

ದ್ವಿಭುಜೈರ್ಮುರಲೀಹಸ್ತೈ ಗೋಪವೇಷಧರೈರ್ವರೈಃ ।
ಶಿಖಿಪಿಚ್ಛಗುಂಜಮಾಲಾಬದ್ಧವಕ್ರಮಚೂಡಕೈಃ ॥ ೬೦ ॥

ಅವರುಹ್ಯ ರಥಾತ್ತೂರ್ಣಂ ತೇ ಪ್ರಣಮ್ಯ ಹರೇಃ ಪದಂ ।
ರಥಮಾರೋಹಣಂ ಕರ್ತುಂ ಮೂಚುರ್ಬ್ರಾಹ್ಮಣಕಾಮಿನೀಃ ॥ ೬೧ ॥

ವಿಪ್ರಭಾರ್ಯಾ ಹರಿಂ ನತ್ವಾ ಜಗ್ಮುರ್ಗೋಲೋಕಮೀಪ್ಸಿತಂ ।
ಬಭೂವುರ್ಗೋಪಿಕಾ ಸದ್ಯಸ್ತ್ಯಕ್ತ್ವಾ ಮಾನುಷವಿಗ್ರಹಾನ್ ॥ ೬೨ ॥

ಹರಿಚ್ಛಾಯಾಂ ವಿನಿರ್ಮಾಯ ತಾಸಾಂ ಚ ವಿಷ್ಣುಮಾಯಯಾ ।
ಪ್ರಸ್ಥಾಪಯಾಮಾಸ ಗೃಹಾನ್ಬ್ರಾಹ್ಮಣಾನಾಂ ಸ್ವಯಂ ವಿಭುಃ ॥ ೬೩ ॥

ವಿಪ್ರಾಶ್ಚ ಭಾರ್ಯಾ ಉದ್ದಿಶ್ಯ ಪರಮೋದ್ವಿಗ್ನಮಾನಸಾಃ ।
ಅನ್ವೇಷಣಂ ಪ್ರಕುರ್ವಂತೋ ದದೃಶುಃ ಪಥಿ ಕಾಮಿನೀಃ ॥ ೬೪ ॥

---

೬೦. ಗೋಪವೇಷಧಾರಿಗಳಾದ ಆ ಪಾರ್ಷದರು ದ್ವಿಭುಜರೂ, ಕೊಳಲನ್ನು ಧರಿಸಿದ್ದವರೂ ಆಗಿದ್ದರು. ಚೂಡಾಪಾಶದಲ್ಲಿ ನವಿಲುಗರಿಯನ್ನು ಸೇರಿಸಿ, ಗುಲಗಂಜಿಯ ಮಾಲೆಯನ್ನು ವಕ್ರವಾಗಿ ಕಟ್ಟಿದ್ದರು.

೬೧. ಅವರೆಲ್ಲರೂ ಜಾಗ್ರತೆ ರಥದಿಂದಿಳಿದು ಶ್ರೀಹರಿಯ ಪಾದಗಳಿಗೆ ವಂದಿಸಿ, ಆ ಬ್ರಾಹ್ಮಣಪತ್ನಿಯರನ್ನು ಕುರಿತು, ರಥವನ್ನು ಹತ್ತಬೇಕೆಂದು ಕೇಳಿಕೊಂಡರು.

೬೨. ಆಗ ಆ ವಿಪ್ರಪತ್ನಿಯರೆಲ್ಲರೂ ಶ್ರೀಹರಿಗೆ ವಂದಿಸಿ ತಮಗೆ ಅಭೀಪ್ಸಿತವಾದ ಗೋಲೋಕಕ್ಕೆ ತೆರಳಿದರು. ಅಲ್ಲಿ ಮಾನುಷಶರೀರವನ್ನು ತೊರೆದು ಗೋಪಿಕೆಯರ ರೂಪವನ್ನು ಧಾರಣೆಮಾಡಿದರು.

೬೩. ಇತ್ತ ಶ್ರೀಹರಿಯು ವಿಷ್ಣುಮಾಯೆಯಿಂದ ಆ ವಿಪ್ರಪತ್ನಿಯರ ಛಾಯೆಯನ್ನು ನಿರ್ಮಾಣಮಾಡಿ ಆ ಛಾಯಾ ಸ್ತ್ರೀಯರನ್ನು ಆಯಾ ಬ್ರಾಹ್ಮಣರ ಮನೆಗೆ ಹಿಂದಕ್ಕೆ ಕಳುಹಿಸಿದನು.

೬೪. ಅಷ್ಟರಲ್ಲಿ ಆ ಬ್ರಾಹ್ಮಣರೆಲ್ಲರೂ ತಮ್ಮ ಮನೆಗಳಲ್ಲಿ ತಮ್ಮ ಪತ್ನಿಯರನ್ನು ಕಾಣದೆ ಚಿಂತಾಕ್ರಾಂತರಾಗಿ ಹುಡುಕಿಕೊಂಡು ಬರುತ್ತಾ ದಾರಿಯಲ್ಲಿ ಅವರು ಬರುತ್ತಿರುವುದನ್ನು ಕಂಡರು.

ದೃಷ್ಟ್ವೋಚುರ್ಬ್ರಾಹ್ಮಣಾಃ ಸರ್ವೇ ತಾಸ್ತೇ ಚ ವಿನಯಾನ್ವಿತಾಃ ।
ಪುಲಕಾಂಕಿತಸರ್ವಾಂಗಾಃ ಪ್ರಸನ್ನವದನೇಕ್ಷಣಾಃ ॥ ೬೫ ॥

॥ ಬ್ರಾಹ್ಮಣಾ ಊಚುಃ ॥

ಅಹೋಽತಿಧನ್ಯಾ ಯೂಯಂ ಚ ದೃಷ್ಟೋ ಯುಷ್ಮಾಭಿರೀಶ್ವರಃ ।
ಅಸ್ಮಾಕಂ ಜೀವನಂ ವ್ಯರ್ಥಂ ವೇದಪಾಠೋಽಹ್ಯನರ್ಥಕಃ ॥ ೬೬ ॥

ವೇದೇ ಪುರಾಣೇ ಸರ್ವತ್ರ ವಿದ್ವದ್ಭಿಃ ಪರಿಕೀರ್ತಿತಾಃ ।
ಹರೇರ್ವಿಭೂತಯಃ ಸರ್ವಾಃ ಸರ್ವೇಷಾಂ ಜನಕೋ ಹರಿಃ ॥ ೬೭ ॥

ತಪೋ ಜಪೋವ್ರತಂ ಜ್ಞಾನಂ ವೇದಾಧ್ಯಯನಮರ್ಚನಂ ।
ತೀರ್ಥಸ್ನಾನಮನಶನಂ ಸರ್ವೇಷಾಂ ಫಲದೋ ಹರಿಃ ॥ ೬೮ ॥

ಶ್ರೀಕೃಷ್ಣಃ ಸೇವಿತೋ ಯೇನ ತಸ್ಯ ಕಿಂ ಕರ್ಮಭಿಃ ಕೃತೈಃ ।
ಪ್ರಾಪ್ತಃ ಕಲ್ಪತರುರ್ಯೇನ ಕಿಂ ತಸ್ಯಾನ್ಯೇನ ಶಾಖಿನಾ ॥ ೬೯ ॥

---

೬೫. ಅವರು ಎಲ್ಲಿಗೆ ಹೋಗಿದ್ದರೆಂಬುದನ್ನು ತಿಳಿದ ಕೂಡಲೇ ಆ ದ್ವಿಜರು ಪ್ರಸನ್ನ ಮುಖರೂ, ರೋಮಾಂಚಿತಶರೀರರೂ ಆಗಿ ಮೃದುಮಧುರವಾಕ್ಯಗಳಿಂದ ಆ ಸ್ತ್ರೀಯರನ್ನು ಕುರಿತು ಮುಂದೆ ಹೇಳುವಂತೆ ಹೇಳಿದರು.

೬೬. ಬ್ರಾಹ್ಮಣರು ;—ಅಹೋ! ಸರ್ವೇಶ್ವರನನ್ನು ದರ್ಶನಮಾಡಿಬಂದ ನೀವೆಲ್ಲರೂ ಧನ್ಯರು. ನಾವು ಜೀವಿಸಿರುವುದು ವ್ಯರ್ಥ. ನಮ್ಮ ವೇದಾಧ್ಯಯನವೂ ನಿರರ್ಥಕವಾದುದು.

೬೭ ವೇದಪುರಾಣಗಳಲ್ಲಿ ಎಲ್ಲೆಡೆಯಲ್ಲೂ ಶ್ರೀಹರಿಯ ಅಪಾರಮಹಿಮೆಯು ವಿದ್ವಾಂಸರಿಂದ ವರ್ಣಿತವಾಗಿದೆ. ನಿಖಿಲವಿಶ್ವಕ್ಕೂ ಶ್ರೀಹರಿಯು ಆದಿಕಾರಣನು.

೬೮. ತಪಸ್ಸು, ಜಪ, ವ್ರತ, ದಿವ್ಯಜ್ಞಾನ, ವೇದಾಧ್ಯಯನ, ದೇವಾರ್ಚನೆ. ತೀರ್ಥಸ್ನಾನ ಮತ್ತು ಅನಶನವ್ರತ ಇವುಗಳೆಲ್ಲಕ್ಕೂ ಶ್ರೀಹರಿಯೇ ಫಲದಾಯಕನು

೬೯. ಶ್ರೀಕೃಷ್ಣನ ಸೇವಾಪುಣ್ಯವನ್ನು ಪಡೆದವನಿಗೆ ಇತರ ತಪಸ್ಸಿನ ಫಲಗಳಿಂದ ಆಗಬೇಕಾಮದೇನು? ಕಲ್ಪವೃಕ್ಷವನ್ನೇ ಪಡೆದವನಿಗೆ ಇತರ ವೃಕ್ಷಗಳಿಂದ ಪ್ರಯೋಜನವೇನು?

ಶ್ರೀಕೃಷ್ಣೋ ಹೃದಯೇ ಯಸ್ಯ ತಸ್ಯ ಕಿಂ ಕರ್ಮಭಿಕೃತೈಃ ।
ಕಿಂ ವಾ ನ ಸಾಗರಸ್ಯೈವ ಪೌರುಷಂ ಕೂಪಲಂಘನೇ ॥ ೭೦ ॥

ಇತ್ಯೇವಮುಕ್ತ್ವಾ ವಿಪ್ರಾಶ್ಚ ಗೃಹೀತ್ವಾ ಕಾಮಿನೀವರಾಃ ।
ಆಜಗ್ಮುಃ ಸ್ವಗೃಹಂ ಹೃಷ್ಟಾಸ್ತಾಭಿಃ ಸಾರ್ಧಂ ಚ ರೇಮಿರೇ ॥ ೭೧ ॥

ತಾಸಾಂ ತತೋಽಧಿಕಂ ಪ್ರೇಮ ಕ್ರೀಡಾಸು ಸರ್ವಕರ್ಮಸು ।
ದಾಕ್ಷಿಣ್ಯಂ ಮಾಯಯಾ ಶಕ್ತ್ಯಾ ಬ್ರಾಹ್ಮಣಾನಾಮತರ್ಕಿತಂ ॥ ೭೨ ॥

ಅಥ ನಾರಾಯಣಃ ಸೋಽಯಂ ಬಲೇನ ಶಿಶುಭಿಃ ಸಹ ।
ಜಗಾಮ ಸ್ವಾಲಯಂ ತೂರ್ಣಂ ಪೂರ್ಣಬ್ರಹ್ಮ ಸನಾತನಃ ॥ ೭೩ ॥

---

೭೦. ಯಾರ ಹೃದಯಮಂದಿರದಲ್ಲಿ ಶ್ರೀಕೃಷ್ಣಪರಮಾತ್ಮನು ಸರ್ವದಾ ನೆಲೆಸಿರುವನೋ ಅವನು ಯಾವ ಕರ್ಮಗಳನ್ನು ಮಾಡಿಸುತ್ತಾನೇ ಏನು ಫಲವನ್ನು ಪಡೆಯಬೇಕು? ವಿಸ್ತಾರವಾದ ಸಾಗರಕ್ಕೆ ಸಣ್ಣದಾದ ಒಂದು ಕೂಪವನ್ನು ಪೂರ್ಣಗೊಳಿಸುವಷ್ಟು ಸಾಮರ್ಥ್ಯವಿಲ್ಲವೇ?

೭೧ ಈ ರೀತಿಯಾಗಿ ಹೇಳಿ ಆ ಬ್ರಾಹ್ಮಣರು ತಮ್ಮ ಪತ್ನಿಯರನ್ನು ಕರೆದುಕೊಂಡು ಮನೆಗೆ ಹಿಂತಿರುಗಿ ಬಂದು ಅವರೊಡನೆ ಸಂತೋಷದಿಂದ ರಮಿಸಿಕೊಂಡಿದ್ದರು.

೭೨. ಮಾಯಾಶಕ್ತಿಯಿಂದ ಆ ಕಾಮಿನಿಯರು ಮೊದಲಿಗಿಂತ ವಿಶೇಷವಾದ ಪ್ರೇಮವನ್ನೂ, ಸಕಲಕರ್ಮಗಳಲ್ಲಿ ದಾಕ್ಷಿಣ್ಯವನ್ನೂ ತೋರುತ್ತಿದ್ದುದು ಆ ಬ್ರಾಹ್ಮಣರ ಸಂಶಯಕ್ಕೆ ಅವಕಾಶಕೊಡಲಿಲ್ಲ.

೭೩. ಇತ್ತ ಅನಾದಿಯೂ ಪರಿಪೂರ್ಣಸ್ವರೂಪನೂ ಆದ ಶ್ರೀಮನ್ನಾರಾಯಣನು (ಕೃಷ್ಣನು) ಬಲರಾಮನೊಡನೆಯೂ, ಇತರ ಗೋಪಾಲಕರೊಡನೆಯೂ ತನ್ನ ಮಂದಿರಕ್ಕೆ ಜಾಗ್ರತೆ ಹಿಂತಿರುಗಿದನು.

ಇತ್ಯೇವಂ ಕಥಿತಂ ಸರ್ವಂ ಹರೇರ್ಮಾಹಾತ್ಮ್ಯಮುತ್ತಮಂ ।
ಪುರಾ ಶ್ರುತಂ ಧರ್ಮವಕ್ತ್ರಾತ್ಕಿಂ ಭೂಯಃ ಶ್ರೋತುಮಿಚ್ಛಸಿ　　॥ ೭೪ ॥

॥ ನಾರದ ಉವಾಚ ॥

ಋಷೀಂದ್ರ ಕೇನ ಪುಣ್ಯೇನ ಬಭೂವ ವಿಪ್ರಯೋಷಿತಾಂ ।
ಮುನೀಂದ್ರಯೋಗಸಿದ್ಧಾನಾಂ ದುರ್ಲಭಾ ಗತಿರೀಶ್ವರೀ　　॥ ೭೫ ॥

ಇಮಾಃ ಕಾ ವಾ ಪುಣ್ಯವತ್ಯಃ ಪುರಾ ತಸ್ಥುರ್ಮಹೀತಲಂ ।
ಆಜಗ್ಮುಃ ಕೇನ ದೋಷೇಣ ವದ ಸಂದೇಹಭಂಜನಂ　　॥ ೭೬ ॥

॥ ಶ್ರೀ ನಾರಾಯಣ ಉವಾಚ ॥

ಸಪ್ತರ್ಷೀಣಾಂ ರಮಣ್ಯಶ್ಚ ರೂಪೇಣಾಪ್ರತಿಮಾಃ ಪರಾಃ ।
ಗುಣವತ್ಯಃ ಸುಶೀಲಾಶ್ಚ ಧರ್ಮಿಷ್ಠಾಶ್ಚ ಪತಿವ್ರತಾಃ　　॥ ೭೭ ॥

---

೭೪. ಈ ರೀತಿ ಧರ್ಮಪುರುಷನ ಬಾಯಿನಿಂದ ಕೇಳಿದ ಶ್ರೀಹರಿಯ ಮಹಾಮಹಿಮೆಯನ್ನು ನಿನಗೆ ವರ್ಣಿಸಿದುದಾಯಿತು. ಇನ್ನು ಮುಂದೆ ಏನನ್ನು ಕೇಳಲು ನಿನಗೆ ಬಯಕೆಯಿದೆ?

೭೫-೭೬. ನಾರದ :—ಎಲೈ ಋಷಿವರ್ಯನೇ, ಮುನಿಶ್ರೇಷ್ಠರಿಗೂ, ಯೋಗಿವರ್ಯರಿಗೂ ಸಿದ್ಧಪುರುಷರಿಗೂ ದುರ್ಲಭವಾದ ಸದ್ಗತಿಯು ಆ ವಿಪ್ರಪತ್ನಿಯರಿಗೆ ಯಾವ ಪುಣ್ಯದಿಂದ ದೊರೆಯಿತು? ಪುಣ್ಯವತಿಯರಾದ ಆ ಸ್ತ್ರೀಯರು ಪೂರ್ವದಲ್ಲಿ ಯಾರಾಗಿದ್ದರು? ಅವರು ಯಾವ ದೋಷದಿಂದ ಭೂಮಂಡಲದಲ್ಲಿ ಜನ್ಮವೆತ್ತಬೇಕಾಯಿತು? ಇದನ್ನು ವಿವರಿಸಿ ನಮ್ಮ ಸಂಶಯವನ್ನು ದೂರೀಕರಿಸು.

೭೭. ಶ್ರೀನಾರಾಯಣ :—ಸಪ್ತರ್ಷಿಗಳ ಪತ್ನಿಯರು ಅಪ್ರತಿಮರೂಪವತಿಯರಾಗಿದ್ದುದಲ್ಲದೆ ಗುಣವತಿಯರೂ, ಸದಾಚಾರಸಂಪನ್ನೆಯರೂ, ಧರ್ಮಪರಾಯಣೆಯರೂ, ಪರಮಪತಿವ್ರತೆಯರೂ ಆಗಿದ್ದರು.

ನವೀನಯೌವನಾಃ ಸರ್ವಾಃ ಪೀನಶ್ರೋಣಿಪಯೋಧರಾಃ ।
ದಿವ್ಯವಸ್ತ್ರಪರೀಧಾನಾಃ ರತ್ನಾಲಂಕಾರಭೂಷಿತಾಃ ॥ ೭೮ ॥

ತಪ್ತಕಾಂಚನವರ್ಣಾಭಾಃ ಸ್ಮೇರಾನನಸರೋರುಹಾಃ ।
ಮುನೀನಾಂ ಮೋಹಿತುಂ ಶಕ್ತಾ ಮಾನಸಂ ವಕ್ರಚಕ್ಷುಷಾ ॥ ೭೯ ॥

ದೃಷ್ಟ್ವಾ ತಾಸಾಂ ಸ್ತನಶ್ರೋಣಿಮುಖಾನಿ ಸುಂದರಾಣಿ ಚ ।
ಅನಲಶ್ಚಕಮೇ ತಾಶ್ಚ ಮದನಾನಲಪೀಡಿತಃ ॥ ೮೦ ॥

ಅಗ್ನಿಸ್ಥಾನಸ್ಥಿತಾನಾಂ ಚ ಶಿಖಯಾ ಸುರತೋನ್ಮುಖಃ ।
ಸ್ಪೃಷ್ಟ್ವಾ ಚಾಂಗಾನಿತಾಸಾಂಚ ಬಭೂವ ಹತಚೇತನಃ ॥ ೮೧ ॥

ಪತಿವ್ರತಾ ನ ಜಾನಂತಿ ಪತಿಪಾದಾಬ್ಜಮಾನಸಾಃ ।
ಅಗ್ನಿರಂಗಾನಿ ತಾಸಾಂ ಚ ದರ್ಶಂ ದರ್ಶಂ ಮುಮೋಹ ಚ ॥ ೮೨ ॥

---

೭೮. ನವಯುವತಿಯರಾದ ಅವರೆಲ್ಲರೂ, ಪೀನವಾದ ನಿತಂಬ ಮತ್ತು ಪಯೋಧರಗಳಿಂದ ಕೂಡಿ, ಪೀತಾಂಬರವನ್ನುಟ್ಟು ರತ್ನಾಲಂಕಾರಗಳನ್ನು ತೊಟ್ಟಿದ್ದರು.

೭೯. ಪುಟಕ್ಕೆ ಹಾಕಿದ ಚಿನ್ನದಂತೆ ದೇಹಕಾಂತಿಯುಳ್ಳ ಆ ಯುವತಿಯರು ನಗುಮುಖದಿಂದ ಕೂಡಿ ತಮ್ಮ ವಕ್ರಕಟಾಕ್ಷದಿಂದ ಮುನಿಗಳ ಮನಸ್ಸನ್ನೂ ಮೋಹಗೊಳಿಸಲು ಶಕ್ತರಾಗಿದ್ದರು.

೮೦ ಆ ಸ್ತ್ರೀಯರ ಸ್ತನನಿತಂಬಗಳನ್ನೂ, ಸುಂದರವಾದ ಮುಖಗಳನ್ನೂ ನೋಡಿ ಅಗ್ನಿದೇವನು ಮನ್ಮಥಾಗ್ನಿಯಿಂದ ಪೀಡಿತನಾಗಿ ಅವರನ್ನು ಕಾಮಿಸಿದನು.

೮೧. ಅಲ್ಲದೆ ಸುರತ ಸುಖಾಪೇಕ್ಷಿಯಾಗಿ ತನ್ನ ಸಮೀಪದಲ್ಲಿ ಕುಳಿತಿದ್ದ ಆ ಪತಿವ್ರತಾಸ್ತ್ರೀಯರ ಅವಯವಗಳನ್ನು ತನ್ನ ಶಿಖೆಯಿಂದ ಸ್ಪರ್ಶಮಾಡಿ ಹತಚೇತನನಾದನು.

೮೨. ತಮ್ಮ ಪತಿಯ ಪಾದಕಮಲಗಳಲ್ಲೇ ನಿಶ್ಚಲವಾದ ಮನಸ್ಸುಳ್ಳ ಆ ಪತಿವ್ರತೆಯರು ಅಗ್ನಿಯ ಸ್ಪರ್ಶವಾದುದನ್ನು ತಿಳಿಯಲಿಲ್ಲ. ಅಗ್ನಿದೇವನು ಅವರ ಅವಯವಗಳನ್ನು ಮತ್ತೆ ಮತ್ತೆ ನೋಡಿ ನೋಡಿ ಮೋಹಗೊಂಡನು.

ವಹ್ನೇಶ್ಚ ಮಾನಸಂ ಜ್ಞಾತ್ವಾ ಭಗವಾನಂಗಿರಾ ಮುನಿಃ ।
ಶಶಾಪ ತಂ ಚೇತ್ಯುವಾಚ ಸರ್ವಭಕ್ಷೋ ಭವೇತಿ ಹ || ೮೩ ||

ವಹ್ನಿಃ ಸಚೇತನೋ ಭೂತ್ವಾ ತುಷ್ಟಾವ ಮುನಿಪುಂಗವಂ ।
ವ್ರೀಡಯಾ ನಮ್ರವದನಃ ಚಕಂಪೇ ಬ್ರಹ್ಮತೇಜಸಾ || ೮೪ ||

ಕ್ರುದ್ಧೋ ಮುನಿವರಃ ಸ್ಪೃಷ್ಟಾಃ ಕಾಮಿನ್ಯಶ್ಚ ಶಶಾಪ ಹ ।
ಯಾತ ಯೂಯಂ ಪಾಪಯುಕ್ತಾಃ ಮಾನುಷೀಂ ಯೋನಿಮೇವ ಚ || ೮೫ ||

ಭಾರತೇ ಬ್ರಾಹ್ಮಣಾನಾಂ ಚ ಗೃಹೇ ಲಭತ ಜನ್ಮ ವೈ ।
ಕರಿಷ್ಯಂತಿ ವಿವಾಹಂ ಚ ಯುಷ್ಮಾಕಂ ಕುಲಜಾ ದ್ವಿಜಾಃ || ೮೬ ||

ಶ್ರುತ್ವಾ ವಾಕ್ಯಂ ಮುನೇಸ್ತಾಶ್ಚ ರುರುದುಃ ಪ್ರೇಮವಿಹ್ವಲಾಃ ।
ಪುಟಾಂಜಲಿಯುತಾ ಸರ್ವಾ ಊಚುಸ್ತಂ ವಿದುಷಾಂ ವರಂ || ೮೭ ||

---

೮೩. ಅಗ್ನಿದೇವನ ಮನಸ್ಸನ್ನು ತಿಳಿದ ಪೂಜ್ಯನಾದ ಅಂಗಿರಮಹರ್ಷಿಯು ಕುಪಿತನಾಗಿ 'ನೀನು ಯುಕ್ತಾಯುಕ್ತ ವಿವೇಚನೆಯನ್ನು ಬಿಟ್ಟು ಸರ್ವಭಕ್ಷಕನಾಗು' ಎಂದು ಶಾಪವಿತ್ತನು.

೮೪. ಆಗ ಸಚೇತನನಾದ ಅಗ್ನಿಯು ಲಜ್ಜೆಯಿಂದ ತಲೆಬಾಗಿ ಆ ಮಹರ್ಷಿಯ ಬ್ರಹ್ಮತೇಜಸ್ಸಿಗೆ ನಡುಗಿ ಅವನನ್ನು ಭಕ್ತಿಶ್ರದ್ಧೆಗಳಿಂದ ಸ್ತುತಿಸಿದನು.

೮೫. ಕುಪಿತನಾದ ಆ ಮುನಿವರ್ಯನು ಅಗ್ನಿಸ್ಪೃಷ್ಟರಾದ ಆ ಕಾಮಿನಿಯರನ್ನು ಕುರಿತು 'ಪಾಪಸಂಘಟಿತರಾದ ನೀವೆಲ್ಲರೂ ಮಾನುಷಯೋನಿಯಲ್ಲಿ ಜನ್ಮವೆತ್ತಿರಿ' ಎಂದು ಶಪಿಸಿದನು.

೮೬. 'ಭರತಖಂಡದಲ್ಲಿ ನೀವೆಲ್ಲರೂ ಬ್ರಾಹ್ಮಣರ ಗೃಹದಲ್ಲಿ ಜನ್ಮವೆತ್ತುವಿರಿ. ಸದ್ವಂಶದಲ್ಲಿ ಹುಟ್ಟಿದ ಬ್ರಾಹ್ಮಣರು ನಿಮ್ಮನ್ನು ವಿವಾಹಮಾಡಿಕೊಳ್ಳುವರು.'

೮೭ ಈ ರೀತಿಯಾದ ಮುನಿಯ ವಚನಗಳನ್ನು ಕೇಳಿ, ತಮ್ಮ ಪ್ರೇಮಕ್ಕೆ ಭಂಗವುಂಟಾದುದನ್ನು ಅರಿತು ಗೋಳಾಡಿದರು. ಅಲ್ಲದೆ ಎರಡು ಕೈಗಳನ್ನೂ ಜೋಡಿಸಿಕೊಂಡು ವಿದ್ವಾಂಸರಲ್ಲಿ ಶ್ರೇಷ್ಠನಾದ ಆ ಅಂಗಿರಸ್ಸನ್ನು ಕುರಿತು ಅವರೆಲ್ಲರೂ ಈ ರೀತಿ ಹೇಳಿದರು.

॥ ಮುನಿಪತ್ನ್ಯ ಊಚುಃ ॥

ನ ತ್ಯಜಾಸ್ಮಾನ್ಮುನಿಶ್ರೇಷ್ಠ ನಿಷ್ಪಾಪಾಶ್ಚ ಪತಿವ್ರತಾಃ ।
ಅಜಾನಂತ್ಯಃ ಪರಸ್ಪೃಷ್ಟಾಃ ನ ಚ ನಸ್ತ್ಯಕ್ತುಮರ್ಹತಿ ॥ ೮೮ ॥

ಭಕ್ತಾನಾಂ ಕಿಂಕರೀಣಾಂ ಚ ನ ದಂಡಂ ಕರ್ತುಮರ್ಹಸಿ ।
ಯುಷ್ಮಾಕಂ ಚರಣಾಂಭೋಜಂ ಕದಾ ದ್ರಕ್ಷ್ಯಾಮಹೇ ವಯಂ ॥ ೮೯ ॥

ಖಡ್ಗಚ್ಛೇದಾದ್ವಜ್ರಪಾತಾತ್ಸರ್ವಪ್ರಹರಣಾನ್ಮುನೇ ।
ದಾರುಣಃ ಕಾಂತವಿಚ್ಛೇದಃ ಸಾಧ್ವೀನಾಂ ದುಸ್ಸಹಃ ಸದಾ ॥ ೯೦ ॥

ಬ್ರಹ್ಮಿಷ್ಠಾನಾಂ ಗುಣವತಾಂ ಪರಾನ್ಕಾಂತಾನ್ಮಹಾಮುನೀನ್ ।
ಏವಂಭೂತಾನ್ ಕಥಂ ತ್ಯಕ್ತ್ವಾ ಯಾಸ್ಯಾಮಃ ಪೃಥಿವೀತಲಂ ॥ ೯೧ ॥

---

೮೮. ಮುನಿಪತ್ನಿಯರು :—ಎಲೈ ಮುನಿಶ್ರೇಷ್ಠನೇ, ಪಾಪರಹಿತರೂ, ಪತಿವ್ರತೆಯರೂ ಆದ ನಮ್ಮನ್ನು ತ್ಯಜಿಸುವುದುಚಿತವಲ್ಲ ಅಗ್ನಿದೇವನ ಸ್ಪರ್ಶವಾಗಿರುವುದು ನಮಗೆ ತಿಳಿಯದು. ಅಜ್ಞರಾದ ನಮ್ಮನ್ನು ನೀನು ದೂರೀಕರಿಸಬಹುದೇ ?

೮೯. ನಿನ್ನ ಭಕ್ತೆಯರೂ ಮತ್ತು ಸೇವಕಿಯರೂ ಆದ ನಮಗೆ ನೀನು ಶಿಕ್ಷೆಮಾಡುವುದುಚಿತವಲ್ಲ. ನಾವು ನಿಮ್ಮ ಪಾದಕಮಲಗಳ ಪುನರ್ದರ್ಶನ ಪಡೆಯುವುದು ಯಾವಾಗ ?

೯೦. ಎಲೈ ಮುನಿಯೇ, ಪತಿವ್ರತಾಸ್ತ್ರೀಯರಿಗೆ ಕತ್ತಿಯ ಗಾಯ, ವಜ್ರದ ಪೆಟ್ಟು ಮತ್ತು ಇತರ ಆಯುಧಗಳ ಹೊಡೆತಕ್ಕಿಂತಲೂ, ಪತಿಯ ವಿರಹವು ಭಯಂಕರವೂ, ಸಹಿಸಲಶಕ್ಯವೂ ಆಗುವುದು.

೯೧. ಬ್ರಹ್ಮನಿಷ್ಠರಿಗೂ, ಗುಣವಂತರಿಗೂ, ಶ್ರೇಷ್ಠರೂ, ಮಹಾಮುನಿಗಳೂ ಆದ ನಮ್ಮ ಕಾಂತರನ್ನು ಬಿಟ್ಟು ಭೂಮಂಡಲಕ್ಕೆ ಹೋಗಿ ನಾವು ಹೇಗೆ ಬಾಳೋಣ ?

ಯಾಸ್ಯಾಮೋ ಯದಿ ವಿಪ್ರೇಶ ಕದಾಽತ್ರಾಗಮನಂ ವದ ।
ಅಜ್ಞಾನಸ್ಪರ್ಶದೋಷಶ್ಚ ನ ಸ್ಯಾನ್ನೋ ವಿಧಿಬೋಧಿತಃ ॥ ೯೨ ॥

ಅಹಲ್ಯಯಾ ಪುನಃ ಪ್ರಾಪ್ತಃ ಸ್ವಾಮೀಂದ್ರಸ್ಯ ಪ್ರಧರ್ಷಣಾತ್ ।
ಸಾ ಸಂಭೋಗಾತ್ಪುನಃ ಶುದ್ಧಾ ಸ್ಪರ್ಶನಾದ್ವರ್ಜಿತಾ ವಯಂ ॥ ೯೩ ॥

ವಿಚಾರಂ ಕುರು ಧರ್ಮಿಷ್ಠ ವೇದವೇದಾಂಗಪಾರಗ ।
ವಿಶ್ವಕರ್ತುಶ್ಚ ಪುತ್ರಸ್ತ್ವಂ ಸರ್ವವೇದವಿದಾಂ ವರೆ ॥ ೯೪ ॥

ಅನ್ಯೇಷಾಂ ಚ ಭಯಾತ್ಕಾಂತಾ ವ್ರಜಂತಿ ಶರಣಂ ಪತಿಂ ।
ಸ್ವಕಾಂತಭಯಸಂವಿಗ್ನಾಃ ಶರಣಂ ಕಂ ವ್ರಜಂತಿ ತಾಃ ॥ ೯೫ ॥

ಅಭಯಂ ದೇಹಿ ಧರ್ಮಿಷ್ಠ ಭಯಯುಕ್ತಾಭ್ಯ ಏವ ಚ ।
ಪುತ್ರೇ ಶಿಷ್ಯೇ ಕಲತ್ರೇ ಚ ಕೋ ದಂಡಂ ಕರ್ತುಮಕ್ಷಮಃ ॥ ೯೬ ॥

---

೯೨. ಎಲೈ ಮುನಿವರ್ಯನೇ, ನಾವು ಹೋಗಿಯೇ ತೀರಬೇಕಾದರೆ ನಾವು ಹಿಂದಕ್ಕೆ ಬರುವುದು ಯಾವಾಗ ಎಂಬುದನ್ನು ತಿಳಿಸು. ಅಜ್ಞಾನದಿಂದ ಪರಪುರುಷರ ಸ್ಪರ್ಶಮಾಡಿದರೆ ದೋಷವಿಲ್ಲವೆಂದು ವಿಧ್ಯುಕ್ತವಾಗಿದೆ.

೯೩. ಇಂದ್ರನ ವಂಚನಾಸುರತಕ್ಕೊಳಗಾದ ಅಹಲ್ಯೆಯು ಪುನಃ ತನ್ನ ಪತಿಯಾದ ಗೌತಮನನ್ನು ಪಡೆದಳು. ಪರರ ಸಂಭೋಗಕ್ಕೆ ಒಳಗಾದ ಆಕೆಯು ಶುದ್ಧಳಾದಳು. ಪರಸ್ಪರ್ಶಕ್ಕೆ ಒಳಗಾದ ನಾವು ತ್ಯಕ್ತರಾದೆವಲ್ಲ.

೯೪. ವೇದವೇದಾಂಗ ಪಾರಂಗತನೂ ಧರ್ಮಪರಾಯಣನೂ ಆದ ಎಲೈ ಮಹರ್ಷಿಯೇ, ನೀನೇ ಯೋಚಿಸಿನೋಡು. ವೇದಜ್ಞರಲ್ಲಿ ಶ್ರೇಷ್ಠನಾದ ನೀನು ಸಾಕ್ಷಾತ್ ಬ್ರಹ್ಮನ ಪುತ್ರನಾಗಿದ್ದೀಯೆ.

೯೫. ಸ್ತ್ರೀಯರಿಗೆ ಇತರರಿಂದ ಭಯವುಂಟಾದರೆ ತಮ್ಮ ಪತಿದೇವನನ್ನು ಮರೆಹೊಗುವರು. ಹೀಗಿರುವಾಗ ತಮ್ಮ ಪತಿದೇವನಿಂದಲೇ ಭಯಭ್ರಾಂತರಾದರೆ ಅವರು ಮತ್ತಾರನ್ನು ಮರೆಹೊಗಬೇಕು ?

೮೬. ಆದುದರಿಂದ ಎಲೈ ಧರ್ಮಿಷ್ಠನೇ, ಭೀತರಾದ ನಮಗೆ ಅಭಯದಾನ ಮಾಡು. ಪುತ್ರ, ಶಿಷ್ಯ ಮತ್ತು ಕಳತ್ರರಿಗೆ ಶಿಕ್ಷೆಮಾಡಲು ತಂದೆ, ಗುರು ಮತ್ತು ಪತಿಗಳು ಸಮರ್ಥರಾಗಿದ್ದಾರೆ.

ದುರ್ಬಲಃ ಸಬಲೋ ವಾಪಿ ಸ್ವವಸ್ತೂನಾಮಪೀಶ್ವರಃ ।
ಸ್ವದ್ರವ್ಯ ವಿಕ್ರಯಂ ಕರ್ತುಂ ನ ಚಾನ್ಯೋ ರಕ್ಷಿತುಂ ಕ್ಷಮಃ ॥ ೯೭ ॥

ಕಾಮಿನೀನಾಂ ವಚಃ ಶ್ರುತ್ವಾ ದಯಾಲುರ್ಮುನಿಪುಂಗವಃ ।
ಪ್ರೇಮ್ಣಾ ರುರೋದ ತಾಸಾಂ ಚ ನಿರೀಕ್ಷ್ಯ ಮುಖಪಂಕಜಂ ॥ ೯೮ ॥

ವೇದವೇದಾಂಗಪಾರಜ್ಞೋ ಜ್ಞಾನಿನಾಂ ಯೋಗಿನಾಂ ವರಃ ।
ಪತ್ನೀವಿಚ್ಛೇದವಿಷಯೇ ಮೂರ್ಛಾಂ ಪ್ರಾಪ ತಥಾಪಿ ಸಃ ॥ ೯೯ ॥

ಸರ್ವೇ ಬಭೂವುಃ ಶೋಕಾರ್ತಾ ವಿರಹೋದ್ವಿಗ್ನಮಾನಸಾಃ ।
ನಿರೀಕ್ಷ್ಯ ತಾಸಾಂ ವಕ್ತ್ರಾಣಿ ತಸ್ಥುಃ ಪುತ್ತಲಿಕಾ ಯಥಾ ॥ ೧೦೦ ॥

ಕೃತ್ವಾ ವಿಲಾಪಂ ಸುಚಿರಂ ಸರ್ವವೇದವಿದಾಂ ವರಃ ।
ಭ್ರಾತೃಭಿಶ್ಚ ಸಹಾಲೋಚ್ಯ ತಾ ಉವಾಚ ಶುಚಾತುರಃ ॥ ೧೦೧ ॥

---

೯೭. ಸಬಲನಾಗಲೀ ದುರ್ಬಲನಾಗಲೀ ತನ್ನ ವಸ್ತುವಿಗೆ ತಾನೇ ಒಡೆಯನು. ತನ್ನ ವಸ್ತುವನ್ನು ತಾನು ಮಾರಿಕೊಳ್ಳುವುದಾದರೆ ಮತ್ತೊಬ್ಬರು ಅದನ್ನು ತಪ್ಪಿಸಲು ಸಾಧ್ಯವಿಲ್ಲ.

೯೮. ಈ ರೀತಿಯಾಡಿದ ಆ ಋಷಿಪತ್ನಿಯರ ಮಾತನ್ನು ಕೇಳಿ ದಯಾಮಯನಾದ ಆ ಮುನಿಯು ಅವರ ಮುಖಕಮಲಗಳನ್ನು ನೋಡಿ ಪ್ರೇಮವಿಹಲ್ವನಾದನು.

೯೯. ಆ ಮುನಿಯು ವೇದವೇದಾಂಗಪಾರಂಗತನೂ, ಜ್ಞಾನಿಗಳಿಗೆ ಮತ್ತು ಯೋಗಿಗಳಿಗೆ ಶ್ರೇಷ್ಠನೂ ಆಗಿದ್ದರೂ ಋಷಿಪತ್ನಿಯರ ವಿರಹವ್ಯಥೆಯಿಂದ ಮೂರ್ಛೆಗೊಂಡನು.

೧೦೦. ಅಲ್ಲಿದ್ದವರೆಲ್ಲರೂ ವಿರಹದುಃಖದಿಂದ ಪೀಡಿತರಾಗಿ ಆ ಋಷಿಪತ್ನಿಯರ ಮುಖವನ್ನು ನೋಡಿ ಚಿತ್ರಾರ್ಪಿತಪ್ರತಿಮೆಗಳಂತೆ ನಿಶ್ಚಲರಾಗಿ ನಿಂತರು.

೧೦೧. ವೇದವೇತ್ತೃಗಳಲ್ಲಿ ಶ್ರೇಷ್ಠನಾದ ಆ ಮಹರ್ಷಿಯು ಬಹಳ ಗೋಳಾಡಿದನಂತರ ತನ್ನ ಸಹೋದರರಾದ ಇತರ ಮಹರ್ಷಿಗಳೊಡನೆ ಪರ್ಯಾಲೋಚಿಸಿ ಆ ಸ್ತ್ರೀಯರನ್ನು ಕುರಿತು ಈ ರೀತಿ ಹೇಳಿದನು.

|| ಅಂಗಿರಾ ಉವಾಚ ||

ಯೂಯಂ ಶೃಣುತ ವಕ್ಷ್ಯಾಮಿ ವಚನಂ ಸತ್ಯಮೇವ ಚ ।
ಸ್ವಕರ್ಮಭೋಗಿನಾಂ ಭೋಗಮಾಕರ್ಮಾಚ್ಚ ಶ್ರುತೌ ಶ್ರುತಂ || ೧೦೨ ||

ಗತೋ ಭೋಗಶ್ಚ ಯುಷ್ಮಾಕಮಸ್ಮಾಭಿಃ ಸಹ ನಿಶ್ಚಿತಂ ।
ಗತೇ ಭೋಗೇ ಪುನರ್ಭೋಗೋ ನ ಹಿ ವೇದೇ ನಿರೂಪಿತಃ || ೧೦೩ ||

ಶುಭಾಶುಭಂ ಚ ಯತ್ಕರ್ಮ ಭಾರತೇ ಕೃತಿಭಿಃ ಸಹ ।
ನಾಭುಕ್ತಂ ಕ್ಷೀಯತೇ ಕರ್ಮ ಕಲ್ಪಕೋಟಿಶತೈರಪಿ || ೧೦೪ ||

ಪರಭುಕ್ತಾಂ ಚ ಕಾಂತಾ ಚ ಯೋ ಭುಂಕ್ತೇ ಸ ನರಾಧಮಃ ।
ಸ ಪಚ್ಯತೇ ಕಾಲಸೂತ್ರೇ ಯಾವಚ್ಚಂದ್ರ ದಿವಾಕರೌ || ೧೦೫ ||

---

೧೦೨. ಅಂಗಿರಸ್ಸು :—ನಾನು ಹೇಳುವ ಈ ಸತ್ಯವಚನವನ್ನು ನೀವು ಸಾವಧಾನದಿಂದ ಕೇಳಿ. ತಮ್ಮ ಕರ್ಮಫಲವನ್ನು ಪಭೋಗಿಸುವ ಪ್ರಾಣಿಗಳಿಗೆ ಕರ್ಮಾನುಗುಣವಾದ ಭೋಗವುಂಟೆಂದು ಶ್ರುತ್ಯುಕ್ತವಾಗಿದೆ.

೧೦೩. ಅದಕಾರಣ ನೀವು ನಮ್ಮೊಡನೆ ಭೋಗಪಡುವ ಕಾಲವು ಕಳೆಯಿತೆಂಬುದು ನಿಶ್ಚಿತವಾದುದು. ಒಮ್ಮೆ ಕರ್ಮಫಲವನ್ನು ಭೋಗಿಸಿದ ಮೇಲೆ ಪುನಃ ಭೋಗಿಸಬೇಕೆಂಬುದು ವೇದದಲ್ಲಿ ನಿರೂಪಿತವಾಗಿಲ್ಲ.

೧೦೪. ಭರತಖಂಡದಲ್ಲಿರುವವರು ತಾವು ಮಾಡಿದ ಶುಭಾಶುಭಕರ್ಮಗಳ ಫಲವನ್ನು ಅನುಭವಿಸಿದ ಹೊರತು ಕೋಟಿ ಜನ್ಮಗಳನ್ನೆತ್ತಿದರೂ ಆ ಕರ್ಮಗಳು ಸವೆಯುವಂತಿಲ್ಲ

೧೦೫. ಮತ್ತೊಬ್ಬರು ಕಾಯಾ, ವಾಚಾ ಅಥವಾ ಮನಸಾ ಉಪಭೋಗಿಸಿದ ತನ್ನ ಕಾಂತೆಯನ್ನು ಪುನಃ ಭೋಗಿಸುವ ನೀಚಮನುಜನು ಚಂದ್ರಸೂರ್ಯರಿರುವ ವರೆಗೆ ಕಾಲಸೂತ್ರವೆಂಬ ನರಕದಲ್ಲಿ ತೊಳಲುವನು.

ನ ಸಾ ದೈವೇ ನ ಸಾ ಪೈತ್ರ್ಯೇ ಪಾಕಾರ್ಹಾ ಪಾಪಸಂಯುತಾ ।
ತಸ್ಯಾ ಆಲಿಂಗನೇ ಭರ್ತಾ ಭ್ರಷ್ಟಶ್ರೀಸ್ತೇಜಸಾ ಹತಃ ॥ ೧೦೬ ॥

ದೇವತಾಃ ಪಿತರಸ್ತಸ್ಯ ಹವ್ಯದಾನೇ ಚ ತರ್ಪಣೇ ।
ಸುಖಿನೋ ನ ಭವಂತ್ಯೇವಮಿತ್ಯಾಹ ಕಮಲೋದ್ಭವಃ ॥ ೧೦೭ ॥

ತಸ್ಮಾದ್ಯತ್ನೇನ ಭಾರ್ಯಾಯಾ ರಕ್ಷಣಂ ಕುರುತೇ ಸುಧೀಃ ।
ಅನ್ಯಥಾ ಪಾಪಭಾಗ್ಭರ್ತಾ ನಿಶ್ಚಿತಂ ನರಕಂ ವ್ರಜೇತ್ ॥ ೧೦೮ ॥

ಪದೇ ಪದೇ ಸಾವಧಾನಃ ಕಾಂತಾಂ ರಕ್ಷತಿ ಪಂಡಿತಃ ।
ನ ವ್ರತೀ ನ ಸ್ಥಲೀ ಯೋಷಾ ದೋಷಾಣಾಂ ಚ ಕರಂಡಿಕಾ ॥ ೧೦೯ ॥

ಕಲತ್ರಂ ಪಾಕಪಾತ್ರಂ ಚ ಸದಾ ರಕ್ಷಿತುಮರ್ಹತಿ ।
ಪರಸ್ಪರ್ಶಾದಶುದ್ಧಾಂ ಚ ಶುದ್ಧಾಂ ಸ್ವಸ್ಪರ್ಶನೇ ಸದಾ ॥ ೧೧೦ ॥

---

೧೦೬. ಪರಪುರುಷನ ಭೋಗಕ್ಕೊಳಗಾದ ಪಾಪಿ ಹೆಂಗಸು ದೇವಕಾರ್ಯ ಮತ್ತು ಪಿತೃಕಾರ್ಯದಲ್ಲಿ ಪಾಕಮಾಡಲು ಯೋಗ್ಯಳಲ್ಲ. ಅವಳನ್ನು ಪುನಃ ಆಲಿಂಗಿಸಿಕೊಳ್ಳುವ ಪತಿಯು ಸಂಪತ್ತಿನಿಂದಲೂ ತೇಜಸ್ಸಿನಿಂದಲೂ ಭ್ರಷ್ಟನಾಗುವನು.

೧೦೭. ಅವನು ಅರ್ಪಿಸುವ ಹವ್ಯಗಳಿಂದ ದೇವತೆಗಳೂ ಕವ್ಯಗಳಿಂದ ಪಿತೃಗಳೂ ಎಂದೆಂದಿಗೂ ಸುಖಿಗಳಾಗುವುದಿಲ್ಲವೆಂದು ಬ್ರಹ್ಮನೇ ಹೇಳಿರುವನು.

೧೦೮. ಆದಕಾರಣ ಬುದ್ಧಿವಂತನು ಪ್ರಯತ್ನಪೂರ್ವಕವಾಗಿ ತನ್ನ ಹೆಂಡತಿಯನ್ನು ರಕ್ಷಿಸುವನು. ಹಾಗೆ ರಕ್ಷಣೆಮಾಡದಿರುವ ಪತಿಯು ಆಕೆಯ ಪಾಪಕ್ಕೆ ಹೊಣೆಯಾಗಿ ನಿಶ್ಚಯವಾಗಿಯೂ ನರಕಕ್ಕೆ ಹೋಗುವನು.

೧೦೯. ಪಂಡಿತನಾದವನು ಕ್ಷಣಕಾಲವೂ ಉದಾಸೀನಮಾಡದೆ ಎಚ್ಚರಿಕೆಯಿಂದ ತನ್ನ ಹೆಂಡತಿಯನ್ನು ಕಾಪಾಡುವನು. ದೋಷಗಳಿಗೆ ತೌರುಮನೆಯಂತಿರುವ ಹೆಂಗಸು ವ್ರತನಿಯಮಗಳಿಗಾಗಿ ಸ್ಥಿರಚಿತ್ತಳಾಗಿರುವುದು ಬಹುಕಷ್ಟ.

೧೧೦. ಪರಪುರುಷರ ಸ್ಪರ್ಶದಿಂದ ಅಶುದ್ಧಳೂ, ತನ್ನ ಸ್ಪರ್ಶದಿಂದ ಸರ್ವಕಾಲದಲ್ಲಿಯೂ ಶುದ್ಧಳೂ, ಪಾಕಕರ್ಮಕ್ಕೆ ಯೋಗ್ಯಳೂ ಆದ ಹೆಂಡತಿಯನ್ನು ಪತಿಯು ಸರ್ವದಾ ರಕ್ಷಿಸಬೇಕು.

ಸ್ವಕಾಂತಂ ಚ ಪರಿತ್ಯಜ್ಯ ಪರಂ ಗಚ್ಛತಿ ಯೋಽಧಮಾ ।
ಕುಂಭೀಪಾಕಂ ಸಾ ಪ್ರಯಾತಿ ಯಾವಚ್ಚಂದ್ರದಿವಾಕರೌ　　　॥ ೧೧೧ ॥

ತಾಮೇವ ಯಮದೂತಾಶ್ಚ ಸಂಸ್ಥಾಪ್ಯ ನರಕಾಂತರೇ ।
ಉತ್ತಿಷ್ಠತಿ ವಿದೂರಾಚ್ಚೇತ್ಕುರ್ವಂತಿ ದಂಡತಾಡನಂ　　　॥ ೧೧೨ ॥

ಸರ್ಪಪ್ರಮಾಣಾಃ ಕೀಟಾಶ್ಚ ತೀಕ್ಷ್ಣದಂಷ್ಟ್ರಾಃ ಸುದಾರುಣಾಃ ।
ದಶಂತಿ ಪುಂಶ್ಚಲೀಂ ತತ್ರ ಸತತಂ ಚ ದಿವಾನಿಶಂ　　　॥ ೧೧೩ ॥

ವಿಕೃತಾಕಾರಶಬ್ದಂ ಚ ಕರೋತಿ ಶಾಶ್ವತಂ ಭಿಯಾ ।
ನ ಮಮಾರ ಪ್ರಹಾರೇಣ ಸೂಕ್ಷ್ಮದೇಹವಿಧಾರಿಣೀ　　　॥ ೧೧೪ ॥

ಮುಹೂರ್ತಾರ್ಧಂ ಸುಖಂ ಭುಕ್ತ್ವಾ ಲೋಕೇಽಥ ಯಶಸಾ ಹತಾ ।
ಪತಿತಾ ಪರಲೋಕೇ ಚ ಗತಿಮೇತಾದೃಶೀಂ ಲಭೇತ್　　　॥ ೧೧೫ ॥

---

೧೧೧. ಯಾವ ಸ್ತ್ರೀಯು ತನ್ನ ಪತಿಯನ್ನು ಬಿಟ್ಟು ಪರಪುರುಷನೊಡನೆ ಸಂಗಮಾಡುವಳೋ ಆ ನೀಚಳು ಚಂದ್ರಸೂರ್ಯರಿರುವವರೆಗೆ ಕುಂಭೀಪಾಕವೆಂಬ ನರಕದಲ್ಲಿ ನರಳುವಳು.

೧೧೨. ಯಮದೂತರು ಅವಳನ್ನು ಬೇರೆ ಬೇರೆ ನರಕಕುಂಡದಲ್ಲಿ ಹಾಕಿ ತಲೆಯೆತ್ತಲು ಬಯಸಿದರೆ, ದೂರದಿಂದಲೇ ದಂಡದಿಂದ ಹೊಡೆಯುವರು.

೧೧೩. ಅಲ್ಲಿ ಆ ಸ್ವೈರಿಣಿಯನ್ನು ಭಯಂಕರವಾದ ಕೋರೆದಾಡೆಗಳುಳ್ಳ ಸರ್ಪಾಕಾರದ ಕೀಟಗಳು ಹಗಲೂ ರಾತ್ರಿ ಕಚ್ಚಿ, ಹಿಂಸೆಪಡಿಸುತ್ತಿರುವುವು.

೧೧೪. ಆ ಹೆಂಗಸು ಭಯದಿಂದ ವಿಕಾರವಾದ ಧ್ವನಿಮಾಡುತ್ತ ಅಲ್ಲಿ ನರಳುವಳು. ಸೂಕ್ಷ್ಮದೇಹವನ್ನು ಧರಿಸಿರುವುದರಿಂದ ಎಷ್ಟು ಪ್ರಹಾರಗಳಿಂದಲೂ ಅವಳು ಸಾಯುವಂತಿಲ್ಲ.

೧೧೫. ಇಹಲೋಕದಲ್ಲಿ ಕ್ಷಣಾರ್ಧಸುಖಕ್ಕೋಸ್ಕರ ಅಪಕೀರ್ತಿಗೊಳಗಾಗಿ ಪತಿತಳೆನಿಸಿ ಪರಲೋಕದಲ್ಲೂ ಮೇಲೆ ಹೇಳಿದ ದುರ್ಗತಿಯನ್ನು ಹೊಂದುವಳು.

ಪರಸ್ಪೃಷ್ಟಾ ಚ ವೈ ನಾರೀ ಯಾ ಸ್ಪೃಹಾಂ ಕುರುತೇ ಪರಂ ।
ಸಾಪಿ ದುಷ್ಟಾ ಪರಿತ್ಯಾಜ್ಯಾ ಚೇತ್ಯಾಹ ಕಮಲೋದ್ಭವಃ ॥ ೧೧೬ ॥

ತಸ್ಮಾನ್ನಾರೀ ಪರೈರ್ಯತ್ನಾದದೃಷ್ಟಾ ಕೃತಿಭಿಃ ಕೃತಾ ।
ಅಸೂರ್ಯಂಪಶ್ಯಾ ಯಾ ದಾರಾಃ ಶುದ್ಧಾಸ್ತಾಶ್ಚ ಪತಿವ್ರತಾಃ ॥ ೧೧೭ ॥

ಸ್ವಚ್ಛಂದಗಾಮಿನೀ ಯಾ ಚ ಸ್ವತಂತ್ರಾ ಸೂಕರೀಸಮಾ ।
ಅಂತರ್ದುಷ್ಟಾ ಸದಾ ಸೈವ ನಿಶ್ಚಿತಂ ಪರಗಾಮಿನೀ ॥ ೧೧೮ ॥

ಸ್ವಾಮಿಸಾಧ್ವಾ ಚ ಯಾ ನಾರೀ ಕುಲಧರ್ಮಭಿಯಾ ಸ್ಥಿತಾ ।
ಕಾಂತೇನ ಸಾರ್ಧಂ ಸಾ ಕಾಂತಾ ವೈಕುಂಠಂ ಯಾತಿ ನಿಶ್ಚಿತಂ ॥ ೧೧೯ ॥

ಯಾತ ಯೂಯಂ ಚ ಪೃಥಿವೀಂ ಮಾನುಷೀಂ ಯೋನಿಮಾಸ್ಥಿತಾಂ ।
ಕೃಷ್ಣದರ್ಶನಮಾತ್ರೇಣ ಗೋಲೋಕಂ ಯಾಸ್ಯತ ಧ್ರುವಂ ॥ ೧೨೦ ॥

---

೧೧೬. ಹೆಂಗುಸು ಪರಪುರುಷನನ್ನು ಸ್ಪರ್ಶಮಾಡಿದರಾಗಲೀ, ಮನಸ್ಸಿನಲ್ಲಿ ಬಯಸಿದರಾಗಲೀ, ದುಷ್ಟಳೆನಿಸಿ ಪರಿತ್ಯಾಗಕ್ಕೆ ಅರ್ಹಳೆಂದು ಬ್ರಹ್ಮದೇವನೇ ಹೇಳಿರುವನು.

೧೧೭. ಆದ್ದರಿಂದ ಹೆಂಗುಸು ಪರಪುರುಷರ ಕಣ್ಣಿಗೆ ಬೀಳದಂತೆ ರಕ್ಷಿಸಲ್ಪಡ ಬೇಕೆಂದು ಕುಶಲಮತಿಗಳು ಹೇಳುವರು. ಸೂರ್ಯನ ಬೆಳಕಿಗೇ ಬರದಿರುವ ಯಾವ ಹೆಂಗಸರುಂಟೋ ಅವರೇ ಪರಿಶುದ್ಧರೂ, ಪತಿವ್ರತೆಯರೂ ಎನಿಸುವರು.

೧೧೮. ಯಾವ ಹೆಂಗುಸು ಸ್ವತಂತ್ರಳಾಗಿ ಸ್ವೇಚ್ಛಾವಿಹಾರಿಣಿಯಾಗಿರು ವಳೋ, ಅವಳು ಹೆಣ್ಣುಹಂದಿಗೆ ಸದೃಶಳು. ಸರ್ವದಾ ಅಂತರಂಗ ಶುದ್ಧರಹಿತಳಾದ ಆ ಹೆಂಗುಸು ಪರಪುರುಷ ಸಂಪರ್ಕವನ್ನೇ ಮಾಡುವಳು

೧೧೯. ಯಾವ ಕುಲಸ್ತ್ರೀಯು ಕುಲಧರ್ಮಕ್ಕೆ ಹೆದರಿ, ಪತಿಯ ಆಜ್ಞೆಯನ್ನು ಮೀರದಿರುವಳೋ ಆ ಪತಿವ್ರತೆಯು ತನ್ನ ಪತಿದೇವನೊಡನೆ ನಿಶ್ಚಿತವಾಗಿಯೂ ವೈಕುಂಠಕ್ಕೆ ತೆರಳುವಳು

೧೨೦ ಆದಕಾರಣ ನೀವೆಲ್ಲರೂ ಭೂಮಂಡಲಕ್ಕೆ ಹೋಗಿ, ನಿಮಗೆ ಅಭೀಪ್ಸಿತವಾದ ಮನುಷ್ಯಜನ್ಮವನ್ನೆತ್ತಿರಿ. ಅಲ್ಲಿ ಶ್ರೀಕೃಷ್ಣನ ದರ್ಶನವನ್ನು ಪಡೆದ ಮಾತ್ರದಿಂದಲೇ ನಿಶ್ಚಯವಾಗಿಯೂ ಗೋಲೋಕಕ್ಕೆ ಹೋಗುವಿರಿ.

ಹರಿಣಾ ನಿರ್ಮಿತಾಚ್ಛಾಯಾ ಯುಷ್ಮಾಕಂ ಯೋಗಮಾಯಯಾ ।
ತಾಃ ವಿಪ್ರಮಂದಿರೇ ಸ್ಥಿತ್ವಾ ಚಾಗಮಿಷ್ಯಂತಿ ನೋ ಧ್ರುವಂ ॥ ೧೨೧ ॥

ಪುನರಂಶೇನ ನಃ ಪತ್ನ್ಯೋ ಭವಿಷ್ಯಥ ನ ಸಂಶಯಃ ।
ಯುಷ್ಮಾಕಂ ಮಮ ಶಾಪಶ್ಚ ಬಭೂವ ಚ ವರಾಧಿಕಃ ॥ ೧೨೨ ॥

ಇತ್ಯೇವಮುಕ್ತ್ವಾ ಸ ಮುನಿರ್ವಿರರಾಮ ಶುಚಾನ್ವಿತಃ ।
ತಾ ಆಗತ್ಯ ಮಹೀಂ ಶಾಪಾದ್ಬಭೂವುಃ ವಿಪ್ರಯೋಷಿತಃ ॥ ೧೨೩ ॥

ದತ್ವಾನ್ನಂ ಹರಯೇ ಭಕ್ತ್ಯಾ ಪ್ರಜಗ್ಮುರ್ಹರಿಮಂದಿರಂ ।
ಬಭೂವ ನಿಶ್ಚಿತಂ ತಾಸಾಂ ಶಾಪಶ್ಚ ಸಂಪದೋಧಿಕಃ ॥ ೧೨೪ ॥

ನಿಂದ್ಯಾ ನೀಚಾಚ್ಚ ಸಂಪತ್ತಿರ್ವಿಪತ್ತಿರ್ಮಹತೋ ವರಾ ।
ಅಹೋ ಸದ್ಯಃ ಸತಾಂ ಕೋಪಃ ಚೋಪಕಾರಾಯ ಜಾಯತೇ ॥ ೧೨೫ ॥

---

೧೨೧. ಶ್ರೀಹರಿಯ ಯೋಗಮಾಯಾಮಹಿಮೆಯಿಂದ ನಿರ್ಮಿತವಾದ ನಿಮ್ಮ ಛಾಯೆಯು ಭೂಲೋಕದ ನಿಮ್ಮ ಪತಿಗಳ ಮಂದಿರದಲ್ಲುಳಿದು ನೀವೆಲ್ಲರೂ ನಮ್ಮ ಸಮೀಪಕ್ಕೆ ಬರುವಿರಿ.

೧೨೨. ನಿಮ್ಮದೊಂದೊಂದಂಶದಿಂದ ಪುನಃ ನಮ್ಮ ಪತ್ನಿಯರಾಗುವಿರಿ ಇದರಲ್ಲಿ ಸಂಶಯವಿಲ್ಲ. ನಿಮಗೆ ನಾನು ಕೊಟ್ಟಿರುವ ಈ ಶಾಪವು ವರಕ್ಕಿಂತಲೂ ಮೇಲಾಯಿತು.

೧೨೩. ಈ ರೀತಿ ಆ ಅಂಗಿರಸಮುನಿಯು ಹೇಳಿ ವಿರಹದುಃಖದಿಂದ ಕೂಡಿ ಸುಮ್ಮನಾದನು. ಆ ಋಷಿಪತ್ನಿಯರು ಅವನ ಶಾಪದಂತೆ ಭೂಮಂಡಲಕ್ಕೆ ಬಂದು ಬ್ರಾಹ್ಮಣರ ಪತ್ನಿಯರಾದರು.

೧೨೪. ಇಲ್ಲಿ ಶ್ರೀಹರಿಗೆ ಭಕ್ತಿಯಿಂದ ಮಿಷ್ಟಾನ್ನವನ್ನರ್ಪಿಸಿ ವೈಕುಂಠ ಲೋಕಕ್ಕೆ ತೆರಳಿದರು. ನಿಶ್ಚಯವಾಗಿಯೂ ~~ಅವರಿಗೆ ಶಾಪವೆಂ~~ಬುದು ಸಂಪತ್ತಿಗಿಂತ ಮೇಲಾಯಿತು.

೧೨೫. ನೀಚರಿಂದ ಸಂಪತ್ತನ್ನು ಪಡೆಯುವುದು ನಿಂದ್ಯವಾದುದು. ಮಹಾತ್ಮರಿಂದ ವಿಪತ್ತನ್ನು ಪಡೆಯುವುದೂ ಸ್ತುತ್ಯವಾದುದು. ಸತ್ಪುರುಷರ ಕೋಪವು ಕೂಡಲೇ ಉಪಕಾರರೂಪವಾಗಿ ಪರಿಣಮಿಸುತ್ತದೆ. ಇದು ಆಶ್ಚರ್ಯವಲ್ಲವೇ.

ವಿನಾ ವಿಪತ್ತೇರ್ಮಹಿಮಾ ಕುತಃ ಕಸ್ಯ ಭವೇದ್ಭುವಿ ।
ಭೂತಾಃ ಕಾಂತಪರಿತ್ಯಾಗಾನ್ಮುಕ್ತಾ ಬ್ರಾಹ್ಮಣಯೋಷಿತಃ ॥ ೧೨೬ ॥

ಇತ್ಯೇವಂ ಕಥಿತಂ ಸರ್ವಂ ಹರೇಶ್ಚರಿತಮುತ್ತಮಂ ।
ಅಹೋ ಪುಣ್ಯವತೀನಾಂ ಚ ಮೋಕ್ಷಾಖ್ಯಾನಂ ಮನೋಹರಂ ॥ ೧೨೭ ॥

ಶ್ರೀಕೃಷ್ಣಾಖ್ಯಾನಂ ವಿಪ್ರೇಂದ್ರ ನೂತ್ನಂ ನೂತ್ನಂ ಪದೇ ಪದೇ ।
ನ ಹಿ ತೃಪ್ತಿಃ ಶ್ರುತವತಾಂ ಕೇನ ಶ್ರೇಯಸಿ ತೃಪ್ಯತೇ ॥ ೧೨೮ ॥

ಯಾವದ್ರಮ್ಯಂ ತತ್ಕಥಿತಂ ಯಚ್ಛ್ರುತಂ ಗುರುವಕ್ತ್ರತಃ ।
ವದ ಮಾಂ ವಾಂಛಿತಂ ಯತ್ತೇ ಕಿಂ ಭೂಯಃ ಶ್ರೋತುಮಿಚ್ಛಸಿ ॥ ೧೨೯ ॥

॥ ನಾರದ ಉವಾಚ ॥

ಯದ್ಯಚ್ಛ್ರುತಂ ತ್ವಯಾ ಪೂರ್ವಂ ಗುರುವಕ್ತ್ರಾತ್ಕೃಪಾನಿಧೇ ।
ಮಂಗಲಂ ಕೃಷ್ಣಚರಿತಂ ತನ್ಮೇ ಬ್ರೂಹಿ ಜಗದ್ಗುರೋ ॥ ೧೩೦ ॥

---

೧೨೬. ಭೂಲೋಕದಲ್ಲಿ ಯಾರಿಗೆ ತಾನೇ ವಿಪತ್ತುಬರದೆ ಎಲ್ಲಿ ಸಂಪತ್ತು ಬಂದಿದೆ? ಆ ಋಷಿಪತ್ನಿಯರು ಮೊದಲು ತಮ್ಮ ಪತಿಗಳ ವಿರಹವಿಪತ್ತಿಗೊಳಗಾಗಿ ಬ್ರಾಹ್ಮಣ ಸ್ತ್ರೀಯರಾಗಿ ಜನಿಸಿದನಂತರ ಮುಕ್ತರಾದರು.

೧೨೭. ಈ ರೀತಿ ಶ್ರೀಹರಿಯ ದಿವ್ಯಚರಿತ್ರೆಯನ್ನೂ ಪುಣ್ಯವತಿಯರಾದ ಸ್ತ್ರೀಯರ ಮೋಕ್ಷಪ್ರಾಪ್ತಿರೂಪವಾದ ಮನೋಹರಾಖ್ಯಾನವನ್ನೂ ನಿನಗೆ ಹೇಳಿರುವೆನು.

೧೨೮ ಎಲೈ ಬ್ರಾಹ್ಮಣೋತ್ತಮನೇ ಶ್ರೀಕೃಷ್ಣಚರಿತ್ರೆಯು ಕ್ಷಣಕ್ಷಣಕ್ಕೂ ಹೊಸಹೊಸದಾಗುವುದು. ಅದನ್ನು ಕೇಳುವವರಿಗೆ ತೃಪ್ತಿಯೆಂಬುದೇ ಇಲ್ಲ. ಶ್ರೇಯಸ್ಸಿಗೆ ಸಾಧಕವಾದುದರಲ್ಲಿ ಯಾರಿಗೆ ತಾನೇ ತೃಪ್ತಿಯುಂಟಾದೀತು.

೧೨೯. ನಾನು ಗುರುಮುಖದಿಂದ ಕೇಳಿದಂತೆ ಶ್ರೀಕೃಷ್ಣನ ರಮ್ಯವಾದ ಚರಿತ್ರೆಯನ್ನು ನಿನಗೆ ವಿವರಿಸಿರುವೆನು. ನಿನ್ನ ಇಷ್ಟಾರ್ಥವಿನ್ನೇನಿದೆ? ಯಾವ ಕಥೆಯನ್ನು ಕೇಳಲು ನಿನಗೆ ಬಯಕೆಯಿದೆ ತಿಳಿಸು.

೧೩೦ ನಾರದ ;—ಎಲೈ ದಯಾಮಯನೇ, ಪೂರ್ವದಲ್ಲಿ ನೀನು ಗುರುಮುಖದಿಂದ ಮಂಗಳಕರವಾದ ಶ್ರೀಕೃಷ್ಣಚರಿತ್ರೆಯ ಯಾವ ಯಾವ ಅಂಶವನ್ನು ಕೇಳಿರುವೆಯೋ ಅವೆಲ್ಲವನ್ನೂ ಜಗದ್ಗುರುವಾದ ನೀನು ನನಗೆ ವಿಸ್ತರಿಸಿ ಹೇಳು.

॥ ಸೂತ ಉವಾಚ ॥

ಶ್ರುತ್ವಾ ದೇವರ್ಷಿವಚನಂ ಋಷಿರ್ನಾರಾಯಣಃ ಸ್ವಯಂ ।
ಅಪರಂ ಕೃಷ್ಣಮಾಹಾತ್ಮ್ಯಂ ಪ್ರವಕ್ತುಮುಪಚಕ್ರಮೇ ॥ ೧೩೧ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ಶ್ರೀಕೃಷ್ಣ ಜನ್ಮಖಂಡೇ ವಿಪ್ರಪತ್ನೀಮೋಕ್ಷಣಪ್ರಸ್ತಾವೋ ನಾಮಾಷ್ಟಾದಶೋಽಧ್ಯಾಯಃ

---

೧೩೧. ಸೂತ :—ದೇವರ್ಷಿಯಾದ ನಾರದನ ಮಾತನ್ನು ಕೇಳಿ ನಾರಾಯಣಮಹರ್ಷಿಯು ಶ್ರೀಕೃಷ್ಣನ ಮತ್ತೊಂದು ಮಹಿಮೆಯನ್ನು ವರ್ಣಿಸಲು ಪ್ರಾರಂಭಿಸಿದನು.

ಇಲ್ಲಿಗೆ ಶ್ರೀಬ್ರಹ್ಮವೈವರ್ತ ಮಹಾಪುರಾಣದ ಶ್ರೀಕೃಷ್ಣಜನ್ಮಖಂಡದಲ್ಲಿ ವಿಪ್ರಪತ್ನಿಯರಮೋಕ್ಷಣಪ್ರಸ್ತಾವವೆಂಬ ಹದಿನೆಂಟನೆಯ ಅಧ್ಯಾಯವು ಮುಗಿದುದು

ಹದಿನೆಂಟನೆಯ ಅಧ್ಯಾಯದ ಸಾರಾಂಶ

ಒಮ್ಮೆ ಮಾಧವನು ಬಲರಾಮನೊಡನೆಯೂ ಇತರ ಗೋಪಾಲಕರೊಡನೆಯೂ ಯಮುನಾತೀರದ ಮಧುವನದಲ್ಲಿ ಗೋವುಗಳನ್ನು ಮೇಯಿಸುತ್ತ ಕ್ರೀಡಿಸುತ್ತಿದ್ದನು. ಬಹಳ ಹೊತ್ತು ಕ್ರೀಡಿಸಿದನಂತರ ಎಲ್ಲರೂ ಹಸಿವು ಬಾಯಾರಿಕೆಗಳಿಂದ ಪೀಡಿತರಾದರು. ಆಗ ಗೋಪಾಲಕರೆಲ್ಲರೂ ಶ್ರೀಕೃಷ್ಣನನ್ನು ಮೊರೆಯಿಡಲು ಶ್ರೀಕೃಷ್ಣನು ಶ್ರೀವನದ ಸಮೀಪದಲ್ಲಿದ್ದ ಯಜ್ಞವಾಟಕ್ಕೆ ಅವರನ್ನು ಕಳುಹಿಸಿದನು. ಅವರು ಅಲ್ಲಿಗೆಹೋಗಿ ಯಜ್ಞಕರ್ಮದಲ್ಲಿ ನಿರತರಾಗಿದ್ದ ಬ್ರಾಹ್ಮಣರನ್ನು ಕುರಿತು ಅನ್ನವನ್ನು ಬೇಡಿದರು. ಆ ಬ್ರಾಹ್ಮಣರು ಇವರ ಬೇಡಿಕೆಯನ್ನು ಕಿವಿಗೆ ಹಾಕಿಕೊಳ್ಳದಿರಲು ಅವರ ಪತ್ನಿಯರನ್ನು ಕುರಿತು ಬಾಲಕರು ಅನ್ನವನ್ನು ಬೇಡಿದರು. ಮಾತೆಗೆ ಮಕ್ಕಳಲ್ಲಿ ಕರುಣೆಯು ಸ್ವಾಭಾವಿಕವಲ್ಲವೇ? ಹಸಿದು ಬಳಲಿಬಂದಿರುವ ಮಕ್ಕಳನ್ನು ನೋಡಿ ಆ ವಿಪ್ರಪತ್ನಿಯರು ಆ ಬಾಲಕರ ಪೂರ್ವೋತ್ತರವನ್ನೆಲ್ಲ ವಿಚಾರಿಸಿ, ಶ್ರೀಕೃಷ್ಣನ ಕಡೆಯವರೆಂದು ತಿಳಿದು ಷಡ್ರಸೋಪೇತವಾದ ಮಿಷ್ಟಾನ್ನವನ್ನು ಮಾಡಿಕೊಂಡು ಶ್ರೀಕೃಷ್ಣನಿದ್ದೆಡೆಗೇ ಬಂದು ಅವರೆಲ್ಲರಿಗೂ ಉಣಬಡಿಸಿ ತೃಪ್ತಿಪಡಿಸಿದರು. ಅಲ್ಲದೆ ಭಕ್ತಿವಿನಯಗಳಿಂದ ಶ್ರೀಕೃಷ್ಣನನ್ನು ಸ್ತುತಿಸಿ ಮೆಚ್ಚಿಸಿದರು. ಸಂತುಷ್ಟಾಂತರಂಗನಾದ ಶ್ರೀಕೃಷ್ಣನು ಅವರಿಗೆ ಗೋಲೋಕಪ್ರಾಪ್ತಿಯಾಗುವಂತೆ ಅನುಗ್ರಹಿಸಿ ತನ್ನ ಮಾಯಾಮಹಿಮೆಯಿಂದ ಆ ವಿಪ್ರಪತ್ನಿಯರ ಛಾಯೆಯನ್ನು ಸೃಜಿಸಿ ಅವರವರ ಮನೆಗೆ ಕಳುಹಿಸಿದನು. ಆ ವೇಳೆಗೆ ತಮ್ಮ ಪತ್ನಿಯರನ್ನು ಮನೆಯಲ್ಲಿ ಕಾಣದೆ ಅರಸಿಕೊಂಡು ಬರುತ್ತಿದ್ದ ವಿಪ್ರರು ದಾರಿಯಲ್ಲಿ ಆ ಛಾಯಾ ಸ್ತ್ರೀಯರನ್ನು ಕಂಡು ಅವರಿಂದ ಶ್ರೀಕೃಷ್ಣಪರಮಾತ್ಮನ ಮಹಿಮೆಯನ್ನು ಕೇಳಿ ಸಂತಸಗೊಂಡು ಅವರೊಡನೆ ಹಿಂತಿರುಗಿ ಸುಖವಾಗಿದ್ದರು. (ಪೂರ್ವದಲ್ಲಿ ಒಮ್ಮೆ ಸಪ್ತರ್ಷಿಗಳ ಪತ್ನಿಯರ ಸೌಂದರ್ಯಕ್ಕೆ ಮನಸೋತ ಅಗ್ನಿದೇವನು ತನ್ನ ಜ್ವಾಲೆಯಿಂದ ಅವರನ್ನು ಸ್ಪರ್ಶಿಸಲು ಕುಪಿತನಾದ ಅಂಗಿರಸನು 'ಪರಪುರುಷ ಸ್ಪರ್ಶದಿಂದ ದುಷ್ಟರಾದ ಋಷಿಪತ್ನಿಯರು ಭೂಲೋಕದಲ್ಲಿ ದ್ವಿಜಪತ್ನಿಯರಾಗಿ ಹುಟ್ಟಿ ಶ್ರೀಕೃಷ್ಣನ ದರ್ಶನವನ್ನು ಪಡೆದು ಮುಕ್ತರಾಗುವಂತೆಯೂ, ಅಗ್ನಿಯು ಸರ್ವಭಕ್ಷಕನಾಗುವಂತೆಯೂ ಶಾಪವಿತ್ತನು. ಅದರಂತೆ ಆ ದ್ವಿಜಪತ್ನಿಯರು ಶಾಪ ವಿಮುಕ್ತರಾಗಿ ತಮ್ಮ ತಮ್ಮ ಸ್ಥಾನಕ್ಕೆ ತೆರಳಿದರು).

— ॥ ಓಂ ॥—

—॥ ಶ್ರೀ ಗಣೇಶಾಯ ನಮಃ ॥—

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಶ್ರೀಕೃಷ್ಣಜನ್ಮಖಂಡೇ

॥ ಏಕೋನವಿಂಶೋಽಧ್ಯಾಯಃ ॥

॥ ಶ್ರೀ ನಾರಾಯಣ ಉವಾಚ ॥

ಏಕದಾ ಬಾಲಕೈಃ ಸಾರ್ಧಂ ಬಲದೇವಂ ವಿನಾ ಹರಿಃ ।
ಜಗಾಮ ಯಮುನಾತೀರಂ ಯತ್ರ ಕಾಲೀಯಮಂದಿರಂ ॥ ೧ ॥

ಪರಿಪಕ್ವಫಲಂ ಭುಕ್ತ್ವಾ ಯಮುನಾತೀರಜೇ ವನೇ ।
ಸ್ವೇಚ್ಛಾಮಯಸ್ತೃಟ್ಪರೀತಃ ಪಪೌ ಚ ನಿರ್ಮಲಂ ಜಲಂ ॥ ೨ ॥

ಗೋಕುಲಂ ಚಾರಯಾಮಾಸ ಶಿಶುಭಿಃ ಸಹ ಕಾನನೇ ।
ವಿಜಹಾರ ಚ ತೈಸ್ಸಾರ್ಧಂ ಸ್ಥಾಪಯಾಮಾಸ ಗೋಕುಲಂ ॥ ೩ ॥

ಹತ್ತೊಂಭತ್ತನೆಯ ಅಧ್ಯಾಯವು

೧. ಶ್ರೀನಾರಾಯಣ :– ಒಮ್ಮೆ ಶ್ರೀಹರಿಯು ಬಲರಾಮನನ್ನು ಬಿಟ್ಟು ಇತರ ಗೋಪಾಲಕರೊಡನೆ ಯಮುನಾತೀರದಲ್ಲಿದ್ದ ಕಾಳಿಂಗನೆಂಬ ಸರ್ಪರಾಜನ ನಿವಾಸಸ್ಥಾನಕ್ಕೆ ಹೋದನು.

೨. ಯಮುನಾತೀರದ ವನದಲ್ಲಿದ್ದ ಪಕ್ವಫಲಗಳನ್ನು ಸ್ವೇಚ್ಛೆಯಾಗಿ ತಿಂದು ಬಾಯಾರಿಕೆಯಿಂದ ಪೀಡಿತನಾಗಿ ಯಮುನೆಯ ನಿರ್ಮಲಜಲವನ್ನು ಪಾನ ಮಾಡಿದನು.

೩. ಅನಂತರ ಸುತ್ತಮುತ್ತಲಿನ ಕಾನನದಲ್ಲಿ ಗೋಪಾಲಕರೊಡನೆ ಗೋವುಗಳನ್ನು ಮೇಯಿಸಿ, ಅವರೊಡನೆ ವಿಹರಿಸಿ ಗೋವುಗಳನ್ನೆಲ್ಲ ಒಂದೆಡೆ ಸೇರಿಸಿದನು.

ಕ್ರೀಡಾನಿಮಗ್ನಚಿತ್ತೋಽಯಂ ಬಾಲಕಾಶ್ಚ ಮುದಾನ್ವಿತಾಃ ।
ಭುಕ್ತ್ವಾ ನವತೃಣಂ ಗಾವೋ ವಿಷತೋಯಂ ಪಪುರ್ಮುನೇ ॥ ೪ ॥

ವಿಷಾಕ್ತಂ ಚ ಜಲಂ ಪೀತ್ವಾ ದಾರುಣಾಂತಕಚೇಷ್ಟಯಾ ।
ಜ್ವಾಲಾಭಿಃ ಕಾಲಕೂಟಾನಾಂ ಸದ್ಯಃ ಪ್ರಾಣಾಂಶ್ಚ ತತ್ಯಜುಃ ॥ ೫ ॥

ದೃಷ್ಟ್ವಾ ಮೃತಂ ಗೋಸಮೂಹಂ ಗೋಪಾಶ್ಚಿಂತಾಕುಲಾ ಭಿಯಾ ।
ವಿಷಣ್ಣವದನಾಃ ಸರ್ವೇ ತಮೂಚುರ್ಮಧುಸೂದನಂ ॥ ೬ ॥

ಜ್ಞಾತ್ವಾ ಸರ್ವಂ ಜಗನ್ನಾಥೋ ಜೀವಯಾಮಾಸ ಗೋಕುಲಂ ।
ಉತ್ತಸ್ಥುಸ್ತತ್ಕ್ಷಣಂ ಗಾವೋ ದದೃಶುಃ ಶ್ರೀಹರೇರ್ಮುಖಂ ॥ ೭ ॥

ಕೃಷ್ಣಃ ಕದಂಬಮಾರುಹ್ಯ ಯಮುನಾತೀರ ನೀರಜಂ ।
ಪಪಾತ ಸರ್ಪಭವನೇ ನಾಗಮಧ್ಯೇ ನರಾಕೃತಿಃ ॥ ೮ ॥

---

೪. ಎಲೈ ಮುನಿಯೇ, ಈ ರೀತಿ ಶ್ರೀಕೃಷ್ಣನು ಕ್ರೀಡಾಸಕ್ತನಾಗಿಯೂ ಗೋಪಾಲಕರು ಸಂತೋಷಚಿತ್ತರಾಗಿಯೂ ಇರುವಾಗ ಹಸುಗಳು ಚಿಗುರು ಹುಲ್ಲನ್ನು ತಿಂದು ಕಾಳಿಯ ಮಡುವಿನ ವಿಷಜಲವನ್ನು ಕುಡಿದವು.

೫. ಈರೀತಿಯಾದ ವಿಷಪೂರ್ಣಜಲವನ್ನು ಕುಡಿದು ದಾರುಣನಾದ ಅಂತಕನ ಪ್ರೇರಣೆಯಂತೆ ಕಾಲಕೂಟವಿಷದ ಜ್ವಾಲೆಗೆ ಸಿಲುಕಿ ಆ ಗೋವುಗಳೆಲ್ಲ ಪ್ರಾಣತ್ಯಾಗ ಮಾಡಿದವು.

೬. ಆಗ ಗೋಪಾಲಕರು ಸತ್ತುಬಿದ್ದಿರುವ ಗೋವುಗಳನ್ನು ನೋಡಿ ಚಿಂತಾಕ್ರಾಂತರಾಗಿ ಮಧುಸೂದನನ ಸಮೀಪಕ್ಕೆ ಬಂದು ವಿಷಣ್ಣಮುಖದಿಂದ ನಡೆದ ಸಮಾಚಾರವನ್ನು ವಿಜ್ಞಾಪಿಸಿಕೊಂಡರು.

೭. ಜಗನ್ನಾಥನಾದ ಶ್ರೀಕೃಷ್ಣನು ಸತ್ಯಾಂಶವನ್ನರಿತು ಗೋವುಗಳನ್ನು ಪುನರ್ಜೀವನಗೊಳಿಸಿದನು. ಕೂಡಲೇ ಗೋವುಗಳೆಲ್ಲ ಮೇಲಕ್ಕೆದ್ದು ಶ್ರೀಹರಿಯ ಮುಖವನ್ನು ನೋಡಿದವು.

೮. ಅನಂತರ ನರರೂಪನಾದ ನಾರಾಯಣನು (ಶ್ರೀಕೃಷ್ಣ) ಯಮುನೆಯ ದಡದಲ್ಲಿದ್ದ ಕದಂಬವೃಕ್ಷವನ್ನು ಹತ್ತಿ ಕಾಳಿಯ ಮಡುವಿನೊಳಗೆ ಸರ್ಪಗಳ ಮಧ್ಯೆ ಧುಮುಕಿದನು.

ಶತಹಸ್ತಪ್ರಮಾಣಂ ಚ ಜಲೋತ್ಥಾನಂ ಬಭೂವ ಹ ।
ಬಾಲಾ ಹರ್ಷಂ ವಿಷಾದಂ ಚ ಮೇನಿರೇ ತತ್ರ ನಾರದ ॥ ೯ ॥

ಸರ್ಪೋ ನರಾಕೃತಿಂ ದೃಷ್ಟ್ವಾ ಕಾಲೀಯಃ ಕ್ರೋಧವಿಹ್ವಲಃ ।
ಜಗ್ರಾಹ ಶ್ರೀಹರಿಂ ತೂರ್ಣಂ ತಪ್ತಲೋಹಂ ಯಥಾ ನರಃ ॥ ೧೦ ॥

ದಗ್ಧಕಂಠೋದರೋ ನಾಗಶ್ಚೋದ್ವಿಗ್ನೋ ಬ್ರಹ್ಮತೇಜಸಾ ।
ಪ್ರಾಣಾ ಯಾಂತ್ಯೇವಮುಕ್ತ್ವಾ ಚ ಚಕಾರೋದ್ವಮನಂ ಪುನಃ ॥ ೧೧ ॥

ಭಗ್ನದಂತೋ ರಕ್ತಮುಖಃ ಕೃಷ್ಣವಜ್ರಾಂಗಚರ್ವಣಾತ್ ।
ರಕ್ತವಕ್ತ್ರಸ್ಯ ಭಗವಾನುತ್ತಸ್ಥೌ ಮಸ್ತಕೋಪರಿ ॥ ೧೨ ॥

ನಾಗೋ ವಿಶ್ವಂಭರಾಕ್ರಾಂತಃ ಸ ಪ್ರಾಣಾಂಸ್ತ್ಯಕ್ತುಮುದ್ಯತಃ ।
ಚಕಾರ ರಕ್ತೋದ್ವಮನಂ ಪಪಾತ ಮೂರ್ಛಿತೋ ಮುನೇ ॥ ೧೩ ॥

---

೯. ಆಗ ಅವನು ಧುಮುಕಿದ ಸ್ಥಳದಲ್ಲಿ ನೀರು ನೂರು ಮೊಳ ಮೇಲಕ್ಕೆ ಹಾರಿತು. ಎಲೈ ನಾರದನೇ, ಶ್ರೀಕೃಷ್ಣನು ಈರೀತಿ ಧುಮುಕಿದುದನ್ನು ನೋಡಿ ಗೋಪಾಲಕರೆಲ್ಲರೂ ಏಕಕಾಲದಲ್ಲಿಯೇ ಹರ್ಷವಿಷಾದಗಳನ್ನು ಹೊಂದಿದರು.

೧೦ ಆ ಮಡುವಿನಲ್ಲಿದ್ದ ಕಾಲಿಯ ಸರ್ಪನು ಶ್ರೀಹರಿಯನ್ನು ಮನುಜ ಸಾಮಾನ್ಯನೆಂದು ತಿಳಿದು ಕ್ರೋಧಾವಿಷ್ಟನಾಗಿ ಮನುಜನು ಕಾದ ಕಬ್ಬಿಣವನ್ನು ಹಿಡಿಯುವಂತೆ ಶ್ರೀಹರಿಯನ್ನು ಹಿಡಿದನು

೧೧. ಶ್ರೀಹರಿಯ ಬ್ರಹ್ಮತೇಜಸ್ಸಿನಿಂದ ದಗ್ಧವಾದ ಕಂಠಪ್ರದೇಶವುಳ್ಳ ಆ ಸರ್ಪರಾಜನು ಚಿಂತಾಕ್ರಾಂತನಾಗಿ 'ಅಯ್ಯೋ ನನ್ನ ಪ್ರಾಣಗಳು ಹೋಗುತ್ತಿವೆ' ಎಂದು ಹೇಳುತ್ತ ಶ್ರೀಹರಿಯನ್ನು ವಮನಮಾಡಿದನು.

೧೨. ಶ್ರೀಕೃಷ್ಣನ ವಜ್ರಶರೀರವನ್ನು ನುಂಗಲು ಹೋದ ಕಾಳಿಯನ ಹಲ್ಲುಗಳು ಮುರಿದು ಬಾಯೆಲ್ಲ ರಕ್ತಮಯವಾಯಿತು. ಈ ರೀತಿ ರಕ್ತಮುಖನಾದ ಕಾಳಿಯನ ತಲೆಯಮೇಲೆ ಶ್ರೀಹರಿಯು ನಿಂತನು.

೧೩. ಆಗ ಆ ಕಾಳಿಯನು ಉದರದಲ್ಲಿ ಬ್ರಹ್ಮಾಂಡವನ್ನು ತುಂಬಿಕೊಂಡಿರುವ ಶ್ರೀಹರಿಯ ಭಾರವನ್ನು ತಾಳಲಾರದೆ ಪ್ರಾಣಬಿಡುವಂತಾದನು. ಕೂಡಲೇ ರಕ್ತವನ್ನು ಕಾರಿ ಮೂರ್ಛಿತನಾಗಿ ಬಿದ್ದನು.

ದೃಷ್ಟ್ವಾ ತಂ ಮೂರ್ಛಿತಂ ನಾಗಾ ರುರುಧುಃ ಪ್ರೇಮವಿಹ್ವಲಾಃ ।
ಕೇಚಿತ್ಪಲಾಯಿತಾ ಭೀತಾಃ ಕೇಚಿತ್ಪ್ರವಿವಿಶುರ್ಬಿಲಂ ॥ ೧೪ ॥

ಮರಣಾಭಿಮುಖಂ ಕಾಂತಂ ದೃಷ್ಟ್ವಾ ಸಾ ಸುರಸಾ ಸತೀ ।
ನಾಗಿನೀಭಿಃ ಸಹ ಪ್ರೇಮ್ಣಾ ರುರೋದ ಪುರತೋ ಹರೇಃ ॥ ೧೫ ॥

ಪುಟಾಂಜಲಿಯುತಾ ತೂರ್ಣಂ ಪ್ರಣಮ್ಯ ಶ್ರೀಹರಿಂ ಭಿಯಾ ।
ಧೃತ್ವಾ ಪಾದಾರವಿಂದೇ ಚ ತಮುವಾಚ ಭಿಯಾಽಽಕುಲಾ ॥ ೧೬ ॥

॥ ಸುರಸೋವಾಚ ॥

ಹೇ ಜಗತ್ಕಾಂತ ಮೇ ಕಾಂತಂ ದೇಹಿ ಮಾನಂ ಚ ಮಾನದ ।
ಪತಿಃ ಪ್ರಾಣಾಧಿಕಃ ಸ್ತ್ರೀಣಾಂ ನಾಸ್ತಿ ಬಂಧುಶ್ಚ ತತ್ಪರಃ ॥ ೧೭ ॥

---

೧೪. ಈರೀತಿ ಕಾಳಿಯನು ಮೂರ್ಛಿತನಾದುದನ್ನು ನೋಡಿ ಅಲ್ಲಿದ್ದ ಇತರ ಸರ್ಪಗಳೆಲ್ಲವೂ ಸ್ನೇಹದಿಂದ ಗೋಳಾಡಿದವು. ಕೆಲವು ಸರ್ಪಗಳು ಹೆದರಿ ಓಡಿದವು. ಕೆಲವು ಬಿಲಗಳನ್ನು ಹೊಕ್ಕವು.

೧೫. ಮರಣಾಭಿಮುಖನಾದ ತನ್ನ ಪತಿಯನ್ನು ನೋಡಿ ಪತಿವ್ರತೆಯಾದ ಸುರಸೆಯೆಂಬ ನಾಗಕನ್ನಿಕೆಯು ಇತರ ನಾಗಕನ್ನಿಕೆಯರೊಡನೆ ವಿರಹಾರ್ತಳಾಗಿ ಶ್ರೀಹರಿಯ ಮುಂದೆ ಗೋಳಾಡಿದಳು.

೧೬. ಕೈಮುಗಿದುಕೊಂಡು ಭಯಭಕ್ತಿಯಿಂದ ಶ್ರೀಹರಿಗೆ ವಂದಿಸಿ ಅವನ ಪಾದಾರವಿಂದಗಳನ್ನು ಹಿಡಿದುಕೊಂಡು ಭಯವಿಹ್ವಲಳಾಗಿ ಈರೀತಿ ವಿಜ್ಞಾಪಿಸಿಕೊಂಡಳು.

೧೭. ಸುರಸೆ :— ಎಲೈ ಜಗದೊಡೆಯನೇ, ನನ್ನ ಪತಿಯನ್ನು ಉಳಿಸಿಕೊಟ್ಟು ನನ್ನ ಮಾನವನ್ನು ಕಾಪಾಡು. ಸ್ತ್ರೀಯರಿಗೆ ಪತಿಯು ಪ್ರಾಣಕ್ಕಿಂತ ಅಧಿಕನು. ಅವನಿಗಿಂತ ಮೇಲಾದ ಬಂಧುಗಳಾರೂ ಇಲ್ಲ.

ಸಕಲಭುವನನಾಥ ಪ್ರಾಣನಾಥಂ ಮದೀಯಂ ।
ನ ಕುರು ವಧಮನಂತ ಪ್ರೇಮಸಿಂಧೋ ಸುಬಂಧೋ ॥
ಅಖಿಲ ಭುವನಬಂಧೋ ರಾಧಿಕಾಪ್ರೇಮಸಿಂಧೋ ।
ಪತಿಮಿಹ ಕುರು ದಾನಂ ಮೇ ವಿಧಾತುರ್ವಿಧಾತಃ ॥ ೧೮ ॥

ತ್ರಿನಯನವಿಧಿಶೇಷಾಃ ಷಣ್ಮುಖಶ್ಚಾಸ್ಯಸಂಘೈಃ ।
ಸ್ತವನವಿಷಯಜಾಡ್ಯಾತ್ ಸ್ತೋತುಮೀಶಾ ನ ವಾಣೀ ॥
ನಖಲು ನಿಖಿಲವೇದಾಃ ಸ್ತೋತುಮನ್ಯೇಪಿ ದೇವಾಃ ।
ಸ್ತವನವಿಷಯಶಕ್ತಾಃ ಸಂತಿ ಸಂತಸ್ತ್ವೈವ ॥ ೧೯ ॥

ಕುಮತಿರಹಮಧಿಜ್ಞಾ ಯೋಷಿತಾಂ ಕ್ವಾಧಮಾ ವಾ ।
ಕ್ವ ಭುವನಗತಿರೀಶಶ್ಚಕ್ಷುಷೋ ಗೋಚರೋಽಪಿ ॥
ವಿಧಿಹರಿಹರಶೇಷೈ ಸ್ತೂಯಮಾನಶ್ಚ ಯಸ್ತ್ವ ।
ಮತನುಮನುಜಮೀಶಂ ಸ್ತೋತುಮಿಚ್ಛಾಮಿ ಕಿಂ ತ್ವಾಂ ॥ ೨೦ ॥

---

೧೮. ಸಕಲ ಭುವನಗಳಿಗೊಡೆಯನೂ, ಅನಂತಪ್ರೇಮಸಾಗರನೂ, ಸಕಲರ ಬಂಧುವೂ ಆದ ಎಲೈ ಪರಮಾತ್ಮನೇ, ನನ್ನ ಪ್ರಾಣನಾಥನ ವಧೆಯನ್ನು ಮಾಡಬೇಡ. ನಿಖಿಲಲೋಕದ ನೆಂಟನೂ, ರಾಧೆಯ ಪ್ರೇಮಸಿಂಧುವೂ, ವಿಧಾತೃವಿಗೆ ವಿಧಾತನೂ ಆದ ಸರ್ವೇಶನೇ, ನನಗೆ ಪತಿದಾನವನ್ನು ಕೊಡುವವನಾಗು.

೧೯. ಮಹೇಶ್ವರ, ಬ್ರಹ್ಮ, ಆದಿಶೇಷ ಮತ್ತು ಷಣ್ಮುಖರು ತಮ್ಮ ವಚನ ಪಂಕ್ತಿಗಳಿಂದ ನಿನ್ನನ್ನು ಸ್ತುತಿಸಲಾರರು. ಸರಸ್ವತೀದೇವಿಯೂ ಕೂಡ ನಿನ್ನನ್ನು ಸ್ತುತಿಸಲಶಕ್ತಳಾಗಿರುವಳು. ಸಮಸ್ತ ವೇದಗಳಾಗಲೀ, ಇತರ ದೇವತೆಗಳಾಗಲೀ ನಿನ್ನನ್ನು ಸ್ತುತಿಸಲು ಅಸಮರ್ಥರು. ಸಂತರು ಮಾತ್ರ ನಿನ್ನನ್ನು ಹೊಗಳಲು ಸಮರ್ಥರಾಗುವರು.

೨೦. ಹೀಗಿರುವಾಗ ಸ್ತ್ರೀಯರಲ್ಲಿ ಅಲ್ಪಳೂ, ಅಲ್ಪಜ್ಞಳೂ ಆದ ನಾನೆಲ್ಲಿ ? ವಿಶ್ವವ್ಯಾಪಕನೂ, ಸರ್ವೇಶ್ವರನೂ ಆದ ನೀನು ನನ್ನ ಕಣ್ಣಿಗೆ ಗೋಚರವಾಗುವುದೆಂದರೇನು ? ಬ್ರಹ್ಮವಿಷ್ಣುಮಹೇಶ್ವರರಿಂದಲೂ, ಆದಿಶೇಷನಿಂದಲೂ ಸ್ತುತಿಸಲ್ಪಡುವ ಅಶರೀರಿಯಾದ ನಿನ್ನನ್ನು ನಾನು ಸ್ತುತಿಸಲು ಬಯಸುವುದುಚಿತವೇ ?

ಸ್ತವನವಿಷಯಭೀತಾ ಪಾರ್ವತೀ ಯಸ್ಯ ಪದ್ಮಾ ।
ಶ್ರುತಿಗಣಜನಯಿತ್ರೀ ಸ್ತೋತುಮೀಶಾ ನ ಯಂ ತ್ವಾಂ ॥
ಕಲಿಕಲುಷನಿಮಗ್ನಾ ವೇದವೇದಾಂಗ ಶಾಸ್ತ್ರ-
ಶ್ರವಣವಿಷಯಮೂಢಾ ಸ್ತೋತುಮಿಚ್ಛಾಮಿ ಕಿಂ ತ್ವಾಂ ॥ ೨೧ ॥

ಶಯಾನೋ ರತ್ನಪರ್ಯಂಕೇ ರತ್ನಭೂಷಣಭೂಷಿತಃ ।
ರತ್ನಭೂಷಣಭೂಷಾಂಗೀ ರಾಧಾವಕ್ಷಸಿ ಸಂಸ್ಥಿತಃ ॥ ೨೨ ॥

ಚಂದನೋಕ್ಷಿತಸರ್ವಾಂಗಃ ಸ್ಮೇರಾನನಸರೋರುಹಃ ।
ಪ್ರೋದ್ಯತ್ಪ್ರೇಮರಸಾಂಭೋಧೌ ನಿಮಗ್ನಃ ಸತತಂ ಸುಖಾತ್ ॥ ೨೩ ॥

ಮಲ್ಲಿಕಾಮಾಲತೀ ಮಾಲಾಜಾಲೈಃ ಶೋಭಿತಶೇಖರಃ ।
ಪಾರಿಜಾತಪ್ರಸೂನಾನಾಂ ಗಂಧಾಮೋದಿತಮಾನಸಃ ॥ ೨೪ ॥

---

೨೧. ಯಾವ ನಿನ್ನನ್ನು ಸ್ತುತಿಸುವ ವಿಷಯದಲ್ಲಿ ಪಾರ್ವತೀ ಮತ್ತು ಲಕ್ಷ್ಮೀದೇವಿಯರು ಭಯಗೊಂಡು ಮೂಕರಾಗಿರುವರೋ, ವೇದಮಾತೆಯಾದ ಸಾವಿತ್ರಿದೇವಿಯು ಯಾವ ನಿನ್ನನ್ನು ಹೊಗಳಲಾರಳೋ ಅಂಥ ಅಪಾರಮಹಿಮನಾದ ನಿನ್ನನ್ನು ಕಲಿಯ ದೋಷಗಳಲ್ಲಿ ಮುಳುಗಿ ವೇದವೇದಾಂಗ ಶಾಸ್ತ್ರಗಳ ಶ್ರವಣವನ್ನೇ ಮಾಡದಿರುವ ಮೂಢಳಾದ ನಾನು ಸ್ತುತಿಸಬಯಸುವುದು ತಾನೇ ಹೇಗೆ?

೨೨. ನೀನು ರತ್ನಾಲಂಕಾರಭೂಷಿತನಾಗಿ, ಒಮ್ಮೆ ರತ್ನಮಂಚದಲ್ಲಿ ಮಲಗಿರುವೆ. ಮತ್ತೊಮ್ಮೆ ರತ್ನಾಲಂಕಾರಭೂಷಿತಳಾದ ರಾಧಾದೇವಿಯ ವಕ್ಷಃಸ್ಥಲದಲ್ಲಿ ನೆಲಸಿರುವೆ.

೨೩. ಸರ್ವಾಂಗಗಳಿಗೂ ಚಂದನವನ್ನು ಲೇಪಿಸಿಕೊಂಡು ಮುಖಾರವಿಂದದಲ್ಲಿ ಮುಗುಳುನಗೆಯನ್ನು ಬೀರುತ್ತ ಸರ್ವದಾ ಉಕ್ಕುತ್ತಿರುವ ಪ್ರೇಮರಸದ ಸಮುದ್ರದಲ್ಲಿ ಸುಖವಾಗಿ ಮುಳುಗಿರುವೆ.

೨೪-೨೫. ಶಿಖೆಯಲ್ಲಿ ಮುಡಿದಿರುವ ಮಲ್ಲಿಗೆ, ಜಾಜಿ ಮುಂತಾದ ಹೂಮಾಲೆಗಳಿಂದ ಶೋಭಿತನಾಗಿಯೂ, ಪಾರಿಜಾತಪುಷ್ಪಗಳ ಸುವಾಸನೆಯಿಂದ ವಿಕಸಿತವಾದ

ಪುಂಸ್ಕೋಕಿಲಕಲಧ್ವಾನೈರ್ಭ್ರಮರಧ್ವನಿಸಂಯುತೈಃ ।
ಕುಸುಮೇಷುವಿಕಾರೇಣ ಪುಲಕಾಂಕಿತವಿಗ್ರಹಃ ॥ ೨೫ ॥

ಪ್ರಿಯಾಪ್ರದತ್ತತಾಂಬೂಲಂ ಭುಕ್ತವಾನ್ಯಃ ಸದಾ ಮುದಾ ।
ವೇದಾ ಅಶಕ್ತಾ ಯಂ ಸ್ತೋತುಂ ಜಡೀಭೂತಾ ವಿಚಕ್ಷಣಾಃ ॥ ೨೬ ॥

ತಮನಿರ್ವಚನೀಯಂ ಚ ಕಿಂ ಸ್ತೌಮಿ ನಾಗವಲ್ಲಭಾ ।
ವಂದೇಽಹಂ ತ್ವತ್ಪದಾಂಭೋಜಂ ಬ್ರಹ್ಮೇಶಶೇಷಸೇವಿತಂ ॥ ೨೭ ॥

ಲಕ್ಷ್ಮೀ ಸರಸ್ವತೀ ದುರ್ಗಾ ಜಾಹ್ನವೀ ವೇದಮಾತೃಭಿಃ ।
ಸೇವಿತಂ ಸಿದ್ಧಸಂಘೈಶ್ಚ ಮುನೀಂದ್ರೈರ್ಮುನಿಭಿಃ ಸದಾ ॥ ೨೮ ॥

ಮನಸ್ಸುಳ್ಳವನಾಗಿಯೂ ಇರುವ ನೀನು ಗಂಡುಕೋಗಿಲೆಗಳ ಇಂಚರದಿಂದಲೂ, ದುಂಬಿಗಳ ಝೇಂಕಾರದಿಂದಲೂ ಕುಸುಮಾಸ್ತ್ರನಾದ ಮನ್ಮಥನ ವಿಕಾರಕ್ಕೊಳಗಾಗಿ ರೋಮಾಂಚಿತ ಶರೀರನಾಗಿರುವೆ.

೨೬. ಈ ರೀತಿಯಾಗಿದ್ದುಕೊಂಡು ಪ್ರಿಯೆಯು ಕೊಟ್ಟ ತಾಂಬೂಲವನ್ನು ಸದಾಕಾಲದಲ್ಲೂ ಸಂತೋಷದಿಂದ ಚರ್ವಣಮಾಡುತ್ತಿರುವ ಯಾವ ನಿನ್ನನ್ನು ವೇದಗಳಾಗಲೀ, ವೇದಜ್ಞರಾಗಲೀ ಸ್ತುತಿಸಲಾರದೆ ಜಡರಾಗುವುದರಲ್ಲಿ ಆಶ್ಚರ್ಯವೇನು ?

೨೭. ಇಂತು ಅನಿರ್ವಚನೀಯನಾದ ನಿನ್ನನ್ನು ನಾಗಪತ್ನಿಯಾದ ನಾನು ಎಂತು ನುತಿಸಲಿ? ಬ್ರಹ್ಮ, ಈಶ ಮತ್ತು ಆದಿಶೇಷನಿಂದ ಸೇವಿತವಾದ ನಿನ್ನ ಪಾದಕಮಲಗಳಿಗೆ ನಾನು ಭಕ್ತಿಪೂರ್ವಕವಾಗಿ ವಂದಿಸುವೆನು.

೨೮. ಲಕ್ಷ್ಮಿ, ಸರಸ್ವತಿ, ದುರ್ಗಿ, ಜಾಹ್ನವಿ ಮತ್ತು ವೇದಮಾತೆಯಾದ ಸಾವಿತ್ರಿ ಮುಂತಾದ ದೇವಿಯರಿಂದಲೂ, ಸಿದ್ಧರು, ಮುನಿಗಳು ಮತ್ತು ಮನುಗಳ ಸಂಘದಿಂದಲೂ ಸರ್ವದಾ ಸೇವಿತನಾದ ನಿನ್ನನ್ನು ನಾನು ಸ್ತುತಿಸುವೆನು

ನಿಷ್ಕಾರಣಾಯಾಖಿಲಕಾರಣಾಯ ।
ಸರ್ವೇಶ್ವರಾಯಾಪಿ ಪರಾತ್ಪರಾಯ ॥
ಸ್ವಯಂಪ್ರಕಾಶಾಯ ಪರಾವರಾಯ ।
ಪರಾವರಾಣಾಮಧಿಪಾಯ ತೇ ನಮಃ ॥ ೨೯ ॥

ಹೇಕೃಷ್ಣ ಹೇಕೃಷ್ಣ ಸುರಾಸುರೇಶ ।
ಬ್ರಹ್ಮೇಶ ಶೇಷೇಶ ಪ್ರಜಾಪತೀಶ ॥
ಮುನೀಶ ಮನ್ವೀಶ ಚರಾಚರೇಶ ।
ಸಿದ್ಧೀಶ ಸಿದ್ಧೇಶ ಗಣೇಶ ಪಾಹಿ ॥ ೩೦ ॥

ಧರ್ಮೇಶ ಧರ್ಮೀಶ ಶುಭಾಶುಭೇಶ ।
ವೇದೇಶ ವೇದೇಷ್ವನಿರೂಪಿತಶ್ಚ ॥
ಸರ್ವೇಶ ಸರ್ವಾತ್ಮಕ ಸರ್ವಬಂಧೋ ।
ಜೀವೀಶ ಜೀವೇಶ್ವರ ಪಾಹಿಮತ್ಪ್ರಭುಂ ॥ ೩೧ ॥

---

೨೯. ಕಾರಣರಹಿತನೂ, ನಿಖಿಲಕಾರಣನೂ, ಸರ್ವೇಶ್ವರನೂ, ಪರಾತ್ಪರನೂ, ಸ್ವಯಂಜ್ಯೋತಿಃಸ್ವರೂಪನೂ, ಪರಾವರನೂ, ನಿಖಿಲಜಗತ್ತಿಗೂ ಒಡೆಯನೂ ಆದ ನಿನಗೆ ನಮಸ್ಕಾರಮಾಡುವೆನು.

೩೦. ಸುರಾಸುರರಿಗೆ ಒಡೆಯನೂ ಬ್ರಹ್ಮ, ಈಶ, ಶೇಷ ಮುಂತಾದವರಿಗೊಡೆಯನೂ, ಮನುಮುನಿಮಾನವೇಶನೂ, ಚರಾಚರಗುರುವೂ, ಸಿದ್ಧಗಣಗಳಿಗೊಡೆಯನೂ ಆದ ದೇವನೇ, ನನ್ನನ್ನು ಸಲಹು.

೩೧. ಧರ್ಮಾಧರ್ಮಿಗಳಿಗೂ, ಶುಭಾಶುಭಗಳಿಗೂ, ಚತುರ್ವೇದಗಳಿಗೂ ಈಶನೂ ವೇದಗಳಲ್ಲಿ ಅನಿರೂಪಿತನೂ, ಸರ್ವೇಶ್ವರನೂ, ಸರ್ವಾಂತರ್ಯಾಮಿಯೂ, ಸರ್ವಬಂಧುವೂ, ಜೀವಜೀವಿಗಳಿಗೊಡೆಯನೂ ಆದ ಎಲೈ ಪರಮಾತ್ಮನೇ, ನನ್ನನ್ನು ಕಾಪಾಡು.

ಇತ್ಯೇವಂ ಸ್ತವನಂ ಕೃತ್ವಾ ಭಕ್ತಿನಮ್ರಾತ್ಮಕಂಧರಾ ।
ವಿಧೃತ್ಯ ಚರಣಾಂಭೋಜಂ ತಸ್ಥೌ ನಾಗೇಶವಲ್ಲಭಾ ॥ ೩೨ ॥

ನಾಗಪತ್ನೀಕೃತಂ ಸ್ತೋತ್ರಂ ತ್ರಿಸಂಧ್ಯಂ ಯಃ ಪಠೇನ್ನರಃ ।
ಸರ್ವಪಾಪಾತ್ಪ್ರಮುಕ್ತಸ್ತು ಯಾತ್ಯಂತೇ ಶ್ರೀಹರೇಃ ಪದಂ ॥ ೩೩ ॥

ಇಹ ಲೋಕೇ ಹರೇರ್ಭಕ್ತಿಮಂತೇ ದಾಸ್ಯಂ ಲಭೇದ್ಧ್ರುವಂ ।
ಲಭತೇ ಪಾರ್ಷದೋ ಭೂತ್ವಾ ಸಾಲೋಕ್ಯಾದಿ ಚತುಷ್ಟಯಂ ॥ ೩೪ ॥

॥ ನಾರದ ಉವಾಚ ॥

ನಾಗಪತ್ನೀವಚಃಶ್ರುತ್ವಾ ಭಗವಾನ್ಸರ್ವನಂದನಃ ।
ಪ್ರಹೃಷ್ಟೋತ್ಫುಲ್ಲನಯನಃ ಕಿಮುವಾಚ ಹರಿಃ ಸ್ವಯಂ ॥
ಕಥಯಸ್ವ ಮಹಾಭಾಗೆ ರಹಸ್ಯಂ ಪರಮಾದ್ಭುತಂ ॥ ೩೫ ॥

---

೩೨. ಈ ರೀತಿ ಆ ನಾಗರಾಜನ ಪತ್ನಿಯು ಸ್ತುತಿಮಾಡಿ ಭಕ್ತಿಯಿಂದ ತಲೆಬಾಗಿ ಶ್ರೀಕೃಷ್ಣನ ಚರಣಕಮಲಗಳನ್ನು ಹಿಡಿದು ನಿಂತುಕೊಂಡಳು.

೩೩. ನಾಗರಾಜನ ಪತ್ನಿಯು ಹೇಳಿದ ಈ ಸ್ತೋತ್ರವನ್ನು ಮೂರು ಸಂಧ್ಯಾಕಾಲದಲ್ಲಿಯೂ ಪಠಿಸುವ ಮನುಷ್ಯನು ಸಕಲಪಾಪಗಳಿಂದ ಮುಕ್ತನಾಗಿ ಅಂತ್ಯಕಾಲದಲ್ಲಿ ಶ್ರೀಹರಿಯ ಪದವಿಯನ್ನು ಪಡೆಯುವನು.

೩೪. ಇಹಲೋಕದಲ್ಲಿರುವವರೆಗೆ ಹರಿಭಕ್ತಿಯನ್ನು ಪಡೆದಿದ್ದು ಅಂತ್ಯಕಾಲದಲ್ಲಿ ಶ್ರೀಹರಿಯ ದಾಸ್ಯವನ್ನು ನಿಶ್ಚಿತವಾಗಿಯೂ ಪಡೆಯುವನು. ಅಲ್ಲದೆ ಶ್ರೀಹರಿಯ ಪಾರ್ಷದನಾಗಿ ಸಾಲೋಕ್ಯವೇ ಮುಂತಾದ ಚತುರ್ವಿಧಮುಕ್ತಿಯನ್ನು ಪಡೆಯುವನು.

೩೫. ನಾರದ:—ಸರ್ವಾನಂದದಾಯಕನಾದ ಭಗವಾನ್ ಶ್ರೀಕೃಷ್ಣನು ನಾಗಪತ್ನಿಯ ಮಾತನ್ನು ಕೇಳಿ ಸಂತೋಷದಿಂದ ಅರಳಿದ ಕಣ್ಣುಗಳುಳ್ಳವನಾಗಿ ಏನು ಹೇಳಿದನು? ಎಲೈ ಮಹಾಭಾಗ್ಯಶಾಲಿಯೇ, ಅತ್ಯದ್ಭುತವೂ ಗೋಪ್ಯವೂ ಆದ ಈ ವಿಷಯವನ್ನು ನನಗೆ ತಿಳಿಸು.

॥ ಸೂತ ಉವಾಚ ॥

ನಾರದಸ್ಯ ವಚಃ ಶ್ರುತ್ವಾ ಭಗವಾನ್ಸರ್ವನಂದನಃ ।
ಉವಾಚ ಪರಮಾತ್ಮಾನಂ ಮಧುಸ್ಯಂದಂ ಪದೇಪದೇ ॥ ೩೬ ॥

॥ ನಾರಾಯಣ ಉವಾಚ ॥

ನಾಗಪತ್ನೀವಚಃಶ್ರುತ್ವಾ ಶ್ರೀಕೃಷ್ಣಸ್ತಾಮುವಾಚ ಹ ।
ಪುಟಾಂಜಲಿಯುತಾಂ ಪಾದೇ ಪತಿತಾಂ ಭಯವಿಹ್ವಲಾಂ ॥ ೩೭ ॥

॥ ಶ್ರೀಕೃಷ್ಣ ಉವಾಚ ॥

ಉತ್ತಿಷ್ಠೋತ್ತಿಷ್ಠ ನಾಗೇಶೇ ವರಂ ವೃಣು ಭಯಂ ತ್ಯಜ ॥ ೩೮ ॥

ಗೃಹಾಣ ಕಾಂತಂ ಹೇ ಮಾತರ್ಮದ್ವರಾದಜರಾಮೃತಂ ।
ಕಾಲಿಂದೀಹ್ರದಮುತ್ಸೃಜ್ಯ ಸ್ವಕೀಯಂ ಭವನಂ ವ್ರಜ ॥ ೩೯ ॥

೩೬-೩೮. ಸೂತ :—ಈ ರೀತಿಯಾದ ನಾರದನ ಮಾತನ್ನು ಕೇಳಿ ಸರ್ವಜ್ಞನಾದ ನಾರಾಯಣಮಹರ್ಷಿಯು ಪದಪದಕ್ಕೂ ಜೇನನ್ನು ಸುರಿಸುವ ಪರಮಾತ್ಮನ ಕಥೆಯನ್ನು ಹೇಳಿದನು.

ನಾರಾಯಣ :—ನಾಗಪತ್ನಿಯ ಮಾತನ್ನು ಕೇಳಿ ಅವಳನ್ನು ಕುರಿತು ಶ್ರೀಕೃಷ್ಣನು ಈ ರೀತಿಹೇಳಿದನು. ಅವಳು ಭಯಗ್ರಸ್ತಳಾಗಿ ಕೈಗಳನ್ನು ಜೋಡಿಸಿ ಕೊಂಡು ಶ್ರೀಕೃಷ್ಣನ ಪಾದಕಮಲಗಳ ಮೇಲೆ ಮಲಗಿದ್ದಳು.

ಶ್ರೀಕೃಷ್ಣ :—ಎಲೌ ನಾಗಪತ್ನಿಯೇ, ಮೇಲಕ್ಕೇಳುವವಳಾಗು, ಭಯವನ್ನು ಬಿಟ್ಟು ಬೇಕಾದ ವರವನ್ನು ಬೇಡು.

೩೯. ಎಲೌ ಮಾತೆಯೇ, ನನ್ನ ವರದಿಂದ ಜರಾಮರಣರಹಿತನಾಗಿರುವ ನಿನ್ನ ಕಾಂತನನ್ನು ಸ್ವೀಕರಿಸು. ಈ ಕಾಳಿಂದೀಮಡುವನ್ನು ಬಿಟ್ಟು ನಿನ್ನ ಮಂದಿರಕ್ಕೆ ಹಿಂತಿರುಗು.

ಭರ್ತ್ರಾ ಸಗೋಷ್ಠ್ಯಾ ಸಾರ್ಧಂ ಚ ಗಚ್ಛ ವತ್ಸೇ ಸುಖೀ ಭವ ।
ಅದ್ಯ ಪ್ರಭೃತಿ ನಾಗೇಶಿ ಭೃತ್ಯಾ ಕನ್ಯಾ ಚ ತಂ ಮಮ ॥ ೪೦ ॥

ತ್ವತ್ಪ್ರಾಣಾಧಿಕ ಏವಾಯಂ ಜಾಮಾತಾ ಚ ನ ಸಂಶಯಃ ।
ಮತ್ಪಾದಪದ್ಮಚಿಹ್ನೇನ ಗರುಡಸ್ತ್ವತ್ಪತಿಂ ಶುಭೇ ॥ ೪೧ ॥

ಕೃತ್ವಾ ಚ ಸ್ತವನಂ ಭಕ್ತ್ಯಾ ಪ್ರಣಮಿಷ್ಯತಿ ಮತ್ಪದಂ ।
ತ್ಯಜ ತ್ವಂ ಗರುಡಾದ್ಭೀತಿಂ ಶೀಘ್ರಂ ರಮಣಕಂ ವ್ರಜ ॥ ೪೨ ॥

ಹ್ರದಾನ್ನಿರ್ಗಚ್ಛ ವತ್ಸೇ ತ್ವಂ ವರಂ ವೃಣು ಯಥೇಪ್ಸಿತಂ ।
ಶ್ರೀಕೃಷ್ಣಸ್ಯ ವಚಃ ಶ್ರುತ್ವಾ ಪ್ರಸನ್ನವದನೇಕ್ಷಣಾ ॥ ೪೩ ॥

---

೪೦. ನಿನ್ನ ಪತಿಪರಿವಾರದೊಡನೆ ಹಿಂತಿರುಗಿ ಹೋಗಿ ಸುಖವಾಗಿ ಬಾಳು. ಎಲೌ ನಾಗೇಶ್ವರಿಯೇ, ಇಂದಿನಿಂದ ನೀನು ನನಗೆ ಮಗಳಾಗಿರುವೆ.

೪೧-೪೨. ನಿನ್ನ ಪ್ರಾಣಕಿಂತಲೂ ಅಧಿಕನಾದ ನಿನ್ನ ಪತಿಯು ನನಗೆ ಅಳಿಯನೆಂಬುದರಲ್ಲಿ ಸಂಶಯವಿಲ್ಲ. ಎಲೌ ಶುಭಕರಳೇ, ನಿನ್ನ ಪತಿಯ ತಲೆಯ ಮೇಲೆ ನನ್ನ ಪಾದಕಮಲಗಳ ಗುರುತಿರುವುದರಿಂದ ಗರುಡನು ನಿನ್ನ ಪತಿಯನ್ನು ಸ್ತುತಿಸಿ ಭಕ್ತಿಯಿಂದ ನನ್ನ ಪಾದಚಿಹ್ನೆಗೆ ನಮಸ್ಕರಿಸುವನು. ಆದಕಾರಣ ನೀನು ಗರುಡನ ಭಯವನ್ನು ತೊರೆದು ಜಾಗ್ರತೆ ನಿನ್ನ ಕಾಂತನನ್ನು ಸೇರಿ ರಮಣಕ ದ್ವೀಪಕ್ಕೆ ಹೋಗು.

೪೩. ಎಲೌ ಮಗಳೇ, ನೀನು ಮಡುವಿನಿಂದ ಹೊರಕ್ಕೆ ಬಂದು ನಿನಗೆ ಈಪ್ಸಿತವಾದ ವರವನ್ನು ಬೇಡು. ಶ್ರೀಕೃಷ್ಣನಾಡಿದ ಈ ಮಾತನ್ನು ಕೇಳಿ ಆ ನಾಗಪತ್ನಿಯು ಪ್ರಸನ್ನ ಮುಖಿಯಾದಳು.

ಉವಾಚ ಸಾಶ್ರುನೇತ್ರಾ ಸಾ ಭಕ್ತಿನಮ್ರಾತ್ಮ ಕಂಧರಾ ।

॥ ಸುರಸೋವಾಚ ॥

ವರಂ ದಾಸ್ಯಸಿ ಚೇದಾನೀಂ ವರದೇಶ್ವರ ಮೇಽಪಿ ಚ ॥ ೪೪ ॥

ತ್ವತ್ಪಾದಾಬ್ಜೇ ದೃಢಾಂ ಭಕ್ತಿಂ ನಿಶ್ಚಲಾಂ ದಾತುಮರ್ಹಸಿ ।
ಮನ್ಮನಸ್ತ್ವತ್ಪದಾಂಭೋಜೇ ಭ್ರಮತು ಭ್ರಮರೋ ಯಥಾ ॥ ೪೫ ॥

ತವ ಸ್ಮೃತೌ ವಿಸ್ಮೃತಿರ್ಮೇ ಕದಾಽಪಿ ನ ಭವಿಷ್ಯತಿ ।
ಸ್ವಕಾಂತೇ ಮಮ ಸೌಭಾಗ್ಯಂ ಕಾಂತೋಽಯಂ ಜ್ಞಾನಿನಾಂ ವರಃ ॥ ೪೬ ॥

ಇತ್ಯೇವಂ ಪ್ರಾರ್ಥನೀಯಂ ಚ ಪರಿಪೂರ್ಣಂ ಕುರು ಪ್ರಭೋ ।
ಇತ್ಯೇವಮುಕ್ತ್ವಾ ಸರ್ಪಸ್ತ್ರೀ ಪ್ರತಸ್ಥೌ ಪುರತೋ ಹರೇಃ ॥ ೪೭ ॥

ಶರತ್ಪಾರ್ವಣಚಂದ್ರಾಸ್ಯಂ ದದರ್ಶ ಶ್ರೀಹರೇರ್ಮುಖಂ ।
ಲೋಚನಾಭ್ಯಾಂ ಪಪೌ ವಕ್ತ್ರಂ ನಿಮೇಷರಹಿತಂ ಸತೀ ॥ ೪೮ ॥

೪೪-೪೫. ಕಣ್ಣುಗಳಲ್ಲಿ ಆನಂದಬಾಷ್ಪವನ್ನು ಸುರಿಸುತ್ತ ಭಕ್ತಿಯಿಂದ ತಲೆಬಾಗಿ ಈ ಮಾತುಗಳನ್ನು ಹೇಳಿದಳು.

ಸುರಸೆ:—ಎಲೈ ವರಪ್ರದನೇ, ನೀನು ನನಗೂ ವರವನ್ನು ಕೊಡುವುದಾದರೆ ನಿನ್ನ ಪಾದಕಮಲಗಳಲ್ಲಿ ದೃಢವೂ ನಿಶ್ಚಲವೂ ಆದ ಭಕ್ತಿಯನ್ನು ನನಗೆ ಅನುಗ್ರಹಿಸು. ನನ್ನ ಮನಸ್ಸು ನಿನ್ನ ಚರಣವೆಂಬ ಕಮಲಪುಷ್ಪಗಳಲ್ಲಿ ಭ್ರಮರದಂತೆ ಭ್ರಮಣ ಮಾಡಲಿ.

೪೬. ನನಗೆ ನಿನ್ನ ಸ್ಮರಣೆಯು ಎಂದೆಂದಿಗೂ ಮರೆಯದಂತಿರಲಿ. ಜ್ಞಾನಿಗಳಲ್ಲೆಲ್ಲ ಶ್ರೇಷ್ಠನಾದ ಈ ನನ್ನ ಪತಿಯಿಂದ ನನ್ನ ಸೌಭಾಗ್ಯವು ವೃದ್ಧಿಯಾಗಲಿ.

೪೭. ಎಲೈ ಪ್ರಭುವೇ, ಈ ರೀತಿಯಾದ ನನ್ನ ಪ್ರಾರ್ಥನೆಯನ್ನು ಪರಿಪೂರ್ಣಗೊಳಿಸು. ಈ ರೀತಿಯಾಗಿ ಹೇಳಿ ಆ ಸರ್ಪಪತ್ನಿಯು ಶ್ರೀಹರಿಯ ಮುಂದೆ ಎದ್ದುನಿಂತು ಕೈಮುಗಿದಳು.

೪೮. ಶರತ್ ಪೂರ್ಣಿಮಾ ಚಂದ್ರನಂತೆ ಮನೋಹರವಾದ ಶ್ರೀಹರಿಯ ಮುಖಾರವಿಂದದ ಮಕರಂದವನ್ನು ರೆಪ್ಪೆಬಡಿಯದಿರುವ ಎರಡು ಕಣ್ಣುಗಳೆಂಬ ಭ್ರಮರಗಳಿಂದ ಆ ಸುರಸೆಯು ಪಾನಮಾಡಿದಳು.

ಸರ್ವಾಂಗಪುಲಕೋದ್ಭಿನ್ನಾ ಸಾನಂದಾಶ್ರುಪರಿಪ್ಲುತಾ ।
ಸುಂದರಂ ಬಾಲಕಂ ದೃಷ್ಟ್ವಾ ಪುತ್ರಸ್ನೇಹಂ ಪ್ರಕುರ್ವತೀ ॥ ೪೯ ॥

ಉವಾಚ ಪುನರೇವೇದಂ ಭಕ್ತ್ಯುದ್ರೇಕಪರಿಪ್ಲುತಾ ।
ನ ಯಾಸ್ಯಾಮಿ ರಮಣಕಂ ತತ್ರ ನಾಸ್ತಿ ಪ್ರಯೋಜನಂ ॥ ೫೦ ॥

ಸರ್ಪಃ ಕರೋತು ಸಂಸಾರಂ ಕುರು ಮಾಂ ನಿಜಕಿಂಕರೀಂ ।
ನ ವಾಂಛಾ ಮಮ ಹೇ ಕೃಷ್ಣ ಸಾಲೋಕ್ಯಾದಿ ಚತುಷ್ಟಯೇ ॥ ೫೧ ॥

ತ್ವತ್ಪಾದಾಂಭೋಜಸೇವಾಯಾಃ ಕಲಾಂ ನಾರ್ಹತಿ ಷೋಡಶೀಂ ।
ವಿನಾ ತ್ವತ್ಪಾದಸೇವಾಂ ಚ ಯೋ ವಾಂಛತಿ ವರಾಂತರಂ ॥ ೫೨ ॥

ಭಾರತೇ ದುರ್ಲಭಂ ಜನ್ಮ ಲಬ್ಧ್ವಾಸೌ ವಂಚಿತಃ ಸ್ವಯಂ ।
ನಾಗಪತ್ನ್ಯಾಃ ವಚಃ ಶ್ರುತ್ವಾ ಸ್ಮೇರಾನನ ಸರೋರುಹಃ ॥ ೫೩ ॥

---

೪೯. ಸರ್ವಾವಯವಗಳಿಂದಲೂ ರೋಮಾಂಚವನ್ನು ಹೊಂದಿ ಆನಂದಾಶ್ರುಪೂರಿತಲೋಚನಳಾಗಿ ಶ್ರೀಕೃಷ್ಣನ ಗೋಪಕಿಶೋರ ವೇಷವನ್ನು ನೋಡಿ ಪುತ್ರಸ್ನೇಹವನ್ನು ವ್ಯಕ್ತಪಡಿಸಿದಳು.

೫೦. ಆಗ ಪುನಃ ಭಕ್ತಿಯು ಉದ್ರೇಕವಾಗಿ 'ನಾನು ರಮಣಕ ದ್ವೀಪಕ್ಕೆ ಹೋಗುವುದಿಲ್ಲ. ಅಲ್ಲಿ ನನಗೇನೂ ಪ್ರಯೋಜನವಿಲ್ಲ' ಎಂದು ಆ ನಾಗಪತ್ನಿಯು ನುಡಿದಳು.

೫೧. ಎಲೈ ಕೃಷ್ಣನೇ, ಕಾಳಿಯನು ಸಂಸಾರಮಾಡಿಕೊಂಡಿರಲಿ. ನನ್ನನ್ನು ನಿನ್ನ ಸೇವಕಿಯನ್ನಾಗಿ ಮಾಡಿಕೋ. ನನಗೆ ಸಾಲೋಕ್ಯ, ಸಾರ್ಷ್ಟಿ, ಸಾಮೀಪ್ಯ, ಮತ್ತು ಸಾಯುಜ್ಯವೆಂಬ ಮುಕ್ತಿಯಲ್ಲಿ ಅಭಿಲಾಷೆಯಿಲ್ಲ.

೫೨-೫೩. ಮೇಲೆ ಹೇಳಿದ ಮುಕ್ತಿಯೆಲ್ಲವೂ ನಿನ್ನ ಪಾದಕಮಲಸೇವೆಯ ಹದಿನಾರನೆಯ ಒಂದಂಶದಷ್ಟು ಪುಣ್ಯವನ್ನೂ ಕೊಡಲಾರವು. ನಿನ್ನ ಪಾದಸೇವೆಯನ್ನುಳಿದು ಬೇರೆ ವರವನ್ನು ಬೇಡುವವನು ಭರತಖಂಡದಲ್ಲಿ ದುರ್ಲಭವಾದ ಮನುಷ್ಯಜನ್ಮವನ್ನು ಪಡೆದೂ, ಸ್ವಯಂ ವಂಚಿತನಾಗುವನು. ನಾಗಪತ್ನಿಯಾಡಿದ ಈ ಮಾತುಗಳನ್ನು ಕೇಳಿ, ಶ್ರೀಕೃಷ್ಣಪರಮಾತ್ಮನು ನಗುಮುಖದಿಂದ ಕೂಡಿದವನು

ಪ್ರಸನ್ನಮಾನಸಃ ಶ್ರೀಮಾನೋಮಿತ್ಯೇವಂ ಉವಾಚ ಹ ।
ಏತಸ್ಮಿನ್ನಂತರೇ ದಿವ್ಯಃ ಸದ್ರತ್ನಸಾರನಿರ್ಮಿತಃ ॥ ೫೪ ॥

ಆಜಗಾಮ ರಥಸ್ತೂರ್ಣಮುದ್ದೀಪ್ತಸ್ತೇಜಸಾ ಮುನೇ ।
ಪಾರ್ಷದಪ್ರವರೈರ್ಯುಕ್ತೋ ವಸ್ತ್ರಮಾಲಾಪರಿಚ್ಛದಃ ॥ ೫೫ ॥

ಶತಚಕ್ರೋ ವಾಯುವೇಗೋ ಮನೋಯಾಯೀ ಮನೋಹರಃ ।
ಅವರುಹ್ಯ ರಥಾತ್ತೂರ್ಣಂ ಶ್ಯಾಮಲಾಃ ಶ್ಯಾಮಕಿಂಕರಾಃ ॥ ೫೬ ॥

ಪ್ರಣಮ್ಯ ಕೃಷ್ಣಂ ತಾಂ ನೀತ್ವಾ ಜಗ್ಮುರ್ಗೋಲೋಕಮುತ್ತಮಂ ।
ಹರಿಶ್ಛಾಯಾಂ ವಿನಿರ್ಮಾಯ ದದೌ ಸರ್ಪಾಯ ತೇಜಸಾ ॥ ೫೭ ॥

ಸ ಚ ಕಿಂಚಿನ್ನ ಬುಬುಧೇ ಮೋಹಿತೋ ವಿಷ್ಣುಮಾಯಯಾ ।
ಅವರುಹ್ಯ ಸರ್ಪಮೂರ್ಧ್ನಃ ಶ್ರೀಕೃಷ್ಣಃ ಕರುಣಾನಿಧಿಃ ॥ ೫೮ ॥

೫೪-೫೫. ಪ್ರಸನ್ನಮನಸ್ಕನಾದ ಶ್ರೀಹರಿಯು ಹಾಗೆಯೇ ಆಗಲೆಂದು ಆಕೆಗೆ ವರವಿತ್ತನು. ಎಲೈ ನಾರದನೇ, ಆ ಸಮಯಕ್ಕೆ ಸರಿಯಾಗಿ ಶ್ರೇಷ್ಠರತ್ನದಿಂದ ನಿರ್ಮಿತವಾಗಿ ತೇಜೋಮಯವಾದ ದಿವ್ಯರಥವೊಂದು ಅಲ್ಲಿಗೆ ಬಂದಿತು. ದಿವ್ಯ ವಸ್ತ್ರಗಳಿಂದ ವೇಷ್ಟಿತವಾದ ಆ ರಥದಲ್ಲಿ ದಿವ್ಯಪಾರ್ಷದರು ತುಂಬಿಕೊಂಡಿದ್ದರು.

೫೬. ನೂರುಚಕ್ರಗಳಿಂದ ಕೂಡಿ ವಾಯುವೇಗ, ಮನೋವೇಗಗಳಿಂದ ಹೋಗುವ, ಆ ದಿವ್ಯರಥದಿಂದ ಶ್ಯಾಮಲವರ್ಣವುಳ್ಳ ಪರಮಾತ್ಮನ ಕಿಂಕರರು ಇಳಿದುಬಂದರು.

೫೭. ಎಲ್ಲರೂ ಶ್ರೀಕೃಷ್ಣನಿಗೆ ವಂದಿಸಿ, ಆ ನಾಗಪತ್ನಿಯರನ್ನು ಕರೆದುಕೊಂಡು ಗೋಲೋಕಕ್ಕೆ ತೆರಳಿದರು ಇತ್ತ ಶ್ರೀಹರಿಯು ತನ್ನ ತೇಜೋಮಹಿಮೆಯಿಂದ ನಾಗಕನ್ನಿಕೆಯ ಪ್ರತಿಬಿಂಬವನ್ನು ನಿರ್ಮಿಸಿ, ಕಾಳಿಯನಿಗೆ ಕೊಟ್ಟನು.

೫೮-೫೯. ಆ ಕಾಳಿಯನು ವಿಷ್ಣುಮಾಯೆಯ ಮೋಹಕ್ಕೊಳಗಾಗಿ ಸತ್ಯಾಂಶವನ್ನು ತಿಳಿಯದಂತಾದನು. ಕರುಣಾಮಯನಾದ ಶ್ರೀಕೃಷ್ಣನು ಅನಂತರ ಸರ್ಪ

ದದೌ ಹಸ್ತಂ ಚ ಕೃಪಯಾ ಶೀಘ್ರಂ ಕಾಲೀಯ ಮಸ್ತಕೇ ।
ಸಂಪ್ರಾಪ್ಯ ಚೇತನಾಂ ಸದ್ಯೋ ದದರ್ಶ ಪುರತೋ ಹರಿಂ || ೫೯ ||

ಪುಟಾಂಜಲಿಯುತಾಂ ಸಾಶ್ರುಪೂರ್ಣಾಂ ಚ ಸುರಸಾಂ ಸತೀಂ ।
ಪ್ರಣನಾಮ ಹರಿಂ ಸದ್ಯೋ ರುರೋದ ಪ್ರೇಮವಿಹ್ವಲಃ || ೬೦ ||

ಭಕ್ತ್ಯುದ್ರೇಕಾತ್ಸಾಶ್ರುನೇತ್ರಾಂ ಪುಲಕಾಂಕಿತವಿಗ್ರಹಾಂ ।
ತೂಷ್ಣೀಂಭೂತಾಂ ಚ ತಾಂ ದೃಷ್ಟ್ವಾ ಸಮುವಾಚ ಕೃಪಾನಿಧಿಃ || ೬೧ ||

ಯದೀಶ್ವರಸ್ಯ ಸತತಂ ಯೋಗ್ಯಾಯೋಗ್ಯೇ ಸಮಾಕೃಪಾ ।
|| ಶ್ರೀಕೃಷ್ಣ ಉವಾಚ ||
ವರಂ ವೃಣು ತ್ವಂ ಕಾಲೀಯ ಯಸ್ತೇ ಮನಸಿ ವರ್ತತೇ || ೬೨ ||

ರಾಜನ ತಲೆಯ ಮೇಲಿಂದ ಇಳಿದು ಅವನ ತಲೆಯ ಮೇಲೆ ತನ್ನ ಅಭಯ ಹಸ್ತವನ್ನಿಟ್ಟನು. ಕಾಳಿಯನು ಚೇತನವನ್ನು ಹೊಂದಿ ತನ್ನ ಮುಂದೆ ಶ್ರೀಕೃಷ್ಣನ ದಿವ್ಯರೂಪವನ್ನು ಕಂಡನು.

೬೦. ಕಣ್ಣುಗಳಲ್ಲಿ ನೀರನ್ನು ಸುರಿಸುತ್ತ, ಕೈಮುಗಿನುಕೊಂಡು ನಿಂತಿರುವ ಸುರಸೆಯನ್ನೂ ನೋಡಿದನು. ಕೂಡಲೇ ಶ್ರೀಹರಿಗೆ ವಂದಿಸಿ, ಪ್ರೇಮಕಾತರನಾಗಿ ಗೋಳಾಡಲಾರಂಭಿಸಿದನು.

೬೧–೬೨. ಆಗ ದಯಾಮಯನಾದ ಶ್ರೀಕೃಷ್ಣನು ಭಕ್ತ್ಯುದ್ರೇಕದಿಂದ ಕಣ್ಣುಗಳಲ್ಲಿ ಆನಂದಬಾಷ್ಪವನ್ನು ಸುರಿಸುತ್ತ, ರೋಮಾಂಚಿತಶರೀರಳಾಗಿ ಸುಮ್ಮನೆ ನಿಂತಿರುವ ಛಾಯಾ ಸುರಸೆಯನ್ನು ನೋಡಿ, ಈ ರೀತಿ ಹೇಳಿದನು. ಸರ್ವೇಶ್ವರನಿಗೆ ಸರ್ವಕಾಲದಲ್ಲಿಯೂ, ಯೋಗ್ಯಾಯೋಗ್ಯರಲ್ಲಿ ಸಮಾನದಯೆಯಿರುವುದು. ಆದ ಕಾರಣ ಎಲೈ ಕಾಳಿಯನೇ, ನಿನಗೆ ಅಭಿಲಷಿತವಾದ ವರವನ್ನು ಬೇಡುವವನಾಗು.

ತ್ವಂ ಮೇ ಪ್ರಾಣಾಧಿಕೋ ವತ್ಸ ಸುಖಂ ತಿಷ್ಠ ಭಯಂ ತ್ಯಜ ।
ತಸ್ಯಾಹಮನುಗೃಹ್ಣಾಮಿ ಯೋಽತಿಭಕ್ತೋ ಮಮಾಂಶಜಃ ॥ ೬೩ ॥

ಕಿಂಚಿತದ್ದಮನಂ ಕೃತ್ವಾ ತತ್ಪ್ರಸಾದಂ ಕರೋಮ್ಯಹಂ ।
ತ್ವದ್ವಂಶಜಾತಾನ್ಸರ್ಪಾಂಶ್ಚ ಹಂತಿ ಯೋ ಮಾನವಾಧಮಃ ॥ ೬೪ ॥

ಬ್ರಹ್ಮಹತ್ಯಾಸಮಂ ಪಾಪಂ ಭವಿತಾ ತಸ್ಯ ನಿಶ್ಚಿತಂ ।
ಮತ್ಪಾದಪದ್ಮಚಿಹ್ನೇ ಯಃ ಕರೋತಿ ದಂಡತಾಡನಂ ॥ ೬೫ ॥

ದ್ವಿಗುಣಂ ಬ್ರಹ್ಮಹತ್ಯಾಯಾ ಭವಿತಾ ತಸ್ಯ ಕಿಲ್ಬಿಷಂ ।
ಲಕ್ಷ್ಮೀರ್ಯಾಸ್ಯತಿ ತದ್ಗೇಹಾಚ್ಛಾಪಂ ದತ್ವಾ ಸುದಾರುಣಂ ॥ ೬೬ ॥

ವಂಶಾಯುರ್ಯಶಸಾಂ ಹಾನಿರ್ಭವಿತಾ ತಸ್ಯ ನಿಶ್ಚಿತಂ ।
ಧ್ರುವಂ ವರ್ಷಶತಂ ಕಾಲಸೂತ್ರೇ ಯಾಸ್ಯತಿ ಮದ್ಗಿರಾ ॥ ೬೭ ॥

---

೬೩. ಎಲೈ ವತ್ಸನೇ, ನೀನು ನನ್ನ ಪ್ರಾಣಕ್ಕಿಂತ ಅಧಿಕನಾಗಿರುವೆ. ಆದಕಾರಣ ಭಯವನ್ನು ತೊರೆದು ಸುಖವಾಗಿರು. ಯಾರು ನನ್ನ ಅಂಶದಿಂದ ಹುಟ್ಟಿ ನನ್ನ ಭಕ್ತನಾಗಿರುವನೋ ಅವನಿಗೆ ನನ್ನ ಪೂರ್ಣಾನುಗ್ರಹವಿದ್ದೇ ಇರುವುದು.

೬೪–೬೬. ನಿನ್ನ ಅಹಂಕಾರವನ್ನು ಸ್ವಲ್ಪ ದಮನಮಾಡಿ ಈಗ ನಿನಗೆ ಅನುಗ್ರಹಮಾಡಿರುವೆನು. ನಿನ್ನ ವಂಶದಲ್ಲಿ ಹುಟ್ಟಿದ ಸರ್ಪಗಳನ್ನು ಕೊಲ್ಲುವ ಮಾನವಾಧಮನು ಬ್ರಹ್ಮಹತ್ಯಾನುಗುಣವಾದ ಪಾಪವನ್ನು ಹೊಂದುವುದರಲ್ಲಿ ಸಂಶಯವಿಲ್ಲ. ನನ್ನ ಪಾದಕಮಲಗಳ ಚಿಹ್ನೆಯಿರುವ ಹೆಡೆಯ ಮೇಲೆ ದಂಡದಿಂದ ಹೊಡೆಯುವವನು ಬ್ರಹ್ಮಹತ್ಯೆಯ ದ್ವಿಗುಣ ಪಾಪಕ್ಕೆ ಗುರಿಯಾಗುವನು. ಆ ಪಾಪಿಗೆ ದಾರುಣವಾದ ಶಾಪವನ್ನು ಕೊಟ್ಟು ಲಕ್ಷ್ಮಿಯು ಅವನ ಮಂದಿರದಿಂದ ದೂರ ಹೋಗುವಳು.

೬೭. ಆ ಪಾಪಿಯ ವಂಶ, ಆಯಸ್ಸು ಮತ್ತು ಯಶಸ್ಸುಗಳ ಹಾನಿಯುಂಟಾಗುವುದು ನಿಶ್ಚಯ. ಅವನು ನನ್ನ ಅಪ್ಪಣೆಯಂತೆ ನೂರುವರ್ಷಗಳ ಕಾಲ ಕಾಲಸೂತ್ರವೆಂಬ ನರಕದಲ್ಲಿ ನರಳುವನು.

ತ್ವತ್ಪ್ರಮಾಣಾಃ ಕೀಟಸಂಘಾ ದಂಶಿಷ್ಯಂತಿ ಚ ಸಂತತಂ ।
ಭೋಗಾಂತೇ ಜನ್ಮ ಲಬ್ಧ್ವಾ ಚ ತನ್ಮೃತ್ಯುಸ್ತ್ವಸ್ಯದಂಶನಾತ್ ॥ ೧೮ ॥

ತಸ್ಯ ವಂಶೋದ್ಭವಾನಾಂ ಚ ತ್ವದ್ವಂಶಾದ್ಭವಿತಾ ಭಯಂ ।
ಯೇ ಚ ತ್ವದ್ವಂಶಜಾನ್ ದೃಷ್ಟ್ವಾ ಸುಪದಾಂಕಂ ಮದೀಯಕಂ ॥ ೧೯ ॥

ಪ್ರಣಮಿಷ್ಯಂತಿ ಭಕ್ತ್ಯಾ ತೇ ಮುಚ್ಯಂತೇ ಸರ್ವಪಾತಕಾತ್ ।
ಗಚ್ಛ ಶೀಘ್ರಂ ರಮಣಕಂ ತ್ಯಜ ಭೀತಿಂ ಖಗಾಧಿಪಾತ್ ॥ ೨೦ ॥

ಮತ್ಪಾದಾಂಕಂ ಮೂರ್ಧ್ನಿ ದೃಷ್ಟ್ವಾ ತ್ವಾಂ ಭಕ್ತ್ಯಾ ಪ್ರಣಮಿಷ್ಯತಿ ।
ತವ ತ್ವದ್ವಂಶಜಾನಾಂ ಚ ಗರುಡಾನ್ನ ಭಯಂ ಕ್ವಚಿತ್ ॥ ೨೧ ॥

ಸರ್ವೇಷಾಂ ಜ್ಞಾತಿ ಸರ್ಪಾಣಾಂ ವರೋಽದ್ಯ ಭವ ಮದ್ವರಾತ್ ।
ವರಂ ಕಿಂ ಪರಮಂ ವತ್ಸ ವಾಂಛಿತಂ ವರಯಾಧುನಾ ॥ ೨೨ ॥

---

೧೮. ಅಲ್ಲಿ ನಿನ್ನ (ಕಾಳಿಯನ) ಪ್ರಮಾಣವುಳ್ಳ ಕ್ರೂರಕೀಟಗಳು ಸರ್ವದಾ ಆ ಪಾಪಿಯನ್ನು ಕಚ್ಚುತ್ತಿರುವುವು. ಈ ರೀತಿ ನರಕಯಾತನೆಯನ್ನು ಅನುಭವಿಸಿ ಪುನರ್ಜನ್ಮಪಡೆದು ಸರ್ಪದಷ್ಟನಾಗಿ ಮರಣಹೊಂದುವನು.

೧೯-೨೦. ಅಷ್ಟೇ ಅಲ್ಲ. ಅವನ ವಂಶಜರಿಗೂ ಕೂಡ ಸರ್ಪವಂಶದವರಿಂದ ಭಯವಿದ್ದೇ ಇರುವುದು. ಯಾರು ನಿನ್ನ ವಂಶದವರ ಹೆಡೆಯಲ್ಲಿ ನನ್ನ ಪಾದ ಕಮಲದ ಗುರುತಿರುವುದನ್ನು ನೋಡಿ ಭಕ್ತಿಯಿಂದ ನಮಸ್ಕರಿಸುವರೋ ಅವರು ಸಕಲ ಪಾಪಗಳಿಂದಲೂ ಮುಕ್ತರಾಗುವರು. ಆದ ಕಾರಣ ಗರುಡನ ಭಯವನ್ನು ತೊರೆದು ಜಾಗ್ರತೆ ನಿನ್ನ ವಿಲಾಸಸ್ಥಳಕ್ಕೆ ಹೋಗು.

೨೧. ನಿನ್ನ ತಲೆಯ ಮೇಲೆ ನನ್ನ ಪಾದಚಿಹ್ನೆಯಿರುವುದನ್ನು ನೋಡಿ ಗರುಡನು ಭಕ್ತಿಯಿಂದ ನಿನಗೆ ತಲೆಬಾಗುವನು. ನಿನಗೂ ನಿನ್ನ ವಂಶದವರಿಗೂ ಯಾವಾಗಲೂ ಸ್ವಲ್ಪವೂ ಭಯವಿಲ್ಲ.

೨೨. ಇಂದಿನಿಂದ ನನ್ನ ವರದಂತೆ ನಿನ್ನ ಜ್ಞಾತಿಯಾದ ಸರ್ಪಗಳಿಗೆಲ್ಲ ಶ್ರೇಷ್ಠನಾಗು ಎಲೈ ವತ್ಸನೇ, ಈಗ ಇದಕ್ಕಿಂತ ಮೇಲಾದ ವರವು ನಿನಗೆ ಅಭೀಪ್ಸಿತವಾಗಿದ್ದರೆ ಅದನ್ನು ತಿಳಿಸು.

ಭಯಂ ತ್ಯಕ್ತ್ವಾ ಕಥಯ ಮಾಂ ತ್ವದೀಯಂ ದುಃಖಭಂಜನಂ ।
ಶ್ರೀಕೃಷ್ಣವಚನಂ ಶ್ರುತ್ವಾ ಕಾಲಿಯಃ ಕಂಪಿತೋ ಭಿಯಾ ॥ ೭೩ ॥

ಪುಟಾಂಜಲಿಯುತೋ ಭೂತ್ವಾ ತಮುವಾಚ ಭುಜಂಗಮಃ ।

॥ ಕಾಲಿಯ ಉವಾಚ ॥

ವರೇಽನ್ಯಸ್ಮಿನ್ಮಮ ವಿಭೋ ವಾಂಛಾ ನಾಸ್ತಿ ವರಪ್ರದ ॥ ೭೪ ॥

ಭಕ್ತಿಂ ಸ್ಮೃತಿಂ ತ್ವತ್ಪದಾಬ್ಜೇ ದೇಹಿ ಜನ್ಮನಿ ಜನ್ಮನಿ ।
ಜನ್ಮ ಬ್ರಹ್ಮಕುಲೇ ವಾಽಪಿ ತಿರ್ಯಗ್ಯೋನಿಷು ವಾ ಸಮಂ ॥ ೭೫ ॥

ತದ್ಭವೇತ್ಸಫಲಂ ಯತ್ರ ಸ್ಮೃತಿಸ್ತ್ವಚ್ಚರಣಾಂಬುಜೇ ।
ತನ್ನಿಷ್ಫಲಃ ಸ್ವರ್ಗವಾಸೋ ನಾಸ್ತಿ ಚೇತ್ತ್ವತ್ಪದಸ್ಮೃತಿಃ ॥ ೭೬ ॥

---

೭೩. ಭಯವನ್ನು ತೊರೆದು ನಿನ್ನ ಇಷ್ಟಾರ್ಥವನ್ನು ಹೇಳಿ ದುಃಖವನ್ನು ನಾಶಮಾಡಿಕೋ. ಈ ರೀತಿಯಾದ ಶ್ರೀಕೃಷ್ಣನ ಮಾತುಗಳನ್ನು ಕೇಳಿ ಕಾಳಿಯನು ಭಯದಿಂದ ನಡುಗಿದನು. ಅಲ್ಲದೆ ವಿನಯದಿಂದ ಕೈಗಳನ್ನು ಜೋಡಿಸಿಕೊಂಡು ಅವನಲ್ಲಿ ಈ ರೀತಿ ವಿಜ್ಞಾಪಿಸಿಕೊಂಡನು.

೭೪. ಕಾಳಿಯ :—ಎಲೈ ವರದಾತನಾದ ಪ್ರಭುವೇ, ನನಗೆ ಬೇರೆ ವರದಲ್ಲಿ ಖಂಡಿತವಾಗಿಯೂ ಅಭಿಲಾಷೆಯಿಲ್ಲ.

೭೫. ನನಗೆ ಪ್ರತಿಜನ್ಮದಲ್ಲಿಯೂ ನಿನ್ನ ಪಾದಕಮಲಗಳ ಸ್ಮೃತಿಯನ್ನೂ ಭಕ್ತಿಯನ್ನೂ ದಯಪಾಲಿಸು. ಬ್ರಹ್ಮವಂಶದಲ್ಲಾಗಲೀ, ತಿರ್ಯಗ್ಯೋನಿಯಲ್ಲಾಗಲೀ ಜನ್ಮವುಂಟಾದರೂ ಕೊರತೆಯಿಲ್ಲ.

೭೬. ಯಾವಲೋಕದಲ್ಲಾಗಲೀ ಯಾವ ಜನ್ಮದಲ್ಲಾಗಲೀ ಹುಟ್ಟಿದರೂ ನಿನ್ನ ಚರಣಕಮಲಗಳ ಸ್ಮರಣೆಯುಂಟಾದರೆ ಸಫಲವೆನಿಸುವುದು. ನಿನ್ನ ಪಾದಾರವಿಂದಗಳ ಸ್ಮರಣೆಯಿಲ್ಲದ ಸ್ವರ್ಗವಾಸವೂ ಕೂಡ ನಿಷ್ಫಲವಾಗುವುದು.

ತ್ವತ್ಪಾದಧ್ಯಾನಯುಕ್ತಸ್ಯ ಯತ್ತತ್ಸ್ಥಾನಂ ಚ ತತ್ಪರಂ ।
ಕ್ಷಣಂ ವಾ ಕೋಟಿಕಲ್ಪಂ ವಾ ಪುರುಷಾಯುಃ ಕ್ಷಯೋಽಸ್ತು ವಾ ॥ ೭೭ ॥

ಯದಿ ತ್ವತ್ಸೇವಯಾ ಯಾತಿ ಸಫಲೋ ನಿಷ್ಫಲೋಽಥವಾ ।
ತೇಷಾಂ ಚಾಯುರ್ವ್ಯಯೋ ನಾಸ್ತಿ ಯೇ ತ್ವತ್ಪಾದಾಬ್ಜಸೇವಕಾಃ ॥ ೭೮ ॥

ನ ಸಂತಿ ಜನ್ಮಮರಣರೋಗಶೋಕಾರ್ತಿಭೀತಯಃ ।
ಇಂದ್ರತ್ವೇ ವಾಽಮರತ್ವೇ ವಾ ಬ್ರಹ್ಮತ್ವೇ ಚಾತಿದುರ್ಲಭೇ ॥ ೭೯ ॥

ವಾಂಛಾ ನಾಸ್ತ್ಯೇವ ಭಕ್ತಾನಾಂ ತ್ವತ್ಪಾದಸೇವನಂ ವಿನಾ ।
ಸುಜೀರ್ಣಪಟಖಂಡಸ್ಯ ಸಮಂ ನೂತನಮೇವ ಚ ॥ ೮೦ ॥

ಪಶ್ಯಂತಿ ಭಕ್ತಾಃ ಕಿಂಚಾನ್ಯತ್ಸಾಲೋಕ್ಯಾದಿಚತುಷ್ಟಯಂ ।
ಸಂಪ್ರಾಪ್ತಸ್ತ್ವನ್ಮನುರ್ಬ್ರಹ್ಮನ್ನನಂತಾದ್ಯಾವದೇವ ಹಿ ॥ ೮೧ ॥

---

೭೭. ಕ್ಷಣಕಾಲವಾಗಲೀ, ಕೋಟಿಕಲ್ಪಗಳ ಕಾಲವಾಗಲೀ, ಪುರುಷಾಯುಸ್ಸು ಮುಗಿಯುವವರೆಗಾಗಲೀ ನಿನ್ನ ಪಾದಧ್ಯಾನ ಮಾಡುವವರಿಗೆ ಯಾವ ಸ್ಥಾನವು ದೊರೆಯುವುದೋ ಅದೇ ಶ್ರೇಷ್ಠವಾದುದು.

೭೮. ಸಫಲನಾಗಿಯಾಗಲೀ, ಅಥವಾ ನಿಷ್ಫಲನಾಗಿಯಾಗಲೀ ಹಿಂತಿರುಗುವ ನಿನ್ನ ಪಾದಸೇವಕರಿಗೆ ಆಯುಸ್ಸು ಕ್ಷೀಣವಾಗುವಂತೆಯೇ ಇಲ್ಲ.

೭೯-೮೦. ಅಷ್ಟೇ ಅಲ್ಲ ಅಂಥ ಭಕ್ತರಿಗೆ ಜನ್ಮ ಮರಣಗಳಾಗಲೀ, ರೋಗ ಶೋಕಗಳಾಗಲೀ, ಭಯಪೀಡೆಗಳಾಗಲೀ ಇರುವುದಿಲ್ಲ. ನಿನ್ನ ಭಕ್ತರಿಗೆ ನಿನ್ನ ಪಾದಸೇವೆಯನ್ನುಳಿದು ಇಂದ್ರಪದವಿಯಲ್ಲಾಗಲೀ ಅಮರ ಪದವಿಯಲ್ಲಾಗಲೀ, ಅತಿ ದುರ್ಲಭವಾದ ಬ್ರಹ್ಮಪದವಿಯಲ್ಲಾಗಲೀ ಆಶೆಯಿರುವುದಿಲ್ಲ. ಅವರು ಅತಿ ಜೀರ್ಣವಾದ ಬಟ್ಟೆಯ ಚೂರನ್ನು ನೂತನ ವಸ್ತ್ರವನ್ನೂ ಸಮಾನವಾಗಿ ತಿಳಿಯುವರು

೮೧-೮೩. ಹೀಗಿರುವಾಗ ನಿನ್ನ ಭಕ್ತರು ಸಾಲೋಕ್ಯಾದಿ ಮುಕ್ತಿ ಚತುಷ್ಟಯವನ್ನು ಗಣನೆಗೆ ತರುವರೆ? ಎಲೈ ಪರಬ್ರಹ್ಮನೇ, ನಾನು ಆದಿಶೇಷನಿಂದ ನಿನ್ನ ದಿವ್ಯಮಂತ್ರೋಪದೇಶವನ್ನು ಯಾವಾಗ ಪಡೆದು ನಿನ್ನ ಧ್ಯಾನದಲ್ಲಿ ನಿರತನಾದೆನೋ

ತಾವತ್ತ್ವದ್ಭಾವನೇನೈವ ತ್ವದ್ವರ್ಣೋಽಹಮನುಗ್ರಹಾತ್ ।
ಮಾಂ ಚ ಭಕ್ತಮಪಕ್ವಂ ವಾ ವಿಜ್ಞಾಯ ಗರುಡಃ ಸ್ವಯಂ ॥ ೮೨ ॥

ದೇಶಾದ್ದೂರಂ ಚ ನ್ಯಕ್ಕಾರಂ ಚಕಾರ ದೃಢಭಕ್ತಿಮಾನ್ ।
ಭವತಾ ಚ ದೃಢಾಂ ಭಕ್ತಿಂ ದತ್ವಾ ಮೇ ವರದೇಶ್ವರ ॥ ೮೩ ॥

ಸ ಚ ಉಕ್ತಶ್ಚ ಭಕ್ತೋಽಹಂ ನ ಮಾಂ ತ್ಯಕ್ತುಂ ಕ್ಷಮೋಽಧುನಾ ।
ತ್ವತ್ಪಾದಪದ್ಮಚಿಹ್ನಾಕ್ತಂ ದೃಷ್ಟ್ವಾ ಶ್ರೀಮಸ್ತಕಂ ಮಮ ॥ ೮೪ ॥

ಸದೋಷಂ ಗುಣಯುಕ್ತಂ ಮಾಂ ಸೋಽಧುನಾ ತ್ಯಕ್ತುಮಕ್ಷಮಃ ।
ಮಮಾಽಽರಾಧ್ಯಾಶ್ಚ ನಾಗೇಂದ್ರಾ ನ ತದ್ಬಾಧ್ಯೋಽಹಮೀಶ್ವರ ॥ ೮೫ ॥

ಭಯಂ ನ ಕೇಭ್ಯಃ ಸರ್ವತ್ರ ತಮನಂತಂ ಗುರುಂ ವಿನಾ ।
ಯಂ ದೇವೇಂದ್ರಾಶ್ಚ ದೇವಾಶ್ಚ ಮುನಯೋ ಮನವೋ ನರಾಃ ॥ ೮೬ ॥

ಆಗಲೇ ನಿನ್ನ ಅನುಗ್ರಹದಿಂದ ನಿನ್ನ ಬಣ್ಣ (ಶಾಮವರ್ಣ) ವನ್ನು ಪಡೆದೆನು. ಪರಿಪಕ್ವವಾದ ಭಕ್ತಿಯುದಯಿಸದಿರುವ ನನ್ನನ್ನು ನೋಡಿ, ದೃಢಭಕ್ತಿಯುಳ್ಳ ಗರುಡನು ತನ್ನ ಸ್ಥಳದಿಂದ ನನ್ನನ್ನು ದೂರವಾಗಿ ತಿರಸ್ಕರಿಸಿದನು. ಎಲೈ ವರದಾತನೇ, ನೀನು ಈಗ ನನಗೆ ದೃಢಭಕ್ತಿಯನ್ನು ಅನುಗ್ರಹಿಸಿರುವೆ.

೮೪-೮೫. ಅಷ್ಟೇ ಅಲ್ಲ. ಕಾಳಿಯನು ನನ್ನ ಭಕ್ತನೆಂದು ಗರುಡನಿಗೆ ಹೇಳಿದ್ದೀಯೆ. ಆದಕಾರಣ ಗರುಡನು ಈಗ ನನ್ನನ್ನು ದೂರೀಕರಿಸಲಾರನು. ನಿನ್ನ ಪಾದಕಮಲಗಳ ಚಿಹ್ನೆಯಿರುವ ನನ್ನ ದಿವ್ಯಮಸ್ತಕವನ್ನು ನೋಡಿ ದೋಷಯುಕ್ತನಾದರೂ, ಗುಣಸಹಿತನಾದ ನನ್ನನ್ನು ಈಗ ಗರುಡನು ತ್ಯಜಿಸಲಾರನು. ಎಲೈ ಸರ್ವೇಶ್ವರನೇ ನನಗೆ ಪೂಜ್ಯವಾದ ಸರ್ಪಗಳಿಗೂ, ನನಗೂ ಗರುಡನಿಂದ ಯಾವ ಬಾಧೆಯೂ ಉಂಟಾಗದಿರಲಿ.

೮೬-೮೭. ಅನಾದ್ಯನಂತನಾದ ಪರಮಾತ್ಮನನ್ನು ಬಿಟ್ಟರೆ ಯಾರಿಗೆ ತಾನೇ ಭಯವಿಲ್ಲ? ಯಾವ ಪರಮಾತ್ಮನನ್ನು ದೇವೇಂದ್ರನೂ, ದೇವತೆಗಳೂ, ಮುನಿಮನು ಮಾನವರೂ, ಸ್ವಪ್ನಾವಸ್ಥೆಯಲ್ಲೂ ಧ್ಯಾನಾವಸ್ಥೆಯಲ್ಲೂ ಕಾಣುವರೋ ಆ ಪರ

ಸ್ವಪ್ನೇ ಧ್ಯಾನೇ ನ ಪಶ್ಯಂತಿ ಚಕ್ಷುಷೋರ್ಗೋಚರಃ ಸ ಮೇ ।
ಭಕ್ತಾನುರೋಧಾತ್ಸಾಕಾರಃ ಕುತಸ್ತೇ ವಿಗ್ರಹೋ ವಿಭೋ ॥ ೮೭ ॥

ಸಗುಣಸ್ತ್ವಂ ಚ ಸಾಕಾರೋ ನಿರಾಕಾರಶ್ಚ ನಿರ್ಗುಣಃ ।
ಸ್ವೇಚ್ಛಾಮಯಃ ಸರ್ವಧಾಮ ಸರ್ವಬೀಜಂ ಸನಾತನಂ ॥ ೮೮ ॥

ಸರ್ವೇಷಾಮೀಶ್ವರಃ ಸಾಕ್ಷೀ ಸರ್ವಾತ್ಮಾ ಸರ್ವರೂಪಧೃಕ್ ।
ಬ್ರಹ್ಮೇಶಶೇಷಧರ್ಮಾಶ್ಚ ವೇದವೇದಾಂಗಪಾರಗಾಃ ॥ ೮೯ ॥

ಸ್ತೋತುಂ ಯಮೀಶಂ ತೇ ಜಾಡ್ಯಾಃ ಸರ್ಪಃ ಸ್ತೋಷ್ಯತಿ ತಂ ವಿಭುಂ ।
ಹೇ ನಾಥ ಕರುಣಾಸಿಂಧೋ ದೀನಬಂಧೋ ಕ್ಷಮಾಧಮಂ ॥ ೯೦ ॥

ಖಲಸ್ವಭಾವಾದಜ್ಞಾನಾತ್ಕೃಷ್ಣ ತ್ವಂ ಚರ್ವಿತೋ ಮಯಾ ।
ನಾಸ್ತ್ರಲಕ್ಷ್ಯೋ ಯಥಾಽಽಕಾಶೋ ನ ದೃಶ್ಯಾಂತೋ ನ ಲಂಘ್ಯಕಃ ॥ ೯೧ ॥

ಮಾತ್ಮನೇ ನನ್ನ ದೃಷ್ಟಿಗೋಚರವಾಗಿದ್ದಾನೆ. ಭಕ್ತರ ಪ್ರೀತಿಗಾಗಿ ದಿವ್ಯಾಕಾರವನ್ನು ಧರಿಸುವ ವಿಶ್ವವ್ಯಾಪಕನಾದ ನಿನಗೆ ಆಕಾರವೆಲ್ಲಿಂದ ಬಂತು.

೮೮. ಸಗುಣನೂ, ಸಾಕಾರನೂ ಎನಿಸುವ ನೀನು ನಿರ್ಗುಣನೂ, ನಿರಾಕಾರನೂ ಆಗಿರುವೆ. ಸ್ವೇಚ್ಛಾಮಯನಾದ ನೀನು ಸರ್ವಾಶ್ರಯನೂ ಸರ್ವಕಾರಣನೂ ಸನಾತನೂ ಆಗಿರುವೆ.

೮೯–೯೦. ಸರ್ವೇಶ್ವರನೂ, ಸರ್ವಸಾಕ್ಷಿಯೂ, ಸರ್ವಾಂತರ್ಯಾಮಿಯೂ, ಸರ್ವರೂಪಧಾರಿಯೂ ಆದ ನಿನ್ನನ್ನು ವೇದವೇದಾಂಗ ಪಾರಂಗತರಾದ ಬ್ರಹ್ಮ, ಈಶ್ವರ, ಶೇಷ, ಧರ್ಮ, ಮತ್ತು ಇಂದ್ರನೇ ಮುಂತಾದ ದೇವತೆಗಳು ಸ್ತುತಿಸಲು ಹೊರಟು ಜಡರಾಗುವರೋ ಅಂಥ ವಿಶ್ವವ್ಯಾಪಕನನ್ನು ಸಾಮಾನ್ಯ ಸರ್ಪನಾದ ನಾನು ಎಂತು ಸ್ತುತಿಸಲಿ ? ಕರುಣಾಸಿಂಧುವೂ, ದೀನಬಂಧುವೂ ಆದ ಎಲೈ ಜಗನ್ನಾಥನೇ, ನಿನ್ನನ್ನು ನುಂಗುವ ಅಧಮಕಾರ್ಯಕ್ಕೆ ತೊಡಗಿದ್ದ ಈ ನೀಚನನ್ನು ದಯವಿಟ್ಟು ಕ್ಷಮಿಸು.

೯೧. ಎಲೈ ಕೃಷ್ಣನೇ, ದುಷ್ಟಸ್ವಭಾವದಿಂದಲೂ, ಅಜ್ಞಾನದಿಂದಲೂ ನಾನು ನಿನ್ನನ್ನು ಕಚ್ಚಿದೆ ನೀನು ಆಕಾಶದಂತೆ ಅಸ್ತ್ರಘಾತಕ್ಕೆ ಸಿಲುಕದವನೂ ಅನಾದ್ಯನಂತನೂ ದುರ್ಲಂಘ್ಯನೂ ಆಗಿರುವೆ ಎಂಬುದನ್ನು ಅರಿಯದಾದೆ.

ನ ಸ್ಪೃಶ್ಯೋ ಹಿ ನ ಚಾऽಽವರ್ಯಸ್ತಥಾ ತೇಜಸ್ತ್ವಮೇವ ಚ ।
ಇತ್ಯೇವಮುಕ್ತ್ವಾ ನಾಗೇಂದ್ರಃ ಪಪಾತ ಚರಣಾಂಬುಜೇ ॥ ೯೨ ॥

ಓಮಿತ್ಯುಕ್ತ್ವಾ ಹರಿಸ್ತುಷ್ಟಃ ಸರ್ವಂ ತಸ್ಮೈ ವರಂ ದದೌ ।
ನಾಗರಾಜಕೃತಂ ಸ್ತೋತ್ರಂ ಪ್ರಾತರುತ್ಥಾಯ ಯಃ ಪಠೇತ್ ॥ ೯೩ ॥

ತದ್ವಂಶ್ಯಾನಾಂ ಚ ತಸ್ಯೈವ ನಾಗೇಭ್ಯೋ ನ ಭಯಂ ಭವೇತ್ ।
ಸ ನಾಗಶಯ್ಯಾಂ ಕೃತ್ವೈವ ಸ್ವಪ್ತುಂ ಶಕ್ತಃ ಸದಾ ಭುವಿ ॥ ೯೪ ॥

ವಿಷಪೀಯೂಷಯೋರ್ಭೇದೋ ನಾಸ್ತ್ಯೇವ ತಸ್ಯ ಭಕ್ಷಣೇ ।
ನಾಗಗ್ರಸ್ತೇ ನಾಗಘಾತೇ ಪ್ರಾಣಾಂತೇ ವಿಷಭೋಜನಾತ್ ॥ ೯೫ ॥

ಸ್ತೋತ್ರಸ್ಮರಣಮಾತ್ರೇಣ ಸುಸ್ಥೋ ಭವತಿ ಮಾನವಃ ।
ಭೂರ್ಜೇ ಕೃತ್ವಾ ಸ್ತೋತ್ರಮಿದಂ ಕಂಠೇ ವಾ ದಕ್ಷಿಣೇ ಕರೇ ॥ ೯೬ ॥

---

೯೨. ಸ್ಪರ್ಶಾದಿ ಇಂದ್ರಿಯಾರ್ಥಗಳಿಗೆ ಸಿಲುಕದವನೂ, ಅಪ್ರಮೇಯನೂ ಆದ ನೀನು ತೇಜೋಮಯನಾಗಿರುವೆ. ಈ ರೀತಿಯಾಗಿ ಹೇಳಿ ಆ ಕಾಳಿಯನು ಶ್ರೀಕೃಷ್ಣನ ಚರಣಕಮಲಗಳ ಮೇಲೆ ಎರಗಿದನು.

೯೩-೯೪. ಸಂತುಷ್ಟನಾದ ಶ್ರೀಹರಿಯು ಹಾಗೆಯೇ ಆಗಲೆಂದು ಹೇಳಿ, ಅವನು ಬಯಸಿದ ವರವನ್ನು ಕೊಟ್ಟನು. ನಾಗರಾಜನಾದ ಕಾಳಿಯನು ಹೇಳಿದ ಈ ಸ್ತೋತ್ರವನ್ನು ಬೆಳಿಗ್ಗೆ ಎದ್ದು ಪಠನಮಾಡುವ ಮನುಜನಿಗೂ, ಅವನ ವಂಶಜರಿಗೂ ಸರ್ಪಗಳಿಂದ ಭಯವಿರುವುದಿಲ್ಲ. ಅವನು ಭೂಲೋಕದಲ್ಲಿ ಸರ್ಪಗಳನ್ನು ಶಯನವಾಗಿ ಮಾಡಿಕೊಂಡು ಮಲಗಲು ಶಕ್ತನಾಗುತ್ತಾನೆ.

೯೫-೯೬. ಅವನು ವಿಷವನ್ನಾಗಲೀ, ಅಮೃತವನ್ನಾಗಲೀ, ಭೇದವೆಣಿಸದೆ ಪಾನಮಾಡುವನು. ಮನುಜನು ಹಾವಿನ ಕಡಿತದಿಂದಾಗಲೀ, ವಿಷಪಾನದಿಂದಾಗಲೀ ಸಾಯುವಂತಿರುವಾಗ ಈ ಸ್ತೋತ್ರವನ್ನು ಸ್ಮರಿಸಿಕೊಂಡ ಮಾತ್ರದಿಂದಲೇ ಕುಶಲಿಯಾಗುವನು. ಭೂರ್ಜಪತ್ರದಲ್ಲಾಗಲೀ, ತಾಂಮ್ರದ ತಗಡಿನಲ್ಲಾಗಲೀ ಈ ಸ್ತೋತ್ರವನ್ನು ಬರೆದು, ಕಂಠದಲ್ಲೋ ಅಥವಾ ಬಲಗೈ ಮಣಿಕಟ್ಟಿನಲ್ಲೋ ಧರಿಸಬೇಕು.

ಬಿಭರ್ತಿ ಯೋ ಭಕ್ತಿಯುತೋ ನಾಗೇಭ್ಯೋಽಪಿ ನ ತದ್ಭಯಂ।
ಯತ್ರ ಗೇಹೇ ಸ್ತೋತ್ರಮಿದಂ ನಾಗಸ್ತತ್ರ ನ ತಿಷ್ಠತಿ ॥ ೯೭ ॥

ವಿಷಾಗ್ನಿವಜ್ರಭೀತಿಶ್ಚ ನ ಭವೇತ್ತತ್ರ ನಿಶ್ಚಿತಂ।
ಇಹ ಲೋಕೇ ಹರೇರ್ಭಕ್ತಿಂ ಸ್ಮೃತಿಂ ಚ ಸಂತತಂ ಲಭೇತ್ ॥
ಅಂತೇ ಚ ಸ್ವಕುಲಂ ಪೂತ್ವಾ ದಾಸ್ಯಂ ಚ ಲಭತೇ ಧ್ರುವಂ ॥ ೯೮ ॥

॥ ಶ್ರೀ ನಾರಾಯಣ ಉವಾಚ ॥

ನಾಗೇಂದ್ರಾಯ ವರಂ ದತ್ವಾ ಪುನಸ್ತಂ ಜಗದೀಶ್ವರಃ।
ಉವಾಚ ಮಧುರಂ ವಾಕ್ಯಂ ಪರಿಣಾಮಸುಖಾವಹಂ ॥ ೯೯ ॥

॥ ಶ್ರೀಕೃಷ್ಣ ಉವಾಚ ॥

ಗಚ್ಛ ತ್ವಂ ಚ ರಮಣಕಂ ಯದೀಂದ್ರನಗರಂ ಪರಂ ॥ ೧೦೦ ॥

---

೯೭. ಈ ರೀತಿ ಭಕ್ತಿಯಿಂದ ಧರಿಸುವವನಿಗೆ ಸರ್ಪಗಳಿಂದ ಎಂದೆಂದಿಗೂ ಭಯವಿರುವುದಿಲ್ಲ. ಯಾವ ಮನೆಯಲ್ಲಿ ಈ ಸ್ತೋತ್ರವನ್ನು ಪಠಿಸುವರೋ ಅಲ್ಲಿ ಸರ್ಪವು ನೆಲೆಸುವುದಿಲ್ಲ.

೯೮. ಅಷ್ಟೇ ಅಲ್ಲ, ಆ ಮನೆಯಲ್ಲಿ ವಿಷ, ಅಗ್ನಿ, ಮತ್ತು ಸಿಡಿಲಿನ ಭಯವೂ ಇರುವುದಿಲ್ಲ. ಇಹಲೋಕದಲ್ಲಿರುವವರೆಗೂ ಶ್ರೀಹರಿಯ ಭಕ್ತಿಯನ್ನೂ ಸ್ಮೃತಿಯನ್ನೂ ಸಂತತವಾಗಿ ಪಡೆದಿದ್ದು ಕೊನೆಯಲ್ಲಿ ತನ್ನ ವಂಶವನ್ನು ಪವಿತ್ರಗೊಳಿಸಿ ಶಾಶ್ವತವಾದ ಹರಿದಾಸ್ಯವನ್ನು ಹೊಂದುವನು.

೯೯. ಶ್ರೀನಾರಾಯಣ:—ಜಗದೊಡೆಯನಾದ ಶ್ರೀಕೃಷ್ಣನು ಮೇಲೆ ಹೇಳಿದಂತೆ ನಾಗರಾಜನಾದ ಕಾಳಿಯನಿಗೆ ವರವನ್ನು ಕೊಟ್ಟು ಪುನಃ ಅವನನ್ನು ಕುರಿತು ಮಧುರವೂ, ಪರಿಣಾಮಸುಖಕರವೂ, ಆದ ಕೆಲವು ನುಡಿಗಳನ್ನು ಹೇಳಿದನು.

೧೦೦-೧೦೧. ಶ್ರೀಕೃಷ್ಣ:—ಎಲೈ ನಾಗರಾಜನೇ, ಇಂದ್ರನ ಅಮರಾವತಿಯಂತೆ ಶ್ರೇಷ್ಠವಾದ ನಿನ್ನ ರಮಣಕದ್ವೀಪಕ್ಕೆ ನಿನ್ನ ಪರಿವಾರದೊಡನೆ ಯಮುನಾ

ಸಾರ್ಧಂ ಸ್ವಗೋಷ್ಠ್ಯಾ ನಾಗೇಂದ್ರ ಯಮುನಾಜಲವರ್ತ್ಮನಾ ।
ಶ್ರುತ್ವಾ ನಾಗೋ ಹರೇರಾಜ್ಞಾಂ ರುರೋದ ಪ್ರೇಮವಿಹ್ವಲಃ ॥ ೧೦೧ ॥

ಕದಾ ದ್ರಕ್ಷ್ಯಾಮಿ ತ್ವತ್ಪಾದಪದ್ಮಂ ನಾಥೇತ್ಯುವಾಚ ಸಃ ।
ಪ್ರಣಮ್ಯ ಶತಕೃತ್ವಶ್ಚ ಸ್ತ್ರಿಯಾ ಗೋಷ್ಠ್ಯಾ ಸಹೇಶ್ವರಂ ॥ ೧೦೨ ॥

ಜಗಾಮ ಜಲಮಾರ್ಗೇಣ ನಾಗೇಂದ್ರೋ ವಿರಹಾತುರಃ ।
ಯಮುನಾಹ್ರದತೋಯಂ ಚ ಬಭೂವಾಮೃತಕಲ್ಪಕಂ ॥ ೧೦೩ ॥

ಪ್ರಸನ್ನಾ ಜಂತವಃ ಸರ್ವೇ ಬಭೂವುಸ್ತೇನ ನಾರದ ।
ಗತ್ವಾ ದದರ್ಶ ಭವನಂ ಯದೀಂದ್ರನಗರಂ ಪರಂ ॥ ೧೦೪ ॥

ಆಜ್ಞಯಾ ಚ ಕೃಪಾಸಿಂಧೋರ್ನಿರ್ಮಿತಂ ವಿಶ್ವಕರ್ಮಣಾ ।
ತತ್ರ ತಸ್ಥೌ ಚ ನಾಗೇಂದ್ರಃ ಸ್ತ್ರಿಯಾ ಪುತ್ರಗಣೈಃ ಸಹ ॥ ೧೦೫ ॥

ಜಲದ ಮಾರ್ಗವಾಗಿ ಹೋಗು. ಈ ರೀತಿಯಾದ ಶ್ರೀಕೃಷ್ಣನ ಆಜ್ಞೆಯನ್ನು ಕೇಳಿ ಕಾಳಿಯನು ಶ್ರೀಹರಿಯ ವಿರಹದಿಂದ ಕಾತರನಾಗಿ ಗೋಳಾಡಿದನು.

೧೦೨. ಮತ್ತು ತನ್ನ ಸ್ತ್ರೀಪರಿವಾರದೊಡನೆ ಸರ್ವೇಶ್ವರನನ್ನು ನೂರುಸಾರಿ ನಮಸ್ಕರಿಸಿ 'ಎಲೈ ನಾಥನೇ, ನಿನ್ನ ಪಾದಕಮಲಗಳನ್ನು ಪುನಃ ನಾನು ನೋಡುವುದಾವಾಗ'? ಎಂದು ಕೇಳಿದನು.

೧೦೩. ಶ್ರೀಹರಿಯ ಅಪ್ಪಣೆಯಂತೆ ಕಾಳಿಯನು ವಿರಹವಿಹ್ವಲನಾಗಿ ಜಲಮಾರ್ಗದಿಂದ ಹೊರಟುಹೋದನು. ಆಗ ಯಮುನೆಯ ಮಡುವಿನ ನೀರು ಅಮೃತಕ್ಕೆ ಸಮಾನವಾಯಿತು.

೧೦೪-೧೦೫. ಎಲೈ ನಾರದನೇ, ಆಗ ಆ ಮಡುವಿನಲ್ಲಿದ್ದ ಪ್ರಾಣಿಗಳೆಲ್ಲವೂ ಸಂತೋಷದಿಂದ ನಲಿದಾಡಿದವು. ಅತ್ತ ನಾಗರಾಜನಾದ ಕಾಳಿಯನು ದಯಾಮಯನಾದ ಶ್ರೀಹರಿಯ ಆಜ್ಞೆಯಂತೆ ವಿಶ್ವಕರ್ಮನಿಂದ ನಿರ್ಮಿತವಾಗಿ ಇಂದ್ರನಗರಿಯಂತೆ ಮನೋಹರವಾಗಿರುವ ತನ್ನ ಮಂದಿರವನ್ನು ನೋಡಿ ತನ್ನ ಹೆಂಡತಿ ಮತ್ತು ಪುತ್ರಪರಿವಾರದೊಡನೆ ಅಲ್ಲಿ ನೆಲಸಿದನು.

ನಿಶ್ಶಂಕೋ ಹರ್ಷಯುಕ್ತಶ್ಚ ಹರಿಭಾವನತತ್ಪರಃ ।
ಇತ್ಯೇವಂ ಕಥಿತಂ ಸರ್ವಂ ಹರೇಶ್ಚರಿತಮದ್ಭುತಂ ॥
ಸುಖದಂ ಮೋಕ್ಷದಂ ಸಾರಂ ಪರಂ ಕಿಂ ಶ್ರೋತುಮಿಚ್ಛಸಿ ॥ ೧೦೬ ॥

॥ ಸೂತ ಉವಾಚ ॥

ಮಹರ್ಷೇರ್ವಚನಂ ಶ್ರುತ್ವಾ ನಾರದೋ ಹರ್ಷವಿಹ್ವಲಃ ।
ಋಷಿಂ ಪಪ್ರಚ್ಛ ಸಂದೇಹಂ ಸರ್ವಸಂದೇಹಭಂಜನಂ ॥ ೧೦೭ ॥

॥ ನಾರದ ಉವಾಚ ॥

ಕಥಂ ವಿಹಾಯ ಕಾಲೀಯಃ ಸ್ವಪೂರ್ವಭವನಂ ಪರಂ ।
ಜಗಾಮ ಯಮುನಾತೀರಂ ತನ್ಮೇ ಬ್ರೂಹಿ ಜಗದ್ಗುರೋ ॥ ೧೦೮ ॥

॥ ಶ್ರೀ ನಾರಾಯಣ ಉವಾಚ ॥

ಶೃಣು ನಾರದ ವಕ್ಷ್ಯೇಽಹಮಿತಿಹಾಸಂ ಪುರಾತನಂ ॥ ೧೦೯ ॥

---

೧೦೬. ಅಲ್ಲಿ ಯಾವ ಆತಂಕವೂ ಇಲ್ಲದೆ ಹರ್ಷದಿಂದ ಕೂಡಿ ಶ್ರೀಹರಿಯ ಧ್ಯಾನದಲ್ಲಿ ನಿರತನಾಗಿದ್ದನು. ಈ ರೀತಿಯಾಗಿ ಅತ್ಯದ್ಭುತವೂ ಸುಖ ಮತ್ತು ಮೋಕ್ಷದಾಯಕವೂ, ಸಾರಭೂತವೂ ಆದ ಶ್ರೀಹರಿಯ ಚರಿತ್ರೆಯನ್ನು ಹೇಳಿರುವೆನು. ಮುಂದೆ ಇನ್ನೇನನ್ನು ಕೇಳಲು ನೀನು ಬಯಸುವೆ.

೧೦೭. ಸೂತ: —ನಾರಾಯಣಮಹರ್ಷಿಯಾಡಿದ ಈ ಮಾತುಗಳನ್ನು ಕೇಳಿ ಸಂತುಷ್ಟನಾದ ನಾರದನು ಸಕಲ ಸಂದೇಹ ನಿವಾರಕನಾದ ಅವನನ್ನು ಕುರಿತು ತನ್ನ ಸಂಶಯವನ್ನು ಪರಿಹರಿಸಬೇಕೆಂದು ಈ ರೀತಿ ಕೇಳಿದನು.

೧೦೮. ನಾರದ: —ಎಲೈ ಜಗದ್ಗುರುವೇ, ಕಾಳಿಯನು ತನ್ನ ಮೊದಲಿನ ವಾಸಸ್ಥಾನವಾದ ರಮಣಕದ್ವೀಪವನ್ನು ಬಿಟ್ಟು ಯಮುನೆಯ ಮಡುವಿಗೆ ಹೋಗಲು ಕಾರಣವೇನೆಂಬುದನ್ನು ನನಗೆ ತಿಳಿಸು.

೧೦೯–೧೧೦. ಶ್ರೀನಾರಾಯಣ: —ಎಲೈ ನಾರದನೇ, ಸುಪ್ರಭಾನದಿಯ ಪಶ್ಚಿಮದಡದಲ್ಲಿರುವ ಮಲಯಪರ್ವತದಲ್ಲಿ ಸೂರ್ಯಗ್ರಹಣದ ದಿವಸ ಧರ್ಮ

ಯಚ್ಛ್ರುತಂ ಧರ್ಮವಕ್ತ್ರಾನ್ಮೇ ಮಲಯೇ ಸೂರ್ಯಪರ್ವಣಿ।
ಕೃಷ್ಣಾಖ್ಯಾನಪ್ರಸಂಗೇನ ಸುಪ್ರಭಾ ಪಶ್ಚಿಮೇ ತಟೇ ॥ ೧೧೦ ॥

ಪಪ್ರಚ್ಛ ಧರ್ಮಂ ಪುಲಹಃ ಶಿಷ್ಯಂ ತಂ ಮುನಿಸಂಸದಿ।
ಇದಮಾಖ್ಯಾನಮಾಶ್ಚರ್ಯಮುವಾಚ ತಂ ಕೃಪಾನಿಧಿಃ ॥ ೧೧೧ ॥

ತತ್ರ ಶ್ರುತಂ ಮಯಾ ವಿಪ್ರ ನಿಬೋಧ ಕಥಯಾಮಿ ತೇ।
ಶೇಷಾಜ್ಞಯಾ ನಾಗಗಣಾಃ ಪ್ರತಿಸಂವತ್ಸರಂ ಭಿಯಾ ॥ ೧೧೨ ॥

ಕಾರ್ತಿಕೀ ಪೂರ್ಣಿಮಾಯಾಂ ತು ಕುರ್ವಂತಿ ಗರುಡಾರ್ಚನಂ।
ಪುಷ್ಪೈರ್ಧೂಪೈಶ್ಚ ದೀಪೈಶ್ಚ ನೈವೇದ್ಯೈರ್ಬಲಿಭಿರ್ಮುದಾ ॥ ೧೧೩ ॥

ಪುಷ್ಕರೇ ಚ ಮಹಾತೀರ್ಥೇ ಸುಸ್ನಾತೋ ಭಕ್ತಿಸಂಯುತಃ।
ತಸ್ಯ ಪೂಜಾಂ ಚ ಕಾಲೀಯೋ ನ ಚಕಾರಾತ್ಮಹಂಕೃತಃ ॥ ೧೧೪ ॥

ಪುರುಷನ ಬಾಯಿನಿಂದ ಕೃಷ್ಣಕಥಾಪ್ರಸಂಗದಿಂದ ಕೇಳಿದ ಪುರಾತನವಾದ ಇತಿಹಾಸವನ್ನು ಹೇಳುವೆನು, ಕೇಳು.

೧೧೧. ಮುನಿವೃಂದದಲ್ಲಿ ಕುಳಿತಿದ್ದ ಧರ್ಮಮಹರ್ಷಿಗಳನ್ನು ಕುರಿತು, ಪುಲಹಮಹರ್ಷಿಯು ಈ ಕಥೆಯನ್ನು ಕೇಳಲು, ದಯಾಮಯನಾದ ಅವನು ಆಶ್ಚರ್ಯಕರವಾದ ಈ ಆಖ್ಯಾನವನ್ನು ಹೇಳಿದನು.

೧೧೨-೧೧೩. ಆ ಸಮಯದಲ್ಲಿ ಹೇಳಿದ ಕಥೆಯನ್ನು ಈಗ ನಿನಗೆ ಹೇಳುವೆನು. ಆದಿಶೇಷನ ಅಪ್ಪಣೆಯಂತೆ ಸರ್ಪಸಮೂಹವೆಲ್ಲವೂ, ಪ್ರತಿವರ್ಷವೂ ಕಾರ್ತೀಕ ಮಾಸದ ಪೂರ್ಣಿಮೆಯ ದಿವಸ ಪುಷ್ಪ, ಧೂಪ, ದೀಪ, ನೈವೇದ್ಯ ಮತ್ತು ಬಲಿ ಸಮರ್ಪಣೆಮಾಡಿ ಪಕ್ಷಿರಾಜನಾದ ಗರುಡನನ್ನು ಪೂಜಿಸುವುದು.

೧೧೪. ಆದರೆ ಸರ್ಪಗಳಲ್ಲಿ ದುರಭಿಮಾನವುಳ್ಳ ಕಾಳಿಯನು ಮಾತ್ರ ಪುಷ್ಕರ ಮಹಾತೀರ್ಥದಲ್ಲಿ ಸ್ನಾನಮಾಡಿ ಭಕ್ತಿಯಿಂದ ಗರುಡನನ್ನು ಪೂಜಿಸಲಿಲ್ಲ.

ನಾಗಪೂಜೋಪಕರಣಂ ಬಲಾದ್ಭಕ್ಷಿತುಮುದ್ಯತಃ ।
ಚಕ್ರುರ್ನಿವಾರಣಂ ನಾಗಾ ನೀತಿಮೂಚುರ್ಮದೋದ್ಧತಂ ॥ ೧೧೫ ॥

ನ ಶಕ್ತಾ ವಾರಣೇ ತೇ ಚೇತ್ಯಾವಿರ್ಭೂತಃ ಖಗೇಶ್ವರಃ ।
ದೃಷ್ಟ್ವಾ ಖಗೇಶ್ವರಂ ನಾಗಾಃ ಕಾಲೀಯಪ್ರಾಣರಕ್ಷಯಾ ॥ ೧೧೬ ॥

ಪ್ರಾಣಶಕ್ತ್ಯಾ ಚ ಯುಯುಧುಃ ಯಾವತ್ಸೂರ್ಯೋದಯಂ ಮುನೇ ।
ಪಕ್ಷೀಂದ್ರತೇಜಸಾ ಸರ್ವೇ ಸಮುದ್ವಿಗ್ನಾಃ ಪಲಾಯಿತಾಃ ॥ ೧೧೭ ॥

ಅನಂತಂ ಶರಣಂ ಜಗ್ಮುಃ ಸರ್ವೇಷಾಮಭಯಪ್ರದಂ ।
ಪಲಾಯನಪರಾನ್ ದೃಷ್ಟ್ವಾ ನಾಗಾಂಶ್ಚ ಕರುಣಾನಿಧಿಃ ॥ ೧೧೮ ॥

ತತ್ರ ತಸ್ಥೌ ಚ ನಿಶ್ಶಂಖಃ ಕಾಲೀಯಸ್ತಂ ದದರ್ಶ ಹ ।
ಸ್ಮೃತ್ವಾ ಹರಿಪದಾಂಭೋಜಂ ಕಾಲೀಯೋ ಯುಯುಧೇ ಮುನೇ ॥ ೧೧೯ ॥

---

೧೧೫. ಅಷ್ಟೇ ಅಲ್ಲ. ಇತರ ಸರ್ಪಗಳು ಸಿದ್ಧಪಡಿಸಿಕೊಂಡಿದ್ದ ಪೂಜೋಪಕರಣಗಳನ್ನೆಲ್ಲ ಬಲಾತ್ಕಾರದಿಂದ ತಿನ್ನಲು ಹೊರಟನು. ಆಗ ಸರ್ಪಗಳೆಲ್ಲವೂ ಅವನನ್ನು ತಡೆದು ಅಹಂಕಾರಿಯಾದ ಆ ಕಾಳಿಯನಿಗೆ ನೀತಿಯನ್ನು ಬೋಧಿಸಿದವು.

೧೧೬-೧೧೭. ಮದೋದ್ಧತನಾದ ಕಾಳಿಯನನ್ನು ಸರ್ಪಗಳು ತಡೆಯಲಾರವೆಂದು ತಿಳಿದು, ಪಕ್ಷಿರಾಜನಾದ ಗರುಡನೇ ಅಲ್ಲಿಗೆ ಬಂದನು ಗರುಡನು ಬಂದುದನ್ನು ನೋಡಿ ಹಾವುಗಳೆಲ್ಲ ಕಾಳಿಯನ ಪ್ರಾಣರಕ್ಷಣೆಗಾಗಿ ಸೂರ್ಯೋದಯವಾಗುವವರೆಗೂ ತಮ್ಮ ಶಕ್ತಿಯನ್ನು ಮೀರಿ ಗರುಡನೊಡನೆ ಯುದ್ಧಮಾಡಿದವು. ಕೊನೆಗೆ ಆ ಗರುಡನ ತೇಜಸ್ಸಿಗೆ ಹೆದರಿ ಎಲ್ಲ ಸರ್ಪಗಳು ಓಡಿದವು.

೧೧೮-೧೧೯. ಮತ್ತು ಎಲ್ಲರಿಗೂ ಅಭಯಪ್ರದನಾದ ಆದಿಶೇಷನನ್ನು ಮರೆಹೊಕ್ಕವು. ಭಯಗ್ರಸ್ತವಾಗಿ ಓಡುತ್ತಿರುವ ಸರ್ಪಗಳನ್ನು ನೋಡಿ ಕರುಣಾಮಯನಾದ ಗರುಡನು ಸುಮ್ಮನೆ ನಿಂತನು. ಆಗ ನಿರ್ಭೀತನಾದ ಕಾಳಿಯನು ಅವನನ್ನು ನೋಡಿ ಶ್ರೀಹರಿಯ ಪಾದಕಮಲಗಳನ್ನು ಸ್ಮರಿಸಿಕೊಂಡು ಯುದ್ಧ ಮಾಡಲಾರಂಭಿಸಿದನು

ಮುಹೂರ್ತಂ ಚ ತಯೋರ್ಯುದ್ಧಂ ಬಭೂವಾತೀವದಾರುಣಂ ।
ಪರಾಜಿತಶ್ಚ ನಾಗೇಂದ್ರಃ ತೇಜಸಾ ಗರುಡಸ್ಯ ಚ ॥ ೧೨೦ ॥

ಭಿಯಾ ಪಲಾಯನಂ ಕೃತ್ವಾ ಜಗಾಮ ಯಮುನಾಹ್ರದಂ ।
ನ ತಂ ಸೌಭರಿಶಾಪೇನ ಖಗೇಂದ್ರೋ ಗಂತುಮೀಶ್ವರಃ ।
ತತ್ರ ತಸ್ಥೌ ಭಿಯಾ ನಾಗೋ ಜಗ್ಮುಃ ಪಶ್ಚಾಚ್ಚ ತದ್ಗಣಾಃ ॥ ೧೨೧ ॥

॥ ನಾರದ ಉವಾಚ ॥

ಕಥಂ ತು ಸೌಭರೇಃ ಶಾಪೋ ಬಭೂವ ಗರುಡಾಯ ವೈ ।
ಕಥಂ ನ ಶಕ್ತೋ ಗಂತುಂ ತಂ ಹ್ರದಮೀಶ್ವರವಾಹನಃ ॥ ೧೨೨ ॥

॥ ಶ್ರೀ ನಾರಾಯಣ ಉವಾಚ ॥

ದಿವ್ಯಂ ವರ್ಷಸಹಸ್ರಂ ಚ ವರ್ಷಾಣಾಂ ತತ್ರ ಸೌಭರಿಃ ॥ ೧೨೩ ॥

---

೧೨೦. ಅವರಿಬ್ಬರಿಗೂ ಮುಹೂರ್ತಕಾಲ ದಾರುಣವಾದ ಯುದ್ಧವಾಯಿತು. ಅನಂತರ ಗರುಡನ ತೇಜಸ್ಸಿಗೆ ನಾಗರಾಜನಾದ ಕಾಳಿಯನು ಸೋತುಹೋದನು.

೧೨೧. ಗರುಡನಿಗೆ ಹೆದರಿಕೊಂಡು ಓಡಿದ ಕಾಳಿಯನು ಯಮುನೆಯ ಮಡುವನ್ನು ಹೊಕ್ಕನು. ಸೌಭರಿಮಹರ್ಷಿಯ ಶಾಪದಂತೆ ಗರುಡನು ಆ ಮಡುವಿಗೆ ಪ್ರವೇಶಿಸುವಂತಿರಲಿಲ್ಲ. ಕಾಳಿಯನು ಹೆದರಿ ಅಲ್ಲಿ ನೆಲೆಸಿದುದನ್ನು ನೋಡಿ ಅವನ ಪರಿವಾರವೆಲ್ಲವೂ ಅಲ್ಲಿಗೇ ಬಂದವು.

೧೨೨. ನಾರದ :—ಎಲೈ ಋಷಿವರ್ಯನೇ, ಗರುಡನಿಗೆ ಸೌಭರಿಯ ಶಾಪ ಬರಲು ಕಾರಣವೇನು? ಸರ್ವೇಶ್ವರನ ವಾಹನನಾದ ಆ ಗರುಡನು ಆ ಮಡುವಿಗೆ ಹೋಗಲಾಗದಿರಲು ಕಾರಣವೇನು?

೧೨೩-೧೨೫. ಶ್ರೀನಾರಾಯಣ :—ಸೌಭರಿಮಹರ್ಷಿಯು ಯಮುನಾನದಿಯ ಒಡಲಲ್ಲಿ ದಿವ್ಯಸಹಸ್ರವರ್ಷಗಳ ಕಾಲ ತಪಸ್ಸುಮಾಡಿ, ಶ್ರೀಕೃಷ್ಣನ ಪಾದಕಮಲಗಳನ್ನು ಧ್ಯಾನಮಾಡಿ ಸಿದ್ಧಿಯನ್ನು ಪಡೆದಿದ್ದನು. ಯಮುನಾನದಿಯ ತೀರದಲ್ಲಿ

ತಪಸ್ತಸ್ತ್ವಾ ಮಹಾಸಿದ್ಧೋ ದಧ್ಯೌ ಕೃಷ್ಣಪದಾಂಬುಜಂ ।
ಸಮೀಪೇ ಧ್ಯಾಯಮಾನಸ್ಯ ಕೂಲೇ ಚ ಯಮುನಾಜಲೇ　　॥ ೧೨೪ ॥

ಗಣೇನ ಸಾರ್ಧಂ ನಿಶ್ಯಂಕಃ ಕರೋತಿ ಭ್ರಮಣಂ ಮುದಾ ।
ಪುಚ್ಛಮುತ್ಫಾಲ್ಯ ಬಹುಧಾ ಪರಿತಃ ಪರಮೇಚ್ಛಯಾ　　॥ ೧೨೫ ॥

ಮುನಿಂ ಪ್ರದಕ್ಷಿಣೀಕೃತ್ಯ ಯಾತ್ಯಾಯಾತಿ ಮುದಾನ್ವಿತಃ ।
ಸಕುಲಂ ಸುಮಹಾತ್ಮಾನಂ ದರ್ಶಂ ದರ್ಶಂ ಖಗಾಧಿಪಃ　　॥ ೧೨೬ ॥

ಜಗ್ರಾಹ ಚಂಚುನಾ ಮೀನಂ ಮುನೀಂದ್ರಸ್ಯ ಸಮಂತತಃ ।
ಗಚ್ಛಂತಂ ತಂ ಮೀನಮುಖಂ ದದರ್ಶ ಕೋಪಚಕ್ಷುಷಾ　　॥ ೧೨೭ ॥

ಪ್ರಕೋಪಿತೋ ಮುನೇರ್ದೃಷ್ಟ್ಯಾ ಮೀನಸ್ತೋಯೇಪಪಾತ ಹ ।
ತಮುವಾಚ ಮುನೀಂದ್ರಶ್ಚ ಪುನರಾದಾತುಮುದ್ಯತಂ ।
ಮೀನಶ್ಚ ಗರುಡತ್ರಾಸಾತ್ತಸ್ಥೌ ಮುನಿಸಮೀಪತಃ　　॥ ೧೨೮ ॥

ಆ ಮಹರ್ಷಿಯು ಈ ರೀತಿ ಧ್ಯಾನಪರವಶನಾಗಿರುವುದನ್ನು ನೋಡಿ ಕಾಳಿಯನು ಸ್ವೇಚ್ಛೆಯಾಗಿ ತನ್ನ ಬಾಲವನ್ನೆತ್ತಿಕೊಂಡು ತನ್ನ ಪರಿವಾರದೊಡನೆ ಯಮುನೆಯ ನೀರಿನಲ್ಲಿ ನಿರ್ಭಯವಾಗಿ ಸಂಚರಿಸುತ್ತಿದ್ದನು.

೧೨೬. ಇತ್ತ ಪಕ್ಷಿರಾಜನಾದ ಗರುಡನು ಸರ್ಪಗಳ ಪರಿವಾರದ ಮಧ್ಯದಲ್ಲಿ ಕುಳಿತಿರುವ ಮುನಿಯನ್ನು ನೋಡಿ ಪ್ರದಕ್ಷಿಣೆಮಾಡಿಕೊಂಡು ಸುತ್ತಾಡುತ್ತಿದ್ದನು.

೧೨೭. ಹೀಗೆಯೇ ಸುತ್ತಾಡುತ್ತಾ ಆ ಮುನಿಯ ಸಮೀಪದಲ್ಲಿದ್ದ ಒಂದು ಮೀನನ್ನು ಗರುಡನು ಕೊಕ್ಕಿನಿಂದ ಹಿಡಿದನು. ಈ ರೀತಿ ಮೀನನ್ನು ಕಚ್ಚಿಕೊಂಡು ಹೋಗುತ್ತಿರುವ ಗರುಡನನ್ನು ಮುನಿಯು ಕೋಪದಿಂದ ನೋಡಿದನು.

೧೨೮. ಆ ಮುನಿಯ ದೃಷ್ಟಿಗೆ ಹೆದರಿ ನಡುಗಿದ ಮೀನು ನೀರಿನೊಳಕ್ಕೆ ಬೀಳಲು, ಗರುಡನು ಪುನಃ ಅದನ್ನು ಕಚ್ಚಿಕೊಳ್ಳಲು ಹೊರಟಾಗ ಮುನಿಯು ಅವನನ್ನು ಕುರಿತಿಂತೆಂದನು. ಗರುಡನ ಭಯದಿಂದ ಮೀನೂ ಕೂಡ ಮುನಿಯ ಸಮೀಪಕ್ಕೆ ಬಂದು ಕುಳಿತಿತು.

॥ ಸೌಭರಿ ಉವಾಚ ॥

ಗಚ್ಛ ದೂರಂ ಗಚ್ಛ ದೂರಂ ಖಗೇಂದ್ರ ಮತ್ಸಮೀಪತಃ ॥ ೧೨೯ ॥

ಕಾ ಯೋಗ್ಯತಾ ಮತ್ಪುರಸ್ತೇ ಗ್ರಹೀತುಂ ಜೀವಮುಲ್ಬಣಂ ।
ಶ್ರೀಕೃಷ್ಣವಾಹನಂ ಜ್ಞಾತ್ವಾ ಚಾತ್ಮಾನಂ ಬಹುಮನ್ಯಸೇ ॥ ೧೩೦ ॥

ತ್ವದ್ವಿಧಾನ್ಕೋಟಿಶಃ ಕೃಷ್ಣಃ ಸ್ರಷ್ಟುಂ ಶಕ್ತಶ್ಚ ವಾಹಕಾನ್ ।
ಕರೋಮಿ ಭಸ್ಮಸಾತ್ತೂರ್ಣಂ ತ್ವಾಂ ಚ ಭ್ರೂಭಂಗಲೀಲಯಾ ॥ ೧೩೧ ॥

ವಾಹನಂ ಚ ತ್ವಮೀಶಸ್ಯ ನ ವಯಂ ತವ ಕಿಂಕರಾಃ ।
ಅದ್ಯಪ್ರಭೃತಿ ಪಕ್ಷೀಂದ್ರ ಯದ್ಯಾಗಚ್ಛಸಿ ಮೇ ಹ್ರದಂ ॥ ೧೩೨ ॥

ಮದೀಯಶಾಪಾತ್ತೂರ್ಣಂ ಚ ಭಸ್ಮಸಾದ್ಭವಿತಾ ಧ್ರುವಂ ।
ಮುನೀಂದ್ರಸ್ಯ ವಚಃಶ್ರುತ್ವಾ ಪ್ರಚಚಾಲ ಖಗೇಶ್ವರಃ ॥ ೧೩೩ ॥

---

೧೨೯. ಸೌಭರಿ :—ಎಲೈ ಖಗರಾಜನೇ, ನನ್ನ ಹತ್ತಿರದಿಂದ ನೀನು ಜಾಗ್ರತೆಯಾಗಿ ದೂರಹೋಗುವವನಾಗು.

೧೩೦. ನನ್ನ ಎದುರಿನಲ್ಲಿಯೇ ನಿಷ್ಕರುಣೆಯಿಂದ ಒಂದು ಪ್ರಾಣಿಯನ್ನು ಹಿಡಿಯಲು ನಿನಗೆಲ್ಲಿ ಶಕ್ತಿ ಇದೆ. ನೀನು ಶ್ರೀಕೃಷ್ಣನ ವಾಹನನೆಂದು ಬಗೆದು ಬಹಳ ಅಹಂಕಾರಿಯಾಗಿದ್ದೀಯೆ.

೧೩೧. ನಿನ್ನಂಥ ವಾಹಕರನ್ನು ಶ್ರೀಕೃಷ್ಣನು ಕೋಟಿಗಟ್ಟಲೆ ಸೃಜಿಸಬಲ್ಲನೆಂಬುದನ್ನು ನೀನರಿಯೆ. ನಾನೂ ಕೂಡ ಹುಬ್ಬನ್ನು ಹಾರಿಸುವಷ್ಟು ಲೀಲೆಯಿಂದ ನಿನ್ನನ್ನು ಜಾಗ್ರತೆ ಬೂದಿಮಾಡಬಲ್ಲೆನು.

೧೩೨–೧೩೩. ನೀನು ಶ್ರೀಕೃಷ್ಣನ ವಾಹನವಾದ ಮಾತ್ರಕ್ಕೆ ನಾವು ನಿನ್ನ ಸೇವಕರಲ್ಲ. ಆದ ಕಾರಣ ಎಲೈ ಪಕ್ಷಿರಾಜನೇ, ಇಂದಿನಿಂದ ನೀನೇನಾದರೂ ಈ ಮಡುವಿಗೆ ಬರುವುದಾದರೆ ನನ್ನ ಶಾಪದಿಂದ ನೀನು ಜಾಗ್ರತೆ ಬೂದಿಯಾಗುವುದರಲ್ಲಿ ಸಂಶಯವಿಲ್ಲ. ಈ ರೀತಿಯಾದ ಮುನಿಯ ಶಾಪವಾಕ್ಯವನ್ನು ಕೇಳಿ ಪಕ್ಷಿರಾಜನು ಭಯಗೊಂಡನು.

ಸ್ಮಾರಂ ಸ್ಮಾರಂ ಕೃಷ್ಣಪಾದಂ ತಂ ಪ್ರಣಮ್ಯ ಜಗಾಮ ಹ |
ಅದ್ಯಪ್ರಭೃತಿ ವಿಪ್ರೇಂದ್ರ ಪತಗೇಂದ್ರಸ್ಯ ಸಂತತಂ || ೧೩೪ ||

ಹ್ರದಸ್ಯ ಶ್ರುತಿಮಾತ್ರೇಣ ಕಂಪೋ ಭವತಿ ನಿಶ್ಚಿತಂ |
ಇತಿಹಾಸಶ್ಚ ಕಥಿತೋ ಯಃ ಶ್ರುತೋ ಧರ್ಮವಕ್ತ್ರತಃ || ೧೩೫ ||

ಸ ರಹಸ್ಯಂ ಶ್ರುತಿಸುಖಂ ಪ್ರಕೃತಂ ಶೃಣು ಮಂಗಳಂ |
ವಿಜ್ಞಾಯ ಸುಚಿರಂ ಬಾಲಾ ನೋತಸ್ಥೌ ತಜ್ಜಲಾದ್ಧರಿಃ || ೧೩೬ ||

ಚಕ್ರುರ್ವಿಷಾದಂ ಮೋಹಾಚ್ಚ ರುರುದುರ್ಯಮುನಾತಟೇ |
ಸ್ವವಕ್ಷೋಘಾತನಂ ಚಕ್ರುಃ ಕೇಚಿದ್ಬಾಲಾಃ ಶುಚಾಕುಲಾಃ || ೧೩೭ ||

ಕೇಚಿನ್ನಿಪತ್ಯ ಭೂಮೌ ಚ ಮೂರ್ಛಾಂ ಪ್ರಾಪುರ್ಹರಿಂ ವಿನಾ |
ಹ್ರದಂ ಪ್ರವೇಷ್ಟುಂ ಕೇಚಿಚ್ಚ ವಿರಹೇಣ ಸಮನ್ವಿತಾಃ || ೧೩೮ ||

೧೩೪-೧೩೫. ಶ್ರೀಕೃಷ್ಣನ ಪಾದಕಮಲಗಳನ್ನು ಸ್ಮರಿಸುತ್ತ ಆ ಮಹರ್ಷಿಗೆ ವಂದಿಸಿ, ಗರುಡನು ಹೊರಟುಹೋದನು. ಎಲೈ ಬ್ರಾಹ್ಮಣೋತ್ತಮನೇ, ಅಂದಿನಿಂದ ಪಕ್ಷಿರಾಜನಿಗೆ ಆ ಮಡುವಿನ ಹೆಸರನ್ನು ಕೇಳಿದರೇ ನಡುಕವುಂಟಾಗುವುದು ನಿಶ್ಚಯ. ಈ ರೀತಿ ಧರ್ಮಪುರುಷನ ಮುಖದಿಂದ ಕೇಳಿದ ಇತಿಹಾಸವನ್ನು ಹೇಳಿದು ದಾಯಿತು.

೧೩೬-೧೩೭. ಅತಿ ಗೋಪ್ಯವೂ, ಶ್ರವಣಾನಂದಕರವೂ ಆದ ಈ ಇತಿಹಾಸವನ್ನು ಕೇಳಿದ ಮೇಲೆ ಈಗ ಪ್ರಕೃತವಾದ ಮಂಗಳ ಕಥೆಯನ್ನು ಕೇಳು. ಎಷ್ಟು ಹೊತ್ತಾದರೂ, ಶ್ರೀಹರಿಯು ಕಾಳಿಯ ಮಡುವಿನಿಂದ ಮೇಲಕ್ಕೆ ಬರದಿರುವುದನ್ನು ನೋಡಿ ಗೋಪಾಲಕರೆಲ್ಲರೂ, ಮೋಹಪರವಶರಾಗಿ ವ್ಯಥೆಪಡುತ್ತ ಯಮುನೆಯ ದಡದಲ್ಲಿ ಅಳುತ್ತಿದ್ದರು. ಕೆಲವು ಗೋಪಾಲಕರು ವ್ಯಥೆಯಿಂದ ತಮ್ಮ ಎದೆಯನ್ನು ಚಚ್ಚಿಕೊಂಡು ಗೋಳಾಡಿದರು.

೧೩೮. ಕೆಲವರು ಶ್ರೀಹರಿಯ ವಿರಹವನ್ನು ಸಹಿಸಲಾರದೆ ಭೂಮಿಯ ಮೇಲೆ ಬಿದ್ದು ಮೂರ್ಛೆಗೊಂಡರು. ಕೆಲವರು ವಿರಹಾಕುಲರಾಗಿ ಮಡುವಿಗೇ ಪ್ರವೇಶಿಸಲು ಹೊರಟರು.

ಕೇಚಿದ್ಗೋಪಾಲಬಾಲಾಶ್ಚ ಚಕ್ರುಶ್ಚ ತನ್ನಿವಾರಣಂ ।
ಕೃತ್ವಾ ವಿಲಾಪಂ ಕೇಚಿಚ್ಚ ಪ್ರಾಣಾಂಸ್ತ್ಯಕ್ತುಂ ಸಮುದ್ಯತಾಃ ॥ ೧೩೯ ॥

ತೇಷಾಂ ಕೇಚಿಜ್‌ಜ್ಞಾನವಂತೋ ರಕ್ಷಾಂ ಚಕ್ರುಃ ಪ್ರಯತ್ನತಃ ।
ಕೇಚಿದೂಚುಶ್ಚ ಹಾಹೇತಿ ಕೃಷ್ಣ ಕೃಷ್ಣೇತಿ ಕೇಚನ ॥ ೧೪೦ ॥

ಕೇಚಿದ್ವಕ್ತುಂ ಪ್ರವೃತ್ತಿಂ ಚ ಪ್ರಯಯುರ್ನಂದಸನ್ನಿಧಿಂ ।
ಕೇಚಿತ್ಸಂಮಿಲಿತಾಸ್ತತ್ರ ಶೋಕಮೋಹಭಯಾತುರಾಃ ॥ ೧೪೧ ॥

ಇತ್ಯೂಚುಃ ಕಿಂ ಕರಿಷ್ಯಾಮಃ ಕುತೋಽಸ್ಮಾಕಂ ಗತೋ ಹರಿಃ ।
ಹೇ:ನಂದಸೂನೋ ಹೇ ಕೃಷ್ಣ ಪ್ರಾಣೇಭ್ಯೋಽಪ್ಯಧಿಕಪ್ರಿಯ ॥ ೧೪೨ ॥

ಹೇ ಬಂಧೋ ದರ್ಶನಂ ದೇಹೀತ್ಯೂಚುಃ ಪ್ರಾಣಾಃ ಪ್ರಯಂತಿ ಹಿ ।
ಏತಸ್ಮಿನ್ನಂತರೇ ಕೇಚಿದ್ಬಾಲಕಾ ನಂದಸನ್ನಿಧಿಂ ॥ ೧೪೩ ॥

೧೩೯-೧೪೦. ಕೆಲವು ಗೋಪಾಲಕರು ಮಡುವಿಗೆ ಬೀಳುವವರನ್ನು ತಡೆದರು. ಮತ್ತೆ ಕೆಲವರು ಗೋಳಾಡಿ ಪ್ರಾಣತ್ಯಾಗ ಮಾಡಲು ಸಿದ್ಧರಾದರು. ಅವರಲ್ಲಿ ಜ್ಞಾನಿಗಳಾದ ಕೆಲವರು ಅಯ್ಯೋ! ಅಯ್ಯೋ! ಎಂದೂ, ಮತ್ತೆ ಕೆಲವರು ಕೃಷ್ಣಾ, ಕೃಷ್ಣಾ, ಎಂದೂ ಕೂಗಿಕೊಂಡರು.

೧೪೧. ಕೆಲವರು ಈ ಸಮಾಚಾರವನ್ನು ತಿಳಿಸಲು ನಂದಗೋಪನ ಸನ್ನಿಧಿಗೆ ಹೋದರು. ಮತ್ತೆ ಕೆಲವರು ಶೋಕಮೋಹಭಯಗಳಿಂದ ಆಕುಲರಾಗಿ ಸ್ತಬ್ಧರಾಗಿ ನಿಂತಿದ್ದರು.

೧೪೨. 'ನಂದಸೂನುವೂ, ನಮ್ಮ ಪ್ರಾಣಗಳಿಗಿಂತ ವಿಶೇಷ ಪ್ರಿಯನೂ ಆದ ಶ್ರೀಕೃಷ್ಣನು ಎಲ್ಲಿಗೆ ಹೋದನು ನಾವು ಈಗ ಏನು ಮಾಡೋಣ' ಎಂದು ಗೋಳಾಡಿದರು.

೧೪೩-೧೪೪. ಎಲೈ ಜಗದ್ಬಾಂಧವನೇ, ನಮಗೆ ದರ್ಶನವನ್ನು ಕೊಡು. ನಮ್ಮ ನಮ್ಮ ಪ್ರಾಣಗಳು ಹೋಗುತ್ತಿವೆ.' ಎಂದು ಮೊರೆಯಿಟ್ಟರು. ಇಷ್ಟರೊಳಗೆ

ಸಂಪ್ರಾಪುರತಿಲೋಲಾಕ್ಷ ರುದಂತಃ ಶೋಕವಿಹ್ವಲಾಃ ।
ಪ್ರವೃತ್ತಿಮೂಚುಸ್ತಂ ಶೀಘ್ರಂ ಯಶೋದಾಂ ಮೂಲತೋ ಬಲಂ ॥ ೧೪೪ ॥

ಗೋಪಾನ್ ಗೋಪಾಲಿಕಾಶ್ಚೈವ ರಕ್ತಪಂಕಜಲೋಚನಾಃ ।
ಶ್ರುತ್ವಾ ವಾರ್ತಾಂ ಚ ತೇ ಸರ್ವೇ ಶೀಘ್ರಂ ಜಗ್ಮುಃ ಶುಚಾನ್ವಿತಾಃ ॥ ೧೪೫ ॥

ಕಲಿಂದನಂದಿನೀತೀರಂ ರುರುದುರ್ಬಾಲಕೈಯುರ್ತಾಃ ।
ಗತ್ವಾ ಸಂಮಿಲಿತಾಃ ಸರ್ವೇ ರುರುದುಃ ಶೋಕಮೂರ್ಛಿತಾಃ । ೧೪೬ ॥

ಹ್ರದಂ ವಿಶಂತೀಮಂಬಾಂ ತಾಂ ಕೇಚಿಚಕ್ರುರ್ನಿವಾರಣಂ ।
ಗೋಪಾ ಗೋಪಾಲಿಕಾಶ್ಚೈವ ಜಘ್ನುರಂಗಾನಿ ಶೋಕತಃ ॥ ೧೪೭ ॥

ಕೇಚಿದ್ವಿಲಲಪುಸ್ತತ್ರ ಮೂರ್ಛಾಂ ಪ್ರಾಪುಶ್ಚ ಕೇಚನ ।
ಹ್ರದಂ ವಿಶಂತೀಂ ತಾಂ ರಾಧಾಂ ವಾರಯಾಮಾಸ ಕೇಚನ ॥ ೧೪೮ ॥

ಕೆಲವು ಗೋಪಾಲಕರು ಶೋಕಪೀಡಿತರಾಗಿ ಅಳುತ್ತ ಅತ್ಯಾತುರದಿಂದ ನಂದನ ಸಮೀಪಕ್ಕೆ ಬಂದು ಅವನಿಗೂ, ಯಶೋದೆ ಮತ್ತು ಬಲರಾಮನಿಗೂ ಈ ಸಮಾಚಾರವನ್ನರುಹಿದರು.

೧೪೫. ಗೋಪಾಲಕರಿಗೂ ಕೆಂದಾವರೆಯಂತೆ ಕಣ್ಣುಳ್ಳ ಗೋಪಾಲಿಕೆಯರಿಗೂ ತಿಳಿಸಲು ಈ ಸಮಾಚಾರವನ್ನು ಕೇಳಿದ ಅವರೆಲ್ಲರೂ ದುಃಖಿತರಾಗಿ ಶ್ರೀಕೃಷ್ಣನಿದ್ದೆಡೆಗೆ ಬಂದರು.

೧೪೬. ನಂದಗೋಪಯಶೋದೆಯರೂ ಇತರ ಬಾಲಕರೊಡನೆ ಯಮುನೆಯ ತೀರಕ್ಕೆ ಬಂದು ಶ್ರೀಕೃಷ್ಣನ ಸ್ಥಿತಿಯನ್ನು ನೋಡಿ ಅಳುತ್ತ ಮೂರ್ಛೆಗೊಂಡರು.

೧೪೭. ಕಾಳಿಂದಿಯ ಮಡುವಿಗೇ ಪ್ರವೇಶಮಾಡತೊಡಗಿದ ಯಶೋದೆಯನ್ನು ಕೆಲವರು ನಿವಾರಣೆಮಾಡಿದರು. ಗೋಪಗೋಪಾಲಿಕೆಯರೆಲ್ಲರೂ ದುಃಖದಿಂದ ತಮ್ಮ ಅಂಗಾಂಗಗಳನ್ನು ಜಜ್ಜಿಕೊಂಡರು

೧೪೮. ಕೆಲವರು ಅತ್ತರು. ಕೆಲವರು ಮೂರ್ಛೆಗೊಂಡರು ಮಡುವಿಗೆ ಪ್ರವೇಶಮಾಡುತ್ತಿದ್ದ ರಾಧೆಯನ್ನು ಒಬ್ಬಾಕೆಯು ತಡೆದಳು

ಮೂರ್ಛಾಂ ಸಂಪ್ರಾಪ ಸಾ ಶೋಕಾನ್ಮೃತೇವ ಚ ಸರಿತ್ತಟೇ ।
ವಿಲಪ್ಯಾತಿಭೃಶಂ ನಂದೋ ಮೂರ್ಛಾಂ ಪ್ರಾಪ ಪುನಃಪುನಃ ॥ ೧೪೯ ॥

ಭೂಯೋಽಪಿ ರೋದನಂ ಕೃತ್ವಾ ಭೂಯೋ ಮೂರ್ಛಾಮವಾಪ ಹ ।
ವಿಲಪಂತಂ ಭೃಶಂ ನಂದಂ ಯಶೋದಾಂ.ಶೋಕಕರ್ಶಿತಾಂ ॥ ೧೫೦ ॥

ಗೋಪಾಂಶ್ಚ ಗೋಪಿಕಾಶ್ಚೈವ ರಾಧಿಕಾಮತಿಮೂರ್ಛಿತಾಂ ।
ರುದತೋ ಬಾಲಕಾನ್ಸರ್ವಾನ್ಬಾಲಿಕಾಶ್ಚ ಶುಚಾನ್ವಿತಾಃ ॥ ೧೫೧ ॥

ಸರ್ವಾಂಶ್ಚ ಬೋಧಯಾಮಾಸ ಬಲಶ್ಚ ಜ್ಞಾನಿನಾಂ ವರಃ ।
॥ ಶ್ರೀ ಬಲದೇವ ಉವಾಚ ॥
ಗೋಪಾ ಗೋಪಾಲಿಕಾ ಬಾಲಾಃ ಸರ್ವೇ ಶೃಣುತ ಮದ್ವಚಃ ॥ ೧೫೨ ॥

---

೧೪೯. ಆಗ ರಾಧೆಯು ಮೂರ್ಛೆಗೊಂಡು ಯಮುನೆಯ ದಡದಲ್ಲಿ ಸತ್ತಂತೆ ಬಿದ್ದಳು. ನಂದಗೋಪನೂ ಕೂಡ ಬಹಳವಾಗಿ ಅತ್ತು ಮತ್ತೆ ಮತ್ತೆ ಮೂರ್ಛೆಗೊಂಡನು.

೧೫೦–೧೫೧. ಪುನಃ ಅತ್ತನು, ಪುನಃ ಮೂರ್ಛೆಹೋದನು, ಈ ರೀತಿ ಬಹಳವಾಗಿ ಅಳುತ್ತಿರುವ ನಂದಗೋಪನನ್ನೂ, ಶೋಕದಿಂದ ಕೃಶಳಾದ ಯಶೋದೆಯನ್ನೂ, ಗೋಪಗೋಪಿಯರನ್ನೂ, ಬಹಳವಾಗಿ ಮೂರ್ಛಿತಳಾದ ರಾಧೆಯನ್ನೂ, ಬಹಳವಾಗಿ ಅಳುತ್ತಿರುವ ಇತರ ಬಾಲಕ ಬಾಲಕಿಯರನ್ನೂ ಜ್ಞಾನಿಗಳಲ್ಲಿ ಶ್ರೇಷ್ಠನಾದ ಬಲರಾಮನು ಸಮಾಧಾನ ಪಡಿಸಿ ಮುಂದೆ ಹೇಳುವಂತೆ ಹೇಳಿದನು.

೧೫೨. ಬಲದೇವ :—ಎಲೈ ಗೋಪಗೋಪಾಲಕಿಯರೇ ಮತ್ತು ಬಾಲ ಬಾಲಕಿಯರೇ, ನೀವೆಲ್ಲರೂ ನನ್ನ ಮಾತನ್ನು ಕೇಳಿರಿ.

ಹೇ ನಂದ ಜ್ಞಾನಿನಾಂ ಶ್ರೇಷ್ಠ! ಗರ್ಗವಾಕ್ಯಸ್ಮೃತಿಂ ಕುರು ।
ಜಗದ್ವಿಭರ್ತುಃ ಶೇಷಸ್ಯ ಸಂಹರ್ತುಃ ಶಂಕರಸ್ಯ ಚ ॥ ೧೫೩ ॥

ವಿಧಾತುಃ ಸಂವಿಧಾತುಶ್ಚ ಭುವಿ ಕಸ್ಮಾತ್ಪರಾಜಯಃ ।
ಪರಮಾಣುಃ ಪರೋ ವ್ಯೂಹಃ ಸ್ಥೂಲಾತ್ಸ್ಥೂಲಃ ಪರಾತ್ಪರಃ ॥ ೧೫೪ ॥

ವಿದ್ಯಮಾನೋಽಪ್ಯದೃಶ್ಯಶ್ಚ ಸಂಯೋಗೋ ಯೋಗಿನಾಮಪಿ ।
ದಿಶಾಂ ನಾಸ್ತಿ ಸಮಾಹಾರಃ ಸ್ಪೃಶ್ಯೋ ನಾಕಾಶ ಏವ ಚ ॥ ೧೫೫ ॥

ಅಪಿ ಸರ್ವೇಶ್ವರೋ ಬಾಧ್ಯ ಇತ್ಯೂಚುಃ ಶ್ರುತಯಃ ಪರಂ ।
ನಾಽತ್ಮಾ ದೃಶ್ಯೋ ನಾಽಸ್ತ್ರಲಕ್ಷ್ಯೋ ನ ವಧ್ಯೋ ನಹಿ ದೃಶ್ಯಕಃ ॥ ೧೫೬ ॥

೧೫೩-೧೫೪. ಎಲೈ ಜ್ಞಾನಿಗಳಲ್ಲಿ ಶ್ರೇಷ್ಠನಾದ ನಂದಗೋಪನೇ, ಗರ್ಗ ಮಹರ್ಷಿಯ ಮಾತನ್ನು ಸ್ಮರಿಸಿಕೋ. ಜಗತ್ತನ್ನು ಹೊತ್ತಿರುವ ಆದಿಶೇಷನಿಗೂ, ಲಯಕಾರಣನಾದ ರುದ್ರನಿಗೂ, ಸೃಷ್ಟಿಕರ್ತನಾದ ಚತುರ್ಮುಖಬ್ರಹ್ಮನಿಗೂ, ಆದಿ ಕಾರಣನಾದ ಶ್ರೀಹರಿಗೆ ಭೂಲೋಕದಲ್ಲಿ ಪರಾಜಯವುಂಟಾಗುವುದೆಂದರೇನು. ಆ ಶ್ರೀಹರಿಯು ಪರಮಾಣುವಿಗಿಂತ ಸೂಕ್ಷ್ಮನೂ, ಆಕಾಶಕ್ಕಿಂತ ವಿಶಾಲವಾದವನೂ, ಪರಾತ್ಪರನೂ ಆಗಿದ್ದಾನೆ.

೧೫೫. ಆತ್ಮನು ಸತ್ತಾರೂಪನಾದರೂ ಕಣ್ಣಿಗೆ ಕಾಣುವುದಿಲ್ಲ. ಯೋಗಿಗಳ ಯೋಗಶಕ್ತಿಗೂ ಸಿಲುಕದ ಪರಮಯೋಗಿಯಾಗಿರುವನು. ದಿಕ್ಕುಗಳಲ್ಲಿ ಅಡಕವಾಗದವನೂ ಆಕಾಶದಂತೆ ಸ್ಪರ್ಶಕ್ಕೆ ಸಿಲುಕದವನೂ ಆಗಿರುವನು.

೧೫೬. ಅದೃಶ್ಯನೂ, ಅಸ್ತ್ರಗಳಿಗೆ ಗುರಿಯಾಗದವನೂ. ವಧೆಗೆ ಸಿಲುಕದವನೂ ಆದ ಸರ್ವೇಶ್ವರನು. ಬಾಧ್ಯನಾಗುವನೇ? ಎಂದಿಗೂ ಇಲ್ಲ. ಎಂದು ಶ್ರುತಿಗಳು ಸಾರಿ ಹೇಳುವುವು.

ನಾಗ್ನಿಗ್ರಸ್ತೋ ನ ಹಿಂಸ್ಯಶ್ಚಾಪೀದಮಾಧ್ಯಾತ್ಮಿಕಾ ವಿದುಃ ।
ವಿಗ್ರಹೋಽಸ್ಯೈವ ಕೃಷ್ಣಸ್ಯ ಭಕ್ತಧ್ಯಾನಾರ್ಥಮೇವ ಚ ॥ ೧೫೭ ॥

ಜ್ಯೋತಿಃಸ್ವರೂಪಸ್ಯ ವಿಭೋರ್ನಾದ್ಯಂತಮಧ್ಯಮಾತ್ಮನಃ ।
ಜಲಪ್ಲುತೇ ಚ ಬ್ರಹ್ಮಾಂಡೇ ಜಲಶಾಯೀ ಜನಾರ್ದನಃ ॥ ೧೫೮ ॥

ಯನ್ನಾಭಿಪದ್ಮಜೋ ಬ್ರಹ್ಮಾ ತಸ್ಯೇಶಸ್ಯ ಹ್ರದೇ ವಿಪತ್ ।
ಮಶಕಶ್ಚೇತ್ ಕ್ಷಮೋ ಗ್ರಸ್ತುಂ ಬ್ರಹ್ಮಾಂಡಮಖಿಲಂ ಪಿತಃ ॥ ೧೫೯ ॥

ನ ತಥಾಪಿ ತದೀಶಂ ತಂ ಗ್ರಸ್ತುಂ ಸರ್ಪಃ ಕ್ಷಮೋ ಭವೇತ್ ।
ಇತ್ಯೇವಂ ಕಥಿತಂ ಸರ್ವಮಾಧ್ಯಾತ್ಮಿಕಮನುತ್ತಮಂ ॥ ೧೬೦ ॥

---

೧೫೭. ಪರಮಾತ್ಮನು ಅಗ್ನಿಗ್ರಸ್ತನಾಗುವುದಿಲ್ಲ. ಹಿಂಸೆಗೂ ಒಳಗಾಗುವುದಿಲ್ಲವೆಂದು ಅಧ್ಯಾತ್ಮಜ್ಞಾನಿಗಳು ಹೇಳುವರು. ಅಂಥ ಪರಮಾತ್ಮನೇ ಭಕ್ತರ ಧ್ಯಾನಕ್ಕೆ ಆಧಾರವಾಗಿ ಶ್ರೀಕೃಷ್ಣನ ವಿಗ್ರಹವನ್ನು ಧರಿಸುವನು.

೧೫೮. ವಿಶ್ವವ್ಯಾಪಕನೂ, ಜೋತಿರ್ಮಯನೂ ಆದ ಆತ್ಮನಿಗೆ ಆದಿ ಮಧ್ಯಾವಸಾನಗಳಿಲ್ಲ. ಆ ಜನಾರ್ದನನು ಜಲಪೂರಿತವಾದ ಬ್ರಹ್ಮಾಂಡದಲ್ಲಿ ಜಲಶಾಯಿಯಾಗಿರುವನು.

೧೫೯. ಯಾರ ನಾಭಿಕಮಲದಲ್ಲಿ ಚತುರ್ಮುಖಬ್ರಹ್ಮನು ಅವತರಿಸಿದನೋ ಅಂಥ ಸರ್ವೇಶ್ವರನಿಗೆ ಕಾಳಿಂದಿಯ ಮಡುವಿನಲ್ಲಿ ವಿಪತ್ತು ಬರುವುದಾದರೆ ನಿಖಿಲ ಬ್ರಹ್ಮಾಂಡವನ್ನೂ ಒಂದು ಸೊಳ್ಳೆಯು ನುಂಗಲು ಸಮರ್ಥವಾದೀತು.

೧೬೦. ಒಂದು ವೇಳೆ ಹಾಗಾದರೂ ಕಾಳಿಯನು ಸರ್ವೇಶ್ವರನನ್ನು ನುಂಗಲು ಸಮರ್ಥನಾಗುವುದಿಲ್ಲ. ಈ ರೀತಿ ಸರ್ವೋತ್ತಮವಾದ ಆಧ್ಯಾತ್ಮಿಕ ತತ್ವವನ್ನು ನಿನಗೆ ಉಪದೇಶಿಸಿದೆನು

ನಿಗೂಢಂ ಯೋಗಿನಾಂ ಸಾರಂ ಸಂಶಯಚ್ಛೇದಕಾರಣಂ ।
ಬಲದೇವವಚಃ ಶ್ರುತ್ವಾ ಗರ್ಗವಾಕ್ಯಮನುಸ್ಮರನ್ ॥ ೧೬೧ ॥

ತತ್ಯಾಜ ಶೋಕಂ ನಂದಶ್ಚ ವ್ರಜಶ್ಚ ವ್ರಜಯೋಷಿತಃ ।
ಪ್ರಬೋಧಂ ಮೇನಿರೇ ಸರ್ವೇ ನ ಯಶೋದಾ ನ ರಾಧಿಕಾ ॥ ೧೬೨ ॥

ಬಂಧುವಿಚ್ಛೇದಸಮಯೇ ಪ್ರಬೋಧೇ ನ ಸ್ಥಿತಂ ಮನಃ ।
ಏತಸ್ಮಿನ್ನಂತರೇ ಕೃಷ್ಣಮುತ್ಪತಂತಂ ಜಲಾನ್ಮುನೇ ॥ ೧೬೩ ॥

ದದೃಶುಸ್ತಂ ಸುಪ್ರಸನ್ನಾ ವ್ರಜಾಶ್ಚ ವ್ರಜಯೋಷಿತಃ ।
ಶರತ್ಪಾರ್ವಣಚಂದ್ರಾಸ್ಯಂ ಸಸ್ಮಿತಂ ಸುಮನೋಹರಂ ॥ ೧೬೪ ॥

ಅಸ್ನಿಗ್ಧವಸ್ತ್ರಮಸ್ನಿಗ್ಧಮಲುಪ್ತಚಂದನಾಂಜನಂ ।
ಸರ್ವಾಭರಣಸಂಯುಕ್ತಂ ಜ್ವಲಂತಂ ಬ್ರಹ್ಮತೇಜಸಾ ॥ ೧೬೫ ॥

೧೬೧-೧೬೨. ಇದು ಅತ್ಯಂತ ಗೋಪ್ಯವೂ, ಯೋಗಿಗಳಿಗೆ ಸಾರಭೂತವೂ, ಸಂದೇಹಪರಿಹಾರಕವೂ ಆಗಿರುವುದು. ಬಲದೇವನ ಮಾತುಗಳನ್ನು ಕೇಳಿ ನಂದ ಗೋಪನು ಗರ್ಗಮಹರ್ಷಿಯ ಮಾತುಗಳನ್ನು ಸ್ಮರಿಸಿಕೊಂಡು ದುಃಖವನ್ನು ದೂರ ಮಾಡಿದನು. ಇತರ ಗೋಪ ಗೋಪಿಯರೂ ದುಃಖವನ್ನು ಮರೆತು ಶಾಂತರಾದರು. ಯಶೋದೆಯೂ, ರಾಧೆಯೂ ದುಃಖಿಸುವುದನ್ನು ಬಿಡಲಿಲ್ಲ.

೧೬೩-೧೬೪. ಬಂಧು ವಿರಹ ವಿಷಯದಲ್ಲಿ ಅವರ ಮನಸ್ಸು ಪ್ರಸನ್ನವಾಗಲಿಲ್ಲ. ಎಲೈ ನಾರದಮುನಿಯೇ, ಇಷ್ಟು ಹೊತ್ತಿಗೆ ಸರಿಯಾಗಿ ಶ್ರೀಕೃಷ್ಣನು ನೀರಿನಿಂದ ಮೇಲಕ್ಕೆ ಬರುತ್ತಿರುವುದನ್ನು ಗೋಪಗೋಪಿಯರೆಲ್ಲರೂ ನೋಡಿ ಪ್ರಸನ್ನವದನರಾದರು. ಶರತ್ಪೂರ್ಣಿಮಾಚಂದ್ರನಂತೆ ಮನೋಹರವಾದ ಮುಖವುಳ್ಳ ಶ್ರೀಕೃಷ್ಣನು ನಗುನಗುತ್ತಲೇ ಇದ್ದನು.

೧೬೫. ಕಾಳಿಂದಿಯ ಮಡುವಿನಲ್ಲಿ ಮುಳುಗಿದ್ದರೂ ಆತನಾಗಲೀ, ಆತನ ವಸ್ತ್ರಗಳಾಗಲೀ ನೆನೆದಿರಲಿಲ್ಲ. ಅವನು ಲೇಪಿಸಿಕೊಂಡಿದ್ದ ಚಂದನ ಮತ್ತು ಅಂಜನಗಳೂ ಅಳಿಸಿಹೋಗಿರಲಿಲ್ಲ. ಸರ್ವಾಭರಣಭೂಷಿತನಾಗಿ ಬ್ರಹ್ಮತೇಜಸ್ಸಿನಿಂದ ಬೆಳಗುತ್ತಿದ್ದನು.

ಮಯೂರಪಿಚ್ಛಚೂಡಂ ಚ ವಂಶೀವದನಮಚ್ಯುತಂ ।
ಯಶೋದಾ ಬಾಲಕಂ ದೃಷ್ಟ್ವಾ ಕೃತ್ವಾ ವಕ್ಷಸಿ ಸಸ್ಮಿತಾ ॥ ೧೬೬ ॥

ಚುಚುಂಬ ವದನಾಂಭೋಜಂ ಪ್ರಸನ್ನವದನೇಕ್ಷಣಾ ।
ಕ್ರೋಡೇ ಚಕಾರ ನಂದಶ್ಚ ಬಲಶ್ಚ ರೋಹಿಣೀ ಮುದಾ ॥ ೧೬೭ ॥

ನಿಮೇಷರಹಿತಾಃ ಸರ್ವೇ ದದೃಶುಃ ಶ್ರೀಮುಖಂ ಹರೇಃ ।
ಪ್ರೇಮಾಂಧಾ ಬಾಲಕಾಃ ಸರ್ವೇ ಚಕ್ರುರಾಲಿಂಗನಂ ಹರೇಃ ॥ ೧೬೮ ॥

ಸಪುಶ್ಚಕ್ಷುಶ್ಚಕೋರೈಶ್ಚ ಮುಖಚಂದ್ರಂ ಚ ಗೋಪಿಕಾಃ ।
ಏತಸ್ಮಿನ್ನಂತರೇ ತತ್ರ ಸಹಸಾ ಕಾನನಾಂತರಂ ॥ ೧೬೯ ॥

ದಾವಾಗ್ನಿರ್ವೇಷ್ಟಯಾಮಾಸ ತೈಃ ಸರ್ವೈಃ ಸಹ ಗೋಕುಲಂ ।
ದೃಷ್ಟ್ವಾ ಶೈಲಪ್ರಮಾಣಾಗ್ನಿಂ ಪರಿತಃ ಕಾನನಾಂತರೇ ॥ ೧೭೦ ॥

---

೧೬೬. ಶಿಖೆಯಲ್ಲಿ ನವಿಲುಗರಿಯನ್ನು ಧರಿಸಿ, ಬಾಯಿನ ಹತ್ತಿರ ಕೊಳಲನ್ನು ಹಿಡಿದಿರುವ ಅಚ್ಯುತನನ್ನು ಕಂಡು ಯಶೋದೆಯು ಹಸನ್ಮುಖಿಯಾಗಿ ಎದೆಗೆ ಅಪ್ಪಿಕೊಂಡಳು.

೧೬೭. ಪ್ರಸನ್ನಮುಖಿಯಾಗಿ ಅವನ ಮುಖಾರವಿಂದಕ್ಕೆ ಮುತ್ತಿಟ್ಟಳು. ಅನಂತರ ನಂದಗೋಪನೂ, ಬಲರಾಮನೂ ರೋಹಿಣಿಯೂ ಕ್ರಮವಾಗಿ ಸಂತೋಷದಿಂದ ಎದೆಗಪ್ಪಿಕೊಂಡರು.

೧೬೮. ಎಲ್ಲರೂ ರೆಪ್ಪೆಯನ್ನೂ ಬಡಿಯದೆ ಶ್ರೀಹರಿಯ ದಿವ್ಯಮುಖವನ್ನು ನೋಡುತ್ತಿದ್ದರು. ಗೋಪಬಾಲಕರೆಲ್ಲರೂ ಪ್ರೇಮಾಂಧರಾಗಿ ಶ್ರೀಹರಿಯನ್ನು ಆಲಿಂಗಿಸಿಕೊಂಡರು.

೧೬೯-೧೭೦. ಗೋಪಿಕಾಸ್ತ್ರೀಯರೆಲ್ಲರೂ ತಮ್ಮ ಕಣ್ಣುಗಳೆಂಬ ಚಕೋರಗಳಿಂದ ಶ್ರೀಹರಿಯ ಮುಖ ಚಂದ್ರಚಂದ್ರಿಕೆಯನ್ನು ಪಾನಮಾಡಿದರು. ಈ ಮಧ್ಯದಲ್ಲಿ ಇದ್ದಕಿದ್ದಂತೆಯೇ ಕಾಡಿನ ಮಧ್ಯದಲ್ಲಿ ಕಾಡುಕಿಚ್ಚು ಎದ್ದು ಅವರೆಲ್ಲರೊಡನೆ ಗೋಕುಲವನ್ನೇ ಸುತ್ತುವರಿಯಿತು. ಈ ರೀತಿ ಸುತ್ತಲೂ ಕಾಡಿನಲ್ಲಿ ಪರ್ವತಾಕಾರವಾಗಿ ಅಗ್ನಿಯು ಆವರಿಸಿಕೊಂಡಿರುವುದನ್ನು ನೋಡಿ, ಎಲ್ಲರೂ ತಮ್ಮ ನಾಶವು

ಪ್ರಣಾಶಂ ಮೇನಿರೇ ಸರ್ವೇ ಭಯಮಾಪುಶ್ಚ ಸಂಕಟೇ ।
ಶ್ರೀಕೃಷ್ಣಂ ತುಷ್ಟುವುಃ ಸರ್ವೇ ಸಂಪುಟಾಂಜಲಯೋ ವ್ರಜಾಃ ॥
ಬಾಲಾ ಗೋಪ್ಯಶ್ಚ ಸಂತ್ರಸ್ತಾ ಭಕ್ತಿನಮ್ರಾತ್ಮಕಂಧರಾಃ ॥ ೧೭೦ ॥

॥ ಬಾಲಾ ಊಚುಃ ॥

ಯಥಾ ಸಂರಕ್ಷಿತಂ ಬ್ರಹ್ಮನ್ಸರ್ವಾಪತ್ಸ್ವೇವ ನಃ ಕುಲಂ ॥ ೧೭೨ ॥

ತಥಾ ರಕ್ಷಾಂ ಕುರು ಪುನರ್ದಾವಾಗ್ನೇರ್ಮಧುಸೂದನ ।
ತ್ವಮಿಷ್ಟದೇವತಾಸ್ಮಾಕಂ ತ್ವಮೇವ ಕುಲದೇವತಾ ॥ ೧೭೩ ॥

ಸ್ರಷ್ಟಾ ಪಾತಾ ಚ ಸಂಹರ್ತಾ ಜಗತಾಂ ಚ ಜಗತ್ಪತೇ ।
ವಹ್ನಿರ್ವಾ ವರುಣೋ ವಾಪಿ ಚಂದ್ರೋ ವಾ ಸೂರ್ಯ ಏವ ಚ ॥ ೧೭೪ ॥

ಯಮಃ ಕುಬೇರಃ ಪವನಃ ಈಶಾನಾದ್ಯಾಶ್ಚ ದೇವತಾಃ ।
ಬ್ರಹ್ಮೇಶಶೇಷಧರ್ಮೇಂದ್ರಾಃ ಮುನೀಂದ್ರಾಃ ಮನವ ಸ್ಮೃತಾಃ ॥ ೧೭೫ ॥

ಸಮಾಪಿಸಿತೆಂಬ ಭಯದಿಂದ ಸಂಕಟಕ್ಕೊಳಗಾದರು. ಆಗ ಅಲ್ಲಿದ್ದ ಗೋಪ ಗೋಪಿಯರೆಲ್ಲರೂ ಭಯಭಕ್ತಿಯಿಂದ ತಲೆಬಾಗಿ ಕೈಗಳನ್ನು ಜೋಡಿಸಿಕೊಂಡು ಶ್ರೀಕೃಷ್ಣನನ್ನು ಸ್ತುತಿಸಲಾರಂಭಿಸಿದರು.

೧೭೨-೧೭೩. ಗೋಪಬಾಲರು :—ಎಲೈ ಮಧುಸೂದನನೇ, ಸಕಲಕಷ್ಟಗಳಿಂದಲೂ ನಮ್ಮ ಕುಲವನ್ನು ಇದುವರೆವಿಗೂ ಕಾಪಾಡಿದಂತೆ ಈಗ ದಾವಾಗ್ನಿಯ ದೆಸೆಯಿಂದ ನಮ್ಮನ್ನು ಪಾರುಗೊಳಿಸು. ನೀನೇ ನಮಗೆ ಇಷ್ಟದೇವತೆ ಮತ್ತು ಕುಲದೇವತೆಯು.

೧೭೪-೧೭೬. ಎಲೈ ಜಗತ್ಪತಿಯೇ, ನೀನು ಜಗತ್ತಿನ ಸೃಷ್ಟಿ ಸ್ಥಿತಿ ಸಂಹಾರಕ್ಕೆ ಮೂಲಕಾರಣನಾಗಿದ್ದೀಯೆ. ಅಗ್ನಿವರುಣರೂ, ಚಂದ್ರಸೂರ್ಯರೂ ಯಮ, ಕುಬೇರ, ವಾಯು ಮತ್ತು ಈಶಾನಾದಿ ದೇವತೆಗಳೂ, ಬ್ರಹ್ಮ, ಈಶ, ಶೇಷ

ಮಾನವಾಶ್ಚ ತಥಾ ದೈತ್ಯಾ ಯಕ್ಷರಾಕ್ಷಸಕಿಂನ್ನರಾಃ ।
ಯೇ ಯೇ ಚರಾಚರಾಶ್ಚೈವ ಸರ್ವೇ ತವ ವಿಭೂತಯಃ ॥ ೧೭೬ ॥

ಆವಿರ್ಭಾವಸ್ತಿರೋಭಾವಃ ಸರ್ವೇಷಾಂ ಚ ತವೇಚ್ಛಯಾ ।
ಅಭಯಂ ದೇಹಿ ಗೋವಿಂದ ವಹ್ನಿಸಂಹರಣಂ ಕುರು ॥ ೧೭೭ ॥

ವಯಂ ತ್ವಾಂ ಶರಣಂ ಯಾಮೋ ರಕ್ಷ ನಃ ಶರಣಾಗತಾನ್ ।
ಇತ್ಯೇವಮುಕ್ತ್ವಾ ತೇ ಸರ್ವೇ ತಸ್ಥುರ್ಧ್ಯಾತ್ವಾ ಪದಾಂಬುಜಂ ॥ ೧೭೮ ॥

ದೂರೀಭೂತಸ್ತು ದಾವಾಗ್ನಿಃ ಶ್ರೀಕೃಷ್ಣಾಮೃತದೃಷ್ಟಿತಃ ।
ದೂರೀಭೂತೇ ತು ದಾವಾಗ್ನೌ ನನೃತುಸ್ತೇ ಮುದಾನ್ವಿತಾಃ ॥ ೧೭೯ ॥

ಸರ್ವಾಪದಃ ಪ್ರಣಶ್ಯಂತಿ ಹರಿಸ್ಮರಣಮಾತ್ರತಃ ।
ಇದಂ ಸ್ತೋತ್ರಂ ಮಹಾಪುಣ್ಯಂ ಪ್ರಾತರುತ್ಥಾಯ ಯಃ ಪಠೇತ್ ॥ ೧೮೦ ॥

ಧರ್ಮ, ಮತ್ತು ಇಂದ್ರಾದಿದೇವತೆಗಳೂ, ಮನು ಮುನಿ ಮಾನವರೂ ದೈತ್ಯರೂ ಯಕ್ಷರಾಕ್ಷಸಕಿನ್ನರರೂ ಇತರ ಚರಾಚರಪ್ರಾಣಿಗಳೂ ನಿನ್ನ ವಿಭೂತಿಗಳೇ.

೧೭೭. ನಿನ್ನ ಇಚ್ಛಾಮಾತ್ರದಿಂದ ಮೇಲ್ಕಂಡ ಸಕಲ ಜೀವಿಗಳೂ ಆವಿರ್ಭಾವ ತಿರೋಭಾವವನ್ನು ಹೊಂದುವರು. ಎಲೈ ಗೋವಿಂದನೇ, ನಮಗೆ ಅಭಯ ವಚನವನ್ನು ಕೊಟ್ಟು ದಾವಾಗ್ನಿಯ ತಾಪವನ್ನು ಪರಿಹರಿಸು.

೧೭೮. ನಾವು ನಿನ್ನ ಮರೆಹೋಗುವೆವು. ಶರಣಾಗತರಾದ ನಮ್ಮನ್ನು ಕಾಪಾಡು. ಈ ರೀತಿ ಹೇಳುತ್ತ ಅವರೆಲ್ಲರೂ ಶ್ರೀಕೃಷ್ಣನ ಪಾದಕಮಲಗಳನ್ನು ಸ್ಮರಿಸುತ್ತ ನಿಂತರು.

೧೭೯. ಕೂಡಲೇ ಶ್ರೀಕೃಷ್ಣನ ದಯಾದೃಷ್ಟಿಯು ಬಿದ್ದು ದಾವಾಗ್ನಿಯು ಶಾಂತವಾಯಿತು. ದಾವಾಗ್ನಿಯು ಶಮನವಾದ ಕೂಡಲೇ ಅವರೆಲ್ಲರೂ ಸಂತೋಷದಿಂದ ಕುಣಿದಾಡಿದರು.

೧೮೦-೧೮೩. ಶ್ರೀಹರಿಯನ್ನು ಭಕ್ತಿಯಿಂದ ಸ್ಮರಿಸಿದ ಮಾತ್ರದಿಂದಲೇ ಸಕಲಕಷ್ಟಗಳೂ ನಿವಾರಣೆಯಾಗುವುವು. ಮಹಾಪುಣ್ಯಕರವಾದ ಈ ಸ್ತೋತ್ರವನ್ನು ಪ್ರಾತಃಕಾಲದಲ್ಲೆದ್ದು ಪಠಿಸುವವರಿಗೆ ಜನ್ಮಜನ್ಮಾಂತರದಲ್ಲಿಯೂ ಅಗ್ನಿಯಿಂದ

ವಹ್ನಿತೋ ನ ಭವೇತ್ತಸ್ಯ ಭಯಂ ಜನ್ಮನಿ ಜನ್ಮನಿ ।
ಶತ್ರುಗ್ರಸ್ತೇ ಚ ದಾವಾಗ್ನೌ ವಿಪತ್ತೌ ಪ್ರಾಣಸಂಕಟೇ　　॥ ೧೬೧ ॥

ಸ್ತೋತ್ರಮೇತತ್ಪಠಿತ್ವಾ ತು ಮುಚ್ಯತೇ ನಾತ್ರ ಸಂಶಯಃ ।
ಶತ್ರುಸೈನ್ಯಂ ಕ್ಷಯಂ ಯಾತಿ ಸರ್ವತ್ರ ವಿಜಯೀ ಭವೇತ್ ।
ಇಹ ಲೋಕೇ ಹರೇರ್ಭಕ್ತಿಮಂತೇ ದಾಸ್ಯಂ ಲಭೇದ್ಧ್ರುವಂ　　॥ ೧೬೨ ॥

॥ ನಾರಾಯಣ ಉವಾಚ ॥

ದಾವಾಗ್ನಿಮೋಕ್ಷಣಂಕೃತ್ವಾ ತೈಃ ಸಾರ್ಧಂ ಶೃಣು ನಾರದ ।
ಜಗಾಮ ಶ್ರೀಹರಿರ್ಗೇಹಂ ಕುಬೇರಭವನೋಪಮಂ　　॥ ೧೬೩ ॥

ಬ್ರಾಹ್ಮಣೇಭ್ಯೋ ಧನಂ ನಂದಃ ಪರಿಪೂರ್ಣಂ ದದೌ ಮುದಾ ।
ಭೋಜನಂ ಕಾರಯಾಮಾಸ ಜ್ಞಾತಿವರ್ಗಾಂಶ್ಚ ಬಾಂಧವಾನ್　　॥ ೧೬೪ ॥

ನಾನಾವಿಧಂ ಮಂಗಲಂ ಚ ಹರೇರ್ನಾಮಾನುಕೀರ್ತನಂ ।
ವೇದಾಂಶ್ಚ ಪಾಠಯಾಮಾಸ ವಿಪ್ರದ್ವಾರಾ ಮುದಾನ್ವಿತಃ　　॥ ೧೬೫ ॥

ಭಯವುಂಟಾಗುವುದಿಲ್ಲ. ಶತ್ರುಗಳ ಕೈಗೆ ಸಿಲುಕಿದಾಗಲೂ, ದಾವಾಗ್ನಿಯ ಭಯವೊದಗಿದಾಗಲೂ ಪ್ರಾಣನಾಶಕವಾದ ವಿಪತ್ತು ಒದಗಿದಾಗಲೂ ಈ ಸ್ತೋತ್ರವನ್ನು ಪಠಿಸಿದರೆ ಆ ಸಂಕಟಗಳಿಂದ ಪಾರಾಗಬಹುದು. ಈ ಸ್ತೋತ್ರವನ್ನು ಪಠಿಸುವ ಕ್ಷತ್ರಿಯನ ಶತ್ರುಸೈನ್ಯವು ನಾಶವಾಗಿ ಅವನು ಎಲ್ಲೆಲ್ಲಿಯೂ ಜಯಶಾಲಿಯಾಗುವನು. ಇಹಲೋಕದಲ್ಲಿರುವವರೆಗೂ ಶ್ರೀಹರಿಯ ಭಕ್ತನಾಗಿದ್ದು ಅಂತ್ಯಕಾಲದಲ್ಲಿ ಶ್ರೀಹರಿಯ ದಾಸ್ಯವನ್ನು ನಿಶ್ಚಯವಾಗಿಯೂ ಪಡೆಯುವನು.

೧೬೩. ಶ್ರೀನಾರಾಯಣ :—ಎಲೈ ನಾರದನೇ, ಈ ರೀತಿ ದಾವಾಗ್ನಿಯನ್ನು ಪರಿಹರಿಸಿ ಶ್ರೀಹರಿಯು ಎಲ್ಲರೊಡನೆ ಕುಬೇರನ ಮಂದಿರಕ್ಕೆ ಸದೃಶವಾದ ತನ್ನ ಮನೆಗೆ ಹಿಂತಿರುಗಿದನು

೧೬೪-೧೬೫. ಅಲ್ಲಿ ನಂದಗೋಪನು ಬ್ರಾಹ್ಮಣರಿಗೆ ಯಥೇಚ್ಛವಾಗಿ ದ್ರವ್ಯದಾನಮಾಡಿ ಜ್ಞಾನಿಗಳಿಗೂ, ಬಂಧುಗಳಿಗೂ ಭೋಜನಮಾಡಿಸಿದನು. ನಾನಾವಿಧ ಮಂಗಳಕಾರ್ಯವನ್ನೂ, ಶ್ರೀಹರಿಯ ನಾಮಸಂಕೀರ್ತನೆಯನ್ನೂ ಮಾಡಿಸಿ ಸಂತೋಷಪೂರ್ವಕವಾಗಿ ಬ್ರಾಹ್ಮಣರಿಂದ ವೇದಪಾಠಮಾಡಿಸಿದನು.

ಏವಂ ಮುಮುದಿರೇ ಸರ್ವೇ ಬೃಂದಾರಣ್ಯೇ ಗೃಹೇ ಗೃಹೇ ।
ಶ್ರೀಕೃಷ್ಣಚರಣಾಂಭೋಜಧ್ಯಾನೈಕತಾನಮಾನಸಾಃ । ೧೮೬ ॥

ಇತ್ಯೇವಂ ಕಥಿತಂ ಸರ್ವಂ ಹರೇಶ್ಚರಿತಮಂಗಲಂ ।
ಕಲಿಕಿಲ್ಬಿಷಕಾಷ್ಠಾನಾಂ ದಹನೇ ದಹನೋಪಮಂ ॥ ೧೮೭ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ಶ್ರೀಕೃಷ್ಣಜನ್ಮಖಂಡೇ ನಾರಾಯಣನಾರದಸಂವಾದೇ ಕಾಲೀಯದಮನ ದಾವಾಗ್ನಿ ಮೋಕ್ಷಣಂ ನಾಮೈಕೋನವಿಂಶೋಽಧ್ಯಾಯಃ

---

೧೮೬. ಈ ರೀತಿ ಆ ವೃಂದಾರಣ್ಯದಲ್ಲಿದ್ದವರೆಲ್ಲರೂ ಶ್ರೀಕೃಷ್ಣನ ಪಾದ ಕಮಲಗಳನ್ನೇ ಭಕ್ತಿಯಿಂದ ಧ್ಯಾನಮಾಡುತ್ತ ತಮ್ಮ ತಮ್ಮ ಮನೆಗಳಲ್ಲಿ ಉತ್ಸವ ವನ್ನು ಮಾಡಿ ನಲಿದಾಡಿದರು.

೧೮೭. ಈ ರೀತಿಯಾಗಿ ಕಲಿಯುಗದ ಪಾಪವೆಂಬ ಕಟ್ಟಿಗೆಯನ್ನು ಸುಡಲು ಅಗ್ನಿಗೆ ಸಮಾನವಾದ ಶ್ರೀಹರಿಯ ಮಂಗಳಚರಿತವನ್ನು ನಿನಗೆ ವಿವರಿಸಿರುವೆನು.

ಇಲ್ಲಿಗೆ ಶ್ರೀಬ್ರಹ್ಮವೈವರ್ತ ಮಹಾಪುರಾಣದ ಶ್ರೀಕೃಷ್ಣಜನ್ಮಖಂಡದಲ್ಲಿ ಕಾಲೀಯದಮನ ಮತ್ತು ದಾವಾಗ್ನಿಮೋಕ್ಷಣವೆಂಬ ಹತ್ತೊಂಭತ್ತನೆಯ ಅಧ್ಯಾಯವು ಮುಗಿದುದು

ಹತ್ತೊಂಭತ್ತನೆಯ ಅಧ್ಯಾಯದ ಸಾರಾಂಶ

ಒಮ್ಮೆ ಶ್ರೀಹರಿಯು ಬಲರಾಮನನ್ನು ಬಿಟ್ಟು ಇತರ ಗೋಪಾಲಕರೊಡನೆ ಯಮುನೆಯ ತೀರದಲ್ಲಿ ಗೋವುಗಳನ್ನು ಮೇಯಿಸುತ್ತಿದ್ದನು ಆಗ ಹುಲ್ಲುತಿಂದು ಬಾಯಾರಿದ ಹಸುಗಳು ಕಾಳಿಂಗನೆಂಬ ಸರ್ಪರಾಜನಿದ್ದ ಯಮುನೆಯ ಮಡುವಿನಲ್ಲಿ ನೀರನ್ನು ಕುಡಿದು ಮೂರ್ಛೆಹೊಂದಿದವು. ಇದನ್ನು ತಿಳಿದ ಶ್ರೀಕೃಷ್ಣನು ಕಾಳಿಯ ಮಡುವಿಗೆ ಧುಮುಕಲು ಕಾಳಿಂಗನು ಅವನನ್ನು ಮನುಜಸಾಮಾನ್ಯನೆಂದು ತಿಳಿದು ಕಚ್ಚಲು ಪ್ರಯತ್ನಪಟ್ಟು ಸಾಧ್ಯಾವಾಗದೆ ಬಿಟ್ಟುಬಿಟ್ಟನು. ಆಗ ಶ್ರೀಕೃಷ್ಣನು ಅವನ ಹೆಡೆಯಮೇಲೆ ನಿಂತು ಒಂದು ಕೈಯಿಂದ ಅವನ ಬಾಲವನ್ನು ಹಿಡಿದು ನರ್ತನಮಾಡತೊಡಗಿದನು. ವಿಶ್ವಂಭರನ ಭಾರವನ್ನು ತಡೆಯಲಾರದೆ ಕಾಳಿಯನು ಮೂರ್ಛೆಗೊಳ್ಳಲು ಅವನ ಪತ್ನಿಯಾದ ಸುರಸೆಯು ಬಂದು ಶ್ರೀಕೃಷ್ಣನನ್ನು ಭಯ ಭಕ್ತಿಯಿಂದ ಸ್ತುತಿಸಿ ತನಗೆ ಪತಿಭಿಕ್ಷೆಯನ್ನು ಕೊಡೆಂದು ಬೇಡಿದಳು. ದಯಾಮಯ ನಾದ ಶ್ರೀಕೃಷ್ಣನು ಆ ನಾಗಪತ್ನಿಗೆ ಪತಿಭಿಕ್ಷೆಯನ್ನು ಕೊಟ್ಟು, ಹಿಂತಿರುಗಿ ಹೋಗೆನಲು ಅವಳು ಅಷ್ಟಕ್ಕೇ ಹಿಂತಿರುಗದೆ ಶಾಶ್ವತವಾದ ಶ್ರೀಹರಿಸೇವೆಯನ್ನು ಬೇಡಿ ಪಡೆದು ದಿವ್ಯರಥದಲ್ಲಿ ಕುಳಿತು ವೈಕುಂಠಕ್ಕೆ ತೆರಳಿದಳು ಇತ್ತ ಶ್ರೀಕೃಷ್ಣನು ತನ್ನ ಮಾಯಾಶಕ್ತಿಯಿಂದ ಸುರಸೆಯ ಛಾಯೆಯನ್ನು ಸೃಷ್ಟಿಮಾಡಿ ಕಾಳಿಯನಿಗೆ ಕೊಟ್ಟನು. ಅಲ್ಲದೆ 'ಈಗ ನಿನ್ನ ದರ್ಪವು ಅಳಿಯಿತು. ನೀನು ಚಿರಕಾಲ ಸುಖವಾಗಿಬಾಳು. ನಿನ್ನ ವಂಶದ ಸರ್ಪಗಳನ್ನು ಕೊಲ್ಲುವವರಿಗೆ ಮಹಾಪಾಪವು ಸಂಘಟಿಸಲಿ. ನಿನ್ನ ತಲೆಯಮೇಲಿರುವ ನನ್ನ ಪಾದದ ಗುರುತನ್ನು ನೋಡಿ ಗರುಡನು ನಿನ್ನನ್ನು ಹಿಂಸಿಸದೆ ನಿನಗೆ ವಂದಿಸುವನು' ಎಂದು ವರಪ್ರದಾನಮಾಡಲು ಕಾಳಿಯನು ಅರಿಯದೆ ತಾನು ಮಾಡಿದ ಅಪರಾಧವನ್ನು ಕ್ಷಮಿಸಬೇಕೆಂದು ಬೇಡಿ ಕೊಂಡನು. ಮತ್ತು ಎಂದೆಂದಿಗೂ ಶಾಶ್ವತವಾದ ಶ್ರೀಹರಿಯ ಸ್ಮರಣೆಯು ತನಗುಂಟಾಗುವಂತೆ ಅನುಗ್ರಹಿಸಬೇಕೆಂದು ಕೇಳಿ ಪಡೆದು ಶ್ರೀಹರಿಯ ಆಜ್ಞೆಯಂತೆ ತನ್ನ ಪರಿವಾರದೊಡನೆ ಯಮುನೆಯ ಮಡುವನ್ನು ಬಿಟ್ಟು ತನ್ನ ಪೂರ್ವನಿವಾಸ ಸ್ಥಾನವಾದ ರಮಣಕದ್ವೀಪಕ್ಕೆ ಹಿಂತಿರುಗಿದನು. ಹಿಂದೊಮ್ಮೆ ಆದಿಶೇಷನ ಅಪ್ಪಣೆ ಯಂತೆ ಸರ್ಪಗಳೆಲ್ಲವೂ ಪಕ್ಷಿರಾಜನಾದ ಗರುಡನನ್ನು ಪೂಜಿಸುತ್ತಿರಲು ಗರ್ವಿತ ನಾದ ಕಾಳಿಯನು ಮಾತ್ರ ಪೂಜಿಸದೆ ಇತರರ ಪೂಜಾಸಾಮಗ್ರಿಗಳನ್ನೂ ಭಕ್ಷಿಸ ತೊಡಗಿದ್ದನು. ಆಗ ಕುಪಿತನಾದ ಗರುಡನು ಸರ್ಪಗಳನ್ನು ನಾಶಗೊಳಿಸಲೆಂದು ಬರಲು ಕಾಳಿಯನು ಅವನೊಡನೆ ಕಾದಾಡಿ ಸೋತು ತನ್ನ ಪರಿವಾರದೊಡನೆ

ಕಾಳಿಂದಿಯ ಮಡುವಿನಲ್ಲಿ ಅಡಗಿಕೊಂಡನು. ಗರುಡನು ಸೌಭರಿಮಹರ್ಷಿಯ ಶಾಪದಿಂದ ಅಲ್ಲಿಗೆ ಹೋಗುವಂತಿರಲಿಲ್ಲ. ಈಗ ಕಾಳಿಯನು ಶ್ರೀಕೃಷ್ಣನ ವರದಿಂದ ನಿರ್ಭೀತನಾಗಿ ಪುನಃ ತನ್ನ ನಿವಾಸಸ್ಥಾನಕ್ಕೆ ಹಿಂತಿರುಗಿದನು. ಅತ್ತ ಶ್ರೀಕೃಷ್ಣನು ಕಾಳಿಯ ಮಡುವಿಗೆ ಧುಮಿಕಿರುವುದನ್ನು ಕೇಳಿ ಗೋಕುಲದವರೆಲ್ಲರೂ ಓಡಿಬಂದು ಹಾಹಾಕಾರಮಾಡತೊಡಗಿದರು. ಕೂಡಲೇ ಶ್ರೀಕೃಷ್ಣನು ತೀರಕ್ಕೆ ಬಂದು ಎಲ್ಲರನ್ನೂ ಸಂತೈಸಿದನು.

ಮತ್ತೊಮ್ಮೆ ಕಾಡುಕಿಚ್ಚು ನಂದಗೋಕುಲದ ಸುತ್ತಲೂ ಆವರಿಸಿಕೊಳ್ಳಲು ಭಯೋದ್ವಿಗ್ನರಾದ ಎಲ್ಲರೂ ಶ್ರೀಹರಿಯನ್ನು ಮರೆಹೊಕ್ಕರು ಶ್ರೀಹರಿಯು ತನ್ನ ಕರುಣಕಟಾಕ್ಷವನ್ನು ಬೀರಿ ದಾವಾಗ್ನಿಯನ್ನು ಶಾಂತಗೊಳಿಸಿದನು.

ಅನಂತರ ನಂದಗೋಪನು ಬಲರಾಮಕೃಷ್ಣರೊಡನೆ ಗೋಕುಲಕ್ಕೆ ಹಿಂತಿರುಗಿ ಮಂಗಳಕಾರ್ಯಗಳನ್ನು ಮಾಡಿಸಿ ಬ್ರಾಹ್ಮಣರನ್ನು ಭೋಜನಾದಿಗಳಿಂದ ತೃಪ್ತಿಪಡಿಸಿದನು.

— ॥ ಓಂ ॥—

—॥ ಶ್ರೀ ಗಣೇಶಾಯ ನಮಃ ॥—

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಶ್ರೀಕೃಷ್ಣಜನ್ಮಖಂಡೇ

॥ ವಿಂಶೋಽಧ್ಯಾಯಃ ॥

॥ ಶ್ರೀ ನಾರಾಯಣ ಉವಾಚ ॥

ಏಕದಾ ಬಾಲಕೈಃ ಸಾರ್ಧಂ ಬಲೇನ ಸಹ ಮಾಧವಃ ।
ಭುಕ್ತ್ವಾ ಪೀತ್ವಾಽನುಲಿಪ್ತಶ್ಚ ಬೃಂದಾರಣ್ಯಂ ಜಗಾಮ ಹ ॥ ೧ ॥

ಕ್ರೀಡಾಂ ಚಕಾರ ಭಗವಾನ್ಕೌತುಕೇನ ಚ ತೈಃ ಸಹ ।
ಕ್ರೀಡಾನಿಮಗ್ನಚಿತ್ತಾನಾಂ ದೂರಂ ತದ್ಗೋಕುಲಂ ಯಯೌ ॥ ೨ ॥

ತಸ್ಯ ಪ್ರಭಾವಂ ವಿಜ್ಞಾತುಂ ವಿಧಾತಾ ಜಗತಾಂ ಪತಿಃ ।
ಚಕಾರ ನಿಹ್ನುತಿಂ ಗಾಶ್ಚ ವತ್ಸಾಂಶ್ಚ ಬಾಲಕಾನಪಿ ॥ ೩ ॥

ಇಪ್ಪತ್ತನೆಯ ಅಧ್ಯಾಯ

೧. ಶ್ರೀನಾರಾಯಣ :—ಒಮ್ಮೆ ಮಾಧವನು ಬಲರಾಮನೊಡನೆಯೂ ಇತರ ಗೋಪಾಲಕರೊಡನೆಯೂ ಊಟತಿಂಡಿಗಳನ್ನು ಮುಗಿಸಿಕೊಂಡು ದಿವ್ಯ ಗಂಧಾನುಲಿಪ್ತನಾಗಿ ವೃಂದಾರಣ್ಯಕ್ಕೆ ತೆರಳಿದನು.

೨. ಅಲ್ಲಿ ಭಗವಂತನಾದ ಶ್ರೀಕೃಷ್ಣನು ಅವರೆಲ್ಲರೊಡನೆ ಕುತೂಹಲದಿಂದ ಆಟವಾಡುತ್ತಿದ್ದನು. ಇವರು ಆ ರೀತಿ ಆಟದಲ್ಲಿ ಆಸಕ್ತರಾಗಿದ್ದಾಗ ಅವರ ಹಸು ಕರುಗಳೆಲ್ಲ ಬಹಳದೂರಕ್ಕೆ ಹೋದವು.

೩. ಶ್ರೀಕೃಷ್ಣನ ಮಹಿಮೆಯನ್ನು ವ್ಯಕ್ತಗೊಳಿಸಬೇಕೆಂದು ಜಗತ್ಸೃಷ್ಟಿ ಕರ್ತನಾದ ಬ್ರಹ್ಮನು ಆ ಹಸುಕರುಗಳನ್ನೂ ಅವುಗಳನ್ನು ಮೇಯಿಸುತ್ತಿದ್ದ ಬಾಲಕರನ್ನೂ ಕಣ್ಣಿಗೆ ಕಾಣದಂತೆ ಮಾಡಿದನು.

ವಿಜ್ಞಾಯ ತದಭಿಪ್ರಾಯಂ ಸರ್ವಜ್ಞಃ ಸರ್ವಕಾರಕಃ ।
ಪುನಶ್ಚಕಾರ ತತ್ಸರ್ವಂ ಯೋಗೀಂದ್ರೋ ಯೋಗಮಾಯಯಾ ॥ ೪ ॥

ಜಗಾಮ ಶ್ರೀಹರಿರ್ಗೇಹಂ ಕಾಲಯಿತ್ವಾ ಚ ಗೋಕುಲಂ ।
ಬಲೇನ ಬಾಲಕೈಃ ಸಾರ್ಧಂ ಕ್ರೀಡಾಕೌತುಕಮಾನಸಃ ॥ ೫ ॥

ಏವಂ ಚಕಾರ ಭಗವಾನ್ವರ್ಷಮೇಕಂ ಚ ಪ್ರತ್ಯಹಂ ।
ಯಮುನಾಗಮನಂ ಗೋಭಿರ್ಬಲೇನ ಸಹ ಬಾಲಕೈಃ ॥ ೬ ॥

ಬ್ರಹ್ಮಾ ಪ್ರಭಾವಂ ವಿಜ್ಞಾಯ ಲಜ್ಜಾನಮ್ರಾತ್ಮಕಂಧರಃ ।
ಆಜಗಾಮ ಹರೇಃ ಸ್ಥಾನಂ ಭಾಂಡೀರವಟಮೂಲಕೇ ॥ ೭ ॥

ದದರ್ಶ ಕೃಷ್ಣಂ ತತ್ರೈವ ಗೋಪಾಲಗಣವೇಷ್ಟಿತಂ ।
ಯಥಾ ಪಾರ್ವಣಚಂದ್ರಂ ಚ ವಿಭಾಂತಂ ಸ್ವಗಣೈಃ ಸಹ ॥ ೮ ॥

---

೪. ಬ್ರಹ್ಮನ ಅಭಿಪ್ರಾಯವನ್ನು ತಿಳಿದ ಸರ್ವಜ್ಞನೂ ಸರ್ವಕಾರಣನೂ ಯೋಗಿಶ್ರೇಷ್ಠನೂ ಆದ ಶ್ರೀಹರಿಯು ತನ್ನ ಯೋಗ ಮಾಯಾಮಹಿಮೆಯಿಂದ ಪುನಃ ಅವುಗಳನ್ನೆಲ್ಲ ಸೃಜಿಸಿದನು.

೫. ಕ್ರೀಡೆಯಲ್ಲಿ ಆಸಕ್ತನಾಗಿದ್ದ ಶ್ರೀಹರಿಯು ಆ ಗೋವುಗಳನ್ನೂ ಗೋಪಾಲಕರನ್ನೂ ಒಟ್ಟಾಗಿ ಸೇರಿಸಿಕೊಂಡು ಬಲರಾಮನೊಡನೆ ತನ್ನ ಮಂದಿರಕ್ಕೆ ಹಿಂತಿರುಗಿದನು.

೬. ಈ ರೀತಿ ಭಗವಂತನಾದ ಶ್ರೀಕೃಷ್ಣನು ಬಲರಾಮನೊಡನೆಯೂ, ಇತರ ಬಾಲಕರೊಡನೆಯೂ, ಒಂದು ವರ್ಷಕಾಲ ಪ್ರತಿ ನಿತ್ಯವೂ, ಆ ಕೃತ್ರಿಮ ಗೋವುಗಳನ್ನು ಮೇಯಿಸಲು, ಯಮುನೆಯ ತೀರಕ್ಕೆ ಹೋಗುತ್ತಿದ್ದನು.

೭. ಸೃಷ್ಟಿಕರ್ತನಾದ ಬ್ರಹ್ಮನು ಶ್ರೀಹರಿಯ ಪ್ರಭಾವವನ್ನರಿತು ನಾಚಿಕೆಯಿಂದ ತಲೆಬಾಗಿ ಅವನ ದರ್ಶನವನ್ನು ಪಡೆಯಲು ಭಾಂಡೀರವನದಲ್ಲಿದ್ದ ವಟವೃಕ್ಷದ ಕೆಳಕ್ಕೆ ಬಂದನು.

೮ ಅಲ್ಲಿ ಗೋಪಾಲಕರ ಮಧ್ಯದಲ್ಲಿ ಕುಳಿತು ನಕ್ಷತ್ರಗಣಗಳ ಮಧ್ಯದಲ್ಲಿರುವ ಪೂರ್ಣಿಮಾಚಂದ್ರನಂತೆ ಪ್ರಕಾಶಿಸುತ್ತಿದ್ದ ಶ್ರೀಕೃಷ್ಣನನ್ನು ನೋಡಿದನು.

ರತ್ನಸಿಂಹಾಸನಸ್ಥಂ ಚ ಹಸಂತಂ ಸಸ್ಮಿತಂ ಮುದಾ ।
ಪೀತವಸ್ತ್ರಪರೀಧಾನಂ ಜ್ವಲಂತಂ ಬ್ರಹ್ಮತೇಜಸಾ ॥ ೯ ॥

ರತ್ನಕೇಯೂರವಲಯರತ್ನಮಂಜೀರರಂಜಿತಂ ।
ರತ್ನಕುಂಡಲಯುಗ್ಮಾಭ್ಯಾಂ ಸ್ವಕಪೋಲಸ್ಥಲೋಜ್ಜ್ವಲಂ ॥ ೧೦ ॥

ಕೋಟಿಕಂದರ್ಪಲಾವಣ್ಯಂ ಲೀಲಾಧಾಮಮನೋಹರಂ ।
ಚಂದನಾಗುರುಕಸ್ತೂರೀಕುಂಕುಮಾರ್ಚಿತವಿಗ್ರಹಂ ॥ ೧೧ ॥

ಪಾರಿಜಾತಪ್ರಸೂನಾನಾಂ ಮಾಲಾಜಾಲೈರ್ವಿಭೂಷಿತಂ ।
ನವೀನನೀರದಶ್ಯಾಮಂ ಪ್ರೋದ್ಭಿನ್ನನವಯೌವನಂ ॥ ೧೨ ॥

ಮಾಲತೀಮಾಲ್ಯಸಂಯುಕ್ತಂ ಮಯೂರಪಿಚ್ಛಚೂಡಕಂ ।
ಸ್ವಾಂಗಸೌಂದರ್ಯದೀಪ್ತ್ಯಾ ಚ ಕೃತಭೂಷಣಭೂಷಿತಂ ॥ ೧೩ ॥

---

೯. ಆ ಶ್ರೀಹರಿಯು ಪೀತಾಂಬರವನ್ನುಟ್ಟು ಬ್ರಹ್ಮತೇಜಸ್ಸಿನಿಂದ ಬೆಳಗುತ್ತ ರತ್ನಸಿಂಹಾಸನದಲ್ಲಿ ಕುಳಿತು ಮಂದಹಾಸವನ್ನು ಬೀರುತ್ತಿದ್ದನು.

೧೦ ರತ್ನನಿರ್ಮಿತವಾದ ಭುಜಕೀರ್ತಿ, ಕಂಕಣ ಮತ್ತು ಕಾಲ್ಗೊಲಸುಗಳಿಂದ ಅಲಂಕೃತನಾದ ಆ ಹರಿಯ ಕಪೋಲಸ್ಥಳದಲ್ಲಿ ಉಜ್ಜ್ವಲವಾದ ರತ್ನಕುಂಡಲಗಳು ಪ್ರತಿಬಿಂಬಿಸಿದ್ದವು.

೧೧. ಕೋಟಿಮನ್ಮಥರ ಸೌಂದರ್ಯಕ್ಕೆ ನಿವಾಸಸ್ಥಾನನಾದ ಆ ಕೃಷ್ಣನು ಚಂದನ, ಅಗುರು, ಕಸ್ತೂರಿ ಮತ್ತು ಕುಂಕುಮಕೇಸರಿ ಮುಂತಾದ ಸುಗಂಧ ದ್ರವ್ಯಗಳನ್ನು ಅಂಗಾಂಗಗಳಿಗೂ ಲೇಪಿಸಿಕೊಂಡಿದ್ದನು.

೧೨ ನವಮೇಘದಂತೆ ಶ್ಯಾಮವರ್ಣನೂ, ನವಯೌವನದಿಂದ ಶೋಭಿತನೂ ಆದ ಶ್ರೀಕೃಷ್ಣನು ಪಾರಿಜಾತಪುಷ್ಪಗಳ ಮಾಲೆಯಿಂದ ಅಲಂಕೃತನಾಗಿದ್ದನು.

೧೩ ಶಿಖೆಯಲ್ಲಿ ನವಿಲುಗರಿಯನ್ನು ಧರಿಸಿ, ಮಾಲತೀಮಾಲೆಯನ್ನು ಮುಡಿದಿದ್ದ ಶ್ರೀಕೃಷ್ಣನ ದೇಹಸೌಂದರ್ಯದಿಂದ ಅವನು ಧರಿಸಿದ ಆಭರಣಗಳೆಲ್ಲ ವಿಶೇಷವಾಗಿ ಶೋಭಿಸುತ್ತಿದ್ದವು.

ಶರತ್ಪಾರ್ವಣಚಂದ್ರಸ್ಯ ಪ್ರಭಾಮುಷ್ಟಾಸ್ಯ ಸುಂದರಂ ।
ಪಕ್ವಬಿಂಬಾಧರೌಷ್ಠಂ ಚ ಖಗೇಂದ್ರಚಂಚುನಾಸಿಕಂ ॥ ೧೪ ॥

ಶರನ್ಮಧ್ಯಾಹ್ನಪದ್ಮಾನಾಂ ಪ್ರಭಾಮೋಚನಲೋಚನಂ ।
ಮುಕ್ತಾಪಂಕ್ತಿವಿನಿಂದ್ಯೈಕ ದಂತಪಂಕ್ತಿಮನೋಹರಂ ॥ ೧೫ ॥

ಕೌಸ್ತುಭೇನ ಮಣೀಂದ್ರೇಣ ವಕ್ಷಃಸ್ಥಲಸಮುಜ್ಜ್ವಲಂ ।
ಶಾಂತಂ ಚ ರಾಧಿಕಾಕಾಂತಂ ಪರಿಪೂರ್ಣತಮಂ ಪರಂ ॥ ೧೬ ॥

ಏವಂಭೂತಂ ಪ್ರಭುಂ ದೃಷ್ಟ್ವಾ ಪ್ರಣನಾಮಾತಿವಿಸ್ಮಿತಃ ।
ದರ್ಶಂ ದರ್ಶಮೀಶ್ವರಂ ತಂ ಪ್ರಣನಾಮ ಪುನಃ ಪುನಃ ॥ ೧೭ ॥

ಯದ್ದೃಷ್ಟಂ ಹೃದಯಾಂಭೋಜೇ ತದ್ರೂಪಂ ಬಹಿರೇವ ಚ ।
ಯಾ ಮೂರ್ತಿಃ ಪುರತೋ ದೃಷ್ಟಾ ಸಾ ಪಶ್ಚಾತ್ಪರಿತಸ್ತತಃ ॥ ೧೮ ॥

---

೧೪. ಶರತ್ಪೂರ್ಣಿಮಾ ಚಂದ್ರನ ಕಾಂತಿಯನ್ನು ಅಲ್ಲಗಳೆಯುವಂತಿದ್ದ ವದನಸೌಂದರ್ಯವುಳ್ಳ ಆ ಶ್ರೀಕೃಷ್ಣನು ಪಕ್ವವಾದ ಬಿಂಬಫಲದಂತಿರುವ ಕೆಳತುಟಿಯಿಂದಲೂ, ಗರುಡನ ಕೊಕ್ಕಿನಂತಿರುವ ಮೂಗಿನಿಂದಲೂ, ಶೋಭಿಸುತ್ತಿದ್ದನು

೧೫. ಶರದೃತುವಿನ ಮಧ್ಯಾಹ್ನಕಾಲದ ಪದ್ಮಗಳ ಪ್ರಭೆಯನ್ನು ತಿರಸ್ಕರಿಸುವ ಕಣ್ಣುಗಳಿಂದಲೂ, ಮುತ್ತಿನ ಸಾಲುಗಳನ್ನು ಹಾಸ್ಯಮಾಡುವಂತಿದ್ದ ದಂತಪಂಕ್ತಿಗಳಿಂದಲೂ, ಆ ಶ್ರೀಹರಿಯು ಮನೋಹರನಾಗಿದ್ದನು.

೧೬. ಕೌಸ್ತುಭವೆಂಬ ಶ್ರೇಷ್ಠರತ್ನವು ಅವನ ವಕ್ಷಃಸ್ಥಳದಲ್ಲಿ ಶೋಭಿಸುತ್ತಿತ್ತು. ಶಾಂತನೂ, ಪರಿಪೂರ್ಣಸ್ವರೂಪನೂ, ಆದ ಆ ರಾಧಾಪತಿಯು ಪರಾತ್ಪರನೆನಿಸಿದ್ದನು.

೧೭. ಈ ರೀತಿಯಾದ ಶ್ರೀಕೃಷ್ಣನನ್ನು ನೋಡಿ ಬ್ರಹ್ಮನು ಅತ್ಯಾಶ್ಚರ್ಯಭರಿತನಾಗಿ ನಮಸ್ಕರಿಸಿದನು. ಆ ಸರ್ವೇಶ್ವರನನ್ನು ಪುನಃಪುನಃ ನೋಡಿ ಅನೇಕ ಸಾರಿ ನಮಸ್ಕರಿಸಿದನು.

೧೮. ತನ್ನ ಹೃದಯಾರವಿಂದದಲ್ಲಿ ಯಾವ ದಿವ್ಯ ಸುಂದರಾಕಾರವನ್ನು ನೋಡಿದ್ದನೋ, ಆ ಆಕಾರವೇ ಹೊರಗಡೆ ಶ್ರೀಕೃಷ್ಣನಲ್ಲಿ ಕಾಣುತ್ತಿದೆ ಎದುರಿನಲ್ಲಿ ಕಾಣುವ ಮೂರ್ತಿಯೇ ಬೆಂಭಾಗದಲ್ಲೂ, ಮತ್ತು ಸುತ್ತಲೂ ಕಾಣಿಸುತ್ತಿದೆ.

ತತ್ರ ವೃಂದಾವನೇ ಸರ್ವಂ ದೃಷ್ಟ್ವಾ ಕೃಷ್ಣಸಮಂ ಮುನೇ ।
ಧ್ಯಾಯಂ ಧ್ಯಾಯಂ ಚ ತದ್ರೂಪಂ ತತ್ರ ತಸ್ಥೌ ಜಗದ್ಗುರುಃ ॥ ೧೯ ॥

ಗಾವೋ ವತ್ಸಾಶ್ಚ ಬಾಲಾಶ್ಚ ಲತಾಗುಲ್ಮಾಶ್ಚ ವೀರುಧಃ ।
ಸರ್ವಂ ಬೃಂದಾವನಂ ಬ್ರಹ್ಮಾ ಶ್ಯಾಮರೂಪಂ ದದರ್ಶ ಹ ॥ ೨೦ ॥

ದೃಷ್ಟ್ವೈವಂ ಪರಮಾಶ್ಚರ್ಯಂ ಪುನರ್ಧ್ಯಾನಂ ಚಕಾರ ಸಃ ।
ದದರ್ಶ ತ್ರಿಜಗದ್ಬ್ರಹ್ಮಾ ನಾನ್ಯತ್ಕೃಷ್ಣಂ ವಿನಾ ಮುನೇ ॥ ೨೧ ॥

ಕ್ವ ಚ ವೃಕ್ಷಾಃ ಕ್ವ ವಾ ಶೈಲಾಃ ಕ್ವ ಮಹೀ ಕ್ವ ಚ ಸಾಗರಾಃ ।
ಕ್ವ ದೇವಾಃ ಕ್ವ ಚ ಗಂಧರ್ವಾ ಮುನೀಂದ್ರಾಃ ಕ್ವ ಚ ಮಾನವಾಃ ॥ ೨೨ ॥

ಕ್ವ ಚಾಽಽತ್ಮಾ ಕ್ವ ಜಗದ್ಬೀಜಂ ಕ್ವ ಸರ್ಗಃ ಕ್ವಾಯುಮೇವ ಚ ।
ಸರ್ವಂ ಚ ಸ್ವದೃಶಾ ಬ್ರಹ್ಮಾ ದದರ್ಶ ಮಾಯಯಾ ಹರೇಃ ॥ ೨೩ ॥

---

೧೯. ಈ ರೀತಿ ಆ ವೃಂದಾವನದಲ್ಲೆಲ್ಲಾ ಶ್ರೀಕೃಷ್ಣನ ದಿವ್ಯ ರೂಪವನು ಕಂಡು ಜಗದೊಡೆಯನಾದ ಬ್ರಹ್ಮನು ಆ ದಿವ್ಯರೂಪವನ್ನೇ ಪುನಃಪುನಃ ಧ್ಯಾನ ಮಾಡುತ್ತ ಸುಮ್ಮನೆ ನಿಂತನು.

೨೦. ಬ್ರಹ್ಮನ ಕಣ್ಣಿಗೆ ಆ ವೃಂದಾವನದಲ್ಲಿದ್ದ ಹಸುಗಳು, ಕರುಗಳು ಹುಡುಗರು, ಮತ್ತು ವೃಕ್ಷಲತೆಗಳು ಎಲ್ಲವೂ ಶ್ಯಾಮವರ್ಣವಾಗಿ ಕಾಣಿಸಿದವು.

೨೧ ಈ ಅತ್ಯದ್ಭುತವನ್ನು ನೋಡಿ ಬ್ರಹ್ಮನು ಪುನಃ ಶ್ರೀಹರಿಯನ್ನು ಧ್ಯಾನಮಾಡಿದನು. ಎಲೈ ಮುನಿಯೇ, ಬ್ರಹ್ಮನ ಕಣ್ಣಿಗೆ ತ್ರಿಲೋಕವೆಲ್ಲೂ ಶ್ರೀಕೃಷ್ಣನೇ ಕಾಣುತ್ತಿದ್ದನು. ಬೇರೇನೂ ಕಾಣಲಿಲ್ಲ.

೨೨-೨೩. 'ಮರವೆಲ್ಲಿ, ಬೆಟ್ಟವೆಲ್ಲಿ, ಭೂಮಿಯೆಲ್ಲಿ, ಸಾಗರಗಳೆಲ್ಲಿ, ದೇವತೆಗಳೆಲ್ಲಿ, ಗಂಧರ್ವರೆಲ್ಲಿ, ಮುನೀಂದ್ರರೆಲ್ಲಿ, ಮಾನವರೆಲ್ಲಿ, ಆತ್ಮನೆಲ್ಲಿ ಜಗತ್ತಿಗೆ ಮೂಲಕಾರಣವಾದ ಬ್ರಹ್ಮನೆಲ್ಲಿ, ಸ್ವರ್ಗವೆಲ್ಲಿ, ಶ್ರೀಕೃಷ್ಣನೆಲ್ಲಿ' ಎಂದು ವಿವೇಚನೆ ಮಾಡಲಾಗದ ಬ್ರಹ್ಮನು ಶ್ರೀಹರಿಯ ಮಾಯೆಯಿಂದ ಎಲ್ಲವನ್ನೂ ತನ್ನ ದೃಷ್ಟಿಯಲ್ಲಿ ಒಂದೇ ಸಮನಾಗಿ ಕಂಡನು.

ಕ್ವ ಕೃಷ್ಣೋ ಜಗತಾಂ ನಾಥಃ ಕ್ವ ವಾ ಮಾಯಾವಿಭೂತಯಃ ।
ಸರ್ವಂ ಕೃಷ್ಣಮಯಂ ದೃಷ್ಟ್ವಾ ಕಿಂಚಿನ್ನಿರ್ವಕ್ತುಮಕ್ಷಮಃ ॥ ೨೪ ॥

ಕಂ ಸ್ತೌಮಿ ಕಿಂ ಕರೋಮೀತಿ ಮನಸ್ಯೈವಂ ಪ್ರಗೃಹ್ಯ ಚ ।
ತತ್ರ ಸ್ಥಿತ್ವಾ ಜಗದ್ಧಾತಾ ಜಪಂ ಕರ್ತುಂ ಸಮುದ್ಯತಃ ॥ ೨೫ ॥

ಸುಖಂ ಯೋಗಾಸನಂ ಕೃತ್ವಾ ಬಭೂವ ಸಂಪುಟಾಂಜಲಿಃ ।
ಪುಲಕಾಂಕಿತಸರ್ವಾಂಗಃ ಸಾಶ್ರುನೇತ್ರೋಽತಿದೀನವತ್ ॥ ೨೬ ॥

ಇಡಾಂ ಸುಷುಮ್ನಾಂ ಮಧ್ಯಾಂ ಚ ಪಿಂಗಲಾಂ ನಲಿನೀಂ ಧುರಾಂ ।
ನಾಡೀಷಟ್ಕಂ ಚ ಯೋಗೇನ ನಿಬಧ್ಯ ಚ ಪ್ರಯತ್ನತಃ ॥ ೨೭ ॥

ಮೂಲಾಧಾರಂ ಸ್ವಾಧಿಷ್ಠಾನಂ ಮಣಿಪೂರಂ ಮನೋಹರಂ ।
ವಿಶುದ್ಧಂ ಪರಮಾಜ್ಞಾಖ್ಯಂ ಷಟ್ಚಕ್ರಂ ಚ ನಿಬಧ್ಯ ಚ । ೨೮ ॥

---

೨೪. 'ಜಗತ್ತಿಗೊಡೆಯನಾದ ಶ್ರೀಕೃಷ್ಣನೆಲ್ಲಿ ಮತ್ತು ಅವನ ಮಾಯಾ ವಿಭೂತಿಗಳೆಲ್ಲಿ' ಎಂದು ಅರಿಯದೆ ಪ್ರಪಂಚವೆಲ್ಲ ಶ್ರೀಕೃಷ್ಣ ಮಯವಾಗಿರುವುದನ್ನು ನೋಡಿ ಬ್ರಹ್ಮನು ಏನೂ ಹೇಳಲಾರದೆ ಮೂಕನಂತಾದನು.

೨೫. ಅಪ್ರಮೇಯನಾದ ಶ್ರೀಹರಿಯನ್ನು ನಾನು ಏನೆಂದು ಸ್ತುತಿಸಲಿ. ಈಗ ಏನುಮಾಡಲಿ? ಎಂದು ಮನಸ್ಸಿನಲ್ಲಿಯೇ ಯೋಚಿಸುತ್ತ ಜಗತ್ಸೃಷ್ಟಿಕರ್ತನಾದ ಬ್ರಹ್ಮನು ಅಲ್ಲಿಯೇ ಕುಳಿತು ಜಪಮಾಡಲಾರಂಭಿಸಿದನು.

೨೬. ಸುಖವಾಗಿ ಯೋಗಾಸನವನ್ನು ಹಾಕಿಕೊಂಡು, ಎರಡು ಕೈಗಳನ್ನೂ ಜೋಡಿಸಿಕೊಂಡು ರೋಮಾಂಚಿತಶರೀರನಾಗಿ ಕಣ್ಣುಗಳಲ್ಲಿ ಆನಂದಬಾಷ್ಪವನ್ನು ಸುರಿಸುತ್ತ ದೀನನಂತೆ ಕುಳಿತುಕೊಂಡನು.

೨೭-೨೮. ಅನಂತರ ಯೋಗಬಲದಿಂದ ಇಡಾ, ಸುಷುಮ್ನಾ, ಮಧ್ಯಾ, ಪಿಂಗಲಾ, ನಲಿನೀ ಮತ್ತು ಧುರಾ ಎಂಬ ಆರು ನಾಡಿಗಳನ್ನು ಪ್ರಯತ್ನಪೂರ್ವಕವಾಗಿ ಬಿಗಿಹಿಡಿದು, ಮೂಲಾಧಾರ, ಸ್ವಾಧಿಷ್ಠಾನ, ಮಣಿಪೂರ, ಮನೋಹರ (ಅನಾಹತ) ವಿಶುದ್ಧ ಮತ್ತು ಆಜ್ಞಾ ಎಂಬ ಷಟ್ಚಕ್ರಗಳನ್ನೂ ಆಯಾಯ ಸ್ಥಾನದಲ್ಲಿ ನಿಲ್ಲಿಸಿ,

ಲಂಘನಂ ಕಾರಯಿತ್ವಾ ಚ ತತ್ಷಟ್‍ಚಕ್ರಂ ಕ್ರಮಾದ್ವಿಧಿಃ ।
ಬ್ರಹ್ಮರಂಧ್ರಂ ಸಮಾನೀಯ ವಾಯುಬಂಧಂ ಚಕಾರ ಹ ॥ ೨೯ ॥

ನಿಬಧ್ಯ ವಾಯುಂ ಮಧ್ಯಾಂ ತಾಮಾನೀಯ ಹೃದಯಾಂಬುಜಂ ।
ತಂ ವಾಯುಂ ಭ್ರಾಮಯಿತ್ವಾ ಚ ಯೋಜಯಾಮಾಸ ಮಧ್ಯಯಾ ॥ ೩೦ ॥

ಏವಂ ಕೃತ್ವಾ ತು ನಿಷ್ಪಂದೋ ಯೋ ದತ್ತೋ ಹರಿಣಾ ಪುರಾ ।
ಜಜಾಪ ಪರಮಂ ಮಂತ್ರಂ ತಸ್ಯೈವ ಚ ದಶಾಕ್ಷರಂ ॥ ೩೧ ॥

ಮುಹೂರ್ತಂ ಚ ಜಪಂ ಕೃತ್ವಾ ಧ್ಯಾಯಂ ಧ್ಯಾಯಂ ಪದಾಂಬುಜಂ ।
ದದರ್ಶ ಹೃದಯಾಂಭೋಜೇ ಸರ್ವತೇಜೋಮಯಂ ಮುನೇ ॥ ೩೨ ॥

ತತ್ತೇಜಸೋಂತರೇ ರೂಪಮತೀವ ಸುಮನೋಹರಂ ।
ದ್ವಿಭುಜಂ ಮುರಲೀಹಸ್ತಂ ಭೂಷಿತಂ ಪೀತವಾಸಸಾ ॥ ೩೩ ॥

ಪೃಷ್ಠಭಾಗದಿಂದ ಶಿರಸ್ಸಿನವರೆಗೆ ಬೆನ್ನಿನ ಹುರಿಯಲ್ಲಿರುವ ಆ ಷಟ್ಚಕ್ರಗಳನ್ನೂ ಕ್ರಮವಾಗಿ ಲಂಘನಮಾಡಿ, ಮನಸ್ಸನ್ನು ಬ್ರಹ್ಮರಂಧ್ರಕ್ಕೆ ತಂದು ವಾಯುಬಂಧನ ಮಾಡಿದನು.

೩೦. ಈ ರೀತಿ ಪ್ರಾಣಾಯಾಮಮಾಡಿ, ಯೋಗಬಲದಿಂದ (ಮಧ್ಯಾ) ಎಂಬ ನಾಡಿಯನ್ನು ಹೃದಯಕಮಲಕ್ಕೆ ತಂದು ಆ ನಾಡಿಯೊಳಗೆ ಪ್ರಾಣವಾಯುವನ್ನು ಸೇರಿಸಿದನು

೩೧. ಹೀಗೆ ಮಾಡಿ ನಿಶ್ಚಲವಾಗಿ ಕುಳಿತು, ಶ್ರೀಹರಿಯು ಹಿಂದೆ ತನಗೆ ಉಪದೇಶಿಸಿದ್ದ ದಶಾಕ್ಷರ ಮಂತ್ರವನ್ನು ಭಕ್ತಿಯಿಂದ ಜಪಿಸಲಾರಂಭಿಸಿದನು.

೩೨. ಎಲೈ ನಾರದನೇ, ಬ್ರಹ್ಮನು ಈ ರೀತಿ ಒಂದು ಮುಹೂರ್ತಕಾಲ ಜಪಮಾಡಿ ಶ್ರೀಕೃಷ್ಣನ ಪಾದಕಮಲಗಳನ್ನು ಸ್ಮರಿಸುತ್ತ ತನ್ನ ಹೃದಯಕಮಲದಲ್ಲಿ ತೇಜೋಮಯನಾದ ಪರಮಾತ್ಮನನ್ನು ಕಂಡನು.

೩೩. ಆ ತೇಜೋಮಂಡಲದ ಮಧ್ಯದಲ್ಲಿ ದ್ವಿಭುಜನೂ, ಮುರಳೀಧರನೂ, ಪೀತಾಂಬರಧಾರಿಯೂ, ಆದ ಪರಮಾತ್ಮನ ಮನೋಹರರೂಪವನ್ನು ನೋಡಿದನು.

ಶ್ರುತಿಮೂಲಸ್ಥಲಸ್ಯಸ್ತ ಜ್ವಲನ್ಮಕರಕುಂಡಲಂ ।
ಈಷದ್ಧಾಸ್ಯಪ್ರಸನ್ನಾಸ್ಯಂ ಭಕ್ತಾನುಗ್ರಹಕಾತರಂ । ೩೪ ॥

ಯದ್ದೃಷ್ಟಂ ಬ್ರಹ್ಮರಂಧ್ರೇ ಚ ಹೃದಿ ತದ್ಬಹಿರೇವ ಚ ।
ದೃಷ್ಟ್ವಾ ಚ ಪರಮಾಶ್ಚರ್ಯಂ ತುಷ್ಟಾವ ಪರಮೇಶ್ವರಂ ॥ ೩೫ ॥

ಯತ್ಸ್ತೋತ್ರಂ ಚ ಪುರಾ ದತ್ತಂ ಹರಿಣೈಕಾರ್ಣವೇ ಮುನೇ ।
ತಮೀಶಂ ತೇನ ವಿಧಿನಾ ಭಕ್ತಿನಮ್ರಾತ್ಮಕಂಧರಃ ॥ ೩೬ ॥

॥ ಬ್ರಹ್ಮೋವಾಚ ॥

ಸರ್ವಸ್ವರೂಪಂ ಸರ್ವೇಶಂ ಸರ್ವಕಾರಣಕಾರಣಂ ।
ಸರ್ವಾನಿರ್ವಚನೀಯಂ ತಂ ನಮಾಮಿ ಶಿವರೂಪಿಣಂ ॥ ೩೭ ॥

---

೩೪. ಕರ್ಣಮೂಲದಲ್ಲಿ ಧರಿಸಿರುವ ಜಾಜ್ವಲ್ಯಮಾನವಾದ ಮಕರಕುಂಡಲವುಳ್ಳ ಆ ಶ್ರೀಕೃಷ್ಣನು ಮಂದಹಾಸದಿಂದ ಪ್ರಸನ್ನ ಮುಖನಾಗಿ ಭಕ್ತಾನುಗ್ರಹವಲ್ಲಿ ಕಾತರನಾಗಿದ್ದನು

೩೫. ಬ್ರಹ್ಮನು ತನ್ನ ಬ್ರಹ್ಮರಂಧ್ರದಲ್ಲೂ, ಹೃದಯಾರವಿಂದದಲ್ಲೂ ಯಾವ ಪರಾತ್ಪರವಸ್ತುವನ್ನು ಸಾಕ್ಷಾತ್ಕಾರ ಮಾಡಿಕೊಳ್ಳುತ್ತಿದ್ದನೋ, ಅದನ್ನೇ ತನ್ನ ಎದುರಿನಲ್ಲಿ ನೋಡಿ ಪರಮಾಶ್ಚರ್ಯಗೊಂಡು ಆ ಪರಬ್ರಹ್ಮನನ್ನು ಸ್ತುತಿಸಲಾರಂಭಿಸಿದನು.

೩೬ ಎಲೈ ನಾರದಮುನಿಯೇ, ಹಿಂದೆ ಶ್ರೀಹರಿಯು ಏಕಾರ್ಣವಕ್ಷೇತ್ರದಲ್ಲಿ ಬ್ರಹ್ಮನಿಗೆ ಯಾವ ಸ್ತೋತ್ರವನ್ನು ಉಪದೇಶಿಸಿದ್ದನೋ, ಆ ಸ್ತೋತ್ರವನ್ನೇ ಪಠನಮಾಡುತ್ತ ಭಕ್ತಿಯಿಂದ ತಲೆಬಾಗಿ ನಿಂತನು.

೩೭. ಬ್ರಹ್ಮ :— ಸರ್ವಸ್ವರೂಪನೂ, ಸರ್ವೇಶ್ವರನೂ, ಕಾರಣಗಳಿಗೆಲ್ಲ ಆದಿಕಾರಣನೂ, ಸಕಲರಿಂದ ಅನಿರ್ವಚನೀಯನೂ ಆದ ಮಂಗಳಾಕಾರನಿಗೆ ನಮಿಸುವೆನು.

ನವೀನಜಲದಾಕಾರಂ ಶ್ಯಾಮಸುಂದರವಿಗ್ರಹಂ ।
ಸ್ಥಿತಂ ಜಂತುಷು ಸರ್ವೇಷು ನಿರ್ಲಿಪ್ತಂ ಸಾಕ್ಷಿರೂಪಿಣಂ ॥ ೩೮ ॥

ಸ್ವಾತ್ಮಾರಾಮಂ ಪೂರ್ಣಕಾಮಂ ಜಗದ್ವ್ಯಾಪಿ ಜಗತ್ಪರಂ ।
ಸರ್ವಸ್ವರೂಪಂ ಸರ್ವೇಷಾಂ ಬೀಜರೂಪಂ ಸನಾತನಂ ॥ ೩೯ ॥

ಸರ್ವಾಧಾರಂ ಸರ್ವವರಂ ಸರ್ವಶಕ್ತಿಸಮನ್ವಿತಂ ।
ಸರ್ವಾರಾಧ್ಯಂ ಸರ್ವಗುರುಂ ಸರ್ವಮಂಗಲಕಾರಣಂ ॥ ೪೦ ॥

ಸರ್ವಮಂತ್ರಸ್ವರೂಪಂ ಚ ಸರ್ವಸಂಪತ್ಕರಂ ವರಂ ।
ಶಕ್ತಿಯುಕ್ತಮಯುಕ್ತಂ ಚ ಸ್ತೌಮಿ ಸ್ವೇಚ್ಛಾಮಯಂ ವಿಭುಂ ॥ ೪೧ ॥

ಶಕ್ತೀಶಂ ಶಕ್ತಿಬೀಜಂ ಚ ಶಕ್ತಿರೂಪಧರಂ ವರಂ ।
ಸಂಸಾರಸಾಗರೇ ಘೋರೇ ಶಕ್ತಿನೌಕಾಸಮನ್ವಿತಂ ॥ ೪೨ ॥

---

೩೮. ನವಮೇಘದಂತೆ ಮನೋಹರನೂ, ಶ್ಯಾಮಸುಂದರಶರೀರನೂ, ಸಕಲಜಂತುಗಳಲ್ಲಿ ಸಾಕ್ಷಿಸ್ವರೂಪನೂ, ಸ್ವಯಂ ನಿರ್ಲಿಪ್ತನೂ ಆದ ಪರಮಾತ್ಮನಿಗೆ ವಂದಿಸುವೆನು.

೩೯. ಸ್ವಾತ್ಮಾರಾಮನೂ, ಪೂರ್ಣಕಾಮನೂ, ಜಗದ್ವ್ಯಾಪಕನೂ, ಜಗತ್ತಿಗಿಂತ ಮೇಲಾದವನೂ, ಸರ್ವಸ್ವರೂಪನೂ, ಸಕಲಕಾರಣನೂ, ಆದ ಅನಾದಿ ಪುರುಷನಿಗೆ ಸಾಷ್ಟಾಂಗವೆರಗುವೆನು.

೪೦. ಸರ್ವಾಧಾರನೂ, ಸರ್ವಶ್ರೇಷ್ಠನೂ, ಸರ್ವಶಕ್ತಿಸಮನ್ವಿತನೂ, ಸರ್ವಪೂಜಿತನೂ, ಸರ್ವರ ಗುರುವೂ, ಆದ ಸರ್ವಮಂಗಳ ಸ್ವರೂಪನಿಗೆ ಎರಗುವೆನು

೪೧ ಸರ್ವಮಂತ್ರಸ್ವರೂಪನೂ, ಸರ್ವಸಂಪತ್ಪ್ರದಾಯಕನೂ. ಸಕಲಶಕ್ತಿ ಸಮನ್ವಿತನೂ, ಶಕ್ತ್ಯತೀತನೂ, ಸ್ವೇಚ್ಛಾಮಯನೂ, ಆದ ವಿಭುವನ್ನು ಸ್ತುತಿಸುವೆನು.

೪೨. ಸಕಲಶಕ್ತಿಗೊಡೆಯನೂ, ಸಕಲಶಕ್ತಿಗಳಿಗೆ ಕಾರಣನೂ, ಶಕ್ತಿಸ್ವರೂಪನೂ, ಸಂಸಾರವೆಂಬ ಘೋರಸಾಗರವನ್ನು ದಾಟಿಸಲು ಶಕ್ತಿಯೆಂಬ ನೌಕೆಯನ್ನು ಪಡೆದಿರುವವನೂ, ಆದ ಸರ್ವಶಕ್ತನಿಗೆ ಅಭಿವಂದಿಸುವೆನು.

ಕೃಪಾಲುಂ ಕರ್ಣಧಾರಂ ಚ ನಮಾಮಿ ಭಕ್ತವತ್ಸಲಂ ।
ಆತ್ಮಸ್ವರೂಪಮೇಕಾಂತಂ ಲಿಪ್ತಂ ನಿರ್ಲಿಪ್ತಮೇವ ಚ ॥ ೪೩ ॥

ಸಗುಣಂ ನಿರ್ಗುಣಂ ಬ್ರಹ್ಮ ಸ್ತೌಮಿ ಸ್ವೇಚ್ಛಾಸ್ವರೂಪಿಣಂ ।
ಸರ್ವೇಂದ್ರಿಯಾದಿದೇವಂ ತಮಿಂದ್ರಿಯಾಲಯಮೇವ ಚ ॥ ೪೪ ॥

ಸರ್ವೇಂದ್ರಿಯಸ್ವರೂಪಂ ಚ ವಿರಾಡ್ರೂಪಂ ನಮಾಮ್ಯಹಂ ।
ವೇದಂ ಚ ವೇದಜನಕಂ ಸರ್ವವೇದಾಂಗರೂಪಿಣಂ ॥ ೪೫ ॥

ಸರ್ವಮಂತ್ರಸ್ವರೂಪಂ ಚ ನಮಾಮಿ ಪರಮೇಶ್ವರಂ ।
ಸಾರಾತ್ಸಾರತರಂ ದ್ರವ್ಯಮಪೂರ್ವಮನಿರೂಪಿಣಂ ॥ ೪೬ ॥

ಸ್ವತಂತ್ರಮಸ್ವತಂತ್ರಂ ಚ ಯಶೋದಾನಂದನಂ ಭಜೇ ।
ಸಂತಂ ಸರ್ವಶರೀರೇಷು ತಮದೃಷ್ಟಮನೂಹಕಂ ॥ ೪೭ ॥

---

೪೩. ದಯಾಮಯನಾದ ಕರ್ಣಧಾರ(ನಾವಿಕ)ನೂ ಭಕ್ತವತ್ಸಲನೂ, ಸಂಸಾರದಲ್ಲಿ ಲಿಪ್ತನಾಗಿ ತೋರಿದರೂ ವಸ್ತುತಃ ನಿರ್ಲಿಪ್ತನೂ ಆದ ಪರಬ್ರಹ್ಮ ಸ್ವರೂಪನಿಗೆ ನಮಿಸುವೆನು.

೪೪. ವಸ್ತುತಃ ನಿರ್ಗುಣನಾದರೂ ಪ್ರಪಂಚದದೃಷ್ಟಿಯಲ್ಲಿ ಸಗುಣನೂ ಸ್ವೇಚ್ಛಾಸ್ವರೂಪಿಯೂ, ಸರ್ವೇಂದ್ರಿಯಗಳಿಗೆ ಆದಿದೇವನೂ ಇಂದ್ರಿಯಾಲಯನೂ ಆದ ಪರಬ್ರಹ್ಮನಿಗೆ ವಂದಿಸುವೆನು.

೪೫-೪೬. ಸರ್ವೇಂದ್ರಿಯಸ್ವರೂಪನೂ ವಿಶ್ವವ್ಯಾಪಕನೂ ಆದ ವಿರಾಡ್ರೂಪನಿಗೆ ವಂದಿಸುವೆನು. ಸರ್ವಜ್ಞನೂ ವೇದಗಳಿಗೆ ಜನಕನೂ ಸಕಲ ವೇದಾಂಗಸ್ವರೂಪನೂ, ಸರ್ವಮಂತ್ರಸ್ವರೂಪನೂ, ಸಾರವಸ್ತುಗಳಲ್ಲೆಲ್ಲ ಸಾರ ತರನೂ, ಹೀಗೆಂದು ನಿರೂಪಿಸಲಾಗದ ಅಪೂರ್ವವಸ್ತುಸ್ವರೂಪನೂ ಆದ ಪರಮೇಶ್ವರ ನಿಗೆ ನಮಸ್ಕರಿಸುವೆನು.

೪೭. ಸ್ವತಂತ್ರನಾದರೂ ಭಕ್ತಪರಾಧೀನನೂ, ಸಕಲರ ಶರೀರದಲ್ಲಿದ್ದರೂ ಕಣ್ಣಿಗೆ ಕಾಣದವನೂ, ಮತ್ತು ಊಹೆಗೆ ಸಿಲುಕದವನೂ ಆದ ಯಶೋದಾನಂದ ನನ್ನು ಭಜಿಸುವೆನು.

ಧ್ಯಾನಾಸಾಧ್ಯಂ ವಿದ್ಯಮಾನಂ ಯೋಗೀಂದ್ರಾಣಾಂ ಗುರುಂ ಭಜೇ ।
ರಾಸಮಂಡಲಮಧ್ಯಸ್ಥಂ ರಾಸೋಲ್ಲಾಸಸಮುತ್ಸುಕಂ ॥ ೪೮ ॥

ಗೋಪೀಭಿಃ ಸೇವ್ಯಮಾನಂ ಚ ತಂ ಧರೇಶಂ ನಮಾಮ್ಯಹಂ ।
ಸತಾಂ ಸದೈವ ಸಂತಂ ತಮಸಂತಮಸತಾಮಪಿ ॥ ೪೯ ॥

ಯೋಗೀಶಂ ಯೋಗಸಾಧ್ಯಂ ಚ ನಮಾಮಿ ಶಿವಸೇವಿತಂ ।
ಮಂತ್ರಬೀಜಂ ಮಂತ್ರರಾಜಂ ಮಂತ್ರದಂ ಫಲದಂ ಫಲಂ ॥ ೫೦ ॥

ಮಂತ್ರಸಿದ್ಧಿಸ್ವರೂಪಂ ತಂ ನಮಾಮಿ ಚ ಪರಾತ್ಪರಂ ।
ಸುಖಂ ದುಃಖಂ ಚ ಸುಖದಂ ದುಃಖದಂ ಪುಣ್ಯಮೇವ ಚ ॥ ೫೧ ॥

---

೪೮. ಧ್ಯಾನಕ್ಕೆ ಸಿಲುಕದವನೂ, ಸಚ್ಚಿದಾನಂದಸ್ವರೂಪನೂ, ರಾಸಮಂಡಲದ ಮಧ್ಯದಲ್ಲಿ ಕುಳಿತು ರಾಸೋಲ್ಲಾಸಸಮುತ್ಸುಕನೂ ಆದ ಪರಮಯೋಗೀಶ್ವರನನ್ನು ಭಜಿಸುವೆನು.

೪೯. ಗೋಪಿಯರಿಂದ ಸೇವಿಸಲ್ಪಡುವವನೂ, ಸತ್ಪುರುಷರಿಗೆ ಸರ್ವದಾ ಸತ್ಸ್ವರೂಪನೂ, ಅಸತ್ಪುರುಷರಿಗೆ ಅಸತ್ಸ್ವರೂಪನೂ ಆದ ಬ್ರಹ್ಮಾಂಡಾಧಿಪತಿಗೆ ನಮಸ್ಕರಿಸುವೆನು.

೫೦. ಯೋಗೀಶ್ವರನೂ, ಯೋಗಸಾಧ್ಯನೂ, ಶಿವಸೇವಿತನೂ, ಮಂತ್ರಗಳಿಗೆ ಬೀಜರೂಪನೂ, ಮಂತ್ರಾಧಿದೇವತೆಯೂ, ಮಂತ್ರಗಳನ್ನೂ ಅವುಗಳ ಫಲವನ್ನೂ ಕೊಡುವವನೂ ಆದ ಪರಮಮಂತ್ರಸ್ವರೂಪನಿಗೆ ವಂದಿಸುವೆನು.

೫೧. ಮಂತ್ರಸಿದ್ಧಿಸ್ವರೂಪನೂ, ಪರಾತ್ಪರನೂ, ಸುಖದುಃಖಸ್ವರೂಪನೂ, ಸುಖದುಃಖದಾಯಕನೂ, ಆದ ಮಂಗಳಸ್ವರೂಪನಿಗೆ ಭಕ್ತಿಯಿಂದ ನಮಸ್ಕರಿಸುವೆನು.

ಪುಣ್ಯಪ್ರದಂ ಚ ಶುಭದಂ ಶುಭಬೀಜಂ ನಮಾಮ್ಯಹಂ ।
ಇತ್ಯೇವಂ ಸ್ತವನಂ ಕೃತ್ವಾ ದತ್ವಾ ಗಾಶ್ಚ ಸಬಾಲಕಾನ್ ॥ ೫೨ ॥

ನಿಪತ್ಯ ದಂಡವದ್ಭೂಮೌ ರುರೋಧ ಪ್ರಣನಾಮ ಚ ।
ದದರ್ಶ ಚಕ್ಷುರುನ್ಮೀಲ್ಯ ವಿಧಾತಾ ಜಗತಾಂ ಮುನೇ ॥ ೫೩ ॥

ಬ್ರಹ್ಮಣಾ ಚ ಕೃತಂ ಸ್ತೋತ್ರಂ ನಿತ್ಯಂ ಭಕ್ತ್ಯಾ ಚ ಯಃ ಪಠೇತ್ ।
ಇಹ ಲೋಕೇ ಸುಖಂ ಭುಕ್ತ್ವಾ ಯಾತ್ಯಂತೇ ಶ್ರೀಹರೇಃ ಪದಂ ॥ ೫೪ ॥

ಲಭತೇ ದಾಸ್ಯಮತುಲಂ ಸ್ಥಾನಮೀಶ್ವರಸನ್ನಿಧೌ ।
ಲಬ್ಧ್ವಾ ಚ ಕೃಷ್ಣಸಾನ್ನಿಧ್ಯಂ ಪಾರ್ಷದಪ್ರವರೋ ಭವೇತ್ ॥ ೫೫ ॥

॥ ಶ್ರೀ ನಾರಾಯಣ ಉವಾಚ ॥

ಗತೇ ಜಗತ್ಕಾರಣೇ ಚ ಬ್ರಹ್ಮಲೋಕಂ ಚ ಬ್ರಹ್ಮಣಿ ।
ಶ್ರೀಕೃಷ್ಣೋ ಬಾಲಕೈಸ್ಸಾರ್ಧಂ ಜಗಾಮ ಸ್ವಾಲಯಂ ವಿಭುಃ ॥ ೫೬ ॥

೫೨-೫೩. ಪುಣ್ಯಪ್ರದನೂ, ಶುಭಕರನೂ, ಶುಭಗಳಿಗೆ ಕಾರಣನೂ ಆದ ಪರಮಾತ್ಮನಿಗೆ ನಮಿಸುವೆನು. ಬ್ರಹ್ಮನು ಈ ರೀತಿಯಾಗಿ ಸ್ತೋತ್ರಮಾಡಿ ತಾನು ಅಪಹರಿಸಿದ್ದ ಗೋವುಗಳನ್ನೂ, ಗೋಪಾಲಕರನ್ನೂ ಹಿಂದಕ್ಕೆ ಕೊಟ್ಟು ಭೂಮಿಯ ಮೇಲೆ ದಂಡಪ್ರಣಾಮ ಮಾಡಿ ತನ್ನ ಅಪರಾಧಕ್ಕೆ ಕ್ಷಮೆಬೇಡಿದನು. ಎಲೈ ಮುನಿಯೇ, ಅನಂತರ ಜಗತ್ಸೃಷ್ಟಿಕರ್ತನಾದ ಬ್ರಹ್ಮನು ಕಣ್ತೆರೆದು ತನ್ನ ಮುಂದೆ ಶ್ರೀಕೃಷ್ಣನನ್ನೂ, ಅವನ ಪರಿವಾರವನ್ನೂ ನೋಡಿದನು.

೫೪. ಬ್ರಹ್ಮಕೃತವಾದ ಈ ಸ್ತೋತ್ರವನ್ನು ನಿತ್ಯವೂ ಭಕ್ತಿಯಿಂದ ಪಠಿಸುವವರು ಇಹಲೋಕದಲ್ಲಿರುವವರೆಗೆ ಸುಖಸಾಮ್ರಾಜ್ಯವನ್ನನುಭವಿಸಿ, ಅಂತ್ಯಕಾಲದಲ್ಲಿ ವೈಕುಂಠಕ್ಕೆ ತೆರಳುವರು.

೫೫. ಅಲ್ಲಿ ಪರಮಾತ್ಮನ ಸನ್ನಿಧಿಯಲ್ಲಿ ಅತುಲವಾದ ಹರಿದಾಸ್ಯವನ್ನು ಹೊಂದುವರು. ಈ ರೀತಿ ಶ್ರೀಕೃಷ್ಣನ ಸಾನ್ನಿಧ್ಯವನ್ನು ಪಡೆದು ಪಾರ್ಷದಪ್ರವರೆನಿಸುವರು.

೫೬. ಶ್ರೀನಾರಾಯಣ:— ಅನಂತರ ಜಗತ್ಕಾರಣನಾದ ಬ್ರಹ್ಮನು ಬ್ರಹ್ಮಲೋಕಕ್ಕೆ ತೆರಳಲಾಗಿ ಇತ್ತ ಶ್ರೀಕೃಷ್ಣನು ಗೋಪಾಲರೊಡನೆ ತನ್ನ ಮಂದಿರಕ್ಕೆ ಹಿಂತಿರುಗಿದನು.

ಗಾವೋ ವತ್ಸಾಶ್ಚ ಬಾಲಾಶ್ಚ ಜಗುರ್ವರ್ಷಾಂತರಂ ಗೃಹಂ ।
ಶ್ರೀಕೃಷ್ಣಮಾಯಯಾ ಸರ್ವೇ ಮೇನಿರೇ ತೇ ದಿನಾಂತರಂ　　॥ ೫೭ ॥

ಗೋಪಾ ಗೋಪಾಲಿಕಾಃ ಕಿಂಚಿತ್ತತ್ಕರ್ತುಂ ನ ಕ್ಷಮಾಸ್ತದಾ ।
ಯೋಗಿನಃ ಕೃತ್ರಿಮಂ ಸರ್ವಂ ಕಿಂ ನೂತ್ನಂ ವಾ ಪುರಾತನಂ　　॥ ೫೮ ॥

ಇತ್ಯೇವಂ ಕಥಿತಂ ಸರ್ವಂ ಶ್ರೀಕೃಷ್ಣಚರಿತಂ ಶುಭಂ ।
ಸುಖದಂ ಮೋಕ್ಷದಂ ಪುಣ್ಯಂ ಸರ್ವಕಾಲಸುಖಾವಹಂ　　॥ ೫೯ ॥

ಇತಿ ಶ್ರೀ ಬ್ರಹ್ಮವೈವರ್ತಮಹಾಪುರಾಣೇ ಶ್ರೀಕೃಷ್ಣಜನ್ಮಖಂಡೇ
ನಾರಾಯಣನಾರದಸಂವಾದೇ ಗೋವತ್ಸಬಾಲಕಹರಣ
ಪ್ರಸ್ತಾವೋ ನಾಮ ವಿಂಶೋಽಧ್ಯಾಯಃ

೫೭–೫೮. ಈರೀತಿ ಹಸುಕರುಗಳೂ, ಆ ಗೋಪಾಲಬಾಲಕರೂ ಒಂದು ವರ್ಷ ಕಳೆದನಂತರ ತಮ್ಮ ಮನೆಗೆ ಹಿಂತಿರುಗಿದರು. ಆದರೆ ಅವರೆಲ್ಲರೂ ಶ್ರೀಕೃಷ್ಣನ ಮಾಯೆಯಿಂದ ಆ ವರ್ಷವನ್ನು ಒಂದು ದಿನವೆಂದು ತಿಳಿದರು. ಆಗ ಗೋಪ ಗೋಪಾಲಿಕೆಯರಾರೂ ಆ ಯೋಗೀಶ್ವರನ ಕೃತ್ರಿಮಕ್ಕೆ ಏನೂ ಮಾಡಲಾಗಲಿಲ್ಲ. ಆ ಪರಮಯೋಗಿಗೆ ಹೊಸದಾವುದು ? ಹಳೆಯದಾವುದು.?

೫೯. ಈ ರೀತಿ ಪುಣ್ಯಕರವೂ, ಮೋಕ್ಷಪ್ರದವೂ, ಸರ್ವಕಾಲದಲ್ಲಿಯೂ ಸುಖದಾಯಕವೂ, ಶುಭಕರವೂ ಆದ ಶ್ರೀಕೃಷ್ಣಚರಿತ್ರೆ ಎಲ್ಲವನ್ನೂ ಹೇಳಿರುವೆನು.

ಇಲ್ಲಿಗೆ ಶ್ರೀಬ್ರಹ್ಮವೈವರ್ತ ಮಹಾಪುರಾಣದ ಶ್ರೀಕೃಷ್ಣಜನ್ಮಖಂಡದಲ್ಲಿ
'ಗೋವತ್ಸಬಾಲಕಹರಣಪ್ರಸ್ತಾವ'ವೆಂಬ ಇಪ್ಪತ್ತನೆಯ
ಅಧ್ಯಾಯವು ಮುಗಿದುದು.

ಇಪ್ಪತ್ತನೆಯ ಅಧ್ಯಾಯದ ಸಾರಾಂಶ

ಒಮ್ಮೆ ಶ್ರೀಕೃಷ್ಣನು ಗೋಪಾಲಕರೊಡನೆ ವೃಂದಾವನದಲ್ಲಿ ಗೋವುಗಳನ್ನು ಮೇಯಿಸುತ್ತಿದ್ದಾಗ ಅವನ ಮಹಿಮೆಯನ್ನು ತಿಳಿಯಲೋಸುಗ ಬ್ರಹ್ಮನು ಆ ಗೋವುಗಳನ್ನೂ, ಗೋಪಾಲಕರನ್ನೂ ಅಂತರ್ಧಾನಗೊಳಿಸಿದನು. ಕೂಡಲೆ ಶ್ರೀಕೃಷ್ಣನು ತನ್ನ ಮಾಯಾ ಶಕ್ತಿಯಿಂದ ಮೊದಲಿನಂತೆ ಗೋವುಗಳನ್ನೂ, ಗೋಪಾಲಕರನ್ನೂ ಸೃಷ್ಟಿಮಾಡಿಕೊಂಡು ಬ್ರಹ್ಮನನ್ನು ಲೆಕ್ಕಿಸದೆ ಇದ್ದನು. ಆಗ ಚತುರ್ಮುಖ ಬ್ರಹ್ಮನು. ವೃಂದಾವನಕ್ಕೆ ಬಂದು ಅಪಾರಮಹಿಮನಾದ, ಶ್ರೀಕೃಷ್ಣನನ್ನು ಭಕ್ತಿಯಿಂದ ಸ್ತುತಿಸಿ ತಾನು ಅಪಹರಿಸಿದ್ದ ಗೋವುಗಳನ್ನೂ, ಗೋಪಾಲಕರನ್ನೂ ಅವನಿಗೆ ಸಮರ್ಪಿಸಿ, ತನ್ನ ಅಪರಾಧಕ್ಕೆ ಕ್ಷಮೆಬೇಡಿ ಹಿಂತಿರುಗಿದನು. ಅನಂತರ ಶ್ರೀಕೃಷ್ಣನು ಗೋಕುಲಕ್ಕೆ ಹಿಂತಿರುಗಿ ಎಲ್ಲರಿಗೂ ನಡೆದ ಸಮಾಚಾರವನ್ನು ತಿಳುಹಿ ಆಶ್ಚರ್ಯಗೊಳಿಸಿದನು.

—॥ ಓಂ ॥—

—॥ ಶ್ರೀ ಗಣೇಶಾಯ ನಮಃ ॥—

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಶ್ರೀಕೃಷ್ಣಜನ್ಮಖಂಡೇ

॥ ಏಕವಿಂಶತಿತಮೋಽಧ್ಯಾಯಃ ॥

॥ ಶ್ರೀ ನಾರಾಯಣ ಉವಾಚ ॥

ಏಕದಾನಂದಯುಕ್ತಶ್ಚ ನಂದೋ ಗೋಪವ್ರಜೇ ಮುನೇ ।
ದುಂದುಭಿಂ ವಾದಯಾಮಾಸ ಶಕ್ರಯಾಗಕೃತೋದ್ಯಮಃ ॥ ೧ ॥

ದಧಿ ಕ್ಷೀರಂ ಘೃತಂ ತಕ್ರಂ ನವನೀತಂ ಗುಡಂ ಮಧು ।
ಏತಾನ್ಯಾದಾಯ ಶಕ್ರಸ್ಯ ಪೂಜಾಂ ಕುರ್ವಂತ್ವಿತಿ ಬ್ರುವನ್ ॥ ೨ ॥

ಯೇ ಯೇ ಸಂತ್ಯತ್ರ ನಗರೇ ಗೋಪಾ ಗೋಪ್ಯಶ್ಚ ಬಾಲಕಾಃ ।
ಬಾಲಿಕಾಶ್ಚ ದ್ವಿಜಾ ಭೂಯೋ ವೈಶ್ಯಾಃ ಶೂದ್ರಾಶ್ಚ ಭಕ್ತಿತಃ ॥ ೩ ॥

ಇಪ್ಪತ್ತೊಂದನೆಯ ಅಧ್ಯಾಯವು

೧. ಶ್ರೀನಾರಾಯಣ:— ಎಲೈ ನಾರದ ಮಹರ್ಷಿಯೇ, ಒಮ್ಮೆ ನಂದ ಗೋಪನು ಇಂದ್ರಯಾಗದಲ್ಲಿ ತೊಡಗಿದವನಾಗಿ ಗೋಕುಲಕ್ಕೆ ಎಲ್ಲರನ್ನೂ ಆಹ್ವಾನಿಸಲು, ಆನಂದದಿಂದ ನಗಾರಿಯನ್ನು ಬಾರಿಸಿದನು

೨. ಅಲ್ಲದೆ 'ಸರ್ವರೂ ಹಾಲು, ಮೊಸರು, ತುಪ್ಪ, ಬೆಣ್ಣೆ, ಬೆಲ್ಲ ಮತ್ತು ಜೇನುತುಪ್ಪ ಮುಂತಾದ ಅಭಿಷೇಕ ಮತ್ತು ನೈವೇದ್ಯದ್ರವ್ಯಗಳೊಡನೆ ಬಂದು ಇಂದ್ರನ ಪೂಜೆಯನ್ನು ಮಾಡಬೇಕು' ಎಂದು ಸಾರಿದನು.

೩. 'ಈ ನಗರದಲ್ಲಿರುವ ಗೋಪಗೋಪಿಯರೂ, ಬಾಲಕಬಾಲಕಿಯರೂ, ಬ್ರಾಹ್ಮಣ, ವೈಶ್ಯ ಮತ್ತು ಶೂದ್ರರೂ ಬಂದು ಭಕ್ತಿಯಿಂದ ಇಂದ್ರನ ಪೂಜೆಯಲ್ಲಿ ಭಾಗಿಗಳಾಗಬೇಕು' ಎಂದು ಸಾರಿ ಹೇಳಿದನು.

ಇತ್ಯೇವಂ ಶ್ರಾವಯಾಮಾಸ ಸ್ವಯಮೇವ ಮುದಾನ್ವಿತಃ ।
ಯಷ್ಟಿಮಾರೋಪಯಾಮಾಸ ರಮ್ಯಸ್ಥಾನೇ ಸುವಿಸ್ತೃತೇ ॥ ೪ ॥

ದದೌ ತತ್ರ ಕ್ಷೌಮವಸ್ತ್ರಂ ಮಾಲಾಜಾಲಂ ಮನೋಹರಂ ।
ಚಂದನಾಗುರುಕಸ್ತೂರೀ ಕುಂಕುಮದ್ರವಮೇವ ಚ ॥ ೫ ॥

ಸ್ನಾತಃ ಕೃತಾಹ್ನಿಕೋ ಭಕ್ತ್ಯಾ ಧೃತ್ವಾ ಧೌತೇ ಚ ವಾಸಸೀ ।
ಉವಾಸ ಸ್ವರ್ಣಪೀಠೇ ಚ ಪ್ರಕ್ಷಾಳಿತ ಪದಾಂಬುಜಃ ॥ ೬ ॥

ನಾನಾಪ್ರಕಾರಪಾತ್ರೈಶ್ಚ ಬ್ರಾಹ್ಮಣೈಶ್ಚ ಪುರೋಹಿತೈಃ ।
ಗೋಪಾಲೈರ್ಗೋಪಿಕಾಭಿಶ್ಚ ಬಾಲಾಭಿಃ ಸಹ ಬಾಲಕೈಃ ॥ ೭ ॥

---

೪. ಈ ರೀತಿ ತಾನೇ ಸಂತೋಷದಿಂದ ಸಾರಿಹೇಳಿ ವಿಸ್ತಾರವಾಗಿಯೂ, ರಮ್ಯವಾಗಿಯೂ, ಇರುವ ಸ್ಥಳವೊಂದರಲ್ಲಿ ಶಕ್ರಯಾಗಸೂಚಕವಾದ ಸ್ತಂಭವೊಂದನ್ನು ನೆಡಿಸಿದನು.

೫. ಆ ಸ್ತಂಭಕ್ಕೆ ತೆಳುವಾದ ಒಂದು ವಸ್ತ್ರವನ್ನು ಸುತ್ತಿ ಮನೋಹರವಾದ ಹೂಮಾಲೆಗಳನ್ನು ತೊಡಿಸಿ, ಚಂದನ, ಅಗುರು, ಕಸ್ತೂರಿ ಮತ್ತು ಕುಂಕುಮ ಕೇಸರಿಯನ್ನು ಲೇಪಿಸಿದನು.

೬. ಅನಂತರ ತಾನು ಸ್ನಾನಾಹ್ನಿಕಾದಿಗಳನ್ನು ಮುಗಿಸಿಕೊಂಡು, ಒಗೆದು ಶುಭ್ರವಾಗಿರುವ ಎರಡು ವಸ್ತ್ರಗಳನ್ನುಟ್ಟು, ಕೈಕಾಲುಗಳನ್ನು ತೊಳೆದುಕೊಂಡು ಭಕ್ತಿಯಿಂದ ಸುವರ್ಣಪೀಠದಲ್ಲಿ ಕುಳಿತುಕೊಂಡನು.

೭. ಸುತ್ತಲೂ ನಾನಾವಿಧವಾದ ಪೂಜಾಸಾಮಗ್ರಿಗಳಿರುವ ಪಾತ್ರೆಗಳೂ, ಬ್ರಹ್ಮನಿಷ್ಠರಾದ ಪುರೋಹಿತರೂ, ಗೋಪಗೋಪಿಕೆಯರೂ, ಬಾಲಕಬಾಲಕಿಯರೂ ಕುಳಿತಿದ್ದರು.

ಏತಸ್ಮಿನ್ನಂತರೇ ತತ್ರಾಜಗ್ಮುರ್ನಗರವಾಸಿನಃ ।
ಮಹಾಸಂಭೃತಸಂಭಾರಾ ನಾನೋಪಾಯನಸಂಯುತಾಃ ॥ ೮ ॥

ಆಜಗ್ಮುರ್ಮುನಯಃ ಸರ್ವೇ ಜ್ವಲಂತೋ ಬ್ರಹ್ಮತೇಜಸಾ ।
ಶಾಂತಾಃ ಶಿಷ್ಯಗಣೈಃಸ್ಸಾರ್ಧಂ ವೇದವೇದಾಂಗಪಾರಗಾಃ ॥ ೯ ॥

ಗರ್ಗಶ್ಚ ಗಾಲವಶ್ಚೈವ ಶಾಕಲ್ಯಃ ಶಾಕಟಾಯನಃ ।
ಗೌತಮಃ ಕರುಷಃ ಕಣ್ವಃ ವಾತ್ಸ್ಯಃ ಕಾತ್ಯಾಯನಸ್ತಥಾ ॥ ೧೦ ॥

ಸೌಭರಿರ್ವಾಮದೇವಶ್ಚ ಯಾಜ್ಞವಲ್ಕ್ಯಶ್ಚ ಪಾಣಿನಿಃ ।
ಋಷ್ಯಶೃಂಗೋ ಗೌರಮುಖೋ ಭರದ್ವಾಜಶ್ಚ ವಾಮನಃ ॥ ೧೧ ॥

ಕೃಷ್ಣದ್ವೈಪಾಯನಃ ಶೃಂಗೀ ಸುಮಂತುರ್ಜೈಮಿನಿಃಕಚಃ ।
ಪರಾಶರಶ್ಚ ಮೈತ್ರೇಯೋ ವೈಶಾಂಪಾಯನ ಏವ ಚ ॥ ೧೨ ॥

---

೮. ಇಷ್ಟುಹೊತ್ತಿಗೆ ಆ ನಗರನಿವಾಸಿಗಳೂ ಕೂಡ ವಿವಿಧ ಪೂಜಾಸಾಮಗ್ರಿಗಳಿಂದಲೂ ನಾನಾವಿಧವಾದ ಉಪಾಯನದ್ರವ್ಯಗಳಿಂದಲೂ ಕೂಡಿ ಅಲ್ಲಿಗೆ ಬಂದರು.

೯. ಅಲ್ಲದೆ ವೇದವೇದಾಂಗಪಾರಂಗತರೂ, ಬ್ರಹ್ಮತೇಜಸ್ಸಿನಿಂದ ಬೆಳಗುವವರೂ, ಪ್ರಶಾಂತರೂ ಆದ ಮುನಿಗಳೆಲ್ಲರೂ ತಮ್ಮ ಶಿಷ್ಯವೃಂದದೊಡನೆ ಅಲ್ಲಿಗೆ ಬಂದರು.

೧೦. ಅವರಲ್ಲಿ ಗರ್ಗಗಾಲವರೂ, ಶಾಕಲ್ಯಶಾಕಟಾಯನರೂ, ಗೌತಮ, ಕರುಷ, ಕಣ್ವ, ವಾತ್ಸ್ಯ ಮತ್ತು ಕಾತ್ಯಾಯನಮಹರ್ಷಿಗಳೂ ಇದ್ದರು.

೧೧. ಸೌಭರಿ, ವಾಮದೇವ, ಯಾಜ್ಞವಲ್ಕ್ಯ, ಪಾಣಿನಿ, ಋಷ್ಯಶೃಂಗ, ಗೌರಮುಖ, ಭರದ್ವಾಜ ಮತ್ತು ವಾಮನ ಮಹರ್ಷಿಗಳೂ ಆ ಗುಂಪಿನಲ್ಲಿದ್ದರು.

೧೨. ಕೃಷ್ಣದ್ವೈಪಾಯನ, ಶೃಂಗಿ, ಸುಮಂತು, ಜೈಮಿನಿ, ಕಚ, ಪರಾಶರ, ಮೈತ್ರೇಯ ಮತ್ತು ವೈಶಂಪಾಯನ ಮಹರ್ಷಿಗಳೂ ಅಲ್ಲಿಗೆ ಬಂದಿದ್ದರು.

ಬ್ರಾಹ್ಮಣಾಶ್ಚ ಕತಿವಿಧಾ ಭಿಕ್ಷುಕಾ ವಂದಿನಸ್ತಥಾ ।
ಭೂಪಾ ವೈಶ್ಯಾಶ್ಚ ಶೂದ್ರಾಶ್ಚ ಸಮಾಜಗ್ಮುರ್ಮಹೋತ್ಸವೇ ॥ ೧೩ ॥

ದೃಷ್ಟ್ವಾ ಮುನೀಂದ್ರಾನ್ನಂದಶ್ಚ ಬ್ರಾಹ್ಮಣಾನ್ ಭೂಮಿಪಾಂಸ್ತಥಾ ।
ಸ್ವರ್ಣಪೀಠಾತ್ಸಮುತ್ತಸ್ಥೌ ಪ್ರಜಾಶ್ಚೋತ್ತಸ್ಥುರೇವ ಚ ॥ ೧೪ ॥

ಪ್ರಣಮ್ಯ ವಾಸಯಾಮಾಸ ಮುನೀಂದಾನ್ವಿಪ್ರಭೂಮಿಪಾನ್ ।
ತೇಷಾಮನುಮತಿಂ ಪ್ರಾಪ್ಯ ತತ್ರೋವಾಸ ಪುನರ್ಮುದಾ ॥ ೧೫ ॥

ಪಾಕಂ ಚ ಯಷ್ಟಿನಿಕಟೇ ಕರ್ತುಮಾಜ್ಞಾಂ ಚಕಾರ ಹ ।
ಪಾಕಪ್ರಾಜ್ಞಂ ಬ್ರಾಹ್ಮಣಾನಾಂ ಶತಮಾನೀಯ ಸಾದರಂ ॥ ೧೬ ॥

ತತ್ರ ರತ್ನಪ್ರದೀಪಾಶ್ಚ ಜಜ್ವಲುಃ ಪರಿತಸ್ತಥಾ ।
ಅಂಧೀಭೂತಂ ಚ ಧೂಪೇನ ಸ್ಥಾನಂ ತತ್ಸುರಭೀಕೃತಂ ॥ ೧೭ ॥

---

೧೩. ಇಷ್ಟೇ ಅಲ್ಲದೆ ಆ ಯಾಗಮಹೋತ್ಸವದಲ್ಲಿ ಅನೇಕ ಬ್ರಾಹ್ಮಣರೂ, ಭಿಕ್ಷುಕರೂ ಮತ್ತು ಹೊಗಳುಭಂಟರೂ ಬಂದಿದ್ದರು. ಕ್ಷತ್ರಿಯರೂ, ವೈಶ್ಯಶೂದ್ರರೂ ಅಗಣಿತವಾಗಿದ್ದರು.

೧೪. ಈ ರೀತಿಯಾಗಿ ಬಂದ ಮುನೀಂವ್ರರನ್ನೂ, ಬ್ರಾಹ್ಮಣಕ್ಷತ್ರಿಯಾದಿಗಳನ್ನೂ ನೋಡಿ ನಂದಗೋಪನು ತನ್ನ ಸುವರ್ಣಪೀಠದಿಂದ ಪ್ರತ್ಯುತ್ಥಾನಮಾಡಲು ಕೂಡಲೇ ಗೋಪಾಲಕರೆಲ್ಲರೂ ಎದ್ದುನಿಂತರು.

೧೫. ನಂದಗೋಪನು ಅವರೆಲ್ಲರಿಗೂ ವಂದಿಸಿ, ಮುನಿಗಳನ್ನೂ, ಬ್ರಾಹ್ಮಣರನ್ನೂ, ರಾಜೇಂದ್ರರನ್ನೂ ಅವರವರಿಗುಚಿತವಾದ ಸ್ಥಳದಲ್ಲಿ ಕುಳ್ಳಿರಿಸಿ, ಅವರ ಅನುಮತಿಯನ್ನು ಪಡೆದು ತಾನೂ ಸಂತೋಷದಿಂದ ಕುಳಿತುಕೊಂಡನು.

೧೬. ಅಲ್ಲದೆ ಪಾಕಕರ್ಮದಲ್ಲಿ ನುರಿತ ನೂರಾರು ಬ್ರಾಹ್ಮಣರನ್ನು ಕರೆಸಿ, ಯಾಗಮಂಡಪದಲ್ಲಿಯೇ ಪಾಕಮಾಡಲು ಅಪ್ಪಣೆಮಾಡಿದನು.

೧೭. ಆ ಯಾಗಮಂಟಪದ ಸುತ್ತಲೂ ರತ್ನಪ್ರದೀಪಗಳು ಪ್ರಜ್ವಲಿಸುತ್ತಿದ್ದವು. ಆ ಸ್ಥಾನವೆಲ್ಲವೂ ಧೂಪಧೂಮದಿಂದ ಅಂಧೀಭೂತವೂ, ಸುವಾಸಿತವೂ ಆಯಿತು.

ನಾನಾವಿಧಾನಿ ಪುಷ್ಪಾಣಿ ಮಾಲ್ಯಾನಿ ವಿವಿಧಾನಿ ಚ ।
ನೈವೇದ್ಯಂ ಚ ಬಹುವಿಧಮಪೂರ್ವಂ ಸುಮನೋಹರಂ ॥ ೧೮ ॥

ತಿಲಲಡ್ಡು ಕಪೂರ್ಣಂ ಚ ಮಂಡಕಾನಾಂ ಸಹಸ್ರಕಂ ।
ಸ್ವಸ್ತಿಕೈಃ ಪರಿಪೂರ್ಣಂ ಚ ಯಷ್ಟಿ ಸ್ಥಾನಂ ಚ ನಾರದ ॥ ೧೯ ॥

ಕಲಶಾನಾಂ ಸಹಸ್ರಂ ಚ ಪೂರ್ಣಂ ಶರ್ಕರಯಾ ಮುನೇ ।
ಯುವಗೋಧೂಮ ಚೂರ್ಣಾನಾಂ ಲಡ್ಡುಕೈರ್ಮಧುರೈರ್ವರೈಃ ॥ ೨೦ ॥

ಘೃತಪಕ್ವೈರ್ವಿಪ್ರಕೃತೈಃ ಪೂರ್ಣಾನಿ ಕಲಶಾನಿ ಚ ।
ವೃಕ್ಷಪಕ್ವಾನಿ ರಮ್ಯಾಣಿ ಚಾರುರಂಭಾಫಲಾನಿ ಚ ॥ ೨೧ ॥

ಫಲಾನಿ ಪರಿಪಕ್ವಾನಿ ಕಾಲದೇಶೋದ್ಭವಾನಿ ಚ ।
ಕ್ಷೀರಾಣಾಂ ಕುಂಭಲಕ್ಷಾಣಿ ದಧ್ನಾಂ ತಾವಂತಿ ನಾರದ ॥ ೨೨ ॥

---

೧೮. ಅಲ್ಲಿ ನಾನಾವಿಧ ಪುಷ್ಪಗಳೂ ವಿಧವಿಧ ಹೂಮಾಲೆಗಳೂ, ಅಪೂರ್ವವೂ, ಮನೋಹರವೂ ಆದ ಅನೇಕತರಹ ನೈವೇದ್ಯ ವಸ್ತುಗಳೂ ಸಿದ್ಧಗೊಳಿಸಲ್ಪಟ್ಟಿದ್ದವು.

೧೯. ಎಲೈ ನಾರದನೇ, ಆ ಯಾಗಮಂಟಪವು ಎಳ್ಳುಂಡೆಗಳಿಂದಲೂ, ಸಹಸ್ರಾರು ಮಂಡಿಗೆಗಳಿಂದಲೂ, ಸ್ವಸ್ತಿಕ ವಾಯನಗಳಿಂದಲೂ ಪರಿಪೂರ್ಣವಾಗಿ ಶೋಭಿಸುತ್ತಿದ್ದಿತು.

೨೦. ಸಾವಿರಾರು ಕಲಶಗಳು ಸಕ್ಕರೆಯಿಂದಲೂ, ಅಕ್ಕಿ ಮತ್ತು ಗೋಧಿ ಹಿಟ್ಟಿನಿಂದ ಮಾಡಿ, ಮಧುರವಾಗಿರುವ ಲಡ್ಡುಕಗಳಿಂದಲೂ ಪರಿಪೂರ್ಣವಾಗಿದ್ದವು.

೨೧. ಬ್ರಾಹ್ಮಣಕೃತವಾದ ಆ ಭಕ್ಷ್ಯಗಳೆಲ್ಲವೂ ಘೃತದಿಂದ ಪಕ್ವವಾಗಿ ಕಲಶದಲ್ಲಿ ತುಂಬಲ್ಪಟ್ಟಿದ್ದವು. ಮರದ ಮೇಲೆ ಹಣ್ಣಾಗಿ ಮನೋಹರವಾಗಿದ್ದ ಅನೇಕ ಬಾಳೆಯಹಣ್ಣುಗಳು ಅಲ್ಲಿ ಇಡಲ್ಪಟ್ಟಿದ್ದವು.

೨೨. ಎಲೈ ನಾರದನೇ, ಆಯಾಯ ಕಾಲದೇಶಾನುಗುಣವಾದ ಪಕ್ವ ಫಲಗಳೂ, ಹಾಲು ಮತ್ತು ಮೊಸರಿನ ಲಕ್ಷಕುಂಭಗಳೂ ಅಲ್ಲಿ ಸಿದ್ಧಗೊಳಿಸಲ್ಪಟ್ಟಿದ್ದವು.

ಮಧೂನಾಂ ಕುಂಭಶತಕಂ ಸರ್ಪಿಷ್ಕುಂಭಸಹಸ್ರಕಂ ।
ಕಲಶಾನಾಂ ತ್ರಿಲಕ್ಷಾಣಿ ತಕ್ರಪೂರ್ಣಾನಿ ನಿಶ್ಚಿತಂ ॥ ೨೩ ॥

ಘಟಾನಾಂ ಪಂಚಲಕ್ಷಾಣಿ ಗುಡಪೂರ್ಣಾನಿ ನಿಶ್ಚಿತಂ ।
ತಿಲತೈಲೇನ ಪೂರ್ಣಂ ಚ ಕಲಶಾನಾಂ ಸಹಸ್ರಕಂ ॥ ೨೪ ॥

ವೃಷೇಂದ್ರಾಶ್ಚ ಬಹುವಿಧಾ ಭೋಗಾರ್ಹದ್ರವ್ಯವಾಹಕಾಃ ।
ನಾನಾವಿಧಾನಿ ಪಾತ್ರಾಣಿ ಸೌವರ್ಣರಜತಾನಿ ಚ ॥ ೨೫ ॥

ಸ್ವರ್ಣಪೀಠಾನಿ ಚ ಬ್ರಹ್ಮನ್ನಾಜಗ್ಮುರ್ಯಷ್ಟಿ ಸನ್ನಿಧೌ ।
ವಸ್ತ್ರಾಣಿ ವರಣಾರ್ಹಾಣಿ ಚಾರೂಣಿ ಭೂಷಣಾನಿ ಚ ॥ ೨೬ ॥

ನಾನಾವಿಧಾನಿ ವಾದ್ಯಾನಿ ಚಾರೂಣಿ ಮಧುರಾಣಿ ಚ ।
ವಾದಕಾಃ ಸ್ವರಯಂತ್ರಾಣಿ ವಾದಯಾಮಾಸುರುತ್ಸವೇ ॥ ೨೭ ॥

---

೨೩. ನೂರು ಜೇನುತುಪ್ಪದ ಗಡಿಗೆಗಳೂ, ಸಾವಿರ ತುಪ್ಪದ ಗಡಿಗೆಗಳೂ, ಮೂರುಲಕ್ಷ ಮಜ್ಜಿಗೆಯ ಕೊಡಗಳೂ ಅಲ್ಲಿ ನೈವೇದ್ಯಕ್ಕಾಗಿ ಇಡಲ್ಪಟ್ಟಿದ್ದವು.

೨೪. ಐದುಲಕ್ಷ ಗುಡ (ಬೆಲ್ಲ) ಪೂರ್ಣವಾದ ಕಲಶಗಳೂ, ಎಳ್ಳೆಣ್ಣೆಯಿಂದ ತುಂಬಿದ ಸಾವಿರಕಲಶಗಳೂ ಅಲ್ಲಿ ಸಿದ್ಧಪಡಿಸಲ್ಪಟ್ಟಿದ್ದವು.

೨೫. ಭೋಗಯೋಗ್ಯವಾದ ದ್ರವ್ಯಗಳನ್ನು ಹೊರಲು ಅಸಂಖ್ಯ ವೃಷಭಗಳೂ ಚಿನ್ನ ಮತ್ತು ಬೆಳ್ಳಿಯಿಂದ ನಿರ್ಮಿತವಾದ ನಾನಾವಿಧ ಪಾತ್ರೆಗಳೂ ಆ ಯಾಗ ಮಂಟಪದಲ್ಲಿದ್ದವು.

೨೬. ಎಲೈ ಬ್ರಾಹ್ಮಣೋತ್ತಮನೇ, ಯೂಪಸ್ತಂಭದ ಸಮೀಪಕ್ಕೆ ಅನೇಕ ಸುವರ್ಣಪೀಠಗಳನ್ನೂ, ದಾನಕೊಡಲು ಯೋಗ್ಯವಾದ ವಸ್ತ್ರಾಭರಣಗಳನ್ನೂ ತಂದಿಟ್ಟರು.

೨೭. ಆ ಯಾಗಮಹೋತ್ಸವದಲ್ಲಿ ವಾದ್ಯಗಾರರು ಮನೋಹರವೂ ಕರ್ಣಾನಂದಕರವೂ ಆದ ವಿವಿಧ ವಾದ್ಯಗಳನ್ನೂ ಸ್ವರಯಂತ್ರಗಳನ್ನೂ ಬಾರಿಸಿದರು

ಛಾಗಲಾನಾಂ ಸಹಸ್ರಾಣಿ ಮಹಿಷಾಣಾಂ ಶತಾನಿ ಚ ।
ಮೇಷಕಾನಾಂ ಚ ಲಕ್ಷಾಣಿ ಹ್ಯಾನಯೊಮಾಸ ತತ್ರ ವೈ ॥ ೨೮ ॥

ಶತಾನ್ಯೇವ ಗಂಡಕಾನಾಮಾಜಗ್ಮುರ್ಯೂಪಸನ್ನಿಧಿಂ ।
ಪ್ರೇಕ್ಷಿತಾನಿ ಚ ಸರ್ವಾಣಿ ರಕ್ಷಿತಾನಿ ಚ ರಕ್ಷಿತೈಃ ॥ ೨೯ ॥

ಬಾಲಕಾನಾಂ ಬಾಲಿಕಾನಾಂ ವೃಕ್ಷಾಣಾಂ ವೃಕ್ಷಯೋಷಿತಾಂ ।
ಯೂನಾಂ ಚ ಯುವತೀನಾಂ ಚ ಸಂಖ್ಯಾಂ ಕರ್ತುಂ ಚ ಕಃ ಕ್ಷಮಃ ॥ ೩೦ ॥

ಗಾಯಕಾನಾಂ ಚ ಸಂಗೀತಂ ನರ್ತಕಾನಾಂ ಚ ನರ್ತನಂ ।
ಶ್ರುತ್ವಾ ದೃಷ್ಟ್ವಾ ಜನಾಃ ಸರ್ವೇ ಮುಮುದುಃ ಸುಮಹೋತ್ಸವೇ ॥ ೩೧ ॥

ರಂಭೋರ್ವಶೀ ಮೇನಕಾ ಚ ಘೃತಾಚೀ ಮೋಹಿನೀ ರತಿಃ ।
ಪ್ರಭಾವತೀ ಭಾನುಮತೀ ವಿಪ್ರಚಿತ್ತಿಸ್ತಿಲೋತ್ತಮಾ ॥ ೩೨ ॥

---

೨೮. ಆ ಯಾಗಕ್ಕೆ ಒಂದು ಸಾವಿರ ಹೋತಗಳನ್ನೂ ನೂರು ಕೋಣಗಳನ್ನೂ ಲಕ್ಷ ಟಗರುಗಳನ್ನೂ ನಂದಗೋಪನು ಬಲಿಕೊಡಲು ತರಿಸಿದನು.

೨೯. ಇವುಗಳಲ್ಲದೆ ನೂರು ಗಂಡಕ (ಖಡ್ಗ) ಮೃಗಗಳನ್ನೂ ಕೂಡ ಯೂಪಸ್ತಂಭದ ಹತ್ತಿರಕ್ಕೆ ತರಿಸಿದನು. ರಕ್ಷಕರಿಂದ ರಕ್ಷಿಸಲ್ಪಟ್ಟ ಇವೆಲ್ಲವನ್ನೂ ನಂದಗೋಪನು ಪರಾಂಬರಿಸಿದನು.

೩೦. ಆ ಯಾಗಮಂಡಪದಲ್ಲಿ ನೆರೆದಿದ್ದ ಬಾಲಕಬಾಲಕಿಯರ, ಮರಬಳ್ಳಿಗಳ (ಅಭಿಮಾನಿದೇವತೆಗಳ) ಮತ್ತು ಯುವಕ ಯುವತಿಯರ ಸಂಖ್ಯೆಯು ಗಣನಾತೀತವಾಗಿದ್ದಿತು.

೩೧. ಆ ಮಹೋತ್ಸವದಲ್ಲಿ ಗಾಯಕರ ಸುಮಧುರಗಾನವನ್ನು ಕೇಳಿಯೂ, ನರ್ತಕರ ಮನೋಹರನೃತ್ಯವನ್ನು ನೋಡಿಯೂ ಜನರೆಲ್ಲರೂ ಆನಂದಪರವಶರಾದರು.

೩೨-೩೩. ವಿಪ್ರೋತ್ತಮನೇ, ಆ ಉತ್ಸವದಲ್ಲಿ ರಂಭೆ, ಊರ್ವಶಿ, ಮೇನಕೆ, ಘೃತಾಚಿ, ಮೋಹಿನಿ, ರತಿ, ಪ್ರಭಾವತಿ, ವಿಪ್ರಚಿತ್ತಿ, ತಿಲೋತ್ತಮೆ, ಚಂದ್ರಪ್ರಭೆ.

ಚಂದ್ರಪ್ರಭಾ ಸುಪ್ರಭಾ ಚ ರತ್ನಮಾಲಾ ಮದಾಲಸಾ ।
ರೇಣುಕಾ ರಮಣೀ ಬ್ರಹ್ಮನ್ನೇತಾ ಆಜಗ್ಮುರುತ್ಸವೇ ॥ ೩೩ ॥

ತಾಸಾಂ ನೃತ್ಯೇನ ಗೀತೇನ ಸ್ತನಾಸ್ಯಶ್ರೋಣಿದರ್ಶನಾತ್ ।
ರೂಪೇಣ ವಕ್ರದೃಷ್ಟ್ಯಾ ಚ ಮೂರ್ಛಾಂ ಪ್ರಾಪುಶ್ಚ ಮಾನವಾಃ ॥ ೩೪ ॥

ಏತಸ್ಮಿನ್ನಂತರೇ ಶೀಘ್ರಮಾಜಗಾಮ ಹರಿಃ ಸ್ವಯಂ ।
ಗೋಪಾಲ ಬಾಲಕೈಃ ಸಾರ್ಧಂ ಬಲೇನ ಬಲಶಾಲಿನಾ ॥ ೩೫ ॥

ದೃಷ್ಟ್ವಾ ತಂ ಚ ಜನಾಃ ಸರ್ವೇ ಸಂಭ್ರಾಂತಾ ಹರ್ಷವಿಹ್ವಲಾಃ ।
ಉತ್ತಸ್ಥುರಾರಾದ್ಭೀತಾಶ್ಚ ಪುಲಕಾಂಕಿತವಿಗ್ರಹಾಃ ॥ ೩೬ ॥

ಕ್ರೀಡಾಸ್ಥಾನಾತ್ಸಮಾಯಾಂತಂ ಶಾಂತಂ ಸುಂದರವಿಗ್ರಹಂ ।
ವಿನೋದಮುರಲೀವೇಣು ಶೃಂಗಶಬ್ದ ಸಮನ್ವಿತಂ ॥ ೩೭ ॥

ಸುಪ್ರಭೆ, ರತ್ನಮಾಲೆ, ಮದಾಲಸೆ, ಮತ್ತು ರೇಣುಕೆ ಮುಂತಾದ ರಮಣಿಯರು ಬಂದು ಭಾಗವಹಿಸಿದ್ದರು.

೩೪. ನೃತ್ಯಗೀತಗಳಲ್ಲಿ ನಿರತರಾದ ಆ ಸ್ತ್ರೀಯರ ಸುಂದರವಾದ ಸ್ತನ, ಮುಖ ಮತ್ತು ನಿತಂಬಭಾಗಗಳನ್ನೂ ಮನೋಹರವಾದ ರೂಪ ಮತ್ತು ಚಂಚಲ ಕಟಾಕ್ಷವನ್ನೂ ನೋಡಿದ ಮಾನವರು ಮನ್ಮಥ ಬಾಣಕ್ಕೆ ಸಿಲುಕಿ ಮೂರ್ಛೆಗೊಂಡರು.

೩೫. ಇಷ್ಟು ಹೊತ್ತಿಗೆ ಶ್ರೀಕೃಷ್ಣನು ಬಲಿಷ್ಠನಾದ ಬಲರಾಮನೊಡನೆಯೂ ಗೋಪಬಾಲಕರೊಡನೆಯೂ ಜಾಗ್ರತೆ ಅಲ್ಲಿಗೆ ಬಂದನು.

೩೬. ಶ್ರೀಕೃಷ್ಣನು ಬಂದುದನ್ನು ನೋಡಿ ಯಾಗಮಂಡಪದಲ್ಲಿದ್ದವರೆಲ್ಲರೂ ಸಂತೋಷಸಂಭ್ರಮಗಳಿಂದ ಕೂಡಿ ರೋಮಾಂಚಿತ ಶರೀರರಾಗಿ ಭಕ್ತಿವಿನಯದಿಂದ ಪ್ರತ್ಯುತ್ಥಾನಮಾಡಿದರು.

೩೭. ಶಾಂತನೂ ಸುಂದರವಿಗ್ರಹನೂ ಆದ ಆ ಶ್ರೀಕೃಷ್ಣನು ಕೈಯ್ಯಲ್ಲಿ ವಿನೋದಾರ್ಥವಾಗಿ ಕೊಳಲನ್ನು ಹಿಡಿದು ಧ್ವನಿಗೈಯುತ್ತ ಆಗತಾನೇ ಕ್ರೀಡಾಸ್ಥಾನದಿಂದ ಬರುತ್ತಿದ್ದನು.

ಸದ್ರತ್ನ ಸಾರಭೂಷಾಭಿರ್ಭೂಷಿತಂ ಕೌಸ್ತುಭೇನ ಚ ।
ಚಂದನಾಗುರುಪಂಕೇನ ಚರ್ಚಿತಂ ಶ್ಯಾಮವಿಗ್ರಹಂ ॥ ೩೮ ॥

ಶರನ್ಮಧ್ಯಾಹ್ನಪದ್ಮಾಸ್ಯಂ ಪಶ್ಯಂತಂ ರತ್ನದರ್ಪಣೇ ।
ಚಾರುಚಂದನ ಚಂದ್ರೇಣ ಕಸ್ತೂರೀ ಬಿಂದುನಾ ಸಹ ॥ ೩೯ ॥

ಶಶಾಂಕೇನ ಯಥಾಽಽಕಾಶಂ ಭಾಲಮಧ್ಯವಿರಾಜಿತಂ ।
ಮಾಲತೀಮಾಲಯಾ ಶ್ಯಾಮಕಂಠವಕ್ಷಃಸ್ಥಲೋಜ್ಜ್ವಲಂ ॥ ೪೦ ॥

ಬಕಪಂಕ್ತ್ಯಾ ಯಥಾಽಽಕಾಶಂ ಶಾರದೀಯಂ ಸುನಿರ್ಮಲಂ ।
ಚಾರುಣಾ ಪೀತವಸ್ತ್ರೇಣ ಶೋಭಿತಂ ಶ್ಯಾಮವಿಗ್ರಹಂ ॥ ೪೧ ॥

ವಿಭಾಂತಂ ವಿದ್ಯುತಾ ಶಶ್ವನ್ನವೀನಂ ನೀರದಂ ತಥಾ ।
ಕುಂದಪ್ರಸೂನೈರ್ಗುಂಜಾಭಿರ್ಬದ್ಧವಕ್ರಮಚೂಡಕಂ ॥ ೪೨ ॥

---

೩೮. ಸಾರಭೂತವಾದ ರತ್ನಾಭರಣಗಳಿಂದಲೂ, ಶ್ರೇಷ್ಠರತ್ನವೆನಿಸಿದ ಕೌಸ್ತುಭಮಣಿಯಿಂದಲೂ ಭೂಷಿತನಾಗಿ ತನ್ನ ಶ್ಯಾಮಲಶರೀರಕ್ಕೆ ಚಂದ್ರನ ಅಗುರು ಕಸ್ತೂರಿ ಮುಂತಾದ ಸುಗಂಧದ್ರವ್ಯಗಳನ್ನು ಲೇಪಿಸಿಕೊಂಡಿದ್ದನು.

೩೯-೪೧. ಶರದೃತುವಿನ ಮಧ್ಯಾಹ್ನಕಾಲದ ಪದ್ಮದಂತಿರುವ ತನ್ನ ಮುಖವನ್ನು ರತ್ನಗನ್ನಡಿಯಲ್ಲಿ ನೋಡಿಕೊಳ್ಳುತ್ತಿದ್ದನು. ಆಕಾಶವು ಶಶಾಂಕನಿಂದ ಶೋಭಿಸುವಂತೆ ಅವನ ಲಲಾಟವು ಚಂದ್ರಾಕಾರವಾದ ಚಂದನದಿಂದಲೂ ಅದರ ಮಧ್ಯದಲ್ಲಿರುವ ಕಸ್ತೂರಿಯ ಬೊಟ್ಟಿನಿಂದಲೂ ವಿರಾಜಿಸುತ್ತಿತ್ತು. ಶರದೃತುವಿನ ನಿರ್ಮಲಾಕಾಶವು ಬಕಪಕ್ಷಿಗಳ ಸಾಲಿನಿಂದ ಶೋಭಿಸುವಂತೆ ಶ್ಯಾಮಲವಾದ ಶ್ರೀಹರಿಯ ಕಂಠ ಮತ್ತು ವಕ್ಷಃಸ್ಥಲವು ಜಾಜಿಹೂವಮಾಲೆಯಿಂದ ಪರಿಶೋಭಿಸುತ್ತಿತ್ತು. ಸುಂದರವಾದ ಪೀತಾಂಬರದಿಂದ ಅವನ ಶ್ಯಾಮಸುಂದರದೇಹವು ವಿಶೇಷ ಕಾಂತಿಯುತವಾಗಿತ್ತು.

೪೨-೪೫. ಅದನ್ನು ನೋಡಿದರೆ ನೀಲಮೇಘವು ಸೆಳೆಮಿಂಚಿನಿಂದ ಕೂಡಿರುವಂತಿತ್ತು. ಮೊಲ್ಲೆ ಹೂವನ್ನೂ ಗುಲಗಂಜಿಯನ್ನೂ ಪೋಣಿಸಿ ಅದರ ಮಾಲೆಯಿಂದ ಕಟ್ಟಿದ ಶ್ರೀಕೃಷ್ಣನ ವಕ್ರ ಶಿಖೆಯನ್ನು ನೋಡಿದರೆ ಕಾಮನಬಿಲ್ಲಿನಿಂದಲೂ

ಯಥೇಂದ್ರ ಧನುಷಾ ಭಾತಿ ವಿಭಾತಂ ಭಗಣೈರ್ನಭಃ ।
ರತ್ನಕುಂಡಲದೀಪ್ತ್ಯಾ ಚ ಸ್ಮಿತವಕ್ತ್ರಸುಶೋಭಿತಂ ॥ ೪೩ ॥

ಶರತ್ಪ್ರಫುಲ್ಲಪದ್ಮಂ ಚ ದ್ಯುಮಣೇಃ ಕಿರಣೈರ್ಯಥಾ ।
ವಿಪ್ರಕ್ಷತ್ರಿಯವೈಶ್ಯಾಶ್ಚ ಮುನಯೋ ವಲ್ಲವಾ ಮುನೇ ॥ ೪೪ ॥

ಪ್ರಣಮ್ಯ ವಾಸಯಾಮಾಸೂ ರತ್ನಸಿಂಹಾಸನೇ ಶುಭೇ ।
ಉವಾಸ ರತ್ನಪೀಠೇ ಸ ತೇಷಾಂ ಮಧ್ಯೇ ಜಗತ್ಪತಿಃ ॥ ೪೫ ॥

ಯಥಾ ಬಭೌ ಶರಚ್ಚಂದ್ರೋ ಜ್ಯೋತಿಷಾಮಂತರೇ ಚ ಖೇ ।
ಶ್ರುತ್ವಾ ತಮೂಚುಸ್ತೇ ಸರ್ವೇ ಜಗತಾಮೀಶ್ವರಂ ಪರಂ ॥ ೪೬ ॥

ಸ್ವೇಚ್ಛಾಮಯಂ ಗುಣಾತೀತಂ ಜ್ಯೋತೀರೂಪಂ ಸನಾತನಂ ।
ದೃಷ್ಟ್ವಾ ಮಹೋತ್ಸವಂ ಶೀಘ್ರಂ ಉವಾಚ ಪಿತರಂ ಹರಿಃ ॥ ೪೭ ॥

ನಕ್ಷತ್ರಗಳ ಮಾಲೆಯಿಂದಲೂ ಶೋಭಿಸುವ ಆಕಾಶವು ನೆನಪಿಗೆ ಬರುತಿತ್ತು. ಶರದೃತುವಿನ ಅರಳಿದ ತಾವರೆಯು ದಿನಮಣಿಯ ಕಿರಣಗಳಿಂದ ಶೋಭಿಸುವಂತೆ ಅವನ ಹಸನ್ಮುಖವು ರತ್ನಕುಂಡಲದ ಕಾಂತಿಯಿಂದ ಶೋಭಿಸುತ್ತಿತ್ತು ಎಲೈ ನಾರದ ಮುನಿಯೇ, ಆ ಯಾಗಮಂಟಪದಲ್ಲಿದ್ದ ವಿಪ್ರಕ್ಷತ್ರಿಯರೂ ವೈಶ್ಯರೂ ಮುನಿಗಳೂ ಮತ್ತು ಗೋಪಾಲರೂ ಕೂಡ ಶ್ರೀಕೃಷ್ಣನಿಗೆ ನಮಸ್ಕರಿಸಿ, ಶ್ರೇಷ್ಠವಾದ ರತ್ನ ಸಿಂಹಾಸನದಲ್ಲಿ ಕುಳಿತುಕೊಂಡರು. ಜಗತ್ಪತಿಯಾದ ಶ್ರೀಕೃಷ್ಣನೂ ಕೂಡ ಅವರೆಲ್ಲರ ಮಧ್ಯೆ ರತ್ನಪೀಠದಲ್ಲಿ ಕುಳಿತುಕೊಂಡನು.

೪೬-೪೭. ಆಗ ಶ್ರೀಕೃಷ್ಣನನ್ನು ನೋಡಿದರೆ ಅಂತರಿಕ್ಷದಲ್ಲಿ ಜ್ಯೋತಿರ್ಗಣಗಳ ಮಧ್ಯೆ ಶೋಭಿಸುತ್ತಿರುವ ಶರಚ್ಚಂದ್ರನಂತೆ ಕಾಣುತ್ತಿದ್ದನು. ಅವನನ್ನು ನೋಡಿ ಸಭಿಕರೆಲ್ಲರೂ ಸ್ವೇಚ್ಛಾಮಯನೂ, ತ್ರಿಗುಣಾತೀತನೂ, ಜ್ಯೋತಿಃಸ್ವರೂಪನೂ, ಸನಾತನನೂ, ಜಗದೀಶ್ವರನೂ ಆದ ಅವನಿಗೆ ಉತ್ಸವದ ವಿಷಯವನ್ನು ತಿಳಿಸಿದರು. ಆ ಮಹೋತ್ಸವವನ್ನು ನೋಡಿ ನೀತಿಶಾಸ್ತ್ರವಿಶಾರದನಾದ ಶ್ರೀಹರಿಯು ತನ್ನ ತಂದೆಯನ್ನೂ ಸಭಿಕರನ್ನೂ ಕುರಿತು ಸರ್ವಸುಲಭವಲ್ಲದ ನೀತಿಯನ್ನು ಪದೇಶಿಸಿದನು.

ಸರ್ವೇಷಾಂ ದುರ್ಲಭಾಂ ನೀತಿಂ ನೀತಿಶಾಸ್ತ್ರವಿಶಾರದಃ ।

॥ ಶ್ರೀಕೃಷ್ಣ ಉವಾಚ ॥

ಭೋ ಭೋ ವಲ್ಲವರಾಜೇಂದ್ರ ಕಿಂ ಕರೋಷೀಹ ಸುವ್ರತ ॥ ೪೮ ॥

ಆರಾಧ್ಯಃ ಕಶ್ಚ ಕಾ ಪೂಜಾ ಕಿಂ ಫಲಂ ಪೂಜನೇ ಭವೇತ್ ।
ಫಲೇನ ಸಾಧನಂ ಕಿಂ ವಾ ಕಃ ಸಾಧ್ಯಃ ಸಾಧನೇನ ಚ ॥ ೪೯ ॥

ದೇವೇ ರುಷ್ಟೇ ಭವೇತ್ಕಿಂ ವಾ ಪೂಜಾಯಾಃ ಪ್ರತಿಬಂಧಕೇ ।
ತುಷ್ಟೋ ದೇವಃ ಕಿಂ ದದಾತಿ ಫಲಮತ್ರ ಪರತ್ರಕಂ ॥ ೫೦ ॥

ಕಾಚಿದ್ದದಾತ್ಯತ್ರ ಫಲಂ ಪರತ್ರೇಹ ನ ಕಾಚನ ।
ಕಾಚಿಚ್ಚ ನೋಭಯತ್ರಾಪಿ ಚೋಭಯತ್ರಾಪಿ ಕಾಚನ ॥ ೫೧ ॥

ಅವೇದವಿಹಿತಾ ಪೂಜಾ ಸರ್ವಹಾನಿಕರಂಡಿಕಾ ।
ಪೂಜೇಯಮಧುನಾ ವಾ ತೇ ಕಿಮು ವಾ ಪುರುಷಕ್ರಮಾತ್ ॥ ೫೨ ॥

---

೪೮. ಶ್ರೀಕೃಷ್ಣ :—ಎಲೈ ವ್ರತನಿಷ್ಠನೂ, ಗೋಪರೊಡೆಯನೂ ಆದ ನಂದಗೋಪನೇ, ಇಲ್ಲಿ ನೀನು ಏನುಮಾಡುತ್ತಿದ್ದೀಯೆ?

೪೯. ಈ ಉತ್ಸವದ ಆರಾಧ್ಯದೇವತೆ ಯಾರು? ಈ ಪೂಜೆಯ ಹೆಸರೇನು? ಇದಕ್ಕೆ ದೊರಕುವ ಫಲವಾವುದು? ಫಲದಿಂದ ದೊರಕುವ ಸಾಧನವಾವುದು? ಆ ಸಾಧನದಿಂದ ಸಾಧ್ಯವಾಗ ಬೇಕಾದುದೇನು?

೫೦. ಇಂಥ ಪೂಜೆಗಳನ್ನು ಬಿಡುವುದರಿಂದ ಕುಪಿತನಾದ ದೇವನು ಮಾಡುವುದೇನು? ಅಥವಾ ಪೂಜೆಯಿಂದ ತುಷ್ಟನಾದ ದೇವನು ಇಹಪರವಲ್ಲಿ ಕೊಡುವ ಫಲವಾವುದು?

೫೧. ಒಂದು ದೇವತೆಯು ಇಹಲೋಕದಲ್ಲಿ ಫಲವನ್ನು ಕೊಟ್ಟರ ಮತ್ತೊಂದು ದೇವತೆಯು ಪರಲೋಕದಲ್ಲಿ ಫಲವನ್ನು ಕೊಡುವುದು. ಇಹದಲ್ಲಿಲ್ಲ. ಇನ್ನೊಂದು ದೇವತೆಯು ಇಹಪರಗಳೆರಡರಲ್ಲಿಯೂ ಫಲವನ್ನು ಕೊಡುವುದಿಲ್ಲ. ಮತ್ತೊಂದು ದೇವತೆಯು ಇಹಪರಗಳೆರಡರಲ್ಲಿಯೂ ಫಲವನ್ನು ಕೊಡುವುದು.

೫೨. ವೇದವಿಹಿತವಲ್ಲದ ಪೂಜೆಯು ಸಕಲರ ಹಾನಿಗೂ ಮೂಲಕಾರಣವಾಗಿರುವುದು. ನೀನು ಪ್ರಾರಂಭಿಸಿರುವ ಈ ಪೂಜೆಯು ನೂತನವಾದುದೇ? ಅಥವಾ ಪೂರ್ವಪುರುಷರಿಂದ ಕ್ರಮವಾಗಿ ಪ್ರಾಪ್ತವಾದುದೇ?

ದೃಷ್ಟೋ ದೇವಸ್ತ್ವಯಾ ಕಸ್ಮಿನ್ಪೂಜೇಯಂ ಚಾನುಸಾರಿಣೀ ।
ಸಾಕ್ಷಾತ್ಖಾದತಿ ದೇವಸ್ತೇ ಸಾಕ್ಷಾತ್ಕಿಂ ವಾ ನ ಖಾದತಿ ॥ ೫೩ ॥

ಸಾಕ್ಷಾದ್ಭುಂಕ್ತೇ ಚ ಯೋ ದೇವಃ ಸುಪ್ರಶಸ್ತಂ ತದರ್ಚನಂ ।
ಸಾಕ್ಷಾತ್ಖಾದತಿ ನೈವೇದ್ಯಂ ವಿಪ್ರರೂಪೀ ಜನಾರ್ದನಃ ॥ ೫೪ ॥

ಬ್ರಾಹ್ಮಣೇ ಪರಿತುಷ್ಟೇ ಚ ಸಂತುಷ್ಟಾಃ ಸರ್ವದೇವತಾಃ ।
ಕಿಂ ತಸ್ಯ ದೇವಪೂಜಾಯಾಂ ಯೋ ನಿಯುಕ್ತೋ ದ್ವಿಜಾರ್ಚನೇ ॥ ೫೫ ॥

ಪೂಜಿತಾ ಬ್ರಾಹ್ಮಣಾ ಯೇನ ಪೂಜಿತಾಃ ಸರ್ವದೇವತಾ ।
ದೇವಾಯ ದತ್ವಾ ನೈವೇದ್ಯಂ ದ್ವಿಜಾಯ ನ ಪ್ರಯಚ್ಛತಿ ॥ ೫೬ ॥

ಭಸ್ಮೀಭೂತಂ ಚ ನೈವೇದ್ಯಂ ಪೂಜನಂ ನಿಷ್ಫಲಂ ಭವೇತ್ ।
ವಿಪ್ರಾಯ ದೇವನೈವೇದ್ಯದಾನಾದ್ಧ್ರುವಮನಂತಕಂ ॥ ೫೭ ॥

---

೫೩. ಯಾವ ಉತ್ಸವದಲ್ಲಿ ದೇವನು ನಿನ್ನಿಂದ ನೋಡಲ್ಪಟ್ಟಿದ್ದಾನೆ? ಈ ಪೂಜೆಯು ನಿನ್ನ ವಂಶಪರಂಪರೆಯಾಗಿ ಬಂದುದೇ? ನಿನ್ನ ಈ ಉತ್ಸವಾಭಿಮಾನಿ ದೇವತೆಯು ನಾವು ಅರ್ಪಿಸಿದ ನೈವೇದ್ಯವನ್ನು ಸಾಕ್ಷಾತ್ತಾಗಿ ತಿನ್ನುವನೇ? ಅಥವಾ ತಿನ್ನುವುದಿಲ್ಲವೇ?

೫೪. ಯಾವ ದೇವನು ಸಾಕ್ಷಾತ್ತಾಗಿ ನೈವೇದ್ಯವನ್ನು ತಿನ್ನುವನೋ ಆ ದೇವನ ಪೂಜೆಯು ಪ್ರಶಸ್ತವಾದುದು. ವಿಪ್ರರೂಪದಲ್ಲಿರುವ ಜನಾರ್ದನನು ನೈವೇದ್ಯವನ್ನು ಸಾಕ್ಷಾತ್ತಾಗಿ ತಿನ್ನುವನು

೫೫. ಬ್ರಾಹ್ಮಣನು ಸಂತುಷ್ಟನಾದರೆ ಸಕಲ ದೇವತೆಗಳೂ ಸಂತುಷ್ಟರಾವಂತೆ. ನಿಯತವಾಗಿ ದ್ವಿಜಾರ್ಚನೆಮಾಡುವವನಿಗೆ ದೇವಪೂಜೆಯಿಂದ ಆಗಬೇಕಾದುದೇನು?

೫೬–೫೭ ಯಾರಿಂದ ಬ್ರಾಹ್ಮಣರು ಪೂಜಿತರಾಗುವರೋ ಅವರಿಂದ ಸಕಲ ದೇವತೆಗಳೂ ಪೂಜಿತರಾದಂತೆ. ದೇವತೆಗೆ ನೈವೇದ್ಯವನ್ನು ಸಮರ್ಪಿಸಿ ಬ್ರಾಹ್ಮಣನಿಗೆ ನೈವೇದ್ಯವನ್ನಿಕ್ಕದಿದ್ದರೆ ಆ ನೈವೇದ್ಯವು ಭಸ್ಮೀಭೂತವಾಗಿ ಆ ಪೂಜೆಯು ನಿಷ್ಫಲವಾಗುವುದು. ಬ್ರಾಹ್ಮಣನಿಗೆ ದೇವರ ನೈವೇದ್ಯವನ್ನು ಸಮರ್ಪಿಸೋಣದರಿಂದ ಅನಂತಫಲವು ದೊರಕುವುದು.

ತುಷ್ಟೋ ದೇವೋ ವರಂ ದತ್ವಾ ಪ್ರಯಾತಿ ಚ ಸ್ವಮಂದಿರಂ ।
ದತ್ವಾ ದೇವಾಯ ನೈವೇದ್ಯಂ ಮೂಢೋ ಭುಂಕ್ತೇ ಸ್ವಯಂ ಯದಿ ॥ ೫೮ ॥

ದತ್ತಾಪಹಾರೀ ದೇವಸ್ವಂ ಭುಕ್ತ್ವಾ ಚ ನರಕಂ ವ್ರಜೇತ್ ।
ದೇವದತ್ತಂ ನ ಭೋಕ್ತವ್ಯಂ ನೈವೇದ್ಯಂ ಚ ವಿನಾ ಹರೇಃ ॥ ೫೯ ॥

ಪ್ರಶಸ್ತಂ ಸರ್ವದೇವೇಷು ವಿಷ್ಣುನೈವೇದ್ಯಭೋಜನಂ ।
ಅನ್ನಂ ವಿಷ್ಠಾ ಜಲಂ ಮೂತ್ರಂ ಯದ್ವಿಷ್ಣೋರನಿವೇದಿತಂ ॥ ೬೦ ॥

ಸರ್ವೇಷಾಂ ಚ ಕ್ರಮಮಿದಂ ಬ್ರಾಹ್ಮಣಾನಾಂ ವಿಶೇಷತಃ ।
ನ ದತ್ವಾ ವಸ್ತು ದೇವಾಯ ದತ್ತಂ ವಿಪ್ರಾಯ ಚೇತ್ಸುಧೀಃ ॥ ೬೧ ॥

ಭುಕ್ತ್ವಾ ವಿಪ್ರಮುಖೇ ದೇವಾಸ್ತುಷ್ಟಾಃ ಸ್ವರ್ಗಂ ಪ್ರಯಾಂತಿ ಚ ।
ತಸ್ಮಾತ್ಸರ್ವಪ್ರಯತ್ನೇನ ವಿಪ್ರಾಣಾಮರ್ಚನಂ ಕುರು ॥ ೬೨ ॥

೫೮-೫೯. ಅದರಿಂದ ದೇವನು (ಬ್ರಾಹ್ಮಣನು) ಸಂತುಷ್ಟನಾಗಿ ವರವನ್ನು ಕೊಟ್ಟು ತನ್ನ ಮಂದಿರಕ್ಕೆ ಹೋಗುವನು. ದೇವರಿಗೆ ಸಮರ್ಪಿಸಿದ ನೈವೇದ್ಯವನ್ನು ತಾನೇ ತಿನ್ನುವ ಮೂಢನಾದರೋ, ದೇವಸ್ವತ್ತನ್ನು ತಿಂದು ದತ್ತಾಪಹಾರಿಯಾಗಿ ನರಕಕ್ಕೆ ಬೀಳುವನು. ಶ್ರೀಹರಿಯ ನೈವೇದ್ಯವೊಂದನ್ನುಳಿದು, ಇತರ ದೇವತೆಗಳಿಗೆ ಅರ್ಪಿಸಿದ ನೈವೇದ್ಯವನ್ನು ತಾನು ತಿನ್ನಕೂಡದು.

೬೦. ಎಲ್ಲ ದೇವತೆಗಳ ನೈವೇದ್ಯಕ್ಕಿಂತಲೂ, ವಿಷ್ಣುವಿನ ನೈವೇದ್ಯವನ್ನು ಭುಜಿಸುವುದು ಪ್ರಶಸ್ತವಾದುದು. ವಿಷ್ಣುವಿಗೆ ನಿವೇದಿಸದೆ ತಿನ್ನುವ ಅನ್ನವು ಮಲ ಸದೃಶವೂ, ನೀರು ಮೂತ್ರಸದೃಶವೂ ಎನಿಸುವುದು.

೬೧-೬೨. ಇದು ಎಲ್ಲರೂ ಆದರಲ್ಲೂ ಬ್ರಾಹ್ಮಣರು ವಿಶೇಷವಾಗಿ ಅನುಸರಿಸ ಬೇಕಾದ ಕ್ರಮವು. ಬುದ್ಧಿವಂತನಾದವನು ದೇವರಿಗೆ ದ್ರವ್ಯವನ್ನು ಸಮರ್ಪಿಸದೆ. ಬ್ರಾಹ್ಮಣನಿಗೆ ದಾನಮಾಡಿದ್ದೇ ಆದರೆ ದೇವತೆಗಳು ಆ ಬ್ರಾಹ್ಮಣನ ದ್ವಾರಾ ತಾವು ತಿಂದು ತೃಪ್ತರಾಗಿ ಸ್ವರ್ಗಕ್ಕೆ ಹೋಗುವರು. ಆದ್ದರಿಂದ ಸಾಧ್ಯವಾದಷ್ಟು ಪ್ರಯತ್ನ ಮಾಡಿ ಬ್ರಾಹ್ಮಣರ ಪೂಜೆಯನ್ನು ಮಾಡುವುದೊಳಿತು.

ಪ್ರಶಸ್ತಫಲದಾತ್ಸ್ಯಾಣಾಮಿಹ ಲೋಕೇ ಪರತ್ರ ಚ ।
ಜಪಸ್ತಪಶ್ಚ ಪೂಜಾ ವಾ ಯಜ್ಞದಾನಂ ಮಹೋತ್ಸವಃ ॥ ೬೩ ॥

ಸರ್ವೇಷಾಂ ಕರ್ಮಣಾಂ ಸಾರಾ ವಿಪ್ರತುಷ್ಟಿಶ್ಚ ದಕ್ಷಿಣಾ ।
ಬ್ರಾಹ್ಮಣಾನಾಂ ಶರೀರೇಷು ತಿಷ್ಠಂತಿ ಸರ್ವದೇವತಾಃ ॥ ೬೪ ॥

ಪಾದೇಷು ಸರ್ವತೀರ್ಥಾನಿ ಪುಣ್ಯಾನಿ ಪಾದಧೂಲಿಷು ।
ಪಾದೋದಕೇ ಚ ವಿಪ್ರಾಣಾಂ ತೀರ್ಥತೋಯಾನಿ ಸಂತಿ ಚ ॥ ೬೫ ॥

ತತ್ಸ್ಪರ್ಶಾತ್ಸರ್ವತೀರ್ಥೇಷು ಸ್ನಾನಜನ್ಯಫಲಂ ಲಭೇತ್ ।
ನಶ್ಯಂತಿ ಭಕ್ಷಣಾದ್ರೋಗಾ ಭಕ್ತಿಭಾವೇನ ವಲ್ಲವ ॥ ೬೬ ॥

ಸಪ್ತಜನ್ಮಕೃತಾತ್ಪಾಪಾನ್ಮುಚ್ಯಂತೇ ನಾಽತ್ರ ಸಂಶಯಃ ।
ಪಾಪಂ ಪಂಚವಿಧಂ ಕೃತ್ವಾ ಯೋ ವಿಪ್ರಂ ಪ್ರಣಮೇದ್ವ್ರಜೇ ॥ ೬೭ ॥

೬೩-೬೪. ಬ್ರಾಹ್ಮಣರೇ ಇಹಪರಲೋಕಗಳಲ್ಲಿ ಪ್ರಶಸ್ತ ಫಲವನ್ನು ಕೊಡುವವರು. ಜಪತಪಾದಿಗಳೂ, ಪೂಜೆ, ಯಜ್ಞ, ದಾನ ಮುಂತಾದ ಸತ್ಕರ್ಮಗಳೂ ಪೂರ್ಣವಾಗಬೇಕಾದರೆ, ಸಕಲ ಕರ್ಮಗಳ ಸಾರದಂತಿರುವ ಬ್ರಾಹ್ಮಣತೃಪ್ತಿ ಎಂಬ ದಕ್ಷಿಣೆಯಿಂದ ಕೊನೆಗಾಣಿಸಬೇಕು. ಬ್ರಾಹ್ಮಣರ ಶರೀರದಲ್ಲಿ ಸಕಲ ದೇವತೆಗಳೂ ಇದ್ದಾರೆ.

೬೫. ವಿಪ್ರಪಾದದಲ್ಲಿ ಸಕಲ ಕ್ಷೇತ್ರಗಳೂ, ಪಾದಧೂಳಿಯಲ್ಲಿ ಸಕಲ ಪುಣ್ಯಗಳೂ, ಪಾದೋದಕದಲ್ಲಿ ಪುಣ್ಯತೀರ್ಥಗಳೂ ನೆಲೆಸಿರುವುವು.

೬೬. ಸಕಲ ತೀರ್ಥಗಳ ಸ್ನಾನದಿಂದ ದೊರಕುವ ಪುಣ್ಯವು ವಿಪ್ರರ ಸ್ಪರ್ಶ ಮಾತ್ರದಿಂದ ದೊರಕುವುದು. ಅವರನ್ನು ಭಕ್ತಿಭಾವನೆಯಿಂದ ಸೇವೆಮಾಡಿದರೆ ಸಕಲ ರೋಗಗಳೂ ನಾಶವಾಗುವುವು.

೬೭. ಯಾವನು ಗೋಕುಲದಲ್ಲಿ ಬ್ರಾಹ್ಮಣನಿಗೆ ಸಾಷ್ಟಾಂಗವೆರಗುವನೋ ಅವನು ಸಪ್ತಜನ್ಮಗಳಲ್ಲಿ ಮಾಡಿದ ಪಾಪದಿಂದ ಮುಕ್ತನಾಗುವುದಲ್ಲದೆ ಪಂಚಮಹಾಪಾತಕಗಳಿಂದಲೂ, ಮುಕ್ತನಾಗುವುದರಲ್ಲಿ ಸಂಶಯವಿಲ್ಲ

ಸ ಸ್ನಾತಃ ಸರ್ವತೀರ್ಥೇಷು ಸರ್ವಪಾಪಾತ್ಪ್ರಮುಚ್ಯತೇ ।
ಬ್ರಾಹ್ಮಣಸ್ಪರ್ಶಮಾತ್ರೇಣ ಮುಕ್ತೋ ಭವತಿ ಪಾತಕೀ || ೬೮ ||

ದರ್ಶನಾನ್ಮುಚ್ಯತೇ ಪಾಪಾದಿತಿ ವೇದೇ ನಿರೂಪಿತಂ ।
ಅಪ್ರಾಜ್ಞೋವಾಽಥ ಪ್ರಾಜ್ಞೋ ವಾ ಬ್ರಾಹ್ಮಣೋ ವಿಷ್ಣುವಿಗ್ರಹಃ || ೬೯ ||

ಪ್ರಿಯಾ ಪ್ರಾಣಾಧಿಕಾ ವಿಷ್ಣೋರ್ಯೇ ವಿಪ್ರಾಃ ಹರಿಸೇವಿನಃ ।
ದ್ವಿಜಾನಾಂ ಹರಿಭಕ್ತಾನಾಂ ಪ್ರಭಾವೋ ದುರ್ಲಭಃ ಶ್ರುತೌ || ೭೦ ||

ಯೇಷಾಂ ಪಾದಾಬ್ಜರಜಸಾ ಸದ್ಯಃ ಪೂತಾ ವಸುಂಧರಾ ।
ತೇಷಾಂ ಚ ಪಾದಚಿಹ್ನಂ ಯತ್ತೀರ್ಥಂ ತತ್ಪರಿಕೀರ್ತಿತಂ || ೭೧ ||

---

೬೮ ಪಾಪಿಯಾದವನು ಬ್ರಾಹ್ಮಣನನ್ನು ಸ್ಪರ್ಶಮಾಡಿದ ಮಾತ್ರದಿಂದಲೇ ಸಕಲ ತೀರ್ಥಸ್ನಾನದ ಫಲವನ್ನೂ ಹೊಂದಿ ಸಕಲ ಪಾಪಗಳಿಂದಲೂ ಪರಿಹೃತನಾಗಿ ಮುಕ್ತಿಹೊಂದುವನು.

೬೯. ಬ್ರಾಹ್ಮಣರ ದರ್ಶನದಿಂದಲೇ ಪಾಪವು ಪರಿಹಾರವಾಗುವುದೆಂದು ವೇದೋಕ್ತವಾಗಿದೆ. ಮೂಢನಾಗಲೀ ಪ್ರಾಜ್ಞನಾಗಲೀ ಬ್ರಾಹ್ಮಣನು ವಿಷ್ಣುವಿಗೆ ಸಮಾನನು.

೭೦. ವಿಷ್ಣುಭಕ್ತರಾದ ಬ್ರಾಹ್ಮಣರು ಶ್ರೀಹರಿಗೆ ಪ್ರೀತಿಪಾತ್ರರೂ, ಪ್ರಾಣಾಧಿಕರೂ ಆಗಿದ್ದಾರೆ. ಹರಿಭಕ್ತರಾದ ಬ್ರಾಹ್ಮಣರ ಜನ್ಮವು ದುರ್ಲಭವೆಂದು ಪ್ರತ್ಯಕ್ಷವಾಗಿದೆ.

೭೧. ಯಾವ ಬ್ರಾಹ್ಮಣರ ಪಾದಕಮಲ ಧೂಳಿಯಿಂದ ವಸುಂಧರೆಯು ಕೂಡಲೇ ಪವಿತ್ರಳಾಗುವಳೋ, ಅಂಥವರ ಪಾದಚಿಹ್ನೆಯುಳ್ಳ ಭೂಮಿಯೇ ಪುಣ್ಯತಮವಾದ ಕ್ಷೇತ್ರವೆನಿಸುವುದು

ತೇಷಾಂ ಚ ಸ್ಪರ್ಶಮಾತ್ರೇಣ ತೀರ್ಥಪಾಪಂ ಪ್ರಣಶ್ಯತಿ ।
ಆಲಿಂಗನಾತ್ಸದಾಲಾಪಾತ್ತೇಷಾಮುಚ್ಛಿಷ್ಟಭೋಜನಾತ್ ॥ ೭೨ ॥

ದರ್ಶನಾತ್ಸ್ಪರ್ಶನಾಚ್ಚೈವ ಸರ್ವಪಾಪಾತ್ಪ್ರಮುಚ್ಯತೇ ।
ಭ್ರಮಣೇ ಸರ್ವತೀರ್ಥಾನಾಂ ಯತ್ಪುಣ್ಯಂ ಸ್ನಾನತೋ ಭವೇತ್ ॥ ೭೩ ॥

ಹರಿದಾಸಸ್ಯ ವಿಪ್ರಸ್ಯ ತತ್ಪುಣ್ಯಂ ದರ್ಶನಾಲ್ಲಭೇತ್ ।
ಯೇ ವಿಪ್ರಾ ಹರಯೇ ದತ್ವಾ ನಿತ್ಯಮನ್ನಂ ಚ ಭುಂಜತೇ ॥ ೭೪ ॥

ಉಚ್ಛಿಷ್ಟಭೋಜನಾತ್ತೇಷಾಂ ಹರೇರ್ದಾಸ್ಯಂ ಲಭೇನ್ನರಃ ।
ನ ದತ್ವಾ ಹರಯೇ ಭಕ್ತ್ಯಾ ಭುಂಜತೇಚೇದ್ಭ್ರಮಾದಪಿ ॥ ೭೫ ॥

ಪುರೀಷಸದೃಶಂ ವಸ್ತು ಜಲಂ ಮೂತ್ರಸಮಂ ಭವೇತ್ ।
ಶೂದ್ರಶ್ಚೇದ್ಧರಿಭಕ್ತಶ್ಚ ನೈವೇದ್ಯಭೋಜನೋತ್ಸುಕಃ ॥ ೭೬ ॥

ಆಮಾನ್ನಂ ಹರಯೇ ದತ್ವಾ ಕೃತ್ವಾ ಪಾಕಂ ಚ ಖಾದತಿ ।
ವಿಪ್ರಕ್ಷತ್ರಿಯವೈಶ್ಯಾನಾಂ ಶಾಲಗ್ರಾಮಶಿಲಾರ್ಚನೇ ॥ ೭೭ ॥

೭೨-೭೯. ಅವರನ್ನು ಸ್ಪರ್ಶಮಾಡಿದ ಮಾತ್ರದಿಂದ ಪುಣ್ಯತೀರ್ಥಗಳಲ್ಲಿ ಮಾಡಿದ ಪಾಪವೂ ಪರಿಹೃತವಾಗುವುದು ಬ್ರಾಹ್ಮಣರ ಆಲಿಂಗನೆಯಿಂದಲೂ, ಅವರೊಡನೆ ಮಾತನಾಡುವುದರಿಂದಲೂ, ಅವರ ಎಂಜಲನ್ನು ತಿನ್ನುವುದರಿಂದಲೂ, ದರ್ಶನಸ್ಪರ್ಶನಗಳಿಂದಲೂ ಮನುಜನು ಸಕಲ ಪಾಪಗಳಿಂದಲೂ ಮುಕ್ತನಾಗುತ್ತಾನೆ. ಸರ್ವತೀರ್ಥಗಳಲ್ಲೂ, ಯಾತ್ರೆಮಾಡಿ ಸ್ನಾನಮಾಡುವುದರಿಂದ ಯಾವ ಫಲವು ದೊರಕುವುದೋ ಆ ಪುಣ್ಯಫಲವು ಹರಿಸೇವಕನಾದ ವಿಪ್ರನ ದರ್ಶನಮಾತ್ರದಿಂದಲೇ ಲಭಿಸುವುದು. ಯಾವ ಬ್ರಾಹ್ಮಣರು ನಿತ್ಯವೂ ಶ್ರೀಹರಿಗೆ ಸಮರ್ಪಿಸಿದ ನೈವೇದ್ಯವನ್ನು ಭುಂಜಿಸುವರೋ ಅವರ ಎಂಜಲನ್ನು ತಿನ್ನುವುದರಿಂದ ನಿಶ್ಚಯವಾಗಿಯೂ, ಮನುಜನಿಗೆ ಹರಿದಾಸ್ಯವು ಲಭಿಸುವುದು. ಶ್ರೀಹರಿಗೆ ಭಕ್ತಿಯಿಂದ ನಿವೇದಿಸದೆ ಭ್ರಮಪ್ರಮಾದಾದಿಗಳಿಂದ ತಿಂದರೂ ಕೂಡ ಆ ವಸ್ತುವು ಮಲಸದೃಶವಾಗುವುದಲ್ಲದೆ, ಕುಡಿಯುವ ನೀರು ಮೂತ್ರಸದೃಶವಾಗುವುದು. ಶೂದ್ರನಾದರೂ ಹರಿಭಕ್ತನಾಗಿ ವಿಷ್ಣುನೈವೇದ್ಯವನ್ನು ತಿನ್ನಲು ಬಯಸಿದರೆ ಶ್ರೀಹರಿಗೆ ಅಪಕ್ವಾನ್ನವನ್ನು (ಅಕ್ಕಿಯನ್ನು) ನಿವೇದಿಸಿ ಅನಂತರ ಪಾಕಮಾಡಿ ಊಟಮಾಡುವನು. ವಿಪ್ರರು

ಅಧಿಕಾರೋ ನ ಶೂದ್ರಾಣಾಂ ಹರೇರಪ್ಯರ್ಚನೇ ತಥಾ ।
ದ್ರವ್ಯಾಣ್ಯೇತಾನಿ ಗೋಪೇಂದ್ರ ವಿಪ್ರೇಭ್ಯಶ್ಚೇನ್ನ ದಾಸ್ಯತಿ ॥ ೭೮ ॥

ಭಸ್ಮೀಭೂತಾನಿ ಸರ್ವಾಣಿ ಭವಿಷ್ಯಂತಿ ನ ಸಂಶಯಃ ।
ಅನ್ನಂ ಚ ಸರ್ವಜೀವೇಭ್ಯೋ ಪುಣ್ಯಾರ್ಥಂ ದಾತುಮರ್ಹತಿ ॥ ೭೯ ॥

ದತ್ವಾ ವಿಶಿಷ್ಟಜೀವೇಭ್ಯೋ ವಿಶಿಷ್ಟಂ ಫಲಮಾಪ್ನುಯಾತ್ ।
ಅತೋ ದತ್ವಾ ಮನುಷ್ಯೇಭ್ಯೋ ಲಭತೇಽಷ್ಟಗುಣಂ ಫಲಂ ॥ ೮೦ ॥

ಶೂದ್ರಾಣಾಂ ದ್ವಿಗುಣಂ ಪುಣ್ಯಂ ವೈಶ್ಯೇಭ್ಯೋಽನ್ನಂ ಪ್ರದಾಯ ಚ ।
ದತ್ವಾಽನ್ನಂ ಕ್ಷತ್ರಿಯೇಭ್ಯೋಽಪಿ ವೈಶ್ಯಾನಾಂ ದ್ವಿಗುಣಂ ಭವೇತ್ ॥ ೮೧ ॥

ಕ್ಷತ್ರಿಯರು ಮತ್ತು ವೈಶ್ಯರಿಗೆ ಮಾತ್ರ ಸಾಲಿಗ್ರಾಮಶಿಲೆಯನ್ನು ಅರ್ಚಿಸುವ ಅಧಿಕಾರ ಉಂಟೇ ಹೊರತು ಶೂದ್ರರಿಗೆ ಸಾಲಿಗ್ರಾಮಾರ್ಚನೆಯಲ್ಲಿಯೂ, ಶ್ರೀಹರಿಯ ಅರ್ಚನೆಯಲ್ಲೂ ಅಧಿಕಾರವಿಲ್ಲ. ಆದಕಾರಣ ಎಲೈ ನಂದಗೋಪನೇ, ನೀನು ಈ ದ್ರವ್ಯಗಳನ್ನು ವಿಪ್ರರಿಗೆ ದಾನಮಾಡದಿದ್ದರೆ ಇವೆಲ್ಲವೂ ಭಸ್ಮೀಭೂತವಾಗುವುದರಲ್ಲಿ ಸಂದೇಹವಿಲ್ಲ. ಆದ್ದರಿಂದ ಇಲ್ಲಿರುವ ಜೀವಿಗಳಿಗೆಲ್ಲ ಅನ್ನದಾನಮಾಡಿ ಪುಣ್ಯವನ್ನು ಸಂಪಾದಿಸಿಕೋ.

೮೦ ಸಕಲಜೀವಿಗಳಿಗೂ ದಾನಮಾಡುವುದರಿಂದ ವಿಶಿಷ್ಟ ಫಲವನ್ನು ಪಡೆಯಬಹುದು. ಮನುಷ್ಯಸಾಮಾನ್ಯರಿಗೆ ದಾನಮಾಡುವುದರಿಂದ ಅದರ ಎಂಟರಷ್ಟು ಫಲವನ್ನು ಹೊಂದಬಹುದು.

೮೧. ವೈಶ್ಯರಿಗೆ ಅನ್ನದಾನ ಮಾಡುವುದರಿಂದ ಶೂದ್ರರಿಗೆ ಅನ್ನದಾನ ಮಾಡಿದ ಎರಡರಷ್ಟು ಪುಣ್ಯವು ಲಭಿಸುವುದು. ಕ್ಷತ್ರಿಯರಿಗೆ ಅನ್ನದಾನ ಮಾಡುವುದರಿಂದ ಅದರ ಎರಡರಷ್ಟು ಪುಣ್ಯವೂ, ಬ್ರಾಹ್ಮಣರಿಗೆ ಅನ್ನದಾನ ಮಾಡುವುದರಿಂದ ಕ್ಷತ್ರಿಯರಿಗೆ ಅನ್ನದಾನ ಮಾಡಿದುದರ ನೂರರಷ್ಟು ಪುಣ್ಯವೂ ಲಭಿಸುವುದು.

ವಿಪ್ರಾಣಾಂ ಚ ಶತಗುಣಂ ಶಾಸ್ತ್ರಜ್ಞೇ ಬ್ರಾಹ್ಮಣೇ ಫಲಂ ।
ಶಾಸ್ತ್ರಜ್ಞಾನಾಂ ಶತಗುಣಂ ಭಕ್ತೇ ವಿಪ್ರೇ ಲಭೇದ್ಧ್ರುವಂ ॥ ೮೨ ॥

ಸ ಚಾನ್ನಂ ಹರಯೇ ದತ್ವಾ ಭುಂಕ್ತೇ ಭಕ್ತ್ಯಾ ಚ ಸಾದರಂ ।
ವಿಷ್ಣವೇ ವಿಪ್ರಭಕ್ತಾಯ ದತ್ವಾ ದಾತುಶ್ಚ ಯತ್ಫಲಂ ॥ ೮೩ ॥

ತತ್ಫಲಂ ಲಭತೇ ನೂನಂ ಭಕ್ತಬ್ರಾಹ್ಮಣಭೋಜನೇ ।
ಭಕ್ತೇ ತುಷ್ಟೇ ಹರಿಸ್ತುಷ್ಟೋ ಹರೌ ತುಷ್ಟೇ ಚ ದೇವತಾಃ ॥ ೮೪ ॥

ಭವಂತಿ ಸಿಕ್ತಾಃ ಶಾಖಾಶ್ಚ ಯಥಾ ಮೂಲನಿಷೇಚನಾತ್ ।
ದ್ರವ್ಯಾಣ್ಯೇತಾನಿ ದೇವಾಯ ಯದ್ಯೇಕಸ್ಮೈ ಪ್ರಯಚ್ಛತಿ ॥ ೮೫ ॥

ಸರ್ವೇ ದೇವಾಶ್ಚ ರುಷ್ಟಾಶ್ಚೇದ್ದೇವೈಃ ಕಃ ಕಿಂ ಕರಿಷ್ಯತಿ ।
ಅಥವಾಽರ್ಧಂ ಚ ವಸ್ತೂನಾಂ ದೇಹಿ ಗೋವರ್ಧನಾಯ ಚ ॥ ೮೬ ॥

---

೮೨. ಶಾಸ್ತ್ರಜ್ಞನಾದ ಬ್ರಾಹ್ಮಣನಿಗೆ ಅನ್ನದಾನಮಾಡುವುದರಿಂದ ಬ್ರಾಹ್ಮಣ ಸಾಮಾನ್ಯನಿಗೆ ಅನ್ನದಾನಮಾಡಿದುದರ ಶತಗುಣಫಲವೂ, ವಿಷ್ಣುಭಕ್ತನಾದ ವಿಪ್ರನಿಗೆ ಅನ್ನದಾನಮಾಡುವುದರಿಂದ ಅದರ ನೂರರಷ್ಟು ಫಲವೂ, ನಿಶ್ಚಯವಾಗಿಯೂ ಲಭಿಸುವುದು.

೮೩-೮೪. ವಿಷ್ಣುಭಕ್ತನು ಶ್ರೀಹರಿಗೆ ನಿವೇದಿಸಿದ ಅನ್ನವನ್ನೇ ಶ್ರದ್ಧಾಭಕ್ತಿಯಿಂದ ಊಟಮಾಡುವನು ಭಕ್ತಪರಾಧೀನನಾದ ವಿಷ್ಣುವಿಗೆ ಅನ್ನವನ್ನು ನಿವೇದಿಸುವುದರಿಂದ ಯಾವ ಸತ್ಫಲವು ದೊರೆಯುವುದೋ ಅದೇ ಫಲವು ವಿಷ್ಣುಭಕ್ತನಾದ ಬ್ರಾಹ್ಮಣನಿಗೆ ಭೋಜನಮಾಡಿಸುವುದರಿಂದ ನಿಶ್ಚಿತವಾಗಿಯೂ ದೊರೆಯುವುದು. ಹರಿಭಕ್ತನು ತೃಪ್ತನಾದರೆ ದೇವತೆಗಳೆಲ್ಲ ತೃಪ್ತರಾಗುವರು.

೮೫-೮೬. ಬೇರಿಗೆ ನೀರೆರೆಯುವುದರಿಂದ ಶಾಖೆಗಳೆಲ್ಲ ತೃಪ್ತಿಪಡುತ್ತವೆ. ಅದರಂತೆ ಸರ್ವಕಾರಣನಾದ ಶ್ರೀಹರಿಯು ತೃಪ್ತನಾದರೆ ಸಕಲ ದೇವತೆಗಳೂ ತೃಪ್ತರಾಗುವರು ಅದನ್ನು ಬಿಟ್ಟು ಇಲ್ಲಿರುವ ದ್ರವ್ಯಗಳನ್ನೆಲ್ಲ ನೀನು ಒಬ್ಬದೇವನಿಗೇ (ಇಂದ್ರನಿಗೆ) ಸಮರ್ಪಿಸುವುದಾದರೆ ಇತರ ದೇವತೆಗಳೆಲ್ಲ ಕುಪಿತರಾಗುವರು. ದೇವತೆಗಳು ಕುಪಿತರಾದರೆ ಯಾರು ಏನುತಾನೆ ಮಾಡಬಲ್ಲರು. ಆದಕಾರಣ ಈ ವಸ್ತುಗಳಲ್ಲಿ ಅರ್ಧವನ್ನಾದರೂ ನಮ್ಮ ಕುಲದೇವನಾದ ಗೋವರ್ಧನನಿಗೆ (ಪರ್ವತಕ್ಕೆ) ಸಮರ್ಪಿಸು

ಗಾ ವರ್ಧಯತಿ ನಿತ್ಯಂ ಯಸ್ತೇನ ಗೋವರ್ಧನಃ ಸ್ಮೃತಃ ।
ಗೋವರ್ಧನಸಮಸ್ತಾತ ಪುಣ್ಯವಾನ್ನ ಮಹೀತಲೇ ॥ ೮೭ ॥

ನಿತ್ಯಂ ದದಾತಿ ಗೋಭ್ಯೋಯೋ ನವೀನಾನಿ ತೃಣಾನಿ ಚ ।
ತೀರ್ಥಸ್ಥಾನೇಷು ಯತ್ಪುಣ್ಯಂ ಯತ್ಪುಣ್ಯಂ ವಿಪ್ರಭೋಜನೇ ॥ ೮೮ ॥

ಸರ್ವವ್ರತೋಪವಾಸೇಷು ಸರ್ವೇಷ್ವೇವ ತಪಃಸು ಚ ।
ಯತ್ಪುಣ್ಯಂ ಚ ಮಹಾದಾನೇ ಯತ್ಪುಣ್ಯಂ ಹರಿಸೇವನೇ ॥ ೮೯ ॥

ಭುವಃ ಪರ್ಯಟನೇ ಯತ್ತು ಸತ್ಯವಾಕ್ಯೇಷು ಯದ್ಭವೇತ್ ।
ಯತ್ಪುಣ್ಯಂ ಸರ್ವಯಜ್ಞೇಷು ದೀಕ್ಷಾಯಾಂ ಲಭತೇ ನರಃ ॥ ೯೦ ॥

ತತ್ಪುಣ್ಯಂ ಲಭತೇ ಪ್ರಾಜ್ಞೋ ಗೋಭ್ಯೋ ದತ್ವಾ ತೃಣಾನಿ ಚ ।
ಭುಕ್ತವಂತೀಂ ತೃಣಂ ಯಶ್ಚ ಗಾಂ ವಾರಯತಿ ಕಾಮತಃ ॥ ೯೧ ॥

---

೮೭. ಯಾರು ಹುಲ್ಲನ್ನು ಕೊಟ್ಟು ನಿತ್ಯವೂ ಗೋವುಗಳನ್ನು ವೃದ್ಧಿಪಡಿಸುವನೋ ಅವನು ಗೋವರ್ಧನನೆನಿಸುವನು. ಎಲೈ ತಂದೆಯೇ ಗೋವರ್ಧನನಂತಹ ಪುಣ್ಯವಂತನು ಈ ಭೂಲೋಕದಲ್ಲಿಯೇ ಇಲ್ಲ.

೮೮-೮೯. ಆ ಗೋವರ್ಧನನು ಪ್ರತಿನಿತ್ಯವೂ ಗೋವುಗಳಿಗೆ ಹೊಸಹೊಸ ಹುಲ್ಲನ್ನು ಕೊಡುವನು. ತೀರ್ಥಸ್ನಾನಮಾಡುವುದರಿಂದಲೂ, ಬ್ರಾಹ್ಮಣಭೋಜನ ಮಾಡಿಸುವುದರಿಂದಲೂ, ಸಕಲವ್ರತೋಪವಾಸಾದಿಗಳನ್ನು ಆಚರಿಸುವುದರಿಂದಲೂ, ವಿವಿಧ ತಪಸ್ಸುಗಳನ್ನು ಕೈಗೊಳ್ಳುವುದರಿಂದಲೂ, ಮಹಾದಾನಮಾಡುವುದರಿಂದಲೂ, ಶ್ರೀಹರಿಯ ಸೇವೆಯನ್ನು ಮಾಡುವುದರಿಂದಲೂ, ಯಾವ ಪುಣ್ಯವು ಲಭಿಸುವುದೋ ಆ ಪುಣ್ಯವು ಗೋವುಗಳಿಗೆ ಹುಲ್ಲನ್ನು ಕೊಟ್ಟ ಮಾತ್ರದಿಂದಲೇ ಲಭಿಸುವುದು.

೯೦-೯೨. ಭೂಪ್ರದಕ್ಷಿಣೆ ಮಾಡುವುದರಿಂದಲೂ, ಸಕಲವೇದವಾಕ್ಯಗಳನ್ನು ಪಠನಮಾಡುವುದರಿಂದಲೂ, ಸಕಲ ಯಜ್ಞದೀಕ್ಷೆಯನ್ನು ಕೈಗೊಳ್ಳುವುದರಿಂದಲೂ, ಮಾನವನಿಗೆ ಯಾವ ಪುಣ್ಯವು ಲಭಿಸುವುದೋ, ಆ ಪುಣ್ಯವನ್ನು ಪ್ರಾಜ್ಞನಾದವನು

ಬ್ರಹ್ಮಹತ್ಯಾ ಭವೇತ್ತಸ್ಯ ಪ್ರಾಯಶ್ಚಿತ್ತಾದ್ವಿಶುಧ್ಯತಿ ।
ಸರ್ವೇ ದೇವಾ ಗವಾಮಂಗೇ ತೀರ್ಥಾನಿ ತತ್ಪದೇಷು ಚ ॥ ೯೨ ॥

ತದ್ಗುಹ್ಯೇಷು ಸ್ವಯಂ ಲಕ್ಷ್ಮೀಸ್ತಿಷ್ಠತ್ಯೇವ ಸದಾ ಪಿತಃ ।
ಗೋಷ್ಪದಾಕ್ತಮೃದಾ ಯೋ ಹಿ ತಿಲಕಂ ಕುರುತೇ ನರಃ ॥ ೯೩ ॥

ತೀರ್ಥಸ್ನಾತೋ ಭವೇತ್ಸದ್ಯೋ ಜಯಸ್ತಸ್ಯ ಪದೇ ಪದೇ ।
ಗಾವಸ್ತಿಷ್ಠಂತಿ ಯತ್ರೈವ ತತ್ತೀರ್ಥಂ ಪರಿಕೀರ್ತಿತಂ ॥ ೯೪ ॥

ಪ್ರಾಣಾಂಸ್ತ್ಯಕ್ತ್ವಾ ನರಸ್ತತ್ರ ಸದ್ಯೋ ಮುಕ್ತೋ ಭವೇದ್ಧ್ರುವಂ ।
ಬ್ರಾಹ್ಮಣಾನಾಂ ಗವಾಮಂಗಂ ಯೋ ಹಂತಿ ಮಾನವಾಧಮಃ ॥ ೯೫ ॥

ಗೋವುಗಳಿಗೆ ಹುಲ್ಲನ್ನು ಕೊಡುವುದರಿಂದ ಪಡೆಯುವನು. ಯಾರು ಹುಲ್ಲು ತಿನ್ನುತ್ತಿರುವ ಹಸುವನ್ನು ಉದ್ದೇಶಪೂರ್ವಕವಾಗಿ ತಡೆದು ಓಡಿಸುವರೋ ಅವರು ಬ್ರಹ್ಮಹತ್ಯಾ ದೋಷಕ್ಕೆ ಗುರಿಯಾಗಿ ಪ್ರಾಯಶ್ಚಿತ್ತದಿಂದ ಶುದ್ಧರಾಗುವರು. ಗೋವುಗಳ ಅವಯವಗಳಲ್ಲಿ ಸಕಲದೇವತೆಗಳೂ, ಗೋಪಾದದಲ್ಲಿ ಸಕಲ ಪುಣ್ಯತೀರ್ಥಗಳೂ ಇರುವುವು.

೯೩-೯೪. ಎಲೈ ತಂದೆಯೇ, ಗೋವುಗಳ ಗುಹ್ಯಪ್ರದೇಶದಲ್ಲಿ ಲಕ್ಷ್ಮಿಯು ಸರ್ವದಾ ನೆಲೆಸಿರುವಳು. ಗೋಪಾದಮೃತ್ತಿಕೆಯಿಂದ ತಿಲಕಧಾರಣೆಮಾಡುವ ಮನುಜನು ಪುಣ್ಯತೀರ್ಥಗಳಲ್ಲಿ ಸ್ನಾನಮಾಡಿದ ಫಲವನ್ನು ಹೊಂದುವನು. ಅವನು ಪ್ರಾರಂಭಿಸಿದ ಕಾರ್ಯದಲ್ಲೆಲ್ಲ ಜಯಶೀಲನಾಗುವನು. ಎಲ್ಲಿ ಗೋವುಗಳಿರುವುವೋ ಅದೇ ಪುಣ್ಯತೀರ್ಥವೆನಿಸುವುದು.

೯೫-೯೬. ಗೋವುಗಳಿರುವ ಜಾಗದಲ್ಲಿ (ಕೊಟ್ಟಿಗೆ) ಪ್ರಾಣತ್ಯಾಗಮಾಡುವ ಮನುಜನು ಕೂಡಲೆ ಮುಕ್ತನಾಗುವುದರಲ್ಲಿ ಸಂಶಯವಿಲ್ಲ. ಬ್ರಾಹ್ಮಣರ ಮತ್ತು ಗೋವುಗಳ ಅಂಗಹಾನಿಮಾಡುವ ಮನುಜನು ಬ್ರಹ್ಮಹತ್ಯೆಗೆ ಸಮಾನವಾದ ಪಾಪಕ್ಕೆ

ಬ್ರಹ್ಮಹತ್ಯಾಸಮಂ ಪಾಪಂ ಭವೇತ್ತಸ್ಯ ನ ಸಂಶಯಃ ।
ನಾರಾಯಣಾಂಶಾನ್ವಿಪ್ರಾಂಶ್ಚ ಗಾಶ್ಚ ಯೇ ಘ್ನಂತಿ ಮಾನವಾಃ ॥ ೯೬ ॥

ಕಾಲಸೂತ್ರಂ ಚ ತೇ ಯಾಂತಿ ಯಾವಚ್ಚಂದ್ರದಿವಾಕರೌ ।
ಇತ್ಯೇವಮುಕ್ತ್ವಾ ಶ್ರೀಕೃಷ್ಣೋ ವಿರರಾಮ ಚ ನಾರದ ॥ ೯೭ ॥

ಆನಂದಯುಕ್ತೋ ನಂದಶ್ಚ ತಮುವಾಚ ಸ್ಮಿತಾನನಃ ।
॥ ನಂದ ಉವಾಚ ॥
ಪೌರ್ವಾಪರೀಯಂ ಪೂಜೇತಿ ಮಹೇಂದ್ರಸ್ಯ ಮಹಾತ್ಮನಃ ॥ ೯೮ ॥

ಸುವೃಷ್ಟಿಸಾಧನೀ ಸಾಧ್ಯಂ ಸರ್ವಸಸ್ಯಂಮನೋಹರಂ ।
ಸಸ್ಯಾನಿ ಪ್ರಾಣಿನಾಂ ಪ್ರಾಣಾಃ ಸಸ್ಯಾಜ್ಜೀವಂತಿ ಜೀವಿನಃ ॥ ೯೯ ॥

ಪೂಜಯಂತಿ ವ್ರಜಸ್ಥಾಶ್ಚ ಮಹೇಂದ್ರಂ ಪುರುಷಕ್ರಮಾತ್ ।
ಮಹೋತ್ಸವಂ ವತ್ಸರಾಂತೇ ನಿರ್ವಿಘ್ನಾಯ ಶಿವಾಯ ಚ ॥ ೧೦೦ ॥

ಗುರಿಯಾಗುವನು. ನಾರಾಯಣಾಂಶಸಂಭೂತರಾದ ಬ್ರಾಹ್ಮಣರನ್ನೂ ಮತ್ತು ಗೋವುಗಳನ್ನೂ ಸಂಹರಿಸುವ ಮನುಜರು ಚಂದ್ರಸೂರ್ಯರಿರುವವರೆಗೆ ಕಾಲಸೂತ್ರವೆಂಬ ನರಕದಲ್ಲಿ ನರಳುವರು. ಎಲೈ ನಾರದನೇ, ಈ ರೀತಿ ಶ್ರೀಕೃಷ್ಣನು ಹೇಳಿ ಸುಮ್ಮನಾದನು.

೯೮. ಆಗ ನಂದಗೋಪನು ಆನಂದಪರವಶನಾಗಿ ನಗುಮುಖದಿಂದ ಅವನಿಗೆ ಹೀಗೆ ಹೇಳಿದನು. ಎಲೈ ಶ್ರೀ ಕೃಷ್ಣನೇ, ಮಹಾತ್ಮನಾದ ಮಹೇಂದ್ರನ ಈ ಪೂಜೆಯು ವಂಶಪರಂಪರೆಯಾಗಿ ಬಂದುದು

೯೯. ಈ ಪೂಜೆಯು ಸುವೃಷ್ಟಿಗೆ ಸಾಧಕವಾದುದು. ಸುವೃಷ್ಟಿಯಾದರೆ ಸಕಲ ಸಸ್ಯಗಳೂ ಮನೋಹರವಾಗಿ ಬೆಳೆಯುವುವು. ಸಸ್ಯಗಳು ಪ್ರಾಣಿಗಳ ಪ್ರಾಣಸ್ವರೂಪವಾಗಿರುವುವು ಜೀವಿಗಳೆಲ್ಲ ಸಸ್ಯದಿಂದಲೇ ಜೀವಿಸುವುವು.

೧೦೦. ಈ ಗೋಕುಲದಲ್ಲಿರುವವರೆಲ್ಲರೂ ವಂಶಪರಂಪರೆಯಾಗಿ ಮಹೇಂದ್ರನನ್ನು ಪೂಜಿಸುವರು. ಪ್ರತಿವರ್ಷದಕೊನೆಯಲ್ಲೂ ವಿಘ್ನಗಳು ಪರಿಹೃತವಾಗಿ ಮಂಗಳಗಳುಂಟಾಗಲು ಈ ಮಹೋತ್ಸವವನ್ನಾಚರಿಸುವರು

ಇತ್ಯೇವಂ ವಚನಂ ಶ್ರುತ್ವಾ ಬಲೇನ ಸಹ ಮಾಧವಃ ।
ಉಚ್ಚೈರ್ಜಹಾಸ ಸ ಪುನರುವಾಚ ಪಿತರಂ ಮುದಾ ॥ ೧೦೧ ॥

॥ ಶ್ರೀಕೃಷ್ಣ ಉವಾಚ ॥

ಅಹೋ ಶ್ರುತಂ ವಿಚಿತ್ರಂ ತೇ ವಚನಂ ಪರಮಾದ್ಭುತಂ ।
ಉಪಹಾಸ್ಯಂ ಲೋಕಶಾಸ್ತ್ರವೇದೇಷ್ವೇವ ವಿಗರ್ಹಿತಂ ॥ ೧೦೨ ॥

ನಿರೂಪಣಂ ನಾಸ್ತಿ ಕುತ್ರ ಶಕ್ರಾದ್ವೃಷ್ಟಿಃ ಪ್ರಜಾಯತೇ ।
ಅಪೂರ್ವಂ ನೀತಿವಚನಂ ಶ್ರುತಮದ್ಯ ಮುಖಾತ್ತವ ॥ ೧೦೩ ॥

ಶೃಣು ನೀತಿಂ ಶ್ರುತಿಮತಾಂ ಹೇ ತಾತ ನಾನೃತಂ ವದೇಃ ।
ವಚನಂ ಸಾಮವೇದೋಕ್ತಂ ಸಂತೋ ಜಾನಂತಿ ಸರ್ವತಃ ॥ ೧೦೪ ॥

---

೧೦೧. ಈ ರೀತಿ ನಂದಗೋಪನಾಡಿದ ಮಾತನ್ನು ಕೇಳಿ ಶ್ರೀಕೃಷ್ಣನು ಬಲರಾಮನೊಡನೆ ಗಟ್ಟಿಯಾಗಿ ನಕ್ಕು ಪುನಃ ತಂದೆಯನ್ನು ಕುರಿತು ಈ ಮುಂದಿನ ಮಾತುಗಳನ್ನು ಹೇಳಿದನು.

೧೦೨. ಶ್ರೀಕೃಷ್ಣ :—ಅಹೋ ಏನಾಶ್ಚರ್ಯ! ವಿಚಿತ್ರವೂ, ವೇದದೂಷಿತವೂ, ಲೋಕಶಾಸ್ತ್ರವಿಗರ್ಹಿತವೂ, ಹಾಸ್ಯಾಸ್ಪದವೂ ಆದ ನಿನ್ನ ಮಾತು ಅತ್ಯದ್ಭುತವಾಗಿದೆ.

೧೦೩. ಇಂದ್ರನಿಂದ ಮಳೆಯುಂಟಾಗುವುದೆಂದು ಎಲ್ಲಿಯೂ ನಿರೂಪಿತವಾಗಿಲ್ಲ. ಇಂದು ನಿನ್ನ ಬಾಯಿಂದ ಅಪೂರ್ವವಾದ ನೀತಿವಚನವನ್ನು ನಾನು ಕೇಳಿದಂತಾಯಿತು.

೧೦೪. ಎಲೈ ತಂದೆಯೇ, ಅನೀತಿವಚನವನ್ನಾಡಬೇಡ. ಶ್ರುತಿಸಮ್ಮತವಾದ ನೀತಿಯ ವಚನಗಳನ್ನು ಕೇಳುವವನಾಗು. ನಾನು ಹೇಳುವ ಸಾಮವೇದೋಕ್ತವಾದ ನೀತಿಯನ್ನು ಸತ್ಪುರುಷರೆಲ್ಲರೂ ಬಲ್ಲರು.

ಪ್ರಶ್ನಂ ಕುರುಷ್ವ ಮಂತ್ರಾಂಶ್ಚ ವಿಬುಧಾನಪಿ ಸಂಸದಿ ।
ಬ್ರುವಂತು ಪರಮಾರ್ಥಂಶ್ಚ ಕಿಮಿಂದ್ರಾದ್ವೃಷ್ಟಿರೇವ ಚ　　॥ ೧೦೫ ॥

ಸೂರ್ಯಾದ್ಧಿ ಜಾಯತೇ ತೋಯಂ ತೋಯಾತ್ಸಸ್ಯಾನಿ ಶಾಖಿನಃ ।
ತೇಭ್ಯೋಽನ್ನಾನಿ ಫಲಾನ್ಯೇವ ತೇಭ್ಯೋ ಜೀವಂತಿ ಜೀವಿನಃ　　॥ ೧೦೬ ॥

ಸೂರ್ಯಗ್ರಸ್ತಂ ಚ ನೀರಂ ಚ ಕಾಲೇ ತಸ್ಮಾತ್ಸಮುದ್ಭವಃ ।
ಸೂರ್ಯೋ ಮೇಘಾದಯಃ ಸರ್ವೇ ವಿಧಾತ್ರಾ ತೇ ನಿರೂಪಿತಾಃ ॥ ೧೦೭ ॥

ಯತ್ರಾಬ್ದೇ ಯೋ ಜಲಧರೋ ಗಜಶ್ಚ ಸಾಗರೋ ಮತಃ ।
ಸಸ್ಯಾಧಿಪೋ ನೃಪೋ ಮಂತ್ರೀ ವಿಧಾತ್ರಾ ತೇ ನಿರೂಪಿತಾಃ　　॥ ೧೦೮ ॥

---

೧೦೫. ಪಂಡಿತರ ಸಭೆಯನ್ನು ಸೇರಿಸಿ 'ವೇದಮಂತ್ರಗಳಲ್ಲಿ ಇಂದ್ರನಿಂದ ಮಳೆಯಾಗುವುದೆಂದು ಹೇಳಿದೆಯೇ?' ಎಂದು ಪ್ರಶ್ನೆಮಾಡು. ಆ ಪಂಡಿತರು ಪರಮಾರ್ಥವನ್ನು ಹೇಳಲಿ.

೧೦೬. ಸೂರ್ಯನಿಂದ ಮಳೆಯುಂಟಾಗುವುದೆಂದೂ, ಮಳೆಯ ನೀರಿಂದ ಸಸ್ಯಗಳೂ ಮರಗಿಡಗಳೂ ಬೆಳೆಯುವುದೆಂದೂ, ಸಸ್ಯಗಳಿಂದ ಆಹಾರಧಾನ್ಯಗಳೂ ಮರಗಳಿಂದ ಹಣ್ಣುಗಳೂ ಉಂಟಾಗಿ ಅವುಗಳನ್ನು ತಿನ್ನುವುದರಿಂದ ಪ್ರಾಣಿಗಳು ಜೀವಿಸುವುವೆಂದೂ ಎಲ್ಲರಿಗೂ ಗೊತ್ತೇ ಇದೆ.

೧೦೭. ಸೂರ್ಯಕಿರಣಗಳಿಂದ ಸೆಳೆಯಲ್ಪಟ್ಟ ನೀರು ಕಾಲಾನುಗುಣವಾಗಿ ಅವುಗಳಿಂದ ಹೊರಸೂಸುತ್ತದೆ. ಸೂರ್ಯ, ಮೇಘ ಮುಂತಾದುವೆಲ್ಲವೂ ಬ್ರಹ್ಮನಿಂದ ಸೃಷ್ಟವಾದವು ಎಂಬುದು ನಿನಗೇ ಗೊತ್ತಿದೆ.

೧೦೮. ಆಯಾ ವರ್ಷಕ್ಕೆ ಅನುಗುಣವಾದ, ಮೇಘ, ಆನೆ, ಸಮುದ್ರ, ಸಸ್ಯಾಧಿಪ, ರಾಜ ಮತ್ತು ಮಂತ್ರಿ ಮುಂತಾದವರನ್ನು ಬ್ರಹ್ಮನೇ ನಿಯಮಿಸುವನೆಂಬುದೂ ನಿನಗೇ ತಿಳಿದಿದೆ.

ಜಲಾದಿಕಾನಾಂ ಸಸ್ಯಾನಾಂ ತೃಣಾನಾಂ ಚ ನಿರೂಪಿತಂ ।
ಅಬ್ದೇಽಬ್ದೇಽಸ್ತ್ಯೇವತತ್ಸರ್ವಂ ಕಲ್ಪೇ ಕಲ್ಪೇ ಯುಗೇ ಯುಗೇ ॥ ೧೦೯ ॥

ಹಸ್ತೀ ಸಮುದ್ರಾದಾದಾಯ ಕರೇಣ ಜಲಮೀಪ್ಸಿತಂ ।
ದದ್ಯಾದ್ಘನಾಯ ತದ್ದದ್ಯಾದ್ವಾತೇನ ಪ್ರೇರಿತೋ ಘನಃ ॥ ೧೧೦ ॥

ಸ್ಥಾನೇ ಸ್ಥಾನೇ ಪೃಥಿವ್ಯಾಂ ಚ ಕಾಲೇ ಕಾಲೇ ಯಥೋಚಿತಂ ।
ಈಶೇಚ್ಛಯಾऽऽವಿರ್ಭೂತಂ ಚ ನ ಭವೇತ್ಪ್ರತಿಬಂಧಕಂ ॥ ೧೧೧ ॥

ಭೂತಂ ಭವ್ಯಂ ಭವಿಷ್ಯಚ್ಚ ಮಹತ್ಕ್ಷುದ್ರಂ ಚ ಮಧ್ಯಮಂ ।
ಧಾತ್ರಾ ನಿರೂಪಿತಂ ಕರ್ಮ ಕೇನ ತಾತ ನಿವಾರ್ಯತೇ ॥ ೧೧೨ ॥

---

೧೦೯. ನೀರು, ಸಸ್ಯ, ತೃಣ ಮುಂತಾದುವುಗಳಿಗೆ ನಿರೂಪಿತವಾಗಿರುವ ಅವಸ್ಥೆಯು ಪ್ರತಿವರ್ಷದಲ್ಲೂ, ಪ್ರತಿಕಲ್ಪದಲ್ಲೂ, ಪ್ರತಿಯುಗದಲ್ಲೂ ತಪ್ಪದೆ ಇದ್ದೇ ಇರುತ್ತದೆ.

೧೧೦. ಆನೆಯು (ದಿಗ್ಗಜವು) ತನ್ನ ಸೊಂಡಿಲಿನಿಂದ ತನಗೆಬೇಕಾದಷ್ಟು ನೀರನ್ನು ಸಮುದ್ರದಿಂದ ತೆಗೆದುಕೊಂಡು ಮೇಘಕ್ಕೆ ಕೊಡುವುದು. ಅನಂತರ ಆ ಮೇಘವು ವಾಯುವಿನಿಂದ ಪ್ರೇರಿತವಾಗಿ ಆ ನೀರನ್ನು ಹೊರಸೂಸುವುದು.

೧೧೧. ಪೃಥಿವಿಯ ಆಯಾಯ ಸ್ಥಾನಗಳಲ್ಲಿ ಯಥೋಚಿತವಾದ ಕಾಲದಲ್ಲಿ ಈಶ್ವರೇಚ್ಛೆಯಿಂದ ಆವಿರ್ಭವಿಸುವ ವೃಷ್ಟ್ಯಾದಿಗಳಿಗೆ ಎಂದೆಂದಿಗೂ ಪ್ರತಿಬಂಧಕ ವುಂಟಾಗುವುದಿಲ್ಲ.

೧೧೨. ಎಲೈ ತಂದೆಯೇ, ಬ್ರಹ್ಮನ ನಿಯಮಕ್ಕೊಳಗಾದ ಭೂತ, ವರ್ತಮಾನ ಮತ್ತು ಭವಿಷ್ಯತ್ತುಗಳನ್ನೂ ಮಹತ್, ಮಧ್ಯಮ ಮತ್ತು ಕ್ಷುದ್ರವಾದ ಕರ್ಮವನ್ನೂ ನಿವಾರಿಸಲು ಯಾರಿಂದ ಸಾಧ್ಯ ?

ಜಗಚ್ಚರಾಚರಂ ಸರ್ವಂ ಕೃತಂ ತೇನೇಶ್ವರಾಜ್ಞಯಾ ।
ಆದೌ ವಿನಿರ್ಮಿತಂ ಭಕ್ಷ್ಯಂ ಪಶ್ಚಾಜ್ಜೀವ ಇತಿ ಸ್ಮೃತಃ ॥ ೧೧೩ ॥

ಅಭ್ಯಾಸಾತ್ಸ ಸ್ವಭಾವೋ ಹಿ ಸ್ವಭಾವಾತ್ಕರ್ಮ ಏವ ಚ ।
ಜಾಯತೇ ಕರ್ಮಣಾಂ ಭೋಗೋ ಜೀವಿನಾಂ ಸುಖದುಃಖಯೋಃ ॥ ೧೧೪ ॥

ಯಾತನಾ ಜನ್ಮಮರಣರೋಗಶೋಕಭಯಾನಿ ಚ ।
ಸಮುತ್ಪತ್ತಿರ್ವಿಪದ್ವಿದ್ಯಾ ಕವಿತಾ ವಾ ಯಶೋಽಯಶಃ ॥ ೧೧೫ ॥

ಪುಣ್ಯಂ ಚ ಸ್ವರ್ಗವಾಸಶ್ಚ ಪಾಪಂ ನರಕಸಂಸ್ಥಿತಿಃ ।
ಭುಕ್ತಿರ್ಮುಕ್ತಿರ್ಹರೇರ್ದಾಸ್ಯಂ ಕರ್ಮಣಾ ಘಟತೇ ನೃಣಾಂ ॥ ೧೧೬ ॥

ಸರ್ವೇಷಾಂ ಜನಕೋ ಹೀಶಶ್ಚಾಭ್ಯಾಸಃ ಶೀಲಕರ್ಮಣಾಂ ।
ಧಾತುಶ್ಚ ಫಲದಾತಾ ಚ ಸರ್ವಂ ತಸ್ಯೇಚ್ಛಯಾ ಭವೇತ್ ॥ ೧೧೭ ॥

---

೧೧೩. ಆ ಸರ್ವೇಶ್ವರನ ಆಜ್ಞೆಯಿಂದ ಚರಾಚರವಾದ ಜಗತ್ತು ಸೃಷ್ಟವಾಗಿದೆ. ಮೊದಲು ಆಹಾರವು ಸೃಷ್ಟವಾಗಿ ಅನಂತರ ಜೀವಸೃಷ್ಟಿಯಾಯಿತೆಂದು ಶಾಸ್ತ್ರವು ಹೇಳುತ್ತದೆ.

೧೧೪. ಅಭ್ಯಾಸದಿಂದ ಸ್ವಭಾವವೂ, ಸ್ವಭಾವದಿಂದ ಕರ್ಮವೂ, ಜನ್ಯವಾಗುತ್ತದೆ. ಜೀವಿಗಳಿಗೆ ಕರ್ಮಾನುಗುಣವಾಗಿ ಸುಖದುಃಖಗಳ ಭೋಗವುಂಟಾಗುತ್ತದೆ.

೧೧೫. ಜನನ, ಮರಣ, ರೋಗ, ಶೋಕ, ಭಯ, ಯಾತನೆ ಮತ್ತು ವಿಪತ್ತುಗಳೂ ವಿದ್ಯೆ, ಕವಿತಾಶಕ್ತಿ ಯಶಸ್ಸು ಮತ್ತು ಅಪಯಶಸ್ಸುಗಳೂ ಕರ್ಮಾನುಗುಣವಾಗಿಯೇ ಲಭಿಸುವುವು.

೧೧೬. ಸ್ವರ್ಗವಾಸವೆಂಬುದೇ ಪುಣ್ಯಫಲವು. ನರಕಯಾತನೆಯೇ ಪಾಪದ ಫಲವು. ಮನುಜರಿಗೆ ಭುಕ್ತಿಮುಕ್ತಿಗಳೂ ಶ್ರೀಹರಿಯ ದಾಸ್ಯವೂ ಸ್ವಕರ್ಮದಿಂದಲೇ ದೊರಕುವುವು.

೧೧೭. ಎಲ್ಲರಿಗೂ ಜನಕನಾದ ಸರ್ವೇಶ್ವರನು ಅಭ್ಯಾಸ, ಶೀಲ, ಕರ್ಮಗಳಿಗೂ, ಅವುಗಳನ್ನು ಕೊಡುವ ಬ್ರಹ್ಮನಿಗೂ ಫಲದಾಯಕನಾಗಿದ್ದಾನೆ. ಆವನ ಇಚ್ಛೆಯಂತೆಯೇ ಸಕಲವೂ ನಡೆಯುವುದು.

ವಿನಿರ್ಮಿತೋ ವಿರಾಡ್ಯೇನ ತತ್ತ್ವಾನಿ ಪ್ರಕೃತಿರ್ಜಗತ್ ।
ಕೂರ್ಮಶ್ಚ ಶೇಷಧರಿಣೀ ಚಾಬ್ರಹ್ಮಸ್ತಂಬ ಏವ ಚ ॥ ೧೧೮ ॥

ಯಸ್ಯಾಜ್ಞಯಾ ಮರುತ್ಕೂರ್ಮಂ ಧತ್ತೇ ಶೇಷಂ ಬಿಭರ್ತಿ ಸಃ ।
ಶೇಷೋ ವಸುಂಧರಾಂ ಮೂರ್ಧ್ನಾ ಸಾ ಚ ಸರ್ವಂ ಚರಾಚರಂ ॥ ೧೧೯ ॥

ಯಸ್ಯಾಜ್ಞಯಾ ಸದಾ ವಾತಿ ಜಗತ್ಪ್ರಾಣೋ ಜಗತ್ತ್ರಯೇ ।
ತಪತಿ ಭ್ರಮಣಂ ಕೃತ್ವಾ ಭೂಗೋಲಂ ಸುಪ್ರಭಾಕರಃ ॥ ೧೨೦ ॥

ದಹತ್ಯಗ್ನಿಃ ಸಂಚರತೇ ಮೃತ್ಯುಶ್ಚ ಸರ್ವಜಂತುಷು ।
ಉತ್ಪತ್ತಿಃ ಶಾಖಿನಾಂ ಕಾಲೇ ಪುಷ್ಪಾಣಿ ಚ ಫಲಾನಿ ಚ ॥ ೧೨೧ ॥

---

೧೧೮. ಅವನಿಂದಲೇ ವಿರಾಟ್ಪುರುಷನೂ, ಸೃಷ್ಟಿತತ್ತ್ವಗಳೂ, ಪ್ರಕೃತಿಯೂ ಚರಾಚರಾತ್ಮಕವಾದ ಜಗತ್ತೂ, ಕೂರ್ಮ, ಆದಿಶೇಷ, ಧರಣಿ ಮುಂತಾದವೂ, ಬ್ರಹ್ಮನಿಂದ ಸ್ತಂಬ (ತೃಣ)ಪರ್ಯಂತವಾದ ನಿಖಿಲ ಪ್ರಪಂಚವೂ ನಿರ್ಮಿತವಾಗಿದೆ.

೧೧೯. ಆ ಸರ್ವೇಶ್ವರನ ಆಜ್ಞೆಯಿಂದಲೇ ವಾಯುದೇವನು ಕೂರ್ಮನನ್ನೂ ಕೂರ್ಮನು ಆದಿಶೇಷನನ್ನೂ ಆದಿಶೇಷನು ತನ್ನ ತಲೆಯಮೇಲೆ ಭೂಮಿಯನ್ನೂ ಭೂಮಿಯು ಚರಾಚರಾತ್ಮಕವಾದ ಪ್ರಪಂಚವನ್ನೂ ಧರಿಸಿರುವುದು.

೧೨೦. ಜಗತ್ಪ್ರಾಣಸ್ವರೂಪನಾದ ವಾಯುವು ಆ ಪರಮಾತ್ಮನ ಅಪ್ಪಣೆಯಂತೆ ಮೂರುಲೋಕವನ್ನೂ ವ್ಯಾಪಿಸಿಕೊಂಡು ರಕ್ಷಿಸುತ್ತಿರುವನು. ಸೂರ್ಯದೇವನೂ ಕೂಡ ಭೂಗೋಲವನ್ನು ಸುತ್ತುತ್ತ ತನ್ನ ದಿವ್ಯತೇಜಸ್ಸಿನಿಂದ ತಪಿಸುವನು.

೧೨೧. ಅಗ್ನಿಯು ಸುಡುವುದೂ, ಮೃತ್ಯುವು ಸರ್ವಜೀವಿಗಳಲ್ಲಿ ಸಂಚರಿಸುವುದೂ, ಮರಗಳಲ್ಲಿ ಕಾಲಾನುಗುಣವಾಗಿ ಪುಷ್ಪಫಲಗಳು ಉತ್ಪತ್ತಿಯಾಗುವುದೂ ಆ ಪರಮಾತ್ಮನ ನಿಯಮಾನುಸಾರವಾಗಿಯೇ.

ಸ್ವೇ ಸ್ವೇ ಸ್ಥಾನೇ ಸಮುದ್ರಾಶ್ಚ ತೂರ್ಣಂ ಮಜ್ಜಂತ್ಯಥೋಽಧುನಾ ।
ತಮೀಶಂ ಭಜ ಭಕ್ತ್ಯಾ ಚ ಶಕ್ರಃ ಕಿಂ ಕರ್ತುಮೀಶ್ವರಃ ॥ ೧೨೨ ॥

ಬ್ರಹ್ಮಾಂಡಂ ಚ ಕತಿವಿಧಮಾವಿರ್ಭೂತಂ ತಿರೋಹಿತಂ ।
ವಿಧಯಶ್ಚ ಕತಿವಿಧಾ ಯಸ್ಯ ಭ್ರೂಭಂಗಲೀಲಯಾ ॥ ೧೨೩ ॥

ಮೃತ್ಯೋರ್ಮೃತ್ಯುಃ ಕಾಲಕಾಲೋ ವಿಧಾತುರ್ವಿಧಿರೇವ ಸಃ ।
ಭಜ ತಂ ಶರಣಂ ತಾತ ಸ ತೇ ರಕ್ಷಾಂ ಕರಿಷ್ಯತಿ ॥ ೧೨೪ ॥

ಅಹೋಽಷ್ಟಾವಿಂಶದಿಂದ್ರಾಣಾಂ ಪತನೇ ಯದಹರ್ನಿಶಂ ।
ವಿಧಾತುರೇವ ಜಗತಾಮಷ್ಟೋತ್ತರಶತಾಧಿಕಃ ॥ ೧೨೫ ॥

---

೧೨೨ ಸಮುದ್ರಗಳೂ ಕೂಡ ತಮ್ಮ ತಮ್ಮ ಸ್ಥಾನವಲ್ಲಿದ್ದು ಈಗ ಜಾಗ್ರತೆ ಪಾತಾಳಲೋಕದಲ್ಲಿ ಸೇರುತ್ತಿರುವುದೂ ಯಾವ ಪರಮಾತ್ಮನ ನಿಯಮಾನುಗುಣವಾಗಿಯೋ ಆ ಸರ್ವೇಶ್ವರನನ್ನು ಭಜಿಸು ಇಂದ್ರನು ಏನುತಾನೇಮಾಡಿಯಾನು ?

೧೨೩. ಯಾವ ಸರ್ವೇಶ್ವರನ ಲೀಲಾರೂಪವಾದ ಭ್ರೂಚಾಲನೆ ಮಾತ್ರದಿಂದ ಎಷ್ಟೋ ವಿಧವಾದ ಬ್ರಹ್ಮಾಂಡಗಳು ಆವಿರ್ಭಾವ ತಿರೋಭಾವವನ್ನೈದಿದವು. ಅಸಂಖ್ಯಬ್ರಹ್ಮರ ಸೃಷ್ಟಿಲಯಗಳಾದವು.

೧೨೪. ಎಲೈ ತಂದೆಯೇ, ನೀನು ಮೃತ್ಯುವಿಗೆ ಮೃತ್ಯುವೂ, ಕಾಲಕಾಲನೂ, ಬ್ರಹ್ಮನಿಗೆ ಬ್ರಹ್ಮನೂ ಆದ ಆ ಸರ್ವೇಶ್ವರನನ್ನು ಭಕ್ತಿಯಿಂದ ಭಜಿಸಿ ಶರಣಹೊಂದು. ಶರಣಾಗತರಕ್ಷಕನಾದ ಅವನು ನಿನ್ನನ್ನು ರಕ್ಷಿಸುವನು.

೧೨೫. ಇಪ್ಪತ್ತೆಂಟು ದೇವೇಂದ್ರರ ಹುಟ್ಟುಸಾವುಗಳಾದರೆ ಯಾರಿಗೆ ಒಂದು ಹಗಲೂ ಮತ್ತು ಒಂದು ರಾತ್ರಿಯೂ ಆಗುವುದೋ ಅಂಥ ಜಗತ್ಸೃಷ್ಟಿಕರ್ತನಾದ ಬ್ರಹ್ಮನ ಆಯುಃಪರಿಮಿತಿಯು ಆ ಅಹೋರಾತ್ರಿ ಪರಿಮಾಣದ ದಿವ್ಯ ನೂರೆಂಟು ವರ್ಷಗಳೆಂದು ತಿಳಿದವರು ಹೇಳಿರುವರು.

ನಿಮೇಷಾದ್ಯಸ್ಯ ಪತನಂ ನಿರ್ಗುಣಸ್ಯಾತ್ಮನಃ ಪ್ರಭೋಃ ।
ಏವಂ ಭೂತೇ ತಿಷ್ಠತೀಶೇ ಶಕ್ರಪೂಜಾ ವಿಡಂಬನಂ ॥ ೧೨೬ ॥

ಇತ್ಯೇವಮುಕ್ತ್ವಾ ಶ್ರೀಕೃಷ್ಣೋ ವಿರರಾಮ ಚ ನಾರದ ।
ಪ್ರಶಶಂಸುಶ್ಚ ಮುನಯೋ ಭಗವಂತಂ ಸಭಾಸದಃ ॥ ೧೨೭ ॥

ನಂದಃ ಸಪುಲಕೋ ಹೃಷ್ಟಃ ಸಭಾಯಾಂ ಸಾಶ್ರುಲೋಚನಃ ।
ಆನಂದಯುಕ್ತಾ ಮನುಜಾ ಯದಿ ಪುತ್ರೈಃ ಪರಾಜಿತಾಃ ॥ ೧೨೮ ॥

ಶ್ರೀಕೃಷ್ಣಾಜ್ಞಾಂ ಸಮಾಜ್ಞಾಯ ಚಕಾರ ಸ್ವಸ್ತಿವಾಚನಂ ।
ಕ್ರಮೇಣ ವರಣಂ ತತ್ರ ಸರ್ವೇಷಾಂ ಚ ಚಕಾರ ಹ ॥ ೧೨೯ ॥

---

೧೨೬. ಅಂಥ ಬ್ರಹ್ಮನ ಜೀವಿತಕಾಲವೂ ಕೂಡ ನಿರ್ಗುಣನೂ ಸ್ವೇಚ್ಛಾಮಾತ್ರ ಪ್ರಭುವೂ ಆದ ಪರಮಾತ್ಮನ ನಿಮೇಷ(ರೆಪ್ಪೆಹೊಡೆಯುವ)ಕಾಲಕ್ಕೆ ಸಮನೆನಿಸುವುದು. ಇಂಥ ಸರ್ವಾಂತರ್ಯಾಮಿಯಾದ ಪರಮಾತ್ಮನಿರುವಾಗ ಇಂದ್ರಪೂಜೆಮಾಡುವುದೆಂಬುದು ಹಾಸ್ಯಾಸ್ಪದವೆನಿಸುವುದಿಲ್ಲವೆ ?

೧೨೭. ಎಲೈ ನಾರದನೇ, ಶ್ರೀಕೃಷ್ಣನು ಇಂತು ನುಡಿದು ಸುಮ್ಮನಾಗಲು ಆ ಸಭೆಯಲ್ಲಿದ್ದ ಮುನಿಮಾನವರೆಲ್ಲರೂ ಭಗವಂತನಾದ ಶ್ರೀಕೃಷ್ಣನನ್ನು ಪ್ರಶಂಸೆ ಮಾಡಿದರು.

೧೨೮. ನಂದಗೋಪನೂ ಕೂಡ ಸಂತೋಷದಿಂದ ರೋಮಾಂಚಿತ ಶರೀರನಾಗಿ ಸಭೆಯಲ್ಲಿ ಆನಂದಬಾಷ್ಪವನ್ನು ಸುರಿಸಿದನು. ಮನುಜರಿಗೆ ತಮ್ಮ ಮಕ್ಕಳಿಂದ ಪರಾಜಯವಾದರೆ ಆನಂದವುಂಟಾಗುವುದು ಸಹಜ.

೧೨೯. ಅನಂತರ ಶ್ರೀಕೃಷ್ಣನ ಆಜ್ಞೆಯಂತೆ ಗೋವರ್ಧನಪರ್ವತದ ಪೂಜೆಗೆ ನಂದನು ಸ್ವಸ್ತಿವಾಚನಮಾಡಿಸಿದನು. ಕ್ರಮವಾಗಿ ಅಲ್ಲಿ ನೆರೆದಿದ್ದವರೆಲ್ಲರೂ ಪೂಜೆಯನ್ನು ಮಾಡಿ ವರವನ್ನು ಬೇಡಿದರು.

ಪರ್ವತಸ್ಯ ಮುನೀಂದ್ರಾಣಾಂ ಚಕಾರ ಪೂಜನಂ ತದಾ ।
ಬುಧಾನಾಂ ಬ್ರಾಹ್ಮಣಾನಾಂ ಚ ಗವಾಂ ವಹ್ನೇಶ್ಚ ಸಾದರಂ ॥ ೧೩೦ ॥

ತತ್ರ ಪೂಜಾ ಸಮಾಪ್ತೌ ಚ ಕೃತೌ ಚ ಸುಮಹೋತ್ಸವೇ ।
ನಾನಾಪ್ರಕಾರವಾದ್ಯಾನಾಂ ಬಭೂವ ಶಬ್ದ ಉಲ್ಬಣಃ ॥ ೧೩೧ ॥

ಜಯಶಬ್ದಃ ಶಂಖಶಬ್ದೋ ಹರಿಶಬ್ದೋ ಬಭೂವ ಹ ।
ವೇದಮಂಗಲಕಾಂಡಂ ಚ ಪಪಾಠ ಮುನಿಪುಂಗವಃ ॥ ೧೩೨ ॥

ಬಂದಿನಾಂ ಪ್ರವರೋ ಡಿಂಡೀ ಕಂಸಸ್ಯ ಸಚಿವಃ ಪ್ರಿಯಃ ।
ಉಚ್ಚೈಃ ಪಪಾಠ ಪುರತೋ ಮಂಗಲಂ ಮಂಗಲಾಷ್ಟಕಂ ॥ ೧೩೩ ॥

ಕೃಷ್ಣಃ ಶೈಲಾಂತಿಕಂ ಗತ್ವಾ ಭಿನ್ನಾಂ ಮೂರ್ತಿಂ ವಿಧಾಯ ಚ ।
ವಸ್ತು ಖಾದಾಮಿ ಶೈಲೋಽಸ್ಮಿ ವರಂ ವೃಣ್ವಿತ್ಯುವಾಚ ಹ ॥ ೧೩೪ ॥

---

೧೩೦. ಸಂತೋಷದಿಂದ ಗೋವರ್ಧನನ ಪೂಜೆಮಾಡಿದನಂತರ ಆ ಸಭೆಯಲ್ಲಿದ್ದ ಮುನೀಂದ್ರರಿಗೂ ಪಂಡಿತರಿಗೂ ಮತ್ತು ಬ್ರಾಹ್ಮಣರಿಗೂ, ಗೋವುಗಳಿಗೂ ಮತ್ತು ಅಗ್ನಿಗೂ ಆದರದಿಂದ ಪೂಜೆಮಾಡಿದನು.

೧೩೧. ಪೂಜೆಯು ಮುಗಿದನಂತರ ಆ ಮಹೋತ್ಸವದ ಸಮಾಪ್ತಿಸೂಚಕವಾಗಿ ನಾನಾವಿಧವಾದ ಮಂಗಳವ ದ್ಯಗಳು ಗಗನವನ್ನು ಭೇದಿಸುವಂತೆ ಗಟ್ಟಿಯಾಗಿ ಮೊಳಗಿದವು.

೧೩೨. ಕೆಲವೆಡೆ ಜಯ ಜಯಕಾರವೂ, ಕೆಲವೆಡೆ ಶಂಖಧ್ವನಿಯೂ ಮತ್ತೆ ಕೆಲವೆಡೆ 'ಹರಿ ಹರಿ' ಎಂಬ ನಾಮೋಚ್ಚಾರಣೆಯೂ ಕೇಳಿಸುತ್ತಿದ್ದಿತು. ಆಗ ಮುನಿಶ್ರೇಷ್ಠರು ವೇದದ ಮಂಗಳಕಾಂಡವನ್ನು ಪಠನಮಾಡಿದರು.

೧೩೩. ಹೊಗಳುಭಂಟರಲ್ಲಿ ಶ್ರೇಷ್ಠನೂ ಕಂಸನ ಪ್ರಿಯಸಚಿವನೂ ಆದ ಡಿಂಡಿ ಎಂಬಾತನು ಮಂಗಳಾಷ್ಟಕವನ್ನು ಗಟ್ಟಿಯಾಗಿ ಓದಿದನು.

೧೩೪. ಶ್ರೀಕೃಷ್ಣನು ಗೋವರ್ಧನಗಿರಿಯ ಹತ್ತಿರಹೋಗಿ ತಾನೇ ಆಕಾರಭೇದವನ್ನು ಕಲ್ಪಿಸಿಕೊಂಡು 'ನಾನೇ ಗೋವರ್ಧನನು, ನೀವು ನಿವೇದಿಸಿದ ವಸ್ತುಗಳನ್ನು ತಿನ್ನುವೆನು, ನಿಮಗೆ ಬೇಕಾದ ವರವನ್ನು ಬೇಡಿಕೊಳ್ಳಿ' ಎಂದು ಹೇಳಿದನು.

ಉವಾಚ ನಂದಂ ಶ್ರೀಕೃಷ್ಣಃ ಪಶ್ಯ ಶೈಲಂ ಪಿತಃ ಪುರಃ ।
ವರಂ ಪ್ರಾರ್ಥಯ ಭದ್ರಂ ತೇ ಭವಿತಾ ಚೇತ್ಯುವಾಚ ಹ ॥ ೧೩೫ ॥

ಹರೇರ್ದಾಸ್ಯಂ ಹರೇರ್ಭಕ್ತಿಂ ವರಂ ವವ್ರೇ ಸ ಬಲ್ಲವಃ ।
ದ್ರವ್ಯಂ ಭುಕ್ತ್ವಾ ವರಂ ದತ್ವಾ ಸೋಽನ್ತರ್ಧಾನಂ ಚಕಾರ ಹ ॥ ೧೩೬ ॥

ಮುನೀಂದ್ರಾನ್ಬ್ರಾಹ್ಮಣಾಂಶ್ಚೈವ ಭೋಜಯಿತ್ವಾ ಚ ಗೋಪಪಾಃ ।
ಬಂದಿಭ್ಯೋ ಬ್ರಾಹ್ಮಣೇಭ್ಯಶ್ಚ ಮುನಿಭ್ಯಶ್ಚ ಧನಂ ದದೌ ॥ ೧೩೭ ॥

ಮುನಿಭ್ಯೋ ಬ್ರಾಹ್ಮಣೇಭ್ಯೋಽಪಿ ದತ್ವಾ ನಂದೋ ಮುದಾನ್ವಿತಃ ।
ರಾಮಕೃಷ್ಣೌ ಪುರಸ್ಕೃತ್ಯ ಸಗಣಃ ಸ್ವಾಲಯಂ ಯಯೌ ॥ ೧೩೮ ॥

---

೧೩೫. 'ಎಲೈ ತಂದೆಯೇ, ಮುಂದಿರುವ ಗೋವರ್ಧನನನ್ನು ನೋಡು. ಬೇಕಾದವರವನ್ನು ಬೇಡಿಕೋ, ನಿನಗೆ ಮಂಗಳವಾಗುವುದು.' ಎಂದು ಶ್ರೀಕೃಷ್ಣನು ನಂದಗೋಪನಿಗೆ ಹೇಳಿದನು.

೧೩೬, ಆಗ ನಂದಗೋಪನು ಗೋವರ್ಧನನನ್ನು ಕುರಿತು ಹರಿದಾಸ್ಯವನ್ನೂ ಹರಿಭಕ್ತಿಯನ್ನೂ ತನಗೆ ಅನುಗ್ರಹಿಸಬೇಕೆಂದು ಬೇಡಿಕೊಳ್ಳಲು ಗೋವರ್ಧನನು ಹಾಗೆಯೇ ಆಗಲೆಂದು ವರವನ್ನು ಕೊಟ್ಟು ತನಗೆ ಅರ್ಪಿಸಿದ ದ್ರವ್ಯಗಳನ್ನು ಭುಜಿಸಿ ಅಂತರ್ಧಾನಹೊಂದಿದನು

೧೩೭. ಅನಂತರ ನಂದಗೋಪನು ಮುನೀಂದ್ರರಿಗೂ ಬ್ರಾಹ್ಮಣರಿಗೂ ಭೋಜನಮಾಡಿಸಿ, ಬಂದಿಗಳಿಗೂ ಬ್ರಾಹ್ಮಣರಿಗೂ ಮುನಿಗಳಿಗೂ ಯಥೇಚ್ಛವಾಗಿ ದ್ರವ್ಯದಾನಮಾಡಿದನು

೧೩೮. ಈ ರೀತಿಯಾಗಿ ಮುನಿಗಳಿಗೂ ಬ್ರಾಹ್ಮಣರಿಗೂ ದಾನಮಾಡಿ ಸಂತಸಗೊಂಡ ನಂದನು ಬಲರಾಮಕೃಷ್ಣರನ್ನು ಮುಂದುಮಾಡಿಕೊಂಡು ತನ್ನ ಪರಿವಾರದೊಡನೆ ತನ್ನ ಮಂದಿರಕ್ಕೆ ಹಿಂತಿರುಗಿದನು.

ರೌಪ್ಯಂ ವಸ್ತ್ರಂ ಸುವರ್ಣಂ ಚ ವರಮಶ್ವಂ ಮಣಿಂ ತಥಾ ।
ಭಕ್ಷ್ಯಂ ದ್ರವ್ಯಂ ಬಹುವಿಧಂ ಬಂದಿನೇ ಡಿಂಡಿನೇ ದದೌ　　॥ ೧೩೯ ॥

ಸ್ತುತ್ವಾ ನತ್ವಾ ರಾಮಕೃಷ್ಣೌ ಮುನಯೋ ಬ್ರಾಹ್ಮಣಾ ಯಯುಃ ।
ಯಯುರಪ್ಸರಸಃ ಸರ್ವಾ ಗಂಧರ್ವಾಃ ಕಿಂನರಾಸ್ತಥಾ　　॥ ೧೪೦ ॥

ರಾಜಾನೋ ಬಲ್ಲವಾಸ್ಸರ್ವೇ ಚಾಗತಾ ಯೇ ಮಹೋತ್ಸವೇ ।
ಸರ್ವೇ ಪ್ರಣಮ್ಯ ಶ್ರೀಕೃಷ್ಣಂ ಯಯುಃ ಸಾದರಪೂರ್ವಕಂ　　॥ ೧೪೧ ॥

ಏತಸ್ಮಿನ್ನಂತರೇ ಶಕ್ರಃ ಕೋಪಪ್ರಸ್ಫುರಿತಾಧರಃ ।
ಮಖಭಂಗೇ ಬಹುವಿಧಾಂ ನಿಂದಾಂ ಶ್ರುತ್ವಾ ಸುರೇಶ್ವರಃ　　॥ ೧೪೨ ॥

ಮರುದ್ಭಿರ್ವಾರಿದೈಃ ಸಾರ್ಧಂ ರಥಮಾರುಹ್ಯ ಸತ್ವರಂ ।
ಜಗಾಮ ನಂದನಗರಂ ವೃಂದಾರಣ್ಯಂ ಮನೋಹರಂ　　॥ ೧೪೩ ॥

---

೧೩೯. ಅಲ್ಲಿ ಹೊಗಳುಭಂಟರಿಗೂ ವಾದ್ಯಗಾರರಿಗೂ ಚಿನ್ನ ಬೆಳ್ಳಿಗಳನ್ನೂ ಉತ್ತಮವಸ್ತ್ರಗಳನ್ನೂ ಶ್ರೇಷ್ಠವಾದ ಕುದುರೆಗಳನ್ನೂ ಅನೇಕ ವಿಧವಾದ ಮಣಿ ದ್ರವ್ಯಗಳನ್ನೂ ಭಕ್ಷ್ಯಭೋಜ್ಯಗಳನ್ನೂ ಬಹಳವಾಗಿ ದಾನಮಾಡಿದನು.

೧೪೦. ಅನಂತರ ಮುನಿಗಳೂ ಬ್ರಾಹ್ಮಣರೂ ಬಲರಾಮಕೃಷ್ಣರನ್ನು ಸ್ತುತಿಸಿ ವಂದಿಸಿ ತಮ್ಮ ತಮ್ಮ ಸ್ಥಳಕ್ಕೆ ಹಿಂತಿರುಗಿದರು. ಹಾಗೆಯೇ ಅಪ್ಸರೆಯರೂ ಗಂಧರ್ವರೂ ಕಿನ್ನರರೂ ತಮ್ಮ ತಮ್ಮ ಸ್ಥಳಕ್ಕೆ ಹೊರಟುಹೋದರು.

೧೪೧ ಆ ಮಹೋತ್ಸವಕ್ಕೆ ಬಂದಿದ್ದ ರಾಜರುಗಳೂ ಮತ್ತು ಗೋಪಾಲಕರೂ ಶ್ರೀಕೃಷ್ಣನಿಗೆ ಆದರದಿಂದ ಪ್ರಣಾಮಮಾಡಿ ತಮ್ಮ ತಮ್ಮ ಮಂದಿರಕ್ಕೆ ತೆರಳಿದರು.

೧೪೨-೧೪೩. ಈ ಸಮಯಕ್ಕೆ ಸರಿಯಾಗಿ ಸುರೇಶ್ವರನಾದ ದೇವೇಂದ್ರನು 'ಶಕ್ರಯಾಗ' ಭಂಗದಿಂದಲೂ, ಬಹುವಿಧವಾದ ನಿಂದೆಯಿಂದಲೂ ಕುಪಿತನಾಗಿ ಕೆಳತುಟಿಯನ್ನು ನಡುಗಿಸುತ್ತ ಮಳೆಸುರಿಸುವ ಪ್ರಳಯಮಾರುತಗಳೊಡಗೂಡಿ ಜಾಗ್ರತೆಯಾಗಿ ರಥವನ್ನೇರಿ ಮನೋಹರವಾದ ವೃಂದಾರಣ್ಯಮಧ್ಯದಲ್ಲಿರುವ ನಂದನಗರಿಗೆ ಹೊರಟನು.

ಸರ್ವೇ ದೇವಾ ಯಯುಃ ಪಶ್ಚಾದ್ಯುದ್ಧಶಾಸ್ತ್ರವಿಶಾರದಾಃ ।
ಶಸ್ತ್ರಾಸ್ತ್ರಪಾಣಯಃ ಕೋಪಾದ್ರಥಮಾರುಹ್ಯ ನಾರದ ॥ ೧೪೪ ॥

ವಾಯುಶಬ್ದೈರ್ಮೇಘಶಬ್ದೈಃ ಸೈನ್ಯಶಬ್ದೈರ್ಭಯಾನಕೈಃ ।
ಚಕಂಪೇ ನಗರಂ ಸರ್ವಂ ನಂದೋ ಭಯಮವಾಪ ಹ ॥ ೧೪೫ ॥

ಭಾರ್ಯಾಂ ಸಂಬೋಧ್ಯ ಸ್ವಗಣಮುವಾಚ ಶೋಕಕಾತರಃ ।
ರಹಃಸ್ಥಲಂ ಸಮಾನೀಯ ನೀತಿಶಾಸ್ತ್ರವಿಶಾರದಃ ॥ ೧೪೬ ॥

॥ ನಂದ ಉವಾಚ ॥

ಹೇ ಯಶೋದೇ ಸಮಾಗಚ್ಛ ವಚನಂ ಶೃಣು ರೋಹಿಣಿ ।
ರಾಮಕೃಷ್ಣೌ ಸಮಾದಾಯ ವ್ರಜ ದೂರಂ ವ್ರಜಾತ್ಪ್ರಿಯೇ ।
ಬಾಲಕಾ ಬಾಲಿಕಾ ನಾರ್ಯೋ ಯಾಂತು ದೂರಂ ಭಯಾಕುಲಾಃ ॥ ೧೪೭ ॥

---

೧೪೪. ಎಲೈ ನಾರದನೇ, ಆಗ ಯುದ್ಧಕಾರ್ಯವಲ್ಲಿ ನಿಪುಣರಾದ ದೇವತೆಗಳೆಲ್ಲರೂ ಕೈಯಲ್ಲಿ ಶಸ್ತ್ರಾಸ್ತ್ರಗಳನ್ನು ಧರಿಸಿ ಕೋಪದಿಂದ ರಥವನ್ನೇರಿ ಹೊರಟರು.

೧೪೫. ಪ್ರಲಯ ಮಾರುತದ ಮತ್ತು ಮೇಘದ ಭಯಂಕರ ಧ್ವನಿಯಿಂದಲೂ, ಸೈನ್ಯದ ಸಿಂಹನಾದದಿಂದಲೂ ಆ ನಂದನಗರಿಯು ನಡುಗಿಮದಲ್ಲದೆ ನಂದಗೋಪನೂ ಕೂಡ ಭಯದಿಂದ ನಡುಗಿದನು.

೧೪೬. ನೀತಿಶಾಸ್ತ್ರನಿಪುಣನಾದ ಆ ನಂದಗೋಪನು ದುಃಖದಿಂದ ಕಾತರನಾಗಿ ತನ್ನ ಹೆಂಡತಿಯನ್ನೂ ಪರಿವಾರದವರನ್ನೂ ಏಕಾಂತಸ್ಥಳಕ್ಕೆ ಕರೆದೊಯ್ದು ಮುಂದೆ ಹೇಳುವಂತೆ ಹೇಳಿದನು.

೧೪೭. ನಂದಗೋಪ :—ಎಲೌ ಯಶೋದೆಯೇ, ಇಲ್ಲಿ ಬಾ. ಪ್ರಿಯಳಾದ ರೋಹಿಣಿಯೇ, ನೀನೂ ಬಾ. ನನ್ನ ಮಾತನ್ನು ನೀವಿಬ್ಬರೂ ಕೇಳಿ. ಬಲರಾಮ ಕೃಷ್ಣರನ್ನು ಕರೆದುಕೊಂಡು ಈ ಗೋಕುಲದಿಂದ ದೂರಹೋಗಿ. ಭಯಗ್ರಸ್ತರಾದ ಬಾಲಕಬಾಲಕಿಯರೂ, ಅಬಲೆಯರೂ ಕೂಡ ದೂರ ಹೊರಟುಹೋಗಲಿ.

ಬಲವಂತಶ್ಚ ಗೋಪಾಲಾಃಸ್ತಿಷ್ಠಂತು ಮತ್ಸಮೀಪತಃ ।
ಪಶ್ಚಾಚ್ಚ ನಿರ್ಗಮಿಷ್ಯಾಮೋ ವಯಂ ಚ ಪ್ರಾಣಸಂಕಟಾತ್ ॥ ೧೪೮ ॥

ಇತ್ಯುಕ್ತ್ವಾ ಬಲ್ಲವಶ್ರೇಷ್ಠಃ ಸಸ್ಮಾರ ಶ್ರೀಹರಿಂ ಭಿಯಾ ।
ಪುಟಾಂಜಲಿಯುತೋ ಭೂತ್ವಾ ಭಕ್ತಿನಮ್ರಾತ್ಮಕಂಧರಃ ।
ಕಾಣ್ವಶಾಖೋಕ್ತಸ್ತೋತ್ರೇಣ ತುಷ್ಟಾವ ಹ ಶಚೀಪತಿಂ ॥ ೧೪೯ ॥

॥ ನಂದ ಉವಾಚ ॥

ಇಂದ್ರಃ ಸುರಪತಿಃ ಶಕ್ರೋಽದಿತಿಜಃ ಪವನಾಗ್ರಜಃ ॥ ೧೫೦ ॥

ಸಹಸ್ರಾಕ್ಷೋ ಭಗಾಂಗಶ್ಚ ಕಶ್ಯಪಾಂಗಜ ಏವ ಚ ।
ಬಿಡೌಜಾಶ್ಚ ಸುನಾಸೀರೋ ಮರುತ್ವಾನ್ಪಾಕಶಾಸನಃ ॥ ೧೫೧ ॥

---

೧೪೮. ಬಲಶಾಲಿಗಳಾದ ಗೋಪಾಲಕರು ಮಾತ್ರ ನನ್ನ ಸಮೀಪದಲ್ಲಿರಲಿ. ಮುಂದೆ ಪ್ರಾಣಸಂಕಟ ಒದಗಿದಾಗ ನಾವೂ ಕೂಡ ತಪ್ಪಿಸಿಕೊಂಡು ಬರುತ್ತೇವೆ.

೧೪೯. ಹೀಗೆ ಹೇಳಿ ಗೋಪಶ್ರೇಷ್ಠನಾದ ನಂದಗೋಪನು ಇಂದ್ರನ ಭಯದಿಂದ ಶ್ರೀಹರಿಯನ್ನು ಸ್ಮರಿಸಿದನು. ಅಲ್ಲದೆ ಅಂಜಲಿಬದ್ಧನಾಗಿ ಭಕ್ತಿಯಿಂದ ತಲೆಬಾಗಿ ನಿಂತು ಕಾಣ್ವಶಾಖೋಕ್ತವಾದ ಸ್ತೋತ್ರದಿಂದ ಶಚೀಪತಿಯಾದ ದೇವೇಂದ್ರನನ್ನು ಸ್ತುತಿಸಿದನು.

೧೫೦-೧೫೧. ನಂದಗೋಪನು ಮುಂದೆ ಹೇಳಿರುವ ಅರ್ಥವುಳ್ಳ ಇಪ್ಪತ್ತಾರು ದಿವ್ಯನಾಮಗಳಿಂದ ದೇವೇಂದ್ರನನ್ನು ಸ್ತುತಿಸಿದನು. 'ಪರಮೈಶ್ವರ್ಯಯುಕ್ತನೂ, ದೇವತೆಗಳಿಗೊಡೆಯನೂ, ದುಷ್ಟನಿಗ್ರಹದಲ್ಲಿ ಶಕ್ತನೂ, ಅದಿತಿಯಲ್ಲಿ ಹುಟ್ಟಿದವನೂ, ವಾಯುದೇವನ ಅಗ್ರಜನೂ, ಸಾವಿರಕಣ್ಣುಳ್ಳವನೂ, ಅವಯವಗಳಲ್ಲಿ ಯೋನಿಯುಳ್ಳವನೂ, ಕಶ್ಯಪನ ಅವಯವದಿಂದ ಜನಿಸಿದವನೂ, ಶತ್ರುಗಳನ್ನು ವ್ಯಥೆಗೊಳಿಸುವ ತೇಜಸ್ಸುಳ್ಳವನೂ, ಶ್ರೇಷ್ಠವಾದ ಸೇನಾಗ್ರಭಾಗವುಳ್ಳವನೂ, ದೇವತೆಗಳ ಪರಿವಾರವುಳ್ಳವನೂ ಮತ್ತು ವೃತ್ರಾಸುರನ ತಮ್ಮನಾದ ಪಾಕಾಸುರನನ್ನು ಕೊಂದವನೂ ಆದ ದೇವೇಂದ್ರನು ನಮ್ಮನ್ನು ರಕ್ಷಿಸಲಿ.

ಜಯಂತಜನಕಃ ಶ್ರೀಮಾಂಚ್ಛಚೀಶೋ ದೈತ್ಯಸೂದನಃ ।
ವಜ್ರಹಸ್ತಃ ಕಾಮಸಖೋ ಗೌತಮೀವ್ರತನಾಶನಃ ॥ ೧೫೨ ॥

ವೃತ್ರಹಾ ವಾಸವಶ್ಚೈವ ದಧೀಚಿದೇಹಭಿಕ್ಷುಕಃ ।
ಜಿಷ್ಣುಶ್ಚ ವಾಮನಭ್ರಾತಾ ಪುರುಹೂತಃ ಪುರಂದರಃ ॥ ೧೫೩ ॥

ದಿವಸ್ಪತಿಃ ಶತಮಖಃ ಸುತ್ರಾಮಾ ಗೋತ್ರಭಿದ್ವಿಭುಃ ।
ಲೇಖರ್ಷಭೋ ಬಲಾರಾತಿರ್ಜಂಭಭೇದೀ ಸುರಾಶ್ರಯಃ ॥ ೧೫೪ ॥

ಸಂಕ್ರಂದನೋ ದುಶ್ಚ್ಯವನಸ್ತುರಾಷಾಣ್ಮೇಘವಾಹನಃ ।
ಆಖಂಡಲೋ ಹರಿಹಯೋ ನಮುಚಿಪ್ರಾಣನಾಶನಃ ॥ ೧೫೫ ॥

೧೫೨-೧೫೩. ಜಯಂತನ ತಂದೆಯೂ, ಸಂಪದ್ಯುಕ್ತನೂ, ಶಚೀಪತಿಯೂ, ದೈತ್ಯನಾಶಕನೂ, ವಜ್ರಾಯುಧಧರನೂ, ಮನ್ಮಥನ ಮಿತ್ರನೂ, ಅಹಲ್ಯೆಯ ಪಾತಿವ್ರತ್ಯವನ್ನು ಭಂಗಗೊಳಿಸಿದವನೂ, ವೃತ್ರಾಸುರಸಂಹಾರಕನೂ, ರತ್ನಗಳುಳ್ಳವನೂ, ದಧೀಚಿಯ ದೇಹವನ್ನು ಭಿಕ್ಷೆಬೇಡಿದವನೂ, ಜಯಿಸುವ ಸ್ವಭಾವವುಳ್ಳವನೂ, ವಾಮನನ ಸಹೋದರನೂ, ಯಜ್ಞಗಳಲ್ಲಿ ಆಹ್ವಾನವುಳ್ಳವನೂ, ಪುರನೆಂಬ ರಾಕ್ಷಸನನ್ನು ಸಂಹರಿಸಿದವನೂ ಆದ ಶಚೀಪತಿಯು ನಮ್ಮನ್ನು ಕಾಪಾಡಲಿ.

೧೫೪-೧೫೫. ದೇವಲೋಕದೊಡೆಯನೂ, ನೂರಯಾಗಮಾಡಿದವನೂ, ಲೋಕಗಳನ್ನು ಚೆನ್ನಾಗಿ ಕಾಪಾಡತಕ್ಕವನೂ, ಪರ್ವತಗಳನ್ನು ಭೇದಿಸಿದವನೂ, ವ್ಯಾಪನಶೀಲನೂ, ದೇವತೆಗಳಿಗೊಡೆಯನೂ, ಬಲನೆಂಬ ರಾಕ್ಷಸನ ಶತ್ರುವೂ, ಜಂಭಾಸುರನನ್ನು ನಿಗ್ರಹಿಸಿದವನೂ, ದೇವತೆಗಳಿಗಾಶ್ರಯದಾತನೂ, ಶತ್ರುಗಳನ್ನು ಗೋಳಾಡಿಸುವವನೂ, ಚ್ಯವನ ಋಷಿಯನ್ನು ತನ್ನ ವಜ್ರಾಯುಧದಿಂದ ನಿಗ್ರಹಿಸಲಾಗದವನೂ, ಶತ್ರುವೇಗವನ್ನು ಸಹಿಸುವವನೂ, ಗಜರೂಪಧಾರಿಗಳಾದ ಮೇಘಗಳೇ ವಾಹನವಾಗಿವುಳ್ಳವನೂ, ಶತ್ರುಗಳನ್ನು ಖಂಡಿಸುವವನೂ, ಹಸರು ಕುದುರೆಗಳುಳ್ಳವನೂ, ನಮುಚಿಯೆಂಬ ರಾಕ್ಷಸನ ಪ್ರಾಣವನ್ನು ನಾಶಗೊಳಿಸಿದವನೂ, ಆದ ದೇವರಾಜನು ನಮ್ಮನ್ನು ರಕ್ಷಿಸಲಿ.

ವೃದ್ಧಶ್ರವಾ ವೃಷಶ್ಚೈವ ದೈತ್ಯದರ್ಪನಿಷೂದನಃ ।
ಷಟ್ಚತ್ವಾರಿಂಶನ್ನಾಮಾನಿ ಪಾಪಘ್ನಾನಿ ವಿನಿಶ್ಚಿತಂ　　　　॥ ೧೫೬ ॥

ಸ್ತೋತ್ರಮೇತತ್ಕೌಥುಮೋಕ್ತಂ ನಿತ್ಯಂ ಯದಿ ಪಠೇನ್ನರಃ ।
ಮಹಾವಿಪತ್ತೌ ಶಕ್ರಸ್ತಂ ವಜ್ರಹಸ್ತಶ್ಚ ರಕ್ಷತಿ　　　　॥ ೧೫೭ ॥

ಅತಿವೃಷ್ಟಿಶಿಲಾವೃಷ್ಟಿವಜ್ರಪಾತಾಚ್ಚ ದಾರುಣಾತ್ ।
ಕದಾಚಿನ್ನ ಭಯಂ ತಸ್ಯ ರಕ್ಷಿತಾ ವಾಸವಃ ಸ್ವಯಂ　　　　॥ ೧೫೮ ॥

ಯತ್ರ ಗೇಹೇ ಸ್ತೋತ್ರಮಿದಂ ಯಶ್ಚ ಜಾನಾತಿ ಪುಣ್ಯವಾನ್ ।
ನ ತತ್ರ ವಜ್ರಪತನಂ ಶಿಲಾವೃಷ್ಟಿಶ್ಚ ನಾರದ　　　　॥ ೧೫೯ ॥

---

೧೫೬. ವೃದ್ಧರಾದ ಬೃಹಸ್ಪತ್ಯಾದಿಗಳ ಹಿತೋಪದೇಶವನ್ನು ಕೇಳುವವನೂ, ಮಳೆಸುರಿಸುವವನೂ, ದೈತ್ಯರ ದರ್ಪವನ್ನು ನಾಶಗೊಳಿಸಿದವನೂ, ಆದ ಪುರಂದರನು ನಮ್ಮನ್ನು ಕಾಪಾಡಲಿ.' ಈ ನಲವತ್ತಾರು ದಿವ್ಯನಾಮಗಳನ್ನು ಸ್ಮರಿಸುವುದರಿಂದ ಪಾಪನಾಶವಾಗುವುದು ನಿಶ್ಚಯ.

೧೫೭. ಕೌಥುಮಶಾಖೋಕ್ತವಾದ ಈ ಸ್ತೋತ್ರವನ್ನು ಮನುಜನು ಭಕ್ತಿಯಿಂದ ಪಠನಮಾಡಿದರೆ ಅವನನ್ನು ವಜ್ರಾಯುಧಧರನಾದ ದೇವೇಂದ್ರನು ಮಹಾವಿಪತ್ತಿನಲ್ಲೂ ರಕ್ಷಿಸುವನು.

೧೫೮. ಈ ಸ್ತೋತ್ರವನ್ನು ಪಠಿಸುವವನಿಗೆ ಅತಿವೃಷ್ಟಿಯಿಂದಲೂ. ಶಿಲಾವೃಷ್ಟಿಯಿಂದಲೂ, ಭಯಂಕರವಾದ ವಜ್ರಪತನದಿಂದಲೂ ಯಾವಾಗಲೂ ಭೀತಿಯಿರುವುದಿಲ್ಲ. ಸ್ವಯಂದೇವೇಂದ್ರನೇ ಅವನನ್ನು ರಕ್ಷಿಸುವನು.

೧೫೯. ಎಲೈ ನಾರದನೇ, ಯಾರ ಮನೆಯಲ್ಲಿ ಈ ಸ್ತೋತ್ರಪಾರಾಯಣವಾಗುತ್ತಿರುವುದೋ, ಯಾರು ಈ ಸ್ತೋತ್ರವನ್ನು ತಿಳಿದಿರುವರೋ ಅಲ್ಲಿ ವಜ್ರಪತನವಾಗಲೀ, ಶಿಲಾವೃಷ್ಟಿಯಾಗಲೀ ಉಂಟಾಗುವುದಿಲ್ಲ.

॥ ಶ್ರೀ ನಾರಾಯಣ ಉವಾಚ ॥

ಸ್ತೋತ್ರಂ ನಂದಮುಖಾಚ್ಛ್ರುತ್ವಾ ಚುಕೋಪ ಮಧುಸೂದನಃ ॥ ೧೬೦ ॥

ಉವಾಚ ಪಿತರಂ ನೀತಿಂ ಪ್ರಜ್ವಲನ್ಬ್ರಹ್ಮತೇಜಸಾ ।
ಕಂ ಸ್ತೌಷಿ ಭೀರೋ ಕೋ ವೇನ್ದ್ರಸ್ತ್ಯಜ ಭೀತಿಂ ಮಮಾನ್ತಿಕೇ ॥ ೧೬೧ ॥

ಕ್ಷಣಾರ್ಧೇ ಭಸ್ಮಸಾತ್ಕರ್ತುಂ ಕ್ಷಮೋಽಹಮವಲೀಲಯಾ ।
ಗಾಶ್ಚ ವತ್ಸಾಂಶ್ಚ ಬಾಲಾಂಶ್ಚ ಯೋಷಿತೋ ಹಿ ಭಯಾತುರಾಃ ॥ ೧೬೨ ॥

ಗೋವರ್ಧನಸ್ಯ ಕುಹರೇ ಸಂಸ್ಥಾಪ್ಯ ತಿಷ್ಠ ನಿರ್ಭಯಂ ।
ಬಾಲಸ್ಯ ವಚನಂ ಶ್ರುತ್ವಾ ತಚ್ಚಕಾರ ಮುದಾನ್ವಿತಃ ॥ ೧೬೩ ॥

ಹರಿರ್ದಧಾರ ಶೈಲಂ ತಂ ವಾಮಹಸ್ತೇನ ದಂಡವತ್ ।
ಏತಸ್ಮಿನ್ನಂತರೇ ತತ್ರ ದೀಪ್ತೋಽಪಿ ರತ್ನತೇಜಸಾ ॥ ೧೬೪ ॥

೧೬೦--೧೬೧. ಶ್ರೀನಾರಾಯಣ :—ನಂದಗೋಪನ ಬಾಯಿನಿಂದ ಹೊರಟ ಈ ಸ್ತೋತ್ರವನ್ನು ಕೇಳಿ ಮಧುಸೂದನನು ಕುಪಿತನಾದನು. ಅಲ್ಲದೆ ಬ್ರಹ್ಮತೇಜಸಿ. ನಿಂದ ಪ್ರಜ್ವಲಿಸುತ್ತಿದ್ದ ಆ ಪರಮಾತ್ಮನು ತಂದೆಯನ್ನು ಕುರಿತು ಹೀಗೆಂದನ್ನು 'ಎಲೈ ತಂದೆಯೇ, ಹೆದರಿಕೆಯಿಂದ ಯಾರನ್ನು ಸ್ತುತಿಸುತ್ತಿರುವೆ. ನನ್ನ ಮುಂದೆ ಆ ದೇವೇಂದ್ರನು ಎಷ್ಟರವನು? ಹೆದರಿಕೆಯನ್ನು ಬಿಟ್ಟು ಧೈರ್ಯದಿಂದಿರು.'

೧೬೨-೧೬೩. 'ಇಂಥ ಇಂದ್ರಾದಿಗಳನ್ನೆಲ್ಲ ನಾನು ಲೀಲಾಮಾತ್ರದಿಂದ ಅರ್ಧಕ್ಷಣವಲ್ಲಿ ಭಸ್ಮಮಾಡಬಲ್ಲೆನು. ಆದಕಾರಣ ಭಯಗ್ರಸ್ತವಾಗಿರುವ ಹಸುಕರುಗಳನ್ನೂ, ಹೆಂಗಸರುಮಕ್ಕಳನ್ನೂ ಕರೆದೊಯ್ದು ಗೋವರ್ಧನನ ಗುಹೆಯಲ್ಲಿಟ್ಟು ನಿರ್ಭಯನಾಗಿ ನಿಲ್ಲು.' ಬಾಲಕನಾದ ಶ್ರೀಕೃಷ್ಣನ ಈ ಮಾತುಗಳನ್ನು ಕೇಳಿ ಸಂತಸಗೊಂಡ ನಂದಗೋಪನು ಹಾಗೆಯೇ ಮಾಡಿದನು.

೧೬೪-೧೬೫. ಅನಂತರ ಶ್ರೀಹರಿಯು ಆ ಗೋವರ್ಧನಪರ್ವತವನ್ನು ದಂಡವಂತೆ ಎಡಗೈಯಲ್ಲಿ ಎತ್ತಿ ಹಿಡಿದನು. ಈ ಸಮಯಕ್ಕೆ ಸರಿಯಾಗಿ ರತ್ನದ ತೇಜಸ್ಸುಗಳಿಂದ ಬೆಳಗುತ್ತಿದ್ದ ಆ ಪ್ರದೇಶವು ಇದ್ದಕ್ಕಿದ್ದಂತೆಯೇ ರಜೋಮಯ

ಅಂಧೀಭೂತಶ್ಚ ಸಹಸಾ ಬಭೂವ ರಜಸಾವೃತಃ ।
ಸವಾತೋ ಮೇಘನಿಕರಶ್ಚಚ್ಛಾದ ಗಗನಂ ಮುನೇ || ೧೬೫ ||

ವೃಂದಾವನೇ ಬಭೂವಾತಿವೃಷ್ಟಿರೇವ ನಿರಂತರಂ ।
ಶಿಲಾವೃಷ್ಟಿರ್ವಜ್ರವೃಷ್ಟಿರುಲ್ಕಾಪಾತಃ ಸುದಾರುಣಃ || ೧೬೬ ||

ಸಮಸ್ತಂ ಪರ್ವತಸ್ಪರ್ಶಾತ್ಪತಿತಂ ದೂರತಸ್ತತಃ ।
ವಿಫಲಸ್ತತ್ಸಮಾರಂಭೋ ಯಥಾನೀಶೋದ್ಯಮೋ ಮುನೇ || ೧೬೭ ||

ದೃಷ್ಟ್ವಾ ಮೋಘಂ ಚ ತತ್ಸರ್ವಂ ಸದ್ಯಶ್ಶಕ್ರಶ್ಚುಕೋಪ ಹ ।
ಜಗ್ರಾಹಾಮೋಘಕುಲಿಶಂ ದಧೀಚ್ಯಸ್ಥಿವಿನಿರ್ಮಿತಂ || ೧೬೮ ||

ದೃಷ್ಟ್ವಾ ತಂ ವಜ್ರಹಸ್ತಂ ಚ ಜಹಾಸ ಮಧುಸೂದನಃ ।
ಸಹಸ್ತಂ ಸ್ತಂಭಯಾಮಾಸ ವಜ್ರಮೇವಾತಿದಾರುಣಂ || ೧೬೯ ||

ವಾಗಿ ಅಂಧಕಾರದಿಂದ ಕೂಡಿತು. ಎಲೈ ಮುನಿಯೇ, ವಾಯುವಿನಿಂದ ಕೂಡಿದ ಮೇಘಮಂಡಲವು ಗಗನಮಂಡಲವನ್ನು ಆವರಿಸಿತು.

೧೬೬. ವೃಂದಾವನದಲ್ಲಿ ಎಡೆಬಿಡದೆ ಅತಿವೃಷ್ಟಿಯಾದುದಲ್ಲದೆ ಭಯಂಕರವಾದ ಶಿಲಾವೃಷ್ಟಿಯೂ, ವಜ್ರಪಾತ ಮತ್ತು ಉಲ್ಕಾಪಾತಗಳೂ ಆದವು

೧೬೭. ಆದರೆ ಅವೆಲ್ಲವೂ ಆ ಗೋವರ್ಧನ ಪರ್ವತದ ಸ್ಪರ್ಶಮಾತ್ರದಿಂದ ದೂರದಲ್ಲಿ ಬಿದ್ದುವು. ಎಲೈ ಮುನಿಯೇ, ಆ ಇಂದ್ರನ ಸಮಾರಂಭವೆಲ್ಲವೂ ದುರ್ಬಲನ ಪ್ರಯತ್ನದಂತೆ ವಿಫಲವಾದುವು.

೧೬೮ ಈ ರೀತಿ ಅವೆಲ್ಲವೂ ನಿಷ್ಫಲವಾದುದನ್ನು ನೋಡಿ ದೇವೇಂದ್ರನು ಕೂಡಲೇ ಕುಪಿತನಾದನು. ಅಲ್ಲದೆ ದಧೀಚಿಯ ಮೂಳೆಯಿಂದ ನಿರ್ಮಿತವಾಗಿ ಅಮೋಘವಾಗಿರುವ ವಜ್ರಾಯುಧವನ್ನು ಕೈಗೆ ತೆಗೆದುಕೊಂಡನು.

೧೬೯–೧೭೦. ವಜ್ರಹಸ್ತನಾಗಿ ನಿಂತಿರುವ ದೇವೇಂದ್ರನನ್ನು ನೋಡಿ ಮಧುಸೂದನನು ನಕ್ಕನು. ಅಲ್ಲದೆ ಅತಿದಾರುಣವಾದ ಆ ವಜ್ರಾಯುಧವನ್ನು ಅವನ ಕೈಯಲ್ಲಿರುವಂತೆಯೇ ಸ್ತಂಭನಗೊಳಿಸಿದನು. ಅಷ್ಟೇ ಅಲ್ಲದೆ ಇತರ ದೇವತೆ

ಸಹಾಮರಗಣಂ ಮೋಘಂ ಚಕಾರ ಸ್ತಂಭನಂ ವಿಭುಃ ।
ಸರ್ವೇ ತಸ್ಥುರ್ನಿಶ್ಚಲಾಸ್ತೇ ಭಿತ್ತೌ ಪುತ್ತಲಿಕಾ ಯಥಾ ॥ ೧೭೦ ॥

ಹರಿಣಾ ಜೃಂಭಿತಃ ಶಕ್ರಃ ಸದ್ಯಸ್ತಂದ್ರಾಮವಾಪ ಹ ।
ದದರ್ಶ ಸರ್ವಂ ತಂದ್ರಾಯಾಂ ತತ್ರ ಕೃಷ್ಣಮಯಂ ಜಗತ್ ॥ ೧೭೧ ॥

ದ್ವಿಭುಜಂ ಮುರಲೀಹಸ್ತಂ ರತ್ನಾಲಂಕಾರಭೂಷಿತಂ ।
ಪೀತವಸ್ತ್ರಪರೀಧಾನಂ ರತ್ನಸಿಂಹಾಸನಸ್ಥಿತಂ ॥ ೧೭೨ ॥

ಈಷದ್ಧಾಸ್ಯಪ್ರಸನ್ನಾಸ್ಯಂ ಭಕ್ತಾನುಗ್ರಹಕಾತರಂ ।
ಚಂದನೋಕ್ಷಿತಸರ್ವಾಂಗಮೇತತ್ಸರ್ವಂ ಚರಾಚರಂ ॥ ೧೭೩ ॥

ದೃಷ್ಟ್ವಾದ್ಭುತತಮಂ ತತ್ರ ಸದ್ಯೋ ಮೂರ್ಛಾಮವಾಪ ಹ ।
ಜಜಾಪ ಮಂತ್ರಂ ತತ್ರೈವ ಪ್ರದತ್ತಂ ಗುರುಣಾ ಪುರಾ ॥ ೧೭೪ ॥

ಗಳನ್ನೂ ಕೂಡ ಸ್ತಂಭನಗೊಳಿಸಿ ನಿರ್ವೀರ್ಯರನ್ನಾಗಿ ಮಾಡಿದನು. ಅವರೆಲ್ಲರೂ ಗೋಡೆಯಲ್ಲಿ ಚಿತ್ರಿಸಿರುವ ಬೊಂಬೆಗಳಂತೆ ನಿಶ್ಚಲರಾಗಿ ನಿಂತಿದ್ದರು.

೧೭೧. ಈ ರೀತಿ ಶ್ರೀಹರಿಯಿಂದ ಸ್ತಂಭಿತನಾದ ದೇವೇಂದ್ರನು ಕೂಡಲೇ ನಿದ್ರಾವಸ್ಥೆಯನ್ನು ಹೊಂದಿದನು. ಆ ನಿದ್ರಾವಸ್ಥೆಯಲ್ಲಿ ಜಗತ್ತೆಲ್ಲವೂ, ಕೃಷ್ಣಮಯವಾಗಿದ್ದುದನ್ನು ಕಂಡನು.

೧೭೨–೧೭೩. ದ್ವಿಭುಜನೂ, ಮುರಲೀಧರನೂ, ರತ್ನಾಲಂಕಾರ ಭೂಷಿತನೂ ಪೀತಾಂಬರಧರನೂ, ರತ್ನಸಿಂಹಾಸನದಲ್ಲಿ ಮಂಡಿಸಿರುವವನೂ, ಮಂದಹಾಸದಿಂದ ಪ್ರಸನ್ನಮುಖನೂ, ಭಕ್ತಾನುಗ್ರಹಕಾತರನೂ, ಸರ್ವಾಂಗಗಳಿಗೂ ಚಂದನವನ್ನು ಲೇಪಿಸಿಕೊಂಡಿರುವವನೂ, ಆದ ಶ್ರೀಕೃಷ್ಣಪರಮಾತ್ಮನನ್ನೂ, ಚರಾಚರವಾದ ನಿಖಿಲಪ್ರಪಂಚವನ್ನೂ ದೇವೇಂದ್ರನು ನಿದ್ರಾವಸ್ಥೆಯಲ್ಲಿ ಕಂಡನು.

೧೭೪. ಈ ರೀತಿಯಾದ ಅತ್ಯದ್ಭುತವನ್ನು ನೋಡಿ ಕೂಡಲೇ ಮೂರ್ಛೆ ತಳೆದವನಾಗಿ ಹಿಂದೆ ಬೃಹಸ್ಪತ್ಯಾಚಾರ್ಯನು ತನಗೆ ಉಪದೇಶಮಾಡಿದ್ದ ಮಂತ್ರವನ್ನು ಜಪಿಸಿದನು.

ಸಹಸ್ರದಲಪದ್ಮಸ್ಥಂ ದದರ್ಶ ಜ್ಯೋತಿರುಲ್ಬಣಂ ।
ತತ್ರಾಂತರೇ ದಿವ್ಯರೂಪಮತೀವ ಸುಮನೋಹರಂ ॥ ೧೭೫ ॥

ನವೀನಜಲದೋತ್ಕರ್ಷಂ ಶ್ಯಾಮಸುಂದರವಿಗ್ರಹಂ ।
ಸದ್ರತ್ನಸಾರನಿರ್ಮಾಣಜ್ವಲನ್ಮಕರಕುಂಡಲಂ ॥ ೧೭೬ ॥

ಜ್ವಲನ್ಮಣೀಂದ್ರಮುಕರಕಿರೀಟೋಜ್ವಲಶೇಖರಂ ।
ಜ್ವಲತಾ ಕೌಸ್ತುಭೇಂದ್ರೇಣ ಕಂಠವೃಕ್ಷಃಸ್ಥಲೋಜ್ವಲಂ ॥ ೧೭೭ ॥

ಮಣಿಕೇಯೂರವಲಯ ಮಣಿಮಂಜೀರರಂಜಿತಂ ।
ಅಂತರ್ಬಹಿಃ ಸಮಂ ದೃಷ್ಟ್ವಾ ತುಷ್ಟಾವ ಪರಮೇಶ್ವರಂ ॥ ೧೭೮ ॥

---

೧೭೫. ಧ್ಯಾನಪರವಶನಾಗಿ ತನ್ನ ಹೃದಯಾಂತರಾಳವಲ್ಲಿರುವ ಸಹಸ್ರದಳ ಪದ್ಮದಲ್ಲಿ ಮಹತ್ತರವಾದ ಜ್ಯೋತಿಯೊಂದನ್ನು ಕಂಡನು. ಅದರೊಳಗೆ ಅತ್ಯಂತ ಮನೋಹರವಾದ ದಿವ್ಯಸುಂದರಾಕಾರವನ್ನು ನೋಡಿದನು.

೧೭೬. ಆ ದಿವ್ಯ ಮೂರ್ತಿಯು ನವಮೇಘವಂತೆ ಶ್ಯಾಮಸುಂದರವಾದ ಶರೀರದಿಂದಲೂ, ಶ್ರೇಷ್ಠರತ್ನಗಳನ್ನು ಮೆಟ್ಟಿರುವ ಕರ್ಣಕುಂಡಲಗಳಿಂದಲೂ ಶೋಭಿಸುತ್ತಿದ್ದಿತು.

೧೭೭. ಶ್ರೇಷ್ಠಮಣಿಗಳನ್ನು ಮೆಟ್ಟಿರುವ ಉಜ್ವಲವಾದ ಕಿರೀಟವನ್ನು ತಲೆಯಲ್ಲಿ ಧರಿಸಿ, ವಕ್ಷಃಸ್ಥಲವನ್ನು ಬೆಳಗುತ್ತಿರುವ ಕೌಸ್ತುಭರತ್ನದಿಂದ ಆ ಮೂರ್ತಿಯು ವಿರಾಜಿಸುತ್ತಿದ್ದಿತು.

೧೭೮. ಮಣಿಮಯವಾದ ಬಾಹುಪುರಿ, ಕಂಕಣ ಮತ್ತು ನೂಪುರಗಳಿಂದ ಭೂಷಿತವಾಗಿ ಒಳಗೂ ಹೊರಗೂ ಒಂದೇಸಮನಾಗಿರುವ ಶ್ರೀಕೃಷ್ಣಪರಮಾತ್ಮನ ಆ ದಿವ್ಯರೂಪವನ್ನು ನೋಡಿ ದೇವೇಂದ್ರನು ಸ್ತುತಿಸಲಾರಂಭಿಸಿದನು.

|| ಇಂದ್ರ ಉವಾಚ ||

ಅಕ್ಷರಂ ಪರಮಂ ಬ್ರಹ್ಮ ಜ್ಯೋತೀರೂಪಂ ಸನಾತನಂ |
ಗುಣಾತೀತಂ ನಿರಾಕಾರಂ ಸ್ವೇಚ್ಛಾಮಯಮನಂತಕಂ || ೧೭೯ ||

ಭಕ್ತಧ್ಯಾನಾಯ ಸೇವಾಯೈ ನಾನಾರೂಪಧರಂ ವರಂ |
ಶುಕ್ಲರಕ್ತಪೀತಶ್ಯಾಮಂ ಯುಗಾನುಕ್ರಮಣೇನ ಚ || ೧೮೦ ||

ಶುಕ್ಲತೇಜಃ ಸ್ವರೂಪಂ ಚ ಸತ್ಯೇ ಸತ್ಯಸ್ವರೂಪಿಣಂ |
ತ್ರೇತಾಯಾಂ ಕುಂಕುಮಾಕಾರಂ ಜ್ವಲಂತಂ ಬ್ರಹ್ಮತೇಜಸಾ || ೧೮೧ ||

ದ್ವಾಪರೇ ಪೀತವರ್ಣಂ ಚ ಶೋಭಿತಂ ಪೀತವಾಸಸಾ |
ಕೃಷ್ಣವರ್ಣಂ ಕಲೌ ಕೃಷ್ಣಂ ಪರಿಪೂರ್ಣತಮಂ ಪ್ರಭುಂ || ೧೮೨ ||

---

೧೭೯. ದೇವೇಂದ್ರ :—ಜ್ಯೋತಿಃಸ್ವರೂಪವೂ, ಅನಾದಿಯೂ, ತ್ರಿಗುಣಾತೀತವೂ, ನಿರಾಕಾರವೂ, ಸ್ವೇಚ್ಛಾಮಯವೂ, ಅವಿನಾಶಿಯೂ, ಅನಂತವೂ ಆದ ಪರಬ್ರಹ್ಮನನ್ನು ಸ್ತುತಿಸುವೆನು.

೧೮೦. ವಿಷ್ಣುಭಕ್ತನ ಧ್ಯಾನ ಮತ್ತು ಸೇವೆಗಾಗಿ, ಯುಗಾನುಗುಣವಾಗಿ ಬಿಳುಪು, ಕೆಂಪು, ಹಳದಿ ಮತ್ತು ಕಪ್ಪು ವರ್ಣಗಳುಳ್ಳ ನಾನಾರೂಪವನ್ನು ಧರಿಸುವ ಪರಮಾತ್ಮನಿಗೆ ವಂದಿಸುವೆನು.

೧೮೧. ಸತ್ಯಯುಗದಲ್ಲಿ ಸತ್ಯಸ್ವರೂಪಿಯೂ, ಶುಕ್ಲವರ್ಣದವನೂ, ತ್ರೇತಾಯುಗದಲ್ಲಿ ಕುಂಕುಮವರ್ಣದವನೂ, ಬ್ರಹ್ಮತೇಜಸ್ಸಿನಿಂದ ಬೆಳಗುವವನೂ ಆದ ಪರಮಾತ್ಮನನ್ನು ಸ್ತುತಿಸುವೆನು.

೧೮೨. ದ್ವಾಪರಯುಗದಲ್ಲಿ ಪೀತವರ್ಣನೂ, ಪೀತಾಂಬರದಿಂದ ಶೋಭಿತನೂ, ಕಲಿಯುಗದಲ್ಲಿ ಕೃಷ್ಣವರ್ಣನೂ, ಕೃಷ್ಣನಾಮಕನೂ ಆದ ಪರಿಪೂರ್ಣಸ್ವರೂಪನನ್ನು ಭಜಿಸುವೆನು.

ನವಧಾರಾಧರೋತ್ಕೃಷ್ಟ ಶ್ಯಾಮಸುಂದರವಿಗ್ರಹಂ ।
ನಂದೈಕನಂದನಂ ವಂದೇ ಯಶೋದಾನಂದನಂ ಪ್ರಭುಂ ॥ ೧೮೩ ॥

ಗೋಪಿಕಾಚೇತನಹರಂ ರಾಧಾಪ್ರಾಣಾಧಿಕಂ ಪರಂ ।
ವಿನೋದಮುರಲೀಶಬ್ದಂ ಕುರ್ವಂತಂ ಕೌತುಕೇನ ಚ ॥ ೧೮೪ ॥

ರೂಪೇಣಾಪ್ರತಿಮೇನೈವ ರತ್ನಭೂಷಣಭೂಷಿತಂ ।
ಕಂದರ್ಪಕೋಟಿಸೌಂದರ್ಯಂ ಬಿಭ್ರತಂ ಶಾಂತಮೀಶ್ವರಂ ॥ ೧೮೫ ॥

ಕ್ರೀಡಂತಂ ರಾಧಯಾ ಸಾರ್ಧಂ ವೃಂದಾರಣ್ಯೇ ಚ ಕುತ್ರಚಿತ್ ।
ಕುತ್ರಚಿನ್ನಿರ್ಜನೇಽರಣ್ಯೇ ರಾಧಾವಕ್ಷಃಸ್ಥಲಸ್ಥಿತಂ ॥ ೧೮೬ ॥

ಜಲಕ್ರೀಡಾಂ ಪ್ರಕುರ್ವಂತಂ ರಾಧಯಾ ಸಹ ಕುತ್ರಚಿತ್ ।
ರಾಧಿಕಾಕಬರೀಭಾರಂ ಕುರ್ವಂತಂ ಕುತ್ರಚಿದ್ವನೇ ॥ ೧೮೭ ॥

---

೧೮೩. ನವಮೇಘದಂತೆ ಹೊಳಪಾದ ಶ್ಯಾಮಸುಂದರಾಕಾರನೂ, ನಂದ ಮತ್ತು ಯಶೋದೆಯರಿಗೆ ಆನಂದದಾಯಕನೂ ಆದ ಪ್ರಭುವಿಗೆ ಭಕ್ತಿಯಿಂದ ವಂದಿಸುವೆನು.

೧೮೪. ಗೋಪಿಕೆಯರ ಮನಸ್ಸನ್ನು ಸೆಳೆಯುವವನೂ, ರಾಧೆಯ ಪ್ರಾಣಾಧಿಕ ಪ್ರಿಯನೂ, ಕೌತುಕ ಮತ್ತು ವಿನೋದದಿಂದ ಕೊಳಲನ್ನು ನುಡಿಸುವವನೂ ಆದ ಶ್ರೀಕೃಷ್ಣಪರಮಾತ್ಮನಿಗೆ ವಂದಿಸುವೆನು.

೧೮೫. ಅಪ್ರತಿಮವಾದ ರೂಪದಿಂದ ಕೂಡಿ, ರತ್ನಾಲಂಕಾರಭೂಷಿತನಾಗಿ ಕಂದರ್ಪನಿಗಿಂತ ಕೋಟಿಗುಣಲಾವಣ್ಯವನ್ನು ಬೀರುತ್ತಿರುವ ಶಾಂತಸ್ವರೂಪನಾದ ಸರ್ವೇಶ್ವರನಿಗೆ ನಮಸ್ಕರಿಸುವೆನು.

೧೮೬. ಒಂದುಕಡೆ ಬೃಂದಾವನದಲ್ಲಿ ರಾಧೆಯೊಡನೆ ಕ್ರೀಡಿಸುತ್ತಲೂ, ನಿರ್ಜನವಾದ ಅರಣ್ಯದಲ್ಲೊಂದು ಕಡೆ ರಾಧೆಯ ವಕ್ಷಃಸ್ಥಲದಲ್ಲಿ ವಿಹರಿಸುತ್ತಲೂ ಇರುವ ಶ್ರೀಕೃಷ್ಣಪರಮಾತ್ಮನನ್ನು ಸ್ತುತಿಸುವೆನು.

೧೮೭. ಕೆಲವೆಡೆ ರಾಧೆಯೊಡನೆ ಜಲಕ್ರೀಡೆಯಾಡುತ್ತಲೂ, ವನದಲ್ಲಿ ಕೆಲವೆಡೆ ರಾಧೆಯ ತಲೆಗೂದಲನ್ನು ಬಾಚಿ ಹೆರಳು ಹಾಕುತ್ತಲೂ ಇರುವ ನಂದ ಕಿಶೋರನಿಗೆ ನಮಿಸುವೆನು.

ಕುತ್ರಚಿದ್ರಾಧಿಕಾಪಾದೇ ದತ್ತವಂತಮಲಕ್ತಕಂ ।
ರಾಧಾಚರ್ವಿತತಾಂಬೂಲಂ ಗೃಹ್ಣಂತಂ ಕುತ್ರಚಿನ್ಮುದಾ ॥ ೧೮೮ ॥

ಪಶ್ಯಂತಂ ಕುತ್ರಚಿದ್ರಾಧಾಂ ಪಶ್ಯಂತೀಂ ವಕ್ರಚಕ್ಷುಷಾ ।
ದತ್ತವಂತಂ ಚ ರಾಧಾಯೈ ಕೃತ್ವಾ ಮಾಲಾಂ ಚ ಕುತ್ರಚಿತ್ ॥ ೧೮೯ ॥

ಕುತ್ರಚಿದ್ರಾಧಯಾ ಸಾರ್ಧಂ ಗಚ್ಛಂತಂ ರಾಸಮಂಡಲಂ ।
ರಾಧಾದತ್ತಾಂ ಗಲೇ ಮಾಲಾಂ ಧೃತವಂತಂ ಚ ಕುತ್ರಚಿತ್ ॥ ೧೯೦ ॥

ಸಾರ್ಧಂ ಗೋಪಾಲಿಕಾಭಿಶ್ಚ ವಿಹರಂತಂ ಚ ಕುತ್ರಚಿತ್ ।
ರಾಧಾಂ ಗೃಹೀತ್ವಾ ಗಚ್ಛಂತಂ ವಿಹಾಯ ತಾಂ ಚ ಕುತ್ರಚಿತ್ ॥ ೧೯೧ ॥

---

೧೮೮. ಒಮ್ಮೆ ರಾಧೆಯ ಪಾದಗಳಿಗೆ ಅರಗಿನ ರಸವನ್ನು ಲೇಪಿಸುತ್ತಲೂ, ಮತ್ತೊಮ್ಮೆ ರಾಧೆಯು ಅಗಿಯುತ್ತಿರುವ ತಾಂಬೂಲವನ್ನು ಸಂತೋಷದಿಂದ ಸ್ವೀಕರಿಸುತ್ತಲೂ ಇರುವ ಗೋಪಕಿಶೋರನಿಗೆ ನಮಿಸುವೆನು.

೧೮೯. ಒಮ್ಮೊಮ್ಮೆ ತನ್ನನ್ನು ವಕ್ರಕಟಾಕ್ಷದಿಂದ ನೋಡುತ್ತಿರುವ ರಾಧೆಯ ಸೌಂದರ್ಯವನ್ನು ದೃಷ್ಟಿಸಿ ನೋಡುತ್ತಲೂ, ಒಮ್ಮೊಮ್ಮೆ ಪುಷ್ಪಮಾಲೆಯನ್ನು ಪೋಣಿಸಿ ರಾಧೆಗೆ ಕೊಡುತ್ತಲೂ ಇರುವ ನಂದನಂದನಗೆ ವಂದಿಸುವೆನು

೧೯೦. ಒಮ್ಮೆ ರಾಧೆಯೊಡನೆ ರಾಸಕ್ರೀಡೆಗಾಗಿ ರಾಸಮಂಡಲಕ್ಕೆ ಹೋಗುತ್ತಲೂ, ಒಮ್ಮೆ ರಾಧೆಯು ಕೊಟ್ಟ ಹೂಮಾಲೆಯನ್ನು ಕಂಠದಲ್ಲಿ ಧರಿಸುತ್ತಲೂ ಇರುವ ರಾಸೇಶ್ವರನಿಗೆ ನಮಿಸುವೆನು.

೧೯೧. ಕೆಲವೆಡೆ ಗೋಪಬಾಲಿಕೆಯರೊಡನೆ ವಿಹರಿಸುತ್ತಿರುವ, ಕೆಲವೆಡೆ ರಾಧೆಯ ಜೊತೆಯಲ್ಲೂ ಮತ್ತೆ ಕೆಲವೆಡೆ ರಾಧೆಯನ್ನು ಬಿಟ್ಟೂ ಕ್ರೀಡಿಸುತ್ತಿರುವ ಲೀಲಾಮಾನುಷರೂಪಿಗೆ ನಮಿಸುವೆನು.

ವಿಪ್ರಪತ್ನೀದತ್ತಮನ್ನಂ ಭುಕ್ತವಂತಂ ಚ ಕುತ್ರಚಿತ್ ।
ಭುಕ್ತವಂತಂ ತಾಲಫಲಂ ಬಾಲಕೈಃ ಸಹ ಕುತ್ರಚಿತ್ ॥ ೧೯೨ ॥

ವಸ್ತ್ರಂ ಗೋಪಾಲಿಕಾನಾಂ ಚ ಹರಂತಂ ಕುತ್ರಚಿನ್ಮುದಾ ।
ಗವಾಂ ಗಣಂ ವ್ಯಾಹರಂತಂ ಕುತ್ರಚಿದ್ಬಾಲಕೈಃ ಸಹ ॥ ೧೯೩ ॥

ಕಾಲಿಯಮೂರ್ಧ್ನಿ ಪಾದಾಬ್ಜಂ ದತ್ತವಂತಂ ಚ ಕುತ್ರಚಿತ್ ।
ವಿನೋದಮುರಲೀಶಬ್ದಂ ಕುರ್ವಂತಂ ಕುತ್ರಚಿನ್ಮುದಾ ॥ ೧೯೪ ॥

ಗಾಯಂತಂ ರಮ್ಯಸಂಗೀತಂ ಕುತ್ರಚಿದ್ಬಾಲಕೈಃ ಸಹ ।
ಸ್ತುತ್ವಾ ಶಕ್ರಃ ಸ್ತವೇಂದ್ರೇಣ ಪ್ರಣನಾಮ ಹರಿಂ ಭಿಯಾ ॥ ೧೯೫ ॥

---

೧೯೨. ಒಮ್ಮೆ ಬ್ರಾಹ್ಮಣಪತ್ನಿಯು ಕೊಟ್ಟ ಅನ್ನವನ್ನು ಊಟಮಾಡಿಯೂ, ಮತ್ತೊಮ್ಮೆ ಗೋಪಬಾಲಕರೊಡನೆ ತಾಲಫಲವನ್ನು ಉಪಭೋಗಿಸಿಯೂ, ಸಂತುಷ್ಟನಾಗಿರುವ ಆನಂದಸಾಗರನಿಗೆ ನಮಿಸುವೆನು.

೧೯೩. ಒಮ್ಮೆ ವಿಲಾಸಾರ್ಥವಾಗಿ ಗೋಪಾಲಿಕೆಯರ ವಸ್ತ್ರವನ್ನು ಅಪಹರಿಸುತ್ತಲೂ, ಮತ್ತೊಮ್ಮೆ ಗೋಪಬಾಲಕರೊಡಗೂಡಿ ಗೋಸಮೂಹವನ್ನು ಮಾತನಾಡಿಸುತ್ತಲೂ ಇರುವ ಗೋಪಕಿಶೋರನಿಗೆ ವಂದಿಸುವೆನು.

೧೯೪. ಒಮ್ಮೆ ಕಾಳಿಂಗಸರ್ಪನ ಹೆಡೆಯ ಮೇಲೆ ತನ್ನ ಪಾದಕಮಲಗಳನ್ನಿಟ್ಟು ನರ್ತನಮಾಡುತ್ತಲೂ, ಮತ್ತೊಮ್ಮೆ ವಿನೋದಾರ್ಥವಾಗಿ ಕೊಳಲನ್ನು ನುಡಿಸುತ್ತಲೂ ಇರುವ ಲೀಲಾವಿನೋದಿಯನ್ನು ವಂದಿಸುವೆನು.

೧೯೫. ಕೆಲವುವೇಳೆ ಬಾಲಕರೊಡನೆ ರಮ್ಯವಾಗಿ ಸಂಗೀತವನ್ನು ಹಾಡುತ್ತಲೂ ವಿಹರಿಸುತ್ತಿದ್ದ ಶ್ರೀಹರಿಯನ್ನು ದೇವೇಂದ್ರನು ಮೇಲೆ ಹೇಳಿದ ದಿವ್ಯಸ್ತೋತ್ರಗಳಿಂದ ಸ್ತುತಿಸಿ ನಮಸ್ಕರಿಸಿದನು.

ಪುರಾ ದತ್ತೇನ ಗುರುಣಾ ರಣೇ ವೃತ್ರಾಸುರೇಣ ಚ ।
ಕೃಷ್ಣೇನ ದತ್ತಂ ಕೃಪಯಾ ಬ್ರಹ್ಮಣೇ ಚ ತಪಸ್ಯತೇ ॥ ೧೯೬ ॥

ಏಕಾದಶಾಕ್ಷರೋ ಮಂತ್ರಃ ಕವಚಂ ಸರ್ವಲಕ್ಷಣಂ ।
ದತ್ತಮೇತತ್ಕುಮಾರಾಯ ಪುಷ್ಕರೇ ಬ್ರಹ್ಮಣಾ ಪುರಾ ॥ ೧೯೭ ॥

ಕುಮಾರೇಣಚಾಂಗಿರಸೇ ಗುರವೇಂಗಿರಸಾ ಮುನೇ ।
ಇದಮಿಂದ್ರಕೃತಂ ಸ್ತೋತ್ರಂ ನಿತ್ಯಂ ಭಕ್ತ್ಯಾ ಚ ಯಃ ಪಠೇತ್ ॥ ೧೯೮ ॥

ಸ ಹಿ ಪ್ರಾಪ್ಯ ದೃಢಾಂ ಭಕ್ತಿಮಂತೇ ದಾಸ್ಯಂ ಲಭೇದ್ಧ್ರುವಂ ।
ಜನ್ಮಮೃತ್ಯುಜರಾವ್ಯಾಧಿಶೋಕೇಭ್ಯೋ ಮುಚ್ಯತೇ ನರಃ ।
ನ ಹಿ ಪಶ್ಯತಿ ಸ್ವಪ್ನೇಽಪಿ ಯಮದೂತಂ ಯಮಾಲಯಂ ॥ ೧೯೯ ॥

---

೧೯೬. ಈ ದಿವ್ಯಸ್ತೋತ್ರವನ್ನು ಹಿಂದೆ ವೃತ್ರಾಸುರನೊಡನೆ ಯುದ್ಧ ಸಂಭವಿಸಿದಾಗ ದೇವೇಂದ್ರನಿಗೆ ಗುರುವಾದ ಬೃಹಸ್ಪತಿಯು ಉಪದೇಶಿಸಿದನು. ಮೊದಲು ತಪಸ್ಸುಮಾಡುತ್ತಿದ್ದ ಬ್ರಹ್ಮನಿಗೆ ದಯಾಮಯನಾದ ಶ್ರೀಕೃಷ್ಣನು ಈ ಸ್ತೋತ್ರವನ್ನು ಪದೇಶಿಸಿದನು.

೧೯೭. ಪೂರ್ವದಲ್ಲಿ ಹನ್ನೊಂದಕ್ಷರದ ದಿವ್ಯ ಮಂತ್ರವೂ, ಸರ್ವಲಕ್ಷಣೋಪೇತವಾದ ಕವಚವೂ, ಬ್ರಹ್ಮನಿಂದ ಕುಮಾರನಿಗೆ ಪುಷ್ಕರಕ್ಷೇತ್ರದಲ್ಲಿ ಉಪದೇಶಿಸಲ್ಪಟ್ಟಿತು.

೧೯೮-೧೯೯. ಎಲೈ ನಾರದಮುನಿಯೇ, ಮಂತ್ರಕವಚಗಳನ್ನು ಕುಮಾರನು ಅಂಗಿರಸ್ಸನಿಗೂ, ಅಂಗಿರಸನು ಗುರುವಾದ ಬೃಹಸ್ಪತ್ಯಾಚಾರ್ಯರಿಗೂ ಉಪದೇಶಿಸಿದನು. ದೇವೇಂದ್ರಕೃತವಾದ ಈ ದಿವ್ಯಸ್ತೋತ್ರವನ್ನು ಪ್ರತಿದಿನವೂ ಭಕ್ತಿಯಿಂದ ಪಠಿಸುವವರು ಶ್ರೀಹರಿಯಲ್ಲಿ ದೃಢಭಕ್ತಿಯನ್ನು ಹೊಂದಿ ಅಂತ್ಯಕಾಲದಲ್ಲಿ ಶ್ರೀಹರಿಯ ದಾಸ್ಯವನ್ನು ನಿಶ್ಚಿತವಾಗಿಯೂ ಪಡೆಯುವರು. ಅಲ್ಲದೆ ಜನನಮರಣಗಳಿಂದಲೂ, ಮುಪ್ಪು, ರೋಗ ಮತ್ತು ಶೋಕಗಳಿಂದಲೂ ಮುಕ್ತರಾಗಿ ಸ್ವಪ್ನದಲ್ಲಿಯೂ ಯಮದೂತರನ್ನೂ, ಯಮನಗರಿಯನ್ನೂ ನೋಡುವುದಿಲ್ಲ.

॥ ನಾರಾಯಣ ಉವಾಚ ॥

ಇಂದ್ರಸ್ಯ ವಚನಂ ಶ್ರುತ್ವಾ ಪ್ರಸನ್ನಃ ಶ್ರೀನಿಕೇತನಃ ॥ ೨೦೦ ॥

ಪ್ರೀತ್ಯಾ ತಸ್ಮೈ ವರಂ ದತ್ವಾ ಸ್ಥಾಪಯಾಮಾಸ ಪರ್ವತಂ ।
ಪ್ರಣಮ್ಯ ಚ ಹರಿಂ ಶಕ್ರಃ ಪ್ರಯಯೌ ಸ್ವಗಣೈಃ ಸಹ ॥ ೨೦೧ ॥

ಗಹ್ವರಸ್ಥಾ ಜನಾಃ ಸರ್ವೇ ಪ್ರಜಗ್ಮುರ್ಗಹ್ವರಾದ್ಗೃಹಂ ।
ತೇ ಸರ್ವೇ ಮೇನಿರೇ ಕೃಷ್ಣಂ ಪರಿಪೂರ್ಣತಮಂ ವಿಭುಂ ॥ ೨೦೨ ॥

ಪುರಸ್ಕೃತ್ಯ ವ್ರಜಸ್ಥಾಂಶ್ಚ ಪ್ರಯಯೌ ಸ್ವಾಲಯಂ ಹರಿಃ ।
ತುಷ್ಟಾವ ನಂದಃ ಪುತ್ರಂ ತಂ ಪೂರ್ಣಬ್ರಹ್ಮಸನಾತನಂ ।
ಪುಲಕಾಂಚಿತಸರ್ವಾಂಗೋ ಭಕ್ತಿಪೂರ್ಣಾಶ್ರುಲೋಚನಃ ॥ ೨೦೩ ॥

೨೦೦–೨೦೧. ನಾರಾಯಣಮಹರ್ಷಿ:—ದೇವೇಂದ್ರನ ಸ್ತುತಿಯನ್ನು ಕೇಳಿ, ಪ್ರಸನ್ನನಾದ ಲಕ್ಷ್ಮೀಕಾಂತನು ಪ್ರೀತನಾಗಿ ಅವನಿಗೆ ವರವನ್ನು ಕೊಟ್ಟು, ಗೋವರ್ಧನಪರ್ವತವನ್ನು ಕೆಳಗಿರಿಸಿದನು. ಅನಂತರ ದೇವೇಂದ್ರನು ಶ್ರೀಕೃಷ್ಣನಿಗೆ ನಮಸ್ಕರಿಸಿ, ತನ್ನ ಪರಿವಾರದೊಡನೆ ಹಿಂತಿರುಗಿದನು.

೨೦೨. ಅನಂತರ ಬೆಟ್ಟದ ಗುಹೆಯಲ್ಲಿ ಅಡಗಿಕೊಂಡಿದ್ದ ಜನರೆಲ್ಲರೂ ತಮ್ಮ ಮನೆಗೆ ತೆರಳಿದರು. ಅವರೆಲ್ಲರೂ ಶ್ರೀಕೃಷ್ಣನನ್ನು ಪರಿಪೂರ್ಣಸ್ವರೂಪನಾದ ಪರಮಾತ್ಮನೆಂದು ತಿಳಿದರು.

೨೦೩. ವ್ರಜನಿವಾಸಿಗಳನ್ನೆಲ್ಲ ಮುಂದುಮಾಡಿಕೊಂಡು ಶ್ರೀಹರಿಯು ತನ್ನ ಮಂದಿರಕ್ಕೆ ತೆರಳಿದನು. ಆಗ ನಂದಗೋಪನು ರೋಮಾಂಚಿತಶರೀರನಾಗಿ ಭಕ್ತಿಯಿಂದ ಕಣ್ಣುಗಳಲ್ಲಿ ಆನಂದಬಾಷ್ಪಗಳನ್ನು ಸುರಿಸುತ್ತ ಅನಾದಿಯೂ ಪೂರ್ಣಬ್ರಹ್ಮಸ್ವರೂಪನೂ ಆದ ತನ್ನ ಪುತ್ರನನ್ನು ಸ್ತುತಿಸಿದನು.

॥ ನಂದ ಉವಾಚ ॥

ನಮೋ ಬ್ರಹ್ಮಣ್ಯದೇವಾಯ ಗೋಬ್ರಾಹ್ಮಣಹಿತಾಯ ಚ ।
ಜಗದ್ಧಿತಾಯ ಕೃಷ್ಣಾಯ ಗೋವಿಂದಾಯ ನಮೋ ನಮಃ ॥ ೨೦೪ ॥

ನಮೋ ಬ್ರಹ್ಮಣ್ಯದೇವಾಯ ಬ್ರಹ್ಮಣೇ ಪರಮಾತ್ಮನೇ ॥ ೨೦೫ ॥

ಅನಂತಕೋಟಿಬ್ರಹ್ಮಾಂಡಧಾಮಧಾಮ್ನೇ ನಮೋಽಸ್ತು ತೇ ।
ನಮೋ ವತ್ಸಾದಿರೂಪಾಣಾಂ ಜೀವರೂಪಾಯ ಸಾಕ್ಷಿಣೇ ॥ ೨೦೬ ॥

ನಿರ್ಲಿಪ್ತಾಯ ನಿರ್ಗುಣಾಯ ನಿರಾಕಾರಾಯ ತೇ ನಮಃ ।
ಅತಿಸೂಕ್ಷ್ಮಸ್ವರೂಪಾಯ ಸ್ಥೂಲಾತ್ಸ್ಥೂಲತಮಾಯ ಚ ॥ ೨೦೭ ॥

ಸರ್ವೇಶ್ವರಾಯ ಸರ್ವಾಯ ತೇಜೋರೂಪ ನಮೋಽಸ್ತು ತೇ ।
ಅತಿಪ್ರತ್ಯಕ್ಷರೂಪಾಯ ಧ್ಯಾನಾಸಾಧ್ಯಾಯ ಯೋಗಿನಾಂ ॥ ೨೦೮ ॥

---

೨೦೪. ನಂದಗೋಪ :—ಬ್ರಹ್ಮಣ್ಯದೇವನೂ, ಗೋವುಗಳಿಗೂ, ಬ್ರಾಹ್ಮಣರಿಗೂ ಹಿತಕಾರಿಯೂ, ಜಗತ್ಪರಿಪಾಲಕನೂ, ಗೋಪಾಲಕನೂ ಆದ ಶ್ರೀಕೃಷ್ಣನಿಗೆ ನಮಸ್ಕರಿಸುವೆನು.

೨೦೫. ಪೂರ್ಣಬ್ರಹ್ಮನೂ, ಬ್ರಹ್ಮಣ್ಯದೇವನೂ ಆದ ಪರಮಾತ್ಮನಿಗೆ ನಮಸ್ಕರಿಸುವೆನು.

೨೦೬. ಅನಂತಕೋಟಿಬ್ರಹ್ಮಾಂಡಗಳ ಆಶ್ರಯಕ್ಕೂ ಆಶ್ರಯನಾದ ನಿನಗೆ ವಂದಿಸುವೆನು. ಹಸುಕರುಗಳಲ್ಲೆಲ್ಲ ಜೀವಸ್ವರೂಪನಾಗಿ ಸಾಕ್ಷಿರೂಪನಾಗಿರುವ ಪರಮಾತ್ಮನಿಗೆ ವಂದಿಸುವೆನು.

೨೦೭. ಪ್ರಪಂಚದಿಂದ ನಿರ್ಲಿಪ್ತನೂ, ಗುಣ ಮತ್ತು ಆಕಾರರಹಿತನೂ ಆದ ನಿನಗೆ ನಮಸ್ಕಾರಗಳು ಅತ್ಯಂತ ಸೂಕ್ಷ್ಮಸ್ವರೂಪನೂ, ಸ್ಥೂಲವಸ್ತುಗಳಲ್ಲೆಲ್ಲ ಸ್ಥೂಲವಾದವನೂ ಆದ ನಿನಗೆ ವಂದನೆಗಳು.

೨೦೮. ಸರ್ವೇಶ್ವರನೂ, ಸರ್ವಮಯನೂ, ತೇಜಃಸ್ವರೂಪನೂ ಆದ ನಿನಗೆ ನಮಸ್ಕಾರಗಳು. ಎಲ್ಲರಿಗೂ ಪ್ರತ್ಯಕ್ಷರೂಪನೂ, ಯೋಗಿಗಳ ಧ್ಯಾನಕ್ಕೆ ಸಿಲುಕದವನೂ ಆದ ನಿನಗೆ ವಂದನೆಗಳು.

ಬ್ರಹ್ಮವಿಷ್ಣು ಮಹೇಶಾನಾಂ ವಂದ್ಯಾಯ ನಿತ್ಯರೂಪಿಣೇ ।
ಧಾಮ್ನೇ ಚತುರ್ಣಾಂ ವರ್ಣಾನಾಂ ಯುಗೇಷ್ವೇವ ಚತುರ್ಷು ಚ ॥ ೨೦೯ ॥

ಶುಕ್ಲ ರಕ್ತ ಪೀತಶ್ಯಾಮಾಭಿಧಾನಗುಣಶಾಲಿನೇ ।
ಯೋಗಿನೇ ಯೋಗರೂಪಾಯ ಗುರವೇ ಯೋಗಿನಾಮಪಿ ॥ ೨೧೦ ॥

ಸಿದ್ಧೇಶ್ವರಾಯ ಸಿದ್ಧಾಯ ಸಿದ್ಧಾನಾಂ ಗುರವೇ ನಮಃ ।
ಯಂ ಸ್ತೋತುಮಕ್ಷಮೋ ಬ್ರಹ್ಮಾ ವಿಷ್ಣುರ್ಯಂ ಸ್ತೋತುಮಕ್ಷಮಃ ॥

ಯಂ ಸ್ತೋತುಮಕ್ಷಮೋ ರುದ್ರಃ ಶೇಷೋ ಯಂ ಸ್ತೋತುಮಕ್ಷಮಃ ।
ಯಂ ಸ್ತೋತುಮಕ್ಷಮೋ ಧರ್ಮೋ ಯಂ ಸ್ತೋತುಮಕ್ಷಮೋ ರವಿಃ ॥

ಯಂ ಸ್ತೋತುಮಕ್ಷಮೋ ಲಂಬೋದರಶ್ಚಾಪಿ ಷಡಾನನಃ ।
ಯಂ ಸ್ತೋತುಮಕ್ಷಮಾಃ ಸರ್ವೇ ಮುನಯಃ ಸನಕಾದಯಃ ॥ ೨೧೩ ॥

---

೨೦೯. ಬ್ರಹ್ಮವಿಷ್ಣುಮಹೇಶರರಿಗೆ ವಂದ್ಯನೂ, ನಿತ್ಯರೂಪನೂ, ಚತುರ್ಯುಗಗಳಲ್ಲಿಯೂ ಚಾತುರ್ವರ್ಣ್ಯಗಳಿಗೆ ಆಶ್ರಯನೂ ಆದ ನಿನಗೆ ವಂದನೆಗಳು.

೨೧೦. ಬಿಳುಪು, ಕೆಂಪು, ಹಳದಿ ಮತ್ತು ಕಪ್ಪೆಂಬ ವರ್ಣಗಳಿಗೆ ಆಶ್ರಯನೂ ಯೋಗಸ್ವರೂಪನೂ, ಯೋಗಿಗಳ ಗುರುವೂ ಆದ ಪರಮಯೋಗಿಗೆ ಸಾಷ್ಟಾಂಗ ವೆರಗುವೆನು

೨೧೧. ಸರ್ವಸಿದ್ಧೇಶ್ವರನೂ, ಸಿದ್ಧಸ್ವರೂಪನೂ, ಸಿದ್ಧಪುರುಷರ ಗುರುವೂ ಆದ ನಿನಗೆ ನಮಸ್ಕರಿಸುವೆನು. ಯಾವ ಪರಮಾತ್ಮನನ್ನು ಸ್ತುತಿಸಲು ಚತುರ್ಮುಖನಾದ ಬ್ರಹ್ಮನೂ, ವಿಶ್ವವ್ಯಾಪಕನಾದ ವಿಷ್ಣುವೂ ಅಶಕ್ತರಾಗಿರುವರು.

೨೧೨. ಸರ್ವಜ್ಞನಾದ ರುದ್ರನೂ, ಸಹಸ್ರಮುಖವುಳ್ಳ ಆದಿಶೇಷನೂ ಸರ್ವಸಾಕ್ಷಿಯಾದ ಧರ್ಮನೂ, ತ್ರಿಮೂರ್ತ್ಯಾತ್ಮಕನಾದ ರವಿಯೂ ಆ ಪರಮಾತ್ಮನನ್ನು ಸ್ತುತಿಸಲು ಅಸಮರ್ಥರಾಗಿರುವರು.

೨೧೩. ಗಜವದನನಾಗಲೀ, ಷಡಾನನನಾಗಲೀ ಆ ಪರಮಾತ್ಮನನ್ನು ಸ್ತುತಿಸಲಾರರು. ಸನಕಾದಿ ಸಕಲ ಮುನಿಗಳೂ ಆ ಸರ್ವೇಶ್ವರನನ್ನು ಸ್ತುತಿಸಲಾರರು.

ಕಪಿಲೋ ನ ಕ್ಷಮಃ ಸ್ತೋತುಂ ಸಿದ್ಧೇಂದ್ರಾಣಾಂ ಗುರೋರ್ಗುರುಃ ।
ನ ಶಕ್ತೌ ಸ್ತವನಂ ಕರ್ತುಂ ನರನಾರಾಯಣಾವೃಷೀ ॥ ೨೧೪ ॥

ಅನ್ಯೇ ಜಡಧಿಯಃ ಕೇ ವಾ ಸ್ತೋತುಂ ಶಕ್ತಾಃ ಪರಾತ್ಪರಂ ।
ವೇದಾ ನ ಶಕ್ತಾ ನೋ ವಾಣೀ ನ ಚ ಲಕ್ಷ್ಮೀಃ ಸರಸ್ವತೀ ॥ ೨೧೫ ॥

ನ ರಾಧಾ ಸ್ತವನೇ ಶಕ್ತಾ ಕಿಂ ಸ್ತುವಂತಿ ವಿಪಶ್ಚಿತಃ ।
ಕ್ಷಮಸ್ವ ನಿಖಿಲಂ ಬ್ರಹ್ಮನ್ನಪರಾಧಂ ಕ್ಷಣೇ ಕ್ಷಣೇ ॥ ೨೧೬ ॥

ರಕ್ಷ ಮಾಂ ಕರುಣಾಸಿಂಧೋ ದೀನಬಂಧೋ ಭವಾರ್ಣವೇ ।
ಪುರಾ ತೀರ್ಥೇ ತಪಸ್ತಪ್ತ್ವಾ ಪುತ್ರಃ ಪ್ರಾಪ್ತಃ ಸನಾತನಃ ॥ ೨೧೭ ॥

---

೨೧೪ ಸಿದ್ಧಶ್ರೇಷ್ಠರ ಗುರುಗಳಿಗೆಲ್ಲ ಗುರುವಾದ ಕಪಿಲಮಹರ್ಷಿಯೂ ಕೂಡ ಆ ಪರಮಾತ್ಮನನ್ನು ಬಣ್ಣಿಸಲಾರನು. ನರನಾರಾಯಣ ಋಷಿಗಳೂ ಆ ಅಂತರ್ಯಾಮಿಯನ್ನು ಸ್ತುತಿಸಲಾರರು.

೨೧೫. ಹೀಗಿರುವಾಗ ಆ ಪರಾತ್ಪರವಸ್ತುವನ್ನು ಯಾವ ಜಡಮತಿಗಳು ತಾನೇ ಸ್ತುತಿಸಬಲ್ಲರು? ಚತುರ್ವೇದಗಳಾಗಲೀ, ಸಾಕ್ಷಾತ್ ಸರಸ್ವತಿಯಾಗಲೀ ಲಕ್ಷ್ಮೀದೇವಿಯಾಗಲೀ ಆ ಪರಮಾತ್ಮನನ್ನು ಹೊಗಳಿ ಮುಗಿಯಲಾರರು.

೨೧೬. ಶ್ರೀಕೃಷ್ಣನ ಅರ್ಧಾಂಗಿಯಾದ ರಾಧೆಯೇ ಅವನನ್ನು ಸ್ತುತಿಸಲಾಗದಿರುವಾಗ ವಿದ್ವಾಂಸರು ಸ್ತುತಿಸಿಮುಗಿಯುವುದೆಂದರೇನು? ಎಲೈ ಪರಬ್ರಹ್ಮನೇ ಕ್ಷಣಕ್ಷಣಕ್ಕೂ ನಾನು ಮಾಡಿದ ಅಪರಾಧವನ್ನು ಕ್ಷಮಿಸು.

೨೧೭. ಎಲೈ ಕರುಣಾಸಾಗರನೇ, ದೀನದಯಾಳುವೇ, ಸಂಸಾರಸಾಗರದಲ್ಲಿ ಮುಳುಗಿರುವ ನನ್ನನ್ನು ರಕ್ಷಿಸು. ಜನ್ಮಾಂತರದಲ್ಲಿ ಪುಣ್ಯಕ್ಷೇತ್ರದಲ್ಲಿ ತಪಸ್ಸುಮಾಡಿ ಅನಾದಿಯಾದ ನಿನ್ನನ್ನು ಪುತ್ರನನ್ನಾಗಿ ಪಡೆದೆನು.

ಸ್ವಕೀಯೇಚರಣಾಂಭೋಜೇ ಭಕ್ತಿಂ ದಾಸ್ಯಂ ಚ ದೇಹಿ ಮೇ ।
ಬ್ರಹ್ಮತ್ವಮಮರತ್ವಂ ವಾ ಸಾಲೋಕ್ಯಾದಿಕಮೇವ ವಾ ॥ ೨೧೮ ॥

ತ್ವತ್ಪದಾಂಭೋಜದಾಸ್ಯಸ್ಯ ಕಲಾಂ ನಾರ್ಹಂತಿ ಷೋಡಶೀಂ ।
ಇಂದ್ರತ್ವಂ ವಾ ಸುರತ್ವಂ ವಾ ಸಂಪ್ರಾಪ್ತಿಂ ಸಿದ್ಧಿಸ್ವರ್ಗಯೋಃ ॥ ೨೧೯ ॥

ರಾಜತ್ವಂ ಚಿರಜೀವಿತ್ವಂ ಸುಧಿಯೋ ಗಣಯಂತಿ ಕಿಂ ।
ಏತದ್ಯತ್ಕಥಿತಂ ಸರ್ವಂ ಬ್ರಹ್ಮತ್ವಾದಿಕಮೀಶ್ವರ ॥ ೨೨೦ ॥

ಭಕ್ತಸಂಗಕ್ಷಣಾರ್ಧಸ್ಯ ನೋಪಮಾ ತೇ ಕಿಮರ್ಹತಿ ।
ತ್ವದ್ಭಕ್ತೋ ಯಸ್ತ್ವತ್ಸದೃಶಃ ಕಸ್ತ್ವಾಂ ತರ್ಕಿತುಮೀಶ್ವರಃ ॥ ೨೨೧ ॥

ಕ್ಷಣಾರ್ಧಾಲಾಪಮಾತ್ರೇಣ ಪಾರಂ ಕರ್ತುಂ ಸ ಚೇಶ್ವರಃ ।
ಭಕ್ತಸಂಗಾದ್ಭವತ್ಯೇವ ಭಕ್ತಿಂ ಕರ್ತುಮನೇಕಧಾ ॥ ೨೨೨ ॥

---

೨೧೮. ನಿನ್ನ ಚರಣಕಮಲಗಳಲ್ಲಿ ಭಕ್ತಿಯನ್ನೂ ದಾಸ್ಯವನ್ನೂ ನನಗೆ ಅನುಗ್ರಹಿಸು. ಬ್ರಹ್ಮಪದವಿಯನ್ನಾಗಲೀ ದೇವತಾತ್ವವನ್ನಾಗಲೀ, ಸಾಲೋಕ್ಯಾದಿ ಮುಕ್ತಿಯನ್ನಾಗಲೀ ನಾನು ಬಯಸುವುದಿಲ್ಲ.

೨೧೯. ಅವೆಲ್ಲವೂ ನಿನ್ನ ಪಾದಕಮಲಗಳ ಸೇವೆಯ ಹದಿನಾರನೆಯ ಒಂದಂಶಕ್ಕೂ ಎಣೆಯಾಗುವುದಿಲ್ಲ. ಇಂದ್ರಪದವಿಯನ್ನಾಗಲೀ, ದೇವತಾತ್ವವನ್ನಾಗಲೀ, ಸ್ವರ್ಗಸಂಪ್ರಾಪ್ತಿಯನ್ನಾಗಲೀ ಜ್ಞಾನಿಗಳು ಬಯಸುವುದಿಲ್ಲ.

೨೨೦-೨೨೧. ಹೀಗಿರುವಾಗ ರಾಜಪದವಿಯನ್ನಾಗಲೀ, ಚಿರಂಜೀವಿತ್ವವನ್ನಾಗಲೀ ಜ್ಞಾನಿಗಳು ಗಣಿಸುವರೇ? ಎಲೈ ಸರ್ವೇಶ್ವರನೇ, ನಾನು ಹೇಳಿದ ಈ ಬ್ರಹ್ಮಪದವಿಯೇ ಮುಂತಾದವು ಕ್ಷಣಾರ್ಧಕಾಲ ಭಕ್ತರ ಸಹವಾಸ ಮಾಡುವುದರ ಸಾಮ್ಯವನ್ನು ಹೊಂದಲಾರವು. ನಿನ್ನ ಭಕ್ತನೂ ನಿನಗೆ ಸಮಾನನಾಗುವಾಗ ನಿನ್ನ ಮಹಿಮೆಯನ್ನು ತರ್ಕಿಸಲು ಸುಲಭಸಾಧ್ಯವೇ?

೨೨೨. ಕ್ಷಣಾರ್ಧಕಾಲ ವಿಷ್ಣುಭಕ್ತನೊಡನೆ ಸತ್ಸಲ್ಲಾಪಮಾಡಿದರೆ ಆ ಭಕ್ತನು ತನ್ನೊಡನೆ ಮಾತಾಡಿದವನನ್ನು ಸಂಸಾರಸಾಗರದಿಂದ ಪಾರುಗಾಣಿಸುವನು. ಭಕ್ತರಸಂಪರ್ಕದಿಂದ ಅನೇಕ ವಿಧ ಭಕ್ತಿಯನ್ನು ಸಾಧಿಸಲು ಸಾಧ್ಯವಾಗುವುದು.

ತ್ವದ್ಭಕ್ತಜಲದಾಲಾಪಜಲಸೇಕೇನ ವರ್ಧತೇ |
ಅಭಕ್ತಾಲಾಪಾಪಾತ್ತು ಶುಷ್ಕತಾಂ ಯಾತಿ ತತ್ಕ್ಷಣಂ || ೨೨೩ ||

ತ್ವದ್ಗುಣಸ್ಮೃತಿಸೇಕಾಚ್ಚ ವರ್ಧತೇ ತತ್ಕ್ಷಣೇ ಸ್ಫುಟಂ |
ತ್ವದ್ಭಕ್ತ್ಯಂಕುರಮುದ್ಭೂತಂ ಸ್ಫೀತಂ ಮಾನಸಜಂ ಪರಂ || ೨೨೪ ||

ನ ನಶ್ಯಂ ವರ್ಧನೀಯಂ ಚ ನಿತ್ಯಂ ನಿತ್ಯಂ ಕ್ಷಣೇ ಕ್ಷಣೇ |
ತತಃ ಸಂಪ್ರಾಪ್ಯ ವೃಕ್ಷತ್ವಂ ಭಕ್ತಸ್ಯ ಜೀವನಾಯ ಚ || ೨೨೫ ||

ದದಾತ್ಯೇವ ಫಲಂ ತಸ್ಮೈ ಹರಿದಾಸ್ಯಮನುತ್ತಮಂ |
ಸಂಪ್ರಾಪ್ಯ ದುರ್ಲಭಂ ದಾಸ್ಯಂ ಯದಿ ದಾಸೋ ಬಭೂವ ಹ || ೨೨೬ ||

ಸುನಿಶ್ಚಯೇನ ತೇನೈವ ಜಿತಂ ಸರ್ವಂ ಭಯಾದಿಕಂ |
ಇತ್ಯೇವಮುಕ್ತ್ವಾ ಭಕ್ತ್ಯಾ ಚ ನಂದಸ್ತಸ್ಥೌ ಹರೇಃ ಪುರಃ || ೨೨೭ ||

---

೨೨೩. ಭಕ್ತಿಎಂಬಲತೆಯು ನಿನ್ನ ಭಕ್ತನೆಂಬ ಮೇಘದ ಸವಿಮಾತೆಂಬ ನೀರೆರೆಯುವಿಕೆಯಿಂದ ವೃದ್ಧಿಹೊಂದುತ್ತದೆ. ಭಕ್ತರಲ್ಲದವರೊಡನೆ ಮಾತಾಡುವ ತಾಪದಿಂದ ಆ ಕ್ಷಣವೇ ಆ ಲತೆಯು ಒಣಗಿಹೋಗುತ್ತದೆ.

೨೨೪. ಮನಸ್ಸಿನಲ್ಲಿ ಜನಿಸಿದ ನಿನ್ನ ಭಕ್ತಿಯೆಂಬ ಅಂಕುರವು ನಿನ್ನ ಗುಣ ಸ್ಮರಣೆಯೆಂಬ ಜಲಸೇಕದಿಂದ ಮರುಕ್ಷಣದಲ್ಲೇ ಚಿಗುರಿ ಸ್ವೇಚ್ಛೆಯಾಗಿ ವೃದ್ಧಿಗೊಳ್ಳುವುದು.

೨೨೫. ಆ ಭಕ್ತ್ಯಂಕುರವು ನಾಶವಾಗದಂತೆ ಪ್ರತಿನಿತ್ಯವೂ ಕ್ಷಣಕ್ಷಣದಲ್ಲಿಯೂ ವೃದ್ಧಿಗೊಳಿಸುತ್ತಿರಬೇಕು. ಆಗ ಅದು ವೃಕ್ಷರೂಪವಾಗಿ ಬೆಳೆದು ಭಕ್ತನ ಜೀವನವನ್ನು ಕಲ್ಪಿಸುತ್ತದೆ.

೨೨೬-೨೨೭. ಅನಂತರ ಅವನಿಗೆ ' ಹರಿದಾಸ್ಯ , ವೆಂಬ ಶ್ರೇಷ್ಠವಾದ ಫಲವನ್ನು ಕೊಡುತ್ತದೆ. ಈರೀತಿ ಸರ್ವಸುಲಭವಲ್ಲದ ' ಹರಿದಾಸ್ಯ ' ವನ್ನು ಪಡೆದ ಹರಿದಾಸನು ನಿಶ್ಚಯವಾಗಿಯೂ ಸಕಲ ಭಯಗಳಿಂದಲೂ ಪಾರಾಗುವನು. ಈ ರೀತಿಯಾಗಿ ನಂದನು ಭಕ್ತಿಪೂರ್ವಕವಾಗಿ ಸ್ತುತಿಸಿ ಶ್ರೀಹರಿಯ ಮುಂದೆ ಕೈಮುಗಿದು ನಿಂತುಕೊಂಡನು.

ಪ್ರಸನ್ನವದನಃ ಕೃಷ್ಣೋ ದದೌ ತಸ್ಮೈ ತದೀಪ್ಸಿತಂ ।
ಏವಂ ನಂದಕೃತಂ ಸ್ತೋತ್ರಂ ನಿತ್ಯಂ ಭಕ್ತ್ಯಾ ಚ ಯಃ ಪಠೇತ್ ।
ಸುದೃಢಾಂ ಭಕ್ತಿಮಾಪ್ನೋತಿ ಸದ್ಯೋ ದಾಸ್ಯಂ ಲಭೇದ್ಧರೇಃ ॥ ೨೨೮ ॥

ತಪಸ್ತಪ್ತ್ವಾ ಯದಾ ದ್ರೋಣಸ್ತೀರ್ಥೇ ಚ ಧರಯಾ ಸಹ ।
ಸ್ತೋತ್ರಂ ತಸ್ಮೈ ಪುರಾ ದತ್ತಂ ಬ್ರಹ್ಮಣಾ ತತ್ಸುದುರ್ಲಭಂ ॥ ೨೨೯ ॥

ಹರೇಃ ಷಡಕ್ಷರೋ ಮಂತ್ರಃ ಕವಚಂ ಸರ್ವರಕ್ಷಣಂ ।
ಇಹ ಸೌಭರಿಣಾ ದತ್ತಂ ತಸ್ಮೈ ತುಷ್ಟೇನ ಪುಷ್ಕರೇ ॥ ೨೩೦ ॥

ತದೇವ ಕವಚಂ ಸ್ತೋತ್ರಂ ಸ ಚ ಮಂತ್ರಃ ಸುದುರ್ಲಭಃ ।
ಬ್ರಹ್ಮಣೋಂಶೇನ ಮುನಿನಾ ನಂದಾಯ ಚ ತಪಸ್ಯತೇ ॥ ೨೩೧ ॥

---

೨೨೮. ಆಗ ಪ್ರಸನ್ನವದನನಾದ ಶ್ರೀ ಕೃಷ್ಣನು ಅವನಿಗೆ ಇಷ್ಟಾರ್ಥವನ್ನು ಅನುಗ್ರಹಿಸಿದನು. ನಂದಗೋಪನು ಹೇಳಿದ ಈ ಸ್ತೋತ್ರವನ್ನು ಪ್ರತಿದಿನವೂ ಭಕ್ತಿಯಿಂದ ಪಠಿಸುವವನು ದೃಢಭಕ್ತಿಯನ್ನು ಹೊಂದಿ ಶ್ರೀಹರಿಯ ದಾಸ್ಯವನ್ನು ನಿಶ್ಚಿತವಾಗಿಯೂ ಪಡೆಯುವನು.

೨೨೯. ದ್ರೋಣ ಪ್ರಜಾಪತಿಯು ಧರಾದೇವಿಯೊಡನೆ ಪುಣ್ಯತೀರ್ಥವಲ್ಲಿ ತಪಸ್ಸುಮಾಡುತ್ತಿದ್ದಾಗ ದುರ್ಲಭವಾದ ಈ ಸ್ತೋತ್ರವನ್ನು ಬ್ರಹ್ಮನು ಅವನಿಗೆ ಅನುಗ್ರಹಿಸಿದನು.

೨೩೦. ಅಲ್ಲದೆ ಸೌಭರಿಮಹರ್ಷಿಯು ಅವನ ತಪಸ್ಸಿಗೆ ಮೆಚ್ಚಿ ಶ್ರೀಹರಿಯ ಷಡಕ್ಷರ ಮಂತ್ರವನ್ನೂ, ಸರ್ವರಕ್ಷಣವೆಂಬ ಕವಚವನ್ನೂ ಪುಷ್ಕರಕ್ಷೇತ್ರದಲ್ಲಿ ಅನುಗ್ರಹಿಸಿದನು.

೨೩೧. ಅದೇ ಕವಚಸ್ತೋತ್ರಗಳನ್ನೂ ದುರ್ಲಭವಾದ ಅದೇ ಮಂತ್ರವನ್ನೂ ಬ್ರಹ್ಮಾಂಶಸಂಭೂತನಾದ ಮುನಿಯು ತಪಸ್ಸುಮಾಡುತ್ತಿದ್ದ ನಂದನಿಗೆ ಉಪದೇಶಿಸಿದನು.

ಮಂತ್ರಃ ಸ್ತೋತ್ರಂ ಚ ಕವಚಮಿಷ್ಟದೇವೋ ಗುರುಸ್ತಥಾ ।
ಯಾ ಯಸ್ಯ ವಿದ್ಯಾ ಪ್ರಾಚೀನಾ ನ ತಾಂ ತ್ಯಜತಿ ನಿಶ್ಚಿತಂ ॥ ೨೩೨ ॥

ಇತ್ಯೇವಂ ಕಥಿತಂ ಸ್ತೋತ್ರಂ ಶ್ರೀಕೃಷ್ಣಾಖ್ಯಾನಮದ್ಭುತಂ ।
ಸುಖದಂ ಮೋಕ್ಷದಂ ಸಾರಂ ಭವಬಂಧವಿಮೋಚನಂ ॥ ೨೩೩ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ಶ್ರೀಕೃಷ್ಣಜನ್ಮಖಂಡೇ
ನಾರಾಯಣನಾರದಸಂವಾದೇ ಇಂದ್ರಯಾಗಭಂಜನೋ
ನಾಮ ಏಕವಿಂಶತಿಶಮೋಽಧ್ಯಾಯಃ

---

೨೩೨. ಮಂತ್ರವೂ ಸ್ತೋತ್ರಕವಚಗಳೂ ಇಷ್ಟದೇವತೆ ಮತ್ತು ಗುರುವಿಗೆ ಸದೃಶವಾದುವು. ಯಾವುದು ಯಾರಿಗೆ ಪುರಾತನಕಾಲದಿಂದ ಬಂದ ವಿದ್ಯೆಯೋ ಅದನ್ನು ನಿಶ್ಚಯವಾಗಿಯೂ ಬಿಡಬಾರದು.

೨೩೩. ಈ ರೀತಿಯಾಗಿ ಸುಖಕರವೂ, ಮೋಕ್ಷದಾಯಕವೂ ಸಾರಭೂತವೂ ಭವಬಂಧವಿಮೋಚಕವೂ ಅತ್ಯದ್ಭುತವೂ ಆದ ಶ್ರೀಕೃಷ್ಣನ ಆಖ್ಯಾನವನ್ನೂ ಸ್ತೋತ್ರವನ್ನೂ ವಿವರಿಸಿದೆನು.

ಇಲ್ಲಿಗೆ ಶ್ರೀಬ್ರಹ್ಮವೈವರ್ತ ಮಹಾಪುರಾಣದ ಶ್ರೀಕೃಷ್ಣಜನ್ಮಖಂಡದಲ್ಲಿ
ಇಂದ್ರಯಾಗಭಂಜನವೆಂಬ ಇಪ್ಪತ್ತೊಂದನೆಯ
ಅಧ್ಯಾಯವು ಮುಗಿದುದು.

ಇಪ್ಪತ್ತೊಂದನೆಯ ಅಧ್ಯಾಯದ ಸಾರಾಂಶ

ಒಮ್ಮೆ ನಂದಗೋಪನು 'ಶಕ್ರಯಾಗ' ಮಾಡಲು ಗೋಕುಲದಲ್ಲಿದ್ದ ಗೋಪರನ್ನೆಲ್ಲ ಆಹ್ವಾನಿಸಿ, ಯಾಗಕ್ಕೆ ಬೇಕಾದ ಸಂಭಾರ ಸಾಮಗ್ರಿಗಳನ್ನೆಲ್ಲ ಸಿದ್ಧಪಡಿಸಿಕೊಂಡಿದ್ದನು. ಅಷ್ಟು ಹೊತ್ತಿಗೆ ಶ್ರೀಕೃಷ್ಣನು ಬಲರಾಮನೊಡನೆ ಬಂದು ಯಾದವರಾದ ತಾವು ಹರಿಭಕ್ತರಾದ ಬ್ರಾಹ್ಮಣರ ಸೇವೆಯನ್ನುಳಿದು ಯಾಗ ಮಾಡುವುದು ಧರ್ಮವಲ್ಲವೆಂದೂ, ಹಾಗೆ ಮಾಡಿ ದೇವೇಂದ್ರನೊಬ್ಬನನ್ನು ತೃಪ್ತಿಗೊಳಿಸಿದರೆ ಇತರ ದೇವತೆಗಳು ಕುಪಿತರಾಗುವರೆಂದೂ, ಹೇಳಿದನು. ಅಲ್ಲದೆ ತಮ್ಮ ಗೋವುಗಳಿಗೆ ನಿತ್ಯೋಪಕಾರಿಯಾದ ಗೋವರ್ಧನನ ಪೂಜೆಮಾಡುವುದು ಉಚಿತವೆಂದನು. ಅದಕ್ಕೆ ನಂದಗೋಪನು ಸುವೃಷ್ಟಿಗೂ, ಸಸ್ಯಸಂಪತ್ತಿಗೂ ಮೂಲಕಾರಣನಾದ ದೇವೇಂದ್ರನನ್ನು ಪೂಜಿಸುವುದು ತಮ್ಮ ವಂಶಾನುಕ್ರಮದಿಂದ ರೂಢಿಯಾಗಿರುವುದೆನಲು, ಶ್ರೀಕೃಷ್ಣನು ಸುವೃಷ್ಟಿಗೂ, ಸಸ್ಯಸಂಪತ್ತಿಗೂ, ಸೂರ್ಯದೇವನು ಕಾರಣನಾಗಿರುವುದರಿಂದಲೂ, ಜ್ಯೋತಿರ್ಮಯನೂ, ತ್ರಿಮೂರ್ತ್ಯಾತ್ಮಕನೂ ಆದ ಸೂರ್ಯದೇವನು ಪರಮಾತ್ಮನಿಗೆ ಅಭಿನ್ನನಾಗಿರುವುದರಿಂದಲೂ, ಸರ್ವೇಶ್ವರನಾದ ಪರಮಾತ್ಮನನ್ನೇ ಅನನ್ಯಭಕ್ತಿಯಿಂದ ಭಜಿಸಿ, ನಮ್ಮ ಸನ್ನಿಹಿತದೇವನಾದ ಗೋವರ್ಧನನನ್ನು ಪೂಜಿಸುವುದು ನ್ಯಾಯವಾಗಿದೆ ಎಂದನು. ಅದರಂತೆ ನಂದಗೋಪನು ಪರಿವಾರಸಮೇತನಾಗಿ ಅನನ್ಯಭಕ್ತಿಯಿಂದ ಗೋವರ್ಧನನನ್ನು ಪೂಜಿಸಿ, ವಿವಿಧ ಭಕ್ಷ್ಯಭೋಜ್ಯಗಳನ್ನು ನಿವೇದಿಸಲು, ಶ್ರೀಕೃಷ್ಣನೇ ಗೋವರ್ಧನನ ರೂಪದಿಂದ ಕಾಣಿಸಿಕೊಂಡು, ನೈವೇದ್ಯವನ್ನು ಭುಜಿಸಿ, ನಂದಗೋಪನಿಗೂ, ಅವನ ಪರಿವಾರದವರಿಗೂ ಇಷ್ಟಾರ್ಥವನ್ನು ಅನುಗ್ರಹಿಸಿದನು. ಅವರೆಲ್ಲರೂ ಸಂತುಷ್ಟರಾಗಿ ತಮ್ಮ ತಮ್ಮ ಮಂದಿರಕ್ಕೆ ತೆರಳಿದರು.

ಇತ್ತ 'ಶಕ್ರಯಾಗ' ಭಂಗದಿಂದ ಕುಪಿತನಾದ ದೇವೇಂದ್ರನು ಪ್ರಳಯ ಮಾರುತ ಮತ್ತು ಮೇಘಗಳೊಡಗೂಡಿ ನಂದನಗರಿಯನ್ನು ಮುಳುಗಿಸಲು ಬಂದನು ಅದನ್ನು ನೋಡಿ ಭೀತನಾದ ನಂದಗೋಪನು, ರೋಹಿಣಿ ಮತ್ತು ಯಶೋದೆಯನ್ನು ಕರೆದು ಬಲರಾಮಕೃಷ್ಣರೊಡನೆ ಗೋಕುಲದಿಂದ ಎಲ್ಲಿಗಾದರೂ ಹೊರಟುಹೋಗಬೇಕೆಂದು ಹೇಳಿಕಳುಹಿಸಿದನು. ಮತ್ತು ತಾನು ಬಹಳ ಭಯಭಕ್ತಿಯಿಂದ ದೇವೇಂದ್ರನನ್ನು ಸ್ತುತಿಸಲಾರಂಭಿಸಿದನು. ಆ ಸಮಯಕ್ಕೆ ಸರಿಯಾಗಿ ಶ್ರೀಕೃಷ್ಣನು ಅಲ್ಲಿಗೆ ಬಂದು ದೇವೇಂದ್ರನಿಗೆ ಹೆದರಬೇಕಿಲ್ಲವೆಂದು ತಂದೆಗೆ ಧೈರ್ಯಹೇಳಿ,

ಗೋಗೋಪಗೋಪಿಯರನ್ನೆಲ್ಲ ಗೋವರ್ಧನಗಿರಿಯ ಗುಹೆಯಲ್ಲಿ ಬಚ್ಚಿಟ್ಟು, ತನ್ನ ಎಡಗೈನಿಂದ ಗೋವರ್ಧನಗಿರಿಯನ್ನು ಛತ್ರಿಯಂತೆ ಲೀಲಾಜಾಲವಾಗಿ ಎತ್ತಿ ಹಿಡಿದನು. ಇದನ್ನು ತಿಳಿದು ಕೋಪಗೊಂಡ ದೇವೇಂದ್ರನು ಎಷ್ಟು ಬಿರುಸಾಗಿ ಮಳೆಗರೆಸಿದರೂ, ಯಾರಿಗೂ ಏನೂ ತೊಂದರೆಯಾಗಲಿಲ್ಲ. ಆಗ ಮಹಾಬಲಿಷ್ಠನಾದ ಪುರಂದರನು ತನ್ನ ವಜ್ರಾಯುಧದಿಂದ ಗೋವರ್ಧನಗಿರಿಯನ್ನು ಕತ್ತರಿಸಲು ತೊಡಗಿ, ಶ್ರೀಕೃಷ್ಣನಿಂದ ಸ್ತಂಭಿತನಾಗಿ ಮೂರ್ಛಾವಸ್ಥೆಯನ್ನು ಹೊಂದಿ ಶ್ರೀಕೃಷ್ಣನ ದಿವ್ಯರೂಪದ ಸಾಕ್ಷಾತ್ಕಾರವನ್ನು ಪಡೆದು, ಭಯಭಕ್ತಿಯಿಂದ ಸ್ತುತಿಸಲು, ಪ್ರಸನ್ನನಾದ ಶ್ರೀಕೃಷ್ಣನು ದೇವೇಂದ್ರನಿಗೆ ಇಷ್ಟಾರ್ಥವನ್ನಿತ್ತು ಗೋವರ್ಧನಗಿರಿಯನ್ನು ಕೆಳಗಿರಿಸಿ, ನಂದಾದಿಗಳೊಡನೆ ಗೋಕುಲಕ್ಕೆ ಹಿಂತಿರುಗಿದನು. ಆಗ ನಂದಗೋಪನು ಶ್ರೀಕೃಷ್ಣಪರಮಾತ್ಮನ ಅಪಾರಮಹಿಮೆಯನ್ನು ತಿಳಿದು ಅನನ್ಯಭಕ್ತಿಯಿಂದ ಅವನನ್ನು ಸ್ತುತಿಸಿ, ಶಾಶ್ವತವಾದ ಹರಿಭಕ್ತಿಯನ್ನು ಬೇಡಿದನು. ಪ್ರಸನ್ನನಾದ ಶ್ರೀಹರಿಯು ಅವನ ಇಷ್ಟಾರ್ಥವನ್ನು ಅನುಗ್ರಹಿಸಿದನು. ಈ ಅಧ್ಯಾಯದಲ್ಲಿರುವ ಶ್ರೀಹರಿಯ ಸ್ತೋತ್ರವನ್ನು ತ್ರಿಸಂಧ್ಯೆಯಲ್ಲೂ ಭಕ್ತಿಯಿಂದ ಪಠಿಸುವವರು ಶ್ರೀಹರಿಯ ಸಾನ್ನಿಧ್ಯವನ್ನು ಪಡೆಯುವರು.

— ॥ ಓಂ ॥—

—॥ ಶ್ರೀ ಗಣೇಶಾಯ ನಮಃ ॥—

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಶ್ರೀಕೃಷ್ಣಜನ್ಮಖಂಡೇ

॥ ದ್ವಾವಿಂಶೋಽಧ್ಯಾಯಃ ॥

॥ ಶ್ರೀ ನಾರಾಯಣ ಉವಾಚ ॥

ಏಕದಾ ರಾಧಿಕಾನಾಥೋ ಬಲೇನ ಸಹ ಬಾಲಕೈಃ ।
ಜಗಾಮ ತತ್ತಾಲವನಂ ಪರಿಪಕ್ವಫಲಾನ್ವಿತಂ ॥ ೧ ॥

ವೃಕ್ಷಾಣಾಂ ರಕ್ಷಿತಾ ದೈತ್ಯಃ ಖರರೂಪೀ ಚ ಧೇನುಕಃ ।
ಕೋಟಿಸಿಂಹಸಮಬಲೋ ದೇವಾನಾಂ ದರ್ಪನಾಶನಃ ॥ ೨ ॥

ಶರೀರಂ ಪರ್ವತಸಮಂ ಕೂಪತುಲ್ಯೇ ಚ ಲೋಚನೇ ।
ಈಷಾಪಂಕ್ತಿಸಮಾದಂತಾಸ್ತುಂಡಂ ಪರ್ವತಗಹ್ವರಂ ॥ ೩ ॥

ಇಪ್ಪತ್ತೆರಡನೆಯ ಅಧ್ಯಾಯವು.

೧. ಶ್ರೀನಾರಾಯಣಮಹರ್ಷಿ :—ಒಮ್ಮೆ ರಾಧಾರಮಣನಾದ ಶ್ರೀಕೃಷ್ಣನು ಬಲರಾಮನೊಡನೆಯೂ, ಗೋಪಾಲಕರೊಡನೆಯೂ, ಪಕ್ವಫಲಗಳಿಂದ ಪರಿಪೂರ್ಣವಾದ ತಾಲವನಕ್ಕೆ ಹೋದನು.

೨. ಅಲ್ಲಿ ಕೋಟಿಸಿಂಹಗಳ ಬಲವುಳ್ಳವನೂ, ದೇವತೆಗಳ ದರ್ಪವನ್ನು ನಾಶಗೊಳಿಸುವವನೂ ಆದ ಧೇನುಕನೆಂಬ ರಾಕ್ಷಸನು ಕತ್ತೆಯ ರೂಪದಲ್ಲಿದ್ದು ಆ ತಾಲವನ್ನು ರಕ್ಷಿಸಿಕೊಂಡಿದ್ದನು.

೩. ಅವನ ಶರೀರವು ಪರ್ವತಕ್ಕೆ ಸದೃಶವಾಗಿಯೂ, ಎರಡುಕಣ್ಣುಗಳು ಭಾವಿಯಷ್ಟು ಆಳವಾಗಿಯೂ, ಹಲ್ಲುಗಳು ನೇಗಿಲಿನ ' ಈಚು ' ಮರದಂತೆ ದೀರ್ಘವಾಗಿಯೂ, ಬಾಯಿಯು ಪರ್ವತದಗುಹೆಯಂತೆ ಭಯಂಕರವಾಗಿಯೂ ಇದ್ದಿತು.

ಶತಹಸ್ತಪರಿಮಿತಾ ಜಿಹ್ವಾ ಲೋಲಾ ಭಯಾನಕಾ ।
ಕಾಸಾರಸದೃಶೀ ನಾಭಿಃ ಶಬ್ದಸ್ತಸ್ಯ ಭಯಾನಕಃ ॥ ೪ ॥

ದೃಷ್ಟ್ವಾ ತಾಲವನಂ ಬಾಲಾ ಹರ್ಷಮಾಪುರನಿಂದಿತಾಃ ।
ಕೌತುಕಾತ್ಕೃಷ್ಣಮೂಚುಸ್ತೇ ಸ್ಮೇರಾನನ ಸರೋರುಹಾಃ ॥ ೫ ॥

॥ ಬಾಲಾ ಊಚುಃ ॥

ಹೇ ಕೃಷ್ಣ ಕರುಣಾಸಿಂಧೋ ದೀನಬಂಧೋ ಜಗತ್ಪತೇ ।
ಮಹಾಬಲ ಬಲಭ್ರಾತಃ ಸಮಸ್ತಬಲಿನಾಂ ವರ ॥ ೬ ॥

ಅವಧಾನಂ ಕುರು ವಿಭೋ ಕ್ಷಣಾರ್ಧಂ ನೋ ನಿವೇದನೇ ।
ಕ್ಷುಧಿತಾನಾಂ ಶಿಶೂನಾಂ ಚ ಭಕ್ತಾನಾಂ ಭಕ್ತವತ್ಸಲ ॥ ೭ ॥

ಸ್ವಾದೂನಿ ಸುಂದರಾಣ್ಯೇವ ಪಶ್ಯ ತಾಲಫಲಾನಿ ಚ ।
ಭಂಕ್ತ್ವಾಂ ಚಾಲಯಿತುಂ ವೃಕ್ಷಾನ್ಪಾತಿತುಂ ಚ ಫಲಾನಿ ಚ ॥ ೮ ॥

---

೪. ನೂರು ಮೊಳ ದೀರ್ಘವಾದ ಮತ್ತು ಚಂಚಲವಾದ ನಾಲಿಗೆಯಿಂದಲೂ, ಸರೋವರದಂತೆ ಆಳವಾದ ಹೊಕ್ಕಳಿನಿಂದಲೂ, ಭಯಂಕರನಾಗಿದ್ದ ಆ ರಾಕ್ಷಸನು ಶಬ್ದಮಾಡುತ್ತಿದ್ದನು.

೫. ಗೋಪಬಾಲಕರೆಲ್ಲರೂ ಆ ತಾಳೆಯ ವನವನ್ನು ನೋಡಿ ಸಂತೋಷ ಗೊಂಡವರಾಗಿ, ಮುಖದಲ್ಲಿ ಮಂದಹಾಸವನ್ನು ಬೀರುತ್ತ ಕುತೂಹಲದಿಂದ ಶ್ರೀಕೃಷ್ಣ ನನ್ನು ಕುರಿತಿಂತೆಂದರು.

೬-೭. ಬಾಲಕರು :—ದಯಾಸಮುದ್ರನೂ, ದೀನಬಂಧುವೂ, ಜಗತ್ಪತಿಯೂ, ಮಹಾಬಲಿಷ್ಠನೂ, ಬಲರಾಮನ ಸಹೋದರನೂ, ಬಲಶಾಲಿಗಳಲ್ಲಿ ಅಗ್ರಗಣ್ಯನೂ ಆದ ಎಲೈ ಕೃಷ್ಣನೇ, ನಮ್ಮ ವಿಜ್ಞಾಪನೆಯನ್ನು ಕ್ಷಣಕಾಲ ಸಾವಧಾನದಿಂದ ಕೇಳು. ಭಕ್ತವತ್ಸಲನಾದ ನೀನು ಹಸಿದು ಬಳಲಿರುವ ನಿನ್ನ ಭಕ್ತರಾದ ಬಾಲಕರಲ್ಲಿ ದಯೆತೋರು.

೮-೯. ಈ ವನದಲ್ಲಿರುವ ತಾಳೆಯ ಹಣ್ಣುಗಳು ಮನೋಹರವಾಗಿಯೂ ರುಚಿಕರವಾಗಿಯೂ ಇವೆ. ಮರಗಳನ್ನು ಅಲ್ಲಾಡಿಸಿ ಮತ್ತು ಮುರಿದು ವಿವಿಧ

ನಾನಾವರ್ಣಾನಿ ಪುಷ್ಪಾಣಿ ಪಕ್ವಾನಿ ದುರ್ಲಭಾನಿ ಚ ।
ಆಜ್ಞಾಂ ಕರೋಷಿ ಚೇತ್ಕೃಷ್ಣ ಚೇಷ್ಟಾಂ ಕರ್ತುಂ ವಯಂ ಕ್ಷಮಾಃ ॥ ೯ ॥

ಕಿಂ ತ್ವತ್ರ ದೈತ್ಯೋ ಬಲವಾನ್ಖರರೂಪೀ ಚ ಧೇನುಕಃ ।
ಅಜಿತಸ್ತ್ರಿದಶೈಃ ಸರ್ವೈರ್ಮಹಾಬಲಪರಾಕ್ರಮಃ ॥ ೧೦ ॥

ದುರ್ನಿವಾರ್ಯಶ್ಚ ಸರ್ವೇಷಾಂ ಕಂಸಸ್ಯ ಸಚಿವೋ ಮಹಾನ್ ।
ಹಿಂಸಕಃ ಸರ್ವಜಂತೂನಾಂ ವನಾನಾಮಸ್ತಿ ರಕ್ಷಿತಾ ॥ ೧೧ ॥

ಸುವಿಚಾರ್ಯ ಜಗತ್ಕಾಂತ ವದ ನೋ ವದತಾಂ ವರ ।
ಯುಕ್ತಂ ಕಾರ್ಯಮಯುಕ್ತಂ ವಾ ಕರ್ತವ್ಯಮಥವಾ ನ ವಾ ॥ ೧೨ ॥

ಬಾಲಕಾನಾಂ ವಚಃ ಶ್ರುತ್ವಾ ಭಗವಾನ್ ಮಧುಸೂದನಃ ।
ಉವಾಚ ಮಧುರಂ ಬಾಲಾನ್ ವಚನಂ ತತ್ಸುಖಾವಹಂ ॥ ೧೩ ॥

ವರ್ಣಗಳುಳ್ಳ ಫಲಪುಷ್ಪಗಳನ್ನು ಕೆಳಕ್ಕೆ ಬೀಳಿಸಲು ನೀನು ನಮಗೆ ಅನುಮತಿ ಕೊಡುವುದಾದರೆ ನಾವು ಆ ಕೆಲಸವನ್ನು ಮಾಡಲು ಸಮರ್ಥರಾಗಿದ್ದೇವೆ.

೧೦. ಆದರೆ ಮಹಾಬಲ ಪರಾಕ್ರಮಿಯೂ, ದೇವತೆಗಳಿಗೆ ಸೋಲದವನೂ ಆದ ಧೇನುಕನೆಂಬ ರಾಕ್ಷಸನು ಕತ್ತೆಯರೂಪದಿಂದ ಇಲ್ಲಿದ್ದಾನೆ.

೧೧. ಕಂಸನ ಮಹಾಮಾತ್ಯನೂ ಯಾರಿಂದಲೂ ಎದುರಿಸಲ್ಪಡದವನೂ, ಸಕಲಜಂತುಗಳ ಹಿಂಸಕನೂ ಆದ ಈ ರಾಕ್ಷಸನು ವನಗಳನ್ನೆಲ್ಲ ರಕ್ಷಿಸುವವನಾಗಿದ್ದಾನೆ.

೧೨. ವಾಕ್ಚಾತುರ್ಯವುಳ್ಳ ಎಲೈ ಜಗತ್ಪತಿಯೇ, ನಾವು ಕೇಳಿದುದು ಯುಕ್ತವೇ? ಅಯುಕ್ತವೇ? ಕರ್ತವ್ಯವೇ? ಅಕರ್ತವ್ಯವೇ? ಎಂಬುವನ್ನು ಚೆನ್ನಾಗಿ ಪರ್ಯಾಲೋಚಿಸಿ ನಮಗೆ ಉತ್ತರಕೊಡು.

೧೩. ಈ ರೀತಿಯಾಡಿದ ಬಾಲಕರ ಮಾತುಗಳನ್ನು ಕೇಳಿ ಪ್ರಾಜ್ಞನಾದ ಮಧುಸೂದನನು ಆ ಬಾಲಕರನ್ನು ಕುರಿತು ಮಧುರವೂ, ಹಿತಕರವೂ ಆದ ಕೆಲವು ಮಾತುಗಳನ್ನು ಹೇಳಿದನು

॥ ಶ್ರೀ ಕೃಷ್ಣ ಉವಾಚ ॥

ಕಿಂ ವೋ ದೈತ್ಯಾದ್ಭಯಂ ಬಾಲಾ ಯೂಯಂ ಮತ್ಸಹಚಾರಿಣಃ ।
ವೃಕ್ಷಾನ್ಭಂಕ್ತ್ವಾ ಚಾಲಯಿತ್ವಾ ಫಲಾನಿ ಖಾದತಾಭಯಂ ॥ ೧೪ ॥

ಶ್ರೀಕೃಷ್ಣಾಜ್ಞಾಂ ಸಮಾದಾಯ ಬಾಲಕಾ ಬಲಶಾಲಿನಃ ।
ಉತ್ಪೇತುರ್ವೃಕ್ಷಶಿಖರಂ ಕ್ಷುಧಿತಾಶ್ಚ ಫಲಾರ್ಥಿನಃ ॥ ೧೫ ॥

ನಾನಾಪ್ರಕಾರವರ್ಣಾನಿ ಸ್ವಾದೂನಿ ಸುಂದರಾಣಿ ಚ ।
ಫಲಾನಿ ಪಾತಯಾಮಾಸುಃ ಪರಿಪಕ್ವಾನಿ ನಾರದ ॥ ೧೬ ॥

ಕೇಚಿದ್ಬಭಂಜುರ್ವೃಕ್ಷಾಂಶ್ಚ ಚಾಲಯಾಮಾಸುರೇವ ಚ ।
ಕೇಚಿತ್ಕೋಲಾಹಲಂ ಚಕ್ರುರ್ನನೃತುಸ್ತತ್ರ ಕೇಚನ ॥ ೧೭ ॥

---

೧೪. ಶ್ರೀಕೃಷ್ಣ :—ಎಲೈ ಬಾಲಕರೇ, ನನ್ನ ಸಹಚರರಾದ ನಿಮಗೆ ರಾಕ್ಷಸನಿಂದ ಭಯವೆಂದರೇನು? ಮರಗಳನ್ನು ಅಲ್ಲಾಡಿಸಿ ಮತ್ತು ಮುರಿದು, ಹಣ್ಣುಗಳನ್ನು ನಿರ್ಭಯವಾಗಿ ತಿನ್ನಿರಿ.

೧೫. ಹೀಗೆಂದು ಹೇಳಿದ ಶ್ರೀಕೃಷ್ಣನ ಆಜ್ಞಾವಚನಕ್ಕೆ ತಲೆಬಾಗಿ, ಬಲಶಾಲಿಗಳಾದ ಆ ಬಾಲಕರೆಲ್ಲರೂ ಹಸಿವನ್ನು ಪರಿಹರಿಸಿಕೊಳ್ಳಲು ಹಣ್ಣನ್ನು ಬಯಸಿ ಮರದ ಶಿಖರವನ್ನೇರಿದರು

೧೬. ಎಲೈ ನಾರದನೇ, ಪಕ್ವವಾಗಿ ವಿವಿಧವರ್ಣಗಳಿಂದ ಕಂಗೊಳಿಸುತ್ತಿರುವ ಮಧುರವಾದ ಅನೇಕ ಫಲಗಳನ್ನು ಆ ಬಾಲಕರು ಕೆಳಕ್ಕೆ ಉದುರಿಸಿದರು.

೧೭. ಕೆಲವು ಬಾಲಕರು ಮರಗಳನ್ನೇ ಮುರಿದರು. ಕೆಲವರು ಮರಗಳನ್ನಲ್ಲಾಡಿಸಿದರು. ಕೆಲವರು ಕೋಲಾಹಲಮಾಡಿದರು ಮತ್ತೆ ಕೆಲವರು ಕುಣಿದಾಡಿದರು.

ಅವರುಹ್ಯ ತರುಭ್ಯಶ್ಚ ಬಾಲಕಾ ಬಲಶಾಲಿನಃ ।
ಫಲಾನ್ಯಾದಾಯ ಗಚ್ಛಂತೋ ದದೃಶುರ್ದೈತ್ಯಪುಂಗವಂ ॥ ೧೮ ॥

ಮಹಾಬಲಂ ಮಹಾಕಾಯಂ ಘೋರಂ ಗರ್ದಭರೂಪಿಣಂ ।
ಆಗಚ್ಛಂತಂ ಮಹಾವೇಗಾತ್ಕುರ್ವಂತಂ ಶಬ್ದಮುಲ್ಬಣಂ ॥ ೧೯ ॥

ತಂ ದೃಷ್ಟ್ವಾ ರುರುದುಃ ಸರ್ವೇ ಫಲಾನಿ ತತ್ಯಜುರ್ಭಿಯಾ ।
ಕೃಷ್ಣ ಕೃಷ್ಣೇತಿ ಶಬ್ದಂ ಚ ಪ್ರಚಕ್ರುರ್ಬಹುಧಾ ಭೃಶಂ ॥ ೨೦ ॥

ಅಸ್ಮಾನ್ರಕ್ಷ ಸಮಾಗಚ್ಛ ಹೇ ಕೃಷ್ಣ ಕರುಣಾನಿಧೇ ।
ಹೇ ಸಂಕರ್ಷಣ ನೋ ರಕ್ಷ ಪ್ರಾಣಾ ನೋ ಯಾಂತಿ ದಾನವಾತ್ ॥ ೨೧ ॥

---

೧೮. ಅನಂತರ ಆ ಬಲಶಾಲಿಗಳಾದ ಬಾಲಕರು ಮರದಿಂದಿಳಿದು ಕೆಳಗೆ ಬಿದ್ದಿದ್ದ ಹಣ್ಣುಗಳನ್ನೆತ್ತಿಕೊಂಡು ಹೋಗುವಾಗ ಆ ದೈತ್ಯಪುಂಗವನನ್ನು ನೋಡಿದರು.

೧೯. ಮಹಾಬಲಿಷ್ಠನೂ, ಮಹಾಕಾಯನೂ, ಗರ್ದಭಾಕಾರನೂ ಆದ ಆ ಘೋರರಾಕ್ಷಸನು ಭಯಂಕರವಾದ ಶಬ್ದವನ್ನು ಮಾಡುತ್ತ ಅತಿ ವೇಗದಿಂದ ಬರುತ್ತಿದ್ದನು.

೨೦. ಆ ರಾಕ್ಷಸನನ್ನು ನೋಡಿ ಹೆದರಿದ ಆ ಬಾಲಕರೆಲ್ಲರೂ 'ಕೃಷ್ಣ ಕೃಷ್ಣಾ' ಎಂದು ಕೂಗಿಕೊಂಡು ಗಟ್ಟಿಯಾಗಿ ಅಳುತ್ತ ಹಣ್ಣುಗಳನ್ನೆಲ್ಲ ದಿಕ್ಕು ದಿಕ್ಕಿಗೂ ಎಸೆದರು.

೨೧. ಕರುಣಾಮಯನಾದ ಎಲೈ ಕೃಷ್ಣನೇ, ಓಡಿಬಂದು ನಮ್ಮನ್ನು ಕಾಪಾಡು. ಈ ರಾಕ್ಷಸನ ಬಾಧೆಯಿಂದ ನಮ್ಮ ಪ್ರಾಣಗಳು ಹೋಗುತ್ತಿವೆ. ಎಲೈ ಬಲರಾಮನೇ, ಬಂದು ಕಾಪಾಡು.

ಹೇ ಕೃಷ್ಣ ಹೇ ಕೃಷ್ಣ ಹರೇ ಮುರಾರೇ ।
ಗೋವಿಂದ ದಾಮೋದರ ದೀನಬಂಧೋ ॥
ಗೋಪೀಶ ಗೋಪೇಶ ಭವಾರ್ಣವೇಸ್ಮಾ ।
ನನಂತ ನಾರಾಯಣ ರಕ್ಷ ರಕ್ಷ ॥ ೨೨ ॥

ಭಯೇಽಭಯೇ ವಾಽಥ ಶುಭೇಽಶುಭೇ ವಾ ।
ಸುಖೇಷು ದುಃಖೇಷು ಚ ದೀನನಾಥ ॥
ತ್ವಯಾ ವಿನಾಽನ್ಯಂ ಶರಣಂ ಭವಾರ್ಣವೇ ।
ನ ನೋಽಸ್ತಿ ಹೇ ಮಾಧವ ರಕ್ಷ ರಕ್ಷ ॥ ೨೩ ॥

ಜಯ ಜಯ ಗುಣಸಿಂಧೋ ಕೃಷ್ಣ ಭಕ್ತೈಕಬಂಧೋ ।
ಬಹುತರಭಯಯುಕ್ತಾನ್ ಬಾಲಕಾನ್ರಕ್ಷ ರಕ್ಷ ॥
ಜಹಿ ದನುಜಕುಲಾನಾಮಿಶಮಸ್ಮಾಕಮಂತಂ ।
ಸುರಕುಲಬಲದರ್ಪಂ ವರ್ಧಯೇಮಂ ನಿಹತ್ಯ ॥ ೨೪ ॥

---

೨೨. 'ಕೃಷ್ಣಾ ಕೃಷ್ಣಾ, ಹರೀ, ಮುರಾರೀ, ಗೋವಿಂದಾ, ದಾಮೋದರಾ, ದೀನಬಂಧೂ, ಗೋಪೇಶಾ, ಅನಂತಾ, ನಾರಾಯಣಾ' ಸಂಸಾರಸಾಗರದಲ್ಲಿ ಮುಳುಗುತ್ತಿರುವ ನಮ್ಮನ್ನು ಕಾಪಾಡು.

೨೩. ಎಲೈ ಮಾಧವನೇ, ಭಯಾಭಯಗಳಲ್ಲಾಗಲೀ, ಶುಭಾಶುಭಗಳಲ್ಲಾಗಲಿ, ಸುಖದುಃಖಗಳಲ್ಲಾಗಲೀ ದೀನಬಂಧುವಾದ ನಿನ್ನನ್ನು ಬಿಟ್ಟು ಭವಸಾಗರದಲ್ಲಿ ನಮಗೆ ಬೇರೊಬ್ಬರು ಶರಣರಿಲ್ಲ. ನಮ್ಮನ್ನು ಕಾಪಾಡು, ಕಾಪಾಡು.

೨೪. ಕೃಷ್ಣಭಕ್ತರಿಗೆಲ್ಲ ಆಪ್ತಬಂಧುವಾದ ಎಲೈ ಗುಣಸಾಗರನೇ, ನಿನಗೆ ಜಯವಾಗಲಿ. ಅತ್ಯಂತ ಭೀತರಾಗಿರುವ ಬಾಲಕರಾದ ನಮ್ಮನ್ನು ಕಾಪಾಡು ನಮಗೆ ಅಂತಕರವಾದ ದನುಂಜವಂಶವನ್ನು ನಾಶಮಾಡು. ಈ ಧೇನುಕನನ್ನು ಸಂಹರಿಸಿ ದೇವತೆಗಳ ಬಲವನ್ನೂ ದರ್ಪವನ್ನೂ ವೃದ್ಧಿಗೊಳಿಸು.

ಬಾಲಾನಾಂ ವಿಕ್ಲವಂ ದೃಷ್ಟ್ವಾ ಬಲೇನ ಸಹ ಮಾಧವಃ ।
ಆಜಗಾಮ ಶಿಶುಸ್ಥಾನಂ ಭಯಹಾ ಭಕ್ತವತ್ಸಲಃ ॥ ೨೫ ॥

ಭಯಂ ನಾಸ್ತಿ ಭಯಂ ನಾಸ್ತೀತ್ಯುಕ್ತ್ವಾ ದುದ್ರಾವ ಸತ್ವರಂ ।
ಈಷದ್ಧಾಸ್ಯಪ್ರಸನ್ನಾಸ್ಯೋ ನಿರ್ಭಯಂ ದತ್ತವಾಂಚ್ಛಿಶೂನ್ ॥ ೨೬ ॥

ದೃಷ್ಟ್ವಾ ಕೃಷ್ಣಂ ಬಲಂ ಬಾಲಾ ನನೃತುರ್ವಿಜಹುರ್ಭಯಂ ।
ಹರಿಸ್ಮೃತಿಶ್ಚಾಭಯದಾ ಸರ್ವಮಂಗಲದಾಯಿಕಾ ॥ ೨೭ ॥

ಶ್ರೀಕೃಷ್ಣೋ ದಾನವಂ ದೃಷ್ಟ್ವಾ ಗ್ರಸಂತಂ ಪುರತಃ ಶಿಶೂನ್ ।
ಬಲಂ ಸಂಬೋಧ್ಯ ಬಲಿನಮುವಾಚ ಮಧುಸೂದನಃ ॥ ೨೮ ॥

॥ ಶ್ರೀ ಕೃಷ್ಣ ಉವಾಚ ॥

ದಾನವೋ ಬಲಿಪುತ್ರೋಽಯಂ ನಾಮ್ನಾ ಸಾಹಸಿಕೋ ಬಲೀ ।
ಗರ್ದಭೋ ಬ್ರಹ್ಮಶಾಪೇನ ಶಪ್ತೋ ದುರ್ವಾಸಸಾ ಪುರಾ ॥ ೨೯ ॥

---

೨೫. ಭಕ್ತವತ್ಸಲನೂ, ಭಯನಿವಾರಕನೂ ಆದ ಮಾಧವನು ಆ ಗೋಪಾಲಕರ ಗೋಳಾಟವನ್ನು ಕೇಳಿ, ಅವರಿರುವ ಸ್ಥಳಕ್ಕೆ ಬಲರಾಮನೊಡನೆ ಬಂದನು.

೨೬. 'ಹೆದರಬೇಡಿ, ಹೆದರಬೇಡಿ' ಎಂದು ಹೇಳುತ್ತ ಜಾಗ್ರತೆಯಾಗಿ ಓಡಿಬಂದು, ಪ್ರಸನ್ನವಾದ ಮುಖದಲ್ಲಿ ಮುಗುಳುನಗೆಯನ್ನು ಬೀರುತ್ತ, ಆ ಬಾಲಕರಿಗೆ ಅಭಯದಾನ ಮಾಡಿದನು.

೨೭. ಶ್ರೀಕೃಷ್ಣನೂ ಬಲರಾಮನೂ ಬಂದುದನ್ನು ನೋಡಿ ಆ ಬಾಲಕರು ಭಯರಹಿತರಾಗಿ ಕುಣಿದಾಡಿದರು. ಶ್ರೀಹರಿಯ ಸ್ಮರಣೆಯು ಅಭಯಪ್ರದವೂ, ಸರ್ವಮಂಗಳದಾಯಕವೂ ಆಗಿರುವುದು.

೨೮. ಬಾಲಕರನ್ನು ನುಂಗಲು ಬರುತ್ತಿದ್ದ ಧೇನುಕಾಸುರನನ್ನು ಶ್ರೀಕೃಷ್ಣನು ನೋಡಿ ಬಲಿಷ್ಠನಾದ ಬಲರಾಮನನ್ನು ಕುರಿತು ಮುಂದೆ ಹೇಳುವಂತೆ ಹೇಳಿದನು.

೨೯. ಶ್ರೀಕೃಷ್ಣ :—ಬಲಿಚಕ್ರವರ್ತಿಯ ಮಗನಾದ ಈ ದಾನವನು ಸಾಹಸಿಕನೆಂದು ಪ್ರಖ್ಯಾತಿಗೊಂಡಿದ್ದಾನೆ. ಪೂರ್ವದಲ್ಲಿ ಬ್ರಾಹ್ಮಣನಾದ ದೂರ್ವಾಸಮುನಿಯ ಶಾಪಕ್ಕೊಳಗಾಗಿ ಗರ್ದಭಾಕಾರದಲ್ಲಿದ್ದಾನೆ

ಪಾಪಿಷ್ಠೋ ಮಮ ವಧ್ಯೋಽಯಂ ಮಹಾಬಲಪರಾಕ್ರಮಃ ।
ಅಹಮೇನಂ ವಧಿಷ್ಯಾಮಿ ತ್ವಂ ರಕ್ಷ ಬಾಲಕಾನ್ಬಲ ॥ ೩೦ ॥

ಆದಾಯ ಬಾಲಕಾನ್ಸರ್ವಾನ್ದೂರಂ ಗಚ್ಛೇತ್ಯುವಾಚ ಹ ।
ತಾನ್ಗೃಹೀತ್ವಾ ಬಲಃ ಶೀಘ್ರಂ ಜಗಾಮ ತ್ವರಯಾಜ್ಞಯಾ ॥ ೩೧ ॥

ದೃಷ್ಟ್ವಾ ಕೃಷ್ಣಂ ದಾನವೇಂದ್ರೋ ಮಹಾಬಲಪರಾಕ್ರಮಃ ।
ಜಗ್ರಾಸ ಲೀಲಯಾ ಕೋಪಾಜ್ಜ್ವಲದಗ್ನಿಶಿಖೋಪಮಂ ॥ ೩೨ ॥

ಬಭೂವಾತಿದಾಹಯುಕ್ತೋ ಮರ್ತುಕಾಮೋಽತಿತೇಜಸಾ ।
ಉಜ್ಜಗ್ರಾಸ ಪುನರ್ದೈತ್ಯೋ ವಿಭುಂ ತೇಜಸ್ವಿನಂ ಭಿಯಾ ॥ ೩೩ ॥

ಉಜ್ಝಿತಂ ಸಂತಮೀಶಂ ಚ ದೃಷ್ಟ್ವಾ ದೈತ್ಯೋ ಮುಮೋಚ ಹ ।
ಅತೀವ ಸುಂದರಂ ಶಾಂತಂ ಜ್ವಲಂತಂ ಬ್ರಹ್ಮತೇಜಸಾ ॥ ೩೪ ॥

---

೩೦. ಮಹಾಬಲಿಷ್ಠನಾದ ಈ ಪಾಪಿಯು ನನ್ನಿಂದ ವಧಿಸಲ್ಪಡಲು ಯೋಗ್ಯನಾಗಿದ್ದಾನೆ. ಎಲೈ ಬಲರಾಮನೇ, ನಾನು ಈ ದಾನವನನ್ನು ಸಂಹರಿಸುವೆನು. ನೀನು ಈ ಬಾಲಕರನ್ನು ಸಂರಕ್ಷಿಸು.

೩೧. 'ಈ ಬಾಲಕರನ್ನೆಲ್ಲ ಕರೆದುಕೊಂಡು ದೂರಹೋಗು' ಎಂದು ಹೇಳಿದ ಶ್ರೀಕೃಷ್ಣನ ಆಜ್ಞಾನುಸಾರವಾಗಿ ಬಲರಾಮನು ಅವರನ್ನೆಲ್ಲ ಕರೆದುಕೊಂಡು ಜಾಗ್ರತೆಯಾಗಿ ಹೊರಟುಹೋದನು.

೩೨. ಇತ್ತ ಮಹಾಪರಾಕ್ರಮಿಯಾದ ಆ ದಾನವೇಂದ್ರನು, ಉರಿಯುವ ಅಗ್ನಿಶಿಖೆಯಂತೆ ತೇಜಸ್ವಿಯಾದ ಶ್ರೀಕೃಷ್ಣನನ್ನು ನೋಡಿ ಅತ್ಯಾತುರದಿಂದ ಅವನನ್ನು ನುಂಗಿಬಿಟ್ಟನು.

೩೩. ಆದರೆ ತೇಜಸ್ವಿಯಾದ ಆ ಪರಮಾತ್ಮನ ತೇಜಸ್ಸನು ತಡೆಯಲಾರದೆ ಆ ದೈತ್ಯನು ಸಾಯುವನೆಂದು ಹೆದರಿ ಅವನನ್ನು ಹೊರಕ್ಕೆ ವಮನಮಾಡಿದನು.

೩೪. ಈ ರೀತಿಯಾಗಿ ನುಂಗಿ ಹೊರಕ್ಕೆ ವಮನಮಾಡಿದರೂ ಜೀವಿತನಾಗಿರುವ ಅತ್ಯಂತಸುಂದರನೂ, ಶಾಂತಾಕಾರನೂ, ಬ್ರಹ್ಮತೇಜಸ್ಸಿನಿಂದ ಪ್ರಜ್ವಲಿಸುತ್ತಿರುವವನೂ ಆದ ಸರ್ವೇಶ್ವರನನ್ನು ನೋಡಿ ಆ ರಾಕ್ಷಸನು ಭಯದಿಂದ ಮುಕ್ತನಾದನು.

ಕೃಷ್ಣದರ್ಶನಮಾತ್ರೇಣ ಬಭೂವಾಸ್ಯ ಪುರಾ ಸ್ಮೃತಿಃ ।
ಆತ್ಮಾನಂ ಬುಬುಧೇ ಕೃಷ್ಣಂ ಜಗತಾಂ ಕಾರಣಂ ಪರಂ ॥ ೩೫ ॥

ತೇಜಃಸ್ವರೂಪಮೀಶಂ ತಂ ದೃಷ್ಟ್ವಾ ತುಷ್ಟಾವ ದಾನವಃ ।
ಯಥಾಗಮಂ ಯಥಾಜನ್ಮ ಗುಣಾತೀತಂ ಶ್ರುತೇಃ ಪರಂ ॥ ೩೬ ॥

॥ ದಾನವ ಉವಾಚ ॥

ವಾಮನೋಽಸಿ ತ್ವಮಂಶೇನ ಮತ್ಪಿತುರ್ಯಜ್ಞಭಿಕ್ಷುಕಃ ।
ರಾಜ್ಯಹರ್ತಾ ಚ ಶ್ರೀಹರ್ತಾ ಸುತಲಸ್ಥಲದಾಯಕಃ ॥ ೩೭ ॥

ಬಲಿಭಕ್ತಿವಶೋ ವೀರಃ ಸರ್ವೇಶೋ ಭಕ್ತವತ್ಸಲಃ ।
ಶೀಘ್ರಂ ತ್ವಂ ಹಿಂಧಿ ಮಾಂ ಪಾಪಂ ಶಾಪಾದ್ಗರ್ದಭರೂಪಿಣಂ ॥ ೩೮ ॥

---

೩೫. ಶ್ರೀಕೃಷ್ಣನನ್ನು ನೋಡಿದ ಮಾತ್ರದಿಂದಲೇ ಆವನಿಗೆ ಜನ್ಮಾಂತರದ ಸ್ಮರಣೆಯುಂಟಾಯಿತು. ಶ್ರೀಕೃಷ್ಣನನ್ನು ಜಗತ್ಕಾರಣನಾದ ಪರಮಪುರುಷನೆಂದು ತಿಳಿದನು.

೩೬. ನಿರ್ಗುಣನೂ, ನಿಗಮಾತೀತನೂ ಆದ ಆ ತೇಜೋಮಯನನ್ನು ನೋಡಿ, ಆ ದಾನವೇಂದ್ರನು ಶಾಸ್ತ್ರೋಕ್ತವಾಗಿ ಸ್ತುತಿಸಲಾರಂಭಿಸಿದನು.

೩೭. ದಾನವ :—ಎಲೈ ಪರಮಾತ್ಮನೇ, ನೀನು ನಿನ್ನ ಮೊಂದಂಶದಿಂದ ವಾಮನನಾಗಿ ಅವತರಿಸಿ, ನನ್ನ ತಂದೆಯಾದ ಬಲಿಚಕ್ರವರ್ತಿಯು ಯಾಗಮಾಡಿದಾಗ ಭಿಕ್ಷುಕನಾಗಿ ಬಂದು, ಅವನ ರಾಜ್ಯವನ್ನೂ ಸಂಪತ್ತನ್ನೂ ಅಪಹರಿಸಿ, ಆವನಿಗೆ ಸುತಲದಲ್ಲಿ ಸ್ಥಳವನ್ನು ಕೊಟ್ಟೆ.

೩೮. ಭಕ್ತವತ್ಸಲನೂ ಸರ್ವೇಶ್ವರನೂ ಆದ ನೀನು ಬಲಿಚಕ್ರವರ್ತಿಯ ಭಕ್ತಿಗೆ ವಶನಾದೆ. ಈಗ ಶಾಪದಿಂದ ಗರ್ದಭಾಕಾರವುಳ್ಳ ನನ್ನನ್ನೂ ಕೂಡ ಜಾಗ್ರತೆ ಕೊಂದು ಮುಕ್ತನನ್ನಾಗಿಮಾಡು.

ಮುನೇರ್ದುರ್ವಾಸಸಃ ಶಾಪಾದೀದೃಶಂ ಜನ್ಮ ಕುತ್ಸಿತಂ ।
ಮೃತ್ಯುರುಕ್ತಶ್ಚ ಮುನಿನಾ ತ್ವತ್ತೋ ಮಮ ಜಗತ್ಪತೇ ॥ ೩೯ ॥

ಷೋಡಶಾರೇಣ ಚಕ್ರೇಣ ಸುತೀಕ್ಷ್ಣೇನಾತಿತೇಜಸಾ ।
ಜಹಿ ಮಾಂ ಜಗತಾಂ ನಾಥ ಸದ್ಭಕ್ತಿಂ ಕುರು ಮೋಕ್ಷದ ॥ ೪೦ ॥

ತ್ವಮಂಶೇನ ವರಾಹಶ್ಚ ಸಮುದ್ಧರ್ತುಂ ವಸುಂಧರಾಂ ।
ವೇದಾನಾಂ ರಕ್ಷಿತಾ ನಾಥ ಹಿರಣ್ಯಾಕ್ಷನಿಷೂದನಃ ॥ ೪೧ ॥

ತ್ವಂ ನೃಸಿಂಹಃ ಸ್ವಯಂ ಪೂರ್ಣೋ ಹಿರಣ್ಯಕಶಿಪೋರ್ವಧೇ ।
ಪ್ರಹ್ಲಾದಾನುಗ್ರಹಾರ್ಥಾಯ ದೇವಾನಾಂ ರಕ್ಷಣಾಯ ಚ ॥ ೪೨ ॥

ತ್ವಂ ಚ ವೇದೋಽದ್ಧಾರಕರ್ತಾ ಮೀನಾಂಶೇನ ದಯಾನಿಧೇ ।
ನೃಪಸ್ಯ ಜ್ಞಾನದಾನಾಯ ರಕ್ಷಾಯೈ ಸುರವಿಪ್ರಯೋಃ ॥ ೪೩ ॥

---

೩೯ ದೂರ್ವಾಸಮುನಿಯ ಶಾಪದಿಂದ ನನಗೆ ಈರೀತಿಯಾದ ಕೀಳುಜನ್ಮವು ಬಂದಿತು. ಎಲೈ ಜಗದೊಡೆಯನೇ, ನಿನ್ನಿಂದಲೇ ನನಗೆ ಮರಣಸಂಭವಿಸುವುದೆಂದು ಆ ಮುನಿಯು ಹೇಳಿದನು.

೪೦. ಎಲೈ ಜಗದೊಡಯನೇ, ಹದಿನಾರು ಹಾರೆ ಕಾಲುಗಳುಳ್ಳ ತೀಕ್ಷ್ಣವಾದ ನಿನ್ನ ಸುದರ್ಶನ ಚಕ್ರದಿಂದ ನನ್ನನ್ನು ಸಂಹರಿಸಿ ಉತ್ತಮವಾದ ಭಕ್ತಿಯನ್ನೂ, ಮೋಕ್ಷವನ್ನೂ ನನಗೆ ಅನುಗ್ರಹಿಸು.

೪೧ ಎಲೈ ನಾಥನೇ, ಸಾಗರದಲ್ಲಿ ಮುಳಗಿದ್ದ ಭೂಮಿಯನ್ನು ಮೇಲಕ್ಕೆ ಎತ್ತಿ ವೇದಗಳನ್ನು ರಕ್ಷಿಸುವುದಕ್ಕಾಗಿ ನೀನು ನಿನ್ನದೊಂದಂಶದಿಂದ ಆದಿವರಾಹನಾಗಿ ಅವತರಿಸಿ ಹಿರಣಾಕ್ಷನನ್ನು ಸಂಹರಿಸಿದೆ.

೪೨. ನಿನ್ನ ಪರಮಭಕ್ತನಾದ ಪ್ರಹ್ಲಾದನಿಗೆ ಅನುಗ್ರಹಮಾಡುವುದಕ್ಕೂ, ದೇವತೆಗಳನ್ನು ರಕ್ಷಿಸಿ ಹಿರಣ್ಯಕಶಿಪುವನ್ನು ಶಿಕ್ಷಿಸುವುದಕ್ಕೂ ನಿನ್ನ ಪೂರ್ಣಾಂಶದಿಂದ ನೃಸಿಂಹನಾಗಿ ಅವತರಿಸಿದೆ.

೪೩. ಎಲೈ ದಯಾನಿಧಿಯೇ, ನೀನು ವೈವಸ್ವತಮನುವಿಗೆ ಜ್ಞಾನದಾನ ಮಾಡುವುದಕ್ಕೂ, ವೇದೋದ್ಧಾರಮಾಡಿ ದೇವಬ್ರಾಹ್ಮಣರನ್ನು ರಕ್ಷಿಸುವುದಕ್ಕೂ ಮತ್ಸ್ಯರೂಪದಿಂದ ಅವತಾರ ಮಾಡಿದೆ.

ಶೇಷಾಧಾರಶ್ಚ ಕೂರ್ಮಸ್ತ್ವಮಂಶೇನ ಸೃಷ್ಟಿಹೇತವೇ ।
ವಿಶ್ವಾಧಾರಶ್ಚ ವಿಶ್ವಸ್ತ್ವಮಂಶೇನಾಪಿ ಸಹಸ್ರಧೃಕ್ ॥ ೪೪ ॥

ರಾಮೋ ದಾಶರಥಿಸ್ತ್ವಂ ಚ ಜಾನಕ್ಯುದ್ಧಾರಹೇತವೇ ।
ದಶಕಂಧರಹಂತಾ ಚ ಸಿಂಧೌ ಸೇತುವಿಧಾಯಕಃ ॥ ೪೫ ॥

ಕಲಯಾ ಪರಶುರಾಮಶ್ಚ ಜಮದಗ್ನಿಸುತೋ ಮಹಾನ್ ।
ತ್ರಿಃಸಪ್ತಕೃತ್ವೋ ಭೂಪಾನಾಂ ನಿಹಂತಾ ಜಗತೀಪತೇ ॥ ೪೬ ॥

ಅಂಶೇನ ಕಪಿಲಸ್ತ್ವಂ ಚ ಸಿದ್ಧಾನಾಂ ಚ ಗುರೋರ್ಗುರುಃ ।
ಮಾತೃಜ್ಞಾನಪ್ರದಾತಾ ಚ ಯೋಗಶಾಸ್ತ್ರವಿಧಾಯಕಃ ॥ ೪೭ ॥

---

೪೪. ವಿಶ್ವಾಧಾರನೂ, ವಿಶ್ವರೂಪನೂ ಆದ ನೀನು ನಿನ್ನದೊಂದಂಶದಿಂದ ಕೂರ್ಮನಾಗಿ ಅವತರಿಸಿ ಆದಿಶೇಷನಿಗೆ ಆಧಾರನಾಗಿ ಜಗತ್ಸೃಷ್ಟಿಯನ್ನು ಕಾಪಾಡಿದೆ.

೪೫. ಸಮುದ್ರಕ್ಕೆ ಸೇತುವೆಯನ್ನು ಕಟ್ಟಿ ದಶಕಂಧರನನ್ನು ಕೊಂದು ಜಾನಕಿಯನ್ನು ಉದ್ಧಾರಮಾಡಲೋಸುಗ ನೀನು ದಶರಥಪುತ್ರನಾಗಿ ಶ್ರೀರಾಮನೆನಿಸಿಕೊಂಡೆ.

೪೬. ಎಲೈ ಜಗದೊಡೆಯನೇ, ನೀನು ನಿನ್ನದೊಂದು ಕಲೆಯಿಂದ ಜಮದಗ್ನಿ ಪುತ್ರನಾಗಿ ಪರಶುರಾಮನೆಂಬ ಹೆಸರಿನಿಂದ ಅವತರಿಸಿ ಇಪ್ಪತ್ತೊಂದುಸಾರಿ ಕ್ಷತ್ರಿಯರ ಮೇಲೆ ದಂಡೆತ್ತಿಹೋಗಿ ಅವರನ್ನು ನಾಶಗೊಳಿಸಿದೆ.

೪೭ ನಿನ್ನದೊಂದಂಶದಿಂದ ಕಪಿಲಮಹರ್ಷಿಯಾಗಿ ಹುಟ್ಟಿ, ಸಿದ್ಧಪುರುಷರ ಗುರುಗಳಿಗೆಲ್ಲ ಗುರುವೆನಿಸಿ, ತಾಯಿಗೆ ಜ್ಞಾನೋದಯವನ್ನುಂಟುಮಾಡಿ ಯೋಗ ಶಾಸ್ತ್ರವನ್ನು ವಿರಚಿಸಿದವನೂ ನೀನೇ

ಅಂಶೇನ ಜ್ಞಾನಿನಾಂ ಶ್ರೇಷ್ಠೌ ನರನಾರಾಯಣಾವೃಷೀ ।
ತ್ವಂ ಚ ಧರ್ಮಸುತೋ ಭೂತ್ವಾ ಲೋಕವಿಸ್ತಾರಕಾರಕಃ ॥ ೪೮ ॥

ಅಧುನಾ ಕೃಷ್ಣರೂಪಸ್ತ್ವಂ ಪರಿಪೂರ್ಣತಮಃ ಸ್ವಯಂ ।
ಸರ್ವೇಷಾಮವತಾರಾಣಾಂ ಬೀಜರೂಪಃ ಸನಾತನಃ ॥ ೪೯ ॥

ಯಶೋದಾಜೀವನೋ ನಿತ್ಯೋ ನಂದೈಕಾನಂದವರ್ಧನಃ ।
ಪ್ರಾಣಾಧಿದೇವೋ ಗೋಪೀನಾಂ ರಾಧಾಪ್ರಾಣಾಧಿಕಪ್ರಿಯಃ ॥ ೫೦ ॥

ವಸುದೇವಸುತಃ ಶಾಂತೋ ದೇವಕೀದುಃಖಭಂಜನಃ ।
ಅಯೋನಿಸಂಭವಃ ಶ್ರೀಮಾನ್ ಪೃಥಿವೀಭಾರಹಾರಕಃ ॥ ೫೧ ॥

ಪೂತನಾಯೈ ಮಾತೃಗತಿಂ ಪ್ರದಾತಾ ಚ ಕೃಪಾನಿಧಿಃ ।
ಬಕಕೇಶಿಪ್ರಲಂಬಾನಾಂ ಮಮಾಪಿ ಮೋಕ್ಷಕಾರಕಃ ॥ ೫೨ ॥

---

೪೮. ನೀನು ನಿನ್ನ ಅಂಶದಿಂದ ಜ್ಞಾನಿಗಳಲ್ಲಿ ಶ್ರೇಷ್ಠರಾದ ನರನಾರಾಯಣ ಋಷಿಗಳಾಗಿ ಅವತರಿಸಿದೆ. ನೀನು ಧರ್ಮಪುತ್ರನಾಗಿ ಅವತರಿಸಿ ಲೋಕವಿಸ್ತಾರವನ್ನು ಮಾಡಿದೆ.

೪೯. ಈಗ, ಸಕಲಾವತಾರಗಳಿಗೂ ಬೀಜರೂಪನೂ, ಸನಾತನನೂ ಆದ ನೀನು ನಿನ್ನ ಪೂರ್ಣಾಂಶದಿಂದ ಶ್ರೀಕೃಷ್ಣಸ್ವರೂಪದಿಂದ ಅವತರಿಸಿರುವೆ.

೫೦. ಯಶೋದೆಗೆ ಜೀವನಸ್ವರೂಪನೂ, ನಂದನಿಗೆ ಆನಂದದಾಯಕನೂ, ಆದ ನೀನು ಗೋಪಿಯರ ಪ್ರಾಣಗಳಿಗೆ ಅಧಿದೇವನೂ ರಾಧೆಗೆ ಪ್ರಾಣಕ್ಕಿಂತ ಪ್ರಿಯನೂ ಆಗಿರುವೆ.

೫೧ ವಸುದೇವಪುತ್ರನೂ, ದೇವಕಿಯ ದುಃಖನಾಶಕನೂ, ಅಯೋನಿ ಸಂಭವನೂ, ಶಾಂತಾಕಾರನೂ, ಆದ ನೀನು ಪೃಥ್ವಿಯ ಭಾರವನ್ನು ಇಳುಹುವವನಾಗಿದ್ದೀಯೆ.

೫೨. ದಯಾಮಯನಾದ ನೀನು ಪೂತನಿಗೆ ನಿನ್ನ ತಾಯ್ತನವನ್ನು ಅನುಗ್ರಹಿಸಿದೆ. ಬಕ, ಕೇಶಿ, ಪ್ರಲಂಬ ಮುಂತಾದ ಅಸುರರಿಗೂ, ನನಗೂ ಮೋಕ್ಷದಾಯಕನಾಗಿದ್ದೀಯೆ.

ಸ್ವೇಚ್ಛಾಮಯ ಗುಣಾತೀತ ಭಕ್ತಾನಾಂ ಭಯಭಂಜನ ।
ಪ್ರಸೀದ ರಾಧಿಕಾನಾಥ ಪ್ರಸೀದ ಕುರು ಮೋಕ್ಷಣಂ ॥ ೫೩ ॥

ಹೇ ನಾಥ ಗಾರ್ದಭೀಯೋನೇಃ ಸಮುದ್ಧರ ಭವಾರ್ಣವಾತ್ ।
ಮೂರ್ಖಸ್ತ್ವದ್ಭಕ್ತಪುತ್ರೋಽಹಂ ಮಾಮುದ್ಧರ್ತುಂ ತ್ವಮರ್ಹಸಿ ॥ ೫೪ ॥

ವೇದಾ ಬ್ರಹ್ಮಾದಯೋ ಯಂ ಚ ಮುನೀಂದ್ರಾಃ ಸ್ತೋತುಮಕ್ಷಮಾಃ ।
ಕಿಂ ಸ್ತೌಮಿ ತಂ ಗುಣಾತೀತಂ ಪುರಾ ದೈತ್ಯೋಽಧುನಾ ಖರಃ ॥ ೫೫ ॥

ಏವಂ ಕುರು ಕೃಪಾಸಿಂಧೋ ಯೇನ ಮೇ ನ ಭವೇಜ್ಜನುಃ ।
ದೃಷ್ಟ್ವಾ ಪಾದಾರವಿಂದಂ ತೇ ಕಃ ಪುನರ್ಭವನಂ ವ್ರಜೇತ್ ॥ ೫೬ ॥

ಬ್ರಹ್ಮಾ ಸ್ತೋತಾ ಖರಃ ಸ್ತೋತಾ ನೋಪಹಾಸಿತುಮರ್ಹಸಿ ।
ಸರ್ವೇಶ್ವರಸ್ಯ ವಿಜ್ಞಸ್ಯ ಯೋಗ್ಯಾಯೋಗ್ಯೇ ಸಮಾ ಕೃಪಾ ॥ ೫೭ ॥

---

೫೩. ಸ್ವೇಚ್ಛಾಮಯನೂ, ತ್ರಿಗುಣಾತೀತನೂ, ಭಕ್ತರಭಯನಾಶಕನೂ, ಆದ ಎಲೈ ರಾಧಾರಮಣನೇ, ನೀನು ಪ್ರಸನ್ನನಾಗಿ ನನಗೆ ಮೋಕ್ಷವನ್ನು ಕೊಡು.

೫೪. ಎಲೈ ಜಗದೊಡೆಯನೇ, ಸಂಸಾರಸಾಗರದಲ್ಲಿ ಗಾರ್ಧಭಯೋನಿಯಲ್ಲಿ ಹುಟ್ಟಿರುವ ನನ್ನನ್ನು ಪಾರುಗಾಣಿಸು. ನಿನ್ನ ಭಕ್ತನ ಮಗನೂ, ಮೂರ್ಖನೂ ಆದ ನನ್ನನ್ನು ನೀನು ಉದ್ಧಾರಮಾಡುವುದುಚಿತವಾಗಿದೆ.

೫೫. ಚತುರ್ವೇದಗಳೂ, ಬ್ರಹ್ಮಾದಿ ದೇವತೆಗಳೂ, ಮುನೀಂದ್ರಾದಿಗಳೂ ಯಾವ ಪರಮಾತ್ಮನನ್ನು ಸ್ತುತಿಸಲಾರರೋ ತ್ರಿಗುಣಾತೀತನಾದ ಆ ಪರಮಾತ್ಮನನ್ನು, ಪೂರ್ವದಲ್ಲಿ ದೈತ್ಯನೂ, ಈಗ ಕತ್ತೆಯೂ ಆಗಿರುವ ನಾನು ಹೇಗೆ ಸ್ತುತಿಸಲಿ.

೫೬. ಎಲೈ ಕರುಣಾಸಾಗರನೇ, ನನಗೆ ಪುನರ್ಜನ್ಮವಿಲ್ಲದಂತೆ ಅನುಗ್ರಹಿಸು. ನಿನ್ನ ಪಾದಾರವಿಂದಗಳನ್ನು ದರ್ಶನಮಾಡಿದನಂತರ ಯಾರು ಮನೆಗೆ ಹಿಂತಿರುಗಿಯಾರು ?

೫೭. 'ಬ್ರಹ್ಮನೂ ನನ್ನನ್ನು ಸ್ತುತಿಸುವವನು. ಕತ್ತೆಯಾದ ನೀನೂ ನನ್ನನ್ನು ಸ್ತುತಿಸುವವನು' ಎಂದು ನನ್ನನ್ನು ಹಾಸ್ಯಮಾಡಬೇಡ. ಸರ್ವಜ್ಞನೂ, ಸರ್ವೇಶ್ವರನೂ ಆದ ನಿನಗೆ ಯೋಗ್ಯರಲ್ಲೂ, ಅಯೋಗ್ಯರಲ್ಲೂ ಸಮನಾದ ದಯೆಯಿರಬೇಡವೇ ?

ಇತ್ಯೇವಮುಕ್ತ್ವಾ ದೈತ್ಯೇಂದ್ರಸ್ತಸ್ಥೌ ಚ ಪುರತೋ ಹರೇಃ ।
ಪ್ರಸನ್ನವದನಃ ಶ್ರೀಮಾನತಿತುಷ್ಟೋ ಬಭೂವ ಹ ॥ ೫೮ ॥

ಇದಂ ದೈತ್ಯಕೃತಂ ಸ್ತೋತ್ರಂ ನಿತ್ಯಂ ಭಕ್ತ್ಯಾ ಚ ಯಃ ಪಠೇತ್ ।
ಸಾಲೋಕ್ಯಸಾರ್ಷ್ಟಿಸಾಮೀಪ್ಯಂ ಲೀಲಯಾ ಲಭತೇ ಹರೇಃ ॥ ೫೯ ॥

ಇಹ ಲೋಕೇ ಹರೇರ್ಭಕ್ತಿಮಂತೇ ದಾಸ್ಯಂ ಸುದುರ್ಲಭಂ ।
ವಿದ್ಯಾಂ ಶ್ರಿಯಂ ಸುಕವಿತಾಂ ಪುತ್ರಪೌತ್ರಾನ್ಯಶೋ ಲಭೇತ್ ॥ ೬೦ ॥

॥ ಶ್ರೀ ನಾರಾಯಣ ಉವಾಚ ॥

ಶ್ರುತ್ವಾನುಮೋನೇ ದೈತ್ಯೇಂದ್ರಸ್ತವನಂ ಕರುಣಾನಿಧಿಃ ।
ಕಥಂ ಕರೋಮಿ ಸಂಹಾರಮೀದೃಶಂ ಭಕ್ತಮಿತ್ಯಹೋ ॥ ೬೧ ॥

---

೫೮. ಹೀಗೆ ಸ್ತುತಿಸಿ ಆ ರಾಕ್ಷಸೇಂದ್ರನು ಶ್ರೀಹರಿಯ ಮುಂದೆ ಸುಮ್ಮನೆ ನಿಂತುಕೊಂಡನು. ಪ್ರಸನ್ನಮುಖನಾದ ಶ್ರೀಹರಿಯು ಅವನ ಸ್ತುತಿಗೆ ಮೆಚ್ಚಿ ಸಂತೋಷವನ್ನು ವ್ಯಕ್ತಪಡಿಸಿದನು.

೫೯. ಧೇನುಕಾಸುರನು ಹೇಳಿದ ಈ ಸ್ತೋತ್ರವನ್ನು ಪ್ರತಿದಿನವೂ ಭಕ್ತಿಯಿಂದ ಪಠಿಸುವವರು ಶ್ರೀಹರಿಯ ಸಾಲೋಕ್ಯ, ಸಾರ್ಷ್ಟಿ ಮತ್ತು ಸಾಮೀಪ್ಯಗಳನ್ನು ಸುಲಭವಾಗಿ ಹೊಂದುವರು.

೬೦. ಇಹಲೋಕದಲ್ಲಿರುವವರಿಗೆ ಹರಿಭಕ್ತಿಯನ್ನೂ, ಸದ್ವಿದ್ಯೆಯನ್ನೂ, ಅತುಲೈಶ್ವರ್ಯವನ್ನೂ, ಉತ್ತಮವಾದ ಕವಿತಾಶಕ್ತಿಯನ್ನೂ, ಪುತ್ರಪೌತ್ರಾದಿಗಳನ್ನೂ, ಸತ್ಕೀರ್ತಿಯನ್ನೂ ಪಡೆದು ಅಂತ್ಯಕಾಲದಲ್ಲಿ ಸುದುರ್ಲಭವಾದ ಶ್ರೀಹರಿಯ ದಾಸ್ಯವನ್ನು ಹೊಂದುವರು.

೬೧. ಶ್ರೀನಾರಾಯಣ :—ಕರುಣಾಮಯನಾದ ಶ್ರೀಕೃಷ್ಣನು ರಾಕ್ಷಸೇಂದ್ರನ ಸ್ತುತಿಯನ್ನು ಕೇಳಿ 'ಇಂಥ ಭಕ್ತನನ್ನು ನಾನು ಹೇಗೆ ಸಂಹರಿಸಲಿ? ಎಂದು ಸಂಶಯಗ್ರಸ್ತನಾಗಿ ಯೋಚಿಸತೊಡಗಿದನು.

ಅನುಮನ್ಯ ಸ್ಮೃತಿಂ ತಸ್ಯ ಸಂಜಹಾರ ಹರಿಃ ಸ್ವಯಂ ।
ನ ಹಿ ಯುಕ್ತೋ ವಧಃ ಸ್ತೋತುರ್ದುರ್ವಕ್ತುರ್ವಿಧಿರೀಶ್ವರಾತ್ ॥ ೬೨ ॥

ದಾನವೋ ಮಾಯಯಾ ವಿಷ್ಣೋರ್ವಿಸಸ್ಮಾರ ಪುನಃ ಸ್ವಕಂ ।
ದುರುಕ್ತಿಸ್ತತ್ಕಂಠದೇಶೇ ಹ್ಯಧಿಷ್ಠಾನಂ ಚಕಾರ ಹ ॥ ೬೩ ॥

ಉವಾಚ ಶ್ರೀಹರಿಂ ದೈತ್ಯಃ ಕೋಪಾತ್ಪ್ರಸ್ಫುರಿತಾಧರಃ ।
ಮುನೇ ಸದ್ಯೋ ಮರ್ತುಕಾಮೋ ದೈವಗ್ರಸ್ತೋ ವಿಚೇತನಃ ॥ ೬೪ ॥

॥ ದೈತ್ಯ ಉವಾಚ ॥

ಧ್ರುವಂ ತ್ವಂ ಮರ್ತುಕಾಮೋಽಸಿ ದುರ್ಬುದ್ಧೇ ಮಾನವಾರ್ಭಕ ।
ಅದ್ಯ ಪ್ರಸ್ಥಾಪಯಿಷ್ಯಾಮಿ ತ್ವಾಮಹಂ ಯಮಮಂದಿರಂ ॥ ೬೫ ॥

---

೬೨. ಸ್ವಲ್ಪಹೊತ್ತು ಯೋಚಿಸಿದನಂತರ ಶ್ರೀಹರಿಯು ಆ ದಾನವನ ಸ್ಮರಣ ಶಕ್ತಿಯನ್ನು ಹೋಗಲಾಡಿಸಿದನು. ಏಕೆಂದರೆ ಸ್ತುತಿಸುವವನನ್ನು ವಧೆಮಾಡುವುಮುಚಿತವಲ್ಲ. ದುಷ್ಟನುಡಿಯಾಡುವವನು ಈಶ್ವರಪ್ರೇರಣೆಯಂತೆ ದುರ್ವಿಧಿಗೆ ಸಿಲುಕುವನು.

೬೩. ಅನಂತರ ಆ ದಾನವನು ವಿಷ್ಣುವಿನ ಮಾಯೆಯಿಂದ ತನ್ನ ಸ್ಮರಣ ಶಕ್ತಿಯನ್ನು ಕಳೆದುಕೊಂಡನು. ಕೂಡಲೇ ಅವನ ಕಂಠಪ್ರದೇಶದಲ್ಲಿ ದುಷ್ಟನುಡಿಗಳು ಬಂದು ನೆಲೆಸಿದವು.

೬೪. ಎಲೈ ನಾರದಮುನಿಯೇ, ಆಗ ಆ ದೈತ್ಯನು ವಿಧಿಪ್ರೇರಿತನಾಗಿ ತನ್ನ ಮರಣವನ್ನು ಬಯಸಿ, ಕೋಪದಿಂದ ತುಟಿಗಳನ್ನು ನಡುಗಿಸುತ್ತ, ವಿವೇಚನಾ ರಹಿತನಾಗಿ ಶ್ರೀಹರಿಯನ್ನು ಕುರಿತಿಂತೆಂದನು.

೬೫. ದೈತ್ಯ :—ಎಲೈ ದುಷ್ಟಬುದ್ಧಿಯುಳ್ಳ ಮಾನವ ಶಿಶುವೇ, ನೀನು ನಿಜವಾಗಿಯೂ ಸಾಯಲು ಬಯಸುತ್ತಿದ್ದೀಯೆ. ಇಂದು ನಾನು ನಿನ್ನನ್ನು ಯಮನ ಮಂದಿರಕ್ಕೆ ಕಳುಹಿಸುತ್ತೇನೆ.

ಆಯಾಸಿ ಜೀವನಾಕಾಂಕ್ಷೀ ಮಮ ತಾಲವನಂ ಶಿಶೋ ।
ನ ಯಾಸ್ಯಸಿ ಪುನರ್ಗೇಹಂ ಬಾಂಧವಂ ನ ಹಿ ದ್ರಕ್ಷ್ಯಸಿ ॥ ೭೬ ॥

ನ ಕಂಸೋ ನ ಜರಾಸಂಧೋ ನರಕೋ ನ ಸಮೋ ಮಮ ।
ದೇವಾಃ ಕಂಪಂತಿ ಮೇ ನಿತ್ಯಂ ಕೇ ಚಾನ್ಯೇ ಮತ್ಸಮಾ ಭುವಿ ॥ ೭೭ ॥

ನ ಹಿ ಸಂಹಾರಕರ್ತಾ ಚ ಮಾಂ ಸಂಹರ್ತುಂ ಕ್ಷಮಃ ಶಿವಃ ।
ನ ಚ ಬ್ರಹ್ಮಾ ನ ವಿಷ್ಣುಶ್ಚ ನ ಮೃತ್ಯುಃ ಕಾಲ ಏವ ಚ ॥ ೭೮ ॥

ಮಮ ತಾಲತರೂನ್ಭಂಕ್ತ್ವಾ ಪಾತಯಿತ್ವಾ ಫಲಾನಿ ಚ ।
ಅಹಂಕರೋಷಿ ಸಹಸಾ ಕಿಮಹೋ ಕಸ್ಯ ತೇಜಸಾ ॥ ೭೯ ॥

ಕಸ್ತ್ವಂ ವದ ಬಟೋ ಸತ್ಯಂ ಕಮನೀಯೋಽತಿ ಸುಂದರಃ ।
ದುರ್ಲಭಂ ಜೀವನಂ ದಾತುಂ ಮಹ್ಯಂ ಕಥಮಿಹಾಗತಃ ॥ ೮೦ ॥

---

೭೬. ಎಲೈ ಶಿಶುವೇ, ಹಣ್ಣಿನ ಆಸೆಗೆ ನೀನು ನನ್ನ ತಾಲವನಕ್ಕೆ ಬಂದಿದ್ದೀಯೆ. ನೀನು ಪುನಃ ಮನೆಗೆ ಹಿಂತಿರುಗಿ ನಿನ್ನ ಬಾಂಧವರನ್ನು ನೋಡುವಂತಿಲ್ಲ.

೭೭. ಕಂಸನಾಗಲೀ, ಜರಾಸಂಧನಾಗಲೀ, ನರಕಾಸುರನಾಗಲೀ ನನಗೆ ಸಮಾನರಲ್ಲ. ದೇವತೆಗಳೇ ನನಗೆ ನಿತ್ಯವೂ ಹೆದರಿ ನಡುಗುವಾಗ ಈ ಭೂಮಂಡಲದಲ್ಲಿ ನನಗೆ ಸಮಾನರು ಮತ್ತೆ ಯಾರು ಇರುವರು ?

೭೮. ಜಗತ್ಸಂಹಾರಕನಾದ ಸಾಕ್ಷಾತ್ ಪರಶಿವನೂ ನನ್ನನ್ನು ಸಂಹರಿಸಲಾರನು ಬ್ರಹ್ಮನಾಗಲೀ, ವಿಷ್ಣುವಾಗಲೀ, ಮೃತ್ಯುವಾಗಲೀ, ಕಾಲಪುರುಷನೇ ಆಗಲಿ ನನ್ನನ್ನು ನಾಶಗೊಳಿಸಲಾರರು.

೭೯. ನನ್ನ ತಾಲವನದ ಮರಗಳನ್ನು ಮುರಿದು, ಹಣ್ಣುಗಳನ್ನು ಉದುರಿಸಿ, ನೀನು ಹೆಮ್ಮೆಪಡುತ್ತಿರುವುದು ಯಾರ ತೇಜಸ್ಸಿನ ಬೆಂಬಲದಿಂದ ?

೮೦. ಅತಿಸುಂದರನೂ, ಕಮನೀಯಾಕಾರನೂ ಆದ ಎಲೈ ವಟುವೇ, ನೀನು ಯಾರೆಂಬುದನ್ನು ಸತ್ಯವಾಗಿ ಹೇಳು. ನನಗೆ ದುರ್ಲಭವಾದ ಆಹಾರವಾಗಲು ನೀನೇಕೆ ಇಲ್ಲಿಗೆ ಬಂದೆ ?

ಇತ್ಯುಕ್ತ್ವಾ ಮಸ್ತಕೇ ಕೃತ್ವಾ ಪ್ರೇರಯಿತ್ವಾ ತು ತಂ ಬಲೀ ।
ದೂರತಃ ಪಾತಯಾಮಾಸ ಶ್ರೀಕೃಷ್ಣಂ ಮರಣೋನ್ಮುಖಃ ॥ ೭೧ ॥

ಪಾತಯಿತ್ವಾ ಚ ತಂ ಭೂಮೌ ವಿಷಾಣಾಭ್ಯಾಂ ಜಘಾನ ಸಃ ।
ಕೃಷ್ಣಾಂಗಸ್ಪರ್ಶಮಾತ್ರೇಣ ತದ್ವಿಷಾಣೇ ಬಭಂಜತುಃ ॥ ೭೨ ॥

ದೈತ್ಯೋ ಭಗ್ನವಿಷಾಣಶ್ಚ ತಮೀಶಂ ಕೋಪಯನ್ಮುನೇ ।
ಜಗ್ರಾಸ ಚರ್ವಣಂ ಕರ್ತುಂ ಭಗ್ನದಂತೋ ಬಭೂವ ಹ ॥ ೭೩ ॥

ತೇಜಸಾ ದಗ್ಧವಕ್ತ್ರಶ್ಚ ತಮುಜ್ಜಗ್ರಾಹ ತತ್ಕ್ಷಣೇ ।
ಜಜ್ವಾಲ ವ್ಯಥಿತಃ ಕೋಪಾದ್ದದಾರ ಖುರತೋ ಮಹೀಂ ॥ ೭೪ ॥

ಘೂರ್ಣಯಿತ್ವಾ ತು ಲಾಂಗೂಲಂ ಶಬ್ದಂ ಕೃತ್ವಾ ಭಯಾನಕಂ ।
ಸ ಜಗಾಮ ಶಿಶುಸ್ಥಾನಂ ದುದ್ರುವುರ್ಬಾಲಕಾ ಭಿಯಾ ॥ ೭೫ ॥

---

೭೧. ಇಂತು ನುಡಿದು ಬಲಶಾಲಿಯಾದ ಆ ಧೇನುಕಾಸುರನು ಮೃತ್ಯುವನ್ನು ಎಳಸಿದಂತೆ ಶ್ರೀಕೃಷ್ಣನನ್ನು ತಲೆಯ ಮೇಲೆ ಕುಳ್ಳಿರಿಸಿಕೊಂಡು ಗಿರ್ರನೆ ತಿರುಗಿಸಿ ಬಹುದೂರಕ್ಕೆ ಕೆಡವಿದನು.

೭೨. ಈ ರೀತಿ ಅವನನ್ನು ಕೆಳಕ್ಕೆ ಕೆಡವಿ ತನ್ನ ಎರಡು ಕೊಂಬುಗಳಿಂದ ಆ ಬಾಲಕನನ್ನು ತಿವಿದನು. ಆದರೆ ಶ್ರೀಕೃಷ್ಣನ ಅವಯುವಗಳ ಸ್ಪರ್ಶಮಾತ್ರ ದಿಂದಲೇ ಆ ದಾನವನ ಎರಡು ಕೊಂಬುಗಳೂ ಮುರಿದವು.

೭೩. ಎಲೈ ಮುನಿಯೆ, ಇಂತು ಕೊಂಬುಗಳನ್ನು ಮುರಿದುಕೊಂಡ ಆ ದೈತ್ಯನು ಆ ಸರ್ವೇಶ್ವರನನ್ನು ಕೋಪಗೋಳಿಸುತ್ತ, ಅವನನ್ನು ಅಗಿದು ನುಂಗಲು ಹೋಗಿ ಹಲ್ಲುಗಳನ್ನು ಮುರಿದುಕೊಂಡನು.

೭೪. ಅವನ ತೇಜಸ್ಸಿನಿಂದ ಗಂಟಲು ಸುಡಲು ಆಕ್ಷಣವೇ ಅವನನ್ನು ಹೊರಕ್ಕೆ ಕಕ್ಕಿದನು. ಆ ದಾಹದಿಂದ ಪೀಡಿತನಾಗಿ ತನ್ನ ಗೊರಸಿನಿಂದ ಭೂಮಿಯನ್ನು ಕೆರೆದನು.

೭೫. ಮತ್ತೊಮ್ಮೆ ತನ್ನ ಬಾಲವನ್ನು ಅಲ್ಲಾಡಿಸಿಕೊಂಡು ಭಯಂಕರವಾದ ಶಬ್ದವನ್ನು ಮಾಡುತ್ತ ಆ ಶಿಶುವಿನ ಸಮೀಪಕ್ಕೆ ಹೋಗಲು, ಗೋಪಬಾಲಕರೆಲ್ಲರೂ ಭಯದಿಂದ ದೂರ ಓಡಿದರು

ಬಲಂ ಚ ಪ್ರೇರಯಾಮಾಸ ಮಸ್ತಕೇನ ಮಹಾಬಲೀ ।
ಬಲೋ ಮುಷ್ಟಿಂ ದದೌ ತಸ್ಮೈ ಮೂರ್ಛಾಮಾಪ ತತೋಽಸುರಃ ॥ ೭೬ ॥

ಕ್ಷಣೇನ ಚೇತನಾಂ ಪ್ರಾಪ್ಯ ಜಗಾಮ ಹರಿಸನ್ನಿಧಿಂ ।
ಬಲಮುಷ್ಟ್ಯಾ ಚ ವ್ಯಥಿತಃ ಪುನರ್ಮೂರ್ಛಾಮವಾಪ ಸಃ ॥ ೭೭ ॥

ಪುನಶ್ಚ ಚೇತನಾಂ ಪ್ರಾಪ್ಯ ಸಮುತ್ತಸ್ಥೌ ವ್ಯಥಾಕುಲಃ ।
ಉತ್ಸಸರ್ಜ ಬೃಹಲ್ಲೇಂಡಂ ಮೂತ್ರಂ ಚ ಭಯಮಾಪ ಹ ॥ ೭೮ ॥

ಕ್ಷಣಾತ್ಸಂಧುಕ್ಷಣಂ ಪ್ರಾಪ್ಯ ಮಹಾಬಲಪರಾಕ್ರಮಃ ।
ಕೃತ್ವಾ ಶಿರಸಿ ಗೋವಿಂದಂ ಘೂರ್ಣಯಾಮಾಸ ದಾನವಃ ॥ ೭೯ ॥

ಪಾತಯಾಮಾಸ ಭೂಮೌ ತಂ ಘೂರ್ಣಯಿತ್ವಾ ಪುನಃ ಪುನಃ ।
ಉತ್ಪಾಟ್ಯ ತಾಲವೃಕ್ಷಂ ತಂ ತಾಡಯಾಮಾಸ ಮಾಧವಃ ॥ ೮೦ ॥

---

೭೬. ಮಹಾಬಲಿಷ್ಠನಾದ ಆ ದಾನವನು ಈ ಸಾರಿ ಬಲರಾಮನನ್ನು ತಲೆಯ ಮೇಲೆ ಕುಳ್ಳಿರಿಸಿಕೊಂಡು ಕೆಡವಲು ಹೋದನು. ಆದರೆ ಬಲರಾಮನು ಅವನ ತಲೆಯ ಮೇಲೆ ಮುಷ್ಟಿಪ್ರಹಾರಮಾಡಲು ಕೂಡಲೇ ಆ ಅಸುರನು ಮೂರ್ಛೆಗೊಂಡನು.

೭೭. ಮರುಕ್ಷಣದಲ್ಲೇ ಚೇತನವನ್ನು ಹೊಂದಿ ಶ್ರೀಹರಿಯ ಸಮೀಪಕ್ಕೆ ಹೋಗಲು, ಪುನಃ ಬಲರಾಮನ ಮುಷ್ಟಿಪ್ರಹಾರಕ್ಕೊಳಗಾಗಿ ಮತ್ತೆ ಮೂರ್ಛೆಗೊಂಡನು.

೭೮. ಪುನಃ ಚೇತನವನ್ನು ಹೊಂದಿ ಮೇಲಕ್ಕೆದ್ದು ಚಿಂತಾಕುಲನಾದ ಆ ಧೇನುಕಾಸುರನು ಭಯದಿಂದ ಮಲಮೂತ್ರಗಳನ್ನು ವಿಸರ್ಜಿಸಿದನು.

೭೯. ಮಹಾ ಪರಾಕ್ರಮಿಯಾದ ಆ ಅಸುರನು ಕ್ಷಣಕಾಲದಲ್ಲೇ ಚೇತರಿಸಿಕೊಂಡು, ಗೋವಿಂದನನ್ನು ಮತ್ತೊಮ್ಮೆ ತಲೆಯ ಮೇಲಿಟ್ಟುಕೊಂಡು ಗಿರ್ರನೆ ತಿರುಗಿಸಿದನು.

೮೦. ಮತ್ತೆ ಮತ್ತೆ ತಿರುಗಿಸಿ ಭೂಮಿಯಮೇಲೆ ಕೆಡವಿದನು. ಮಾಧವನಾದರೋ ತಾಲವೃಕ್ಷವನ್ನೇ ಬುಡಸಹಿತ ಕಿತ್ತು ಆ ದಾನವನನ್ನು ಹೊಡೆದನು.

ಯಥಾ ಖಡ್ಗಪ್ರಹಾರೇಣ ದಾನವಸ್ಯ ಭವೇದ್ವ್ಯಥಾ ।
ತಥಾ ಬಭೂವ ದೈತ್ಯಸ್ಯ ತಾಲವೃಕ್ಷಸ್ಯ ತಾಡನಾತ್ ॥ ೮೧ ॥

ಗೋವರ್ಧನಂ ಸಮುತ್ಪಾಟ್ಯ ಘಾತಯಾಮಾಸ ತಂ ವಿಭುಃ ।
ಪಪಾತ ವೇಗಾಚ್ಛೈಲೇಂದ್ರಸ್ತಸ್ಯೋಪರಿ ಮಹಾಮುನೇ ॥ ೮೨ ॥

ಪರ್ವತಸ್ಯ ಪ್ರಹಾರೇಣ ಮೂರ್ಛಾಮಾಪ ಮಹಾಬಲಃ ।
ಬಭೂವ ಜರ್ಜರಾಂಗಶ್ಚ ರುಧಿರಂ ಚ ಸಮುದ್ವಮನ್ ॥ ೮೩ ॥

ಕ್ಷಣೇನ ಚೇತನಾಂ ಪ್ರಾಪ್ಯ ಸಮುತ್ತಸ್ಥೌ ರುಷಾಽಸುರಃ ।
ಗೃಹೀತ್ವಾ ಪರ್ವತಶ್ರೇಷ್ಠಂ ಪ್ರೇರಯಾಮಾಸ ಮಾಧವಂ ॥ ೮೪ ॥

ದೃಷ್ಟ್ವಾ ಶೈಲಮುತ್ಪತಂತಂ ವೇಗೇನ ಮಧುಸೂದನಃ ।
ಜಗ್ರಾಹ ದಕ್ಷಿಣಕರೇ ಯಥೇಕ್ಷುದಂಡವತ್ಪ್ರಭುಃ ॥ ೮೫ ॥

---

೮೧. ಕತ್ತಿಯ ಪೆಟ್ಟಿನಿಂದ ಎಷ್ಟು ನೋವಾಗಬಹುದೋ ಅಷ್ಟೇ ನೋವು ಆ ದಾನವನಿಗೆ ತಾಲವೃಕ್ಷದ ಹೊಡೆತದಿಂದ ಉಂಟಾಯಿತು.

೮೨. ವಿಶ್ವವ್ಯಾಪಕನಾದ ಶ್ರೀಹರಿಯು ಗೋವರ್ಧನ ಪರ್ವತವನ್ನೇ ಬುಡ ಸಹಿತ ಕಿತ್ತು ಆ ದಾನವನ ಮೇಲೆಸೆದನು ಎಲೈ ಮಹಾಮುನಿಯೇ, ಆ ದೈತ್ಯನ ಮೇಲೆ ಆ ಪರ್ವತವು ಅತಿವೇಗದಿಂದ ಬಿದ್ದಿತು.

೮೩. ಮಹಾಬಲಿಷ್ಠನಾದ ಆ ಅಸುರನು ಆ ಪರ್ವತದ ಪೆಟ್ಟಿನಿಂದ ಮೂರ್ಛೆಗೊಂಡನು. ಅಲ್ಲದೆ ಪುಡಿ ಪುಡಿಯಾದ ಅವಯವಗಳುಳ್ಳವನಾಗಿ ರಕ್ತವನ್ನು ಕಾರುತ್ತಿದ್ದನು.

೮೪. ಮತ್ತೊಮ್ಮೆ ಚೇತನವನ್ನು ಹೊಂದಿ ಕೋಪದಿಂದ ಆ ರಾಕ್ಷಸನು ಮೇಲಕ್ಕೆದ್ದನು. ಅದೇ ಪರ್ವತವನ್ನೇ ತೆಗೆದುಕೊಂಡು ಶ್ರೀಕೃಷ್ಣನ ಮೇಲೆ ಎಸೆದನು.

೮೫. ತನ್ನ ಮೇಲೆ ಪರ್ವತವು ವೇಗದಿಂದ ಬೀಳುತ್ತಿರುವುದನ್ನು ನೋಡಿ ಮಧುಸೂದನನು ಕಬ್ಬಿನ ಜಲ್ಲೆಯಂತೆ ಲೀಲಾಜಾಲವಾಗಿ ಆ ಪರ್ವತವನ್ನು ಬಲಗೈಯ್ಯಲ್ಲಿ ಹಿಡಿದುಕೊಂಡನು.

ಪೂರ್ವಸ್ಥಾನೇ ಪರ್ವತಂ ತಂ ಸ್ಥಾಪಯಾಮಾಸ ಕೌತುಕಾತ್ ।
ಗೃಹೀತ್ವಾ ದೈತ್ಯಕರ್ಣಾಗ್ರಂ ಪಾತಯಾಮಾಸ ದೂರತಃ ॥ ೮೬ ॥

ಉತ್ಪತ್ಯ ಚ ಮಹಾವೇಗಾಚ್ಚಕಾರ ವೇಷ್ಟನಂ ಹರೇಃ ।
ಪೃಥಿವೀಂ ಘಾತಯಾಮಾಸ ತೀಕ್ಷ್ಣಾಗ್ರೇಣ ಖುರೇಣ ಚ ॥ ೮೭ ॥

ಪ್ರಗೃಹ್ಯ ಶ್ರೀಹರಿಂ ವೇಗಾತ್ಕೃತ್ವಾ ಮೂರ್ಧ್ನಿ ಮಹಾಸುರಃ ।
ಉತ್ಪಪಾತ ಮನೋಯಾಯೀ ಲೀಲಯಾ ಲಕ್ಷಯೋಜನಂ ॥ ೮೮ ॥

ಪ್ರಹರಂ ಚ ತಯೋರ್ಯುದ್ಧಂ ನಿರ್ಲಕ್ಷ್ಯೇ ಚ ಬಭೂವ ಹ ।
ತತೋ ಗೃಹೀತ್ವಾ ಶ್ರೀಕೃಷ್ಣಂ ಪಪಾತ ಧರಣೀತಲೇ ॥ ೮೯ ॥

ಪುನರ್ಮುಹೂರ್ತಂ ಯುದ್ಧಂ ಚ ಬಭೂವ ಭೂತಲೇ ತಯೋಃ ।
ಮುದಾ ಹರಿಃ ಪ್ರಶಶಂಸ ಪ್ರಹಸ್ಯ ದಾನವೇಶ್ವರಂ ॥ ೯೦ ॥

---

೮೬. ಆ ಪರ್ವತವನ್ನು ಅದು ಮೊದಲಿದ್ದ ಸ್ಥಾನದಲ್ಲಿಯೇ ಇಟ್ಟು ಆ ರಾಕ್ಷಸನ ಕಿವಿಯನ್ನು ಹಿಡಿದೆಳೆದು ದೂರಕ್ಕೆ ಕೆಡವಿದನು.

೮೭. ಆ ರಾಕ್ಷಸನಾದರೋ ಬಹಳ ವೇಗದಿಂದ ಮೇಲಕ್ಕೆ ನೆಗೆದು ಶ್ರೀಹರಿಯನ್ನು ಆವರಿಸಿದನು. ಅಲ್ಲದೆ ಮೊನಚಾದ ತುದಿಗಳುಳ್ಳ ಗೊರಸಿನಿಂದ ಭೂಮಂಡಲವನ್ನು ಬಗೆದನು.

೮೮. ಆ ಮಹಾಸುರನು ಮತ್ತೊಮ್ಮೆ ಶ್ರೀಹರಿಯನ್ನು ಹಿಡಿದು ತಲೆಯ ಮೇಲೆ ಕುಳ್ಳಿರಿಸಿಕೊಂಡು, ಮನೋವೇಗದಿಂದ ಲಕ್ಷಯೋಜನ ದೂರ ನೆಗೆದು ಓಡಿದನು.

೮೯. ಒಂದು ಜಾವಕಾಲ ಅವರಿಬ್ಬರಿಗೂ ನಿರಾಧಾರವಾದ ಆಕಾಶದಲ್ಲಿ ಯುದ್ಧವಾಯಿತು. ಅನಂತರ ಶ್ರೀಕೃಷ್ಣನನ್ನೂ ಎತ್ತಿಕೊಂಡು ಭೂತಲದ ಮೇಲೆ ಬಿದ್ದನು.

೯೦. ಪುನಃ ಮುಹೂರ್ತಕಾಲ ಅವರಿಬ್ಬರಿಗೂ ಭೂತಲದಲ್ಲಿ ಯುದ್ಧವಾಯಿತು. ಸಂತುಷ್ಟನಾದ ಶ್ರೀಹರಿಯು ಆ ದಾನವೇಂದ್ರನ ಪರಾಕ್ರಮವನ್ನು ಪ್ರಶಂಸೆಮಾಡಿದನು.

ಮದ್ಭಕ್ತಸ್ಯ ಬಲೇಃ ಪುತ್ರಂ ಧನ್ಯಂ ತಜ್ಜೀವನಂ ಪರಂ ।
ಸ್ವಸ್ತ್ಯಸ್ತು ತೇ ದಾನವೇಂದ್ರ ವತ್ಸ ನಿರ್ವಾಣತಾಂ ವ್ರಜ ॥ ೯೧ ॥

ಮದ್ದರ್ಶನಂ ಸ್ವಸ್ತಿಬೀಜಂ ಪರಂ ನಿರ್ವಾಣಕಾರಣಂ ।
ಸರ್ವಾಧಿಕಂ ಸರ್ವಪರಂ ಲಭ ಸ್ಥಾನಂ ಮನೋಹರಂ ॥ ೯೨ ॥

ಇತ್ಯೇವಮುಕ್ತ್ವಾ ಶ್ರೀಕೃಷ್ಣಃ ಸಸ್ಮಾರ ಚಕ್ರಮುತ್ತಮಂ ।
ಸೂರ್ಯಕೋಟಿಸಮಂ ದೀಪ್ತ್ಯಾ ಜಗ್ರಾಹ ತತ್ಸುದರ್ಶನಂ ॥ ೯೩ ॥

ಚಿಕ್ಷೇಪ ಭ್ರಾಮಯಿತ್ವಾ ಚ ಷೋಡಶಾರಮನುತ್ತಮಂ ।
ಚಿಚ್ಛೇದ ಲೀಲಯಾऽವಧ್ಯಂ ಬ್ರಹ್ಮವಿಷ್ಣುಮಹೇಶ್ವರೈಃ ॥ ೯೪ ॥

ಪಪಾತ ಮಸ್ತಕಂ ಭೂಮೌ ದಾನವಸ್ಯ ಮಹಾತ್ಮನಃ ।
ತೇಜಃಸಮೂಹ ಉತ್ತಸ್ಥೌ ಶತಸೂರ್ಯಸಮಪ್ರಭಃ ॥ ೯೫ ॥

---

೯೧. ನನ್ನ ಭಕ್ತನಾದ ಬಲಿಯ ಪುತ್ರನಾದ ನಿನ್ನ ಜೀವನವೇ ಪರಮ ಧನ್ಯವಾದುದು. ಎಲೈ ವತ್ಸನೇ, ನೀನು ನಿರ್ವಾಣವನ್ನು ಹೊಂದು.

೯೨. ನನ್ನ ದರ್ಶನವು ಮಂಗಳಗಳಿಗೂ ನಿರ್ವಾಣಮೋಕ್ಷಕ್ಕೂ ಪರಮ ಸಾಧನವಾದುದು. ಎಲ್ಲಕ್ಕಿಂತಲೂ ಉತ್ತಮವೂ, ಸುದುರ್ಲಭವೂ ಮನೋಹರವೂ ಆದ ದಿವ್ಯ ಪದವಿಯನ್ನೂ ಹೊಂದು.

೯೩. ಹೀಗೆ ಹೇಳಿ ಶ್ರೀಕೃಷ್ಣನು ಉತ್ತಮವಾದ ತನ್ನ ಸುದರ್ಶನ ಚಕ್ರವನ್ನು ನೆನಸಿಕೊಂಡನು. ಕೂಡಲೇ ಕೋಟಿಸೂರ್ಯರ ಸಮಾನ ತೇಜಸ್ಸುಳ್ಳ ಆ ಸುದರ್ಶನ ಚಕ್ರವು ಸನ್ನಿಹಿತವಾಯಿತು.

೯೪. ಹದಿನಾರು ಅಡ್ಡಪಟ್ಟಿಗಳಿಂದ ಶೋಭಿಸುತ್ತಿರುವ ಆ ಚಕ್ರವನ್ನು ತಿರುಗಿಸಿ ಆ ದಾನವನ ಮೇಲೆ ಬಿಡಲು, ಬ್ರಹ್ಮ ವಿಷ್ಣು ಮಹೇಶ್ವರರಿಂದಲೂ ಅವಧ್ಯನಾದ ಆ ದಾನವನನ್ನು ಅದು ತುಂಡರಿಸಿತು.

೯೫. ಕೂಡಲೇ ಮಹಾತ್ಮನಾದ ಆ ದಾನವನ ಮಸ್ತಕವು ಭೂಮಿಯಮೇಲೆ ಬಿದ್ದಿತು. ಅದರಿಂದ ನೂರು ಸೂರ್ಯರಿಗೆ ಸಮಾನವಾದ ತೇಜಃಪುಂಜವು ಮೊರಹೊಮ್ಮಿತು.

ವಿಲೋಕ್ಯ ಹರಿಲೋಕಂ ಸಂಶ್ಲಿಷ್ಟಂ ಕೃಷ್ಣಪದಾಂಬುಜೇ ।
ಸಂಪ್ರಾಪ ಪರಮಂ ಮೋಕ್ಷಮಹೋ ದಾನವಪುಂಗವಃ ॥ ೯೬ ॥

ಗಗನಸ್ಥಾಃ ಸುರಾಃ ಸರ್ವೇ ಮುನಯಶ್ಚ ಭೃಶಂ ಮುದಾ ।
ಪಾರಿಜಾತಪ್ರಸೂನಾನಾಂ ಚಕ್ರುಸ್ತೇ ತತ್ರ ವರ್ಷಣಂ ॥ ೯೭ ॥

ನೇದುರ್ದುಂದುಭಯಃ ಸ್ವರ್ಗೇ ನನೃತುಶ್ಚಾಪ್ಸರೋಗಣಾಃ ।
ಜಗುರ್ಗಂಧರ್ವನಿಕರಾಸ್ತುಷ್ಟುವುರ್ಮುನಯೋ ಮುದಾ ॥ ೯೮ ॥

ಸ್ತುತ್ವಾ ಜಗ್ಮುಃ ಸುರಾಸ್ಸರ್ವೇ ಮುನಯೋ ಹರ್ಷವಿಹ್ವಲಾಃ ।
ಧೇನುಕಸ್ಯ ವಧಂ ದೃಷ್ಟ್ವಾ ತತ್ರಾಜಗ್ಮುಶ್ಚ ಬಾಲಕಾಃ ॥ ೯೯ ॥

ಬಲಶ್ಚ ಬಲಿನಾಂ ಶ್ರೇಷ್ಠಸ್ತುಷ್ಟಾವ ಪುರುಷೋತ್ತಮಂ ।
ತುಷ್ಟುವುರ್ಬಾಲಕಾಃ ಸರ್ವೇ ನನೃತುಶ್ಚ ಮುದಾನ್ವಿತಾಃ ॥ ೧೦೦ ॥

---

೯೬. ಆ ದಾನವೇಶ್ವರನು ಮನೋಹರವಾದ ಶ್ರೀಹರಿಯ ಲೋಕವನ್ನು ನೋಡಿ ಧನ್ಯನಾಗಿ ಶ್ರೀಕೃಷ್ಣ ಪರಮಾತ್ಮನ ಪಾದಕಮಲಗಳಲ್ಲಿ ಪರಮ ಮುಕ್ತಿಯನ್ನು ಪಡೆದನು

೯೭. ಆಗ ಅಂತರಿಕ್ಷದಲ್ಲಿದ್ದ ದೇವತೆಗಳೂ ಮತ್ತು ಮುನಿಗಳೂ ಸಂತಸಗೊಂಡು ಪಾರಿಜಾತಪುಷ್ಪಗಳ ಮಳೆಯನ್ನು ಆ ದಾನವನ ಮೇಲೆ ಕರೆದರು.

೯೮. ಆಗ ಸ್ವರ್ಗಲೋಕದಲ್ಲಿ ನಗಾರಿಗಳು ಮೊಳಗಿದವು. ಅಪ್ಸರಸ್ತ್ರೀಯರು ಸಂತೋಷದಿಂದ ನರ್ತನಮಾಡಿದರು. ಗಂಧರ್ವರು ಇಂಪಾಗಿ ಹಾಡಿದರು. ಮುನಿಗಳು ಸಂತೋಷದಿಂದ ಆ ದಾನವನನ್ನು ಸ್ತುತಿಸಿದರು.

೯೯. ಈ ರೀತಿ ದೇವತೆಗಳೂ, ಮುನಿಗಳೂ ಆನಂದತುಂದಿಲರಾಗಿ ಆ ದಾನವನನ್ನು ಸ್ತುತಿಸಿ ಹೊರಟುಹೋದರು ಇತ್ತ ಧೇನುಕಾಸುರನ ವಧೆಯಾದುದನ್ನು ಕೇಳಿ ಗೋಪಾಲಕರೆಲ್ಲರೂ ಅಲ್ಲಿಗೆ ಬಂದರು.

೧೦೦. ಪರಾಕ್ರಮಿಗಳಲ್ಲಿ ಮುಂದಾಳಾದ ಬಲರಾಮನೂ ಕೂಡ ಪುರುಷೋತ್ತಮನನ್ನು ಸ್ತುತಿಸಿದನು ಗೋಪಾಲಕರೆಲ್ಲರೂ ಸಂತೋಷದಿಂದ ನಲಿದಾಡಿ ಶ್ರೀಹರಿಯನ್ನು ಸ್ತುತಿಸಿದರು.

ದತ್ವಾ ಕೃಷ್ಣಬಲಾಭ್ಯಾಂ ಚ ಪ್ರಪಕ್ವಾನಿ ಫಲಾನಿ ಚ ।
ಸರ್ವಾಣಿ ಭಕ್ಷಯಾಮಾಸುರ್ಬಾಲಾಃ ಪ್ರಹೃಷ್ಟಮಾನಸಾಃ ॥ ೧೦೧ ॥

ಭುಕ್ತ್ವಾ ಪೀತ್ವಾ ಹರಿಃ ಶೀಘ್ರಂ ಬಲೇನ ಬಾಲಕೈಃ ಸಹ ।
ಜಗಾಮ ಸ್ವಾಲಯಂ ಬ್ರಹ್ಮನ್ನಿಹತ್ಯ ದಾನವೇಶ್ವರಂ ॥ ೧೦೨ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ಶ್ರೀಕೃಷ್ಣಜನ್ಮಖಂಡೇ
ನಾರಾಯಣನಾರದಸಂವಾದೇ ಧೇನುಕವಧೋ ನಾಮ
ದ್ವಾವಿಂಶತಿತಮೋಽಧ್ಯಾಯಃ

---

೧೦೧. ಸಂತಸಗೊಂಡು ಆ ಬಾಲಕರೆಲ್ಲರೂ ಶ್ರೀಕೃಷ್ಣಬಲರಾಮರಿಗೆ ಪಕ್ವಫಲಗಳನ್ನು ಕೊಟ್ಟು ತಾವೂ ಕೂಡ ಯಥೇಚ್ಛವಾಗಿ ತಿಂದು ತೇಗಿದರು.

೧೦೨. ಎಲೈ ನಾರದನೇ, ಇಂತು ಶ್ರೀಹರಿಯು ದಾನವೇಶ್ವರನನ್ನು ಸಂಹರಿಸಿ, ಬಲರಾಮನೊಡನೆಯೂ ಗೋಪಬಾಲಕರೊಡನೆಯೂ ಯಥೇಚ್ಛವಾಗಿ ಹಣ್ಣುಗಳನ್ನು ತಿಂದು ನೀರನ್ನು ಕುಡಿದು ತನ್ನ ಮಂದಿರಕ್ಕೆ ಹಿಂತಿರುಗಿದನು.

ಇಲ್ಲಿಗೆ ಬ್ರಹ್ಮವೈವರ್ತಮಹಾಪುರಾಣದ ಶ್ರೀಕೃಷ್ಣಜನ್ಮಖಂಡದಲ್ಲಿ
ಧೇನುಕಾಸುರವಧೆಯೆಂಬ ಇಪ್ಪತ್ತೆರಡನೆಯ
ಅಧ್ಯಾಯವು ಮುಗಿದುದು.

ಇಪ್ಪತ್ತೆರಡನೆಯ ಅಧ್ಯಾಯದ ಸಾರಾಂಶ

ಒಮ್ಮೆ ಬಲರಾಮಕೃಷ್ಣರು ಗೋಪಾಲಬಾಲಕರೊಡಗೂಡಿ ಪಕ್ವಫಲಗಳಿಂದ ಪರಿಪೂರ್ಣವಾದ ತಾಳವನಕ್ಕೆ ಹೋದರು. ಅಲ್ಲಿ ಹಸಿದು ಬಳಲಿದ್ದ ಗೋಪಬಾಲಕರೆಲ್ಲರೂ ಶ್ರೀಕೃಷ್ಣನ ಅನುಮತಿಯನ್ನು ಪಡೆದು ತಾಳಫಲಗಳನ್ನು ಕೆಡವಿ, ತಿನ್ನಲು ಬಯಸಿದರು. ಅಷ್ಟರಲ್ಲಿ ಆ ವನಪಾಲಕನಾದ ಗರ್ದಭಾಕಾರವುಳ್ಳ ಧೇನುಕನೆಂಬ ರಾಕ್ಷಸನು ಅಲ್ಲಿಗೆ ಬರಲು ಗೋಪಾಲಕರೆಲ್ಲರೂ ಹೆದರಿ ಶ್ರೀಕೃಷ್ಣನ ಮರೆಹೊಕ್ಕರು. ಆಗ ಶ್ರೀಕೃಷ್ಣನು ಅವರನ್ನೆಲ್ಲ ಬಲರಾಮನ ರಕ್ಷಣೆಗೆ ಬಿಟ್ಟು, ತಾನು ಧೇನುಕಾಸುರನನ್ನು ನಿಗ್ರಹಿಸಲು ಹೋದನು. ಆದರೆ ಬಲಿಚಕ್ರವರ್ತಿಯ ಮಗನೂ, ಜನ್ಮಾಂತರ ಸ್ಮರಣೆಯುಳ್ಳವನೂ ಆದ ಆ ದಾನವನು ಶ್ರೀಕೃಷ್ಣನ ದಿವ್ಯರೂಪವನ್ನು ಕಂಡು, ಅವನ ಅಪಾರಮಹಿಮೆಯನ್ನು ಕೊಂಡಾಡಿ, ಮನೋಜ್ಞವಾಗಿ ಸ್ತುತಿಸಲಾರಂಭಿಸಿದನು. ಆಗ ಭಕ್ತನಾದ ಆ ದಾನವನನ್ನು ಸಂಹರಿಸಲಾರದೆ ಶ್ರೀಹರಿಯು ಅವನ ಸ್ಮರಣಶಕ್ತಿಯನ್ನು ನಾಶಗೊಳಿಸಲು, ಕೂಡಲೆ ಮದೋನ್ಮತ್ತನಾದ ಆ ದಾನವನು ಶ್ರೀಹರಿಯ ಮಹಿಮೆಯನ್ನು ಮರೆತು, ಅವನ ಮತ್ತು ಬಲರಾಮನ ಮೇಲೆ ಬಿದ್ದು ಅವರನ್ನು ನಾಶಗೊಳಿಸಲು ಸಾಹಸಮಾಡಿದನು. ಬಲರಾಮಕೃಷ್ಣರಿಗೂ ಆ ದಾನವನಿಗೂ, ಸ್ಥಳದಲ್ಲೂ, ಅಂತರಿಕ್ಷದಲ್ಲೂ ಬಹಳಕಾಲ ಯುದ್ಧವಾಯಿತು. ಕೊನೆಗೆ ಶ್ರೀಕೃಷ್ಣನು ಆ ದಾನವನ ಪರಾಕ್ರಮಕ್ಕೆ ಮೆಚ್ಚಿ, ಅವನಿಗೆ ಮುಕ್ತಿಯನ್ನು ಕೊಡಲು ಬಯಸಿ, ತನ್ನ ಸುದರ್ಶನಚಕ್ರವನ್ನು ಅವನ ಮೇಲೆ ಪ್ರಯೋಗಿಸಿದನು. ಅದರಿಂದ ಆ ದಾನವನ ತಲೆಯು ಕತ್ತರಿಸಿ ಬಿದ್ದುದಲ್ಲದೆ ದಿವ್ಯತೇಜಸ್ಸು ಹೊರಹೊಮ್ಮಿತು. ಕೂಡಲೆ ದೇವಲೋಕದಿಂದ ಹೂಮಳೆಗರೆಯಿತು. ಆ ದಾನವನು ಮುಕ್ತನಾದನು. ಅನಂತರ ಗೋಪಾಲಕರೆಲ್ಲರೂ ಯಥೇಚ್ಛವಾಗಿ ಹಣ್ಣುಗಳನ್ನು ತಿಂದು ನೀರನ್ನು ಕುಡಿದು ಬಲರಾಮಕೃಷ್ಣರೊಡನೆ ತಮ್ಮ ಮನೆಗೆ ಹಿಂತಿರುಗಿದರು.

— ॥ ಓಂ ॥—

—॥ ಶ್ರೀ ಗಣೇಶಾಯ ನಮಃ ॥—

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಶ್ರೀಕೃಷ್ಣಜನ್ಮಖಂಡೇ

॥ ತ್ರಯೋವಿಂಶತಿತಮೋಽಧ್ಯಾಯಃ ॥

॥ ನಾರದ ಉವಾಚ ॥

ಕೇನ ಪಾಪೇನ ಬಲಿಜೋ ಗರ್ದಭತ್ವಮವಾಪ ಹ ।
ದೂರ್ವಾಸಾಃ ಕೇನ ದೋಷೇಣ ಶಶಾಪ ದಾನವೇಶ್ವರಂ ॥ ೧ ॥

ಕೇನ ಪುಣ್ಯೇನ ವಾ ನಾಥ ಬಲಿನಃ ಶ್ರೀಹರೇಃಪದಂ ।
ಸಹಸ್ರೈಕತ್ವಮುಕ್ತಿಂ ಚ ಸಂಪ್ರಾಪ ದಾನವಾಧಿಪಃ ॥ ೨ ॥

ಮುನೇ ಸರ್ವಂ ಸುವಿಸ್ತಾರ್ಯ ವದ ಸಂದೇಹಭಂಜನ ।
ಅಹೋ ಕವಿಮುಖೇ ಕಾವ್ಯಂ ನೂತ್ನಂ ನೂತ್ನಂ ಪದೇ ಪದೇ ॥ ೩ ॥

ಇಪ್ಪತ್ತಮೂರನೆಯ ಅಧ್ಯಾಯವು

೧. ನಾರದಮಹರ್ಷಿ :—ಬಲಿಪುತ್ರನಾದ ಸಾಹಸಿಕನು ತನ್ನ ಯಾವ ಪಾಪದಿಂದ ಕತ್ತೆಯ ಜನ್ಮವನ್ನು ಪಡೆದನು. ದೂರ್ವಾಸಮಹರ್ಷಿಯು ಅವನಲ್ಲಿ ಯಾವ ದೋಷವನ್ನು ಕಂಡು ಆ ದಾನವನನ್ನು ಶಪಿಸಿದನು ?

೨. ದಾನವಾಧಿಪನಾದ ಬಲಿಚಕ್ರವರ್ತಿಯು ಯಾವ ಪುಣ್ಯದಿಂದ ಶ್ರೀಹರಿಯ ಪದವಿಯನ್ನೂ, ಶಾಶ್ವತವಾದ ಆತ್ಮೈಕ್ಯವನ್ನೂ ಪಡೆದನು ?

೩. ನನ್ನ ಸಂಶಯವನ್ನು ದೂರ ಮಾಡಬಲ್ಲ ಎಲೈ ಮುನಿಯೇ, ಎಲ್ಲವನ್ನೂ ವಿಸ್ತರಿಸಿ ನನಗೆ ಹೇಳು. ಕವಿಯ ಬಾಯಿನಲ್ಲಿ ಕೇಳುವ ಕಾವ್ಯವು ಕ್ಷಣಕ್ಷಣಕ್ಕೂ ಹೊಸಹೊಸದಾಗಿ ರಸಭರಿತವಾಗಿರುವುದು.

॥ ಶ್ರೀ ನಾರಾಯಣ ಉವಾಚ ॥

ಶೃಣು ವತ್ಸ ಪ್ರವಕ್ಷ್ಯೇಽಹಮಿತಿಹಾಸಂ ಪುರಾತನಂ ।
ಪುರಾ ಶ್ರುತಂ ಬ್ರಹ್ಮವಕ್ತ್ರಾತ್ಪರ್ವತೇ ಗಂಧಮಾದನೇ ॥ ೪ ॥

ಪಾದ್ಮಕಲ್ಪೇ ಚ ವೃತಾಂತಂ ವಿಚಿತ್ರಂ ಸುಮನೋಹರಂ ।
ನಾರಾಯಣಕಥೋಪೇತಂ ಕರ್ಣಪೀಯೂಷಮುತ್ತಮಂ ॥ ೫ ॥

ಯತ್ರ ಕಲ್ಪೇ ಕಥಾ ಚೇಯಂ ತತ್ರ ತ್ವಮುಪಬ್ರಹ್ಮಣಃ ।
ಆಕಲ್ಪಜೀವೀ ಸಶ್ರೀಕೋ ಸುಂದರಃ ಸ್ಥಿರಯೌವನಃ ॥ ೬ ॥

ಪಂಚಾಶತ್ಕಾಮಿನೀನಾಂ ಚ ಪತಿಃ ಶೃಂಗಾರತತ್ಪರಃ ।
ವರೇಣ ಬ್ರಹ್ಮಣಸ್ತ್ವಂ ಚ ಸುಕಂಠೋ ಗಾಯನೇಶ್ವರಃ ॥ ೭ ॥

ಅನುಕ್ಷಣಂ ಪಪುಸ್ತಾಸ್ತೇ ಸುಂದರಂ ಮುಖಪಂಕಜಂ ।
ನಿಮೇಷರಹಿತಾಃ ಸರ್ವಾಃ ಕಾಮಬಾಣಪ್ರಪೀಡಿತಾಃ ॥ ೮ ॥

---

೪. ಶ್ರೀ ನಾರಾಯಣಮಹರ್ಷಿ :—ಎಲೈ ವತ್ಸನೇ, ಹಿಂದೆ ನಾನು ಗಂಧಮಾದನಪರ್ವತದಲ್ಲಿ ಧರ್ಮಪುರುಷನ ಬಾಯಿನಿಂದ ಕೇಳಿದ ಪುರಾತನವಾದ ಇತಿಹಾಸವನ್ನು ಹೇಳುವೆನು. ಕೇಳು.

೫. ಪದ್ಮಕಲ್ಪದಲ್ಲಿ ನಡೆದ ಈ ವೃತ್ತಾಂತವು ಶ್ರೀಮನ್ನಾರಾಯಣನ ಕಥೆಯಿಂದ ಕೂಡಿ ಕರ್ಣಾಮೃತವಾಗಿರುವುದಲ್ಲದೆ ವಿಚಿತ್ರವೂ ಮನೋಹರವೂ ಆಗಿದೆ.

೬. ಈ ಕಥೆಯು ಯಾವ ಕಲ್ಪಕ್ಕೆ ಸೇರಿದುದೋ ಆಗ ನೀನು ಉಪಬರ್ಹಣನೆಂಬ ಗಂಧರ್ವನಾಗಿ ಚಿರಂಜೀವಿಯೂ, ಸುಂದರನೂ, ನವಯೌವನ ಸಂಪನ್ನನೂ ಆಗಿದ್ದೆ.

೭. ಐವತ್ತು ಜನ ಅಪ್ಸರೆಯರಿಗೆ ಪತಿಯಾಗಿ ಶೃಂಗಾರಲೋಲುಪನಾಗಿದ್ದ ನೀನು ಬ್ರಹ್ಮನ ವರದಿಂದ ಮಧುರಕಂಠವುಳ್ಳ ಗಾನವಿಶಾರದನಾಗಿದ್ದೆ

೮. ಕಾಮಬಾಣಪೀಡಿತೆಯರಾದ ಆ ಸ್ತ್ರೀಯರು ತಮ್ಮ ಕಣ್ಣೆಂಬ ಬಟ್ಟಲುಗಳಿಂದ ರೆಪ್ಪೆಯನ್ನೂ ಬಡಿಯದೆ ನಿನ್ನ ಮುಖಾರವಿಂದದ ಮಕರಂದವನ್ನು ಕ್ಷಣಕ್ಷಣಕ್ಕೂ ಪಾನಮಾಡುತ್ತಿದ್ದರು.

ತಾಸಾಂ ಪ್ರಾಣೈಶ್ಚ ಘಟಿತಂ ವಿಧಿನಾ ತ್ವಮಿವ ಶ್ರುತಂ ।
ದಿವಾನಿಶಂ ಸಹಚರಾ ನ ಜೀವಂತಿ ತ್ವಯಾ ವಿನಾ ॥ ೯ ॥

ಪುಷ್ಪೋದ್ಯಾನೇ ಚ ರಹಸಿ ಸ್ಥಾನೇಸ್ಥಾನೇ ಮನೋರಮೇ ।
ಗಹ್ವರೇಷು ಚ ಶೈಲಾನಾಂ ಕಂದರೇಷು ನದೀಷು ಚ ॥ ೧೦ ॥

ಕಾನನೇಷು ಚ ರಮ್ಯೇಷು ಶ್ಮಶಾನೇ ಜಂತುವರ್ಜಿತೇ ।
ಯಥಾಮನೋರಥಂ ತಾಶ್ಚ ಕ್ರೀಡಾಂ ಚಕ್ರುಃ ತ್ವಯಾ ಸಹ ॥ ೧೧ ॥

ತದಾ ದೈವಾದ್ವಿಧೇಃ ಶಾಪಾದ್ಭೂತ್ವಾ ದಾಸೀಸುತೋ ಭವಾನ್ ।
ಅಧುನಾ ಬ್ರಹ್ಮಣಃ ಪುತ್ರೋ ವೈಷ್ಣವೋಚ್ಛಿಷ್ಟಭೋಜನಾತ್ ॥ ೧೨ ॥

ಅಸಂಖ್ಯಕಲ್ಪಿಜೀವೀ ಚ ವೈಷ್ಣವಪ್ರವರೋ ಭವಾನ್ ।
ಜ್ಞಾನದೃಷ್ಟ್ಯಾ ಸರ್ವದರ್ಶೀ ಪ್ರಿಯಶಿಷ್ಯಶ್ಚ ಧೂರ್ಜಟೇಃ ॥ ೧೩ ॥

---

೯. ವಿಧಿಯು ಅವರ ಪ್ರಾಣಗಳನ್ನೆಲ್ಲ ನಿನ್ನಲ್ಲಿ ಸಂಘಟಿಸಿದ್ದನೆಂದು ತೋರುತ್ತಿತ್ತು. ಹಗಲೂ ರಾತ್ರಿ ನಿನ್ನ ಜೊತೆಯಲ್ಲಿದ್ದ ಆ ಸ್ತ್ರೀಯರು ನೀನಿಲ್ಲದಿದ್ದರೆ ಜೀವಿಸುತ್ತಿರಲಿಲ್ಲ.

೧೦-೧೧. ಹೂದೋಟಗಳಲ್ಲಿಯೂ, ಮನೋಹರವೂ ನಿರ್ಜನವೂ ಆದ ಸ್ಥಾನಗಳಲ್ಲಿಯೂ, ಪರ್ವತದ ಗುಹೆಗಳಲ್ಲಿಯೂ, ನದೀತಿರಗಳಲ್ಲಿಯೂ, ರಮ್ಯವಾದ ಕಾನನಗಳಲ್ಲಿಯೂ, ಜಂತುರಹಿತವಾದ ಶ್ಮಶಾನದಲ್ಲಿಯೂ, ತಮ್ಮ ಮನೋರಥ ಪೂರ್ತಿಯಾಗುವವರೆಗೂ ನಿನ್ನೊಡನೆ ಕ್ರೀಡಿಸಿದರು.

೧೨. ಅನಂತರ ದೈವಯೋಗದಿಂದಲೂ, ವಿಧಿಯ ಶಾಪದಿಂದಲೂ ದಾಸೀಪುತ್ರನಾಗಿ ಜನಿಸಿದ ನೀನು, ವೈಷ್ಣವರ ಉಚ್ಛಿಷ್ಟವನ್ನು ತಿಂದು ಈಗ ಪುನಃ ಬ್ರಹ್ಮಪುತ್ರನಾಗಿರುವೆ.

೧೩. ಅಗಣಿತಕಲ್ಪಗಳ ಕಾಲ ಜೀವಿಸುವವನೂ, ವೈಷ್ಣವಶ್ರೇಷ್ಠನೂ ಆದ ನೀನು ಜ್ಞಾನದೃಷ್ಟಿಯಿಂದ ಸರ್ವಜ್ಞನೆನಿಸಿ ಈಶ್ವರನ ಪ್ರಿಯಶಿಷ್ಯನಾಗಿರುವೆ.

ತಸ್ಯ ಕಲ್ಪಸ್ಯ ವೃತ್ತಾಂತಂ ಮುನೇ ಮತ್ತೋ ನಿಶಾಮಯ ।
ವಿಸ್ತಾರ್ಯ ದೈತ್ಯವೃತ್ತಾಂತಂ ಕಥಯಾಮಿ ಸುಧೋಪಮಂ ॥ ೧೪ ॥

ಏಕದೈವ ಬಲೇಃ ಪುತ್ರೋ ನಾಮ್ನಾ ಸಾಹಸಿಕೋ ಬಲೀ ।
ಸ್ವತೇಜಸಾ ಸುರಾನ್ಜಿತ್ವಾ ಪ್ರತಸ್ಥೇ ಗಂಧಮಾದನಂ ॥ ೧೫ ॥

ಚಂದನೋಕ್ಷಿತಸರ್ವಾಂಗೋ ರತ್ನಭೂಷಣಭೂಷಿತಃ ।
ರತ್ನಸಿಂಹಾಸನಸ್ಥಶ್ಚ ಬಹುಸೈನ್ಯ ಸಮನ್ವಿತಃ ॥ ೧೬ ॥

ಏತಸ್ಮಿನ್ನಂತರೇ ತೇನ ಪಥಾ ಯಾತಿ ತಿಲೋತ್ತಮಾ ।
ರೂಪೇಣಾಪ್ಸರಸಾಂ ಶ್ರೇಷ್ಠಾ ನಾನಾವೇಷವಿಧಾಯಿನೀ ॥ ೧೭ ॥

ಚಾರುಚಂಪಕವರ್ಣಾಭಾ ರತ್ನಾಭರಣ ಭೂಷಿತಾ ।
ನವಯೌವನಸಂಪನ್ನಾ ಕಾಮಬಾಣಪ್ರಪೀಡಿತಾ ॥ ೧೮ ॥

---

೧೪. ಎಲೈ ಮುನಿಯೇ, ಅದೇ ಕಲ್ಪದವೃತ್ತಾಂತವನ್ನು ನಾನು ಈಗ ಹೇಳುವೆನು ಕೇಳು. ಅಮೃತದಂತಿರುವ ಆ ದೈತ್ಯವೃತ್ತಾಂತವನ್ನು ವಿಸ್ತರಿಸಿ ಹೇಳುವೆನು.

೧೫. ಒಮ್ಮೆ ಬಲಿಚಕ್ರವರ್ತಿಯ ಮಗನೂ, ಬಲಶಾಲಿಯೂ ಆದ ಸಾಹಸಿಕನೆಂಬುವನು, ತನ್ನ ಬಲದಿಂದ ದೇವತೆಗಳನ್ನು ಗೆದ್ದು ಗಂಧಮಾದನಪರ್ವತಕ್ಕೆ ಹೋದನು.

೧೬. ಅಲ್ಲಿ ಸರ್ವಾಂಗಗಳಿಗೂ ಚಂದನವನ್ನು ಲೇಪಿಸಿಕೊಂಡು ರತ್ನಾಲಂಕಾರ ಭೂಷಿತನಾಗಿ ಅನೇಕ ಸೈನಿಕರೊಡಗೂಡಿ ರತ್ನಸಿಂಹಾಸನದಲ್ಲಿ ಕುಳಿತಿದ್ದನು.

೧೭. ಆ ಸಮಯದಲ್ಲಿ ಅಪ್ಸರೆಯರಲ್ಲಿ ಶ್ರೇಷ್ಠಳಾದ ತಿಲೋತ್ತಮೆಯು ವಿವಿಧಾಲಂಕಾರಭೂಷಿತಳಾಗಿ ಆ ಮಾರ್ಗದಲ್ಲಿ ಬಂದಳು.

೧೮. ಸುಂದರವಾದ ಸಂಪಿಗೆವರ್ಣದಂತೆ ದೇಹಕಾಂತಿಯುಳ್ಳ ಆ ನವ ಯುವತಿಯು, ರತ್ನಾಲಂಕಾರಗಳನ್ನು ತೊಟ್ಟು, ಮನ್ಮಥ ಬಾಣಪೀಡಿತಳಾಗಿದ್ದಳು.

ಈಷದ್ಧಾಸ್ಯಪ್ರಸನ್ನಾಸ್ಯಾ ದಿವ್ಯವಸ್ತ್ರಂ ಸುಬಿಭ್ರತೀ ।
ವಕ್ರಭ್ರೂಭಂಗಯುಕ್ತಾ ಸಾ ಗಜೇಂದ್ರಮಂದಗಾಮಿನೀ ॥ ೧೯ ॥

ಸ್ತನಮೂರುಂ ಮುಖೇಂದುಂ ಚ ದೃಷ್ಟ್ವಾ ಸಾಹಸಿಕೋ ಯುವಾ ।
ವಾಯುನಾ ಮುಕ್ತವಸ್ತ್ರಾಯಾ ಸ್ತಸ್ಯಾ ಮೂರ್ಚ್ಛಾಮವಾಪ ಹ ॥ ೨೦ ॥

ಸಾ ದದರ್ಶ ಬಲೇಃಪುತ್ರಮತೀವ ಸುಮನೋಹರಂ ।
ಪ್ರಫುಲ್ಲಮಾಲತೀಮಾಲಾಂ ಬಿಭ್ರತಂ ನವಯೌವನಂ ॥ ೨೧ ॥

ಶರತ್ಪಾರ್ವಣಚಂದ್ರಾಸ್ಯಂ ಸಸ್ಮಿತಂ ಸುಮನೋಹರಂ ।
ದೃಷ್ಟ್ವಾ ತಂ ವಿಸ್ಮಿತಾ ಕಾಮಾತ್ಕಟಾಕ್ಷಂ ಚ ಚಕಾರ ಸಾ ॥ ೨೨ ॥

---

೧೯. ಮಂದಹಾಸದಿಂದ ಪ್ರಸನ್ನಮುಖಿಯಾದ ಆಕೆಯು ದಿವ್ಯವಾದ ವಸವನ್ನು ಧರಿಸಿ, ಗಜೇಂದ್ರನಂತೆ ಮಂದಗಮನೆಯಾಗಿ ವಕ್ರವಾದ ಕಟಾಕ್ಷವನ್ನು ಬೀರುತ್ತಿದ್ದಳು.

೨೦. ವಾಯುಸಂಚಾರದಿಂದ ಆಕೆಯ ವಸ್ತ್ರವು ಅಸ್ತವ್ಯಸ್ತವಾದಾಗ ಸಾಹಸಿಕನು ಆ ತಿಲೋತ್ತಮೆಯ ಸ್ತನಗಳನ್ನೂ, ತೊಡೆಗಳನ್ನೂ, ಮುಖಚಂದ್ರನನ್ನೂ ನೋಡಿ ಕಾಮೋದ್ದೀಪಿತನಾಗಿ ಮೂರ್ಛೆಗೊಂಡನು.

೨೧. ಆ ತಿಲೋತ್ತಮೆಯೂ ಕೂಡ, ನವಯೌವನಸಂಪನ್ನನೂ, ಅರಳಿದ ಜಾಜೀ ಹೂಮಾಲೆಯನ್ನು ಧರಿಸಿದವನೂ, ಮನೋಹರನೂ ಆದ ಬಲಿಪುತ್ರನನ್ನು ನೋಡಿದಳು

೨೨. ಶರತ್ಪೂರ್ಣಿಮಾಚಂದ್ರನಂತೆ ಪ್ರಸನ್ನವದನನೂ, ಮನೋಹರನೂ ಆದ ಅವನ ಮುಖವನ್ನು ಕಾಮಾಸಕ್ತಿಯಿಂದ ನೋಡಿ ಅವನಮೇಲೆ ತನ್ನ ಕಟಾಕ್ಷವನ್ನು ಬೀರಿದಳು.

ಕ್ರೀಡಾಯೈ ಚಂದ್ರಲೋಕಂ ಚ ಗಚ್ಛಂತೀ ಚಂದ್ರಕಾಮುಕೀ ।
ತಸ್ಥೌ ಕೇನ ಚ್ಛಲೇನೈವ ಮತ್ತಾ ಶೃಂಗಾರಲಾಲಸಾ ॥ ೨೩ ॥

ದರ್ಶಂದರ್ಶಂ ಚ ತಸ್ಯಾಸ್ಯಂ ಪ್ರಹಸ್ಯ ವಕ್ರಚಕ್ಷುಷಾ ।
ಮುಖಂಸ್ವಾಽಽಚ್ಛಾದನಂ ಚಕ್ರೇ ವಾಸಸಾ ಸಾ ಪುನಃಪುನಃ ॥ ೨೪ ॥

ಪುಲಕಾಂಕಿತ ಸರ್ವಾಂಗಂ ಧರ್ಮಕರ್ಮಸಮನ್ವಿತಂ ।
ಬಭೂವ ಕಾಮುಮತ್ತಾಯಾ ಯೋನೌ ಕಂಡೂಯನಂ ಜಲಂ ॥ ೨೫ ॥

ವಿಸಸ್ಮಾರ ಶಶಧರಂ ಬಲಿಪುತ್ರಮನೋರಥಾ ।
ಅಹೋ ಕೋ ವೇದ ಭುವನೇ ದುಜ್ಞೇಯಂ ಪುಂಶ್ಚಲೀಮನಃ ॥ ೨೬ ॥

ಪುಂಶ್ಚಲ್ಯಾಂ ಯೋ ಹಿ ವಿಶ್ವಸ್ತೋ ವಿಧಿನಾ ಸ ವಿಡಂಬಿತಃ ।
ಬಹಿಷ್ಕೃತಶ್ಚ ಯಶಸಾ ಧರ್ಮೇಣ ಸ್ವಕುಲೇನ ಚ ॥ ೨೭ ॥

---

೨೩. ಚಂದ್ರನಲ್ಲಿ ಕಾಮುಕಳಾಗಿ ರತಿಕ್ರೀಡೆಗೆಂದು ಚಂದ್ರಲೋಕಕ್ಕೆ ಹೋಗುತ್ತಿದ್ದವಳು ಯಾವುದೋ ನೆಪದಿಂದ ಅಲ್ಲಿಯೇ ನಿಂತು ಶೃಂಗಾರದ ವಿಲಾಸಗಳನ್ನು ತೋರಲಾರಂಭಿಸಿದಳು.

೨೪. ಅವನ ಮುಖವನ್ನು ಮತ್ತೆಮತ್ತೆ ನೋಡಿ ಚಂಚಲವಾದ ಕಟಾಕ್ಷವನ್ನು ಬೀರಿ ತನ್ನ ಮುಖವನ್ನು ಬಟ್ಟೆಯಿಂದ ಮರೆಮಾಡಿಕೊಂಡು ನಸುನಗಲಾರಂಭಿಸಿದಳು.

೨೫. ಆಕೆಯ ದೇಹವೆಲ್ಲವೂ ರೋಮಾಂಚಿತವಾಗಿ ಬೆವರಿನ ಹನಿಯಿಂದ ಕೂಡಿದುದಲ್ಲದೆ, ಕಾಮಪೀಡಿತಳಾದ ಆಕೆಯ ಯೋನಿಯಲ್ಲಿ ಕಂಡೂಯನವುಂಟಾಗಿ ನೀರಾಡಲಾರಂಭಿಸಿತು.

೨೬. ಬಲಿಯ ಮಗನಲ್ಲಿ ಆಸಕ್ತಳಾಗಿ ಚಂದ್ರನನ್ನು ಮರೆತುಬಿಟ್ಟಳು. ಸರ್ವರೂ ಸುಲಭವಾಗಿ ತಿಳಿಯಲಾಗದ ವೇಶ್ಯೆಯರ ಮನಸ್ಸನ್ನು ತಿಳಿಯಬಲ್ಲವರಾರು ?

೨೭. ವೇಶ್ಯೆಯಲ್ಲಿ ವಿಶ್ವಾಸವಿಡುವವನು ವಿಧಿಯಿಂದ ವಂಚಿತನೆನ್ನಬೇಕು. ಅವನಿಗೆ ಧರ್ಮ, ಕೀರ್ತಿ ಮತ್ತು ಕುಲದಿಂದ ಬಹಿಷ್ಕಾರವಾಗುವುದು.

ವಾಂಛಿತಂ ನೂತನಂ ಪ್ರಾಪ್ಯ ವಿನಶ್ಯತಿ ಪುರಾತನಂ ।
ತದಾ ಸ್ವಕರ್ಮಸಾಧ್ಯಾ ಸಾ ಕೋ ವಾ ತಸ್ಯಾಃ ಪ್ರಿಯೋಽಪ್ರಿಯಃ ॥ ೨೮ ॥

ದೈವೇ ಕರ್ಮಣಿ ಪೈತ್ರೇಚ ಪುತ್ರೇ ಬಂಧೌ ನ ಭರ್ತರಿ ।
ದಾರುಣಂ ಪುಂಶ್ಚಲೀಚಿತ್ತಂ ಸದಾ ಶೃಂಗಾರಕರ್ಮಣಿ ॥ ೨೯ ॥

ಪ್ರಾಣಾಧಿಕಂ ರತಿಜ್ಞಂ ಸಾಽಮೃತದೃಷ್ಟ್ಯಾ ಚ ಪುಂಶ್ಚಲೀ ।
ರತ್ನಪ್ರದಂ ರತ್ನವಿಜ್ಞಂ ವಿಷದೃಷ್ಟ್ಯಾ ಹಿ ಪಶ್ಯತಿ ॥ ೩೦ ॥

ಸರ್ವೇಷಾಂ ಸ್ಥಲಮಸ್ತ್ಯೇವ ಪುಂಶ್ಚಲೀನಾಂ ನ ಕುತ್ರಚಿತ್ ।
ದಾರುಣಾ ಪುಂಶ್ಚಲೀಜಾತಿರ್ನರಘಾತಿಭ್ಯ ಏವ ಚ ॥ ೩೦ ॥

ನಿಷ್ಕೃತಿಃ ಸರ್ವಭೋಗಾಂತೇ ಸರ್ವೇಷಾಮಸ್ತಿ ನಿಶ್ಚಿತಂ ।
ನ ಪುಂಶ್ಚಲೀನಾಂ ವಿಪ್ರೇಂದ್ರ ಯಾವಚ್ಚಂದ್ರದಿವಾಕರೌ ॥ ೩೨ ॥

---

೨೮. ವೇಶ್ಯೆಯು ತನಗೆ ಅಭೀಷ್ಟನಾದ ನವಯುವಕನು ಸಿಕ್ಕಿದರೆ ಹಳಬನನ್ನು ನಾಶಮಾಡುವಳು. ತನ್ನ ಇಷ್ಟಕ್ಕೆ ಅನುಗುಣವಾಗಿ ಸರಿಮಾಡಿಕೊಳ್ಳುವಳೇ ಹೊರತು ಅವಳಿಗೆ ಪ್ರಿಯನಾಗಲೀ, ಅಪ್ರಿಯನಾಗಲೀ ಯಾರೂ ಇಲ್ಲ.

೨೯. ವೇಶ್ಯೆಯ ಮನಸ್ಸು ದೇವಕಾರ್ಯದಲ್ಲಾಗಲೀ, ಪಿತೃಕಾರ್ಯದಲ್ಲಾಗಲೀ, ಮಗ, ಬಂಧು ಮತ್ತು ಪತಿಯ ಸೇವೆಯಲ್ಲಾಗಲೀ ನಿರತವಾಗುವುದಿಲ್ಲ. ದಾರುಣವಾದ ಅವಳ ಮನಸ್ಸು ಯಾವಾಗಲೂ ಶೃಂಗಾರಲೋಲುಪವಾಗಿರುವುದು.

೩೦. ಆ ವೇಶ್ಯೆಯು ರತಿಸುಖಕೊಡುವವನನ್ನು ತನ್ನ ಪ್ರಾಣಕ್ಕಿಂತ ಹೆಚ್ಚೆಂದು ತಿಳಿದು ಅಮೃತದೃಷ್ಟಿಯಿಂದ ನೋಡುವಳು. ರತ್ನದಾತನೂ, ರತ್ನಪರೀಕ್ಷಕನೂ ಆದವನನ್ನು ವಿಷದೃಷ್ಟಿಯಿಂದ ನೋಡುವಳು.

೩೧. ಪ್ರಪಂಚದಲ್ಲಿ ಎಲ್ಲರಿಗೂ ಸ್ಥಳವಿದೆ. ಆದರೆ ವೇಶ್ಯೆಯರಿಗೆ ಮಾತ್ರ ಎಲ್ಲಿಯೂ ಸ್ಥಳವಿಲ್ಲ. ಮನುಷ್ಯರನ್ನು ಕೊಲ್ಲುವ ಕಟುಕರಿಗಿಂತಲೂ, ವೇಶ್ಯಾಜಾತಿಯು ದಾರುಣವಾದುದು.

೩೨. ತಮ್ಮ ಕರ್ಮಫಲಗಳನ್ನು ಅನುಭವಿಸಿದನಂತರ ಎಲ್ಲರಿಗೂ ಮೋಕ್ಷ ದೊರೆಯುವುದರಲ್ಲಿ ಸಂದೇಹವಿಲ್ಲ. ಆದರೆ ವೇಶ್ಯೆಯರಿಗೆ ಚಂದ್ರಸೂರ್ಯರಿರುವವರೆಗೂ ಮುಕ್ತಿಯಿಲ್ಲ

ಅನ್ಯಾಸಾಂ ಕಾಮಿನೀನಾಂ ಚ ಕೀಟಂ ಹಂತುಂ ಚ ಯಾ ದಯಾ ।
ಸಾ ನಾಸ್ತಿ ಪುಂಶ್ಚಲೀನಾಂ ತು ಕಾಂತಂ ಹಂತಿ ಪುರಾತನಂ ॥ ೩೩ ॥

ಕಾಂತಂ ದೃಷ್ಟ್ವಾ ಹಿನಸ್ತ್ಯೇವ ಸೋಪಾಯೇನಾವಲೀಲಯಾ ।
ರತಿಜ್ಞಂ ನೂತನಂ ಪ್ರಾಪ್ಯ ವಿಷತುಲ್ಯಂ ಪುರಾತನಂ ॥ ೩೪ ॥

ಪೃಥಿವ್ಯಾಂ ಯಾನಿ ಪಾಪಾನಿ ಪುಂಶ್ಚಲೀಷ್ವೇವ ಜಾಯತೇ ।
ತಿಷ್ಠಂತಿ ತಾಭ್ಯೋ ನ ಪರಾಃ ಪಾಪಿಷ್ಠಾ ಸಂತಿ ಕೇಚನ ॥ ೩೫ ॥

ಪುಂಶ್ಚಲೀ ಪರಿಪಕ್ವಾನ್ನಂ ಸರ್ವಪಾತಕಮಿಶ್ರಿತಂ ।
ದೈವೇ ಕರ್ಮಣಿ ಪೈತ್ರ್ಯೇ ಚ ನ ದೇಯಂ ಚ ತಥಾ ಜಲಂ ॥ ೩೬ ॥

ಅನ್ನಂ ವಿಷ್ಠಾ ಜಲಂ ಮೂತ್ರಂ ಪುಂಶ್ಚಲೀನಾಂ ಚ ನಿಶ್ಚಿತಂ ।
ದತ್ವಾಽಪಿತೃಭ್ಯೋ ದೇವೇಭ್ಯೋ ಭುಕ್ತ್ವಾ ಚ ನರಕಂ ವ್ರಜೇತ್ ॥ ೩೭ ॥

---

೩೩. ಇತರ ಸ್ತ್ರೀಯರು ಒಂದು ಸಣ್ಣ ಕ್ರಿಮಿಯನ್ನೂ ಕೊಲ್ಲಲು ದಯೆ ತೋರುವರು. ವೇಶ್ಯೆಯರಿಗಾದರೋ ತಮ್ಮ ಮೊದಲನೆಯ ಪತಿಯನ್ನು ಕೊಲ್ಲವಾಗಲೂ ಅಲ್ಪವೂ ದಯೆಯಿರುವುದಿಲ್ಲ.

೩೪. ರತಿಚತುರನಾದ ನೂತನಪತಿಯನ್ನು ಪಡೆದು ಪುರಾತನ ಪತಿಯನ್ನು ವಿಷಕ್ಕೆಸಮಾನವಾಗಿ ತಿಳಿದು ಉಪಾಯದಿಂದ ತಿರಸ್ಕರಿಸಿ ಓಡಿಸುವರು.

೩೫. ಪ್ರಪಂಚದಲ್ಲಿರುವ ಪಾಪಗಳೆಲ್ಲವೂ ವೇಶ್ಯೆಯರಲ್ಲೇ ತುಂಬಿದೆ. ಅವರಿಗಿಂತಲೂ ಪಾಪಿಗಳಾದ ಜನರಾರೂ ಇರುವುದಿಲ್ಲ.

೩೬. ವೇಶ್ಯೆಯು ಪಾಕಮಾಡಿದ ಅನ್ನವನ್ನು ಭಕ್ಷಿಸುವುದರಿಂದ ಸಮಸ್ತ ಪಾಪಗಳೂ ಸಂಘಟಿಸುವುವು. ದೈವಕರ್ಮಗಳಿಗಾಗಲೀ, ಪಿತೃಕರ್ಮಗಳಿಗಾಗಲೀ ಅವರು ಮುಟ್ಟಿದ ನೀರನ್ನೂ ಉಪಯೋಗಿಸಬಾರದು.

೩೭. ಪುಂಶ್ಚಲಿಯರು ಮಾಡಿದ ಅನ್ನವು ಮಲಕ್ಕೂ, ಅವರು ಸ್ಪರ್ಶಮಾಡಿದ ಜಲವು ಮೂತ್ರಕ್ಕೂ ಸಮವೆನಿಸುವುದು. ಅವರು ಸ್ಪರ್ಶಮಾಡಿದ ಅನ್ನವನ್ನಾಗಲೀ, ನೀರನ್ನಾಗಲೀ ದೇವತೆಗಳಿಗೂ ಪಿತೃಗಳಿಗೂ ಅರ್ಪಿಸಿದರೆ ನರಕಕ್ಕೆ ಹೋಗುವರು.

ಶತವರ್ಷಂ ಕಾಲಸೂತ್ರೇ ಪಚತ್ಯೇವ ಸುದಾರುಣೇ ।
ಘೋರಾಂಧಕಾರೇ ಕ್ರಿಮಯಸ್ತಂ ದಶಂತಿ ದಿವಾನಿಶಂ　　॥ ೩೮ ॥

ಪುಂಶ್ಚಲ್ಯನ್ನಂ ಚ ಯೋ ಭುಂಕ್ತೇ ದೈವಾದ್ಯದಿ ನರಾಧಮಃ ।
ಸಪ್ತಜನ್ಮಕೃತಂ ಪುಣ್ಯಂ ತಸ್ಯ ನಶ್ಯತಿ ನಿಶ್ಚಿತಂ　　॥ ೩೯ ॥

ಆಯುಃ ಶ್ರೀಯಶಸಾಂ ಹಾನಿರಿಹ ಲೋಕೇ ಪರತ್ರ ಚ ।
ತಸ್ಮಾದ್ಯತ್ನಾದ್ವರ್ಜನೀಯಂ ಪಾಕಪಾತ್ರಂ ಕಲತ್ರಕಂ　　॥ ೪೦ ॥

ಪುಂಶ್ಚಲೀ ದರ್ಶನೇ ಪುಣ್ಯಂ ಯಾತ್ರಾಸಿದ್ಧಿರ್ಭವೇದ್ಧ್ರುವಂ ।
ಸ್ಪರ್ಶನೇ ಚ ಮಹಾಪಾಪಂ ತೀರ್ಥಸ್ನಾನಾದ್ವಿಶುದ್ಧ್ಯತಿ　　॥ ೪೧ ॥

ಸ್ನಾನಂ ದಾನಂ ವ್ರತಂ ಚೈವ ಜಪಶ್ಚ ದೇವಪೂಜನಂ ।
ನಿಷ್ಫಲಂ ಪುಂಶ್ಚಲೀನಾಂ ಚ ಭಾರತೇ ಜೀವನಂ ವೃಥಾ　　॥ ೪೨ ॥

---

೩೮. ದಾರುಣವಾದ ಕಾಲಸೂತ್ರವೆಂಬ ನರಕದಲ್ಲಿ ನೂರು ವರ್ಷ ಬೇಯುವರು. ಗಾಢಾಂಧಕಾರಮಯವಾದ ಆ ನರಕದಲ್ಲಿ ಹಗಲೂ ರಾತ್ರಿ ಅವರನ್ನು ಕ್ರಿಮಿಗಳು ಕಿತ್ತು ತಿನ್ನುವುವು.

೩೯. ಯಾವ ನೀಚಮನುಜನು ದುರ್ದೈವದಿಂದ ವೇಶ್ಯೆಯು ಬೇಯಿಸಿದ ಅನ್ನವನ್ನು ತಿನ್ನುವನೋ ಅವನ ಏಳು ಜನ್ಮದ ಪುಣ್ಯರಾಶಿಗಳೆಲ್ಲವೂ ನಿಶ್ಚಯವಾಗಿ ನಾಶವಾಗುವುದು.

೪೦. ಇಹಲೋಕದಲ್ಲೂ ಮತ್ತು ಪರಲೋಕದಲ್ಲೂ ಆಯುಸ್ಸು, ಸಂಪತ್ತು ಮತ್ತು ಕೀರ್ತಿಗೆ ಹಾನಿತರುವುದರಿಂದ ಪ್ರಯತ್ನ ಪಟ್ಟಾದರೂ ವೇಶ್ಯೆಯರ ಪಾಕವನ್ನು ತಿನ್ನದಿರಬೇಕು.

೪೧. ವೇಶ್ಯೆಯ ದರ್ಶನದಿಂದ ಪುಣ್ಯವೂ, ಯಾತ್ರೆಯ ಫಲವೂ ದೊರೆಯುವುದು ನಿಜ. ಆದರೆ ಅವರ ಸ್ಪರ್ಶದಿಂದ ಸಂಘಟಿಸುವ ಮಹಾಪಾಪವು ಪುಣ್ಯತೀರ್ಥದಲ್ಲಿ ಸ್ನಾನಮಾಡುವುದರಿಂದ ಮಾತ್ರ ಪರಿಹಾರವಾಗುವುದು.

೪೨. ವೇಶ್ಯೆಯರು ಮಾಡುವ ಸ್ನಾನದಾನಗಳಾಗಲೀ, ಜಪತಪಗಳಾಗಲೀ, ವ್ರತಪೂಜೆಗಳಾಗಲೀ ನಿಷ್ಫಲವಾದುದು. ಭರತಖಂಡದಲ್ಲಿ ಅವರ ಜೀವನವೇ ವ್ಯರ್ಥವೆನಿಸುವುದು.

ಕಥಿತಂ ಕುಲಟಾಖ್ಯಾನಂ ದುರ್ಜ್ಞೇಯಂ ಚ ಯಥಾಗಮಂ ।
ಸಂವಾದಂ ಚ ತಯೋಸ್ತತ್ರ ಪ್ರಕೃತಂ ಶೃಣು ನಾರದ ॥ ೪೩ ॥

ಸ ಪುನಶ್ಚೇತನಾಂ ಪ್ರಾಪ್ಯ ತಾಂ ದೃಷ್ಟ್ವೈವ ಬಲೇಃ ಸುತಃ ।
ಕಾಮಾತುರಃ ಪ್ರಮತ್ತಶ್ಚ ಜಗಾಮ ಕುಲಟಾಂತಿಕಂ ॥ ೪೪ ॥

ಉವಾಚ ಕುಟಿಲಾಪಾಂಗೀಂ ಪೀನಶ್ರೋಣಿಪಯೋಧರಾಂ ।
ವ್ರೀಡಯಾ ವಾಸಸಾ ವಕ್ತ್ರಮಾಚ್ಛನ್ನಂ ಕುರ್ವತೀಂ ಮುದಾ ॥ ೪೫ ॥

॥ ಸಾಹಸಿಕ ಉವಾಚ ॥

ಕಾಸಿ ತ್ವಂ ಕಸ್ಯ ಕನ್ಯಾಽಸಿ ಕಸ್ಯ ಕಾಂತಾಽಸಿ ಕಾಮಿನಿ ।
ಸ್ವಯಂ ಕ್ವ ಯಾಸಿ ಕಂ ಸುಭ್ರೂಃ ಪುಣ್ಯವಂತಂ ಮನೋಹರಂ ॥ ೪೬ ॥

---

೪೩. ಎಲೈ ನಾರದನೇ, ಸುಲಭವಾಗಿ ತಿಳಿಯಲಾಗದ ಕುಲಟೆಯರ ಚರಿತ್ರೆಯನ್ನು ಯಥಾಶಾಸ್ತ್ರವಾಗಿ ತಿಳಿಸಿದೆನು. ಈಗ ತಿಲೋತ್ತಮೆಗೂ ಸಾಹಸಿಕನಿಗೂ ನಡೆದ ಸಂಭಾಷಣೆಯನ್ನು ವಿವರಿಸುವೆನು ಕೇಳು.

೪೪. ಬಲಿಪುತ್ರನಾದ ಸಾಹಸಿಕನು ಪುನಃ ಚೇತನವನ್ನು ಹೊಂದಿ ಆ ತಿಲೋತ್ತಮೆಯನ್ನು ನೋಡಿ ಕಾಮಾತುರನೂ, ಉನ್ಮತ್ತನೂ ಆಗಿ ಆಕೆಯ ಸಮೀಪಕ್ಕೆ ಹೋದನು.

೪೫. ಚಂಚಲವಾದ ಕಟಾಕ್ಷವುಳ್ಳವಳೂ, ಉನ್ನತವಾದ ಶ್ರೋಣಿ ಮತ್ತು ಪಯೋಧರಗಳುಳ್ಳವಳೂ, ಆದ ಆ ವೇಶ್ಯೆಯು ಲಜ್ಜೆಯಿಂದ ಹುಸಿನಗೆ ಬೀರುತ್ತ, ಸೆರಗಿನಿಂದ ತನ್ನ ಮುಖವನ್ನು ಮರೆಮಾಡಿಕೊಂಡಿರಲು, ಆಕೆಯನ್ನು ಕುರಿತು ಇಂತೆಂದನು.

೪೬. ಸಾಹಸಿಕ :—ಎಲೌ ಕಾಮುಕಿಯೇ, ನೀನೆಲ್ಲಿದ್ದೀಯೆ? ಯಾರ ಮಗಳು? ಮನೋಹರನೂ ಪುಣ್ಯವಂತನೂ ಆದ ಯಾವ ಪುರುಷನನ್ನು ಕುರಿತು ಈಗ ನೀನು ಹೋಗುತ್ತಿದ್ದೀಯೆ?

ಕಲ್ಪಾಂತೇ ತಪಸಾ ಪೂತಂ ಭೋಕ್ತುಂ ತ್ವಾಮೇವ ಸುಂದರಿ ।
ಯಂ ತಂ ಯಾಸಿ ಯಾಹಿ ಸಾ ತ್ವಂ ಭೃತ್ಯಂ ಮಾಂ ಕರ್ತುಮರ್ಹಸಿ ॥ ೪೭ ॥

ಕ್ರೀಣೀಹಿ ರತಿಪಣ್ಯೇನ ಮಾಂ ಭೃತ್ಯಂ ರತಿಲೋಲುಪಂ ।
ಶೃಂಗಾರಲೋಲುಪಾ ತ್ವಂ ಚ ಶೃಂಗಾರಂ ದೇಹಿ ಕಾಮುಕಿ ॥ ೪೮ ॥

ತ್ವಯಾ ಸಹ ಮಮಾಶ್ಲೇಷೋ ವಿಧಿನಾ ಚ ವಿನಿರ್ಮಿತಃ ।
ನಿರೂಪಿತಂ ಯತ್ತೇನೈವ ವಾರ್ಯತೇ ಕೇನ ತತ್ಪ್ರಿಯೇ ॥ ೪೯ ॥

ವಾಕ್ಯಂ ಪೀಯೂಷಸದೃಶಂ ಸಸ್ಮಿತಂ ವದ ಸುಂದರಿ ।
ಶೀಘ್ರಂ ಭುಜಲತಾಪಾಶೈಃ ಬಂಧನಂ ಕುರು ನಿರ್ಜನೇ ॥ ೫೦ ॥

---

೪೭. ಎಲೌ ಸುಂದರಿಯೇ, ನಿನ್ನನ್ನು ಉಪಭೋಗಿಸಲು ಕಲ್ಪಾಂತದ ವರೆಗೂ ತಪಸ್ಸುಮಾಡಿರುವ ಯಾವನನ್ನೋ ಕುರಿತು ಹೋಗುತ್ತಿದ್ದೀಯೆ. ಈಗ ಬಂದು ನನ್ನನ್ನು ನಿನ್ನ ಸೇವಕನನ್ನಾಗಿ ಮಾಡಿಕೋ.

೪೮. ರತಿಲೋಲುಪನೂ ಭೃತ್ಯನೂ ಆದ ನನ್ನನ್ನು ರತಿಸುಖವೆಂಬ ಪಣ್ಯವನ್ನು ಕೊಟ್ಟು ಕೊಂಡುಕೋ. ಎಲೌ ಕಾಮುಕಿಯೇ ಶೃಂಗಾರಲೋಲುಪ ಳಾದ ನೀನು ನನಗೆ ಶೃಂಗಾರ ಸುಖವನ್ನು ಕೊಡು.

೪೯. ನಿನಗೂ ನನಗೂ ಆಲಿಂಗನೆಯಾಗಬೇಕೆಂದು ವಿಧಿನಿಯಮವಿದೆ. ಸಾಕ್ಷಾತ್ ವಿಧಿಯೇ ಅದನ್ನು ಹೇಳಿರುವಾಗ ಇನ್ನು ಯಾರುತಾನೇ ಅದನ್ನು ತಪ್ಪಿಸಿಯಾರು ?

೫೦. ಎಲೌ ಸುಂದರಿಯೇ, ಸ್ಮಿತಮುಖಿಯಾಗಿ ಅಮೃತೋಪಮವಾದ ಮಾತುಗಳನ್ನಾಡು. ಜಾಗ್ರತೆಯಾಗಿ ನಿರ್ಜನಪ್ರದೇಶಕ್ಕೆ ಬಂದು ನಿನ್ನ ಬಾಹು ಲತೆಗಳಿಂದ ನನ್ನನ್ನು ಬಂಧಿಸು.

ಆಸನಂ ದೇಹಿ ಕಲ್ಯಾಣಿ ಸ್ವೋರುಂ ಕನಕಸನ್ನಿಭಂ ।
ಸ್ತನಮಂಡಲಕುಂಭಂ ಚ ಪಾತ್ರಯೋಗ್ಯಂ ಪ್ರದರ್ಶಯ ॥ ೫೧ ॥

ತೀಕ್ಷ್ಣಾಸ್ತ್ರೇಣ ಕಟಾಕ್ಷೇಣ ಜರ್ಜರಂ ಕುರು ಕಾಮಿನಿ ।
ಕಾಮಸರ್ಪಕ್ಷತಂ ಪಾದಸ್ಪರ್ಶನೇನಾರುಜಂ ಕುರು ॥ ೫೨ ॥

ಅಧರೋಷ್ಠಾಮೃತಂ ಸ್ವಾದು ದೇಹಿ ಮೇ ಕ್ಷುಧಿತಾಯ ಚ ।
ಪಕ್ವದಾಡಿಮಬೀಜಾಭಂ ದಂತಂ ದರ್ಶಯ ಸುಂದರಂ ॥ ೫೩ ॥

ಗಂಭೀರನಾಭಿಂ ತ್ರಿವಲೀಂ ದ್ರಷ್ಟುಮಿಚ್ಛಾಮಿ ಸಂಪ್ರತಿ ।
ನೀವೀಪ್ರಮೋಕ್ಷಣಂ ಕರ್ತುಮಿಚ್ಛಾ ಮೇ ವರ್ತತೇ ಸದಾ ॥ ೫೪ ॥

ಶ್ರೋಣೀಂ ಪಶ್ಯಾಮಿ ಲಲಿತಾಂ ಮುನಿಮಾನಸಮೋಹಿನೀಂ ॥
ಶರನ್ಮಧ್ಯಾಹ್ನಪದ್ಮಾನಾಂ ಪ್ರಭಾಮೋಚನಲೋಚನಾಂ ॥ ೫೫ ॥

---

೫೧. ಎಲೌ ಕಲ್ಯಾಣಿಯೇ, ಚಿನ್ನದಂತೆ ಹೊಂಬಣ್ಣವಾದ ನಿನ್ನ ತೊಡೆಗಳನ್ನೇ ನನಗೆ ಆಸನವಾಗಿ ಮಾಡು. ಸ್ತನದ್ವಯವೆಂಬ ಎರಡು ಕಲಶಗಳನ್ನು ಅರ್ಹವಾದ ನನಗೆ ಸಮರ್ಪಿಸು.

೫೨. ತೀಕ್ಷ್ಣಾಸ್ತ್ರದಂತಿರುವ ನಿನ್ನ ಕಟಾಕ್ಷದಿಂದ ನನ್ನನ್ನು ಪರವಶನನ್ನಾಗಿ ಮಾಡು. ಮನ್ಮಥನೆಂಬ ಹಾವಿನ ಕಡಿತಕ್ಕೆ ಸಿಕ್ಕಿದ ನನ್ನನ್ನು ಸ್ಪರ್ಶಮಾಡಿ ವಿಷರಹಿತನನ್ನಾಗಿ ಮಾಡು.

೫೩. ಹಸಿದು ಬಳಲಿರುವ ನನಗೆ ಸಿಹಿಯಾದ ಅಧರಾಮೃತವನ್ನು ದಾನ ಮಾಡು. ಮಾಗಿದ ದಾಳಿಂಬೆಬೀಜದಂತೆ ಸುಂದರವಾದ ನಿನ್ನ ದಂತಗಳನ್ನು ತೋರು.

೫೪. ಎಲೌ ಸುಂದರಿಯೇ, ನಿನ್ನ ಗಂಭೀರವಾದ ನಾಭಿಯನ್ನೂ, ತ್ರಿವಳಿಗಳನ್ನೂ ನೋಡಲಿಚ್ಛಿಸುತ್ತೇನೆ. ನಿನ್ನ ನೀವೀಬಂಧನವನ್ನು ಬಿಚ್ಚಬೇಕೆಂಬ ಆಸೆಯು ನನ್ನನ್ನು ಎಡಬಿಡದೆ ಇದೆ.

೫೫. ಮುನಿಗಳ ಮನಸ್ಸನ್ನೂ ಮೋಹಗೊಳಿಸತಕ್ಕ, ಅತಿ ಮನೋಹರವಾದ ನಿನ್ನ ಶ್ರೋಣೀ ಬಿಂಬಗಳನ್ನು ನೋಡಬಯಸುತ್ತೇನೆ. ನಿನ್ನ ಕಣ್ಣುಗಳೂ ಶರದೃತುವಿನ ಮಧ್ಯಾಹ್ನಕಾಲದ ತಾವರೆಯ ಪ್ರಭೆಯನ್ನು ಅಲ್ಲಗಳೆಯುತ್ತಿವೆ.

ಶರತ್ಪಾರ್ವಣ ಚಂದ್ರಾಸ್ಯಂ ಪ್ರಸನ್ನಂ ಚ ಪ್ರದರ್ಶಯ ।
ಸಾ ಚ ತದ್ವಚನಂ ಶ್ರುತ್ವಾ ತಮುವಾಚ ಸ್ಮರಾತುರಾ ॥ ೫೬ ॥

ದೃಷ್ಟ್ವಾ ತ್ವರ್ತಂ ಕಾಮಬಾಣೇನ ಮಾನಸಂಕ್ಷಯಕಾಮಿನೀ ।

॥ ತಿಲೋತ್ತಮೋವಾಚ ॥

ಪತಿಸ್ತ್ವತ್ಸದೃಶೋ ನಾಥ ಕಾಮಿನೀನಾಂ ಮನೀಷಿತಃ ॥ ೫೭ ॥

ಬಲಿಪುತ್ರೋಽಸಿ ಧರ್ಮಿಷ್ಠೋ ರೂಪವಾನ್ಗುಣವಾನ್ಯುವಾ ।
ಶೃಂಗಾರನಿಪುಣಃ ಕಾಂತಃ ಕಾಮಶಾಸ್ತ್ರವಿಶಾರದಃ ॥ ೫೮ ॥

ಸದಾ ಮನೋಜ್ಞಃ ಸ್ತ್ರೀಣಾಂ ತ್ವಂ ಸುವೇಷಶ್ಚ ಸ್ವಭಾವತಃ ।
ಸುವೇಷಂ ಸುಂದರಂ ಶಾಂತಂ ಕಾಂತಂ ದಾಂತಮರೋಗಿಣಂ ॥ ೫೯ ॥

---

೫೬. ಶರತ್ಪೂರ್ಣಿಮಾ ಚಂದ್ರನಂತೆ ಪ್ರಸನ್ನವಾದ ನಿನ್ನ ಮುಖವನ್ನು ನನಗೆ ತೋರು. ಸಾಹಸಿಕನ ಈ ಮಾತುಗಳನ್ನು ಕೇಳಿ ಕಾಮಾತುರಳಾದ ಆ ತಿಲೋತ್ತಮೆಯು ಅವನನ್ನು ಕುರಿತಿಂತೆಂದಳು.

೫೭. ಕಾಮಬಾಣಪೀಡಿತನಾದ ಅವನ ಮಾನವನ್ನು ಕಾಪಾಡಬೇಕೆಂಬ ಉದ್ದೇಶದಿಂದ ಆ ತಿಲೋತ್ತಮೆಯು ಇಂತೆಂದಳು. ಎಲೈ ನಾಥನೇ, ಸ್ತ್ರೀಯರಿಗೆ ನಿನ್ನಂತಹ ಪತಿಯೇ ಅಭಿಲಷಿತನಾಗುವನು.

೫೮. ಬಲಿಪುತ್ರನಾದ ನೀನು ಧರ್ಮಿಷ್ಠನೂ, ರೂಪವಂತನೂ, ಗುಣವಂತನೂ ಆದ ಯುವಕನಾಗಿದ್ದೀಯೆ. ಸ್ತ್ರೀಯರ ಮನಸ್ಸನ್ನು ಅಪಹರಿಸುವ ನೀನು ಶೃಂಗಾರ ನಿಪುಣನೂ, ಕಾಮಶಾಸ್ತ್ರವಿಶಾರದನೂ ಆಗಿರುವೆ.

೫೯-೬೦. ಸ್ವಭಾವಸುಂದರನಾದ ನೀನು ಸರ್ವದಾ ಸ್ತ್ರೀಯರ ಮನೋಹಾರಿಯಾಗಿರುವೆ. ಸುವೇಷಭೂಷಿತನೂ ಸುಂದರನೂ, ಶಾಂತನೂ ರೋಗರಹಿತನೂ,

ಶೃಂಗಾರಜ್ಞಂ ಗುಣಜ್ಞಂ ತ್ವಾಂ ಯುವಾನಂ ರಸಿಕಂ ಶುಚಿಂ ।
ಸ್ತ್ರೀಮನೋಜ್ಞಂ ದಯಾಲುಂ ಚ ಬಲಿಷ್ಠಂ ಸಂತಮೀದೃಶಂ ॥
ದಾತಾರಮನುರಕ್ತಂ ಚ ಕಾಂತಮಿಚ್ಛತಿ ಕಾಮಿನೀ ॥ ೬೦ ॥

ಏತೇ ಸರ್ವೇ ಗುಣಾಃ ಕಾಂತ ಸಂತಿ ಕಾಂತೇ ತ್ವಯಿ ಧ್ರುವಂ ।
ತ್ವಾಂ ನ ವಾಂಛಂತಿ ಯಾಃ ಕಾಂತಾಸ್ತಾ ಅವಿಜ್ಞಾಶ್ಚ ವಂಚಿತಾಃ ॥ ೬೧ ॥

ಸಂತೋಷಂ ತೇ ಕರಿಷ್ಯಾಮಿ ಸಮಾಗನ್ಯ ವಿಧೋರ್ಗೃಹಾತ್ ।
ವೇಷಂ ಕೃತ್ವಾ ತು ಚಂದ್ರಾರ್ಥಂ ಯಾತಾಽದ್ಯ ತಸ್ಯ ಕಾಮಿನೀ ॥
ಅನ್ಯಾಶ್ಲೇಷಣಮಾತ್ರೇಣ ಭವಿತಾ ಧರ್ಮಲಂಘನಾ ॥ ೬೨ ॥

ಯಾಶ್ಚ ಧರ್ಮಾನ್ನ ರಕ್ಷಂತಿ ತಾಸಾಂ ಚ ಜೀವನಂ ವೃಥಾ ।
ಚಂದ್ರಾಶ್ಲೇಷಂ ನ ಜಾನಂತಿ ಯಾಸ್ತಾ ಮೂಢಾಃ ಪ್ರಕೀರ್ತಿತಾಃ ॥
ತಾ ಏವ ಮಾತೃಗರ್ಭಸ್ಥಾ ನ ಪ್ರಾಜ್ಞಾ ಪೌರುಷೈರಸೈಃ ॥ ೬೩ ॥

ಶೃಂಗಾರರಸಿಕನೂ, ದಯಾಳುವೂ, ಬಲಿಷ್ಠನೂ, ದಾತೃವೂ, ಅನುರಕ್ತನೂ, ಸ್ತ್ರೀಮನೋಜ್ಞನೂ ಆದ ನಿನ್ನಂಥ ಪತಿಯನ್ನು ಪ್ರತಿಯೊಬ್ಬ ಸ್ತ್ರೀಯೂ ಬಯಸುವಳು.

೬೧. ಎಲೈ ಕಾಂತನೇ, ಸ್ತ್ರೀಯರು ಅಪೇಕ್ಷಿಸುವ ಗುಣವೆಲ್ಲವೂ ಮನೋಹರನಾದ ನಿನ್ನಲ್ಲಿದೆ. ನಿನ್ನನ್ನು ಬಯಸದಿರುವ ಕಾಂತೆಯರೆಲ್ಲರೂ ಜ್ಞಾನರಹಿತರೂ, ವಂಚನೆಗೊಳಗಾದವರೂ ಎನಿಸುವರು

೬೨. ಚಂದ್ರನ ಮಂದಿರದಿಂದ ಹಿಂತಿರುಗಿದ ಮೇಲೆ ನಿನಗೆ ಸಂತೋಷವನ್ನುಂಟುಮಾಡುವೆನು. ಇಂದು ಚಂದ್ರನಿಗಾಗಿ ವೇಷವನ್ನು ಧರಿಸಿ ಹೊರಟಿರುವುದರಿಂದ ಅವನ ಪತ್ನಿಯಾಗಿದ್ದೇನೆ. ಈ ದಿವಸ ಮತ್ತೊಬ್ಬರನ್ನು ಆಲಿಂಗಿಸಿಕೊಂಡರೂ ಕೂಡ ಧರ್ಮವನ್ನು ಮೀರಿದಂತಾಗುವುದು.

೬೩. ಯಾರು ಧರ್ಮವನ್ನು ಕಾಪಾಡುವುದಿಲ್ಲವೋ ಅವರ ಜೀವನವೇ ವ್ಯರ್ಥವೆನಿಸುವುದು. ಚಂದ್ರನ ಆಲಿಂಗನ ಸುಖವನ್ನು ಅರಿಯದ ಸ್ತ್ರೀಯರೂ ಕೂಡ ಮೂಢೆಯರೆನಿಸುವರು. ಪುರುಷ ಸಂಬಂಧವಾದ ರಸಜ್ಞಾನವಿಲ್ಲದವರು ಮಾತೃ ಗರ್ಭದಲ್ಲಿರುವ ಶಿಶುವಿಗೆ ಸಮಾನರು.

ಸ್ವರ್ವೈದ್ಯೌ ಮದನಶ್ಚಂದ್ರೋ ಮರುತ್ವಾನ್ನಲಕೂಬರಃ।
ಏಭಿರ್ನಾಲಿಂಗಿತಾ ಯಾಸ್ತಾ ವಂಚಿತಾ ರತಿಕರ್ಮಭಿಃ ॥ ೬೪ ॥

ದಿವಾನಿಶಂ ಮಾನಸಂ ಮೇ ತೇಷಾಂ ಕ್ರೀಡಾಂ ಚ ಚಿಂತಯೇತ್ ।
ವಿಶೇಷತಃ ಕಾಮದೇವೋ ನಿಪುಣೋ ರತಿಕರ್ಮಣಿ ॥ ೬೫ ॥

ಚಂದ್ರಶೃಂಗಾರಮಾಶ್ಲೇಷಮಾಲಾಪಮಮೃತಾಧಿಕಂ ।
ಅದ್ಯ ತಸ್ಯ ರತಿದಿನಂ ತೇನ ತಚ್ಚಿಂತಯೇನ್ಮನಃ ॥ ೬೬ ॥

ತಿಲೋತ್ತಮಾವಚಃ ಶ್ರುತ್ವಾ ಜಹಾಸ ಬಲಿನಂದನಃ ।
ಸಕಾಮಶ್ಚ ಸಪುಲಕಃ ತಾಮುವಾಚ ರಹಃಸ್ಥಲೇ ॥ ೬೭ ॥

॥ ಸಾಹಸಿಕ ಉವಾಚ ॥

ಬ್ರಹ್ಮಣಾ ನಿರ್ಮಿತಾ ತ್ವಂ ಚ ಕೌತುಕೇನ ತಿಲೋತ್ತಮೇ ।
ಅತೋ ವರಾ ಚಾಪ್ಸರಸಾಂ ವಿದಗ್ಧರಸಿಕೇಶ್ವರೀ ॥ ೬೮ ॥

---

೬೪. ಅಶ್ವಿನೀದೇವತೆಗಳು, ಮನ್ಮಥ, ಚಂದ್ರ, ಇಂದ್ರ ಮತ್ತು ನಲಕೂಬರ ಇವರುಗಳಆಲಿಂಗನೆಗೆ ಒಳಗಾಗದ ಸ್ತ್ರೀಯರು ರತಿಸುಖದಿಂದ ವಂಚಿತರಾಗುವರು.

೬೫ ಹಗಲೂ ರಾತ್ರಿ ನನ್ನ ಮನಸ್ಸು ಅವರೊಡನೆ ಕ್ರೀಡಿಸಲು ಬಯಸುವುದು ಅವರಲ್ಲೂ ಮನ್ಮಥನು ರತಿಸುಖ ಕೊಡುವುದರಲ್ಲಿ ಅತ್ಯಂತ ನಿಪುಣನು.

೬೬. ಈ ದಿವಸ ಚಂದ್ರನೊಡನೆ ರತಿಸುಖವನ್ನನುಭವಿಸಬೇಕಾಗಿರುವುದರಿಂದ ಅವನ ಶೃಂಗಾರವೂ, ಆಲಿಂಗನೆಯೂ ಮತ್ತು ಸಂಲಾಪವೂ ಅಮೃತಕ್ಕಿಂತಲೂ ಅಧಿಕವೆನಿಸುವುದು. ಮನಸ್ಸು ಅವನನ್ನೇ ಚಿಂತಿಸುವುದು.

೬೭ ತಿಲೋತ್ತಮೆಯ ಮಾತನ್ನು ಕೇಳಿ ಬಲಿಪುತ್ರನಾದ ಸಾಹಸಿಕನು ರೋಮಾಂಚಿತನೂ, ಕಾಮಪೀಡಿತನೂ ಆಗಿ ಆಕೆಯನ್ನು ಕುರಿತು ರಹಸ್ಯವಾಗಿ ಇಂತೆಂದನು.

೬೮. ಸಾಹಸಿಕ :—ಎಲೌ ತಿಲೋತ್ತಮೆಯೇ, ಬ್ರಹ್ಮನು ಅತ್ಯುತ್ತಮವಾದ ಸೃಷ್ಟಿಯನ್ನು ಮಾಡಬೇಕೆಂಬ ಉದ್ದಿಶ್ಯದಿಂದ ನಿನ್ನನ್ನು ಸೃಜಿಸಿದ್ದಾನೆ. ಆದ್ದರಿಂದಲೇ ನೀನು ಅಪ್ಸರೆಯರಲ್ಲಿ ಶ್ರೇಷ್ಠಳೂ ರಸಿಕೇಶ್ವರಿಯೂ ಆಗಿರುವೆ.

ಸುಂದೋಪಸುಂದಯೋರ್ನಾಶನಿಮಿತ್ತೇನ ಪ್ರಯತ್ನತಃ ।
ಸರ್ವರೂಪಗುಣಾಧಾರಾ ವಿಧಿನಾ ಚ ಕೃತಾ ಪುರಾ ॥ ೬೯ ॥

ಸರ್ವಂ ಜಾನಾಸಿ ಸರ್ವಜ್ಞೇ ವಿಜ್ಞಾ ಸುರತಕರ್ಮಣಿ ।
ಹರ್ಷೇಣ ಶ್ರೋತುಮಿಚ್ಛಾಮಿ ವದ ಮೇ ಮಾನಸಂ ವಚಃ ॥ ೭೦ ॥

ಅತಿಪ್ರಿಯಶ್ಚ ಕೋ ವಾ ಚ ಕಃ ಸ್ವಭಾವೋ ವರಾನನೇ ।
ಅವಶ್ಯಂ ಗೋಪನೀಯಂ ಚ ಶ್ರೋತುಮಿಚ್ಛಾಮಿ ಸುಂದರಿ ॥ ೭೧ ॥

ಗಂಧರ್ವಾಣಾಂ ಸುರಾಣಾಂ ಚ ರಾಜ್ಞಾಂ ಪುಣ್ಯವತಾಮಪಿ ।
ಸರ್ವೇಷಾಂ ಪ್ರಾಣತುಲ್ಯಾ ತ್ವಮೇಷು ತೇ ಕಃ ಪರಃ ಪ್ರಿಯಃ ॥ ೭೨ ॥

ಅಸುರಸ್ಯ ವಚಃ ಶ್ರುತ್ವಾ ಪ್ರಹಸ್ಯ ಸಾ ತಿಲೋತ್ತಮಾ ।
ಮುಖಮಾಚ್ಛಾದನಂ ಚಕ್ರೇ ವಿಲೋಕ್ಯ ವಕ್ರಚಕ್ಷುಷಾ ॥ ೭೩ ॥

---

೬೯. ಸುಂದೋಪಸುಂದರನ್ನು ನಾಶಮಾಡಬೇಕೆಂಬ ನಿಮಿತ್ತದಿಂದ ಪ್ರಯತ್ನ ಪೂರ್ವಕವಾಗಿ ಸಕಲ ರೂಪ ಮತ್ತು ಗುಣಗಳಿಗೆ ಆಧಾರಳಾದ ನೀನು ಸೃಜಿಸಲ್ಪಟ್ಟೆ.

೭೦. ಸುರತಸುಖದಲ್ಲಿ ಪ್ರೌಢೆಯಾದ ಎಲೌ ಸುಂದರಿಯೇ, ಸರ್ವಜ್ಞಳಾದ ನೀನು ಎಲ್ಲವನ್ನೂ ಬಲ್ಲೆ. ನಿನ್ನ ಮನಸ್ಸಿನಲ್ಲಿರುವ ಮಾತನ್ನು ನಾನು ಸಂತೋಷದಿಂದ ಕೇಳ ಬಯಸುತ್ತೇನೆ.

೭೧. ನಿನಗೆ ಅತ್ಯಂತ ಪ್ರಿಯನಾದವನು ಯಾರು? ಯಾರ ಸ್ವಭಾವವು ನಿನಗೆ ರುಚಿಸುವುದು. ಎಲೌ ಸುಂದರಿಯೇ, ಅತ್ಯಂತ ಗೋಪ್ಯವೆನಿಸುವ ಈ ವಿಷಯವನ್ನು ಕೇಳ ಬಯಸುತ್ತೇನೆ.

೭೨ ಗಂಧರ್ವರಿಗೂ, ದೇವತೆಗಳಿಗೂ, ಪುಣ್ಯವಂತರಾದ ರಾಜರಿಗೂ ನೀನು ಪ್ರಾಣಸದೃಶಳಾಗಿರುವೆ. ಇವರುಗಳಲ್ಲಿ ನಿನಗೆ ಹೆಚ್ಚು ಪ್ರಿಯರಾರು?

೭೩. ಆ ಅಸುರನ ಮಾತನ್ನು ಕೇಳಿ ತಿಲೋತ್ತಮೆಯು ನಸುನಕ್ಕು ತನ್ನ ವಕ್ರಕಟಾಕ್ಷದಿಂದ ಒಮ್ಮೆ ಅವನನ್ನು ನೋಡಿ ಮುಖವನ್ನು ಮರೆಮಾಡಿಕೊಂಡಳು.

ಸತ್ಯಂ ಸಾರಮಂತರಸ್ಥಮವ್ಯಕ್ತಮತಿಗೋಪನಂ ।
ಉವಾಚ ಮಾನಸಂ ವಾಕ್ಯಮಜ್ಞಾತಂ ವಿದುಷಾಮಪಿ ॥ ೭೪ ॥

॥ ತಿಲೋತ್ತಮೋವಾಚ ॥

ಕಥನೀಯಂ ಸಾಹಸಿಕ ಪುಂಶ್ಚಲೀನಾಂ ಮನೋವಚಃ ।
ಸ್ತ್ರೀಜಾತೀನಾಂ ಚ ಸರ್ವಾಸಾಮುಪಹಾಸಕರಂ ಪರಂ ॥ ೭೫ ॥

ಸರ್ವೇಷಾಮಪಿ ದುರ್ಜ್ಞೇಯಂ ಚರಿತಂ ಯೋಷಿತಾಮಪಿ ।
ವಿಶೇಷತೋಽಪಿ ದುರ್ಜ್ಞೇಯಂ ಪುಂಶ್ಚಲೀನಾಂ ಮನೋರಥಃ ॥ ೭೬ ॥

ವೇದವೇದಾಂಗಶಾಸ್ತ್ರಾರ್ಥಂ ಸರ್ವಂ ಜಾನಾತಿ ಪಂಡಿತಃ ।
ಕಾಂತ ನಾಂತಂ ವಿಜಾನಾತಿ ದಿಶಾಮಾಕಾಶಯೋಷಿತಾಂ ॥ ೭೭ ॥

ವಿಷಾದಪ್ಯಪ್ರಿಯೋ ವೃದ್ಧೋ ರತ್ನಾದಪಿ ಚ ಯೋಷಿತಾಂ ।
ಯುವಾ ಸರ್ವಸ್ವಹರ್ತಾಚೇತ್ಪ್ರಾಣೇಭ್ಯೋಽಪಿ ಪರಃ ಪ್ರಿಯಃ ॥ ೭೮ ॥

---

೭೪. ಸತ್ಯವೂ, ಸಾರಭೂತವೂ, ಅತ್ಯಂತಗೋಪ್ಯವೂ, ಅಂತರ್ಗತವೂ, ವಿದ್ವಾಂಸರಿಗೆ ಅಜ್ಞಾತವೂ ಆದ ತನ್ನ ಮನೋಗತಾಭಿಲಾಷೆಯನ್ನು ಅವನಿಗೆ ಹೇಳಿದಳು.

೭೫. ತಿಲೋತ್ತಮೆ :—ಎಲೈ ಸಾಹಸಿಕನೇ, ವೇಶ್ಯೆಯರ ಮನೋಗತವಾದ ಮಾತನ್ನು ಹೇಳಿದರೆ ಸ್ತ್ರೀಯರ ಜಾತಿಗೇ ಉಪಹಾಸಾಸ್ಪದವಾಗುವುದು.

೭೬. ಸಾಮಾನ್ಯವಾದ ಸ್ತ್ರೀಯರ ಚರಿತ್ರೆಯೇ ಯಾರಿಗೂ ತಿಳಿಯ ಲಾಗುವುದಿಲ್ಲ. ಹೀಗಿರುವಾಗ ವೇಶ್ಯೆಯರ ಮನೋಗತವಾದ ವಿಷಯವು ಸುಲಭ ವಾಗಿ ತಿಳಿಸಲಸದಳವೆಂಬುದರಲ್ಲಿ ಆಶ್ಚರ್ಯವೇನು?

೭೭. ಪಂಡಿತನಾದವನು ವೇದ ವೇದಾಂಗಗಳ ಕೊನೆಮುಟ್ಟಬಲ್ಲನು; ಆದರೆ ದಿಕ್ಕು, ಆಕಾಶ ಮತ್ತು ಹೆಂಗಸಿನ ಕೊನೆ ಮೊದಲನ್ನು ತಿಳಿಯಲಾರನು.

೭೮. ಮುದುಕನು ಹೆಂಗಸಿಗೆ ವಿಷಕ್ಕಿಂತಲೂ ಅಪ್ರಿಯನೆನಿಸುವನು ಯುವಕನು ರತ್ನಕ್ಕಿಂತಲೂ ಪ್ರಿಯನೆನಿಸುವನು. ಅತ್ಯಂತ ಸುಂದರನಾಗಿದ್ದರಂತೂ ತನ್ನ ಪ್ರಾಣಕ್ಕಿಂತಲೂ ಪ್ರಿಯನಾಗುವನು.

ಯುವಾನಂ ಸುಂದರಂ ದೃಷ್ಟ್ವಾ ಹ್ಯಾಶ್ವಾ ಭವತಿ ಪುಂಶ್ಚಲೀ ।
ವಿಶೇಷತಃ ಸುವೇಷಂ ಚ ದೃಷ್ಟ್ವೈವ ಹತಚೇತನಾ ॥ ೭೯ ॥

ನಿಮೇಷರಹಿತಾ ತಸ್ಯ ಲೋಚನಾಭ್ಯಾಂ ಪಿಬೇನ್ಮುಖಂ ।
ಯೋನೌ ಜಲಂ ಕ್ಷರೇತ್ತಸ್ಯಾಃ ಸದ್ಯಃ ಕಂಡೂಯನಂ ಭವೇತ್ ॥ ೮೦ ॥

ಮನೋಽತಿಲೋಲಮಸ್ಥೈರ್ಯಂ ಸರ್ವಾಂಗಾನಿ ಚಕಂಪಿರೇ ।
ಜಡೀಭೂತಂ ಶರೀರಂ ಚ ಪ್ರದಗ್ಧಂ ಮದನಾನಲಾತ್ ॥ ೮೧ ॥

ಸಂಪ್ರಾಪ್ಯ ತಂ ಚೇದ್ರಹಸಿ ಸಾಽಽಲಾಪಂ ಕುರುತೇ ಸ್ಫುಟಂ ।
ಸಕಟಾಕ್ಷಂ ಸ್ಮೇರವಕ್ತ್ರಂ ದರ್ಶಯಿತ್ವಾ ಪುನಃ ಪುನಃ ॥ ೮೨ ॥

ತಥಾ ಯದಿ ವಶಂ ಕರ್ತುಂ ನ ಶಶಾಕ ಜಿತೇಂದ್ರಿಯಂ ।
ಸ್ವಮಂಗಂ ದರ್ಶಯಿತ್ವಾ ತಮಂತರ್ವಾಕ್ಯಂ ಸ್ಫುಟಂ ವದೇತ್ ॥ ೮೩ ॥

---

೭೯. ಸುಂದರನಾದ ಯುವಕನನ್ನು ನೋಡಿ ವೇಶ್ಯೆಯು ಮನೋವ್ಯಾಧಿ ಪೀಡಿತಳಾಗುವಳು. ಅದರಲ್ಲೂ ಸುವೇಷಭೂಷಿತನನ್ನು ನೋಡಿದ ಮಾತ್ರದಿಂದಲೇ ನಷ್ಟಚೇತನಳಾಗುವಳು.

೮೦. ರೆಪ್ಪೆಗಳನ್ನೂ ಬಡಿಯದೆ ತನ್ನ ಎರಡು ಕಣ್ಣುಗಳಿಂದಲೂ ಅವನ ಮುಖಸೌಂದರ್ಯವನ್ನು ಪಾನಮಾಡುವಳು. ಕೂಡಲೇ ಅವಳ ಯೋನಿಯಲ್ಲಿ ಕಂಡೂಯನವುಂಟಾಗಿ ನೀರಾಡುವುದು.

೮೧. ಚಂಚಲವಾದ ಮನಸ್ಸು ಮತ್ತೂ ಅಸ್ಥಿರವಾಗಿ ಅಂಗಾಂಗಗಳೂ ನಡುಗಲಾರಂಭಿಸುವುವು. ಶರೀರವೆಲ್ಲ ಜಡವಾಗಿ ಮದನಾಗ್ನಿಯಿಂದ ಸಂತಪ್ತವಾಗುವುದು.

೮೨. ಅವನನ್ನು ಏಕಾಂತದಲ್ಲಿ ಕಂಡರಂತೂ, ನಗುಮುಖದಿಂದ ತನ್ನ ಕಟಾಕ್ಷವನ್ನು ಮತ್ತೆಮತ್ತೆ ಬೀರಿ ಅವನೊಡನೆ ಸ್ಫುಟವಾಗಿ ಮಾತನಾಡುವಳು

೮೩ ಜಿತೇಂದ್ರಿಯನಾದ ಅವನನ್ನು ಸುಲಭವಾಗಿ ವಶಪಡಿಸಿಕೊಳ್ಳಲಾಗದಿದ್ದರೆ ತನ್ನ ಅವಯವಗಳನ್ನು ಹೊರಕ್ಕೆ ವ್ಯಕ್ತಪಡಿಸಿ ತನ್ನ ಮನೋಗತವನ್ನು ಸ್ಪಷ್ಟಪಡಿಸುವಳು.

ದುಃಸಾಧ್ಯೇ ನಾಯಕೇ ದುಃಖಂ ಭವೇದಾಜನ್ಮಜನ್ಮನಿ।
ತತ್ತುಲ್ಯಂ ತತ್ಪರಂ ಪ್ರಾಪ್ಯ ತಂ ವಿಸ್ಮರತಿ ಪುಂಶ್ಚಲೀ ॥ ೮೪ ॥

ಪುಂಶ್ಚಲೀನಾಮಪ್ರಿಯಃ ಕಃ ಕಃ ಪ್ರಿಯೋ ವಾ ಮಹೀತಲೇ।
ಯೋಽತಿಶೃಂಗಾರನಿಪುಣಃ ಸ ಚ ಪ್ರಾಣಾಧಿಕಃ ಪ್ರಿಯಃ ॥ ೮೫ ॥

ಪೂರ್ವಜಾರಂ ಪತಿಂ ಪುತ್ರಂ ಭ್ರಾತರಂ ಪಿತರಂ ಪ್ರಭುಂ।
ವಿಶಿಷ್ಟಂ ನೂತನಂ ಪ್ರಾಪ್ಯ ಸರ್ವಂ ತ್ಯಜತಿ ಲೀಲಯಾ ॥ ೮೬ ॥

ನ ದಾನೇನ ನ ಮಾನೇನ ಸತ್ಯೇನ ಸ್ತವನೇನ ವಾ।
ನೋಪಕಾರೇಣ ಪ್ರೀತ್ಯಾ ವಾ ಸಾ ಸಾಧ್ಯಾ ಸುರತಿಂ ವಿನಾ ॥ ೮೭ ॥

---

೮೪. ನಾಯಕನು ಸುಲಭವಾಗಿ ವಶನಾಗದಿದ್ದರೆ ಜನ್ಮಜನ್ಮಕ್ಕೂ ವ್ಯಥೆಯುಂಟಾಗುವುದು ಅವನಿಗೆ ಸಮಾನನೋ ಅವನಿಗಿಂತ ಶ್ರೇಷ್ಠನೋ ಸಿಕ್ಕಿದರೆ ವೇಶ್ಯೆಯು ಅವನನ್ನು ಮರೆಯುವಳು.

೮೫. ಭೂಮಂಡಲದಲ್ಲಿ ವೇಶ್ಯೆಯರಿಗೆ ಪ್ರಿಯರಾರು ? ಅಪ್ರಿಯರಾರು ? ಯಾವನು ಶೃಂಗಾರಸುಖಕೊಡುವುದರಲ್ಲಿ ನಿಪುಣನೋ ಅವನೇ ಪ್ರಾಣಕ್ಕಿಂತಲೂ ಹೆಚ್ಚು ಪ್ರಿಯನಾಗುವನು.

೮೬. ನೂತನಪುರುಷನು ದೊರಕಿದರೆ ಹಳೆಯ ವಿಟನನ್ನೂ, ಪತಿಪುತ್ರರನ್ನೂ, ತಂದೆತಾಯಿಯರನ್ನೂ, ಸಹೋದರರನ್ನೂ, ವೇಶ್ಯೆಯು ಲೀಲಾಮಾತ್ರದಲ್ಲಿ ತ್ಯಜಿಸುವಳು.

೮೭. ರತಿಸುಖವೊಂದನ್ನು ಬಿಟ್ಟು ದಾನಮಾನಗಳಿಂದಾಗಲೀ, ಸ್ತುತಿನುತಿಗಳಿಂದಾಗಲೀ, ಉಪಕಾರ ಮತ್ತು ಪ್ರೀತಿಯಿಂದಾಗಲೀ, ವೇಶ್ಯೆಯನ್ನು ವಶಪಡಿಸಿಕೊಳ್ಳಲಾಗುವುದಿಲ್ಲ.

ಶಯನೇ ಭೋಜನೇ ಚಾಪಿ ಸ್ವಪ್ನೇ ಜ್ಞಾನೇ ದಿವಾನಿಶಂ ।
ನಿತ್ಯಂ ಸತ್ಪುರುಷಾಶ್ಲೇಷಂ ಸ್ಮರಂತಿ ಕುಲಟಾಃ ಸ್ತ್ರಿಯಃ ॥ ೮೮ ॥

ಶೃಂಗಾರನಿಪುಣಾನಾಂ ಚ ಧ್ಯಾನಸಾಧ್ಯಾ ಚಿರಂ ಪರಂ ।
ದಾರುಣಾ ಪುಂಶ್ಚಲೀಜಾತಿಃ ಪ್ರಾರ್ಥಯಂತೀ ನವಂ ನವಂ ॥ ೮೯ ॥

ಸರ್ವಾಸಾಂ ಕುಲಟಾನಾಂ ಚ ಚರಿತ್ರಂ ಕಥಿತಂ ಮಯಾ ।
ಅಕಥ್ಯಂ ಗೋಪನೀಯಂ ಚ ಮಮ ಹೃದ್ವಚನಂ ಶೃಣು ॥ ೯೦ ॥

ಮಮ ಸಂತಿ ಪ್ರಿಯತರಾ ಗಂಧರ್ವೇಷು ಸುರೇಷು ಚ ।
ಯುವಾನೋ ರತಿಶೂರಾಶ್ಚ ಕಾಮಶಾಸ್ತ್ರವಿಶಾರದಾಃ ॥ ೯೧ ॥

ವಿಶೇಷತಃ ಶಶಧರೇ ಸ್ನೇಹೋ ಮೇ ವಿದ್ಯತೇ ಪರಃ ।
ತತೋಽತಿರಿಕ್ತಃ ಸರ್ವಸ್ಮಾದಪಿ ಕಾಮಃ ಪ್ರಿಯೋ ಮಮ ॥ ೯೨ ॥

---

೮೮. ಪ್ರತಿದಿನವೂ ಕುಲಟೆಯರು ಮಲಗುವಾಗಲೂ, ಊಟಮಾಡುವಾಗಲೂ, ಸ್ವಪ್ನಕಾಲದಲ್ಲೂ, ಹಗಲೂರಾತ್ರಿ ಸತ್ಪುರುಷರ ಆಲಿಂಗನ ಸುಖವನ್ನೇ ಬಯಸುತ್ತಿರುತ್ತಾರೆ.

೮೯. ಶೃಂಗಾರನಿಪುಣರು ಧ್ಯಾನಮಾಡಿದ ಮಾತ್ರದಿಂದಲೇ ವೇಶ್ಯೆಯರು ಸುಲಭವಾಗಿ ದೊರೆಯುವರು. ವೇಶ್ಯಾಜಾತಿಯೇ ದಾರುಣವಾದುದು. ಕ್ಷಣ ಕ್ಷಣಕ್ಕೂ ಹೊಸಬರನ್ನು ಪ್ರಾರ್ಥಿಸುವುದು.

೯೦. ಸಾಮಾನ್ಯವಾದ ಕುಲಟೆಯರ ಚರಿತ್ರೆಯನ್ನು ನಾನೀಗ ಹೇಳಿದೆನು. ಹೇಳಬಾರದಷ್ಟು ಗುಟ್ಟಾದ ನನ್ನ ಹೃದ್ಗತವಾದ ನುಡಿಗಳನ್ನು ಈಗ ಹೇಳುವೆನು ಕೇಳು.

೯೧. ನನಗೆ ಗಂಧರ್ವರಲ್ಲಿಯೂ, ದೇವತೆಗಳಲ್ಲಿಯೂ, ರತಿಚತುರರೂ, ಕಾಮಶಾಸ್ತ್ರವಿಶಾರದರೂ ಆದ ಯುವಕರು ಪ್ರೀತಿಪಾತ್ರರಾಗಿದ್ದಾರೆ.

೯೨ ಆದರಲ್ಲಿಯೂ ಚಂದ್ರನಲ್ಲಿ ನನಗೆ ಅತ್ಯಂತ ಪ್ರೀತಿಯಿದೆ. ಎಲ್ಲರಿಗಿಂತಲೂ ಹೆಚ್ಚಾಗಿ ಮನ್ಮಥನು ನನಗೆ ಅತ್ಯಂತ ಪ್ರೀತ್ಯಾಸ್ಪದನು.

ಪ್ರಿಯೋ ಮೇ ಕಾಮಸದೃಶೋ ನ ಭೂತೋ ನ ಭವಿಷ್ಯತಿ ।
ಸ್ಮರಸ್ಯ ಸ್ಮರಣಾತ್ಪೂರ್ಣಂ ಸುಸ್ನಿಗ್ಧಂ ಮಾನಸಂ ಮಮ ॥ ೯೩ ॥

ಇತ್ಯೇವಂ ಕಥಿತಂ ಸರ್ವಮಾತ್ಮನೋ ಯೋಷಿತಾಮಪಿ ।
ಆಜ್ಞಾಂ ಕುರು ಮಹಾರಾಜ ಯಾಸ್ಯಾಮಿ ಚಂದ್ರಸನ್ನಿಧಿಂ ॥ ೯೪ ॥

ಚಂದ್ರಸ್ಥಾನಾತ್ತವ ಸ್ಥಾನಂ ಸಮಾಗತ್ಯ ಸುನಿಶ್ಚಿತಂ ।
ಸಂತೋಷಂ ತವ ದೈತ್ಯೇಂದ್ರ ಕರಿಷ್ಯಾಮಿ ನ ಸಂಶಯಃ ॥ ೯೫ ॥

ಶ್ರುತ್ವೈವಂ ಬಲಿಪುತ್ರಶ್ಚ ಜಹಾಸೋಚ್ಚೈಃ ಪುನಃ ಪುನಃ ।
ಸಾ ವಕ್ರಚಕ್ಷುಷಾಲೋಕ್ಯ ತಂ ಜಹಾಸ ಸ್ಮರಾತುರಾ ॥ ೯೬ ॥

ಛಲೇನ ದರ್ಶಯಾಮಾಸ ಕಠಿನಂ ಸ್ತನಯೋರ್ಯುಗಂ ।
ಚಾರುಚಂಪಕವರ್ಣಾಭಂ ವರ್ತುಲಂ ಪೀನಮುಚ್ಛ್ರಿತಂ ॥ ೯೭ ॥

---

೯೩. ಮನ್ಮಥನಿಗೆ ಸಮನಾದ ಪ್ರಿಯನು ನನಗೆ ಹಿಂದೆ ಯಾರೂ ಇರಲಿಲ್ಲ. ಮುಂದೆಯೂ ಇರುವುದಿಲ್ಲ. ಮನ್ಮಥನನ್ನು ಸ್ಮರಿಸಿಕೊಂಡ ಮಾತ್ರದಿಂದಲೇ ನನ್ನ ಮನಸ್ಸು ಸ್ನೇಹಪೂರ್ಣವಾಗುವುದು.

೯೪. ಈರೀತಿಯಾಗಿ ನನ್ನ ಮತ್ತು ಇತರ ಸ್ತ್ರೀಯರ ಚರಿತ್ರೆಯನ್ನು ಹೇಳಿದೆನು. ಈಗ ನನಗೆ ಅನುಜ್ಞೆಕೊಟ್ಟರೆ ಚಂದ್ರನ ಸಮೀಪಕ್ಕೆ ಹೋಗುತ್ತೇನೆ.

೯೫ ಅನಂತರ ನಾನು ಚಂದ್ರನ ಸಮೀಪದಿಂದ ನಿನ್ನ ಹತ್ತಿರಕ್ಕೆ ನಿಶ್ಚಯವಾಗಿ ಬಂದು ನಿನಗೆ ಸಂತೋಷಪಡಿಸುವುದರಲ್ಲಿ ಸಂದೇಹವಿಲ್ಲ.

೯೬. ಈ ಮಾತನ್ನು ಕೇಳಿ ಬಲಿಪುತ್ರನಾದ ಸಾಹಸಿಕನು ಗಟ್ಟಿಯಾಗಿ ಮತ್ತೆ ಮತ್ತೆ ನಕ್ಕನು. ಆ ತಿಲೋತ್ತಮೆಯೂ ಕೂಡ ಕಾಮಾತುರಳಾಗಿ ತನ್ನ ವಕ್ರಕಟಾಕ್ಷದಿಂದ ಅವನನ್ನು ನೋಡಿ ನಕ್ಕಳು.

೯೭. ಯಾವುದೋ ನೆಪದಿಂದ ಸಂಪಿಗೆಯಂತೆ ಹೊಂಬಣ್ಣವೂ, ವರ್ತುಲಾಕಾರವೂ, ಅತ್ಯುನ್ನತವೂ, ಕಠಿಣವೂ ಆದ ಎರಡು ಸ್ತನಗಳನ್ನು ಅವನಿಗೆ ತೋರಿದಳು.

ಶ್ರೋಣೀಂ ಸುಕಠಿನಾಂ ರಮ್ಯಾಂ ರಂಭಾಸ್ತಂಭವಿನಿಂದಿನೀಂ ।
ಸಕಟಾಕ್ಷಂ ಸ್ಮೇರವಕ್ತ್ರಂ ಕಪೋಲಂ ಪುಲಕಾಂಚಿತಂ ॥ ೯೮ ॥

ರಹಃಸ್ಥಾನಂ ಸಮಾಸಾದ್ಯ ಕಾಮೇನ ಹತಚೇತನಾ ।
ಪುಲಕಾಂಚಿತಸರ್ವಾಂಗೀ ಲೋಚನಾಭ್ಯಾಂ ಪಪೌ ಮುಖಂ ॥ ೯೯ ॥

ತಸ್ಯ ರೂಪಂ ಚ ವೇಷಂ ಚ ದರ್ಶಂದರ್ಶಂ ಪುನಃ ಪುನಃ ।
ಮುಖಸ್ಯಾಚ್ಛಾದನಂ ಭಾವಾತ್ಕುರ್ವತೀ ಸೂಕ್ಷ್ಮವಾಸಸಾ ॥ ೧೦೦ ॥

ಅತಿಕಾಮಾತುರಾಂ ದೃಷ್ಟ್ವಾ ಸುಪ್ರಾಜ್ಞೋ ಬಲಿನಂದನಃ ।
ಪ್ರಪಚ್ಛ ಕಾಮಿನಾಂ ಕಾಮೀ ಭಾವಂ ವಿಜ್ಞಾತುಮುತ್ಸುಕಃ ॥ ೧೦೧ ॥

---

೯೮. ಅತ್ಯಂತ ಕಠಿನವೂ, ಬಾಳೆಯ ಕಂಭವನ್ನು ಹೋಲುವುದೂ ಆದ ಶ್ರೋಣೀಬಿಂಬವನ್ನೂ ವ್ಯಕ್ತಗೊಳಿಸಿ, ಕಟಾಕ್ಷಯುಕ್ತವಾದ ನಗುಮುಖವನ್ನೂ, ರೋಮಾಂಚಿತವಾದ ಕಪೋಲಗಳನ್ನೂ ಅವನಿಗೆ ತೋರಿದಳು.

೯೯. ಏಕಾಂತಪ್ರದೇಶಕ್ಕೆ ಹೋಗಿ, ಕಾಮಪೀಡಿತಳೂ, ರೋಮಾಂಚಿತ ಶರೀರಳೂ ಆಗಿ ಎರಡು ಕಣ್ಣುಗಳಿಂದಲೂ ಅವನ ಮುಖವನ್ನು ದೃಷ್ಟಿಸಿ ನೋಡಿದಳು.

೧೦೦. ಅವನ ರೂಪವನ್ನೂ ವೇಷವನ್ನೂ ಮತ್ತೆ ಮತ್ತೆ ನೋಡಿ ತನ್ನ ಮನೋಭಾವವನ್ನು ವ್ಯಕ್ತಪಡಿಸಲು ಸೂಕ್ಷ್ಮವಾದ ಸೆರಗಿನಿಂದ ಮುಖವನ್ನು ಮುಚ್ಚಿಕೊಂಡಳು.

೧೦೧ ಈ ರೀತಿ ತಿಲೋತ್ತಮೆಯು ಅತ್ಯಂತ ಕಾಮಾತುರಳಾಗಿರುವುದನ್ನು ನೋಡಿ ಪ್ರಾಜ್ಞನೂ ಕಾಮಿಯೂ ಆದ ಬಲಿಪುತ್ರನು ಅವಳ ಮನೋಭಾವವನ್ನು ತಿಳಿಯಲು ಉತ್ಸುಕನಾಗಿ ಈ ರೀತಿ ಕೇಳಿದನು.

|| ಸಾಹಸಿಕ ಉವಾಚ ||

ಕಿಂ ಕರಿಷ್ಯಸಿ ಮಾಂ ಸತ್ಯಂ ವದ ಪಂಕಜಲೋಚನೇ ।
ಕಾರ್ಯಾಂತರಂ ಕರಿಷ್ಯಾಮಿ ಸುಚಿರಂ ಸ್ಥಾತುಮಕ್ಷಮಃ || ೧೦೨ ||

ಕಾಮಿನೀಷು ಬಲಾತ್ಕಾರೋ ನ ಧರ್ಮೋ ಧರ್ಮಿಣಾಂ ಪ್ರಿಯೇ।
ವಿಶೇಷತೋಽತಿವಿದುಷಾಂ ನಾಽಸ್ಮಾಕಂ ಸ್ವಕುಲೋಚಿತಃ || ೧೦೩ ||

ಶೃಂಗಾರಂ ದೇಹಿ ವಾ ಗಚ್ಛ ರತಿಂ ಕರ್ತುಂ ಸುರಾಂತಿಕೇ ।
ಕಃ ಕ್ಷಮೋ ವಾ ವಶೀಕರ್ತುಂ ಪುಂಶ್ಚಲೀಂ ಬಹುಗಾಮಿನೀಂ || ೧೦೪ ||

ದಾನವಸ್ಯ ವಚಃ ಶ್ರುತ್ವಾ ಶುಷ್ಕಕಂಠೋಷ್ಠತಾಲುಕಾ ।
ಆತ್ಮಾನಮಧಮಂ ಮನ್ಯಾ ಛಿದ್ಯಮಾನಾ ಸ್ಮರಾಸ್ತ್ರತಃ || ೧೦೫ ||

---

೧೦೨. ಸಾಹಸಿಕ:—ಎಲೌ ಕಮಲಲೋಚನೆಯೇ, 'ಈಗ ನನ್ನನ್ನು ಏನು ಮಾಡುತ್ತೀಯೆ' ಎಂಬುದನ್ನು ಸತ್ಯವಾಗಿ ಹೇಳು. ನಾನು ಹೆಚ್ಚುಹೊತ್ತು ನಿಲ್ಲಲು ಸಾಧ್ಯವಿಲ್ಲ. ಬೇರೆಕಾರ್ಯದಲ್ಲಾದರೂ ತೊಡಗುವೆನು.

೧೦೩ ಎಲೌ ಪ್ರಿಯೆಯೇ, ಸ್ತ್ರೀಯರನ್ನು ಬಲಾತ್ಕಾರಪಡಿಸುವುದು ಧರ್ಮಿಷ್ಠರಿಗೆ ಧರ್ಮವಲ್ಲ. ಅದರಲ್ಲೂ ನನ್ನಂಥ ಜ್ಞಾನಿಗಳ ಕುಲಕ್ಕೇ ಈ ನಡತೆಯು ಉಚಿತವಲ್ಲ.

೧೦೪ ನನಗೆ ಶೃಂಗಾರಸುಖವನ್ನು ಕೊಡು ಅಥವಾ ರತಿಸುಖಕ್ಕಾಗಿ ಚಂದ್ರನ ಸಮೀಪಕ್ಕಾದರೂ ಹೋಗು. ಅನೇಕರನ್ನು ಅನುಸರಿಸುವ ವೇಶ್ಯೆಯನ್ನು ವಶಪಡಿಸಿಕೊಳ್ಳಲು ಯಾರಿಂದ ತಾನೇ ಸಾಧ್ಯ?

೧೦೫. ಸಾಹಸಿಕನ ಈ ಮಾತುಗಳನ್ನು ಕೇಳಿ ತಿಲೋತ್ತಮೆಯ ಗಂಟಲು ಮತ್ತು ತುಟಿಗಳು ಒಣಗಿದವು. ಕಾಮಬಾಣಪೀಡಿತಳಾಗಿ ತನ್ನನ್ನು ಅಧಮಳೆಂದು ತಿಳಿದು ಇಂತೆಂದಳು.

|| ತಿಲೋತ್ತಮೋವಾಚ ||

ಕಥಮೇವಂ ಬ್ರೂಷಿ ತ್ವಂಮೇ ಕಾಂತಃ ಪ್ರಾಣಾಧಿಕಃ ಪ್ರಿಯಃ |
ಕಥಂ ವಾ ಕೋಪಯುಕ್ತೋಽಸಿ ಕುರು ಕಾರ್ಯಂ ಮನೀಷಿತಂ || ೧೦೬ ||

ತ್ವಾಮೇವಂ ವಿಮುಖಂ ಕೃತ್ವಾ ಯಾಮಿ ಚಂದ್ರಾಂತಿಕಂ ಯದಿ |
ತವಾಭಿಶಾಪಾತ್ತತ್ರೈವ ಸದ್ಯೋ ವಿಘ್ನೋ ಭವಿಷ್ಯತಿ || ೧೦೭ ||

ವಿಹಾರಂ ಕುರು ಭದ್ರಂ ತೇ ಕರಿಷ್ಯತಿ ಹರಿಃ ಸ್ವಯಂ |
ಪದೇಪದೇ ಶುಭಂ ತಸ್ಯ ಯಃ ಸ್ತ್ರೀಮಾನಂ ಚ ರಕ್ಷತಿ || ೧೦೮ ||

ಅವಮನ್ಯ ಸ್ತ್ರಿಯಂ ಮೂಢೋ ಯೋ ಯಾತಿ ಪುರುಷಾಧಮಃ |
ಪದೇ ಪದೇ ತದಶುಭಂ ಕರೋತಿ ಪಾರ್ವತೀ ಸತೀ || ೧೦೯ ||

---

೧೦೬. ತಿಲೋತ್ತಮೆ :— ಪ್ರಾಣಕ್ಕಿಂತಲೂ ಪ್ರಿಯತಮನಾದ ಎಲೈ ಕಾಂತನೇ, ಇದೇನು ಹೀಗೆ ಹೇಳುತ್ತೀಯೆ. ನೀನು ಕುಪಿತನಾಗಲು ಕಾರಣವೇನು ? ನನಗೆ ಇಚ್ಛೆಬಂದಂತೆ ಮಾಡು.

೧೦೭. ನಿನಗೆ ಆಶಾಭಂಗಗೊಳಿಸಿ ನಾನು ಚಂದ್ರನ ಸಮೀಪಕ್ಕೆ ಹೋದರೂ ನಿನ್ನ ಶಾಪದಿಂದ ನನಗೆ ಅಲ್ಲಿಯೇ ವಿಘ್ನವುಂಟಾಗುವುದು.

೧೦೮. ಆದುದರಿಂದ ನೀನು ಸ್ವೇಚ್ಛೆಯಾಗಿ ನನ್ನೊಡನೆ ವಿಹಾರಮಾಡು. ಶ್ರೀಹರಿಯು ನಿನಗೆ ಮಂಗಳವನ್ನುಂಟುಮಾಡುವನು. ಯಾರು ಹೆಂಗಸಿನ ಮಾನವನ್ನು ಕಾಪಾಡುವನೋ ಅವನಿಗೆ ಕ್ಷಣಕ್ಷಣಕ್ಕೂ ಶುಭಪರಂಪರೆಗಳುಂಟಾಗುವುವು.

೧೦೯. ಮೂಢನಾದ ಯಾವ ಪುರುಷಾಧಮನು ಹೆಂಗಸನ್ನು ಅವಮಾನಗೊಳಿಸುವನೋ ಅವನಿಗೆ ಪಾರ್ವತೀದೇವಿಯು ಕ್ಷಣಕ್ಷಣಕ್ಕೂ ಅಶುಭವನ್ನೊದಗಿಸುವಳು.

ತಿಲೋತ್ತಮಾವಚಃ ಶ್ರುತ್ವಾ ಜಹಾಸ ಬಲಿನಂದನಃ ।
ಕಾಮಶಾಸ್ತ್ರೇಷು ನಿಷ್ಣಾತಸ್ತದ್ಭಾವಂ ಬುಬುಧೇ ಸುಧೀಃ ॥ ೧೧೦ ॥

ಭಾವಂ ವಿಜ್ಞಾಯ ಭಾವಜ್ಞಃ ಕಾಮಶಾಸ್ತ್ರವಿಶಾರದಃ ।
ಕರೇ ಧೃತ್ವಾ ಸಮಾಶ್ಲಿಷ್ಯ ಚುಚುಂಬ ಮುಖಪಂಕಜಂ ॥ ೧೧೧ ॥

ಜಗಾಮ ಚ ತಯಾ ಸಾರ್ಧಂ ಗಂಧಮಾದನಗಹ್ವರಂ ।
ದದರ್ಶ ತತ್ರ ಗತ್ವಾ ಚ ಸ್ಥಾನಂ ಜಂತುವಿವರ್ಜಿತಂ ॥ ೧೧೨ ॥

ಸಂಸ್ಥಾಪ್ಯ ರತ್ನದೀಪಾಂಶ್ಚ ಧೂಪಂ ಚ ಸುಮನೋಹರಂ ।
ಶಯ್ಯಾಂ ರತಿಕರೀಂ ಕೃತ್ವಾ ಸುಷ್ವಾಪ ಚ ತಯಾ ಸಹ ॥ ೧೧೩ ॥

ನಾನಾಪ್ರಕಾರಶೃಂಗಾರಂ ಚಕಾರ ಕಾಮಮೋಹಿತಂ ।
ತಿಲೋತ್ತಮಾ ತಂ ಬುಬುಧೇ ಸುರಾದಪಿ ವಿಚಕ್ಷಣಂ ॥ ೧೧೪ ॥

---

೧೧೦. ತಿಲೋತ್ತಮೆಯ ಮಾತನ್ನು ಕೇಳಿ ಕಾಮಶಾಸ್ತ್ರದಲ್ಲಿ ನಿಪುಣನಾದ ಬಲಿಪುತ್ರನು ನಸುನಕ್ಕು ಅವಳ ಮನೋಭಾವವನ್ನು ಚೆನ್ನಾಗಿ ಅರಿತುಕೊಂಡನು.

೧೧೧. ಕಾಮಶಾಸ್ತ್ರದಲ್ಲಿ ನಿಪುಣನಾದ ಆ ಸಾಹಸಿಕನು ಅವಳ ಮನೋಭಾವವನ್ನರಿತು ಕೈಹಿಡಿದೆಳೆದು ಆಲಿಂಗಿಸಿಕೊಂಡು ಅವಳ ಮುಖಕಮಲವನ್ನು ಚುಂಬಿಸಿದನು.

೧೧೨. ಮತ್ತು ಅವಳೊಡನೆ ಗಂಧಮಾದನ ಪರ್ವತದ ಗುಹೆಯೊಳಕ್ಕೆ ಹೋದನು. ಅಲ್ಲಿ ನಿರ್ಜನವಾದ ಪ್ರದೇಶವೊಂದನ್ನು ಕಂಡನು

೧೧೩. ಆ ಪ್ರದೇಶದಲ್ಲಿ ರತ್ನದೀಪಗಳನ್ನೂ ಮನೋಹರವಾದ ಧೂಪಗಳನ್ನೂ ರತಿಸುಖಾನುಗುಣವಾದ ಶಯ್ಯೆಯನ್ನೂ ಕಲ್ಪಿಸಿಕೊಂಡು ಅವಳೊಡನೆ ಪವಡಿಸಿದನು.

೧೧೪. ಕಾಮಮೋಹಿತನಾಗಿ ವಿವಿಧ ಶೃಂಗಾರ ಸುಖಗಳನ್ನು ಅವಳೊಡನೆ ಅನುಭವಿಸಿದನು. ಆಗ ತಿಲೋತ್ತಮೆಯು ಅವನು ದೇವತೆ (ಚಂದ್ರ) ಗಿಂತಲೂ ರತಿಚತುರನೆಂಬುದನ್ನು ತಿಳಿದಳು.

ವಿಪರೀತರತೌ ತುಷ್ಟಾ ಬಭೂವ ರಸಿಕೇಶ್ವರೀ ।
ದಿವಾನಿಶಂ ನ ಬುಬುಧೇ ನವಸಂಗಮಮೂರ್ಛಿತಾ ॥ ೧೧೫ ॥

ತಿಲೋತ್ತಮಾ ಕಾಮಭಾವಾದ್ಬಲಿಪುತ್ರಮುವಾಚ ಹ ।
ಕೃತ್ವಾ ವಕ್ಷಸಿ ಪ್ರಾಣೇಶಂ ಸ್ತನಯೋರಂತರೇ ಮುದಾ ॥ ೧೧೬ ॥

॥ ತಿಲೋತ್ತಮೋವಾಚ ॥

ಕದಾ ದ್ರಕ್ಷ್ಯಾಮ್ಯಹಂ ನಾಥ ಮುಖಚಂದ್ರಂ ಮನೋಹರಂ ।
ಏವಂಭೂತಂ ಶುಭದಿನಂ ಕದಾ ಮೇ ಭವಿತಾ ಪುನಃ ॥ ೧೧೭ ॥

ಅಯಿ ಕಿಂ ರೂಪಮಾಶ್ಚರ್ಯಂ ಗುಣೋ ವಾ ತವ ದಾನವ ।
ಧ್ರುವಂ ಶೃಂಗಾರನಿಪುಣಸ್ತ್ವತ್ಪರೋ ನಾಸ್ತಿ ಕಶ್ಚನ ॥ ೧೧೮ ॥

---

೧೧೫. ರಸಿಕೇಶ್ವರಿಯಾದ ಆ ತಿಲೋತ್ತಮೆಯು ವಿಪರೀತರತದಿಂದ ಸಂತೋಷಗೊಂಡು ನವಸಂಗಮದಿಂದ ಮೂರ್ಛಿತಳಾಗಿ ಹಗಲುರಾತ್ರಿಯನ್ನೂ ಅರಿಯದಾದಳು.

೧೧೬. ಆ ತಿಲೋತ್ತಮೆಯು ಪ್ರಾಣನಾಥನನ್ನು ತನ್ನ ಸ್ತನಗಳ ಮಧ್ಯದಲ್ಲಿ ಹೃದಯದಲ್ಲಿ ಧರಿಸಿ ಕಾಮೋದ್ರೇಕದಿಂದ ಅವನನ್ನು ಕುರಿತಿಂತೆಂದಳು.

೧೧೭. ತಿಲೋತ್ತಮೆ :—ಎಲೈ ಪ್ರಿಯನೇ, ನಿನ್ನ ಮನೋಹರವಾದ ಮುಖ ಚಂದ್ರನನ್ನು ಮತ್ತೊಮ್ಮೆ ಯಾವಾಗ ನೋಡುವೆನು ? ಇಂಥಾ ಶುಭದಿನವನ್ನು ಪುನಃ ಯಾವಾಗ ನಾನು ನೋಡುವೆನು ?

೧೧೮. ಎಲೈ ರಾಕ್ಷಸೇಂದ್ರನೇ, ನಿನ್ನ ರೂಪವಾಗಲೀ, ಗುಣವಾಗಲೀ ಎಷ್ಟು ಆಶ್ಚರ್ಯಜನಕವಾಗಿದೆ. ನಿಜವಾಗಿಯೂ ನಿನಗಿಂತ ರತಿವಿಶಾರದನು ಮತ್ತಾರೂ ಇಲ್ಲ.

ಮಾಂ ವಿಸ್ಮರಸಿ ಕಾಲೇನ ಪುರುಷಃ ಷಟ್ಪದೋ ಯಥಾ ।
ಸ್ತ್ರೀಣಾಂ ಸತ್ಪುರುಷಾಶ್ಲೇಷ ಆಜೀವಂ ಮನಸಿ ಸ್ಥಿತಃ ॥ ೧೧೯ ॥

ಸತ್ಸಂಗಮಃ ಶುಭದಿನೇ ಪುಣ್ಯಾತ್ಪುಣ್ಯವತಾಂ ಭವೇತ್ ।
ಸದ್ವಿಚ್ಛೇದೋ ದುಃಖಹೇತುರ್ಮರಣಾದತಿರಿಚ್ಯತೇ ॥ ೧೨೦ ॥

ಪೀಯೂಷಭೋಜನಾತ್ಸ್ವರ್ಗವಾಸಾದಪಿ ಚ ದುರ್ಲಭಃ ।
ಸತ್ಸಂಗಮಃ ಸುಖಮಯೋಽಪ್ಯಸತ್ಸಂಗೋ ವಿಷಾಧಿಕಃ ॥ ೧೨೧ ॥

ಕ್ಷಣಂ ತಿಷ್ಠ ಮಹಾರಾಜ ಪುನರಾಲಿಂಗನಂ ಕುರು ।
ತ್ವಯಾ ಸಾರ್ಧಂ ಮಮ ಪ್ರಾಣಾ ಯಾಸ್ಯಂತಿ ಚೇತಸಾ ಸಹ ॥ ೧೨೨ ॥

ಇತ್ಯೇವಮುಕ್ತ್ವಾ ಕುಲಟಾ ಕೃತ್ವಾ ವಕ್ಷಸಿ ಸಾದರಂ ।
ಪುಮಂಗಸಂಗೋತ್ಪುಲಕಾ ಮೂರ್ಛಾಮಾಪ ಸುಖೇನ ಚ ॥ ೧೨೩ ॥

---

೧೧೯. ಪುರುಷನು ದುಂಬಿಯಂತಿರುವುದರಿಂದ ನೀನು ಪುಷ್ಪಸ್ವರೂಪಳಾದ ನನ್ನನ್ನು ಕಾಲಕ್ರಮದಲ್ಲಿ ಮರೆತುಬಿಡುವೆ ಆದರೆ ಹೆಂಗಸು ಸತ್ಪುರುಷನನ್ನು ಆಲಿಂಗಿಸಿಕೊಂಡಿದ್ದು ಜೀವಮಾನಪರ್ಯಂತ ನೆನಪಿನಲ್ಲಿರುತ್ತದೆ.

೧೨೦. ಪುಣ್ಯವಂತರಿಗೆ ತಮ್ಮ ಪೂರ್ವಪುಣ್ಯದ ಮಹಿಮೆಯಿಂದ ಶುಭದಿನದಲ್ಲಿ ಸತ್ಸಮಾಗಮವಾಗುವುದು. ದುಃಖದಾಯಕವಾದ ಸತ್ಪುರುಷರ ವಿರಹವು ಸಾವಿಗಿಂತಲೂ ಹೇಯವಾದುದು.

೧೨೧. ಸುಖಮಯವಾದ ಸತ್ಸಹವಾಸವು ಅಮೃತಪಾನಕ್ಕಿಂತಲೂ, ಸ್ವರ್ಗವಾಸಕ್ಕಿಂತಲೂ ದುರ್ಲಭವಾದುದು. ಅಸತ್ಸಹವಾಸವಾದರೋ ವಿಷಕ್ಕಿಂತ ಅಧಿಕವಾಗಿ ದುಃಖಕರವಾದುದು.

೧೨೨. ಎಲೈ ಪ್ರಾಣಪ್ರಿಯನೇ, ಕ್ಷಣಕಾಲನಿಂತು ಮತ್ತೊಮ್ಮೆ ಆಲಿಂಗಿಸಿಕೋ. ನನ್ನ ಪ್ರಾಣಗಳೂ ಮತ್ತು ಮನಸ್ಸೂ ನಿನ್ನೊಡನೆಯೇ ಹೊರಟು ಬರುತ್ತಿವೆ.

೧೨೩. ಆ ವೇಶ್ಯೆಯು ಈ ರೀತಿಯಾಗಿ ಹೇಳಿ ಅವನನ್ನು ವಕ್ಷಃಸ್ಥಲದಲ್ಲಿ ಅಪ್ಪಿಕೊಂಡು ಅವನ ಅಂಗಸಂಗದಿಂದ ರೋಮಾಂಚಿತಳಾಗಿ ಸುಖಮೂರ್ಛೆಗೊಂಡಳು.

ಕುಲಟಾಲಿಂಗನಾಲಾಪಾತ್ಸೋತಿಕಾಮೀ ಬಭೂವ ಹ ।
ಯಥಾ ದೀಪ್ತಃ ಕೃಷ್ಣವರ್ತ್ಮಾ ವರ್ಧತೇ ಹವಿಷಾಧಿಕಂ ॥ ೧೨೪ ॥

ಪುನಶ್ಚಕಾರ ಶೃಂಗಾರಮಸುರೋಽಷ್ಟವಿಧಂ ಮುನೇ ।
ಚುಂಬನಂ ಚ ನವವಿಧಂ ಯಥಾಸ್ಥಾನೇ ಯಥೋಚಿತಂ ॥ ೧೨೫ ॥

ನಖದಂತಕರೈಃ ಕ್ರೀಡಾಂ ಚಕಾರ ವಿವಿಧಾಂ ಪುನಃ ।
ಕಿಂಕಿಣೀನಾಂ ಕಂಕಣಾನಾಂ ಬಭೂವ ಶಬ್ದ ಉಲ್ಬಣಃ ॥
ಮುನೇರ್ದುರ್ವಾಸಸಸ್ತೇನ ಧ್ಯಾನಭಂಗೋ ಬಭೂವ ಹ ॥ ೧೨೬ ॥

ಅದೃಷ್ಟಸ್ಯ ತಯೋಸ್ತತ್ರ ವಲ್ಮೀಕಾಚ್ಛಾದಿತಸ್ಯ ಚ ॥
ಯೋಗಾಸನಂ ಕುರ್ವತಶ್ಚ ಗಂಧಮಾದನಗಹ್ವರೇ ॥ ೧೨೭ ॥

---

೧೨೪. ಉರಿಯುತ್ತಿರುವ ಅಗ್ನಿಯು ಹವಿಸ್ಸಿನಿಂದ ಮತ್ತೂ ಅಭಿವೃದ್ಧಿಗೊಳ್ಳುವಂತೆ ಆ ತಿಲೋತ್ತಮೆಯ ಆಲಿಂಗನ ಮತ್ತು ಮಧುರಾಲಾಪಗಳಿಂದ ಆ ಸಾಹಸಿಕನೂ ಅತ್ಯಂತ ಕಾಮಿಯಾದನು.

೧೨೫. ಎಲೈ ನಾರದಮುನಿಯೇ, ಈ ರೀತಿ ಕಾಮೋದ್ದಿ ಪಿತನಾದ ಆ ಅಸುರನು ಮತ್ತೆ ತಿಲೋತ್ತಮೆಯೊಡನೆ ಎಂಟು ವಿಧ ಶೃಂಗಾರಸುಖವನ್ನೂ ನವವಿಧ ಚುಂಬನ ಸುಖವನ್ನೂ ಆಯಾಯಸ್ಥಾನಕ್ಕೆ ಅನುಗುಣವಾಗಿ ಅನುಭವಿಸಿದನು.

೧೨೬. ಉಗುರು, ಹಲ್ಲು, ಮತ್ತು ಕೈಗಳಿಂದ ವಿಧವಿಧ ಕ್ರೀಡೆಗಳನ್ನಾಡಿದನು ಕೈಬಳೆ ಮತ್ತು ಕಾಲುಬಳೆಗಳ ಧ್ವನಿಯು ಅತ್ಯುಲ್ಬಣವಾಯಿತು. ಆ ಧ್ವನಿಯಿಂದ ಅಲ್ಲೇ ಧ್ಯಾನಸಕ್ತನಾಗಿ ಕುಳಿತಿದ್ದ ದೂರ್ವಾಸಮುನಿಯ ಧ್ಯಾನಕ್ಕೆ ಭಂಗ ವುಂಟಾಯಿತು.

೧೨೭. ಆ ಗಂಧಮಾದನ ಪರ್ವತದ ಗುಹೆಯಲ್ಲಿ ಯೋಗಾಸನವನ್ನು ಹಾಕಿಕೊಂಡು ಕುಳಿತಿದ್ದ ಆ ಮುನಿಯ ಮೈ ಮೇಲೆ ಹುತ್ತವು ಬೆಳೆದಿದ್ದರಿಂದ ಅವರ ಕಣ್ಣಿಗೆ ಕಾಣಲಿಲ್ಲ.

ಧ್ಯಾಯತಶ್ಚರಣಾಂಭೋಜಂ ಕೃಷ್ಣಸ್ಯ ಪರಮಾತ್ಮನಃ ।
ನ ಪಪಾತ ತಯೋರ್ದೃಷ್ಟಿಃ ಸಮೀಪಸ್ಥೇ ಮಹಾಮುನೌ ॥
ಕಾಮಾತ್ಮನೋರ್ನ ಹಿ ಜ್ಞಾನಂ ಕಾಮೇನ ಹತಚೇತಸೋಃ ॥ ೧೨೮ ॥

ಸಹಸಾ ಚೇತನಾಂ ಪ್ರಾಪ್ಯ ಪ್ರಜ್ವಲನ್ಬ್ರಹ್ಮತೇಜಸಾ ।
ದದರ್ಶ ಪುರತಸ್ತೌ ತು ಮುನಿರುನ್ಮೀಲ್ಯ ಲೋಚನೇ ॥ ೧೨೯ ॥

ದಿವಾನಿಶಂ ನ ಜಾನಂತೌ ಸಂಯುತೌ ಕಾಮಮೋಹಿತೌ ।
ದೃಷ್ಟ್ವಾ ಚುಕೋಪ ತೇಜಸ್ವೀ ರುದ್ರಾಂಶೋ ಭಗವಾನ್ವಿಭುಃ ॥ ೧೩೦ ॥

ಉವಾಚ ತೌ ವಿಹಾರಾಂತೇ ರಕ್ತಪಂಕಜಲೋಚನಃ ।
ಧ್ಯಾನಪ್ರಾಪ್ತಪದಾಂಭೋಜವಿಚ್ಛೇದೋದ್ವಿಗ್ನಮಾನಸಃ ॥ ೧೩೧ ॥

---

೧೨೮. ಶ್ರೀಕೃಷ್ಣಪರಮಾತ್ಮನ ಚರಣಕಮಲಗಳನ್ನು ಧ್ಯಾನಮಾಡುತ್ತ ಸಮೀಪದಲ್ಲಿ ಕುಳಿತಿದ್ದ ಆ ಮಹಾಮುನಿಯ ಮೇಲೆ ಅವರ ದೃಷ್ಟಿಯು ಬೀಳಲಿಲ್ಲ. ಕಾಮಾತ್ಮರಾಗಿ ಪರವಶರಾದವರಿಗೆ ಸ್ಥಿರವಾದ ಜ್ಞಾನವೇ ಇರುವುದಿಲ್ಲ.

೧೨೯. ಆ ಮಹಾಮುನಿಯಾದರೋ ಕೂಡಲೇ ಬಹಿರ್ಮುಖನಾಗಿ ಬ್ರಹ್ಮತೇಜಸ್ಸಿನಿಂದ ಪ್ರಜ್ವಲಿಸುತ್ತ ಕಣ್ಣುಗಳನ್ನು ತೆರೆದು ಮುಂದಿರುವ ಅವರಿಬ್ಬರನ್ನೂ ನೋಡಿದನು.

೧೩೦. ಕಾಮಾಸಕ್ತತೆಯಿಂದ ಸಂಯುಕ್ತರಾಗಿ ಹಗಲೂ ರಾತ್ರಿಗಳನ್ನೂ ಅರಿಯದಿರುವ ಅವರನ್ನು ನೋಡಿ ರುದ್ರಾಂಶಸಂಭೂತನೂ, ತೇಜಸ್ವಿಯೂ ಆದ ಆ ದೂರ್ವಾಸನು ಕುಪಿತನಾದನು.

೧೩೧. ತದೇಕಧ್ಯಾನದಿಂದ ಪ್ರಾಪ್ತವಾದ ಶ್ರೀಕೃಷ್ಣನ ಪಾದಕಮಲಗಳ ವಿರಹದಿಂದ ಚಿಂತಾಕ್ರಾಂತವಾದ ಮನಸುಳ್ಳವನಾಗಿ ಕಣ್ಣುಗಳನ್ನು ಕೆಂಪಗೆ ಮಾಡಿಕೊಂಡು ರತಿಕ್ರೀಡೆಯಾಡುತ್ತಿದ್ದ ಆ ದಾನವಾಪ್ಸರೆಯರನ್ನು ಕುರಿತು ಇಂತೆಂದನು.

|| ದುರ್ವಾಸಾ ಉವಾಚಾ ||

ಉತ್ತಿಷ್ಠ ಗರ್ಧಭಾಕಾರ ನಿರ್ಲಜ್ಜ ಪುರುಷಾಧಮ |
ಭಕ್ತಪ್ರಧಾನಸ್ಯ ಬಲೇಃ ಪುತ್ರಃ ಪಶುಸಮಪ್ರಭಃ || ೧೩೨ ||

ದೇವೋ ವಾ ಮಾನವೋ ವಾಪಿ ದೈತ್ಯಗಂಧರ್ವರಾಕ್ಷಸಾಃ |
ಲಜ್ಜಾಂ ಕುರ್ವಂತಿ ಸತತಂ ಸ್ವಜಾತೌ ಚ ಪಶೂನ್ವಿನಾ || ೧೩೩ ||

ಜ್ಞಾನಲಜ್ಜಾವಿಹೀನಾ ಚ ಖರಜಾತಿರ್ವಿಶೇಷತಃ |
ತಸ್ಮಾತ್ತ್ವಂ ದಾನವಶ್ರೇಷ್ಠ ಖರಯೋನಿಂ ವ್ರಜಾಧುನಾ || ೧೩೪ ||

ತಿಲೋತ್ತಮೇ ತ್ವಮುತ್ತಿಷ್ಠ ಲಜ್ಜಾಹೀನಾ ಚ ಪುಂಶ್ಚಲೀ |
ಏತಾದೃಶೀ ಸ್ಪೃಹಾ ದೈತ್ಯೇ ವ್ರಜಯೋನಿಂ ಚ ದಾನವೀಂ || ೧೩೫ ||

---

೧೩೧. ದೂರ್ವಾಸಮಹರ್ಷಿ :—ಎಲೈ ಕತ್ತೆಯಂತಿರುವ ನೀಚ ಮನುಜನೇ, ನಾಚಿಕೆಕೇಡಾಗಿ ಏಕೆ ಮಲಗಿರುವೆ? ಏಳು ಭಕ್ತಾಗ್ರೇಸರನಾದ ಬಲಿಯ ಮಗನಾಗಿ ನೀನು ಪಶುಸಮಾನನಾದೆಯಲ್ಲ ?

೧೩೩. ದೇವನಾಗಲೀ, ಮನುಜನಾಗಲೀ, ದೈತ್ಯಗಂಧರ್ವರಾಕ್ಷಸರಾಗಲೀ, ಪಶುಗಳಂತಿರದೆ ತಮ್ಮತಮ್ಮ ವ್ಯವಹಾರಕ್ಕೆ ಅನುಚಿತವಾದ ಕಡೆ ಲಜ್ಜೆಯನ್ನು ತೋರ್ಪಡಿಸುವರು

೧೩೪. ಕತ್ತೆಯ ಜಾತಿಯಾದರೋ ಜ್ಞಾನ ಲಜ್ಜಾರಹಿತವಾಗಿರುವುದು. ಎಲೈ ದಾನವಶ್ರೇಷ್ಠನೇ, ಆದುದರಿಂದ ನೀನು ಈಗ ಕತ್ತೆಯ ಜನ್ಮವನ್ನು ಹೊಂದು.

೧೩೫ ಎಲೌ ವೇಶ್ಯೆಯಾದ ತಿಲೋತ್ತಮೆಯೇ, ಲಜ್ಜಾರಹಿತಳಾದ ನೀನು ಮೇಲಕ್ಕೇಳು. ರಾಕ್ಷಸನಲ್ಲಿ ನಿನಗೆ ಈರೀತಿ ಪ್ರೇಮವುಂಟಾದುದರಿಂದ ನೀನೂ ದಾನವಯೋನಿಯಲ್ಲಿ ಜನ್ಮವೆತ್ತು.

ಇತ್ಯೇವಮುಕ್ತ್ವಾ ಸ ಮುನಿಸ್ತಸ್ಥೌ ತತ್ರ ರುಷಾ ಜ್ವಲನ್ ।
ತೌ ಚ ತುಷ್ಟುವತುರ್ಭೀತಾವುತ್ಥಾಯ ವ್ರೀಡಿತೌ ಮುನಿಂ ॥ ೧೩೬ ॥

॥ ಸಾಹಸಿಕ ಉವಾಚ ॥

ತ್ವಂ ಬ್ರಹ್ಮಾ ತ್ವಂ ಚ ವಿಷ್ಣುಶ್ಚ ತ್ವಂ ಚ ಸಾಕ್ಷಾನ್ಮಹೇಶ್ವರಃ ।
ಹುತಾಶನಸ್ತ್ವಂ ಸೂರ್ಯಶ್ಚ ಸೃಷ್ಟಿಸ್ಥಿತ್ಯಂತಕಾರಕಃ ॥ ೧೩೭ ॥

ಕ್ಷಮಾಪರಾಧಂ ಭಗವನ್ಕೃಪಾಂ ಕುರು ದಯಾನಿಧೇ ।
ಮೂಢಾಪರಾಧಂ ಸತತಂ ಯಃ ಕ್ಷಮೇತ್ಸ ಸದೀಶ್ವರಃ ॥ ೧೩೮ ॥

ಇತ್ಯೇವಮುಕ್ತ್ವಾ ದೈತ್ಯೇಂದ್ರೋ ರುರೋದೋಚ್ಚೈಃ ಪುರೋ ಮುನೇಃ ।
ಕೃತ್ವಾ ತೃಣಾನಿ ದಶನೇ ಪಪಾತ ಚರಣಾಂಬುಜೇ ॥ ೧೩೯ ॥

---

೧೩೬. ಈ ರೀತಿ ದುರ್ವಾಸಮುನಿಯು ಶಪಿಸಿ ಕೋಪದಿಂದ ಕೆರಳಿ ನಿಂತು ಕೊಂಡನು. ಆಗ ಅವರಿಬ್ಬರೂ ಲಜ್ಜಿತರಾಗಿ ಭಯದಿಂದ ಆ ಮುನಿಯನ್ನು ಸ್ತುತಿಸ ಲಾರಂಭಿಸಿದರು.

೧೩೭. ಸಾಹಸಿಕ :—ಎಲೈ ಮುನಿಯೇ, ನೀನು ಸಾಕ್ಷಾತ್ ಬ್ರಹ್ಮ, ವಿಷ್ಣು ಮತ್ತು ಮಹೇಶ್ವರನಾಗಿದ್ದೀಯೆ. ಅಗ್ನಿದೇವನೂ, ಸೃಷ್ಟಿಸ್ಥಿತಿಲಯಗಳಿಗೆ ಕಾರಣನೂ, ತ್ರಿಮೂರ್ತ್ಯಾತ್ಮಕನೂ ಆದ ಸೂರ್ಯನೂ ನೀನೇ ಆಗಿರುವೆ.

೧೩೮. ಎಲೈ ದಯಾಮಯನಾದ ಭಗವಂತನೇ, ನಮ್ಮ ಅಪರಾಧವನ್ನು ಕ್ಷಮಿಸಿ ದಯೆತೋರು. ಮೂರ್ಖರ ಅಪರಾಧವನ್ನು ಕ್ಷಮಿಸುವವನೆ, ಒಳ್ಳೆಯ ಪ್ರಭುವೆನಿಸುವನು.

೧೩೯. ಈ ರೀತಿಯಾಗಿ ಆ ರಾಕ್ಷಸೇಂದ್ರನು ಹೇಳಿ ಆ ಮುನಿಯ ಮುಂದೆ ಗಟ್ಟಿಯಾಗಿ ಅಳುತ್ತ ನಿಂತನು ಅನಂತರ ಅವನ ಪಾದಗಳಮೇಲೆ ಬಿದ್ದು ಹಲ್ಲು ಗಳಿಂದ ಹುಲ್ಲನ್ನು ಕಚ್ಚಿದನು.

॥ ತಿಲೋತ್ತಮೋವಾಚ ॥

ಹೇ ನಾಥ ಕರುಣಾಸಿಂಧೋ ದೀನಬಂಧೋ ದಯಾಂ ಕುರು ।
ವಿಧಿಸೃಷ್ಟೌ ಚ ಸರ್ವೇಷಾಂ ಮೂಢಾ ಸ್ತ್ರೀಜಾತಿರೇವ ಚ ॥ ೧೪೦ ॥

ತತೋತಿಮತ್ತಾ ಕುಲಟಾ ಸದಾ ಕಾಮಾತುರಾ ಪರಾ ।
ಲಜ್ಜಾ ಭೀತಿಶ್ಚೇತನಾ ಚ ನ ಸಂತಿ ಕಾಮುಕೇ ವಿಭೋ ॥ ೧೪೧ ॥

ಇತ್ಯುಕ್ತ್ವಾ ರೋದನಂ ಕೃತ್ವಾ ಜಗಾಮ ಶರಣಂ ಮುನೇಃ ।
ವಿನಾ ವಿಪತ್ತೌ ಕೇಷಾಂಚಿಜ್ಜ್ಞಾನಂ ಭವತಿ ಭೂತಲೇ ॥
ತಯೋರ್ದೃಷ್ಟ್ವಾ ಚ ವೈಕಲ್ಯಂ ಬಭೂವ ಕರುಣಾ ಮುನೇಃ ॥ ೧೪೨ ॥

॥ ದುರ್ವಾಸಾ ಉವಾಚ ॥

ಅತಿಶಾಪಃ ಪ್ರಸಾದೋ ವಾ ಭವೇದ್ದೈವೇನ ದಾನವ ।
ಸತ್ಕೀರ್ತಿರಪಕೀರ್ತಿರ್ವಾ ಪ್ರಾಕ್ತನಪ್ರಭವಾ ಧ್ರುವಂ ॥ ೧೪೩ ॥

---

೧೪೦. ತಿಲೋತ್ತಮೆ :—ಎಲೈ ಕರುಣಾಸಿಂಧುವೇ, ದೀನಬಂಧುವೇ, ದಯೆ ತೋರು. ವಿಧಿಯ ಸಕಲ ಸೃಷ್ಟಿಯಲ್ಲಿಯೂ ಸ್ತ್ರೀಜಾತಿಯೇ ಮೂಢವಾದುದು.

೧೪೧. ಅದರಲ್ಲಿಯೂ ಸರ್ವದಾ ಕಾಮಾಸಕ್ತಳಾದ ಕುಲಟೆಯು ಅತ್ಯಂತ ಮತ್ತಳಾಗಿರುವಳು. ಎಲೈ ಪ್ರಭುವೇ, ಕಾಮುಕರಲ್ಲಿ ಲಜ್ಜೆಯಾಗಲೀ, ಭೀತಿಯಾಗಲೀ, ಚೇತನವಾಗಲೀ ಇರುವುದಿಲ್ಲ.

೧೪೨. ಹೀಗೆ ಹೇಳಿ ಅಳುತ್ತ ಆ ಮುನಿಯನ್ನು ಶರಣುಹೊಕ್ಕಳು ಪ್ರಪಂಚದಲ್ಲಿ ದುಃಖಾನುಭವವಿಲ್ಲದೆ ಜ್ಞಾನೋದಯವಾಗುವುದು ಕೆಲವರಿಗೆ ಮಾತ್ರ. ಅವರ ದೀನತೆಯನ್ನು ನೋಡಿ ಆ ಮುನಿಗೆ ಅತ್ಯಂತ ದಯೆಯುಂಟಾಯಿತು.

೧೪೩. ದೂರ್ವಾಸ:—ಎಲೈ ದಾನವನೇ, ಶಾಪವಾಗಲೀ, ಅನುಗ್ರಹವಾಗಲೀ ದೊರೆಯುವುದು ದೈವಾಧೀನವಾದುದು. ಸತ್ಕೀರ್ತಿಯಾಗಲೀ, ಅಪಕೀರ್ತಿಯಾಗಲೀ ಜನ್ಮಾಂತರದ ಕರ್ಮಾನುಗುಣವಾಗಿರುವುದು.

ವಿಷ್ಣುಭಕ್ತಬಲೇಃ ಪುತ್ರಃ ಸದ್ವಂಶಪ್ರಭವೋ ಜನಃ ।
ಜನಕಾದ್ವಿಷ್ಣುಭಕ್ತೋಽಸಿ ಜಾನಾಮಿ ತ್ವಾಂ ಸುನಿಶ್ಚಿತಂ ॥ ೧೪೪ ॥

ಜನಕಸ್ಯ ಸ್ವಭಾವೋ ಹಿ ಜನ್ಯೇ ತಿಷ್ಠತಿ ನಿಶ್ಚಿತಂ ।
ಯಥಾ ಶ್ರೀಕೃಷ್ಣಪಾದಾಂಕಃ ಕಾಲೀಯವಂಶಮಸ್ತಕೇ ॥ ೧೪೫ ॥

ಸಂಪ್ರಾಪ್ಯ ಗಾರ್ಧಭೀಂ ಯೋನಿಂ ವತ್ಸ ನಿರ್ವಾಣತಾಂ ವ್ರಜ ।
ಪೂರ್ವಂ ಕೃಷ್ಣಾರ್ಚನಫಲಂ ನ ಹಿ ಲುಪ್ತಂ ಸತಾಂ ಚಿರಾತ್ ॥ ೧೪೬ ॥

ವೃಂದಾರಣ್ಯಂ ತಾಲವನಂ ವ್ರಜ ಶೀಘ್ರಂ ವ್ರಜಾಂತಿಕಂ ।
ಪ್ರಾಣಾಂಸ್ತ್ಯಕ್ತ್ವಾ ಹರೇಶ್ಚಕ್ರಾನ್ಮುಕ್ತಿಂ ಪ್ರಾಪ್ಸ್ಯಸಿ ನಿಶ್ಚಿತಂ ॥ ೧೪೭ ॥

ತಿಲೋತ್ತಮೇ ಭಾರತೇ ತ್ವಂ ಬಾಣಪುತ್ರೀ ಭವಿಷ್ಯಸಿ ।
ಶ್ರೀಕೃಷ್ಣಪೌತ್ರಶ್ಲೇಷೇಣ ಪುನಃ ಪೂತಾ ಭವಿಷ್ಯಸಿ ॥ ೧೪೮ ॥

---

೧೪೪. ವಿಷ್ಣುಭಕ್ತನಾದ ಬಲಿಯ ಪುತ್ರನಾಗಿ ಸದ್ವಂಶೋತ್ಪನ್ನನೆನಿಸಿರುವೆ. ತಂದೆಯ ಅನುಗ್ರಹದಿಂದ ನೀನೂ ವಿಷ್ಣುಭಕ್ತನಾಗಿರುವೆಯೆಂದು ನಿಶ್ಚಯವಾಗಿಯೂ ತಿಳಿದಿದ್ದೇನೆ.

೧೪೫. ತಂದೆಯ ಸ್ವಭಾವವು ಮಗನಲ್ಲಿ ನಿಶ್ಚಯವಾಗಿಯೂ ಬಂದೇ ತೀರುವುದು. ಶ್ರೀಕೃಷ್ಣನ ಪಾದದ ಚಿಹ್ನೆಯು ಕಾಲೀಯಸರ್ಪದ ವಂಶದ ಎಲ್ಲಾ ಸರ್ಪಗಳ ಮಸ್ತಕದಲ್ಲಿಯೂ ಇದೆ.

೧೪೬. ಆದುದರಿಂದ ಎಲೈ ವತ್ಸನೇ, ನೀನು ಈಗ ಗರ್ದಭಯೋನಿಯಲ್ಲಿ ಹುಟ್ಟಿ ಅನಂತರ ಮುಕ್ತಿಯನ್ನು ಹೊಂದು ಸತ್ಪುರುಷರು ಜನ್ಮಾಂತರದಲ್ಲಿ ಮಾಡಿದ ಶ್ರೀಕೃಷ್ಣಾರ್ಚನೆಯ ಫಲವು ಎಂದಿಗೂ ಲೋಪವಾಗುವುದಿಲ್ಲ.

೧೪೭. ವೃಂದಾವನಲ್ಲಿ ತಾಳವೃಕ್ಷಗಳಿರುವ ಸ್ಥಳಕ್ಕೆ ಹೋಗಿ ಅಲ್ಲಿ ನಂದ ಗೋಕುಲದಲ್ಲಿರುವ ಶ್ರೀಕೃಷ್ಣನನ್ನು ಎದುರಿಸು. ಆಗ ಶ್ರೀಹರಿಯ ಚಕ್ರಘಾತದಿಂದ ಪ್ರಾಣತ್ಯಾಗಮಾಡಿ ನಿಶ್ಚಿತವಾಗಿಯೂ ಮುಕ್ತಿಯನ್ನು ಪಡೆಯುವೆ.

೧೪೮. ಎಲೌ ತಿಲೋತ್ತಮೆಯೇ, ನೀನೂ ಕೂಡ ಭರತಖಂಡದಲ್ಲಿ ಬಾಣಾಸುರನ ಪುತ್ರಿಯಾಗಿ ಜನಿಸುವೆ. ಶ್ರೀಕೃಷ್ಣನ ಮುಮ್ಮಗನಾದ ಅನಿರುದ್ಧನ ಆಲಿಂಗನೆಯಿಂದ ಪುನಃ ಪುನೀತಳಾಗುವೆ.

ಇತ್యేవముక్త్వా స మునిర్విరరామ మహామునే ।
తౌ జగ్మతుర్యథాస్థానం ప్రణమ్య మునిపుంగవం ॥ ౧౪౯ ॥

ఇత్యుక్తం సర్వవృత్తాంతం దైత్యస్య ఖరజన్మనః ।
తిలోత్తమా బాణపుత్రీ హ్యుషాఽనిరుద్ధకామినీ ॥ ౧౫౦ ॥

ఇతి శ్రీ బ్రహ్మవైవర్తే మహాపురాణే శ్రీకృష్ణజన్మఖండే
నారాయణనారదసంవాదే తిలోత్తమా బలిపుత్రయోః
బ్రహ్మశాపప్రస్తావో నామ త్రయోవింశోఽధ్యాయః

---

೧೪೯. ದೂರ್ವಾಸಮಹರ್ಷಿಯು ಹೀಗೆ ಹೇಳಿ ಸುಮ್ಮನಾದನು. ಆಗ ಅವರಿಬ್ಬರೂ ಆ ಮುನಿವರ್ಯನಿಗೆ ವಂದಿಸಿ ತಮ್ಮ ಸ್ಥಳಕ್ಕೆ ಹಿಂತಿರುಗಿದರು.

೧೫೦. ಈ ರೀತಿ ಬಲಿಯ ಪುತ್ರನು ಕತ್ತೆಯಾಗಿ ಹುಟ್ಟಲು ಕಾರಣವನ್ನೂ ತಿಲೋತ್ತಮೆಯು ಬಾಣಾಸುರನ ಪುತ್ರಿಯಾಗಿ ಉಷಾ ಎಂಬ ಹೆಸರಿನಿಂದ ಅನಿರುದ್ಧನ ಪತ್ನಿಯಾದುದನ್ನೂ ತಿಳಿಸಿದೆನು.

ಇಲ್ಲಿಗೆ ಬ್ರಹ್ಮವೈವರ್ತಮಹಾಪುರಾಣದ ಶ್ರೀಕೃಷ್ಣಜನ್ಮಖಂಡವಲ್ಲಿ
ತಿಲೋತ್ತಮೆ ಮತ್ತು ಬಲಿಪುತ್ರನಿಗೆ ಬ್ರಹ್ಮಶಾಪ ವೊದಗಿ
ದುದನ್ನು ತಿಳಿಸುವ ಇಪ್ಪತ್ತಮೂರನೆಯ
ಅಧ್ಯಾಯವು ಮುಗಿದುದು.

ಇಪ್ಪತ್ತಮೂರನೆಯ ಅಧ್ಯಾಯದ ಸಾರಾಂಶ

ಬಲಿಚಕ್ರವರ್ತಿಯ ಮಗನಾದ ಸಾಹಸಿಕನೆಂಬುವನು ಒಮ್ಮೆ ಗಂಧಮಾದನ ಪರ್ವತದಲ್ಲಿದ್ದಾಗ ಅಪ್ಸರಸ್ತ್ರೀಯಾದ ತಿಲೋತ್ತಮೆಯು ಚಂದ್ರಲೋಕಕ್ಕೆ ಹೋಗಲು ಆ ಮಾರ್ಗವಾಗಿ ಬಂದಳು. ಸಾಹಸಿಕನು ಅವಳನ್ನು ನೋಡಿ ಆಕೆಯ ಸೌಂದರ್ಯಕ್ಕೆ ಮನಸೋತು ಆಕೆಯೊಡನೆ ರತಿಕ್ರೀಡೆಯಾಡಲು ಬಯಸಿದನು. ಆದರೆ ತಿಲೋತ್ತಮೆಯು ಅಂದು ಚಂದ್ರನನ್ನು ಬಯಸಿ ಅವನ ಸಮೀಪಕ್ಕೆ ಹೋಗುತ್ತಿದ್ದುದರಿಂದ ಮರುದಿವಸ ಸಾಹಸಿಕನೊಡನೆ ಕ್ರೀಡಿಸಲು ಬರುವುದಾಗಿ ಹೇಳಿದಳು. ಕಾಮಪೀಡಿತನಾದ ಸಾಹಸಿಕನು ಅದಕ್ಕೆ ಒಪ್ಪದಿರಲು ತಿಲೋತ್ತಮೆಯು ಆ ದಿನವೇ ಸಾಹಸಿಕನೊಡನೆ ಇರಲು ಒಪ್ಪಿದಳು. ಇಬ್ಬರೂ ಏಕಾಂತಪ್ರದೇಶದಲ್ಲಿ ರತ್ಯಾಸಕ್ತರಾಗಿದ್ದರು. ಕಾಮಾಂಧರಾದ ಆ ಪ್ರೇಮಿಗಳಿಬ್ಬರೂ ತಮ್ಮ ಸಮೀಪದಲ್ಲೇ ಧ್ಯಾನಪರವಶನಾಗಿ ಕುಳಿತಿದ್ದ ದೂರ್ವಾಸಮಹರ್ಷಿಯನ್ನು ಗಮನಿಸದೆ ಸ್ವೇಚ್ಛೆಯಾಗಿ ವಿಹರಿಸುತ್ತಿದ್ದರು. ಅವರ ಸರಸಸಲ್ಲಾಪಗಳಿಂದ ಆ ಮುನಿಯ ಸಮಾಧಿಗೆ ಭಂಗವುಂಟಾಗಲು, ಕೂಡಲೇ ಕುಪಿತನಾದ ಆ ಮುನಿಯು ಸಾಹಸಿಕನನ್ನು ಕತ್ತೆಯಾಗಿ ಹುಟ್ಟುವಂತೆಯೂ, ತಿಲೋತ್ತಮೆಯನ್ನು ಅಸುರಕನ್ಯೆಯಾಗಿ ಹುಟ್ಟುವಂತೆಯೂ ಶಪಿಸಿದನು. ಅದರಂತೆ ಧೇನುಕಾಸುರನಾಗಿ ಹುಟ್ಟಿದ್ದ ಸಾಹಸಿಕನು ಶ್ರೀಕೃಷ್ಣನ ಸ್ಪರ್ಶದಿಂದಲೂ, ಬಾಣಪುತ್ರಿಯಾಗಿ ಉಷೆ ಎನಿಸಿಕೊಂಡಿದ್ದ ತಿಲೋತ್ತಮೆಯು ಅನಿರುದ್ಧನ ಸಂಪರ್ಕದಿಂದಲೂ ಶಾಪವಿಮುಕ್ತರಾದರು

— ॥ ಓಂ ॥—

—॥ ಶ್ರೀ ಗಣೇಶಾಯ ನಮಃ ॥—

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಶ್ರೀಕೃಷ್ಣಜನ್ಮಖಂಡೇ

॥ ಚತುರ್ವಿಂಶತಿತಮೋಽಧ್ಯಾಯಃ ॥

॥ ಶ್ರೀ ನಾರಾಯಣ ಉವಾಚ ॥

ನಿಗೂಢಂ ಶೃಣು ವೃತ್ತಾಂತಂ ಮುನೇರ್ದುರ್ವಾಸಸೋ ಮುನೇ ।
ಅಹೋಽಸ್ಯ ದಾರಸಂಯೋಗಃ ಕಥಂ ತದೂರ್ಧ್ವರೇತಸಃ ॥ ೧ ॥

ದೃಷ್ಟ್ವಾ ತಯೋಶ್ಚ ಶೃಂಗಾರಂ ಮುನಿಃ ಕಾಮೀ ಬಭೂವ ಹ ।
ಜಿತೇಂದ್ರಿಯೋಽಸತ್ಸಂಸರ್ಗಾದ್ದೋಷಃ ಸಾಂಸರ್ಗಿಕೋ ಭವೇತ್ ॥ ೨ ॥

ಸಹಸಾ ತಸ್ಯ ಹೃದಯೇ ಬಭೂವ ಸುರತೇ ಸ್ಪೃಹಾ ।
ತಪಸ್ತಪ್ತ್ವಾ ತತ್ರ ದಧ್ಯೌ ಕಾಮಿನೀಂ ಮದನಾತುರಃ ॥ ೩ ॥

ಇಪ್ಪತ್ತನಾಲ್ಕನೆಯ ಅಧ್ಯಾಯವು

೧. ಶ್ರೀನಾರಾಯಣಮಹರ್ಷಿ: —ಎಲೈ ನಾರದಮುನಿಯೇ, ದೂರ್ವಾಸಮುನಿಯ ನಿಗೂಢವಾದ ವೃತ್ತಾಂತವನ್ನು ಹೇಳುವೆನು ಕೇಳು. ಊರ್ಧ್ವರೇತಸ್ಕನಾದ ಆ ಮುನಿಗೆ ಸ್ತ್ರೀ ಸಂಯೋಗವು ಹೇಗಾಯಿತೆಂಬುದನ್ನು ವಿವರಿಸುವೆನು.

೨. ಆ ಸಾಹಸಿಕ ಮತ್ತು ತಿಲೋತ್ತಮೆಯರ ಶೃಂಗಾರಸುಖವನ್ನು ನೋಡಿ ಆ ದೂರ್ವಾಸಮುನಿಯೂ ಅತ್ಯಂತ ಕಾಮಿಯಾದನು. ಜಿತೇಂದ್ರಿಯನಿಗೂ ಕೂಡ ಅಸತ್ಪುರುಷರ ಸಂಸರ್ಗದೋಷದಿಂದ ದುಷ್ಟ ಬುದ್ಧಿಯುಂಟಾಗುವುದಲ್ಲವೇ ?

೩. ಕೂಡಲೇ ಆ ದೂರ್ವಾಸನ ಮನಸ್ಸಿನಲ್ಲಿ ಸುರತಸುಖಾನುಭವ ಮಾಡಬೇಕೆಂಬ ಇಚ್ಛೆಯುಂಟಾಯಿತು. ಆಗ ಮದನಾತುರತೆಯಿಂದ ತಪಸ್ಸುಮಾಡುತ್ತ ಮನಸ್ಸಿನಲ್ಲಿಯೇ ಸುಂದರ ಸ್ತ್ರೀಯನ್ನು ಧ್ಯಾನಮಾಡಿದನು.

ಏತಸ್ಮಿನ್ನಂತರೇ ತೇನ ಪಥಾ ಯಾತಿ ಮುನೀಶ್ವರಃ ।
ಪ್ರಾರ್ಥಯಂತ್ಯಾ ಪತಿಂ ಸಂತಮೌರ್ವಶ್ಚ ಸುತಯಾ ಸಹ ॥ ೪ ॥

ಊರೂದ್ಭವೋ ಬ್ರಹ್ಮಣಶ್ಚ ಪುರಾ ಕಲ್ಪೇ ತಪಸ್ಯತಃ ।
ಊರ್ಧ್ವರೇತಾಶ್ಚ ಯೋಗೀಂದ್ರ ಔರ್ವಸ್ತೇನ ಇತಿ ಸ್ಮೃತಃ ॥ ೫ ॥

ತಸ್ಯ ಜಾನೂದ್ಭವಾ ಕನ್ಯಾ ಕಂದಲೀ ನಾಮ ವಿಶ್ರುತಾ ।
ದೂರ್ವಾಸಸಂ ಪ್ರಾರ್ಥಯಂತೀ ನಾನ್ಯಂ ಮನಸಿ ರೋಚತೇ ॥ ೬ ॥

ಸಸುತೋ ಹಿ ಮುನಿಶ್ರೇಷ್ಠೋ ಮುನೇರ್ದುರ್ವಾಸಸಃ ಪುರಃ ।
ತಸ್ಥೌ ಮಹಾಪ್ರಸನ್ನಶ್ಚ ಜ್ವಲದಗ್ನಿಶಿಖೋಪಮಃ ॥ ೭ ॥

ಮುನೀಂದ್ರೋಽಪಿ ಮುನೀಂದ್ರಂ ತಂ ಪುರೋ ದೃಷ್ಟ್ವಾ ಸಸಂಭ್ರಮಃ ।
ಪ್ರಜವೇನ ಸಮುತ್ತಸ್ಥೌ ನನಾಮ ಚ ಮುದಾನ್ವಿತಃ ॥ ೮ ॥

---

೪. ಈ ಸಮಯಕ್ಕೆ ಸರಿಯಾಗಿ ಔರ್ವನೆಂಬ ಮುನಿಯು ಯೋಗ್ಯನಾದ ಪತಿಯನ್ನು ಬಯಸುತ್ತಿರುವ ತನ್ನ ಪುತ್ರಿಯೊಡನೆ ಆ ಮಾರ್ಗವಾಗಿಯೇ ಬಂದನು.

೫. ಹಿಂದಿನ ಕಲ್ಪದಲ್ಲಿ ತಪಸ್ಸುಮಾಡುತ್ತಿದ್ದ ಬ್ರಹ್ಮನ ಊರು (ತೊಡೆ)ಗಳಿಂದ ಹುಟ್ಟಿದುದರಿಂದ ಊರ್ಧ್ವರೇತಸ್ಕನಾದ ಆ ಮುನಿವರ್ಯನು ಔರ್ವನೆನಿಸಿಕೊಂಡನು.

೬. ಅವನ ಜಾನುಪ್ರದೇಶದಿಂದ ಉದ್ಭವಿಸಿದ ಈ ಕನ್ಯೆಯು ಕಂದಲೀ ಎಂಬ ಹೆಸರಿನಿಂದ ವಿಖ್ಯಾತಳಾಗಿದ್ದಳು. ದೂರ್ವಾಸಮಹರ್ಷಿಯನ್ನೇ ಪ್ರಾರ್ಥಿಸುತ್ತಿದ್ದ ಅವಳಿಗೆ ಬೇರೊಬ್ಬನೂ ರುಚಿಸುತ್ತಿರಲಿಲ್ಲ.

೭. ಅಗ್ನಿಶಿಖೆಯಂತೆ ತೇಜಸ್ವಿಯಾದ ಆ ಮುನಿಯು ಪ್ರಸನ್ನನಾಗಿ ತನ್ನ ಮಗಳೊಡನೆ ಆ ದೂರ್ವಾಸ ಋಷಿಯ ಮುಂದೆ ನಿಂತನು

೮. ದೂರ್ವಾಸನೂ ಕೂಡ ತನ್ನ ಮುಂದೆ ಆ ಔರ್ವಮುನಿಯು ನಿಂತಿರುವುದನ್ನು ನೋಡಿ ಸಂಭ್ರಮದಿಂದೆದ್ದು ಸಂತೋಷದಿಂದ ನಮಸ್ಕರಿಸಿದು.

ಔರ್ವೋ ದೂರ್ವಾಸಸಂ ತತ್ರ ಸಮಾಶ್ಲಿಷ್ಯ ಮುದಾನ್ವಿತಃ ।
ಉವಾಚ ಮುನಯೇ ಸರ್ವಂ ಕನ್ಯಕಾಯಾ ಮನೋರಥಂ ॥ ೯ ॥

॥ ಔರ್ವ ಉವಾಚ ॥

ವಿಖ್ಯಾತಾ ಕಂದಲೀ ನಾಮ ಮಮ ಕನ್ಯಾ ಮನೋಹರಾ ।
ಪ್ರೌಢಾ ತ್ವಾಮೇವ ಧ್ಯಾಯಂತೀ ಶ್ರುತ್ವಾ ವಾಚಿಕವಕ್ತ್ರತಃ ॥ ೧೦ ॥

ಅಯೋನಿಸಂಭವಾ ಕನ್ಯಾ ತ್ರೈಲೋಕ್ಯಂ ಮೋಹಿತುಂ ಕ್ಷಮಾ ।
ಸರ್ವರೂಪಗುಣಾಧಾರಾ ದೋಷೇಣೈಕೇನ ಸಂಯುತಾ ॥ ೧೧ ॥

ಅತೀವ ಕಲಹಾವಿಷ್ಟಾ ಕೋಪೇನ ಕಟುಭಾಷಿಣೀ ।
ನಾನಾಗುಣಯುತಂ ದ್ರವ್ಯಂ ನ ತ್ಯಜೇದೇಕದೋಷತಃ ॥ ೧೨ ॥

ಔರ್ವಸ್ಯ ವಚನಂ ಶ್ರುತ್ವಾ ಹರ್ಷಶೋಕಾನ್ವಿತೋ ಮುನಿಃ ।
ದದರ್ಶ ಕನ್ಯಾಂ ಪುರತೋ ಗುಣರೂಪಸಮನ್ವಿತಾಂ ॥ ೧೩ ॥

---

೯. ಆಗ ಔರ್ವನು ಆ ದೂರ್ವಾಸಮುನಿಯನ್ನು ಸಂತೋಷದಿಂದ ಆಲಿಂಗಿಸಿಕೊಂಡು, ತನ್ನ ಕನ್ಯೆಯ ಮನೋರಥವನ್ನು ಅವನಿಗೆ ತಿಳಿಸಿದನು.

೧೦. ಔರ್ವ :—ಮನೋಹರಳಾದ ಈ ನನ್ನ ಕನ್ಯೆಯು ಕಂದಲಿಯೆಂಬ ಹೆಸರಿನಿಂದ ವಿಖ್ಯಾತಳಾಗಿದ್ದಾಳೆ. ಜನರ ಬಾಯಿಂದ ನಿನ್ನ ಕೀರ್ತಿಯನ್ನು ಕೇಳಿ ಯಾವಾಗಲೂ ನಿನ್ನನ್ನೇ ಧ್ಯಾನಿಸುತ್ತಿದ್ದಾಳೆ.

೧೧. ಅಯೋನಿಜೆಯಾದ ಈ ಕನ್ಯೆಯು ಮೂರು ಲೋಕವನ್ನೂ ಮೋಹಿಸಲು ಸಮರ್ಥಳಾಗಿರುವಳು. ಸಮಸ್ತರೂಪ ಮತ್ತು ಗುಣಗಳಿಗಾಧಾರಳಾದ ಇವಳಲ್ಲಿ ಒಂದೇ ದೋಷವಿರುತ್ತದೆ.

೧೨ ಅಂತ್ಯತ ಕಲಹಪ್ರಿಯಳಾಗಿ ಯಾವಾಗಲೂ ಕಟುನುಡಿಯನ್ನೇ ಆಡುತ್ತಾಳೆ. ಅನೇಕ ಗುಣವಿರುವ ವಸ್ತುವನ್ನು ಒಂದು ದೋಷವಿದ್ದ ಮಾತ್ರದಿಂದ ಬಿಡಬಾರದಲ್ಲವೇ?

೧೩. ಔರ್ವನ ಮಾತನ್ನು ಕೇಳಿ ದೂರ್ವಾಸಮುನಿಯು ಹರ್ಷಶೋಕಗಳಿಂದ ಕೂಡಿದವನಾಗಿ, ತನ್ನ ಮುಂದೆ ನಿಂತಿರುವ ಗುಣರೂಪ ಸಮನ್ವಿತಳಾದ ಆ ಕನ್ಯೆಯನ್ನು ನೋಡಿದನು.

ಶರತ್ಪಾರ್ವಣಚಂದ್ರಾಸ್ಯಾಂ ಶರತ್ಪಂಕಜಲೋಚನಾಂ ।
ಈಷದ್ಧಾಸ್ಯಪ್ರಸನ್ನಾಸ್ಯಾಂ ಪೀನಶ್ರೋಣಿಪಯೋಧರಾಂ ॥ ೧೪ ॥

ನವಯೌವನಸಂಯುಕ್ತಾಂ ಪಶ್ಯಂತೀಂ ವಕ್ರಚಕ್ಷುಷಾ ।
ರತ್ನಾಲಂಕಾರಶೋಭಾಢ್ಯಾಂ ವಹ್ನಿಶುದ್ಧಾಂಶುಕಾನ್ವಿತಾಂ ॥ ೧೫ ॥

ಮುನಿರ್ಮೂರ್ಛಾಮವಾಪೇಹ ತಾಂ ದೃಷ್ಟ್ವಾ ಕಾಮಬಾಣಪ್ರಪೀಡಿತಃ ।
ಉವಾಚಂ ತಂ ಮುನಿಶ್ರೇಷ್ಠಂ ಹೃದಯೇನ ವಿದೂಯತಾ ॥ ೧೬ ॥

॥ ದುರ್ವಾಸಾ ಉವಾಚ ॥

ನಾರೀರೂಪಂ ತ್ರಿಭುವನೇ ಮುಕ್ತಿಮಾರ್ಗನಿರೋಧಕಂ ।
ವ್ಯವಧಾನಂ ತಪಸ್ಯಾಯಾಃ ಸತತಂ ಮೋಹಕಾರಣಂ ॥ ೧೭ ॥

---

೧೪. ಶರತ್ಪೂರ್ಣಿಮಾಚಂದ್ರನಂತೆ ಆಹ್ಲಾದಕವಾದ ಮುಖವುಳ್ಳವಳೂ, ಶರದೃತುವಿನ ತಾವರೆಯಂತೆ ವಿಶಾಲನಯನಳೂ ಅತಿಪೀನವಾದ ನಿತಂಬ ಮತ್ತು ಸ್ತನಗಳುಳ್ಳವಳೂ ಆದ ಆ ಕನ್ಯೆಯ ಮುಖದಲ್ಲಿ ಮಂದಹಾಸವು ಮಿನುಗುತ್ತಿದ್ದಿತು.

೧೫. ಅಗ್ನಿಯಂತೆ ಪರಿಶುದ್ಧವಾದ ವಸ್ತ್ರವನ್ನು ಧರಿಸಿ, ರತ್ನಾಲಂಕಾರಗಳನ್ನು ತೊಟ್ಟಿದ್ದ ಆ ನವಯುವತಿಯು ತನ್ನ ಕಟಾಕ್ಷದ ಕೊನೆಯಿಂದ ಆ ಮುನಿಯನ್ನೇ ನೋಡುತ್ತಿದ್ದಳು.

೧೬. ಆಕೆಯನ್ನು ನೋಡಿ ಕಾಮಬಾಣಕ್ಕೆ ಸಿಲುಕಿದ ಆ ದೂರ್ವಾಸನು ಮೂರ್ಛೆಗೊಂಡನು. ಮೂರ್ಛೆ ತಿಳಿದನಂತರ ಪೀಡಿತವಾದ ಹೃದಯದಿಂದ ಆ ಔರ್ವ ಮುನಿಯನ್ನು ಕುರಿತಿಂತೆಂದನು.

೧೭. ದೂರ್ವಾಸಮುನಿ :—ಹೆಂಗಸಿನ ಸೌಂದರ್ಯವು ಮೂರುಲೋಕದಲ್ಲೂ ಮುಕ್ತಿಯ ಮಾರ್ಗಕ್ಕೆ ಅಡ್ಡಿತರುವುದು. ಮೋಹಕ್ಕೆ ಕಾರಣವಾದ ಆ ರೂಪದಿಂದಲೇ ತಪಸ್ಸಿಗೆ ವಿಘ್ನವುಂಟಾಗುವುದು.

ಕಾರಾಗಾರೇ ಚ ಸಂಸಾರೇ ದುರ್ವಹಂ ನಿಗಡಂ ಪರಂ ।
ಅಚ್ಛೇದ್ಯಂ ಜ್ಞಾನಖಡ್ಗೈಶ್ಚ ಮಹದ್ಭಿಃ ಶಂಕರಾದಿಭಿಃ ॥ ೧೮ ॥

ಸಂಗಿಚ್ಛಾಯಾತಿರಿಕ್ತಂ ಚ ಕರ್ಮಭೋಗಾತ್ಪರಾತ್ಪರಂ ।
ಇಂದ್ರಿಯಾದಿಂದ್ರಿಯಾಧಾರಾದ್ವಿದ್ಯಾಯಾಶ್ಚ ಮತೇರಪಿ ॥ ೧೯ ॥

ಆದೇಹಂ ಸಂಗಿನೀ ಛಾಯಾ ಭೋಗಾಂತಂ ಭೋಗ ಏವ ಚ ।
ದೇಹೇಂದ್ರಿಯಾಣಿ ಜೀವಾಂತಂ ವಿದ್ಯಾ ಚೈವಾವಶೀಲಿನಂ ॥ ೨೦ ॥

ಮತಿಶ್ಚೈವಾವಶೀಲಾಂತಾ ಸುಸ್ತ್ರೀ ಜನ್ಮನಿ ಜನ್ಮನಿ ।
ಯಾವಜ್ಜೀವೀ ಚ ಸುಸ್ತ್ರೀಕೋ ನ ತಾವಜ್ಜನ್ಮಖಂಡನಂ ॥ ೨೧ ॥

---

೧೮. ಕಾರಾಗೃಹದಲ್ಲಾಗಲೀ, ಸಂಸಾರದಲ್ಲಾಗಲೀ, ಹೆಂಗಸಿನರೂಪವು ಸಹಿಸಲಾಗದ ಬಂಧನವಾಗುವುದು. ಮಹಾತ್ಮರಾದ ಶಂಕರನೇ ಮುಂತಾದವರೂ ತಮ್ಮ ಜ್ಞಾನವೆಂಬ ಕತ್ತಿಯಿಂದ ಆ ಬಂಧನವನ್ನು ಕತ್ತರಿಸಲಾರರು.

೧೯. ಸುಶೀಲೆಯಾದ ಹೆಂಗಸು ತನುವಿನೊಡನಿರುವ ನೆಳಲಿಗಿಂತಲೂ ಚಿರಕಾಲವಿರುವಳು. ಜನ್ಮಾಂತರ ಕರ್ಮಕ್ಕಿಂತಲೂ ಬಹುಕಾಲ ಅನುಸರಿಸುವಳು. ಇಂದ್ರಿಯ, ಇಂದ್ರಿಯಾಧಾರ, ವಿದ್ಯಾ ಮತ್ತು ಬುದ್ಧಿ ಎಲ್ಲಕ್ಕಿಂತಲೂ ಶ್ರೇಷ್ಠಳು.

೨೦. ನೆರಳು ಶರೀರವಿರವವರೆಗೂ ಇರುವುದು. ಕರ್ಮವು ಭೋಗಪರ್ಯಂತ ವಿರುವುದು. ಶರೀರ ಮತ್ತು ಇಂದ್ರಿಯಗಳು ಜೀವವಿರುವವರೆಗೂ ಇರುವುದು. ಸದ್ವೃತ್ತಿ ಇರುವವರೆಗೂ ವಿದ್ಯೆಯಿರುವುದು.

೨೧. ಬುದ್ಧಿಯೂ ಸದ್ವೃತ್ತಿ ಇರುವವರೆಗೆ ಇರುವುದು. ಒಳ್ಳೆಯ ಸ್ತ್ರೀಯಾದರೋ ಜನ್ಮಜನ್ಮಗಳಲ್ಲಿಯೂ ಅನುಸರಿಸುವಳು. ಪುರುಷನು ಯೋಗ್ಯಳಾದ ಸ್ತ್ರೀಯೊಡನೆ ಜೀವಿಸಿರುವವರೆಗೂ ಜನ್ಮಬಂಧನವು ಅವನನ್ನು ಬಿಡುವುದಿಲ್ಲ.

ಯಾವಜ್ಜ ಜೀವಿನೋ ಜನ್ಮ ತಾವದ್ಭೋಗಃ ಸುಖಾವಹಃ ।
ಪರಂ ಮುನೀಂದ್ರ ಸರ್ವಸ್ಮಾದ್ಧರಿಪಾದಾಬ್ಜ ಸೇವನಂ ॥ ೨೨ ॥

ಧ್ಯಾಯತಃ ಕೃಷ್ಣಪಾದಾಬ್ಜಂ ಮನು ವಿಘ್ನೋ ಬಭೂವ ಹ ।
ನ ಜಾನೇ ಕರ್ಮದೋಷೇಣ ಕೇನ ವಾ ಪೂರ್ವಜನ್ಮನಃ ॥ ೨೩ ॥

ಪುಂಶ್ಚಲ್ಯಾ ಸಹ ಶೃಂಗಾರಂ ದೃಷ್ಟ್ವಾ ದೈತ್ಯಸ್ಯ ಮನ್ಮನಃ ।
ಬಭೂವ ಕಾಮಸಂಯುಕ್ತಂ ದತ್ತಂ ಧಾತ್ರಾ ಚ ತತ್ಫಲಂ ॥ ೨೪ ॥

ಕಿಂ ತ್ವಹಂ ತವ ಕನ್ಯಾಯಾಃ ಕಟೂಕ್ತಿಶತಕಂ ಮುನೇ ।
ಧ್ರುವಂ ಕ್ಷಮಾಂ ಕರಿಷ್ಯಾಮಿ ದಾಸ್ಯಾಮಿ ಚ ತತಃಫಲಂ ॥ ೨೫ ॥

ಸರ್ವತೋಽಪಿ ಪರಾ ನಿಂದಾ ಸ್ತ್ರೀಕಟೂಕ್ತಿಸಹಿಷ್ಣುತಾ ।
ಅತೀವನಿಂದಿತಃ ಸತ್ಸು ಸ್ತ್ರೀಜಿತೋ ಭುವನತ್ರಯೇ ॥ ೨೬ ॥

---

೨೨. ಜೀವಿಗಳಿಗೆ ಜನ್ಮವಿರುವವರೆಗೂ ಸಂಸಾರಭೋಗವು ಸುಖಮಯವಾಗಿರುವುದು. ಎಲೈ ಮುನೀಂದ್ರನೇ, ಆದರೆ ಶ್ರೀಹರಿಯ ಪಾದಕಮಲಸ್ಮರಣೆಯು ಎಲ್ಲಕ್ಕಿಂತಲೂ ಸುಖಕರವಾದುದು

೨೩. ಶ್ರೀಕೃಷ್ಣನ ಪಾದಕಮಲಗಳನ್ನು ಸ್ಮರಿಸುತ್ತಿದ್ದಾಗ ನನಗೆ ವಿಘ್ನವುಂಟಾಯಿತು. ನನ್ನ ಪೂರ್ವಜನ್ಮದ ಯಾವ ಕರ್ಮದೋಷವೋ ನಾನರಿಯೆ.

೨೪. ರಾಕ್ಷಸನು ವೇಶ್ಯೆಯೊಡನೆ ಶೃಂಗಾರಸುಖಾನುಭವಮಾಡುತ್ತಿದ್ದುದನ್ನು ನೋಡಿ ನನ್ನ ಮನಸ್ಸು ಕಾಮಾಸಕ್ತವಾಯಿತು. ವಿಧಿಯು ಅದಕ್ಕೆ ತಕ್ಕ ಫಲವನ್ನು ಕೊಟ್ಟನು.

೨೫. ಆದುದರಿಂದ ಎಲೈ ಮುನಿಯೇ, ನಾನು ನಿನ್ನ ಪುತ್ರಿಯ ನೂರು ಕಠಿಣವಾಕ್ಯಗಳನ್ನು ಸಹಿಸುತ್ತೇನೆ. ಮುಂದೆಯೂ ಕಠಿಣವಾಕ್ಯಗಳನ್ನಾಡಿದರೆ ಅದಕ್ಕೆ ತಕ್ಕ ಫಲವನ್ನು ಕೊಡುತ್ತೇನೆ.

೨೬. ಹೆಂಗಸರ ಕಟುನುಡಿಗಳನ್ನು ಗಂಡಸು ಸಹಿಸಿಕೊಂಡಿರುವುದು ನಿಂದನೀಯವಾದುದು. ಹೆಂಗಸಿಗೆ ಅಧೀನನಾಗಿರುವವನು ಮೂರುಲೋಕದಲ್ಲೂ ಸತ್ಪುರುಷರಿಂದ ದೂಷಿಸಲ್ಪಡುವನು.

ತವಾಜ್ಞಾಂ ಮಸ್ತಕೇ ಕೃತ್ವಾ ಗ್ರಹೀಷ್ಯಾಮಿ ಸುತಾಂ ತವ ।
ಉಪೇತಾಂ ಕಾಮಿನೀಂ ತ್ಯಕ್ತ್ವಾ ಕಾಲಸೂತ್ರಂ ವ್ರಜೇನ್ನರಃ ॥ ೨೭ ॥

ರಹಸ್ಯುಪಸ್ಥಿತಾಂ ಕಾಮಾತ್ಪುಂಶ್ಚಲೀಂ ಚೇಜ್ಜಿತೇಂದ್ರಿಯಃ ।
ಪರಿತ್ಯಜೇದ್ಧರ್ಮಭಯಾದಧರ್ಮಾನ್ನರಕಂ ವ್ರಜೇತ್ ॥ ೨೮ ॥

ಇತ್ಯೇವಮುಕ್ತ್ವಾ ದುರ್ವಾಸಾ ವಿರರಾಮ ಮುನೇಃ ಪುರಃ ।
ಮುನಿರ್ವೇದೋಕ್ತವಿಧಿನಾ ದದೌ ತಸ್ಮೈ ಸುತಾಂ ಮುನೇ ॥ ೨೯ ॥

ಸ್ವಸ್ತೀತ್ಯುವಾಚ ದುರ್ವಾಸಾ ಮುನಿಶ್ಚ ಯೌತುಕಂ ದದೌ ।
ಕನ್ಯಾಸಮರ್ಪಣಂ ಕೃತ್ವಾ ಮೋಹಾಚ್ಚೈವ ರುರೋದ ಹ ॥ ೩೦ ॥

ಮೂರ್ಛಾಮವಾಪ ಸ ಮುನಿಃ ಸ್ವಕನ್ಯಾವಿರಹಾತುರಃ ।
ಅಪತ್ಯಭೇದಶೋಕೌಘಃ ಸ್ವಾತ್ಮಾರಾಮಂ ನ ಮುಂಚತಿ ॥ ೩೧ ॥

---

೨೭. ನಿನ್ನ ಅಪ್ಪಣೆಯನ್ನು ಶಿರಸಾವಹಿಸಿ ನಿನ್ನ ಮಗಳನ್ನು ಸ್ವೀಕರಿಸುತ್ತೇನೆ. ತಾನಾಗಿ ಬಂದ ಹೆಂಗಸನ್ನು ತ್ಯಜಿಸಿದ ಮನುಜನು ಕಾಲಸೂತ್ರವೆಂಬ ನರಕಕ್ಕೆ ಹೋಗುವನು.

೨೮. ಕಾಮಾಸಕ್ತಳಾಗಿ ಏಕಾಂತದಲ್ಲಿ ಬಂದಿರುವ ವೇಶ್ಯೆಯನ್ನು ಜಿತೇಂದ್ರಿಯನಾದವನು ಧರ್ಮಲೋಪಭಯದಿಂದ ಪರಿತ್ಯಾಗಮಾಡಿದರೆ ಅಧರ್ಮಯುಕ್ತನಾಗಿ ನರಕಕ್ಕೆ ಹೋಗುವನು

೨೯. ದೂರ್ವಾಸಮುನಿಯು ಈ ರೀತಿಯಾಗಿ ನುಡಿದು ಸುಮ್ಮನಾದನು. ಆಗ ಆ ಔರ್ವಮುನಿಯು ವೇದೋಕ್ತಮಂತ್ರದಿಂದ ಮಗಳನ್ನು ಅವನಿಗೆ ದಾನ ಮಾಡಿದನು.

೩೦. ದೂರ್ವಾಸನು ಆ ಕನ್ಯೆಯನ್ನು ಸ್ವೀಕಾರ ಮಾಡಿದನು. ಔರ್ವ ಮುನಿಯು ಉಚಿತವಾದ ಬಳುವಳಿಯನ್ನು ಕೊಟ್ಟನು. ಕನ್ಯಾದಾನವನ್ನು ಮಾಡಿ ಮೋಹಪರವಶತೆಯಿಂದ ದುಃಖಿತನಾದನು.

೩೧. ಕನ್ಯಾವಿರಹ ಸಂತಪ್ತನಾಗಿ ಆ ಮುನಿಯು ಮೂರ್ಛೆಗೊಂಡನು. ಮಕ್ಕಳ ವಿರಹಶೋಕವು ಆತ್ಮಜ್ಞಾನಿಗಳಿಗೂ ತಪ್ಪಿದುದಲ್ಲ.

ಕ್ಷಣೇನ ಚೇತನಾಂ ಪ್ರಾಪ್ಯ ಬೋಧಯಾಮಾಸ ಕನ್ಯಕಾಂ ।
ಮೂರ್ಛಿತಾಂ ತಾತವಿಚ್ಛೇದಾದ್ರುದಂತೀಂ ಶೋಕಸಂಯುತಾಂ ॥ ೩೨ ॥

॥ ಔರ್ವ ಉವಾಚ ॥

ಶೃಣು ವತ್ಸೇ ! ಪ್ರವಕ್ಷ್ಯಾಮಿ ನೀತಿಸಾರಂ ಸುದುರ್ಲಭಂ ।
ಹಿತಂ ಸತ್ಯಂ ಚ ವೇದೋಕ್ತಂ ಪರಿಣಾಮಸುಖಾವಹಂ ॥ ೩೩ ॥

ಸ್ವಕಾಂತಶ್ಚ ಪರೋ ಬಂಧುರಿಹ ಲೋಕೇ ಪರತ್ರ ಚ ।
ನ ಹಿ ಕಾಂತಾತ್ಪರಃ ಪ್ರೇಯಾನ್ ಕುಲಸ್ತ್ರೀಣಾಂ ಪರೋ ಗುರುಃ ॥ ೩೪ ॥

ದೇವಪೂಜಾ ವ್ರತಂ ದಾನಂ ತಪಶ್ಚಾನಶನಂ ಜಪಃ ।
ಸ್ನಾನಂ ಚ ಸರ್ವತೀರ್ಥೇಷು ದೀಕ್ಷಾ ಸರ್ವಮಖೇಷು ಚ ॥ ೩೫ ॥

ಪ್ರಾದಕ್ಷಿಣ್ಯಂ ಪೃಥಿವ್ಯಾಶ್ಚ ಬ್ರಾಹ್ಮಣಾತಿಥಿಸೇವನಂ ।
ಸರ್ವಾಣಿ ಪತಿಸೇವಾಯಾಃ ಕಲಾಂ ನಾರ್ಹಂತಿ ಷೋಡಶೀಂ ॥ ೩೬ ॥

---

೩೨ ಮರುಕ್ಷಣದಲ್ಲಿಯೇ ಚೇತನವನ್ನು ಹೊಂದಿ ತಂದೆಯ ವಿರಹದುಃಖದಿಂದ ಅಳುತ್ತ ಮೂರ್ಛೆಗೊಂಡಿರುವ ತನ್ನ ಮಗಳನ್ನು ಸಮಾಧಾನಗೊಳಿಸಿದನು.

೩೩. ಔರ್ವ :—ಎಲೌ ಮಗಳೇ, ನೀತಿಸಾರವೂ, ಹಿತವೂ, ಸತ್ಯವೂ, ಪರಿಣಾಮಸುಖದಾಯಕವೂ, ಅತ್ಯಂತ ದುರ್ಲಭವೂ, ವೇದೋಕ್ತವೂ ಆದ ನನ್ನ ಉಪದೇಶವಾಕ್ಯಗಳನ್ನು ಕೇಳು.

೩೪. ಕುಲಸ್ತ್ರೀಯರಿಗೆ ಇಹಲೋಕದಲ್ಲೂ, ಪರಲೋಕದಲ್ಲೂ ತನ್ನ ಪತಿಯೇ ಪರದೈವವು. ಪತಿಗಿಂತಲೂ ಬೇರೊಬ್ಬ ಪ್ರೀತಿಪಾತ್ರನಾಗಲಿ, ಗೌರವಾರ್ಹನಾಗಲೀ ಕುಲಸ್ತ್ರೀಯರಿಗೆ ಇಲ್ಲ.

೩೫-೩೬. ದೇವತಾಪೂಜೆ, ವ್ರತ, ದಾನ, ತಪಸ್ಸು, ಉಪವಾಸ, ಮತ್ತು ಜಪಗಳೂ ಸಕಲ ಪುಣ್ಯಾತೀರ್ಥಗಳ ಸ್ನಾನ, ಎಲ್ಲಾ ಯಜ್ಞಗಳ ದೀಕ್ಷೆ, ಪೃಥಿವಿಯ ಪ್ರದಕ್ಷಿಣೆ, ಬ್ರಾಹ್ಮಣ ಮತ್ತು ಅತಿಥಿಗಳ ಸೇವೆ ಮುಂತಾದವುಗಳೂ ಹೆಂಗಸಿಗೆ ಪತಿಸೇವೆಯ ಹದಿನಾರನೆ ಒಂದು ಭಾಗ ಫಲವನ್ನೂ ಕೊಡುವುದಿಲ್ಲ.

ಕಿಮೇತೈಃ ಪತಿಭಕ್ತಾಯಾ ಅಭಕ್ತಾಯಾಶ್ಚ ಭಾರತೇ ।
ಯದಾ ದುಃಖೀ ಸುಖಾರಂಭೇ ಸಾಕಾಂಕ್ಷಃ ಪ್ರಥಮೋ ಭವೇತ್ ॥ ೩೭ ॥

ಪತಿಸೇವಾ ಪರೋ ಧರ್ಮಃ ಸರ್ವಶಾಸ್ತ್ರೇಷು ಪಠ್ಯತೇ ।
ಸ್ವಪ್ರಜ್ಞಾನೇನ ಸತತಂ ಕಾಂತಂ ನಾರಾಯಣಾಧಿಕಂ ॥
ದೃಷ್ಟ್ವಾ ತಚ್ಚರಣಾಂಭೋಜಸೇವಾಂ ನಿತ್ಯಂ ಕರಿಷ್ಯತಿ ॥ ೩೮ ॥

ಪರಿಹಾಸೇನ ಕೋಪೇನ ಭ್ರಮೇಣಾವಜ್ಞಯಾ ಮುನೇ ।
ಕಟೂಕ್ತಿಂ ಸ್ವಾಮಿನಃ ಸಾಕ್ಷಾತ್ಪರೋಕ್ಷಾನ್ನ ಕರಿಷ್ಯತಿ ॥ ೩೯ ॥

ಸ್ತ್ರಿಯಾ ವಾಗ್ಯೋನಿದುಷ್ಟಾಯಾಃ ಕಾಮತೋ ಭಾರತೇ ಭುವಿ ।
ಪ್ರಾಯಶ್ಚಿತ್ತಂ ಶ್ರುತೌ ನಾಸ್ತಿ ನರಕಂ ಬ್ರಹ್ಮಣಃ ಶತಂ ॥ ೪೦ ॥

---

೩೭. ಪತಿಭಕ್ತಳಿಗೂ, ಪತಿಭಕ್ತಿರಹಿತಳಿಗೂ ಈ ಪೂಜಾದಿಗಳಿಂದ ಪ್ರಯೋಜನವೇನೂ ಇಲ್ಲ. ಸುಖಾರಂಭದಲ್ಲೇ ದುಃಖವುಂಟಾದಲ್ಲಿ ಪತಿಭಕ್ತಿಯ ಮಹಿಮೆ ತಿಳಿಯುವುದು.

೩೮. ಹೆಂಗಸು ಪತಿಸೇವಾಪರಾಯಣೆಯಾಗಿರಬೇಕೆಂಬ ಧರ್ಮವು ಎಲ್ಲಾ ಶಾಸ್ತ್ರಗಳಲ್ಲೂ ಉಕ್ತವಾಗಿದೆ. ಪತಿವ್ರತೆಯಾದ ಹೆಂಗಸು ಜ್ಞಾನಿಯಾದ ತನ್ನ ಪತಿಯನ್ನು ನಾರಾಯಣನಿಗಿಂತ ಹೆಚ್ಚೆಂದು ತಿಳಿದು ಪ್ರತಿದಿನವೂ ಅವನ ಚರಣ ಕಮಲಗಳ ಸೇವೆಯನ್ನು ಸಲ್ಲಿಸುವಳು.

೩೯. ಉತ್ತಮಳಾದ ಸ್ತ್ರೀಯು ಹಾಸ್ಯಕ್ಕಾಗಲೀ, ಕೋಪಕ್ಕಾಗಲೀ ಭ್ರಾಂತಿ ತಿರಸ್ಕಾರಗಳಿಂದಾಗಲೀ ತನ್ನ ಪತಿಯ ಎದುರಿನಲ್ಲೂ ಪರೋಕ್ಷದಲ್ಲೂ ಕಟುನುಡಿಗಳನ್ನಾಡುವುದಿಲ್ಲ.

೪೦. ಭರತಖಂಡದಲ್ಲಿ ಉದ್ದೇಶಪೂರ್ವಕವಾಗಿ ವಾಗ್ದುಷ್ಟಳೂ ಯೋನಿದುಷ್ಟಳೂ ಆದ ಹೆಂಗಸಿಗೆ ಶ್ರುತಿಯಲ್ಲಿ ಪ್ರಾಯಶ್ಚಿತ್ತವೇ ಹೇಳಿಲ್ಲ. ನೂರು ಚತುರ್ಮುಖಬ್ರಹ್ಮರ ಜೀವಿತಕಾಲದ ವರೆಗೆ ಆಕೆಗೆ ನರಕಪ್ರಾಪ್ತಿಯಾಗುವುದು.

ಸರ್ವಧರ್ಮಪರೀತಾ ಯಾ ಕಟೂಕ್ತಿಂ ಕುರುತೇ ಪತಿಂ ।
ಶತಜನ್ಮಕೃತಂ ಪುಣ್ಯಂ ತಸ್ಯಾ ನಶ್ಯತಿ ನಿಶ್ಚಿತಂ ॥ ೪೧ ॥

ದತ್ವಾ ಕನ್ಯಾಂ ಬೋಧಯಿತ್ವಾ ಜಗಾಮ ಮುನಿಪುಂಗವಃ ।
ಸ್ವಾತ್ಮಾರಾಮಃ ಸ್ವಾಶ್ರಮೇ ಚ ತಸ್ಥೌ ಸ್ತ್ರೀಸಹಿತೋ ಮುದಾ ॥ ೪೨ ॥

ಸಂಭೋಗೇಚ್ಛಾನ್ವಿತೇ ಚಿತ್ತೇ ಕಾಮೀ ಸಂಪ್ರಾಪ ಕಾಮಿನೀಂ ।
ಅಹೋ ಸುಕೃತಿನಾಂ ಕಾಮೋ ವಾಂಛಾಮಾತ್ರೇಣ ಸಿಧ್ಯತಿ ॥ ೪೩ ॥

ಶಯ್ಯಾಂ ರತಿಕರೀಂ ಕೃತ್ವಾ ಮುನಿಶ್ರೇಷ್ಠೋ ಮಹಾಮುನೇ ।
ಶುಭೇ ಕ್ಷಣೇ ಗೃಹೀತ್ವಾ ತಾಂ ಸುಷ್ವಾಪ ನಿರ್ಜನೇ ಪ್ರಿಯಾಂ ॥ ೪೪ ॥

ನಾರೀರಸಾನಭಿಜ್ಞಃ ಸ್ಯಾದಾಜನ್ಮ ಮುನಿಪುಂಗವಃ ।
ತಥಾಽಪಿ ಸುರತೌ ವಿಜ್ಞಃ ಕಾಮಶಾಸ್ತ್ರವಿಶಾರದಃ ॥ ೪೫ ॥

---

೪೧. ಸರ್ವಧರ್ಮಸಿರತಳೂ ಆಗಿ ಪತಿಯನ್ನು ಕುರಿತು ಕಟುನುಡಿ ಯಾಡುವವಳು ನೂರು ಪ್ರಾಕ್ತನಜನ್ಮಗಳ ಪುಣ್ಯವನ್ನೂ ನಿಶ್ಚಯವಾಗಿ ಕಳೆದು ಕೊಳ್ಳುವಳು.

೪೨. ಔರ್ವನು ಈ ರೀತಿಯಾಗಿ ಬೋಧಿಸಿ ಮಗಳನ್ನು ದೂರ್ವಾಸನಿಗೆ ಕೊಟ್ಟು ಹೊರಟುಹೋಗಲು ಆತ್ಮಾರಾಮನಾದ ಆ ಮುನಿಯು ಪತ್ನೀಸಹಿತನಾಗಿ ತನ್ನ ಆಶ್ರಮದಲ್ಲಿದ್ದನು.

೪೩. ಮನಸ್ಸಿಗೆ ಸಂಭೋಗದ ಇಚ್ಛೆಯು ಉಂಟಾದ ಕೂಡಲೇ ಕಾಮಿಯಾದ ಆ ಮುನಿಯು ಕಾಮಿನಿಯನ್ನು ಪಡೆದನು. ಸತ್ಪುರುಷರ ಇಷ್ಟಾರ್ಥವು ಬಯಸಿದ ಮಾತ್ರದಿಂದಲೇ ಸಿದ್ಧಿಸುವುದು.

೪೪. ಕೂಡಲೇ ಆ ಮುನಿಶ್ರೇಷ್ಠನು ರತಿಸುಖೋಚಿತವಾದ ಹಾಸಿಗೆ ಯನ್ನು ಕಲ್ಪಿಸಿಕೊಂಡು ಶುಭಮುಹೂರ್ತದಲ್ಲಿ ಆಕೆಯೊಡನೆ ನಿರ್ಜನಪ್ರದೇಶದಲ್ಲಿ ಪವಡಿಸಿದನು.

೪೫. ಹುಟ್ಟಿದಂದಿನಿಂದಲೂ ಮುನಿಯಾದ ಅವನು ಕಾಮಿನಿಯ ಶೃಂಗಾರ ವನ್ನರಿಯದವನಾದರೂ, ಸುರತಸುಖದಲ್ಲಿ ಚತುರನೂ, ಕಾಮಶಾಸ್ತ್ರವಿಶಾರದನೂ ಆಗಿದ್ದನು.

ನಾನಾಪ್ರಕಾರಂ ಶೃಂಗಾರಂ ಚಕಾರ ವಿಧಿಪೂರ್ವಕಂ ।
ನವಸಂಗಮಮಾತ್ರೇಣ ಮೂರ್ಛಾಂ ಸಂಪ್ರಾಪ ಕಂದಲೀ ॥ ೪೬ ॥

ಮೂರ್ಛಾಂ ಪ್ರಾಪ ಮುನಿಶ್ರೇಷ್ಠೋ ಬುಬುಧೇ ನ ದಿವಾನಿಶಂ ।
ಏವಂ ಪ್ರತಿದಿನಂ ತತ್ರ ಚಕಾರ ಸುರತಿಂ ಮುನೇ ॥ ೪೭ ॥

ವಿದಗ್ಧಾಯಾ ವಿದಗ್ಧೇನ ಬಭೂವ ಸಂಗಮಃ ಸಮಃ ।
ಸಂಬಭೂವ ಗೃಹಾಸಕ್ತಸ್ತಪಸ್ತ್ಯಕ್ತ್ವಾ ಮುನೀಶ್ವರಃ ॥ ೪೮ ॥

ಕರೋತಿ ಕಲಹಂ ನಿತ್ಯಂ ಕಂದಲೀ ಸ್ವಾಮಿನಾ ಸಹ ।
ಮುನೀಂದ್ರೋ ಬೋಧಯಾಮಾಸ ನೀತಿವಾಕ್ಯೇನ ಕಾಮಿನೀಂ ॥ ೪೯ ॥

ಸಾ ತನ್ನ ಬುಬುಧೇ ಕಿಂಚಿತ್ಕರೋತಿ ಕಲಹೇ ಸ್ಪೃಹಾಂ ।
ತಾತಪ್ರದತ್ತಜ್ಞಾನೇನ ಸಾ ನ ಶಾಂತಾ ಬಭೂವ ಹ ।
ನ ಹೀಯತೇ ಪ್ರಬೋಧೇನ ಸ್ವಭಾವೋ ದುರತಿಕ್ರಮಃ ॥ ೫೦ ॥

---

೪೬. ವಾತ್ಸ್ಯಾಯನೋಕ್ತವಾದ ವಿಧವಿಧ ಶೃಂಗಾರವನ್ನು ಅನುಭವಿಸಿದನು. ಆ ಕಂದಲಿಯೂ ಕೂಡ ನವಸಮಾಗಮದಿಂದ ಮೂರ್ಛಿತಳಾದಳು

೪೭. ಆ ಮುನಿಯೂ ಕೂಡ ಆನಂದದಿಂದ ಮೂರ್ಛಿತನಾಗಿ ಹಗಲು ರಾತ್ರಿಗಳನ್ನೂ ಅರಿಯದಾದನು. ಈ ರೀತಿ ಪ್ರತಿನಿತ್ಯವೂ ಅವಳೊಡನೆ ರತಿಸುಖವನ್ನನುಭವಿಸುತ್ತಿದ್ದನು.

೪೮. ಆ ಪ್ರೌಢೆಯಾದ ಕಂದಲಿಗೆ ಪ್ರೌಢನಾದ ದೂರ್ವಾಸನೊಡನೆ ಸಮಾಗಮವು ಸರಿಹೊಂದಿತು. ಆ ಮುನೀಶ್ವರನು ತಪಸ್ಸನ್ನು ತೊರೆದು ಸಂಸಾರ ಸುಖದಲ್ಲಿ ನಿರತನಾದನು.

೪೯. ಆ ಕಂದಲಿಯು ಪ್ರತಿದಿನವೂ ತನ್ನ ಪತಿಯೊಡನೆ ಕಲಹವಾಡಲು ಮೊದಲುಮಾಡಿದಳು. ಆ ಮುನಿಯು ನೀತಿವಾಕ್ಯಗಳಿಂದ ಅವಳಿಗೆ ತಿಳಿವಳಿಕೆ ಹೇಳಿದರೂ ಅವಳು ಅದನ್ನರಿಯದೆ ಕಲಹಾಸಕ್ತಳಾಗಿಯೇ ಇದ್ದಳು.

೫೦. ತಂದೆಯು ಎಷ್ಟು ಉಪದೇಶಮಾಡಿದರೂ ಅವಳು ಕಲಹಮಾಡುವುದನ್ನು ಬಿಡಲಿಲ್ಲ ಮಾರಲಾಗದ ಹುಟ್ಟುಗುಣವು ಇತರರ ಭೋಧನೆಯಿಂದ ಹೋಗುವುದಿಲ್ಲ.

ನಿತ್ಯಂ ಕಟೂಕ್ತಿಂ ಕಾಂತಂ ಸಾ ಕರೋತಿ ಹೇತುನಾ ವಿನಾ ।
ಜಗತ್ಪ್ರಕಂಪಿತಂ ಯೇನ ತಯಾ ಕೋಪಾತ್ಸಕಂಪಿತಃ ॥ ೫೧ ॥

ತಯಾ ಕೃತಾಂ ಕಟೂಕ್ತಿಂ ಚ ಕ್ಷಮಾಸಂಸ್ಥಾಂ ಚಕಾರ ಹ ।
ಬೋಧಯಾಮಾಸ ತಾಂ ನಿತ್ಯಂ ಸದ್ಯೋ ಮೋಹಾದ್ದಯಾನಿಧಿಃ ॥ ೫೨ ॥

ಕಟೂಕ್ತಿಶತಕಂ ಪೂರ್ಣಂ ತತ್ಕಾಲೇನ ಬಭೂವ ಹ ।
ಕ್ಷಮಾಂ ಚಕಾರ ಕೃಪಯಾ ಕಟೂಕ್ತಿಂ ಚ ಶತಾಧಿಕಾಂ ॥ ೫೩ ॥

ಪತ್ನೀಕಟೂಕ್ತ್ಯಾ ನಿಯತಂ ಪ್ರದಗ್ಧಂ ಮಾನಸಂ ಮುನೇಃ ।
ತಸ್ಯಾಃ ಕಟೂಕ್ತಿಕಾರಿಣ್ಯಾಃ ಕರ್ಮ ಪೂರ್ಣಂ ಬಭೂವ ಹ ॥ ೫೪ ॥

ಸ್ವಾತ್ಮಾರಾಮೋ ದಯಾಲುಶ್ಚ ಕೋಪಂ ತ್ಯಕ್ತುಂ ನ ಸಕ್ಷಮಃ ।
ಶಶಾಪ ಕಾಮಿನೀಂ ಮೋಹಾದ್ಭಸ್ಮರಾಶಿರ್ಭವೇತಿ ಚ ॥ ೫೫ ॥

---

೫೧. ಪ್ರತಿದಿನವೂ ಕಾರಣವಿಲ್ಲದೆ ಗಂಡನೊಡನೆ ಕಟುನುಡಿಗಳನ್ನಾಡುತ್ತಿದ್ದಳು. ಯಾವ ದೂರ್ವಾಸನಿಗೆ ಜಗತ್ತೇ ನಡುಗುತ್ತಿತ್ತೋ ಅವನೂ ಕೂಡ ಅವಳ ಕೋಪಕ್ಕೆ ನಡುಗುತ್ತಿದ್ದನು.

೫೨. ಅವಳಾಡಿದ ಕಟುನುಡಿಗಳನ್ನೆಲ್ಲ ಸಹಿಸಿಕೊಂಡು ಬಂದನು. ಅವಳ ಮೇಲಿನ ಮೋಹದಿಂದ ದಯಾಮಯನಾದ ಆ ಮಹರ್ಷಿಯು ಪ್ರತಿದಿನವೂ ತಿಳಿವಳಿಕೆ ಹೇಳುತ್ತಿದ್ದನು.

೫೩. ಅಷ್ಟು ಕಾಲಕ್ಕೆ ಆ ಕಂದಲಿಯು ನೂರು ಕಟುನುಡಿಗಳನ್ನಾಡಿ ಮುಗಿಸಿದ್ದಳು ದಯಾಮಯನಾದ ಅವನು ನೂರು ಕಟುನುಡಿಗಳನ್ನೂ ಸಹಿಸಿಕೊಂಡಿದ್ದನು.

೫೪. ಹೆಂಡತಿಯ ಕಟುನುಡಿಗಳಿಂದ ಆ ಮುನಿಯ ಮನಸ್ಸು ರೇಗಿಹೋಗಿತ್ತು. ಕಟುನುಡಿಯಾಡುವ ಅವಳ ಕರ್ಮವೂ ಅಲ್ಲಿಗೆ ಸಮೆಯಿತು. ಮತ್ತೊಮ್ಮೆ ಕಟುನುಡಿಯಾಡಿದಳು.

೫೫. ಆತ್ಮಾರಾಮನಾದ ಆ ಮುನಿಯು ದಯಾಳುವಾದರೂ ಕೋಪವನ್ನು ತ್ಯಜಿಸಲಾಗಲಿಲ್ಲ. ಕೊನೆಗೆ ತಡೆಯಲಾರದೆ ಮೋಹವಶದಿಂದ ನೀನು ಬೂದಿಯಾಗೆಂದು ತನ್ನ ಪತ್ನಿಗೆ ಶಾಪಕೊಟ್ಟನು

ಮುನೇರಿಂಗಿತಮಾತ್ರೇಣ ಭಸ್ಮಸಾತ್ಸಾ ಬಭೂವ ಹ ।
ಏವಮುತ್ಯುಚ್ಛ್ರಿತಾನಾಂ ಚ ನ ಕಲ್ಯಾಣಂ ಜಗತ್ತ್ರಯೇ ॥ ೫೬ ॥

ಶರೀರೇ ಭಸ್ಮಸಾದ್ಭೂತೇ ಪ್ರತಿಬಿಂಬಃ ಸ ಚಾತ್ಮನಃ ।
ಜೀವಸ್ತತ್ರಾಂತರಿಕ್ಷಸ್ಥೋ ಹ್ಯುವಾಚ ವಿನಯಾತ್ತ್ರಭುಂ ॥ ೫೭ ॥

॥ ಜೀವ ಉವಾಚ ॥

ಹೇ ನಾಥ ಸರ್ವದರ್ಶೀ ತ್ವಂ ಸತತಂ ಜ್ಞಾನಚಕ್ಷುಷಾ ।
ಸರ್ವಂ ಜಾನಾಸಿ ಸರ್ವಜ್ಞಃ ಕಿಮಹಂ ಬೋಧಯಾಮಿ ತೇ ॥ ೫೮ ॥

ಸದುಕ್ತಿರ್ವಾ ಕಟೂಕ್ತಿರ್ವಾ ಕೋಪಃ ಸಂತಾಪ ಏವ ಚ ।
ಲೋಭೋ ಮೋಹಶ್ಚ ಕಾಮಶ್ಚ ಕ್ಷುತ್ಪಿಪಾಸಾದಿಕಂ ಚ ಯತ್ ॥ ೫೯ ॥

ಸ್ಥೌಲ್ಯಂ ಕಾರ್ಶ್ಯಂ ಚ ನಾಶಶ್ಚ ದೃಶ್ಯಾದೃಶ್ಯಂ ಸಮುದ್ಭವಂ ।
ಸರ್ವಂ ಶರೀರಧರ್ಮಂ ಚ ನ ಜೀವಸ್ಯ ನ ಚಾತ್ಮನಃ ॥ ೬೦ ॥

---

೫೬. ಮುನಿಯ ಮನೋಭಿಪ್ರಾಯವನ್ನು ತಿಳಿದ ಮಾತ್ರದಿಂದಲೇ ಅವಳು ಬೂದಿಗುಡ್ಡೆಯಾದಳು. ಹೀಗೆ ಯಾವುದರಲ್ಲೂ ಮಿತಿಮೀರಿದವರಿಗೆ ಮೂರು ಲೋಕದಲ್ಲೂ ಕಲ್ಯಾಣವುಂಟಾಗುವುದಿಲ್ಲ.

೫೭. ಇಂತು ಆಕೆಯ ಶರೀರವು ಬೂದಿಯಾದನಂತರ ಆತ್ಮನ ಪ್ರತಿಬಿಂಬವಾದ ಜೀವವು ಅಂತರಿಕ್ಷದಲ್ಲಿ ನಿಂತು ವಿನಯದಿಂದ ಆತನನ್ನು ಕುರಿತು ಇಂತೆಂದಿತು.

೫೮. ಜೀವ :—ಎಲೈ ಪತಿದೇವನೇ, ನೀನು ಜ್ಞಾನದೃಷ್ಟಿಯಿಂದ ಎಲ್ಲವನ್ನೂ ಯಾವಾಗಲೂ ನೋಡಬಲ್ಲೆ. ನೀನೇ ಸರ್ವಜ್ಞನಾಗಿ ಎಲ್ಲವನ್ನೂ ತಿಳಿದಿರುವಾಗ ನಾನು ಹೇಳಬೇಕಾದುದೇನು ?

೫೯-೬೦. ಹಿತನುಡಿಯಾಗಲೀ, ಕಟುನುಡಿಯಾಗಲೀ, ಕೋಪತಾಪಗಳಾಗಲೀ, ಕಾಮ, ಲೋಭ, ಮೋಹಗಳಾಗಲೀ, ಹಸಿವು ಬಾಯಾರಿಕೆಗಳಾಗಲೀ, ಸ್ಥೂಲಸೂಕ್ಷ್ಮಗಳಾಗಲೀ, ನಾಶವಾಗಲೀ, ದೃಶ್ಯಾದೃಶ್ಯವಾದ ಇತರ ಯಾವ ವಿಷಯವೇ ಆಗಲೀ ಎಲ್ಲವೂ ಶರೀರಧರ್ಮವೇ ಹೊರತು ಜೀವನ ಅಥವಾ ಆತ್ಮನ ಧರ್ಮವಲ್ಲ.

ಸತ್ವಂ ರಜಸ್ತಮ ಇತಿ ಶರೀರಂ ತ್ರಿಗುಣಾತ್ಮಕಂ ।
ತಚ್ಚ ನಾನಾಪ್ರಕಾರಂ ಚ ನಿಬೋಧ ಕಥಯಾಮಿ ತೇ ॥ ೬೧ ॥

ಕಿಂಚಿತ್ಸತ್ವಾತಿರಿಕ್ತಂ ಚ ಕಿಂಚಿದೇವ ರಜೋಧಿಕಂ ।
ತಮೋಽತಿರಿಕ್ತಂ ಕಿಂಚಿಚ್ಚ ನ ಸಮಂ ಕುತ್ರಚಿನ್ಮುನೇ ॥ ೬೨ ॥

ಸತ್ವೋದಯಾಚ್ಚ ಮುಕ್ತೀಚ್ಛಾ ಕರ್ಮೇಚ್ಛಾ ಚ ರಜೋಗುಣಾತ್ ।
ತಮೋಗುಣಾ ಜ್ಜೀವಹಿಂಸಾ ಕೋಪೋಽಹಂಕಾರ ಏವ ಚ ॥ ೬೩ ॥

ಕೋಪಾತ್ಕಟೂಕ್ತಿರ್ನಿಯತಂ ಕಟೂಕ್ತ್ಯಾ ಶತ್ರುತಾ ಭವೇತ್ ।
ತಯಾ ಚಾಪ್ರಿಯತಾ ಸದ್ಯಃ ಶತ್ರುಃ ಕಃ ಕಸ್ಯ ಭೂತಲೇ ॥ ೬೪ ॥

ಕೋ ವಾ ಪ್ರಿಯೋಽಪ್ರಿಯಃ ಕೋ ವಾ ಕಿಂ ಮಿತ್ರಂ ಕೋ ರಿಪುರ್ಭವೇತ್ ।
ಇಂದ್ರಿಯಾಣಿ ಚ ಬೀಜಾನಿ ಸರ್ವತ್ರ ಶತ್ರುಮಿತ್ರಯೋಃ ॥ ೬೫ ॥

---

೬೧. ಶರೀರವು ಸತ್ವ, ರಜಸ್ಸು ಮತ್ತು ತಮಸ್ಸೆಂಬ ಮೂರು ಗುಣಗಳಿಂದ ಕೂಡಿಮದು. ಅದು ಅನೇಕವಿಧವಾಗಿರುವುದನ್ನು ವಿವರಿಸುವೆನು ಕೇಳು.

೬೨. ಕೆಲವು ಶರೀರವು ಸತ್ವಗುಣಪ್ರಧಾನವಾಗಿಯೂ, ಕೆಲವು ರಜೋಗುಣ ಪ್ರಧಾನವಾಗಿಯೂ ಮತ್ತೆ ಕೆಲವು ತಮೋಗುಣಪ್ರಧಾನವಾಗಿಯೂ ಇರುವುದೇ ಹೊರತು ಯಾವ ಶರೀರವೂ ಸಮಗುಣವಾಗಿರುವುದಿಲ್ಲ.

೬೩. ಸತ್ವಪ್ರಧಾನವಾಗಿದ್ದರೆ ಮೋಕ್ಷದಲ್ಲಿ ಇಚ್ಛೆಯೂ, ರಜೋಗುಣ ಪ್ರಧಾನವಾಗಿದ್ದರೆ ಕರ್ಮದಲ್ಲಿ ಇಚ್ಛೆಯೂ, ತಮೋಗುಣಪ್ರಧಾನವಾಗಿದ್ದರೆ ಜೀವ ಹಿಂಸೆಯಲ್ಲಿ ಇಚ್ಛೆಯೂ, ಕೋಪಾಹಂಕಾರಗಳಲ್ಲಿ ಮಮತೆಯೂ ಉಂಟಾಗುವುದು.

೬೪. ಕೋಪದಿಂದ ಕಟುನುಡಿಯೂ, ಕಟುನುಡಿಯಿಂದ ಶತ್ರುತ್ವವೂ. ಉಂಟಾಗುವುದು. ಆ ಶತ್ರುತ್ವದಿಂದಲೇ ಅಪ್ರಿಯತ್ವವು ಟಾಗುವುದೇ ಹೊರತು ಪ್ರಪಂಚದಲ್ಲಿ ಯಾರಿಗೆ ಯಾರೂ ಶತ್ರುವಲ್ಲ.

೬೫. ಪ್ರಿಯರಾರು ? ಅಪ್ರಿಯರಾರು ? ಮಿತ್ರನಾರು ? ಶತ್ರುವಾರು ? ಎಲ್ಲೆಡೆಯಲ್ಲೂ, ಶತ್ರುಮಿತ್ರರಾಗುವುದಕ್ಕೆ ಇಂದ್ರಿಯಗಳೇ ಮುಖ್ಯಕಾರಣಗಳು.

ಪ್ರಾಣಾಧಿಕಃ ಪ್ರಿಯಃ ಸ್ತ್ರೀಣಾಂ ಭರ್ತುಃ ಪ್ರಾಣಾಧಿಕಾ ಪ್ರಿಯಾ ।
ಬಭೂವ ಶತ್ರುತಾ ಸದ್ಯೋ ದುರುಕ್ತ್ಯಾ ಚ ಕ್ಷಣಾದ್ದ್ವಯೋಃ ॥ ೬೬ ॥

ಯದ್ಗತಂ ತದ್ಗತಂ ಸರ್ವಂ ಕಾಮದೋಷೇಣ ವೈ ಪ್ರಭೋ ।
ಕ್ಷಮಾಪರಾಧಂ ನಿಖಿಲಂ ಕಿಂ ಕರ್ತವ್ಯಂ ವದಾಧುನಾ ॥ ೬೭ ॥

ಕಿಂ ಕರೋಮಿ ಕ್ವ ಯಾಮೀತಿ ಭವಿತಾ ಕುತ್ರ ಜನ್ಮ ಮೇ ।
ತವ ನಾನ್ಯಸ್ಯ ಜಾಯಾಽಹಂ ಭವಿಷ್ಯಾಮಿ ಜಗತ್ತ್ರಯೇ ॥ ೬೮ ॥

ಇತ್ಯೇವಮುಕ್ತ್ವಾ ಜೀವಶ್ಚ ಮೌನೀಭೂತೋ ಬಭೂವ ಹ ।
ಮೂರ್ಛಾಮವಾಪ ಸ ಮುನಿಃ ಶೋಕೇನ ಹತಚೇತನಃ ॥ ೬೯ ॥

ಸ್ವಾತ್ಮಾರಾಮೋ ಮಹಾಜ್ಞಾನೀ ಜಹಾರ ಚೇತನಾಮಹೋ ।
ಸ್ತ್ರೀವಿಚ್ಛೇದೋ ವಿದಗ್ಧಾನಾಂ ಸರ್ವಶೋಕಾತ್ಪರಾತ್ಪರಃ ॥ ೭೦ ॥

---

೬೬. ಹೆಂಗಸಿಗೆ ಗಂಡನು ಪ್ರಾಣಕ್ಕಿಂತ ಪ್ರಿಯನು. ಗಂಡಸಿಗೆ ಹೆಂಡತಿಯೂ, ಪ್ರಾಣಕ್ಕಿಂತ ಪ್ರಿಯಳು. ಆದರೆ ಈಗ ದುಷ್ಟನುಡಿಯಾಡಿದುದರಿಂದ ನಮ್ಮಿಬ್ಬರಿಗೂ ಶತ್ರುತ್ವಬಂದಿತು.

೬೭. ಎಲೈ ಪ್ರಭುವೇ, ಈಗ ಕಾಮಮೋಹಾದಿಗಳಿಂದ ಆದದ್ದು ಆಗಿಹೋಯಿತು. ನನ್ನ ಅಪರಾಧಗಳೆಲ್ಲವನ್ನೂ ಕ್ಷಮಿಸಿ ಈಗ ಏನುಮಾಡ ಬೇಕೆಂಬುದನ್ನು ಹೇಳು.

೬೮. ನಾನು ಏನುಮಾಡಲಿ? ಎಲ್ಲಿ ಹೋಗಲಿ? ಎಲ್ಲಿ ನಾನು ಜನ್ಮವೆತ್ತ ಬೇಕು? ಮೂರು ಲೋಕದಲ್ಲೂ ನಿನ್ನನ್ನುಳಿದು ಬೇರಾರಿಗೂ ನಾನು ಪತ್ನಿ ಯಾಗುವುದಿಲ್ಲ.

೬೯. ಆ ಜೀವವು ಈ ರೀತಿ ನುಡಿದು ಮೌನವನ್ನು ತಾಳಿತು. ಆಗ ಆ ಮುನಿಯು ದುಃಖದಿಂದ ಹತಚೇತನನಾಗಿ ಮೂರ್ಛೆಗೊಂಡನು.

೭೦. ಆತ್ಮಾರಾಮನೂ, ಮಹಾಜ್ಞಾನಿಯೂ ಆದ ಆ ಮುನಿಯೂ ಮೂರ್ಛೆಗೊಂಡುದನ್ನು ನೋಡಿದರೆ, ರಸಿಕರಿಗೆ ಪತ್ನೀವಿಯೋಗವು ಎಲ್ಲ ದುಃಖಕ್ಕೂ ಮಿಗಿಲಾದುದೆಂದು ತಿಳಿಯುತ್ತದೆ.

ಕ್ಷಣೇನ ಚೇತನಾಂ ಪ್ರಾಪ್ಯ ಪ್ರಾಣಾಂಸ್ತ್ಯಕ್ತುಂ ಸಮುದ್ಯತಃ ।
ತತ್ರ ಯೋಗಾಸನಂ ಕೃತ್ವಾ ಚಕಾರ ವಾಯುಧಾರಣಂ ॥ ೭೧ ॥

ಏತಸ್ಮಿನ್ನಂತರೇ ತತ್ರ ಜಗಾಮ ಬ್ರಾಹ್ಮಣೋಽರ್ಭಕಃ ।
ದಂಡೀ ಛತ್ರೀ ರಕ್ತವಾಸಾ ಬಿಭ್ರತ್ತಿಲಕಮುತ್ತಮಂ ॥ ೭೨ ॥

ಸಸ್ಮಿತಃ ಶ್ಯಾಮವರ್ಣಶ್ಚ ಪ್ರಜ್ವಲನ್ಬ್ರಹ್ಮತೇಜಸಾ ।
ವಯಸಾಽತಿಶಿಶುಃ ಶಾಂತೋ ಜ್ಞಾನೀ ವೇದವಿದಾಂ ವರಃ ॥ ೭೩ ॥

ದೃಷ್ಟ್ವಾ ತಂ ಸಂಭ್ರಮೇಣೈವ ದುರ್ವಾಸಾಃ ಪ್ರಣನಾಮ ಹ ।
ವಾಸಯಾಮಾಸ ತತ್ರೈವ ಪೂಜಯಾಮಾಸ ಭಕ್ತಿತಃ ॥ ೭೪ ॥

ಉವಾಚ ಬ್ರಾಹ್ಮಣವಟುರ್ದತ್ವಾ ತಸ್ಮೈ ಸದಾಶಿಷಂ ।
ತದ್ದರ್ಶನಾದಾಶಿಷಾ ಚ ಸರ್ವಂ ದುಃಖಂ ಗತಂ ಮುನೇ ॥ ೭೫ ॥

---

೭೧. ಮರುಕ್ಷಣದಲ್ಲಿಯೇ ಚೇತನವನ್ನು ಹೊಂದಿ ಪ್ರಾಣಬಿಡಲು ಸಿದ್ಧನಾದನು. ಕೂಡಲೇ ಯೋಗಾಸನವನ್ನು ಹಾಕಿ ಪ್ರಾಣಾಯಾಮಕ್ರಮದಿಂದ ವಾಯುನಿರೋಧಮಾಡಿದನು.

೭೨. ಈ ಸಮಯಕ್ಕೆ ಸರಿಯಾಗಿ ಅಲ್ಲಿಗೆ ಬ್ರಹ್ಮನು ವಟುರೂಪಧಾರಿಯಾಗಿ ದಂಡ ಮತ್ತು ಛತ್ರಿಗಳನ್ನು ಹಿಡಿದು ಕೆಂಪುಬಟ್ಟೆಯನ್ನುಟ್ಟು ಉಜ್ವಲವಾದ ತಿಲಕವನ್ನು ಧರಿಸಿ ಬಂದನು.

೭೩. ಶ್ಯಾಮವರ್ಣನೂ, ಬ್ರಹ್ಮತೇಜಸ್ಸಿನಿಂದ ಪ್ರಜ್ವಲಿಸುವವನೂ, ಶಾಂತನೂ, ದಿವ್ಯಜ್ಞಾನಿಯೂ, ಸ್ಮಿತಮುಖನೂ ಆದ ಆ ಬಾಲಕನು ವೇದವೇತ್ತ ಗಳಲ್ಲಿ ಅಗ್ರೇಸರನಾಗಿದ್ದನು.

೭೪. ಆ ಬಾಲಕನನ್ನು ನೋಡಿ ದೂರ್ವಾಸಮುನಿಯು ಸಂಭ್ರಮದಿಂದ ವಂದಿಸಿ, ಅಲ್ಲಿಯೇ ಆಸನವನ್ನು ಕೊಟ್ಟು ಕುಳ್ಳಿರಿಸಿ ಭಕ್ತಿಯಿಂದ ಪೂಜಿಸಿದನು.

೭೫. ಆ ಬ್ರಾಹ್ಮಣವಟುವು ಆ ಮುನಿಗೆ ಶುಭಕರವಾದ ಆಶೀರ್ವಾದ ಮಾಡಿದನು ಅವನ ದರ್ಶನ ಮತ್ತು ಆಶೀರ್ವಾದಗಳಿಂದ ಮುನಿಯ ದುಃಖ ವೆಲ್ಲವೂ ದೂರವಾಯಿತು.

ಶಿಶುರೂಪಂ ಕ್ಷಣಂ ಸ್ಥಿತ್ವಾ ತಮುವಾಚ ವಿಚಕ್ಷಣಃ ।
ಪೀಯೂಷತುಲ್ಯಂ ನೀತ್ಯೋಘಂ ನೀತಿಶಾಸ್ತ್ರವಿಶಾರದಃ ॥ ೭೬ ॥

॥ ಶಿಶುರುವಾಚ ॥

ಸರ್ವಂ ಜಾನಾಸಿ ಸರ್ವಜ್ಞ ಗುರೋರ್ಮಂತ್ರಪ್ರಸಾದತಃ ।
ಕಿಂ ತತ್ತ್ವಂ ತ್ವಾಮಹಂ ವಿಪ್ರ ಪೃಚ್ಛಾಮಿ ಶೋಕಕಾತರಂ ॥ ೭೭ ॥

ಬ್ರಾಹ್ಮಣಾನಾಂ ತಪೋ ಧರ್ಮಸ್ತಪಃ ಸಾಧ್ಯಂ ಜಗತ್ತ್ರಯಂ ।
ಸ್ವಧರ್ಮಂ ವೈ ಪರಿತ್ಯಜ್ಯ ಕಿಮಿದಾನೀಂ ಕರೋಷಿ ಭೋಃ ॥ ೭೮ ॥

ಕಾ ಕಸ್ಯ ಪತ್ನೀ ಕಃ ಕಾಂತಃ ಕಸ್ಯ ವಾ ಭುವನತ್ರಯೇ ।
ಮೂರ್ಖಾಣಾಂ ವಂಚನಾಂ ಕರ್ತುಂ ಕರೋತಿ ಮಾಯಯಾ ಹರಿಃ ॥ ೭೯ ॥

---

೭೬. ಶಿಶುಸ್ವರೂಪನಾದ ಪರಮಾತ್ಮನು ಕ್ಷಣಕಾಲ ಸುಮ್ಮನಿದ್ದು, ಕುಶಲತೆಯಿಂದ ಅಮೃತೋಪಮವಾದ ನೀತಿವಾಕ್ಯಗಳನ್ನು ಹೇಳಲುಪಕ್ರಮಿಸಿದನು.

೭೭. ಶಿಶು :— ಎಲೈ ಸರ್ವಜ್ಞನಾದ ಮಹರ್ಷಿಯೇ, ಗುರುವಿನ ಮಂತ್ರೋಪದೇಶದ ಪ್ರಭಾವದಿಂದ ನೀನು ಎಲ್ಲವನ್ನೂ ತಿಳಿದೇ ಇದ್ದೀಯೆ. ಈಗ ಶೋಕಪೀಡಿತನಾದ ನಿನ್ನನ್ನು ಕುರಿತು ಕೇಳಬೇಕಾದ ತತ್ವವಾವುದಿದೆ?

೭೮. ಬ್ರಾಹ್ಮಣರಿಗೆ ತಪಸ್ಸೇ ಮುಖ್ಯವಾದ ಧರ್ಮವು. ತಪಸ್ಸಿನಿಂದ ಮೂರು ಲೋಕವೂ ಕೈಸೇರುವುದು. ನಿನ್ನ ಧರ್ಮವನ್ನು ಬಿಟ್ಟು ಈಗ ನೀನು ಮಾಡುತ್ತಿರುವುದೇನು.?

೭೯. ಪ್ರಪಂಚದಲ್ಲಿ ಯಾರಿಗೆ ಯಾವಳು ಹೆಂಡತಿ. ಯಾವಳಿಗೆ ಯಾರ ಗಂಡ? ಶ್ರೀಹರಿಯು ಮಾಯಾಜಾಲವನ್ನೊಡ್ಡಿ ಮೂರ್ಖರನ್ನೆಲ್ಲ ಪತಿಪತ್ನಿಯರ ಸಂಬಂಧ ದಿಂದ ವಂಚನೆಗೀಡುಮಾಡುತ್ತಾನೆ.

ಮಿಥ್ಯಾ ಪತ್ನೀ ತವೇಯಂ ಚ ಕ್ಷಣಾತ್ತೇನ ಗತಾಧುನಾ ।
ನ ಹಿ ಸತ್ಯಮದೃಶ್ಯಂ ಚ ಮಿಥ್ಯಾ ಯತ್ರಾಚಿರ ಸ್ಥಿತಿಃ ॥ ೮೦ ॥

ಏಕಾನಂಶಾ ಚ ಭಗಿನೀ ವಸುದೇವಸುತಾ ಹರೇಃ ।
ಪಾರ್ವತ್ಯಂಶಸಮುದ್ಭೂತಾ ಸುಶೀಲಾ ಚಿರಜೀವಿನೀ ॥ ೮೧ ॥

ಕಲ್ಪೇ ಕಲ್ಪೇ ಸುಂದರೀ ಸಾ ತವ ಪತ್ನೀ ಭವಿಷ್ಯತಿ ।
ಮನೋ ದೇಹಿ ತಪಸ್ಯಾಯಾಂ ಮುದಾ ಕತಿಪಯಂ ದಿನಂ ॥ ೮೨ ॥

ಕಂದಲೀ ಕದಲೀಜಾತಿರ್ಭವಿಷ್ಯತಿ ಮಹೀತಲೇ ।
ಶುಭದಾ ಫಲದಾ ಕಾಂತಾ ಸಕೃತ್ಪ್ರಸೂತಾ ಸದುರ್ಲಭಾ ॥ ೮೩ ॥

ಕಲ್ಪಾಂತರೇ ಶಾಂತರೂಪಾ ತವ ಪತ್ನೀ ಭವಿಷ್ಯತಿ ।
ಅತ್ಯುಚ್ಛ್ರಿತಸ್ಯ ದಮನಮುಚಿತಂ ಚ ಶ್ರುತೌ ಶ್ರುತಂ ॥ ೮೪ ॥

---

೮೦. ಈ ಪತ್ನಿಯು ನಿನಗೆ ಮಿಥ್ಯಾರೂಪಳಾದುದರಿಂದಲೇ ಕ್ಷಣಮಾತ್ರದಲ್ಲಿ ನಿನ್ನನ್ನು ಬಿಟ್ಟು ಹೊರಟು ಹೋದಳು. ಸತ್ಯವಾದುದು ಎಂದಿಗೂ ಕಣ್ಮರೆಯಾಗುವುದಿಲ್ಲ. ಸುಳ್ಳಾದುದು ಸ್ಥಿರವಾಗಿ ನಿಲ್ಲುವುದಿಲ್ಲ.

೮೧. ಪಾರ್ವತಿಯ ಅಂಶಸಂಭೂತಳಾದ ಮಾಯೆಯು ಸುಶೀಲೆಯೂ, ವಸುದೇವಪುತ್ರಿಯೂ, ಶ್ರೀಹರಿಯ ಸಹೋದರಿಯೂ ಎನಿಸಿ ಚಿರಜೀವಿನಿಯಾಗಿದ್ದಾಳೆ.

೮೨. ಆ ಸುಂದರಿಯು ಪ್ರತಿಯೊಂದು ಕಲ್ಪದಲ್ಲಿಯೂ ನಿನ್ನ ಪತ್ನಿಯಾಗುವಳು. ಸಂತೋಷದಿಂದ ಕೆಲವು ದಿನಗಳ ವರೆಗೆ ತಪಸ್ಸಿನಲ್ಲಿ ಮನಸ್ಸಿಡು.

೮೩. ಕಂದಲಿಯು ಭೂಮಂಡಲದಲ್ಲಿ ಕದಳೀ (ಬಾಳೆ) ಜಾತಿಯಲ್ಲಿ ಹುಟ್ಟಿ ಒಂದೇ ಸಾರಿ ಒಳ್ಳೆಯ ಫಲವನ್ನು ಕೊಟ್ಟು ಮರೆಯಾಗುವಳು.

೮೪. ಕಲ್ಪಾಂತರದಲ್ಲಿ ಶಾಂತಸ್ವರೂಪಳಾಗಿ ನಿನ್ನ ಪತ್ನಿಯಾಗುವಳು. ಅತ್ಯುಚ್ಛ್ರಿತರಾದವರನ್ನು ದಮನಮಾಡಬೇಕೆಂದು ಶ್ರುತ್ಯುಕ್ತವಾಗಿದೆ.

ಇತ್ಯೇವಮುಕ್ತ್ವಾ ಶೀಘ್ರಂ ಚ ವಿಪ್ರರೂಪೀ ಜನಾರ್ದನಃ ।
ದತ್ವಾ ಜ್ಞಾನಂ ಚ ವಿಪ್ರಾಯ ಸೋಽಂತರ್ಧಾನಂ ಚಕಾರ ಹ ॥ ೮೫ ॥

ಮುನಿಃ ಸರ್ವಭ್ರಮಂ ತ್ಯಕ್ತ್ವಾ ತಪಸ್ಯಾಯೋಂ ಮನೋ ದಧೇ ।
ಕಂದಲೀ ಕದಲೀಜಾತಿರ್ಬಭೂವ ಧರಣೀತಲೇ ॥ ೮೬ ॥

ದೈತ್ಯಸ್ತಾಲವನಂ ಗತ್ವಾ ಬಭೂವ ಗರ್ದಭಾಕೃತಿಃ ।
ತಿಲೋತ್ತಮಾ ಬಾಣಪುತ್ರೀ ಬಭೂವ ಸಮಯೇ ಮುನೇ ॥ ೮೭ ॥

ದೈತ್ಯೇಂದ್ರೋ ವಿಷ್ಣುಚಕ್ರೇಣ ಪ್ರಾಣಾಂಸ್ತ್ಯಕ್ತ್ವಾ ಸುವಾಂಛಿತಂ ।
ಸಂಪ್ರಾಪ್ಯ ಚರಣಾಂಭೋಜಂ ಮುನೇರಪಿ ಸುದುರ್ಲಭಂ ॥ ೮೮ ॥

ಕಾಲೇ ತಿಲೋತ್ತಮಾ ಭೂತ್ವಾ ಜಗಾಮ ಸ್ವಾಲಯಂ ಪುನಃ ।
ಕೃಷ್ಣಪೌತ್ರಾಲಿಂಗನೇನ ಪರಿಪೂರ್ಣಮನೋರಥಾ ॥ ೮೯ ॥

---

೮೫. ವಿಪ್ರರೂಪಿಯಾದ ಆ ಜನಾರ್ದನನು ಈ ರೀತಿಯಾಗಿ ಆ ಮಹರ್ಷಿಗೆ ಜ್ಞಾನೋಪದೇಶಮಾಡಿ ಅಂತರ್ಧಾನಹೊಂದಿದನು.

೮೬. ಅನಂತರ ದೂರ್ವಾಸಮುನಿಯು ಇವೆಲ್ಲವೂ ಭ್ರಾಂತಿಯೆಂದು ತಿಳಿದು ತಪಸ್ಸಿನಲ್ಲಿ ಮನಸ್ಸಿಟ್ಟನು. ಇತ್ತ ಕಂದಲಿಯು ಭೂಮಿಯಲ್ಲಿ ಕದಳೀಜಾತಿಯಾಗಿ ಹುಟ್ಟಿದಳು.

೮೭. ಇತ್ತ ಆ ದೈತ್ಯನು ತಾಳೆಯವನಕ್ಕೆ ಹೋಗಿ ಗರ್ದಭಾಕಾರವನ್ನು ದನು. ತಿಲೋತ್ತಮೆಯು ಕಾಲಾನುಗುಣವಾಗಿ ಬಾಣಾಸುರನ ಪುತ್ರಿಯಾದಳು.

೮೮. ಅನಂತರ ದೈತ್ಯೇಂದ್ರನು ವಿಷ್ಣುವಿನ ಚಕ್ರಾಘಾತದಿಂದ ತನ್ನ ಪ್ರಾಣಗಳನ್ನು ಕಳೆದುಕೊಂಡು ಮುನಿಗಳಿಗೂ ದುರ್ಲಭವಾದ ವಾಂಛಿತಾರ್ಥವನ್ನು (ಪರಮಾತ್ಮನ ಚರಣಕಮಲವನ್ನು) ಹೊಂದಿದನು.

೮೯. ತಿಲೋತ್ತಮೆಯೂ ಕೂಡ ಕಾಲಾನುಕಾಲದಲ್ಲಿ ಶ್ರೀಕೃಷ್ಣನ ಪೌತ್ರನಾದ ಅನಿರುದ್ಧನನ್ನು ಆಲಿಂಗಿಸಿಕೊಂಡು ಪರಿಪೂರ್ಣಮನೋರಥಳಾಗಿ, ಪುನಃ ತನ್ನ ಹಿಂದಿನ ರೂಪವನ್ನು ಹೊಂದಿ ತನ್ನ ಮನೆಗೆ ಹೋದಳು.

ಇತ್ಯೇವಂ ಕಥಿತಂ ಶ್ರುತ್ವಾ ಶ್ರೀಕೃಷ್ಣಾಖ್ಯಾನಮುತ್ತಮಂ ।
ಪದೇ ಪದೇ ಸುಂದರಂ ಚ ಕಿಂ ಭೂಯಃ ಶ್ರೋತುಮಿಚ್ಛಸಿ　　॥ ೯೦ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ಶ್ರೀಕೃಷ್ಣಜನ್ಮಖಂಡೇ
ನಾರಾಯಣನಾರದಸಂವಾದೇ ತಾಲಫಲಭಕ್ಷಣಪ್ರಸಂಗೇ
ಬಲಿಪುತ್ರಮೋಕ್ಷೋ ನಾಮ
ಚತುರ್ವಿಂಶೋಽಧ್ಯಾಯಃ

---

೯೦. ಅತ್ಯುತ್ತಮವಾದ ಶ್ರೀಕೃಷ್ಣನ ವಿಚಿತ್ರಕಥೆಯನ್ನು ಎಷ್ಟು ಕೇಳಿದರೂ ತೃಪ್ತಿಯಾಗುವುದಿಲ್ಲ. ಮುಂದೆ ಇನ್ನೇನು ಕೇಳಲು ಬಯಸುತ್ತೀಯೆ.

ಇಲ್ಲಿಗೆ ಬ್ರಹ್ಮವೈವರ್ತ ಮಹಾಪುರಾಣದ ಶ್ರೀಕೃಷ್ಣಜನ್ಮಖಂಡದಲ್ಲಿ ತಾಲಫಲಭಕ್ಷಣ
ಸಂದರ್ಭದಲ್ಲಿ ಬಲಿಪುತ್ರನಿಗೆ ಮೋಕ್ಷವುಂಟಾಮದನ್ನು ತಿಳಿಸುವ
ಇಪ್ಪತ್ತನಾಲ್ಕನೆಯ ಅಧ್ಯಾಯವು ಮುಗಿಮದು.

ಇಪ್ಪತ್ತನಾಲ್ಕನೆಯ ಅಧ್ಯಾಯದ ಸಾರಾಂಶ

ಸಾಹಸಿಕ ಮತ್ತು ತಿಲೋತ್ತಮೆಯರ ಶೃಂಗಾರವನ್ನು ನೋಡಿ ಚಂಚಲ ಮನಸ್ಕನಾದ ದೂರ್ವಾಸಮುನಿಯು ಮನಸ್ಸಿನಲ್ಲಿಯೇ ಕಾಮಸುಖವನ್ನು ಬಯಸುತ್ತ ಕುಳಿತಿದ್ದನು. ಆ ಸಮಯಕ್ಕೆ ಸರಿಯಾಗಿ ಔರ್ವನೆಂಬೊಬ್ಬ ಋಷಿಯು ತನ್ನ ಮಗಳಾದ ಕಂದಳೀ ಎಂಬಾಕೆಯನ್ನು ಕರೆತಂದು ದೂರ್ವಾಸನ ಮುಂದೆ ನಿಲ್ಲಿಸಿ 'ವಾಗ್ದುಷ್ಟಳಾದರೂ ತ್ರಿಲೋಕಸುಂದರಿಯಾದ ಈಕೆಯನ್ನು ನೀನು ವರಿಸು' ಎಂದು ಹೇಳಿದನು. ಆಕೆಯು ನೂರುತಪ್ಪು ಮಾಡುವವರೆಗೂ ಸಹಿಸಿಕೊಂಡಿದ್ದು ನೂರೊಂದನೆಯ ತಪ್ಪುಮಾಡಿದಾಗ ಶಾಪಕೊಡುವುದಾಗಿ ಹೇಳಿ ದೂರ್ವಾಸ ಮುನಿಯು ತಾನಾಗಿಬಂದ ಆ ಕನ್ಯೆಯನ್ನು ವರಿಸಿ ಆಕೆಯೊಡನೆ ಸುಖಸಂಭೋಗ ನಿರತನಾಗಿದ್ದನು. ಈ ರೀತಿ ಕೆಲವು ಕಾಲ ಕಳೆಯಿತು.

ಕಂದಳಿಯು ಕಾಲಕ್ರಮೇಣ ಪತಿಯವಿಷಯವಾಗಿ ದುಷ್ಟನುಡಿಗಳನ್ನಾಡುತ್ತ ನೂರು ತಪ್ಪುಗಳನ್ನು ಮಾಡಿದಳು. ನೂರೊಂದನೆಯ ತಪ್ಪೂ ಆಯಿತು ಅಲ್ಲಿಯವರೆಗೂ ಸಹಿಸಿಕೊಂಡಿದ್ದ ದೂರ್ವಾಸನು ಕೋಪವನ್ನು ತಡೆಯಲಾರದೆ ಆಕೆಯನ್ನು ಬೂದಿಯಾಗುವಂತೆ ಶಪಿಸಿದನು. ಕೂಡಲೇ ಕಂದಳಿಯ ಪಾಂಚಭೌತಿಕ ಶರೀರವು ಬೂದಿಯಾಯಿತು. ಆಕೆಯ ಜೀವವು ಆಕಾಶದಲ್ಲಿ ನಿಂತು ದೂರ್ವಾಸಮುನಿಯನ್ನು ಕುರಿತು ಕೆಲವು ನೀತಿವಚನಗಳನ್ನು ಹೇಳಿ, ತಾನು ಪತಿಯ ವಿರಹವನ್ನು ಸಹಿಸಲಾರೆನೆಂದು ಹೇಳಿತು. ಅದನ್ನು ಕೇಳಿ ದೂರ್ವಾಸನೂ ವಿರಹದುಃಖದಿಂದ ಮೂರ್ಛಿತನಾದನು. ಆ ಸಮಯಕ್ಕೆ ಸರಿಯಾಗಿ ಬ್ರಹ್ಮನು ವಟುರೂಪದಿಂದ ಅಲ್ಲಿಗೆ ಬಂದು ದೂರ್ವಾಸನನ್ನು ಸಮಾಧಾನಗೊಳಿಸಿ ಪುನಃ ತಪಸ್ಸಿನಲ್ಲಿ ತೊಡಗಿಸಿ ಕಂದಳಿಯು ಭೂಲೋಕದಲ್ಲಿ ಕದಳೀವೃಕ್ಷವಾಗಿ ಹುಟ್ಟುವಂತೆಯೂ, ಕಲ್ಪಾಂತರದಲ್ಲಿ ಶಾಂತಸ್ವರೂಪಳಾಗಿ ದೂರ್ವಾಸನ ಪತ್ನಿಯಾಗುವಂತೆಯೂ ಅನುಗ್ರಹಿಸಿ ಅಂತರ್ಧಾನಹೊಂದಿದನು.

—॥ ಓಂ ॥—

—॥ ಶ್ರೀ ಗಣೇಶಾಯ ನಮಃ ॥—

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಶ್ರೀಕೃಷ್ಣಜನ್ಮಖಂಡೇ

॥ ಪಂಚವಿಂಶೋಽಧ್ಯಾಯಃ ॥

॥ ನಾರದ ಉವಾಚ ॥

ಶ್ರುತಂ ಕಿಮದ್ಭುತಂ ಬ್ರಹ್ಮನ್ ಹರೇಶ್ಚರಿತಮಂಗಲಂ ।
ವಿಶೇಷತಸ್ತ್ವನ್ಮುಖೇ ಹ್ಯತೀವ ಸುಮನೋಹರಂ ॥ ೧ ॥

ಮೃತಾಯಾಂ ಮುನಿಕನ್ಯಾಯಾಂ ಶಾಪಾದ್ದುರ್ವಾಸಸೋ ಮುನೇಃ ।
ಕಿಂ ಚಕಾರ ಸಮಾಗತ್ಯ ತನ್ಮೇ ಬ್ರೂಹಿ ತಪೋಧನ ॥ ೨ ॥

॥ ನಾರಾಯಣ ಉವಾಚ ॥

ಸರಸ್ವತೀ ನದೀತೀರೇ ತಪಸ್ಯಾಂ ಕುರ್ವತೋ ಮುನೇಃ ।
ಪಪಾತ ಧೌತಮೂರ್ಧ್ವಾಚ್ಚ ಧಾರ್ಯಮಾಣಂ ಚ ವಾಯುನಾ ॥ ೩ ॥

ಇಪ್ಪತ್ತೈದನೆಯ ಅಧ್ಯಾಯವು

೧. ನಾರದನು ಹೇಳಿದನು :— ಎಲೈ ಋಷಿವರ್ಯನೇ, ಶ್ರೀಹರಿಯ ಅತ್ಯದ್ಭುತವಾದ ಮಂಗಳ ಚರಿತ್ರೆಯನ್ನು ಕೇಳಿದೆನು. ಅವರಲ್ಲಿಯೂ ನಿನ್ನ ಬಾಯಿಂದ ಬರುವ ಆ ಚರಿತ್ರೆಯು ಬಹಳ ಮನೋಹರವಾಗಿರುವುದು.

೨. ಎಲೈ ತಪೋಧನನೇ, ದೂರ್ವಾಸನ ಶಾಪದಿಂದ ಆ ಮುನಿ ಕನ್ಯೆಯು ಮೃತಳಾದನಂತರ ಆ ಔರ್ವಮುನಿಯು ಮುಂದೇನು ಮಾಡಿದನೆಂಬುವನ್ನೀಗ ನನಗೆ ವಿವರಿಸು.

೩. ಶ್ರೀನಾರಾಯಣ :— ಇತ್ತ ಔರ್ವಮುನಿಯು ಸರಸ್ವತೀನದೀತೀರದಲ್ಲಿ ತಪಸ್ಸು ಮಾಡುತ್ತಿರಲಾಗಿ ಅವನ ಉತ್ತರೀಯವು ಗಾಳಿಯಿಂದ ಮೇಲಕ್ಕೆ ಹಾರಿ ಕೆಳಕ್ಕೆ ಬಿದ್ದಿತು.

ಪೃಥಿವ್ಯಾಂ ಪತಿತೇ ವಸ್ತ್ರೇ ತ್ಯಕ್ತ್ವಾ ತಪಸ್ತ್ವಂ ಮುನೀಶ್ವರಃ ।
ಧ್ಯಾನೇನ ಬುಬುಧೇ ಸರ್ವಂ ಕನ್ಯಾಸಂಬಂಧಸಂಕಟಂ ॥ ೪ ॥

ಜಗಾಮ ಶೋಕಾವಿಷ್ಟೋಽಪಿ ತೂರ್ಣಂ ಜಾಮಾತುರಾಶ್ರಮಂ ।
ಸಿಷೇಚ ಪೃಥಿವೀರೇಣೂಂಶ್ಚಕ್ಷುರ್ನಯನಬಿಂದುನಾ ॥ ೫ ॥

ಗತ್ವಾಽಽಲಯಸಮೀಪಂ ಚ ವಿಪ್ರಃ ಕಾತರಮಾನಸಃ ।
ಹೇ ವತ್ಸೇ ಕಂದಲೀತ್ಯೇವಮುವಾಚ ಚ ಪುನಃ ಪುನಃ ॥ ೬ ॥

ಶ್ವಶುರಸ್ಯ ಸ್ವರಂ ಶ್ರುತ್ವಾ ದುರ್ವಾಸಾ ಭಯವಿಹ್ವಲಃ ।
ಬಹಿರ್ಬಭೂವ ಶೀಘ್ರಂ ಚ ಪಪಾತ ಚರಣಾಂಬುಜೇ ॥ ೭ ॥

ಪ್ರಣಮ್ಯ ಶ್ವಶುರಂ ಶೋಕಾದ್ವಿಲಲಾಪ ಭೃಶಂ ಪುನಃ ।
ಪ್ರವೃತ್ತಿಂ ಕಥಯಾಮಾಸ ಮೂಲತೋ ಮುನಿಸತ್ತಮಂ ॥ ೮ ॥

---

೪. ಈ ರೀತಿ ಭೂಮಿಯಮೇಲೆ ತನ್ನ ವಸ್ತ್ರವು ಬಿದ್ದುದನ್ನು ನೋಡಿ ಆ ಮುನೀಶ್ವರನು ಧ್ಯಾನಶಕ್ತಿಯಿಂದ ತನ್ನ ಕನ್ಯೆಗೆ ಒದಗಿದ ಸಂಕಟಗಳನ್ನು ತಿಳಿದುಕೊಂಡು ತಪಸ್ಸನ್ನು ಬಿಟ್ಟಿದ್ದನು.

೫. ಕೂಡಲೇ ಶೋಕವಿಹ್ವಲನಾದ ಆ ಮುನಿಯು ಜಾಗ್ರತೆಯಾಗಿ ತನ್ನ ಅಳಿಯನ ಆಶ್ರಮಕ್ಕೆ ಬಂದು ತನ್ನ ಕಣ್ಣೀರುಗಳಿಂದ ಆ ಭೂಮಿಯ ಧೂಳನ್ನೆಲ್ಲ ಕೆಸರು ಮಾಡಿದನು

೬. ಅನಂತರ ಚಿಂತಾಕ್ರಾಂತನಾದ ಆ ಮುನಿಯು ದೂರ್ವಾಸನ ಪರ್ಣಶಾಲೆಯ ಬಳಿಗೆ ಬಂದು " ಎಲೌ ವತ್ಸೆ, ಕಂದಲೀ, ಎಲ್ಲಿದ್ದೀಯೆ " ಎಂದು ಮತ್ತೆ ಮತ್ತೆ ಕೂಗಿದನು

೭. ಇದು ತನ್ನ ಮಾವನ ಧ್ವನಿಯೆಂದು ತಿಳಿದು ದೂರ್ವಾಸನು ಭಯಭ್ರಾಂತನಾಗಿ, ಕೂಡಲೇ ಹೊರಕ್ಕೆಬಂದು ಅವನ ಕಾಲುಗಳ ಮೇಲೆ ಸಾಷ್ಟಾಂಗವೆರಗಿದನು.

೮. ಈ ರೀತಿ ದೂರ್ವಾಸಮಹರ್ಷಿಯು ಮಾವನಿಗೆ ನಮಸ್ಕಾರಮಾಡಿ ಪುನಃ ಪುನಃ ಗೋಳಿಡುತ್ತ ಮೊದಲಿನಿಂದಲೂ ನಡೆದ ಸಮಾಚಾರವನ್ನೆಲ್ಲ ಅವನಿಗೆ ತಿಳಿಸಿದನು.

ಶ್ರುತ್ವಾ ವಾರ್ತಾಂ ಶುಚಾऽऽವಿಷ್ಟಃ ಪಪಾತ ಧರಣೀತಲೇ ।
ಮೂರ್ಛಾಮಾಪ ಮಹಾಜ್ಞಾನೀ ನಿಶ್ಚೇಷ್ಟೋ ಹಿ ಯಥಾ ಮೃತಃ ॥ ೯ ॥

ಮೃತಂ ದೃಷ್ಟ್ವಾ ಸ ದುರ್ವಾಸಾ ಮೇನೇ ಮನಸಿ ಸಂಕಟಂ ।
ಚೇತನಾಂ ಕಾರಯಾಮಾಸ ಪ್ರಯತ್ನೇನ ಮಹಾಮುನೇಃ ॥ ೧೦ ॥

ಸಂಪ್ರಾಪ್ಯ ಚೇತನಾಂ ಶೀಘ್ರಮುವಾಚ ತಂ ಪುರಃ ಸ್ಥಿತಂ ।
ಜಾಮಾತರಂ ಶೋಕಯುತಂ ಭೀತಂ ಪ್ರಣತಕಂಧರಂ ॥ ೧೧ ॥

ಮಹಾಶೋಕಾದಶ್ರುಪೂರ್ಣಂ ರಕ್ತಪಂಕಜಲೋಚನಂ ।
ಕೋಪಾತ್ಕಂಪಿತವಾನ್ ಶಶ್ವತ್ ಸಂತ್ರಸ್ತಃ ಸ್ಫುರಿತಾಧರಃ ॥ ೧೨ ॥

॥ ಔರ್ವ ಉವಾಚ ॥

ಅಯೇ ಬ್ರಹ್ಮನ್ನತ್ರಿವಂಶ ಪೌತ್ರಸ್ತ್ವಂ ಜಗತೀಪತೇಃ ।
ಸ್ವಲ್ಪದೋಷೇ ಬಹುತರಃ ಕೃತೋದಂಡಸ್ತ್ವಯಾ ಕಥಂ ॥ ೧೩ ॥

---

೯. ಆ ಸಮಾಚಾರವನ್ನೆಲ್ಲ ಕೇಳಿ, ಶೋಕಾಕ್ರಾಂತನಾದ ಔರ್ವನು ಭೂಮಿಯ ಮೇಲೆ ಬಿದ್ದು ಮೂರ್ಛೆಗೊಂಡು ಸತ್ತ ಹೆಣದಂತೆ ನಿಶ್ಚೇಷ್ಟನಾದನು.

೧೦. ಇಂತು ಸಂಕಟಗೊಂಡು ಮೂರ್ಛಿತನಾಗಿರುವ ತನ್ನ ಮಾವನನ್ನು ನೋಡಿ, ದೂರ್ವಾಸನು ಪ್ರಯತ್ನಪೂರ್ವಕವಾಗಿ ಶೈತ್ಯೋಪಚಾರಗಳನ್ನು ಮಾಡಿ ಮೂರ್ಛೆ ತಿಳಿಸಿದನು.

೧೧. ಅನಂತರ ಸಚೇತನನಾದ ಆ ಮುನಿಯು ತನ್ನ ಮುಂದೆ ಶೋಕ ಭೀತಿಗಳಿಂದ ತಲೆಬಾಗಿ ನಿಂತಿರುವ ಅಳಿಯನಾದ ದೂರ್ವಾಸನನ್ನು ಕುರಿತಿಂತೆಂದನು.

೧೨. ಅತಿದುಃಖ ಮತ್ತು ಕೋಪದಿಂದ ಕಣ್ಣುಗಳಲ್ಲಿ ಕೆಂಡವನ್ನೂ, ಬಿಸಿಯಾದ ಕಣ್ಣೀರನ್ನೂ ಕಾರುತ್ತಿರುವ ಆ ಔರ್ವನ ತುಟಿಗಳೂ, ಅಂಗಾಂಗಗಳೂ ನಡುಗಲಾರಂಭಿಸಿದವು.

೧೩. ಔರ್ವ :—ಎಲೈ ಅತ್ರಿವಂಶೋದ್ಭವನಾದ ಮಹರ್ಷಿಯೇ, ನೀನು ಜಗತ್ಪತಿಯಾದ ಬ್ರಹ್ಮನ ಪೌತ್ರನಾಗಿದ್ದೀಯೆ. ಹೀಗಿರುವಾಗ ನನ್ನ ಮಗಳ ಸಣ್ಣದೊಂದು ತಪ್ಪಿಗೆ ಇಷ್ಟು ದೊಡ್ಡ ಶಿಕ್ಷೆಯನ್ನು ಹೇಗೆ ವಿಧಿಸಿದೆ?

ತ್ವಜ್ಜನ್ಮ ಶಂಕರಾಂಶೇನ ಶಿಷ್ಯಸ್ತಸ್ಯ ಜಗದ್ಗುರೋಃ ।
ವೇದವೇದಾಂಗವಿಜ್ಞಶ್ಚ ಸರ್ವಜ್ಞೋ ಗುಣವಾನ್ಸ್ವಯಂ ॥ ೧೪ ॥

ಅನಸೂಯಾ ಮಹಾಸಾಧ್ವೀ ಕಮಲಾಂಶಾ ತವ ಪ್ರಸೂಃ ।
ನ ಜಾನೇ ಕೇನ ದೋಷೇಣ ತವಚೈತಾದೃಶೀ ಮತಿಃ ॥ ೧೫ ॥

ಗುಣವಾನ್ ಜನಕೋ ಯಸ್ಯ ಮಾತಾ ಗುಣವತೀ ಸತೀ ।
ತಯೋಃ ಪುತ್ರೋ ದಯಾಹೀನೋ ಗತಿಃ ಸೂಕ್ಷ್ಮಾ ಶ್ರುತೇರಹೋ ॥ ೧೬ ॥

ಮಮ ಪ್ರಾಣಾಧಿಕಾ ಕನ್ಯಾ ಮುದಾ ತ್ವಯಿ ಸಮರ್ಪಿತಾ ।
ಮಹಾಗುಣಾನ್ವಿತಾ ಸ್ವಲ್ಪದೋಷೇಣ ಪರಿಮಿಶ್ರಿತಾ ॥ ೧೭ ॥

ವಾಗ್ದುಷ್ಟಾಯಾಶ್ಚ ದಂಡೋ ಹಿ ಪರಿತ್ಯಾಗಃ ಶ್ರುತೌ ಶ್ರುತಃ ।
ತ್ವಯಾ ಕ್ರೋಧಾದ್ಯದಿ ತ್ಯಕ್ತಾ ಪಿತ್ರಾ ಯತ್ನೇನ ಪಾಲಿತಾ ॥ ೧೮ ॥

---

೧೪. ನೀನು ಶಂಕರನ ಅಂಶಾವತಾರಿಯಾಗಿರುವುದಲ್ಲದೆ ಆ ಜಗದ್ಗುರುವಿನ ಶಿಷ್ಯನೂ ಆಗಿದ್ದೀಯೆ ವೇದವೇದಾಂಗಪಾರಂಗತನೂ ಸರ್ವಜ್ಞನೂ ಆದ ನೀನು ಹೀಗೆ ಮಾಡುವುದುಚಿತವೇ ?

೧೫. ಲಕ್ಷ್ಮಿಯ ಅಂಶೋತ್ಪನ್ನಳೂ, ಮಹಾಪತಿವ್ರತಾಶಿರೋಮಣಿಯೂ ಆದ ಅನುಸೂಯಾದೇವಿಯು ನಿನ್ನ ಮಾತೆಯಾಗಿರುವಳು ಹೀಗಿದ್ದರೂ ಯಾವ ದೋಷದಿಂದ ನಿನಗೆ ಇಂಥ ಬುದ್ಧಿ ಬಂದಿದೆಯೆಂಬುದನ್ನು ನಾನರಿಯಲಾರೆ.

೧೬. ತಂದೆತಾಯಿಯರು ಗುಣವಂತರಾಗಿದ್ದರೂ ಕೂಡ ಅವರ ಹೊಟ್ಟೆಯಲ್ಲಿ ಹುಟ್ಟುವ ಮಗನು ದಯಾಹೀನನಾಗಿರುವುದು ಅತ್ಯಾಶ್ಚರ್ಯಕರವಾಮಮ. ಶ್ರುತಿಯ ಸೂಕ್ಷ್ಮವಾದ ಈ ಗತಿಯು ಯಾರಿಗೂ ತಿಳಿಯದು.

೧೭ ನನ್ನ ಪ್ರಾಣಕ್ಕಿಂತಲೂ ಪ್ರೀತಿಪಾತ್ರಳಾದ ಕನ್ಯೆಯನ್ನು ಸಂತೋಷದಿಂದ ನಿನಗೆ ಸಮರ್ಪಿಸಿದ್ದೆನು. ವಿಶೇಷಗುಣಗಳಿಂದ ಕೂಡಿದ್ದ ಆ ಕನ್ಯೆಯು ಕೇವಲ ಸ್ವಲ್ಪ ದೋಷದಿಂದ ದೂಷಿತಳಾಗಿದ್ದಳು.

೧೮. ಕ್ರೂರನುಡಿಯಾಡುವವಳನ್ನು ತ್ಯಜಿಸಬೇಕೆಂದಿರುವ ಶ್ರುತಿವಿಹಿತವಾದ ದಂಡಾನುಗುಣವಾಗಿ ನೀನು ಕೋಪದಿಂದ ಅವಳನ್ನು ಬಿಟ್ಟಿದ್ದಾದರೆ ತಂದೆಯಾದ ನ.ನು ಪ್ರಯತ್ನಪೂರ್ವಕವಾಗಿ ಕಾಪಾಡುತ್ತಿದ್ದೆ.

ಮದಪತ್ಯಂ ಸ್ವಲ್ಪದೋಷೇ ಯತೋ ಭಸ್ಮೀಕೃತಂ ತ್ವಯಾ ।
ಪರಾಭವಸ್ತವ ಮಹಾನ್ ಭವಿಷ್ಯತಿ ನ ಸಂಶಯಃ ॥ ೧೯ ॥

ಮಹತಾಂ ಕ್ಷುದ್ರಜಂತೂನಾಂ ಸರ್ವೇಷಾಂ ಜೀವಿನಾಂ ಸದಾ ।
ಸ್ರಷ್ಟಾ ಪಾತಾ ಚ ಶಾಸ್ತಾ ಚ ಭಗವಾನ್ ಕರುಣಾನಿಧಿಃ ॥ ೨೦ ॥

ಇತ್ಯುಕ್ತ್ವಾ ಚ ಮುನಿಶ್ರೇಷ್ಠೋ ವಿಲಪ್ಯ ಚ ಪುನಃ ಪುನಃ ।
ಹೇಽಂಬ ವತ್ಸೇ ಹ್ಯಯೀತ್ಯುಕ್ತ್ವಾ ಜಗಾಮ ಸ್ವಾಲಯಂ ರುಷಾ ॥ ೨೧ ॥

ಗತೇ ಮುನೀಂದ್ರೇ ದುರ್ವಾಸಾ ವಿಲಲಾಪ ಭೃಶಂ ಪುನಃ ।
ಜ್ಞಾನೇನ ವಿಸ್ಮೃತಃ ಶೋಕೋ ಬಭೂವ ದ್ವಿಗುಣಃ ಪುನಃ ॥ ೨೨ ॥

ಶೋಕಾನಲೋ ಹಿ ಕಾಲೇನ ವಿಚ್ಛಿನ್ನೋ ಜ್ಞಾನಭಸ್ಮನಾ ।
ಬಂಧುದರ್ಶನಶುಷ್ಕೇಂಧದಾನೇನ ವರ್ಧತೇ ಪುನಃ ॥ ೨೩ ॥

---

೧೯. ಸ್ವಲ್ಪ ದೋಷಯುತಳಾದ ನನ್ನ ಮಗಳನ್ನು ನೀನು ಭಸ್ಮಮಾಡಿದುದರ ಫಲವಾಗಿ ನಿನಗೆ ತುಂಬಾ ಹಾನಿಯುಂಟಾಗುವುದು. ಇದರಲ್ಲಿ ಸಂದೇಹವಿಲ್ಲ.

೨೦. ಮಹಾತ್ಮರನ್ನಾಗಲೀ, ಕ್ಷುದ್ರಜಂತುಗಳನ್ನಾಗಲೀ, ಎಲ್ಲಾ ಪ್ರಾಣಿಗಳನ್ನೂ ಕರುಣಾನಿಧಿಯಾದ ಭಗವಂತನು ಸೃಜಿಸಿ, ಪಾಲಿಸಿ ಶಿಕ್ಷಿಸುವುದಿಲ್ಲವೇ ?

೨೧. ಆ ಔರ್ವಮುನಿಯು ಹೀಗೆ ಹೇಳಿ ಗೋಳಾಡುತ್ತ, “ ಎಲಾ ಮಾತೇ, ಎಲಾ ಮಗಳೇ, ಅಯ್ಯೋ ಎಲ್ಲಿ ಹೋದೆ, ಬಾ ” ಎನ್ನುತ್ತ ತನ್ನ ಮನೆಗೆ ಹಿಂತಿರುಗಿದನು.

೨೨. ಆ ಮುನಿಯು ಹೊರಟುಹೋದ ಮೇಲೆ ದೂರ್ವಾಸನು ಪುನಃ ದುಃಖಿಸಲಾರಂಭಿಸಿದನು. ದಿವ್ಯಜ್ಞಾನದಿಂದ ಮರೆತುಹೋಗಿದ್ದ ದುಃಖವು ಪುನ ಒಂದಕ್ಕೆರಡಾಯಿತು.

೨೩. ಶೋಕಾಗ್ನಿಯೆಂಬುದು ಕಾಲಾನುಗುಣವಾಗಿ ಜ್ಞಾನವೆಂಬ ಭಸ್ಮದಿಂದ ಆವೃತವಾಗಿದ್ದು, ಬಂಧುಗಳ ದರ್ಶನವೆಂಬ ಒಣಗಿದ ಕಟ್ಟಿಗೆಯ ಸಂಯೋಗದಿಂದ ಪುನಃ ಪ್ರಜ್ವಲಿಸುವುದು.

ಸ್ಮಾರಂ ಸ್ಮಾರಂ ಪ್ರಿಯಾಂ ತತ್ರ ವಿಲಪ್ಯ ಚ ಪುನಃ ಪುನಃ ।
ಬೋಧಯಿತ್ವಾ ಸ್ವಮಾತ್ಮಾನಂ ತಪಸ್ಯಾಯಾಂ ಮನೋದಧೌ ॥ ೨೪ ॥

ಇತ್ಯೇವಂ ಕಥಿತಂ ಸರ್ವಂ ಮುನೇಃ ಶಾಪಸ್ಯಕಾರಣಂ ।
ಬಭೂವ ತಸ್ಯ ಕಾಲೇನ ದುಃಸಹಶ್ಚ ಪರಾಭವಃ ॥ ೨೫ ॥

॥ ನಾರದ ಉವಾಚ ॥

ದುರ್ವಾಸಾಃ ಶಂಕರಸ್ಯಾಂಶಃ ಶಿವತುಲ್ಯಶ್ಚ ತೇಜಸಾ ।
ತೇಜಸ್ವಿನೇ ಕೋ ಮಹಾನೇವ ಚಕಾರ ತತ್ಪರಾಭವಮ್ ॥ ೨೬ ॥

॥ ನಾರಾಯಣ ಉವಾಚ ॥

ಅಂಬರೀಷೋಹಿ ರಾಜೇಂದ್ರಃ ಸೂರ್ಯವಂಶಸಮುದ್ಭವಃ ।
ಶ್ರೀಕೃಷ್ಣಚರಣಾಂಭೋಜೇ ತನ್ಮನಾಃ ಸಂತತಂ ಮುನೇ ॥ ೨೭ ॥

---

೨೪. ಮತ್ತೆ ಮತ್ತೆ ತನ್ನ ಪತ್ನಿಯನ್ನು ನೆನೆಸಿಕೊಂಡು ಗೋಳಾಡಿ, ಜ್ಞಾನಶಕ್ತಿಯಿಂದ ತನ್ನಷ್ಟಕ್ಕೆ ತಾನೇ ಬೋಧನೆಮಾಡಿಕೊಂಡು ತಪಸ್ಸಿನಲ್ಲಿ ಮನಸ್ಸಿಟ್ಟನು.

೨೫. ಈ ರೀತಿ ದೂರ್ವಾಸಮುನಿಗೆ ಶಾಪಬರಲು ಕಾರಣವನ್ನು ಹೇಳಿದೆನು. ಕಾಲಕ್ರಮದಲ್ಲಿ ಆ ದೂರ್ವಾಸಮುನಿಗೆ ಸಹಿಸಲಾಗದ ಕಷ್ಟಸಂಕಟಗಳೊದಗಿದವು.

೨೬. ನಾರದ :—ದೂರ್ವಾಸಮಹರ್ಷಿಯು ಶಂಕರನ ಅಂಶಾವತಾರಿಯಾಗಿರುವುದಲ್ಲದೆ ತೇಜಸ್ಸಿನಲ್ಲೂ ಅವನಿಗೆಣೆಯಾಗಿದ್ದಾನೆ. ಅಂಥ ಮಹಾತ್ಮನಿಗೆ ಕಷ್ಟಸಂಕಟಗಳೊದಗಲು ಕಾರಣವೇನು?

೨೭. ಶ್ರೀನಾರಾಯಣ :—ಸೂರ್ಯವಂಶೋತ್ಪನ್ನನಾದ ಅಂಬರೀಷನೆಂಬ ಮಹಾರಾಜನು ಸರ್ವದಾ ಶ್ರೀಕೃಷ್ಣನ ಚರಣಕಮಲಗಳನ್ನು ಸ್ಮರಿಸುತ್ತಿದ್ದನು.

ನ ರಾಜ್ಯೇಷು ನ ಭಾರ್ಯಾಸು ನ ಪುತ್ರೇಷು ಪ್ರಜಾಸು ಚ ।
ನ ಸಂಪತ್ಸು ಕ್ಷಣಂ ಚಿತ್ತಂ ಪುಣ್ಯಕರ್ಮಾರ್ಜಿತಾಸು ಚ ॥ ೨೮ ॥

ಧ್ಯಾಯತೇಽಹರ್ನಿಶಂ ಧರ್ಮೀ ಸ್ವಪ್ನೇ ಜ್ಞಾನೇ ಹರಿಂ ಮುದಾ ।
ಮಹಾಜಿತೇಂದ್ರಿಯಃ ಶಾಂತೋ ವಿಷ್ಣುವ್ರತಪರಾಯಣಃ ॥ ೨೯ ॥

ಏಕಾದಶೀವ್ರತರತಃ ಕೃಷ್ಣಪೂಜಾಸು ತತ್ಪರಃ ।
ಸರ್ವಕರ್ಮಸ್ವಲಿಪ್ತಶ್ಚ ಕರ್ತಾ ಕೃಷ್ಣಾರ್ಪಿತೇಷು ಚ ॥ ೩೦ ॥

ಸುತೀಕ್ಷ್ಣಂ ಷೋಡಶಾರಂ ಚ ಹರೇಶ್ಚಕ್ರಂ ಸುದರ್ಶನಂ ।
ತೇಜಸಾ ಹರಿತುಲ್ಯಂ ಚ ಸೂರ್ಯಕೋಟಿಸಮಪ್ರಭಂ ॥ ೩೧ ॥

ಬ್ರಹ್ಮಾದಿಭಿಃ ಸ್ತೂಯಮಾನಂ ಪೂಜಿತಂ ಚ ಸುರಾಸುರೈಃ ।
ಪ್ರಭುಣಾ ರಕ್ಷಿತಂ ಶಶ್ವದ್ರಕ್ಷಾಯೈ ನೃಪಸನ್ನಿಧೌ ॥ ೩೨ ॥

---

೨೮. ಆ ರಾಜನಿಗೆ ರಾಜ್ಯದಲ್ಲಾಗಲೀ, ಪತ್ನಿಪುತ್ರರಲ್ಲಾಗಲೀ, ಪ್ರಜೆಗಳಲ್ಲಾಗಲೀ, ಜನ್ಮಾಂತರಪುಣ್ಯಕರ್ಮಗಳಿಂದಾರ್ಜಿಸಿದ ಸಂಪತ್ತಿನಲ್ಲಾಗಲೀ, ಕ್ಷಣಕಾಲವೂ ಮನಸ್ಸಿರುತ್ತಿರಲಿಲ್ಲ-

೨೯. ಆ ಧರ್ಮಿಷ್ಠನು ಹಗಲೂರಾತ್ರಿ ಜಾಗ್ರತ್ಸ್ವಪ್ನಸುಷುಪ್ತಿಗಳಲ್ಲಿಯೂ ಶ್ರೀಹರಿಯನ್ನು ಧ್ಯಾನಿಸುತ್ತಿದ್ದನು. ಅಲ್ಲದೆ ಜಿತೇಂದ್ರಿಯನೂ, ಶಾಂತಸ್ವರೂಪನೂ, ವಿಷ್ಣುವ್ರತಪರಾಯಣನೂ ಆಗಿದ್ದನು.

೩೦. ಏಕಾದಶೀವ್ರತಾಚರಣೆಯಲ್ಲೂ, ಶ್ರೀಕೃಷ್ಣನ ಪೂಜೆಯಲ್ಲೂ, ಆಸಕ್ತನಾಗಿ ಎಲ್ಲಾ ಕರ್ಮಗಳನ್ನೂ ಶ್ರೀಕೃಷ್ಣನ ಪ್ರೀತ್ಯರ್ಥವಾಗಿ ಮಾಡುತ್ತಿದ್ದನು.

೩೧-೩೨. ಹದಿನಾರು ಹಾರೆಕಾಲುಗಳಿಂದ ಕೂಡಿ ತೀಕ್ಷ್ಣವಾಗಿಯೂ, ಕೋಟಿಸೂರ್ಯಸಮಪ್ರಭೆಯುಳ್ಳದ್ದಾಗಿಯೂ, ಶ್ರೀಹರಿಗೆ ಸಮಾನವಾದ ತೇಜಸ್ಸಿನಿಂದ ಕೂಡಿಯೂ ಇರುವ ಸುದರ್ಶನಚಕ್ರವು ಬ್ರಹ್ಮಾದಿಗಳ ಸ್ತೋತ್ರಕ್ಕೂ, ಸುರಾಸುರರ ಪೂಜೆಗೂ ಪಾತ್ರವಾಗಿದ್ದುದಲ್ಲದೆ, ಆ ಅಂಬರೀಷನ ರಕ್ಷಣೆಗಾಗಿ ಶ್ರೀಹರಿಯಿಂದ ನಿಯಮಿತವಾಗಿದ್ದಿತು.

ಏಕಾದಶೀವ್ರತಂ ಕೃತ್ವಾ ದ್ವಾದಶೀದಿವಸೇ ಸತಿ |
ಸ್ನಾತ್ವಾ ವಿಧಾಯ ಪೂಜಾಂ ಚ ಕಾಲೇನ ವಿಧಿಪೂರ್ವಕಮ್ || ೩೩ ||

ದತ್ತ್ವಾ ದಾನಂ ಬ್ರಾಹ್ಮಣೇಭ್ಯಃ ಸುವರ್ಣರಜತಾದಿಕಮ್ |
ಬ್ರಾಹ್ಮಣಾನ್ಭೋಜಯಿತ್ವಾ ಚ ಭೋಜನಾರ್ಥಮುವಾಸ ಹ || ೩೪ ||

ಏತಸ್ಮಿನ್ನಂತರೇ ವಿಪ್ರ ತೆಪಸ್ವೀ ಕ್ಷುಧಿತೋ ಮುನೇ |
ದಂಡೀ ಛತ್ರೀ ಶುಕ್ಲವಾಸಾ ಬಿಭ್ರತ್ತಿಲಕಮುತ್ತಮಮ್ || ೩೫ ||

ಜಟಿಲೋಽತಿಕೃಶಸ್ತ್ರಸ್ತಃ ಶುಷ್ಕಕಂಠೋಷ್ಠತಾಲುಕಃ |
ತತ್ರಾಜಗಾಮ ಭಗವಾನ್ ದುರ್ವಾಸಾ ನೃಪತೇಃ ಪುರಃ || ೩೬ ||

ಸ ಚ ದೃಷ್ಟ್ವಾ ಮುನೀಂದ್ರಂ ತಮುತ್ಥಾಯ ಚ ಪ್ರಣಮ್ಯ ಚ |
ದತ್ತ್ವಾ ಪಾದ್ಯಂ ಚ ಸಂಪ್ರೀತ್ಯಾ ಸ್ವರ್ಣಸಿಂಹಾಸನಂ ದದೌ || ೩೭ ||

೩೩-೩೪. ಹೀಗಿರಲು ಒಮ್ಮೆ ಆ ರಾಜನು ಏಕಾದಶೀವ್ರತವನ್ನಾಚರಿಸಿ, ದ್ವಾದಶೀದಿವಸ ಉಕ್ತಕಾಲಕ್ಕೆದ್ದು ವಿಧಿಪೂರ್ವಕವಾಗಿ ಸ್ನಾನಮಾಡಿ ಪೂಜೆಗೈದು ಬ್ರಾಹ್ಮಣರಿಗೆ ಚಿನ್ನಬೆಳ್ಳಿಗಳನ್ನು ದಾನಮಾಡಿ, ಬ್ರಾಹ್ಮಣಸಂತರ್ಪಣೆಮಾಡಿ ತಾನೂ ಊಟಕ್ಕೆ ಕುಳಿತನು.

೩೫. ಇಷ್ಟುಹೊತ್ತಿಗೆ ಹಸಿವಿನಿಂದ ಬಳಲಿದ ಒಬ್ಬ ಬ್ರಾಹ್ಮಣನು ಶುಭ್ರ ವಸ್ತ್ರಧರನಾಗಿ, ಹಣೆಯಲ್ಲಿ ಉಜ್ವಲವಾದ ತಿಲಕವನ್ನಿಟ್ಟು ಕೈಯ್ಯಲ್ಲಿ ಛತ್ರಿಯನ್ನೂ, ದಂಡವನ್ನೂ ಧರಿಸಿ ಅಲ್ಲಿಗೆ ಬಂದನು.

೩೬. ಜಟಾಧಾರಿಯೂ, ಅತ್ಯಂತಕೃಶನೂ ಆದ ಆ ಬ್ರಾಹ್ಮಣನೇ ದೂರ್ವಾಸಮುನಿಯು. ಅವನು ರಾಜನ ಮುಂದೆ ಶುಷ್ಕಕಂಠದಿಂದ ಮಾತನಾಡ ಲಾರದೆ ನಿಂತನು.

೩೭. ಆ ಮುನೀಂದ್ರನನ್ನು ನೋಡಿದ ಕೂಡಲೇ ಅಂಬರೀಷಮಹಾರಾಜನು ಪ್ರತ್ಯುತ್ಥಾನಮಾಡಿ ವಂದಿಸಿ, ಆದರದಿಂದ ಅರ್ಘ್ಯಪಾದ್ಯಾದಿಗಳನ್ನು ಸಮರ್ಪಿಸಿ ಸುವರ್ಣಸಿಂಹಾಸನದಲ್ಲಿ ಕುಳ್ಳಿರಿಸಿದನು.

ತಸ್ಮೈ ದತ್ವಾಽಽಶಿಷಂ ವಿಪ್ರಃ ಸಮುವಾಸ ಸುಖಾಸನೇ ।
ಪಪ್ರಚ್ಛ ರಾಜಾ ತಂ ಪ್ರೀತಃ ಕಾಽಜ್ಞಾ ತೇ ವದ ಕಾಮಿತಂ ॥ ೩೮ ॥

ನೃಪೇಂದ್ರವಚನಂ ಶ್ರುತ್ವಾ ತಮುವಾಚ ಮಹಾಮುನಿಃ ।
ಬುಭುಕ್ಷಿತಸ್ಯ ಮೇ ರಾಜನ್ ದೇಹ್ಯನ್ನಂ ವಿಧಿಪೂರ್ವಕಂ ॥ ೩೯ ॥

ಕಿಂ ತ್ವಘಮರ್ಷಣಮಂತ್ರಂ ಜಪ್ತ್ವಾಽಽಯಾಮ್ಯಚಿರೇಣ ವೈ ।
ಕ್ಷಣಂ ಪ್ರತೀಕ್ಷತಾಂ ರಾಜನ್ನಿತ್ಯುಕ್ತ್ವಾ ಚ ಗತೋ ಮುನಿಃ ॥ ೪೦ ॥

ಗತೇ ವಿಪ್ರೇ ತು ರಾಜರ್ಷಿಶ್ಚಿಂತಾಂ ಪ್ರಾಪ ದುರತ್ಯಯಾಂ ।
ವಿಲೋಕ್ಯ ವಿಗತಪ್ರಾಯಾಂ ದ್ವಾದಶೀಂ ಭಯಸಂಯುತಃ ॥ ೪೧ ॥

ಏತಸ್ಮಿನ್ನಂತರೇ ತತ್ರ ಸಮಾಯಾಂತಂ ಗುರುಂ ಮುದಾ ।
ನತ್ವಾ ನಿವೇದ್ಯ ಸರ್ವಂ ತು ನೃಪತಿಃ ಸಮುವಾಚ ಹ ॥ ೪೨ ॥

---

೩೮. ಆ ಬ್ರಾಹ್ಮಣೋತ್ತಮನು ಅವನಿಗೆ ಆಶೀರ್ವಾದಮಾಡಿ ಸುಖಾಸನವಲ್ಲಿ ಮಂಡಿಸಿದನು. ರಾಜನು ವಿನಯದಿಂದ ಕೈಮುಗಿದುಕೊಂಡು ನಿನ್ನ ಕಾಮಿತಾರ್ಥ ವೇನು ? ಅಪ್ಪಣೆಯಾಗಬೇಕು. ಎಂದನು.

೩೯. ರಾಜನಾಡಿದ ಮಾತುಗಳನ್ನು ಕೇಳಿ ಆ ಮಹಾಮುನಿಯು ಇಂತೆಂದನು. " ಎಲೈ ರಾಜನೇ ಹಸಿವಿನಿಂದ ಬಳಲಿರುವ ನನಗೆ ವಿಧಿಪೂರ್ವಕವಾಗಿ ಊಟಬಡಿಸು.

೪೦. ಆದರೆ ಈಗ ನಾನು ಅಘಮರ್ಷಣಮಂತ್ರಪೂರ್ವಕವಾಗಿ ಸ್ನಾನ ಮಾಡಿ ಜಾಗ್ರತೆ ಬರುತ್ತೇನೆ. ಅಲ್ಲಿಯವರೆಗೆ ನನ್ನನ್ನು ನಿರೀಕ್ಷಿಸಿಕೊಂಡಿರು" ಎಂದು ಹೇಳಿ ಆ ಮುನಿಯು ಹೊರಟುಹೋದನು.

೪೧ ಇಂತು ಹೇಳಿ ಆ ಬ್ರಾಹ್ಮಣನು ಹೊರಟುಹೋದನಂತರ ಆ ರಾಜನು ದ್ವಾದಶಿಯ ಪಾರಣೆಗೆ ಕಾಲಾತೀತವಾದುದನ್ನು ನೋಡಿ ಬಹಳ ಚಿಂತಾಕ್ರಾಂತ ನಾದನು.

೪೨. ಆ ಸಮಯಕ್ಕೆ ಸರಿಯಾಗಿ ಅಲ್ಲಿಗೆ ಬಂದ ತನ್ನ ಕುಲಗುರುವಾದ ವಸಿಷ್ಠನಿಗೆ ಸಾಷ್ಟಾಂಗವೆರಗಿ ನಡೆದ ಸಮಾಚಾರವನ್ನು ಈರೀತಿ ಹೇಳಿದನು.

ನಾಽಯಾತಿ ಮುನಿಶಾರ್ದೂಲಃ ಪ್ರಯಾತಿ ದ್ವಾದಶೀ ತಿಥಿಃ |
ಸಂಕಟೇಸ್ಮಿನ್ವಿಧೇಯಂ ಚ ವಿವಿಚ್ಯ ವಿಧಿಪೂರ್ವಕಮ್ |
ಶೀಘ್ರಂ ವದ ಮುನಿಶ್ರೇಷ್ಠ ಭದ್ರಾಭದ್ರಂ ಚ ಮಾಮಿತಿ || ೪೩ ||

ಶ್ರುತ್ವಾ ನೃಪೋಕ್ತಿಂ ತ್ವರಿತಮುವಾಚ ಮುನಿಪುಂಗವಃ |
ಹಿತಂ ತಥ್ಯಂ ಚ ವೇದೋಕ್ತಂ ಪರಿಣಾಮಸುಖಾವಹಂ || ೪೪ ||

|| ವಸಿಷ್ಠ ಉವಾಚ ||

ದ್ವಾದಶ್ಯಾಂ ಸಮತೀತಾಯಾಂ ತ್ರಯೋದಶ್ಯಾಂ ತು ಪಾರಣಂ |
ಉಪವಾಸಫಲಂ ಹತ್ವಾ ವ್ರತಿನಂ ಹಂತಿ ನಿಶ್ಚಿತಂ || ೪೫ ||

ಬ್ರಹ್ಮಹತ್ಯಾಸಮಂ ಪಾಪಂ ಭವೇತ್ತಸ್ಯ ಶ್ರುತೌ ಶ್ರುತಂ |
ಭಕ್ಷ್ಯದ್ರವ್ಯಂ ಸುರಾತುಲ್ಯಮಿತ್ಯಾಹ ಕಮಲೋದ್ಭವಃ || ೪೬ ||

---

೪೩. 'ಮುನಿವರ್ಯನು ಇನ್ನೂ ಹಿಂತಿರುಗಿ ಬರಲಿಲ್ಲ. ದ್ವಾದಶೀ ತಿಥಿಯು ಕಳೆದುಹೋಗುತ್ತಿದೆ. ಈ ಉಭಯಸಂಕಟಕ್ಕೊಳಗಾದ ನಾನು ಮಾಡಬೇಕಾದ ವಿಧಿಯೇನೆಂಬುದನ್ನು ಯುಕ್ತಾಯುಕ್ತ ವಿಚಾರಪರನಾದ ನೀನು ನನಗೆ ಹೇಳು.'

೪೪. ರಾಜನ ಈ ಮಾತುಗಳನ್ನು ಕೇಳಿ ಮುನಿಶ್ರೇಷ್ಠನಾದ ವಸಿಷ್ಠನು ಹಿತವೂ, ಸತ್ಯವೂ ಪರಿಣಾಮಸುಖಾವಹವೂ ಆದ ಕೆಲವು ಮಾತುಗಳನ್ನು ಹೇಳಿದನು

೪೫. ದ್ವಾದಶಿಯು ಕಳೆದುಹೋದ ಮೇಲೆ ತ್ರಯೋದಶಿಯಲ್ಲಿ ಪಾರಣೆ ಮಾಡುವುದರಿಂದ ಉಪವಾಸದ ಫಲವು ವ್ಯರ್ಥವಾಗುವುದಲ್ಲದೆ ವ್ರತಿಯೂ ನಿಶ್ಚಿತವಾಗಿ ನಾಶಹೊಂದುವನು.

೪೬. ಆಗ ಅವನು ಪಾರಣೆ (ಊಟ)ಮಾಡಿದರೆ ಬ್ರಹ್ಮಹತ್ಯೆಗೆ ಸಮನಾದ ಪಾಪವುಂಟಾಗುವುದೆಂದು ಶ್ರುತ್ಯುಕ್ತವಾಗಿದೆ. ಅವನು ತಿನ್ನುವ ವಸ್ತುವೂ ಮದ್ಯಕ್ಕೆ ಸಮಾನವೆಂದು ಬ್ರಹ್ಮನು ಹೇಳಿರುವನು.

ನ ಭೋಜಯಿತ್ವಾ ಮೂಢಶ್ಚೇದತಿಥಿಂ ಸಮುಪಸ್ಥಿತಂ ।
ಸ ತ್ರಸ್ತಃ ಕ್ಷುಧಿತೋ ಭುಂಕ್ತೇ ಕುಂಭೀಪಾಕೇ ವ್ರಜೇದ್ಧ್ರುವಂ ॥ ೪೭ ॥

ಶತವರ್ಷಂ ತತ್ರ ತಿಷ್ಠನ್ನರಶ್ಚಾಂಡಾಲತಾಂ ವ್ರಜೇತ್ ।
ವ್ಯಾಧಿಯುಕ್ತೋ ದರಿದ್ರಶ್ಚ ಭವೇಜ್ಜನ್ಮನಿ ಜನ್ಮನಿ ॥ ೪೮ ॥

ಅತೋಽತಿಸೂಕ್ಷ್ಮಂ ಕಿಂ ಬ್ರೂಮೋಽಧುನಾ ಪರಮಸಂಕಟೇ ।
ರಕ್ಷಾಂ ಕುರು ದ್ವಯೋರ್ಧರ್ಮಂ ಸಮಾಲೋಕ್ಯ ವದಾಮಿ ತೇ ॥ ೪೯ ॥

ಉಪವಾಸಫಲಂ ರಕ್ಷ ಕೃಷ್ಣಸ್ಯ ಚರಣೋದಕಂ ।
ಭುಕ್ತ್ವಾ ಶೀಘ್ರಮಪೋ ರಾಜಂಸ್ತದ್ಭಕ್ಷಣಮಭಕ್ಷಣಂ ॥ ೫೦ ॥

ಇತ್ಯುಕ್ತ್ವಾ ಬ್ರಹ್ಮಣಃ ಪುತ್ರೋ ವಿರರಾಮ ಮಹಾಮುನೇ ।
ಬುಭುಜೇ ತಜ್ಜಲಂ ಕಿಂಚಿತ್ ಕೃಷ್ಣಪಾದಾಂಬುಜಂ ಸ್ಮರನ್ ॥ ೫೧ ॥

---

೪೭. ಮನೆಗೆ ಬಂದ ಅತಿಥಿಗೆ ಭೋಜನಮಾಡಿಸದೆ ತನಗೆ ಹಸಿವೆಂದು ಊಟಮಾಡಿದ ಮನುಜನು ಕುಂಭೀಪಾಕವೆಂಬ ನರಕಕ್ಕೆ ಹೋಗುವುದರಲ್ಲಿ ಸಂದೇಹವಿಲ್ಲ.

೪೮ ಅಲ್ಲಿ ನೂರು ವರ್ಷಗಳಿದ್ದು ಅನಂತರ ಚಂಡಾಲನಾಗುವನು. ಅನಂತರ ಪ್ರತಿಜನ್ಮದಲ್ಲೂ ರೋಗಗ್ರಸ್ತನೂ ದರಿದ್ರನೂ ಆಗುತ್ತಾನೆ.

೪೯. ಆದುದರಿಂದ ಈ ಉಭಯಸಂಕಟದಲ್ಲಿ ಅನುಸರಿಸಬೇಕಾದ ಸೂಕ್ಷ್ಮ ಧರ್ಮವನ್ನು ಹೇಳುವೆನು. ಕೇಳು ನಾನು ಸಮಾಲೋಚಿಸಿ ಹೇಳುವುದನ್ನು ಕೇಳಿ ಈ ಎರಡು ಧರ್ಮವನ್ನೂ ರಕ್ಷಿಸಿಕೋ

೫೦. ಎಲೈ ರಾಜೇಂದ್ರನೇ, ಜಾಗ್ರತೆಯಾಗಿ ಶ್ರೀಕೃಷ್ಣನ ಪಾದೋದಕವನ್ನು ಪಾನಮಾಡಿ ಉಪವಾಸದ ಫಲವನ್ನು ಳಿಸಿಕೋ. ಆ ತೀರ್ಥ ಪಾನಮಾಡುವುದರಿಂದ ಯಾವ ದೋಷವೂ ಇಲ್ಲ.

೫೧. ಎಲೈ ಮಹರ್ಷಿಯೇ, ಬ್ರಹ್ಮಪುತ್ರನು ಹೀಗೆ ಹೇಳಿ ಸುಮ್ಮನಾಗಲು ಆರಾಜನು ಶ್ರೀಕೃಷ್ಣನ ಪಾದಕಮಲಗಳನ್ನು ಸ್ಮರಿಸುತ್ತ ಹರಿಪಾದೋದಕವನ್ನು ಪಾನಮಾಡಿದನು.

ಏತಸ್ಮಿನ್ನಂತರೇ ಬ್ರಹ್ಮನ್ನಾಜಗಾಮ ಮುನೀಶ್ವರಃ ।
ಚಿಚ್ಛೇದ ಕೋಪಾತ್ಸರ್ವಜ್ಞಃ ಸ್ವಜಟಾಂ ನೃಪತೇಃ ಪುರಃ ॥ ೫೨ ॥

ತತಃ ಸಮುತ್ಥಿತಃ ಶೀಘ್ರಂ ಪುರುಷೋಽಗ್ನಿಶಿಖೋಪಮಃ ।
ಖಡ್ಗಹಸ್ತೋ ಮಹಾಭೀಮೋ ರಾಜೇಂದ್ರಂ ಹಂತುಮುದ್ಯತಃ ॥ ೫೩ ॥

ಹರೇಶ್ಚಕ್ರಂ ಚ ತಂ ದೃಷ್ಟ್ವಾ ಸೂರ್ಯಕೋಟಿಸಮಪ್ರಭಂ ।
ಚಿಚ್ಛೇದ ಕೃತ್ಯಾಪುರುಷಂ ಬ್ರಾಹ್ಮಣಂ ಛೇತ್ತುಮುದ್ಯತಂ ॥ ೫೪ ॥

ದೃಷ್ಟ್ವಾ ಸುದರ್ಶನಂ ವಿಪ್ರೋ ದುದ್ರಾವ ಭಯವಿಹ್ವಲಃ ।
ದ್ವಿಜಃ ಪಶ್ಚಾತ್ತಂ ದದರ್ಶ ಜ್ವಲದಗ್ನಿಶಿಖೋಪಮಂ ॥ ೫೫ ॥

ಬ್ರಹ್ಮಾಂಡಕ್ರಮಣಂ ಕೃತ್ವಾ ನಿರ್ವಿಣ್ಣೋಽತಿಭಯಾಕುಲಃ ।
ತಂ ಚ ಮತ್ವಾ ಜಗನ್ನಾಥಂ ಬ್ರಹ್ಮಾಣಂ ಶರಣಂ ಯಯೌ ॥ ೫೬ ॥

---

೫೨. ಅಷ್ಟು ಹೊತ್ತಿಗೆ ದೂರ್ವಾಸಮುನೀಶ್ವರನು ಅಲ್ಲಿಗೆ ಬಂದನು. ಮತ್ತು ಕೋಪದಿಂದ ತನ್ನ ಜಟಾಭಾರವನ್ನು ಆ ರಾಜನ ಮುಂದೆ ಕತ್ತರಿಸಿ ಎಸೆದನು.

೫೩. ಕೂಡಲೇ ಅದರಿಂದ ಅಗ್ನಿಶಿಖೆಗೆ ಸಮನಾದ ಉಜ್ವಲಪುರುಷನೊಬ್ಬನು ಮೇಲಕ್ಕೆದ್ದನು. ಖಡ್ಗಹಸ್ತನೂ, ಮಹಾಭಯಂಕರನೂ ಆದ ಆ ಮೂರ್ತಿಯು ಆ ರಾಜನನ್ನು ಸಂಹರಿಸಲುದ್ಯುಕ್ತನಾದನು.

೫೪. ಕೂಡಲೇ ಕೋಟಿಸೂರ್ಯಸಮಪ್ರಭೆಯುಳ್ಳ ಶ್ರೀಹರಿಯ ಸುದರ್ಶನ ಚಕ್ರವು ಆ ಕೃತ್ರಿಮಪುರುಷನನ್ನು ಕತ್ತರಿಸಿ ಕೆಡವಿ, ಆ ದೂರ್ವಾಸಮುನಿಯನ್ನೂ ಕತ್ತರಿಸಲು ಬಂದಿತು.

೫೫. ಆ ಸುದರ್ಶನಚಕ್ರವನ್ನು ನೋಡಿ ಭಯಭ್ರಾಂತನಾದ ದೂರ್ವಾಸನು ಓಡತೊಡಗಿದನು. ಹಿಂದಿನಿಂದಲೇ ಅಗ್ನಿಜ್ವಾಲೆಗೆ ಸಮನಾದ ಆ ಚಕ್ರವು ಬೆಂಬತ್ತಿ ಬಂದಿತು.

೫೬. ಬ್ರಹ್ಮಾಂಡವನ್ನೆಲ್ಲ ದಾಟಿಹೋದರೂ ಸಾಧ್ಯವಾಗದೆ ಭಯಭೀತನಾಗಿ ಜಗದೊಡೆಯನಾದ ಬ್ರಹ್ಮನೇ ಪಾರುಗಾಣಿಸಬೇಕೆಂದು ಬಗೆದು ಬ್ರಹ್ಮನನ್ನು ಮರೆ ಹೊಕ್ಕನು.

ತ್ರಾಹಿ ತ್ರಾಹೀತ್ಯೇವಮುಕ್ತ್ವಾ ವಿವೇಶ ಬ್ರಹ್ಮಣಃ ಸಭಾಂ।
ಉತ್ಥಾಯ ಬ್ರಹ್ಮಾ ವಿಪ್ರೇಂದ್ರಂ ಪಪ್ರಚ್ಛ ಕುಶಲಂ ಮುನೇ ॥ ೫೭ ॥

ಸರ್ವಂ ಸ ಕಥಯಾಮಾಸ ವೃತ್ತಾಂತಂ ಮೂಲತೋ ವಿಧಿಂ।
ಶ್ರುತ್ವಾ ಬ್ರಹ್ಮಾ ನಿಶಶ್ವಾಸ ತಮುವಾಚ ಭಯಾಕುಲಃ ॥ ೫೮ ॥

॥ ಬ್ರಹ್ಮೋವಾಚ ॥

ಹರಿದಾಸಂ ವತ್ಸ ಶಪ್ತುಂ ಗತೋಽಸಿ ಕಸ್ಯ ತೇಜಸಾ ।
ರಕ್ಷಿತಾ ಯಸ್ಯ ಭಗವಾಂಸ್ತಂ ಕೋ ಹಂತಾ ಜಗತ್ತ್ರಯೇ ॥ ೫೯ ॥

ಕ್ಷುದ್ರಾಣಾಂ ಮಹತಾಂ ಚೈವ ಭಕ್ತಾನಾಂ ರಕ್ಷಣಾಯ ಚ ।
ರರಕ್ಷ ಸತತಂ ಚಕ್ರಂ ಶ್ರೀಹರಿರ್ಭಕ್ತವತ್ಸಲಃ ॥ ೬೦ ॥

---

೫೭. 'ಕಾಪಾಡು, ಕಾಪಾಡು' ಎಂದು ಕೂಗುತ್ತಲೇ ಬ್ರಹ್ಮನ ಸಭೆಗೆ ಹೋದನು. ಕೂಡಲೇ ಬ್ರಹ್ಮನು ಮೇಲೆಕ್ಕೆದ್ದು ಮುನಿಯನ್ನು ಕುಶಲಪ್ರಶ್ನೆ ಮಾಡಿದನು.

೫೮. ಕೂಡಲೇ ದೂರ್ವಾಸನು ಸಮಾಚಾರವನ್ನೆಲ್ಲ ಆಮೂಲಾಗ್ರವಾಗಿ ಬ್ರಹ್ಮನಿಗೆ ತಿಳುಹಿದನು. ಅದನ್ನು ಕೇಳಿ ಬ್ರಹ್ಮನು ನಿಟ್ಟುಸಿರುಬಿಟ್ಟು ಭಯದಿಂದ ಇಂತೆಂದನು.

೫೯. ಬ್ರಹ್ಮ: —ಎಲೈ ದೂರ್ವಾಸನೇ, ನೀನು ಯಾವ ಪ್ರಭಾವದಿಂದ ಹರಿದಾಸನನ್ನು ಶಪಿಸಲುಹೋದೆ ? ಯಾವನನ್ನು ಭಗವಂತನು ರಕ್ಷಿಸುವನೋ ಅವನನ್ನು ಭುವನತ್ರಯದಲ್ಲಿ ಯಾರು ಸಂಹರಿಸಬಲ್ಲರು?

೬೦. ಭಕ್ತರು ಅಲ್ಪರಾಗಲೀ, ಮಹಾತ್ಮರಾಗಲೀ ಅವರ ರಕ್ಷಣೆಗಾಗಿ ಭಕ್ತವತ್ಸಲನಾದ ಶ್ರೀಹರಿಯು ಸರ್ವದಾ ತನ್ನ ಸುದರ್ಶನಚಕ್ರವನ್ನು ಕಾವಲಿಟ್ಟಿರುವನು.

ಯೋ ಮೂಢೋ ವೈಷ್ಣವಂ ದ್ವೇಷ್ಟಿ ವಿಷ್ಣುಪ್ರಾಣಸಮಂ ದ್ವಿಜ
ತಸ್ಯ ಸಂಹಾರಕರ್ತಾರಂ ಸಂಹರ್ತುರೀಶ್ವರೋ ಹರಿಃ ॥ ೬೧ ॥

ಶೀಘ್ರಂ ಸ್ಥಾನಾಂತರಂ ಗಚ್ಛ ವತ್ಸ ತ್ರಾಣಂ ನ ವಾಽಧುನಾ ।
ಅನ್ಯಥಾ ತ್ವಾಂ ಮಯಾ ಸಾರ್ಧಂ ಪನಿಷ್ಯತಿ ಸುದರ್ಶನಂ ॥ ೬೨ ॥

ಕಿಂ ಬ್ರಹ್ಮಲೋಕಂ ಬ್ರಹ್ಮಾಂಡಂ ದಗ್ಧುಂ ಶಕ್ತಂ ಕ್ಷಣೇನ ಯತ್ ।
ತೇಜಸಾ ವಿಷ್ಣುತುಲ್ಯಂ ಯತ್ಕೇನಾನ್ಯೇನ ನಿವಾರ್ಯತೇ ॥ ೬೩ ॥

ಬ್ರಹ್ಮಣೋ ವಚನಂ ಶ್ರುತ್ವಾ ತತೋ ದುದ್ರಾವ ಬ್ರಾಹ್ಮಣಃ ।
ತ್ರಸ್ತೋ ಜಗಾಮ ಕೈಲಾಸಂ ಶಂಕರಂ ಶರಣಂ ಭಿಯಾ ॥ ೬೪ ॥

ಕೃಪಾನಿಧಾನ ಮಾಂ ರಕ್ಷೇತ್ಯುವಾಚ ಶಂಕರಂ ಭಿಯಾ ।
ನ ಹಿ ಪಪ್ರಚ್ಛ ಕುಶಲಂ ಸರ್ವಜ್ಞೋ ಬ್ರಾಹ್ಮಣಂ ಶಿವಃ ॥ ೬೫ ॥

---

೬೧. ಎಲೈ ಬ್ರಾಹ್ಮಣನೇ, ಯಾವ ಮೂಢನು ವಿಷ್ಣುವಿನ ಪ್ರಾಣಕ್ಕೆ ಸದೃಶನಾದ ವೈಷ್ಣವನನ್ನು ದ್ವೇಷಿಸುವನೋ ಮತ್ತು ಆ ವಿಷ್ಣುಭಕ್ತನನ್ನು ಕೊಲ್ಲುವನೋ ಅವನನ್ನು ನಾಶಗೊಳಿಸಲು ಶ್ರೀಹರಿಯೇ ಸಮರ್ಥನು.

೬೨. ಆದುದರಿಂದ ಎಲೈ ವತ್ಸನೇ, ನೀನು ಬೇರೆಡೆಗೆ ಹೋಗಬೇಕೇ ಹೊರತು ಇಲ್ಲಿ ರಕ್ಷಣೆಯು ಸಿಗುವುದಿಲ್ಲ. ಇಲ್ಲದಿದ್ದರೆ ಸುದರ್ಶನ ಚಕ್ರವು ನಿನ್ನೊಡನೆ ನನ್ನನ್ನೂ ಕೊಲೆಮಾಡುವುದರಲ್ಲಿ ಸಂಶಯವಿಲ್ಲ.

೬೩. ಯಾವುದು ಬ್ರಹ್ಮಲೋಕವನ್ನೂ, ಬ್ರಹ್ಮಾಂಡವನ್ನೂ ಕ್ಷಣಮಾತ್ರದಲ್ಲಿ ದಹಿಸಲು ಸಮರ್ಥವಾಗಿರುವುದೋ ಮತ್ತು ತೇಜಸ್ಸಿನಲ್ಲಿ ಶ್ರೀಹರಿಗೆ ಸಮನೆನಿಸಿರುವುದೋ ಅಂಥ ಸುದರ್ಶನವನ್ನು ತಡೆಯುವರಾರು ?

೬೪. ಬ್ರಹ್ಮನ ಮಾತನ್ನು ಕೇಳಿ ಬ್ರಾಹ್ಮಣೋತ್ತಮನಾದ ದೂರ್ವಾಸನು ಅಲ್ಲಿಂದ ಕೈಲಾಸಪರ್ವತಕ್ಕೆ ಓಡಿ ಭಯದಿಂದ ಶಂಕರನಮರೆಹೊಕ್ಕನು.

೬೫. 'ಎಲೈ ಕೃಪಾಸಾಗರನೇ ನನ್ನನ್ನು ಕಾಪಾಡು" ಎಂದು ಮೊರೆಯಿಡಲು ಸರ್ವಜ್ಞನಾದ ಶಿವನು ಆ ಬ್ರಾಹ್ಮಣನ ಸ್ಥಿತಿಯನ್ನು ತಿಳಿದು ಕುಶಲಪ್ರಶ್ನೆಯನ್ನೇ ಮಾಡಲಿಲ್ಲ.

ಉವಾಚ ದೀನದೀನೇಶಃ ಸಂಹರ್ತಾ ಜಗತಾಂ ಕ್ಷಣಾತ್ ।
ಸ್ಥಿರೋ ಭವ ದ್ವಿಜಶ್ರೇಷ್ಠ ಮದೀಯಂ ವಚನಂ ಶೃಣು ॥ ೬೬ ॥

॥ ಶಂಕರ ಉವಾಚ ॥

ಪೌತ್ರಸ್ತ್ವಂ ಜಗತಾಂ ಧಾತುರತ್ರೇಶ್ಚ ತನಯೋ ಮುನೇ ।
ವೇದಜ್ಞಾತಾಽಸಿ ಸರ್ವಜ್ಞ ಮೂರ್ಖತುಲ್ಯಂ ತು ಕರ್ಮ ತೇ ॥ ೬೭ ॥

ವೇದೇಷು ಚ ಪುರಾಣೇಷು ಸೇತಿಹಾಸೇಷು ಸರ್ವಶಃ ।
ನಿರೂಪಿತೋ ಯಃ ಸರ್ವೇಶಸ್ತಂ ನ ಜಾನಾಸಿ ಮೂಢವತ್ ॥ ೬೮ ॥

ಅಹಂ ಬ್ರಹ್ಮಾ ಚ ಇಂದ್ರಶ್ಚ ಆದಿತ್ಯಾ ವಸವಸ್ತಥಾ ।
ಧರ್ಮೇಂದ್ರೌ ಚ ಸುರಾಃ ಸರ್ವೇ ಮುನೀಂದ್ರಾ ಮನವಸ್ತಥಾ ॥ ೬೯ ॥

ಆವಿರ್ಭೂತಾಸ್ತಿರೋಭೂತಾ ಯಸ್ಯ ಭ್ರೂಭಂಗಲೀಲಯಾ ।
ತಸ್ಯ ಪ್ರಾಣಾಧಿಕಂ ಭಕ್ತಂ ಹಂಸಿ ತ್ವಂ ಕಸ್ಯ ತೇಜಸಾ ॥ ೭೦ ॥

---

೬೬ ದೀನಾನಾಥರಿಗೆ ಒಡೆಯನೂ, ಕ್ಷಣಮಾತ್ರದಲ್ಲಿ ಜಗತ್ತನ್ನೆಲ್ಲ ಸಂಹರಿಸುವವನೂ ಆದ ಆ ಶಂಕರನು ಅವನನ್ನು ಕುರಿತು 'ಎಲೈ ಬ್ರಾಹ್ಮಣೋತ್ತಮನೇ, ನೀನು ಸ್ಥಿರಚಿತ್ತನಾಗಿ ನನ್ನ ಮಾತನ್ನು ಕೇಳು' ಎಂದನು.

೬೭. ಶಂಕರ:—ನೀನು ಜಗತ್ಸೃಷ್ಟಿಕರ್ತನ ಮೊಮ್ಮಗನಾಗಿಯೂ, ಅತ್ರಿ ಮಹರ್ಷಿಯ ಮಗನಾಗಿಯೂ ಇರುವುದಲ್ಲದೆ ವೇದವೇತ್ತೃವೂ ಸರ್ವಜ್ಞನೂ ಆಗಿರುವೆ. ಆದರೆ ನಿನ್ನ ಕರ್ಮವು ಮಾತ್ರ ಮೂರ್ಖನು ಮಾಡತಕ್ಕದ್ದಾಗಿದೆ.

೬೮. ವೇದಪುರಾಣಗಳಲ್ಲಿಯೂ, ಎಲ್ಲಾ ಇತಿಹಾಸಗಳಲ್ಲಿಯೂ ಯಾರು ಸರ್ವೇಶ್ವರನೆಂದು ನಿರೂಪಿತವಾಗಿದೆಯೋ ಅವನನ್ನು ಅರಿಯದೆ ನೀನೂ ಮೂಢನಂತಿರುವೆ.

೬೯-೭೦. ಶಂಕರ:—ನಾನು ಮತ್ತು ಬ್ರಹ್ಮನೂ, ಇಂದ್ರಾದಿತ್ಯ ವಸುಗಳೂ, ಧರ್ಮ ಮತ್ತು ಇತರದೇವತೆಗಳೂ, ಮುನಿಮಾನವ ಪ್ರಭೃತಿಗಳೂ ಯಾರ ಭ್ರೂಚಾಲನ ಮಾತ್ರದಿಂದ ಆವಿರ್ಭಾವತಿರೋಭಾವಗಳನ್ನು ಹೊಂದುವರೋ ಆ ವಿಷ್ಣುವಿನ ಪ್ರಾಣಕ್ಕಿಂತಲೂ ಪರಮಪ್ರಿಯನಾದ ಭಕ್ತನನ್ನು ನೀನು ಯಾವ ಪ್ರಭಾವದಿಂದ ಕೊಲ್ಲಬಯಸುತ್ತೀಯೆ ?

ಅಹಂ ಬ್ರಹ್ಮಾ ಚ ಕಮಲಾ ದುರ್ಗಾ ವಾಣೀ ಚ ರಾಧಿಕಾ ।
ನ ಹಿ ಭಕ್ತಾತ್ಪರಾಃ ಪ್ರೇಮ್ಣಾ ಭಕ್ತಾಶ್ಚ ಸರ್ವತಃ ಪ್ರಿಯಾಃ ॥ ೭೧ ॥

ಕ್ಷುದ್ರಾಂಶ್ಚ ಮಹತೋ ಭಕ್ತಾನ್ ಶಶ್ವದ್ರಕ್ಷತಿ ಯತ್ನತಃ ।
ಸರ್ವಾಂತರಾತ್ಮಾ ಭಗವಾಂಶ್ಚಕ್ರೇಣ ದುಃಸಹೇನ ಚ ॥ ೭೨ ॥

ನಿಯುಜ್ಯ ಚಕ್ರಂ ದುರ್ವಾರ್ಯಂ ಸ್ವಾತ್ಮತುಲ್ಯಂ ಚ ತೇಜಸಾ ।
ತಥಾಽಪಿ ನ ಪ್ರತೀತಿಶ್ಚ ಸ್ವಯಂ ಗಚ್ಛತಿ ರಕ್ಷಿತುಂ ॥ ೭೩ ॥

ಸ್ವಕೀಯಗುಣನಾಮ್ನಾಂ ಚ ಶ್ರವಣಾದತಿಸಂಭ್ರಮಃ ।
ಭಕ್ತಸಂಗೇ ಭ್ರಮತ್ಯೇವ ಚ್ಛಾಯೇವ ಸತತಂ ಹರಿಃ ॥ ೭೪ ॥

ಕಾಂತಾ ಪ್ರಾಣಾಧಿಕಾ ಶಶ್ವನ್ನ ಹಿ ಕೋಽಪಿ ತತೋಽಧಿಕಃ ।
ಭಕ್ತಾನ್ ದ್ವೇಷ್ಟಿ ಸ್ವಯಂ ಸಾ ಚೇತ್ತೂರ್ಣಂ ತ್ಯಜತಿ ತಾಂ ಪ್ರಭುಃ ॥ ೭೫ ॥

---

೭೧ ನಾನು ಮತ್ತು ಬ್ರಹ್ಮನಾಗಲೀ, ಲಕ್ಷ್ಮಿ, ದುರ್ಗಾ, ಸರಸ್ವತೀ ಮತ್ತು ರಾಧಾದೇವಿಯರಾಗಲೀ, ಶ್ರೀಕೃಷ್ಣನಿಗೆ ಭಕ್ತರಿಗಿಂತ ಪ್ರೀತಿಪಾತ್ರರಲ್ಲ. ಎಲ್ಲರಗಿಂತಲೂ ಭಕ್ತರೇ ಪ್ರೀತಿಪಾತ್ರರು.

೭೨. ಸರ್ವಾಂತರ್ಯಾಮಿಯಾದ ಪರಮಾತ್ಮನು ತನ್ನ ದುಃಸಹವಾದ ಸುದರ್ಶನ ಚಕ್ರದಿಂದ ಅಲ್ಪರಾಗಲೀ, ಮಹಾತ್ಮರಾಗಲೀ ಭಕ್ತರಾದವರನ್ನು. ಸಂರಕ್ಷಿಸುವನು.

೭೩. ತೇಜಸ್ಸಿನಲ್ಲಿ ತನಗೆ ಸಮಾನವೂ ಅಪ್ರತಿಹತವೂ ಆದ ಚಕ್ರವನ್ನು ನಿಯಮಿಸಿದರೂ ತೃಪ್ತನಾಗದೆ ಭಕ್ತರ ಹಿಂದೆ ತಾನೇ ರಕ್ಷಣೆಗಾಗಿ ಹೋಗುತ್ತಾನೆ.

೭೪. ತನ್ನ ನಾಮಗುಣಗಳ ಸಂಕೀರ್ತನೆಯನ್ನು ಕೇಳಿ ಸಂಭ್ರಮಾನ್ವಿತನಾಗಿ ಭಕ್ತರ ಹಿಂದೆ ನೆರಳಿನಂತೆ ಶ್ರೀಹರಿಯು ಸರ್ವದಾ ಭ್ರಮಿಸುತ್ತಿರುವನು.

೭೫ ಭಕ್ತರಿಗಿಂತ ಮೇಲಾಗಿ ಶ್ರೀಹರಿಗೆ ಕಾಂತೆಯೂ ಪ್ರಾಣಾಧಿಕಳಲ್ಲ ಕಾಂತೆಯೂ ಭಕ್ತರನ್ನು ದ್ವೇಷಿಸುವುದಾದರೆ ಪ್ರಭುವುಜಾಗ್ರತೆಯಾಗಿ ಅವಳನ್ನೂ ತ್ಯಜಿಸುವನು.

ಸರ್ವೇಷಾಂ ಚ ಪ್ರಿಯಾ ವಿಪ್ರಾಃ ಸ್ವಶರೀರಾದಪಿ ದ್ವಿಜ ।
ಬ್ರಾಹ್ಮಣೇಭ್ಯಃ ಪ್ರಿಯಾ ಭಕ್ತಾಃ ಪ್ರಾಣೇಭ್ಯಶ್ಚ ಹರೇರಪಿ ॥ ೭೬ ॥

ಈಶ್ವರಸ್ಯ ಪ್ರಿಯಃ ಕೋ ವಾಽಪ್ರಿಯಃ ಕೋ ವಾ ಜಗತ್ತ್ರಯೇ ।
ಯಃ ಶಿಷ್ಯಸ್ತಂ ಭಜೇಚ್ಛಶ್ವದ್ಧ್ಯಾಯತೇ ಸತತಂ ಸದಾ ॥ ೭೭ ॥

ಮಹತಿ ಪ್ರಲಯೇ ಬ್ರಹ್ಮನ್ ಬ್ರಹ್ಮಾಂಡೌಘೇ ಜಲಪ್ಲುತೇ ।
ನ ತತ್ರ ನಾಶೋ ಭಕ್ತಾನಾಂ ಸರ್ವೇಷಾಂ ಚ ಭವಿಷ್ಯತಿ ॥ ೭೮ ॥

ಭಜ ಬ್ರಾಹ್ಮಣ ಗೋವಿಂದಂ ಸ್ಮರ ತಸ್ಯ ಪದಾಂಬುಜಮ್ ।
ಸರ್ವಾಪದೋ ವಿನಶ್ಯಂತಿ ಶ್ರೀಹರೇಃ ಸ್ಮರಣಾದಪಿ ॥ ೭೯ ॥

ವ್ರಜ ಶೀಘ್ರಂ ಚ ವೈಕುಂಠೇ ವೈಕುಂಠಃ ಶರಣಂ ತವ ।
ದಾಸ್ಯತ್ಯೇವಾಭಯಂ ತುಭ್ಯಂ ಕರುಣಾಸಾಗರೋ ವಿಭುಃ ॥ ೮೦ ॥

---

೭೬. ಎಲೈ ದ್ವಿಜೋತ್ತಮನೇ, ಶ್ರೀಹರಿಗೆ ಎಲ್ಲರಿಗಿಂತಲೂ, ಮತ್ತು ತನ್ನ ಶರೀರಕ್ಕಿಂತಲೂ ಬ್ರಾಹ್ಮಣರು ಪ್ರಿಯರೆನಿಸುವರು ಆದರೆ ಶ್ರೀಹರಿಗೆ ಬ್ರಾಹ್ಮಣರಿಗಿಂತಲೂ, ಅಷ್ಟೇಕೆ ತನ್ನ ಪ್ರಾಣಕ್ಕಿಂತಲೂ ಭಕ್ತರು ಪ್ರೀತಿ ಪಾತ್ರರಾಗುವರು.

೭೭. ಸರ್ವೇಶ್ವರನಿಗೆ ಮೂರುಲೋಕವಲ್ಲೂ ಪ್ರಿಯರಾರು? ಅಪ್ರಿಯರಾರು! ಶಿಷ್ಯನಾದವನು ಸರ್ವದಾ ಶ್ರೀಹರಿಯನ್ನು ಭಜಿಸಿ ಧ್ಯಾನಿಸುವನು

೭೮. ಎಲೈ ಬ್ರಾಹ್ಮಣೋತ್ತಮನೇ ಮಹಾಪ್ರಳಯದಲ್ಲಿ ಬ್ರಹ್ಮಾಂಡವೆಲ್ಲವೂ ನೀರಿನಲ್ಲಿ ಮುಳಗಿದರೂ, ವಿಷ್ಣುಭಕ್ತರಿಗೆ ಮಾತ್ರ ಆವಾಗಲೂ ನಾಶವುಂಟಾಗುವುದಿಲ್ಲ.

೭೯. ಆದುದರಿಂದ ಎಲೈ ಬ್ರಾಹ್ಮಣನೇ, ಗೋವಿಂದನನ್ನು ಭಜಿಸಿ, ಅವನ ಚರಣಕಮಲಗಳನ್ನು ಸ್ಮರಿಸಿಕೋ. ಶ್ರೀಹರಿಯನ್ನು ಸ್ಮರಿಸಿದ ಮಾತ್ರದಿಂದಲೇ ಎಲ್ಲಾ ಆಪತ್ತುಗಳೂ ನಾಶವಾಗುವುವು

೮೦. ಜಾಗ್ರತೆಯಾಗಿ ವೈಕುಂಠಲೋಕಕ್ಕೆ ಹೋಗು. ಶ್ರೀಹರಿಯೇ ನಿನಗ ದಿಕ್ಕಾಗಿರುವನು ಕರುಣಾಮಯನಾದ ಸರ್ವೇಶ್ವರನು ನಿನಗೆ ನಿಜವಾಗಿಯೂ ಅಭಯಪ್ರದಾನಮಾಡುವನು.

ಏತಸ್ಮಿನ್ನಂತರೇ ವ್ಯಾಪ್ತಂ ಕೈಲಾಸಂ ಚಕ್ರತೇಜಸಾ ।
ಯಥಾ ಚ ಸೂರ್ಯಕಿರಣೈಃ ಸುಪ್ರದೀಪ್ತಂ ಮಹೀತಲಂ ॥ ೮೧ ॥

ದಗ್ಧಾ ಜ್ವಾಲಾಕರಾಲೈಶ್ಚ ಸರ್ವೇ ಕೈಲಾಸವಾಸಿನಃ ।
ತ್ರಾಹಿ ತ್ರಾಹೀತ್ಯೇವಮುಕ್ತ್ವಾ ಶಂಕರಂ ಶರಣಂ ಯಯುಃ ॥ ೮೨ ॥

ದೃಷ್ಟ್ವಾ ಚಕ್ರಂ ದುರ್ವಿಷಹಂ ಶಂಕರಃ ಕರುಣಾನಿಧಿಃ ।
ಪಾರ್ವತ್ಯಾ ಸಹ ಸಂಪ್ರೀತ್ಯಾ ಬ್ರಾಹ್ಮಣಾಯಾಽಶಿಷಂ ದದೌ ॥ ೮೩ ॥

ತೇಜಃ ಸತ್ಯಂ ತಪಃ ಸತ್ಯಂ ಯದಿ ಚೇಚ್ಚಿರಸಂಚಿತಂ ।
ಕೃತಾಪರಾಧೋ ಭೀತಶ್ಚ ದ್ವಿಜೋ ಭವತು ವಿಜ್ವರಃ ॥ ೮೪ ॥

॥ ಪಾರ್ವತ್ಯುವಾಚ ॥

ಯತ್ಪ್ರಭೋರ್ಮಮ ಪುಣ್ಯೇಷು ಬ್ರಾಹ್ಮಣಃ ಶರಣಾಗತಃ ।
ಮಮಾಽಽಶಿಷಾ ಮಹಾಭೀತ್ಯಾ ಶೀಘ್ರಂ ಭವತು ವಿಜ್ವರಃ ॥ ೮೫ ॥

---

೮೧. ಈ ಸಮಯಕ್ಕೆ ಸರಿಯಾಗಿ ಸೂರ್ಯಕಿರಣಗಳಿಂದ ಭೂಮಂಡಲವು ಬೆಳಗುವಂತೆ ಸುದರ್ಶನದ ತೇಜಸ್ಸಿನಿಂದ ಕೈಲಾಸವು ಬೆಳಗಲಾರಂಭಿಸಿತು

೮೨. ಆ ಚಕ್ರದ ಅತ್ಯುಗ್ರವಾದ ಜ್ವಾಲೆಗಳಿಂದ ಕೈಲಾಸವಾಸಿಗಳೆಲ್ಲರೂ ದಗ್ಧರಾಗಿ 'ಕಾಪಾಡು ಕಾಪಾಡು' ಎಂದು ಕೂಗುತ್ತ ಶಂಕರನನ್ನು ಮರೆಹೊಕ್ಕರು.

೮೩. ಸಹಿಸಲಾರದ ಆ ಚಕ್ರವನ್ನು ನೋಡಿ ಕರುಣಾನಿಧಿಯಾದ ಶಂಕರನು ಪಾರ್ವತಿಯೊಡಗೂಡಿ ಪ್ರೀತಿಯಿಂದ ಆ ಬ್ರಾಹ್ಮಣನಿಗೆ ಆಶೀರ್ವಾದಮಾಡಿದನು.

೮೪. ನಾನು ಚಿರಕಾಲದಿಂದ ಸಂಗ್ರಹಿಸಿರುವ ತೇಜಸ್ಸು ಮತ್ತು ತಪಸ್ಸು ಸತ್ಯವಾಗಿರುವುದಾದರೆ ಅಪರಾಧಮಾಡಿ ಭಯಗ್ರಸ್ತನಾಗಿರುವ ಈ ಬ್ರಾಹ್ಮಣನು ಚಿಂತಾರಹಿತನಾಗಲಿ.

೮೫. ಪಾರ್ವತಿ:—ನನ್ನ ಪ್ರಭುವಿನ ಪುಣ್ಯದಿಂದ ಶರಣಾಗತನಾಗಿರುವ ಬ್ರಾಹ್ಮಣನು, ನನ್ನ ಆಶೀರ್ವಾದದಿಂದ ಈ ಮಹಾಭೀತಿಯಿಂದ ಪಾರಾಗಲಿ.

ಇತ್ಯೇವಮುಕ್ತ್ವಾ ಕೃಪಯಾ ವಿರರಾಮ ಶಿವಾ ಶಿವಃ ।
ಮುನಿಃ ಪ್ರಣಮ್ಯ ದೇವೇಶಂ ವೈಕುಂಠಂ ಶರಣಂ ಯಯೌ ॥ ೮೬ ॥

ಗತ್ವಾ ವೈಕುಂಠಭವನಂ ಮನೋಯಾಯೀ ಮುನೀಶ್ವರಃ ।
ದೃಷ್ಟ್ವಾ ಸುದರ್ಶನಂ ಪಶ್ಚಾದ್ವಿವೇಶಾಂತಃಪುರಂ ಹರೇಃ ॥ ೮೭ ॥

ದದರ್ಶ ಶ್ರೀಹರಿಂ ವಿಪ್ರೋ ರತ್ನಸಿಂಹಾಸನಸ್ಥಿತಂ ।
ಶಂಖಚಕ್ರಗದಾಪದ್ಮಧರಂ ಪೀತಾಂಬರಂ ಪರಂ ॥ ೮೮ ॥

ಶ್ಯಾಮಂ ಚತುರ್ಭುಜಂ ಶಾಂತಂ ಲಕ್ಷ್ಮೀಕಾಂತಂ ಮನೋಹರಂ ।
ರತ್ನಾಲಂಕಾರಶೋಭಾಢ್ಯಂ ರತ್ನಮಾಲಾವಿಭೂಷಿತಂ ॥ ೮೯ ॥

---

೮೬. ಹೀಗೆ ಪಾರ್ವತೀ ಪರಮೇಶ್ವರರು ದಯೆಯಿಂದ ನುಡಿದು ಸುಮ್ಮನಾದರು. ಅನಂತರ ಆ ದೂರ್ವಾಸಮುನಿಯು ಈಶ್ವರನಿಗೆ ವಂದಿಸಿ ವಿಷ್ಣುವನ್ನು ಮರೆಹೊಕ್ಕನು.

೮೭. ಮನೋವೇಗದಲ್ಲಿ ಹೋಗಬಲ್ಲ ಆ ಮನೀಶ್ವರನು ವೈಕುಂಠಲೋಕಕ್ಕೆ ಹೋಗಿ, ತನ್ನ ಹಿಂದೆಯೇ ಸುದರ್ಶನ ಚಕ್ರವು ಬರುತ್ತಿರುವುದನ್ನು ನೋಡಿ ಶ್ರೀಹರಿಯ ಅಂತಃಪುರವನ್ನು ಪ್ರವೇಶಿಸಿದನು.

೮೮. ಅಲ್ಲಿ ಶಂಖ ಚಕ್ರ ಗದಾಪದ್ಮಗಳನ್ನು ನಾಲ್ಕು ಕೈಗಳಲ್ಲೂ ಧರಿಸಿ ಪೀತಾಂಬರವನ್ನುಟ್ಟು ರತ್ನಸಿಂಹಾಸನದಲ್ಲಿ ಕುಳಿತಿರುವ ಶ್ರೀಹರಿಯನ್ನು ನೋಡಿದನು

೮೯. ಶ್ಯಾಮವರ್ಣನೂ, ಚತುರ್ಭುಜನೂ, ಶಾಂತಾಕಾರನೂ, ಮನೋಹರನೂ ಆದ ಆ ಲಕ್ಷ್ಮೀಕಾಂತನು ರತ್ನಾಲಂಕಾರಗಳಿಂದ ಶೋಭಿತನಾಗಿ ರತ್ನಮಾಲೆಯಿಂದ ವಿಭೂಷಿತನಾಗಿದ್ದನು.

ಈಷದ್ಧಾಸ್ಯಪ್ರಸನ್ನಾಸ್ಯಂ ಭಕ್ತಾನುಗ್ರಹಕಾರಕಂ ।
ಸದ್ರತ್ನಸಾರರಚಿತಂ ಕಿರೀಟೋಜ್ಜ್ವಲಶೇಖರಂ ॥ ೯೦ ॥

ಪಾರ್ಷದಪ್ರವರೇಂದ್ರೈಶ್ಚ ಸೇವಿತಂ ಶ್ವೇತಚಾಮರೈಃ ।
ಪದ್ಮಾಸೇವಿತಪಾದಾಬ್ಜಂ ಸರಸ್ವತ್ಯಾ ಸ್ತುತಂ ಪುರಃ ॥ ೯೧ ॥

ಸುನಂದನಂದಕುಮುದಪ್ರಚಂಡಾದಿಭಿರಾವೃತಂ ।
ಗುಣಾನುವಾದಂ ಗಾಯಂತಂ ತಂತ್ರೈಃ ಪಶ್ಯಂತವಿಾಪ್ಸಿತಂ ॥ ೯೨ ॥

ಏವಂ ಭೂತಂ ಪ್ರಭುಂ ದೃಷ್ಟ್ವಾ ದಂಡವತ್ಪ್ರಣನಾಮ ಚ ।
ತುಷ್ಟಾವ ಸಾಮವೇದೋಕ್ತಸ್ತೋತ್ರೇಣ ಪರಮೇಶ್ವರಂ ॥ ೯೩ ॥

॥ ದುರ್ವಾಸಾ ಉವಾಚ ॥

ತ್ರಾಹಿ ಮಾಂ ಕಮಲಾಕಾಂತ ತ್ರಾಹಿ ಮಾಂ ಕರುಣಾನಿಧೇ ।
ದೀನಬಂಧೋಽತಿದೀನೇಶ ಕರುಣಾಸಾಗರ ಪ್ರಭೋ ॥ ೯೪ ॥

---

೯೦. ಮಂದಹಾಸದಿಂದ ಪ್ರಸನ್ನಮುಖನೂ ಭಕ್ತಾನುಗ್ರಹ ಕಾತರನೂ ಆದ ಆ ಲಕ್ಷ್ಮೀಪತಿಯು ಶ್ರೇಷ್ಠವಾದ ರತ್ನಗಳನ್ನು ಮೆಟ್ಟಿರುವ ಅತ್ಯುಜ್ವಲ ಕಿರೀಟವನ್ನು ಧರಿಸಿದ್ದನು

೯೧. ಪಾರ್ಷದಶ್ರೇಷ್ಠರು ಶ್ವೇತಚಾಮರಗಳನ್ನು ಧರಿಸಿ ಆ ಪರಮಾತ್ಮನ ಸೇವೆಗೈಯುತ್ತಿದ್ದರು. ಲಕ್ಷ್ಮೀದೇವಿಯು ಪಾದಕಮಲಗಳನ್ನು ಸೇವಿಸುತ್ತಲೂ, ಸರಸ್ವತೀದೇವಿಯು ಮುಂದೆ ಸ್ತುತಿಸುತ್ತಲೂ ಇದ್ದರು.

೯೨. ಸುನಂದ ನಂದ ಕುಮುದ ಮತ್ತು ಪ್ರಚಂಡಾದಿಗಳು ಪರಮಾತ್ಮನನ್ನು ಸುತ್ತುವರಿದು ಅವನ ಗುಣಗಳನ್ನು ಗಾನಮಾಡುತ್ತ ತಂತ್ರಶಕ್ತಿಯಿಂದ ಪರಮಾತ್ಮನನ್ನು ನೋಡುತ್ತಿದ್ದರು.

೯೩. ಈ ರೀತಿಯಾಗಿರುವ ಪರಮಾತ್ಮನನ್ನು ನೋಡಿ ಸಾಷ್ಟಾಂಗ ಪ್ರಣಾಮ ಮಾಡಿ ಸಾಮವೇದೋಕ್ತವಾದ ಸ್ತೋತ್ರದಿಂದ ಸ್ತುತಿಸಲಾರಂಭಿಸಿದನು.

೯೪. ದೂರ್ವಾಸಮುನಿ :—ಎಲೈ ಕಮಲಾಕಾಂತನೇ ಕರುಣಾಮಯನೇ ದೀನಬಂಧುವೇ, ದಯಾಸಾಗರನೇ, ಶರಣಾಗತನಾದ ನನ್ನನ್ನು ಕಾಪಾಡು

ವೇದವೇದಾಂಗ ಸಂಸ್ರಷ್ಟುರ್ವಿಧಾತುಶ್ಚ ಸ್ವಯಂ ವಿಧೇ ।
ಮೃತ್ಯೋರ್ಮೃತ್ಯುಃ ಕಾಲಕಾಲ ತ್ರಾಹಿ ಮಾಂ ಸಂಕಟಾರ್ಣವೇ ॥ ೯೫ ॥

ಸಂಹಾರಕರ್ತುಃ ಸಂಹಾರಃ ಸರ್ವೇಶಃ ಸರ್ವಕಾರಣಃ ।
ಮಹಾವಿಷ್ಣುತರೋರ್ಬೀಜ ರಕ್ಷ ಮಾಂ ಭವಸಾಗರೇ ॥ ೯೬ ॥

ಶರಣಾಗತಶೋಕಾರ್ತಭಯತ್ರಾಣಪರಾಯಣ ।
ಭಗವನ್ನವ ಮಾಂ ಭೀತಂ ನಾರಾಯಣ ನಮೋಽಸ್ತು ತೇ ॥ ೯೭ ॥

ವೇದೇಷ್ವಾದ್ಯಂ ಚ ಯದ್ವಸ್ತು ವೇದಾಃ ಸ್ತೋತುಂ ನ ಚ ಕ್ಷಮಾಃ ।
ಸರಸ್ವತೀ ಜಡೀಭೂತಾ ಕಿಂ ಸ್ತುವಂತಿ ವಿಪಶ್ಚಿತಃ ॥ ೯೮ ॥

---

೯೫. ವೇದವೇದಾಂಗಗಳ ಸ್ರಷ್ಟೃವೂ, ಬ್ರಹ್ಮನ ಸೃಷ್ಟಿಗೆ ಆದಿಕಾರಣನೂ ಮೃತ್ಯುವಿಗೆ ಮೃತ್ಯುಸ್ವರೂಪನೂ, ಕಾಲಕಾಲನೂ ಆದ ಎಲೈ ಪರಮಾತ್ಮನೇ ನನ್ನನ್ನು ಸಂಕಟವೆಂಬ ಸಮುದ್ರದಿಂದ ಪಾರುಗಾಣಿಸು.

೯೬. ಸಂಹಾರಕರ್ತೃವಿನ ಸಂಹಾರಕನೂ, ಸರ್ವೇಶ್ವರನೂ, ಸರ್ವಕಾರಣನೂ, ಮಹಾವಿಷ್ಣುವೆಂಬ ಮರಕ್ಕೆ ಬೀಜಸ್ವರೂಪನೂ ಆದ ನೀನು ಸಂಸಾರ ಸಮುದ್ರದಲ್ಲಿರುವ ನನ್ನನ್ನು ಕಾಪಾಡು.

೯೭. ಶರಣಾಗತರ ಮತ್ತು ಶೋಕಪೀಡಿತರ ಭಯವನ್ನು ಹೋಗಲಾಡಿಸುವುದರಲ್ಲಿ ಆಸಕ್ತನಾದ ಎಲೈ ಪರಮಾತ್ಮನೇ, ಭಯಗೊಂಡ ನನ್ನನ್ನು ಕಾಪಾಡು. ಎಲೈ ನಾರಾಯಣನೇ, ನಿನಗೆ ವಂದಿಸುವೆನು.

೯೮. ಯಾವ ವಸ್ತುವು ವೇದಗಳಿಗೆ ಆದಿಯೋ, ವೇದಗಳು ಯಾವನನ್ನು ಸ್ತುತಿಸಲಾರವೋ, ಸರಸ್ವತಿಯು ಯಾವನನ್ನು ಹೊಗಳಲು ಜಡವಾದಳೋ ಅಂಥ ಪರಮಾತ್ಮನನ್ನು ಪಂಡಿತರು ಸ್ತುತಿಸಬಲ್ಲರೇ ?

ಶೇಷಃ ಸಹಸ್ರವಕ್ತ್ರೇಣ ಯಂ ಸ್ತೋತುಂ ಜಡತಾಂ ವ್ರಜೇತ್ ।
ಪಂಚವಕ್ತ್ರೋ ಜಡೀಭೂತೋ ಜಡೀಭೂತಶ್ಚತುರ್ಮುಖಃ ॥ ೯೯ ॥

ಶ್ರುತಯಃ ಸ್ಮೃತಿಕರ್ತಾರೋ ವಾಣೀ ಚೇತ್ ಸ್ತೋತುಮಕ್ಷಮಾ ।
ಕೋಽಹಂ ವಿಪ್ರಶ್ಚ ವೇದಜ್ಞಃ ಶಿಷ್ಯಃ ಕಿಂ ಸ್ತೌಮಿ ಮಾನದ ॥ ೧೦೦ ॥

ಮನೂನಾಂ ಚ ಮಹೇಂದ್ರಾಣಾಮಷ್ಟಾವಿಂಶತಿಮೇ ಗತೇ ।
ದಿವಾನಿಶಂ ಯಸ್ಯ ವಿಧೇರಷ್ಟೋತ್ತರ ಶತಾಯುಷಃ ॥ ೧೦೧ ॥

ತಸ್ಯ ಪಾತೋ ಭವೇದ್ಯಸ್ಯ ಚಕ್ಷುರುನ್ಮಿಲನೇನ ಚ ।
ತಮನಿರ್ವಚನೀಯಂ ಚ ಕಿಂ ಸ್ತೌಮಿ ಪಾಹಿ ಮಾಂ ಪ್ರಭೋ ॥ ೧೦೨ ॥

ಇತ್ಯೇವಂ ಸ್ತವನಂ ಕೃತ್ವಾ ಪಪಾತ ಚರಣಾಂಬುಜೇ ।
ನಯನಾಂಬುಜನಿರೇಣ ಸಿಷೇಚ ಭಯವಿಹ್ವಲಃ ॥ ೧೦೩ ॥

೯೯-೧೦೦. ಆದಿಶೇಷನು ತನ್ನ ಸಾವಿರಬಾಯಿನಿಂದ ಯಾವ ಪರಮಾತ್ಮನನ್ನು ಹೊಗಳಲಾರದೆ ಜಡನಾಗುವನೋ, ಪಂಚಮುಖನಾದ ಪರಮೇಶ್ವರನೂ, ಚತುರ್ಮುಖನಾದ ಬ್ರಹ್ಮನೂ ಯಾರನ್ನು ಸ್ತುತಿಸಲಾರದೆ ಜಡರಾಗಿರುವರೋ, ಶ್ರುತಿಗಳೂ, ಸ್ಮೃತಿಕರ್ತೃಗಳೂ, ಸರಸ್ವತೀದೇವಿಯೂ ಯಾವ ಪರಮಾತ್ಮನನ್ನು ಹೊಗಳಲು ಅಶಕ್ತರೋ, ಆ ಪರಮಾತ್ಮನನ್ನು ವೇದಪಾಠಮಾಡಿರುವ ಬ್ರಾಹ್ಮಣಮಾತ್ರನಾದ ನಾನು ಹೇಗೆ ಹೊಗಳಲಿ ?

೧೦೧. ಇಪ್ಪತ್ತೆಂಟು ಮನುಗಳ ಮತ್ತು ಮಹೇಂದ್ರರ ಜೀವಿತಕಾಲವು ಕಳೆದರೆ ನೂರೆಂಟುವರ್ಷ ಆಯುಸ್ಸುಳ್ಳ ಬ್ರಹ್ಮನಿಗೆ ಒಂದು ಹಗಲೆನಿಸುವುದು.

೧೦೨. ಅಂಥ ಬ್ರಹ್ಮನ ನಾಶವೂ ಯಾವ ಪರಮಾತ್ಮನ ನಿಮೇಷಮಾತ್ರದಿಂದ ಉಂಟಾಗುವುದೋ ಅಂಥ ಅನಿರ್ವಚನೀಯನಾದ ಪರಮಾತ್ಮನನ್ನು ನಾನೆಂತು ಸ್ತುತಿಸಲಿ ? ಎಲೈ ಪ್ರಭುವೇ ನನ್ನನ್ನು ಕಾಪಾಡು.

೧೦೩. ಹೀಗೆ ಸ್ತೋತ್ರಮಾಡಿ ಪರಮಾತ್ಮನ ಚರಣಕಮಲಗಳ ಮೇಲೆ ಬಿದ್ದು ತನ್ನ ನಯನಕಮಲಗಳ ನೀರಿನಿಂದ ಆ ಕಾಲುಗಳನ್ನು ನೆನೆಸಿದನು.

ದುರ್ವಾಸಸಾ ಕೃತಂ ಸ್ತೋತ್ರಂ ಹರೇಶ್ಚ ಪರಮಾತ್ಮನಃ ।
ಪುಣ್ಯದಂ ಸಾಮವೇದೋಕ್ತಂ ಜಗನ್ಮಂಗಲನಾಮಕಂ ॥ ೧೦೪ ॥

ಯಃ ಪಠೇತ್ಸಂಕಟೆಗ್ರಸ್ತೋ ಭಕ್ತಿಯುಕ್ತಶ್ಚ ಸಂಯತಃ ।
ನಾರಾಯಣಸ್ತಂ ಕೃಪಯಾ ಶೀಘ್ರಮಾಗತ್ಯ ರಕ್ಷತಿ ॥ ೧೦೫ ॥

ರಾಜದ್ವಾರೇ ಶ್ಮಶಾನೇ ಚ ಕಾರಾಗಾರೇ ಭಯಾಕುಲೇ ।
ಶತ್ರುಗ್ರಸ್ತೇ ದಸ್ಯುಭೀತೌ ಹಿಂಸ್ರಜಂತುಸಮನ್ವಿತೇ ॥ ೧೦೬ ॥

ವೇಷ್ಟಿತೇ ರಾಜಸೈನ್ಯೇನ ಮಗ್ನೇ ಪೋತೇ ಮಹಾರ್ಣವೇ ।
ಸ್ತೋತ್ರಸ್ಮರಣಮಾತ್ರೇಣ ಮುಚ್ಯತೇ ನಾತ್ರ ಸಂಶಯಃ ॥ ೧೦೭ ॥

ಇತಿ ಶ್ರೀ ಬ್ರಹ್ಮವೈವರ್ತೇ ದೂರ್ವಾಸಕೃತಂ ಶ್ರೀಕೃಷ್ಣಸ್ತೋತ್ರಂ

॥ ನಾರಾಯಣ ಉವಾಚ ॥

ಮುನೇಶ್ಚ ಸ್ತವನಂ ಶ್ರುತ್ವಾ ಭಗವಾನ್ಭಕ್ತವತ್ಸಲಃ ।
ಪ್ರಹಸ್ಯೋವಾಚ ಮಧುರಂ ಪೀಯೂಷವೃಷ್ಟಿವನ್ಮುದಾ ॥ ೧೦೮ ॥

೧೦೪-೧೦೫. ದೂರ್ವಾಸಮುನಿಯು ಹೇಳಿದ ಪುಣ್ಯಕರವೂ, ಸಾಮವೇದೋಕ್ತವೂ ಜಗನ್ಮಂಗಲದಾಯಕವೂ ಆದ ಶ್ರೀಹರಿಯ ಸ್ತೋತ್ರವನ್ನು ಸಂಕಟಕ್ಕೆ ಸಿಲುಕಿದ ಯಾರಾದರೂ ಭಕ್ತಿಪೂರ್ವಕವಾಗಿ ಪಠಿಸಿದರೆ ಶ್ರೀಮನ್ನಾರಾಯಣನು ದಯೆತೋರಿ ಜಾಗ್ರತೆ ಬಂದು ಅವನನ್ನು ರಕ್ಷಿಸುತ್ತಾನೆ

೧೦೬-೧೦೭. ರಾಜದ್ವಾರದಲ್ಲಾಗಲೀ ಸ್ಮಶಾನದಲ್ಲಾಗಲೀ, ಕಾರಾಗೃಹದಲ್ಲಾಗಲೀ, ಸಿಲುಕಿರುವವರೂ, ಶತ್ರುಗಳ, ಕಳ್ಳರ ಮತ್ತು ದುಷ್ಟಪ್ರಾಣಿಗಳ ವಶಕ್ಕೆ ಸಿಲುಕಿ ಭಯಗ್ರಸ್ತರಾಗಿರುವವರೂ, ರಾಜಸೈನ್ಯದಿಂದ ಪರಿವೃತರಾದವರೂ, ದೊಡ್ಡ ಸಮುದ್ರದಲ್ಲಿ ಹಡಗಿನೊಡನೆ ಮುಳುಗಿದವರೂ, ಈ ಸ್ತೋತ್ರವನ್ನು ಸ್ಮರಿಸಿಕೊಂಡ ಮಾತ್ರದಿಂದಲೇ ಮುಕ್ತರಾಗುವುದರಲ್ಲಿ ಸಂದೇಹವಿಲ್ಲ

ಇಲ್ಲಿಗೆ ಬ್ರಹ್ಮವೈವರ್ತ ಪುರಾಣದಲ್ಲಿ ದೂರ್ವಾಸಮಹರ್ಷಿಯು
ಮಾಡಿದ ಶ್ರೀಕೃಷ್ಣನ ಸ್ತುತಿಯು ಸಂಪೂರ್ಣವಾಯಿತು.

೧೦೮. ನಾರಾಯಣಮಹರ್ಷಿ :—ಇಂತು ದೂರ್ವಾಸಮುನಿಯ ಸ್ತೋತ್ರವನ್ನು ಕೇಳಿ ಭಕ್ತವತ್ಸಲನಾದ ಭಗವಂತನು ನಸುನಕ್ಕು ಮಧುರವೂ, ಅಮೃತರಸೋಪಮವೂ ಆದ ನುಡಿಗಳನ್ನಾಡಿದನು.

|| ಶ್ರೀ ಭಗವಾನುವಾಚ ||

ಉತ್ತಿಷ್ಠೋತ್ತಿಷ್ಠ ಭದ್ರಂ ತೇ ಭವಿಷ್ಯತಿ ವರೇಣ ಮೇ ।
ಕಿಂತು ಮೇ ವಚನಂ ನಿತ್ಯಂ ಶೃಣು ಸತ್ಯಂ ಸುಖಾವಹಂ || ೧೦೯ ||

ಅನ್ಯೇಷಾಂ ಚ ಭವೇತ್ ಜ್ಞಾನಂ ಶ್ರುತ್ವಾ ಶಾಸ್ತ್ರಂ ಸತಾಂ ಮುಖಾತ್ ।
ಸ್ವಮೂರ್ತಿಮಂತಿ ಶಾಸ್ತ್ರಾಣಿ ಭವೇ ಸಂತಶ್ಚರಂತಿ ಹಿ || ೧೧೦ ||

ಕರ್ಮ ವೇದವಿರುದ್ಧಂ ಚ ಸರ್ವೇಷಾಮತಿಗರ್ಹಿತಂ ।
ಕರೋತಿ ವಿದ್ವಾಂಶ್ಚೇಜ್ಜ್ಞಾತ್ವಾ ಸ ಚ ಜೀವನ್ಮೃತಾಧಿಕಃ || ೧೧೧ ||

ಪುರಾಣೇಷು ಚ ವೇದೇಷು ಚೇತಿಹಾಸೇಷು ಬ್ರಾಹ್ಮಣ ।
ವೈಷ್ಣವಾನಾಂ ಚ ಮಹಿಮಾ ಶ್ರುತಃ ಸರ್ವೈಶ್ಚ ಸರ್ವತಃ || ೧೧೨ ||

ಅಹಂ ಪ್ರಾಣಾ ವೈಷ್ಣವಾನಾಂ ಮಮ ಪ್ರಾಣಾಶ್ಚ ವೈಷ್ಣವಾಃ ।
ತಾನೇವ ದ್ವೇಷ್ಟಿ ಯೋ ಮೂಢೋ ಮಮಾಸೂನಾಂ ಚ ಹಿಂಸಕಃ || ೧೧೩ ||

---

೧೦೯. ಶ್ರೀ ಭಗವಾನ್ :—ಎಲೈ ಮುನಿಸತ್ತಮನೇ, ನೀನು ಮೇಲಕ್ಕೇಳು. ನನ್ನ ವರದಿಂದ ನಿನಗೆ ಒಳ್ಳೆಯದಾಗುವುದು. ಆದರೆ ಸತ್ಯವೂ, ನಿತ್ಯವೂ, ಸುಖಕರವೂ ಆದ ನನ್ನ ಮಾತನ್ನು ಕೇಳು.

೧೧೦. ಸತ್ಪುರುಷರ ಬಾಯಿಂದ ಶಾಸ್ತ್ರಾರ್ಥವನ್ನು ಕೇಳಿದ ಮೇಲೆ ಕೆಲವರಿಗೆ ಜ್ಞಾನೋದಯವಾಗುವುದು. ಸತ್ಪುರುಷರಾದರೋ ತಾವೇ ಶಾಸ್ತ್ರಸ್ವರೂಪರಾಗಿ ಎಲ್ಲೆಲ್ಲೂ ಸಂಚರಿಸುತ್ತಾರೆ.

೧೧೧. ವೇದವಿರುದ್ಧವಾದ ಕರ್ಮಾಚರಣೆಯು ಎಲ್ಲರಿಗೂ ನಿಂದ್ಯವಾದುದು. ವಿದ್ವಾಂಸನು ತಿಳಿದೂ ತಿಳಿದೂ ಹಾಗೆ ಮಾಡುವುದರಿಂದ ಜೀವನ್ಮೃತನೆನಿಸುವನು.

೧೧೨. ಎಲೈ ಬ್ರಾಹ್ಮಣನೇ, ವೇದಗಳಲ್ಲಿಯೂ, ಪುರಾಣಗಳಲ್ಲಿಯೂ, ಇತಿಹಾಸಗಳಲ್ಲಿಯೂ ಕೂಡ ವಿಷ್ಣುಭಕ್ತರ ಮಹಿಮೆಯು ಸಕಲರಿಗೂ ವೇದ್ಯವಾಗುತ್ತದೆ.

೧೧೩. ವಿಷ್ಣುಭಕ್ತರಿಗೆ ನಾನು ಪ್ರಾಣಸ್ವರೂಪನಾಗಿರುವೆನು. ವಿಷ್ಣುಭಕ್ತರು ನನಗೆ ಪ್ರಾಣಸ್ವರೂಪರಾಗಿರುವರು ಅವರನ್ನು ದ್ವೇಷಿಸುವ ಮೂಢನು ನನ್ನ ಪ್ರಾಣಗಳನ್ನು ಹಿಂಸಿಸಿದಂತಾಗುವುದು.

ಪುತ್ರಾನ್ಪೌತ್ರಾನ್ಕಲತ್ರಾಂಶ್ಚ ರಾಜ್ಯಂ ಲಕ್ಷ್ಮೀಂ ವಿಹಾಯ ಚ ।
ಧ್ಯಾಯಂತೇ ಸತತಂ ಯೇ ಮಾಂ ಕೋ ಮೇ ತೇಭ್ಯಃ ಪರಃ ಪ್ರಿಯಃ ॥ ೧೧೪ ॥

ಪರಾ ಭಕ್ತಾನ್ನ ಮೇ ಪ್ರಾಣಾ ನ ಚ ಲಕ್ಷ್ಮೀರ್ನ ಶಂಕರಃ ।
ನ ಭಾರತೀ ನ ಚ ಬ್ರಹ್ಮಾ ನ ದುರ್ಗಾ ನ ಗಣೇಶ್ವರಃ ॥ ೧೧೫ ॥

ನ ಬ್ರಾಹ್ಮಣಾ ನ ವೇದಾಶ್ಚ ನ ವೇದಜನನೀ ಪರಾ ।
ನ ಗೋಪೀ ನ ಚ ಗೋಪಾಲಾ ನ ರಾಧಾ ಪ್ರಾಣತಃ ಪ್ರಿಯಾ ॥ ೧೧೬ ॥

ಇತ್ಯೇವಂ ಕಥಿತಂ ಸರ್ವಂ ಸತ್ಯಂ ಸಾರಂ ಚ ವಾಸ್ತವಂ ।
ನ ಪ್ರಶಂಸಾಪರಂ ತೇಷಾಂ ತೇ ಚ ಪ್ರಾಣಾಧಿಕಾಃ ಪ್ರಿಯಾಃ ॥ ೧೧೭ ॥

ಮಾಂ ದ್ವಿಷಂತಿ ಚ ಯೇ ಮೂಢಾ ಜ್ಞಾನಹೀನಾಶ್ಚ ವಂಚಿತಾಃ ।
ಆತ್ಮಾನಂ ಯೇ ನ ಜಾನಂತಿ ತೇ ಯಾಂತಿ ನಿರಯಂ ಚಿರಂ ॥ ೧೧೮ ॥

---

೧೧೪. ಹೆಂಡತಿ, ಮಕ್ಕಳು ಮತ್ತು ಮೊಮ್ಮಕ್ಕಳನ್ನೂ, ರಾಜ್ಯವನ್ನೂ ಐಶ್ವರ್ಯವನ್ನೂ ಬಿಟ್ಟು ಯಾರು ನನ್ನನ್ನು ಸರ್ವದಾ ಧ್ಯಾನಿಸುವರೋ ಅವರಿಗಿಂತ ನನಗೆ ಪ್ರಿಯರಾದವರು ಮತ್ತಾರು ?

೧೧೫. ನನ್ನ ಪ್ರಾಣವಾಗಲೀ, ಲಕ್ಷ್ಮೀದೇವಿಯಾಗಲೀ, ಶಂಕರನಾಗಲೀ, ಸರಸ್ವತಿಯಾಗಲೀ, ಬ್ರಹ್ಮನಾಗಲೀ, ದುರ್ಗಿಯಾಗಲೀ. ಗಣಪತಿಯಾಗಲೀ. ಭಕ್ತರಿಗಿಂತ ನನಗೆ ಹೆಚ್ಚಲ್ಲ.

೧೧೬. ಅಷ್ಟೇ ಅಲ್ಲ. ಬ್ರಾಹ್ಮಣರಾಗಲೀ, ವೇದಗಳಾಗಲೀ, ವೇದಮಾತೆಯಾದ ಸಾವಿತ್ರಿಯಾಗಲೀ, ಗೋಪಗೋಪಿಯರಾಗಲೀ, ರಾಧೆಯಾಗಲೀ ನನ್ನ ಪ್ರಾಣಕ್ಕಿಂತಲೂ ಮೇಲಾದ ಭಕ್ತರಿಗಿಂತ ಹೆಚ್ಚಲ್ಲ.

೧೧೭. ಸತ್ಯವೂ, ಸಾರಾಂಶಭೂತವೂ ಆದ ಕೆಲವು ನುಡಿಗಳನ್ನು ಹೇಳಿದ್ದೇನೆ. ಇದು ಕೇವಲ ಭಕ್ತರ ಹೊಗಳಿಕೆಯಲ್ಲ. ನಿಜವಾಗಿಯೂ ಅವರು ನನ್ನ ಪ್ರಾಣಕ್ಕಿಂತ ಪ್ರಿಯರು.

೧೧೮. ಅಜ್ಞಾನದಿಂದ ವಂಚಿತರಾದ ಮೂಢರು ನನ್ನನ್ನು ದ್ವೇಷಿಸುವುದಾದರೆ, ಆತ್ಮಜ್ಞಾನರಹಿತರಾದ ಆ ಮೂಢರು ನಿಜವಾಗಿಯೂ ಚಿರಕಾಲ ನರಕದಲ್ಲಿ ನರಳುವರು.

ಯೇ ದ್ವಿಷಂತಿ ಚ ಮದ್ಭಕ್ತಾನ್ಪ್ರಾಣಾನಾಮಧಿಕಂ ಪ್ರಿಯಾನ್ ।
ತೇಷಾಂ ಶಾಸ್ತಾ ತ್ವಹಂ ತೂರ್ಣಂ ಪರತ್ರ ನಿರಯಂ ಚಿರಂ ॥ ೧೧೯ ॥

ಪ್ರಭವೋಽಹಂ ಚ ಸರ್ವೇಷಾಮೀಶ್ವರಃ ಪರಿಪಾಲಕಃ ।
ತಥಾಽಪಿ ನ ಸ್ವತಂತ್ರೋಽಹಂ ಭಕ್ತಾಧೀನೋ ದಿವಾನಿಶಂ ॥ ೧೨೦ ॥

ಗೋಲೋಕೇ ವಾಽಥ ವೈಕುಂಠೇ ದ್ವಿಭುಜಂ ಚ ಚತುರ್ಭುಜಂ ।
ರೂಪಮಾತ್ರಮಿದಂ ಶಶ್ವತ್ಪ್ರಾಣಾ ಮೇ ಭಕ್ತಸನ್ನಿಧೌ ॥ ೧೨೧ ॥

ಯದುಕ್ತಂ ಭಕ್ತದತ್ತಂ ಚ ಭಕ್ಷಣೀಯಂ ಚ ತನ್ಮಮ ।
ಅಭಕ್ಷ್ಯದ್ರವ್ಯಮನ್ಯೇನ ದತ್ತಂ ಚೇದಮೃತೋಪಮಂ ॥ ೧೨೨ ॥

---

೧೧೯. ನನ್ನ ಪ್ರಾಣಕ್ಕಿಂತಲೂ ಪ್ರೀತಿಪಾತ್ರರಾದ ಭಕ್ತರನ್ನು ಯಾರು ದ್ವೇಷಿಸುವರೋ ಅವರಿಗೆ ನಾನು ನಿಜವಾಗಿಯೂ ಶಿಕ್ಷೆವಿಧಿಸುತ್ತೇನೆ. ಅಷ್ಟೇ ಅಲ್ಲ ಸತ್ತಮೇಲೆ ಅವರಿಗೆ ಚಿರಕಾಲ ನರಕಪ್ರಾಪ್ತಿಯಾಗುವುದು.

೧೨೦. ನಾನು ಎಲ್ಲರ ಉತ್ಪತ್ತಿಗೆ ಕಾರಣನೂ, ಸರ್ವಸಂರಕ್ಷಕನೂ ಆದ ಈಶ್ವರನಾಗಿದ್ದೇನೆ ಆದರೂ ನಾನು ಸ್ವತಂತ್ರನಲ್ಲ. ಹಗಲೂರಾತ್ರಿ ಭಕ್ತಪರಾಧೀನನಾಗಿದ್ದೇನೆ.

೧೨೧. ಗೋಲೋಕದಲ್ಲಿ ದ್ವಿಭುಜಸಹಿತವಾಗಿಯೂ, ವೈಕುಂಠದಲ್ಲಿ ಚತುರ್ಭುಜಸಹಿತವಾಗಿಯೂ ನನ್ನ ರೂಪಮಾತ್ರವಿರುವುದೇ ಹೊರತು ನನ್ನ ಪ್ರಾಣಗಳೆಲ್ಲ ಭಕ್ತರಲ್ಲಿಯೇ ನೆಲೆಸಿವೆ.

೧೨೨. ಭಕ್ತರು ಭಕ್ತಿಯಿಂದ ಯಾವ ವಸ್ತುವನ್ನು ಅರ್ಪಿಸಿದರೂ ನಾನು ಅದನ್ನು ಭಕ್ಷಿಸಿಯೇ ತೀರಬೇಕು. ಭಕ್ತರಲ್ಲದವರು ಅಮೃತಕ್ಕೆ ಸಮನಾದ ವಸ್ತುವನ್ನು ಸಮರ್ಪಿಸಿದರೂ ನಾನು ತಿನ್ನುವಂತಿಲ್ಲ.

ಅಂಬರೀಷಂ ನೃಪಶ್ರೇಷ್ಠಂ ನಿರೀಹಂ ತಮಹಿಂಸಕಂ ।
ಕಥಂ ಹಂಸಿ ದಯಾಶೀಲಂ ಸರ್ವಪ್ರಾಣಿಹಿತೇ ರತಂ ॥ ೧೨೩ ॥

ದಯಾಂ ಕುರ್ವಂತಿ ಯೇ ಸಂತಃ ಸತತಂ ಸರ್ವಜಂತುಷು ।
ತಾನ್ದ್ವಿಷಂತಿ ಚ ಯೇ ಮೂಢಾಸ್ತೇಷಾಂ ಹಂತಾಽಹಮೇವ ಚ ॥ ೧೨೪ ॥

ಭಕ್ತಾನಾಂ ಹಿಂಸಕಂ ಶತ್ರುಮಹಂ ರಕ್ಷಿತುಮಕ್ಷಮಃ ।
ಅಂಬರೀಷಾಲಯಂ ಗಚ್ಛ ಸ ತ್ವಾಂ ರಕ್ಷಿತುಮೀಶ್ವರಃ ॥ ೧೨೫ ॥

॥ ನಾರಾಯಣ ಉವಾಚ ॥

ಇದಂ ವಾಕ್ಯಂ ಚ ತಚ್ಛ್ರುತ್ವಾ ಬ್ರಾಹ್ಮಣೋ ಭಯವಿಹ್ವಲಃ ।
ವಿಷಣ್ಣಮಾನಸಸ್ತಸ್ಥೌ ಸ್ಮರನ್‌ಕೃಷ್ಣಪದಾಂಬುಜಂ ॥ ೧೨೬ ॥

ಏತಸ್ಮಿನ್ನಂತರೇ ಬ್ರಹ್ಮಾ ಭವಾನ್ಯಾ ಸಹ ಶಂಕರಃ ।
ಧರ್ಮಶ್ಚಂದ್ರಾದಯೋ ದೇವಾ ಆಜಗ್ಮುರ್ಮುನಿಪುಂಗವಾಃ ॥ ೧೨೭ ॥

---

೧೨೩. ಹೀಗಿರುವಾಗ ಇಚ್ಛಾರಹಿತನೂ, ಅಹಿಂಸಾಪರನೂ, ದಯಾಶೀಲನೂ ಸಕಲಪ್ರಾಣಿಗಳ ಹಿತದಲ್ಲಿ ಆಸಕ್ತನೂ ಆದ ಅಂಬರೀಷ ಮಹಾರಾಜನನ್ನು ಹೇಗೆ ಹಿಂಸೆಪಡಿಸುವೆ.

೧೨೪ ಸರ್ವಪ್ರಾಣಿಗಳಲ್ಲಿಯೂ ಸರ್ವದಾ ದಯೆತೋರುವ ಸತ್ಪುರುಷರನ್ನು ಯಾವ ಮೂರ್ಖರು ದ್ವೇಷಿಸುವರೋ ಅವರನ್ನು ನಾನೇ ಸಂಹರಿಸುವೆನು.

೧೨೫. ಭಕ್ತರ ಹಿಂಸಕನಾವ ಶತ್ರುವನ್ನು ನಾನು ರಕ್ಷಿಸಲಾರೆನು. ನೀನು ಅಂಬರೀಷನ ಮನೆಗೆ ಹೋಗು. ಅವನೇ ನಿನ್ನನ್ನು ಕಾಪಾಡಲು ಸಮರ್ಥನಾಗಿರುವನು.

೧೨೬. ನಾರಾಯಣ :—ಈ ಮಾತನ್ನು ಕೇಳಿ ಭಯಚಕಿತನಾಗಿ ಆ ದೂರ್ವಾಸನು ವ್ಯಥೆಗೊಂಡ ಮನಸ್ಸಿನಿಂದ ಶ್ರೀಕೃಷ್ಣನ ಪಾದಕಮಲಗಳನ್ನು ಸ್ಮರಿಸುತ್ತ ನಿಂತುಕೊಂಡನು.

೧೨೭. ಇಷ್ಟು ಹೊತ್ತಿಗೆ ಬ್ರಹ್ಮ, ಶಂಕರಪಾರ್ವತಿಯರು, ಧರ್ಮ, ಚಂದ್ರ ಮುಂತಾದ ದೇವತೆಗಳೂ ಮುನಿಶ್ರೇಷ್ಠರೂ ಅಲ್ಲಿಗೆ ಬಂದರು.

ಪ್ರಣಮ್ಯ ತುಷ್ಟುವುಃ ಸರ್ವೇ ಪರಮಾತ್ಮಾನಮೀಶ್ವರಂ ।
ಪುಲಕಾಂಚಿತಸರ್ವಾಂಗಾ ಭಕ್ತಿನಮ್ರಾತ್ಮಕಂಧರಃ ॥ ೧೨೮ ॥

॥ ಬ್ರಹ್ಮೋವಾಚ ॥

ಸ್ವಾತ್ಮಸ್ವರೂಪ ನಿರ್ಲಿಪ್ತ ಭಕ್ತಾನುಗ್ರಹಕಾರಕ ।
ಭಕ್ತಾಪರಾಧಜನಕಂ ರಕ್ಷ ಬ್ರಾಹ್ಮಣಪುಂಗವಂ ॥ ೧೨೯ ॥

॥ ಮಹಾದೇವ ಉವಾಚ ॥

ದೀನಬಂಧೋ ಜಗನ್ನಾಥ ನಾಯಂ ವಿಪ್ರೋ ಜಗದ್ಬಹಿಃ ।
ಕೃತಾಪರಾಧಂ ದೀನಂ ಚ ಪಾಹೀಮಂ ಶರಣಾಗತಂ ॥ ೧೩೦ ॥

॥ ಪಾರ್ವತ್ಯುವಾಚ ॥

ಭಕ್ತ ಏವಾಂಬರೀಷಸ್ತೇ ನ ದ್ವಿಜಾ ನ ಸುರಾ ವಯಂ ।
ಸರ್ವೇಷಾಮೀಶ್ವರಸ್ತ್ವಂ ಚ ರಕ್ಷ ವಿಪ್ರಂ ಕೃತಾಗಸಂ ॥ ೧೩೧ ॥

---

೧೨೮. ಎಲ್ಲರೂ ಭಕ್ತಿಯಿಂದ ತಲೆಬಾಗಿ ರೋಮಾಂಚಿತಶರೀರರಾಗಿ ಸರ್ವೇಶ್ವರನಾದ ಪರಮಾತ್ಮನನ್ನು ಸ್ತುತಿಸಲಾರಂಭಿಸಿದರು.

೧೨೯. ಬ್ರಹ್ಮ :—ನಿರ್ಲಿಪ್ತನೂ ಭಕ್ತರ ಅನುಗ್ರಹದಲ್ಲಿ ಕಾತರನೂ ಆದ ಎಲೈ ಪರಮಾತ್ಮನೇ, ನಿನ್ನ ಭಕ್ತನಿಗೆ ಅಪರಾಧಮಾಡಿದ ಬ್ರಾಹ್ಮಣ ಶ್ರೇಷ್ಠನನ್ನು ನೀನು ಕಾಪಾಡು.

೧೩೦. ಮಹಾದೇವ :—ದೀನಬಂಧುವಾದ ಎಲೈ ಜಗನ್ನಾಥನೇ, ಈ ಬ್ರಾಹ್ಮಣೋತ್ತಮನು ನಿನ್ನ ಜಗತ್ತಿಗೆ ಬೇರಾದವನಲ್ಲವಲ್ಲವೇ ? ಈ ದೀನನು ಅಪರಾಧಮಾಡಿದ್ದರೂ ಶರಣಾಗತನಾಗಿರುವುದರಿಂದ ಇವನನ್ನು ಕಾಪಾಡು.

೧೩೧. ಪಾರ್ವತೀ :—ಅಂಬರೀಷನೊಬ್ಬನೇ ನಿಜವಾಗಿಯೂ ನಿನ್ನ ಭಕ್ತನು. ಬ್ರಾಹ್ಮಣರಾಗಲೀ, ದೇವತೆಗಳಾಗಲೀ, ನಾವಾಗಲಿ, ಅವನಿಗೆ ಸಮಾನರಾದ ಭಕ್ತರಲ್ಲ. ಆದರೂ ನೀನು ಎಲ್ಲರಿಗೂ ಒಡೆಯನಾಗಿರುವುದರಿಂದ ತಪ್ಪಿತಸ್ಥನಾದ ಈ ಬ್ರಾಹ್ಮಣನನ್ನು ಕಾಪಾಡು.

॥ ಧರ್ಮ ಉವಾಚ ॥

ಸರ್ವೇಷಾಂ ಜನಕಸ್ತ್ವಂ ಚ ಪಾತಾ ದಂಡಕೃದೀಶ್ವರಃ ।
ಶಿಶುಹೇತೋಃ ಶಿಶುಂ ಹಂತಿ ಪಿತೇತ್ಯೇವಂ ಕುತಃ ಪ್ರಭೋ ॥ ೧೩೨ ॥

॥ ಇಂದ್ರ ಉವಾಚ ॥

ಕೃಪಯಾ ಸಮತಾ ಶಶ್ವತ್ಸರ್ವೇಷು ಜೀವಿಷು ಪ್ರಭೋ ।
ಅಪರಾಧಫಲಂ ಭೂತಮಧುನಾ ಪಾತುಮರ್ಹಸಿ ॥ ೧೩೩ ॥

॥ ರುದ್ರ ಉವಾಚ ॥

ಶಾಂತಿಂ ಕರ್ತುಂ ಸಮುಚಿತಮುಚಿತಂ ಸಾಂಪ್ರತಂ ಕುರು ।
ಕೃತಕುಂಠಸ್ಯ ಮೂಢಸ್ಯ ಪಾಲನಂ ಕರ್ತುಮರ್ಹಸಿ ॥ ೧೩೪ ॥

॥ ದಿಕ್ಪಾಲ ಉವಾಚ ॥

ಕೃತಾಪರಾಧಂ ವಿಪ್ರಂ ಚ ಚ್ಛೇತ್ತುಮರ್ಹಸಿ ನ ಶ್ರುತೌ ।
ಅಪರಾಧಶಮಂ ಕೃತ್ವಾ ಸದಾ ಪಾತಿ ಸದೀಶ್ವರಃ ॥ ೧೩೫ ॥

---

೧೩೨. ಧರ್ಮ :—ಎಲೈ ಪ್ರಭುವೇ, ನೀನು ಸಕಲರ ಉತ್ಪತ್ತಿಗೂ, ರಕ್ಷಣೆಗೂ ಮತ್ತು ಶಿಕ್ಷಣೆಗೂ ಕಾರಣನಾಗಿದ್ದೀಯೆ. ಒಂದು ಶಿಶುಸಂರಕ್ಷಣೆಗಾಗಿ ಮತ್ತೊಂದು ಶಿಶುವನ್ನು ತಂದೆಯು ಕೊಲ್ಲುವುದೆಂಬುದು ಯಾವ ನ್ಯಾಯ ?

೧೩೩. ಇಂದ್ರ:—ಎಲೈ ಪ್ರಭುವೇ, ನೀನು ದಯೆಯಿಂದ ಎಲ್ಲ ಜೀವಿಗಳಲ್ಲೂ ಸಮಬುದ್ಧಿಯನ್ನು ಇಟ್ಟಿರುವೆ. ಆದುದರಿಂದ ಅಪರಾಧಮಾಡಿದ ಪ್ರಾಣಿಯನ್ನು ನೀನು ಈಗ ರಕ್ಷಿಸಬೇಕಾಗಿದೆ.

೧೩೪. ರುದ್ರ :—ಅಪರಾಧವನ್ನು ಕ್ಷಮಿಸುವುದು ಉಚಿತವಾಗಿದೆ. ಈಗ ನಿನಗುಚಿತವಾದುದನ್ನು ಮಾಡು. ತಪ್ಪುಮಾಡಿದವನ ಜೀವವನ್ನು ರಕ್ಷಿಸಲು ನೀನೇ ಸಮರ್ಥನು.

೧೩೫. ದಿಕ್ಪಾಲ :—ತಪ್ಪಿತಸ್ಥನಾದ ಬ್ರಾಹ್ಮಣನನ್ನು ವಧೆಮಾಡುವುದು ಶ್ರುತಿವಿಹಿತವಾಗಿಲ್ಲ. ಒಳ್ಳೆಯ ಪ್ರಭುವೆನಿಸಿದವನು ಅಪರಾಧವನ್ನು ಕ್ಷಮಿಸಿ ಸರ್ವದಾ ಕಾಪಾಡುವನು.

॥ ಗ್ರಹಾ ಊಚುಃ ॥

ಯೋ ದ್ವೇಷ್ಟಿ ವೈಷ್ಣವಂ ಮೂಢಸ್ತಂ ರುಷ್ಟಾಃ ಸರ್ವದೇವತಾಃ ।
ಪೀಡಾಂ ಕುರ್ವೋ ವಯಂ ಶಶ್ವತ್ತಸ್ಮಾತ್ತ್ವಂ ಪಾತುಮರ್ಹಸಿ ॥ ೧೩೬ ॥

॥ ಮುನಯ ಊಚುಃ ॥

ನಾಥ ವಿಪ್ರೇ ಪರಾಭೂತೇ ಸರ್ವೇ ಜೀವನ್ಮೃತಾ ವಯಂ ।
ದಂಡಂ ವಿಧಾತುಮೇಕಸ್ಯ ಭವೇಲ್ಲಜ್ಜಾ ಸ್ವಜಾತಿಷು ॥ ೧೩೭ ॥

॥ ಅತ್ರಿರುವಾಚ ॥

ತ್ವಯೈವ ದತ್ತಃಪುತ್ರೋ ಮೇ ಕ್ರೋಧೀ ತ್ವತ್ಸೇವಕಃ ಸದಾ ।
ನ ಕಂ ಬಿಭೇತಿ ತ್ರೈಲೋಕ್ಯೇ ತೇಜಸ್ವೀ ತೇಜಸಾ ತವ ॥ ೧೩೮ ॥

॥ ಲಕ್ಷ್ಮೀರುವಾಚ ॥

ಕ್ಷಮಾಪರಾಧಂ ಭಗವನ್ ಬ್ರಾಹ್ಮಣಂ ಶರಣಾಗತಂ ।
ಸ್ತುವಂತಿ ದೇವವಿಪ್ರಾಶ್ಚ ನ ವಿಪ್ರಂ ಹಂತುಮರ್ಹಸಿ ॥ ೧೩೯ ॥

---

೧೩೬. ಗ್ರಹಗಳು :—ವಿಷ್ಣುಭಕ್ತರನ್ನು ದ್ವೇಷಿಸುವ ಮೂಢನನ್ನು ಕುಪಿತರಾದ ಎಲ್ಲ ದೇವತೆಗಳೂ ಮತ್ತು ನಾವೂ ಕೂಡ ಪೀಡಿಸುವೆವು. ಆದರೆ ನೀನು ಅವರನ್ನು ಕಾಪಾಡಲು ಸಮರ್ಥನಾಗಿರುವೆ.

೧೩೭. ಮುನಿಗಳು :—ಎಲೈ ಪರಮಾತ್ಮನೇ, ಈ ಬ್ರಾಹ್ಮಣನಿಗೆ ತಿರಸ್ಕಾರವಾದರೆ ನಾವೆಲ್ಲ ಜೀವಿಸಿದ್ದರೂ ಸತ್ತಂತೆಯೇ. ಸ್ವಜಾತಿಯಲ್ಲಿ ಒಬ್ಬನಿಗೆ ಶಿಕ್ಷೆಯಾದರೂ ಎಲ್ಲರೂ ಲಜ್ಜಿತರಾಗುವರು.

೧೩೮. ಅತ್ರಿ :—ನೀನೇ ಅನುಗ್ರಹಿಸಿದ ಈ ನನ್ನ ಪುತ್ರನು (ಸರ್ವದಾ) ಕೋಪಿಷ್ಠನಾದರೂ ನಿನ್ನ ಸೇವಕನಾಗಿದ್ದಾನೆ ನಿನ್ನ ತೇಜಸ್ಸಿನಿಂದ ತೇಜಸ್ವಿಯಾಗಿರುವ ಇವನು ತ್ರಿಲೋಕದಲ್ಲಿಯೂ ಯಾರಿಗೂ ಹೆದರುವುದಿಲ್ಲ.

೧೩೯. ಲಕ್ಷ್ಮೀ :—ಎಲೈ ಭಗವಂತನೇ, ಶರಣಾಗತನಾಗಿರುವ ಬ್ರಾಹ್ಮಣನ ಅಪರಾಧವನ್ನು ಕ್ಷಮಿಸು. ನಿನ್ನನ್ನು ಸ್ತುತಿಸಿ ನಿನ್ನ ಭಕ್ತರಾಗಿರುವ ಬ್ರಾಹ್ಮಣರನ್ನು ನೀನು ವಧೆಮಾಡುವುದುಚಿತವಲ್ಲ.

|| ಸರಸ್ವತ್ಯುವಾಚ ||

ಬೋಧಯಿಷ್ಯಾಮಿ ದೇವಾನಾಂ ಜನಕಂ ಕಾಮದಂ ಶ್ರುತಿಂ |
ಭಗವನ್ ಸ್ವಾಮಿನಾ ಚ ಸರ್ವೇಷಾಂ ಸರ್ವಾಂಶ್ಚ ಪಾತುಮರ್ಹಸಿ || ೧೪೦ ||

|| ಪಾರ್ಷದಾ ಊಚುಃ ||

ಭವತಃ ಸ್ಮೃತಿಮಾತ್ರೇಣ ಸರ್ವೇಷಾಂ ಸರ್ವಮಂಗಲಂ |
ಭವತ್ಸರ್ವಾಪದೋ ಯಾಂತಿ ಪಾಹೀಮಂ ಶರಣಾಗತಂ || ೧೪೧ ||

|| ನರ್ತಕಾ ಊಚುಃ ||

ದಾರಿದ್ರ್ಯಭಂಜನ ವಯಂ ಭಿಕ್ಷುಕಾಸ್ತವ ಸಂತತಂ |
ಭಿಕ್ಷಾಂ ನಃ ಸಾಂಪ್ರತಂ ದೇಹಿ ಪರಿತ್ರಾಣಂ ದ್ವಿಜಸ್ಯ ಚ || ೧೪೨ ||

ಏತೇಷಾಂ ಸ್ತವನಂ ಶ್ರುತ್ವಾ ಪ್ರಭುಃ ಶರಣವತ್ಸಲಃ |
ಪ್ರಹಸ್ಯೋವಾಚ ವಚನಂ ಸರ್ವಸಂತೋಷಕಾರಣಂ || ೧೪೩ ||

---

೧೪೦. ಸರಸ್ವತಿ :—ದೇವತೆಗಳ ಜನಕನೂ, ಕಾಮಿತಾರ್ಥದಾಯಕನೂ, ಆದ ನಿನಗೆ ವೇದಸಾರವನ್ನು ಬೋಧಿಸಬೇಕೆ? ಸಕಲರಿಗೂ ಒಡೆಯನಾದ ಎಲೈ ಭಗವಂತನೇ, ನೀನು ಎಲ್ಲರನ್ನೂ ಕಾಪಾಡಬೇಕಲ್ಲವೇ?

೧೪೧ ಪಾರ್ಷದರು :–ನಿನ್ನನ್ನು ಸ್ಮರಣೆಮಾಡಿದ ಮಾತ್ರದಿಂದಲೇ ಎಲ್ಲರಿಗೂ ಎಲ್ಲ ಮಂಗಳಗಳೂ ಉಂಟಾಗುವುದಲ್ಲದೆ ಸಮಸ್ತ ಆಪತ್ತುಗಳೂ ಪರಿಹಾರವಾಗುವುವು. ಆದುದರಿಂದ ಶರಣಾಗತನಾದ ಈ ಬ್ರಾಹ್ಮಣನನ್ನು ಕಾಪಾಡು.

೧೪೨. ನರ್ತಕರು :—ಎಲೈ ದಾರಿದ್ರ್ಯನಾಶಕನೇ, ನಾವು ನಿನ್ನಲ್ಲಿ ಸರ್ವದಾ ಭಿಕ್ಷುಕರು. ಈಗ ಬ್ರಾಹ್ಮಣರಕ್ಷಣಾರೂಪವಾದ ಭಿಕ್ಷೆಯನ್ನು ನಮಗೆ ನೀಡುವವನಾಗು

೧೪೩. ಇವರೆಲ್ಲರ ಮಾತುಗಳನ್ನು ಕೇಳಿ ಶರಣಾಗತವತ್ಸಲನಾದ ಪರಮಾತ್ಮನು ನಸುನಕ್ಕು ಸಕಲರಿಗೂ ಸಂತೋಷದಾಯಕವಾದ ಮಾತನ್ನು ಈ ರೀತಿ ಹೇಳಿದನು.

|| ಶ್ರೀ ಭಗವಾನುವಾಚ ||

ಸರ್ವೇ ಶೃಣುತ ಮದ್ವಾಕ್ಯಂ ನೀತಿಯುಕ್ತಂ ಸುಖಾವಹಂ ।
ವಿಪ್ರರಕ್ಷಾಂ ಕರಿಷ್ಯಾಮಿ ಯುಷ್ಮಾಕ ಮಾಜ್ಞಯಾ ಧ್ರುವಂ ॥ ೧೪೪ ॥

ಕಿಂತ್ವಯಂ ಯಾತು ವೈಕುಂಠಾದಂಬರೀಷಾಲಯಂ ಪುನಃ ।
ಕರೋತು ಪಾರಣಂ ತತ್ರ ರಾಜ್ಞಃ ಸುಪ್ರೀತಯೇ ಮುನಿಃ ॥ ೧೪೫ ॥

ವಿಪ್ರಸ್ತಸ್ಯಾತಿಥಿರ್ಭೂತ್ವಾ ನಿರ್ದೋಷಂ ಶಪ್ತುಮುದ್ಯತಃ ।
ಸುದರ್ಶನಂ ತು ತಂ ರಕ್ಷ್ಯಂ ಬ್ರಾಹ್ಮಣಂ ಹಂತುಮುದ್ಯತಂ ॥ ೧೪೬ ॥

ಪೂರ್ಣಂ ವರ್ಷಮಯಂ ಭೀತೋ ಭ್ರಮತ್ಯೇವ ಭುವಂ ಮುದಾ ।
ಉಪವಾಸೀ ಸ ರಾಜೇಂದ್ರಃ ಸಸ್ತ್ರೀಕಶ್ಚ ಶುಚಾನ್ವಿತಃ ॥ ೧೪೭ ॥

---

೧೪೪. ಶ್ರೀ ಭಗವಾನ್ :—ನೀವೆಲ್ಲರೂ ನೀತಿಯುತವೂ, ಸುಖಕರವೂ ಆದ ನನ್ನ ಮಾತನ್ನು ಆಲಿಸಿ. ನಿಮ್ಮ ಇಚ್ಛೆಯಂತೆ ಬ್ರಾಹ್ಮಣನ ರಕ್ಷಣೆಯನ್ನು ನಿಶ್ಚಯವಾಗಿಯೂ ಮಾಡುವೆನು.

೧೪೫. ಆದರೆ ಈ ಮುನಿಯು ವೈಕುಂಠದಿಂದ ಮತ್ತೆ ಅಂಬರೀಷನ ಮನೆಗೆ ಹೋಗಿ ಆ ರಾಜನ ಸಂತೋಷಕ್ಕಾಗಿ ಅವನ ಮನೆಯಲ್ಲಿ ಪಾರಣಮಾಡಲಿ.

೧೪೬. ಬ್ರಾಹ್ಮಣನಾದ ಈ ಮುನಿಯು ನಿರ್ದೋಷಿಯಾದ ಆ ರಾಜನ ಅತಿಥಿಯಾಗಿ ಅವನನ್ನು ಶಪಿಸಲುದ್ಯುಕ್ತನಾದನು. ಸುದರ್ಶನಚಕ್ರವು ನನ್ನ ಭಕ್ತನನ್ನು ರಕ್ಷಿಸುವುದಕ್ಕೋಸ್ಕರ ಆ ಮುನಿಯನ್ನು ಸಂಹರಿಸಲು ಉದ್ಯುಕ್ತವಾಯಿತು.

೧೪೭. ಅದರ ಭಯದಿಂದ ಒಂದು ವರ್ಷ ಪೂರ್ಣವಾಗಿ ಈ ಮುನಿಯು ಭೂಮಂಡಲದಲ್ಲೆಲ್ಲ ಅಲೆಯುತ್ತಿದ್ದಾನೆ. ಅಂಬರೀಷರಾಜನೂ ಕೂಡ ಪತ್ನೀಸಹಿತನಾಗಿ ಉಪವಾಸಮಾಡಿ ದುಃಖಿತನಾಗಿದ್ದಾನೆ.

ತತೋಽಹಮುಪವಾಸೀ ಚ ಭಕ್ತೋಽಪವಾಸಕಾರಣಾತ್ ।
ಸ್ತನಾಂಧಂ ಬಾಲಕಂ ದೃಷ್ಟ್ವಾ ನ ಭುಂಕ್ತೇ ಜನನೀ ಯಥಾ　　॥ ೧೪೮ ॥

ಮಮಾಽಶಿಷಾ ಮುನಿಶ್ರೇಷ್ಠಃ ಸದ್ಯೋ ಭವತು ನಿಜ್ವರಃ ।
ಪಥಿ ತತ್ರಾಸ್ಯ ಹಿಂಸಾಂ ಚ ಮಚ್ಚಕ್ರಂ ನ ಕರಿಷ್ಯತಿ　　॥ ೧೪೯ ॥

ಅಹಮೇವಾಽದ್ಯ ನಿಶ್ಚಿಂತಃ ಸುಖಂ ಭೋಕ್ಷ್ಯಾಮಿ ನಿಶ್ಚಿತಂ ।
ಭಕ್ತದತ್ತಂ ಚ ಯದ್ವಸ್ತು ಪ್ರೀತ್ಯಾ ಕೃತ್ವಾ ಸುಧೋಪಮಂ　　॥ ೧೫೦ ॥

ಲಕ್ಷ್ಮೀದತ್ತಂ ಚ ಯದ್ದ್ರವ್ಯಂ ನ ಚಾಹಂ ಭೋಕ್ತುಮೀಶ್ವರಃ ।
ವಿನಾ ಭಕ್ತಪ್ರದಾನೇನ ನ ಚ ಸಾ ದಾತುಮೀಶ್ವರೀ　　॥ ೧೫೧ ॥

ಹೇ ಮುನೀಂದ್ರ ಮಹಾಪ್ರಾಜ್ಞ ಗಚ್ಛ ವತ್ಸ ನೃಪಾಲಯಂ ।
ಸರ್ವೇ ದೇವಾಶ್ಚ ದೇವ್ಯಶ್ಚ ಗಚ್ಛಂತು ಮುನಯೋ ಗೃಹಂ　　॥ ೧೫೨ ॥

---

೧೪೮. ನನ್ನ ಭಕ್ತನು ಉಪವಾಸವಿರುವ ಕಾರಣ ನಾನೂ ಉಪವಾಸ ದಿಂದಿದ್ದೇನೆ. ಸ್ತನ್ಯಕ್ಕಾಗಿ ತೊಳಲುತ್ತಿರುವ ಬಾಲಕನನ್ನು ನೋಡಿ ತಾಯಿಯಾದವಳು ಹೇಗೆ ಊಟಮಾಡಿಯಾಳು!

೧೪೯. ನನ್ನ ಆಶೀರ್ವಾದದಿಂದ ಈ ಮುನಿವರ್ಯನು ಈಗ ಚಿಂತಾರಹಿತ ನಾಗಲಿ. ಮಾರ್ಗದಲ್ಲಿ ನನ್ನ ಚಕ್ರವು ಇವನಿಗೆ ಹಿಂಸೆಯನ್ನೂ ಸಹ ಮಾಡುವುದಿಲ್ಲ.

೧೫೦. ನಾನೂ ಕೂಡ ಈ ದಿವಸ ನಿಶ್ಚಿಂತನಾಗಿ, ಭಕ್ತನು ಪ್ರೀತಿಯಿಂದ ಅರ್ಪಿಸಿದ ವಸ್ತುವನ್ನು ಅಮೃತೋಪಮವೆಂದು ಬಗೆದು ಸುಖವಾಗಿ ಭುಜಿಸುತ್ತೇನೆ.

೧೫೧ ಲಕ್ಷ್ಮೀದೇವಿಯು ಅರ್ಪಿಸಿದ ವಸ್ತುವನ್ನೂ ಕೂಡ ನಾನು ತಿನ್ನಲು ಸಮರ್ಥನಲ್ಲ. ಭಕ್ತನು ನನಗೆ ನೈವೇದ್ಯಮಾಡಿದ ಹೊರತ ನನಗೆ ತೃಪ್ತಿಯಾಗು ವಂತಿಲ್ಲ.

೧೫೨. ಎಲೈ ಜ್ಞಾನಿಯಾದ ಮುನಿವರ್ಯನೇ, ನೀನು ಅಂಬರೀಷ ರಾಜನ ಮನೆಗೆ ಹೋಗು. ಎಲ್ಲ ದೇವದೇವಿಯರೂ ಮುನಿಗಳೂ ತಮ್ಮ ತಮ್ಮ ಮನೆಗೆ ಹೋಗಲಿ.

ಇತ್ಯುಕ್ತ್ವಾ ಶ್ರೀಹರಿಸ್ತೂರ್ಣಂ ಯಯೌ ಸ್ವಾಂತಃಪುರಂ ಮುದಾ ।
ಯಯುಃ ಸರ್ವೇ ಮುದಾಯುಕ್ತಾಃ ಪ್ರಣಮ್ಯ ಜಗದೀಶ್ವರಂ ॥ ೧೫೩ ॥

ಬ್ರಾಹ್ಮಣಶ್ಚ ಮನೋಯಾಯೀ ಜಗಾಮ ನೃಪಮಂದಿರಂ ।
ಸುದರ್ಶನಂ ಚ ತಚ್ಚಕ್ರಂ ಸೂರ್ಯಕೋಟಿಸಮಪ್ರಭಂ ॥ ೧೫೪ ॥

ಉಪೋಷ್ಯ ವತ್ಸರಂ ರಾಜಾ ಶುಷ್ಕಕಂಠೋಷ್ಠತಾಲುಕಃ ।
ಸಿಂಹಾಸನಸ್ಥೋ ದದರ್ಶ ಪುರತೋ ಮುನಿಪುಂಗವಂ ॥ ೧೫೫ ॥

ಉತ್ಥಾಯ ಸಂಭ್ರಮಾತ್ಸದ್ಯಃ ಪ್ರಣಮ್ಯ ಸಾದರಂ ಮುದಾ ।
ಭೋಜಯಿತ್ವಾ ತು ಮಿಷ್ಟಾನ್ನಂ ಬ್ರಾಹ್ಮಣಂ ಬಭುಜೇ ಸ್ವಯಂ ॥ ೧೫೬ ॥

ಭುಕ್ತ್ವಾ ತುಷ್ಟೋ ದ್ವಿಜಶ್ರೇಷ್ಠೋ ಯುಯುಜೇ ಪರಮಾಶಿಷಂ ।
ಜಗಾಮ ಸ್ವಾಲಯಂ ತೂರ್ಣಂ ಪ್ರಶಶಂಸ ಪುನಃ ಪುನಃ ॥ ೧೫೭ ॥

---

೧೫೩. ಹೀಗೆ ಹೇಳಿ ಶ್ರೀಹರಿಯು ಸಂತೋಷದಿಂದ ತನ್ನ ಅಂತಃಪುರಕ್ಕೆ ತೆರಳಿದನು. ಎಲ್ಲರೂ ಕೂಡ ಜಗದೊಡೆಯನಿಗೆ ನಮಸ್ಕರಿಸಿ ತಮ್ಮ ಮಂದಿರಕ್ಕೆ ಸಂತೋಷದಿಂದ ಹಿಂತಿರುಗಿದರು

೧೫೪. ಇತ್ತ ಮನೋಗಾಮಿಯಾದ ದೂರ್ವಾಸಮುನಿವರ್ಯನು ಅಂಬರೀಷನ ಮನೆಗೆ ಬಂದನು. ಕೋಟಿಸೂರ್ಯರಿಗೆ ಸಮಾನಪ್ರಭೆಯುಳ್ಳ ಸುದರ್ಶನವೂ ಅವನ ಹಿಂದೆಯೇ ಹೋಯಿತು.

೧೫೫. ಅತ್ತ ಅಂಬರೀಷಮಹಾರಾಜನು ಒಂದುವರ್ಷಕಾಲ ಉಪವಾಸ ಮಾಡಿ ಗಂಟಲು ಒಣಗಿಹೋಗಿರಲು ಸಿಂಹಾಸನದಲ್ಲಿ ಕುಳಿತಿದ್ದಂತೆಯೇ ಎದುರಿನಲ್ಲಿ ದೂರ್ವಾಸಮುನಿಯನ್ನು ಕಂಡನು.

೧೫೬. ಕೂಡಲೇ ಸಂಭ್ರಮದಿಂದೆದ್ದು ಆದರದಿಂದ ಮುನಿವರ್ಯನಿಗೆ ವಂದಿಸಿ, ಅವನಿಗೆ ಮಿಷ್ಟಾನ್ನವನ್ನು ಉಣಬಡಿಸಿ ತಾನೂ ಊಟಮಾಡಿದನು.

೧೫೭ ಊಟಮಾಡಿ ಸಂತೋಷಗೊಂಡ ಮುನಿವರ್ಯನು ಆ ರಾಜನಿಗೆ ಮಂಗಳಾಶೀರ್ವಾದಮಾಡಿದನು. ಅನಂತರ ತನ್ನ ಮನೆಗೆ ಜಾಗ್ರತೆ ಹೋಗಿ ಆ ರಾಜನ ಮಹಿಮೆಯನ್ನು ಮತ್ತೆ ಮತ್ತೆ ಹೊಗಳಿದನು.

ಉವಾಚ ಪಥಿ ವಿಪ್ರೇಂದ್ರೋ ಮನಸಾ ವಿಸ್ಮಯಾಕುಲಃ ।
ಮಾಹಾತ್ಮ್ಯಂ ದುರ್ಲಭಮಹೋ ವೈಷ್ಣವಾನಾಮಿತಿ ದ್ವಿಜಃ ॥ ೧೫೮ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ಶ್ರೀಕೃಷ್ಣಜನ್ಮಖಂಡೇ
ನಾರದನಾರಾಯಣ ಸಂವಾದೇ ಮುನಿಮೋಕ್ಷಣ
ಪ್ರಸ್ತಾವೋ ನಾಮ ಪಂಚವಿಂಶೋಽಧ್ಯಾಯಃ

---

೧೫೮. ಮನಸ್ಸಿನಲ್ಲೇ ಅತ್ಯಂತ ವಿಸ್ಮಯಾವಿಷ್ಟನಾದ ಆ ಮುನಿಯು 'ವೈಷ್ಣವರ ಮಾಹಾತ್ಮ್ಯವು ಸರ್ವರಿಗೂ ಸುಲಭವಲ್ಲ' ವೆಂದು ದಾರಿಯುದ್ದಕ್ಕೂ, ಹೇಳಿಕೊಂಡು ಹೋದನು.

ಇಲ್ಲಿಗೆ ಶ್ರೀ ಬ್ರಹ್ಮವೈವರ್ತ ಮಹಾಪುರಾಣದ ಶ್ರೀಕೃಷ್ಣಜನ್ಮಖಂಡವಲ್ಲಿ
ಮುನಿಮೋಕ್ಷಣಪ್ರಸ್ತಾವರೂಪವಾದ ಇಪ್ಪತ್ತೈದನೆಯ
ಅಧ್ಯಾಯವು ಮುಗಿದುದು.

ಇಪ್ಪತ್ತೈದನೆಯ ಅಧ್ಯಾಯದ ಸಾರಾಂಶ

ಔರ್ವಮುನಿಯು ಸರಸ್ವತೀನದೀತೀರದಲ್ಲಿ ತಪಸ್ಸುಮಾಡುತ್ತಿದ್ದಾಗ ತನ್ನ ಉತ್ತರೀಯವು ಹಾರಿ ಕೆಳಕ್ಕೆ ಬಿದ್ದುದರಿಂದ ತನ್ನ ಮಗಳಿಗೆ ಏನೋ ಸಂಕಟವೊದಗಿರ ಬಹುದೆಂದು ಊಹಿಸಿ ದೂರ್ವಾಸಮುನಿಯ ಆಶ್ರಮಕ್ಕೆ ಓಡಿಬಂದನು. ಅಲ್ಲಿ ನಡೆದ ಸಮಾಚಾರವನ್ನೆಲ್ಲಾ ತಿಳಿದು ದೂರ್ವಾಸನನ್ನು ಕಷ್ಟಸಂಕಟಗಳಿಗೊಳಗಾಗುವಂತೆ ಶಪಿಸಿ, ತನ್ನ ಪುತ್ರಿಯ ವಿರಹದಿಂದ ಕಾತರನಾಗಿ ಹಿಂತಿರುಗಿದನು.

ಒಮ್ಮೆ ದೂರ್ವಾಸಮುನಿಯು ಪರಮವೈಷ್ಣವನಾದ ಅಂಬರೀಷಮಹಾರಾಜನ ಮಂದಿರಕ್ಕೆ ದ್ವಾದಶೀ ಪಾರಣೆಯ ವೇಳೆಗೆ ಸರಿಯಾಗಿ ಹೋದನು. ರಾಜನು ಮುನಿಯನ್ನು ಆದರದಿಂದ ಸ್ವಾಗತಿಸಿ ಪಾರಣೆಗೆ ಏಳೆನಲು, ಮುನಿಯು ಸ್ನಾನ ಮಾಡಿ ಬರುವುದಾಗಿ ಹೇಳಿ ಹೋದನು. ಎಷ್ಟು ಹೊತ್ತಾದರೂ ಮುನಿಯು ಹಿಂತಿರುಗಲಿಲ್ಲ. ಪಾರಣೆಯ ಸಮಯವು ಮೀರಿಹೋಗುವುದರಿಂದ ಸಂಘಟಿಸುವ ಪಾಪವನ್ನು ಪರಿಹರಿಸಿಕೊಳ್ಳುವುದಕ್ಕಾಗಿ ಆ ಮಹಾರಾಜನು ವಸಿಷ್ಠನ ಅಪ್ಪಣೆ ಯನ್ನು ಪಡೆದು ವಿಷ್ಣುವಿನ ಪಾದೋದಕವನ್ನು ಪಾನಮಾಡಿದನು. ಆ ಸಮಯಕ್ಕೆ ಸರಿಯಾಗಿ ಸ್ನಾನಮಾಡಿಬಂದ ದೂರ್ವಾಸನು, ರಾಜನು ತನ್ನನ್ನು ಬಿಟ್ಟು ತೀರ್ಥ ಪಾನಮಾಡಿರುವುದನ್ನು ನೋಡಿ, ಕುಪಿತನಾಗಿ ತನ್ನ ಜಟೆಯನ್ನು ಕತ್ತರಿಸಿ ಎಸೆದನು. ಕೂಡಲೇ ಆ ಜಟಾಭಾರದಿಂದ ವೀರಪುರುಷನೊಬ್ಬನು ಅವತರಿಸಿ ಖಡ್ಗ ಧರನಾಗಿ ಅಂಬರೀಷನನ್ನು ಸಂಹರಿಸಲು ಹೋದಾಗ, ಅವನನ್ನು ಸಂರಕ್ಷಿಸುತ್ತಿದ್ದ ವಿಷ್ಣುವಿನ ಸುದರ್ಶನಚಕ್ರವು ಆ ವೀರಪುರುಷನನ್ನು ಕೊಂದು, ದೂರ್ವಾಸಮುನಿ ಯನ್ನು ಬೆನ್ನಟ್ಟಿತು. ಕೂಡಲೇ ಮುನಿಯು ಬ್ರಹ್ಮಲೋಕಕ್ಕೆ ಹೋಗಿ ಬ್ರಹ್ಮನ ಮರೆಹೊಕ್ಕನು 'ವಿಷ್ಣುಭಕ್ತನಾದ ಅಂಬರೀಷನಿಗೆ ಕೇಡನ್ನು ಬಯಸಿದ ನಿನ್ನನ್ನು ನಾನು ಸಂರಕ್ಷಿಸಲಾರೆ. ನೀನು ಕೈಲಾಸಕ್ಕೆ ತೆರಳು' ಎಂಬ ಬ್ರಹ್ಮನ ಮಾತನ್ನು ಕೇಳಿ ಮುನಿಯು ಕೂಡಲೇ ಕೈಲಾಸಕ್ಕೆ ಹೋಗಿ ಶಂಕರನಿಗೆ ಶರಣಾಗತನಾದನು. ಶಂಕರನೂ ಕೂಡ 'ಶ್ರೀಹರಿಗೆ ಅತ್ಯಂತ ಪ್ರೀತಿಪಾತ್ರರಾದ ಭಕ್ತರನ್ನು ಯಾರು

ಪೀಡಿಸುವರೋ ಅಂಥವರನ್ನು ನಾನು ಕಾಪಾಡಲಾರೆ'ನೆನಲು ದೂರ್ವಾಸುನ ವೈಕುಂಠಕ್ಕೇ ಹೋಗಿ ಶ್ರೀಹರಿಯನ್ನೇ ಮರೆಹೊಕ್ಕನು. ಅಷ್ಟುಹೊತ್ತಿಗೆ ಬ್ರಹ್ಮಾದಿ ದೇವತೆಗಳೆಲ್ಲರೂ ಅಲ್ಲಿಗೆ ಬಂದು ಬ್ರಾಹ್ಮಣನಾದ ದೂರ್ವಾಸನನ್ನು ಉಳಿಸಿಕೊಡ ಬೇಕೆಂದು ಶ್ರೀಹರಿಯನ್ನು ವಿನಯದಿಂದ ಪ್ರಾರ್ಥಿಸಿಕೊಂಡರು. ಶರಣಾಗತರಕ್ಷಕ ನಾದ ಶ್ರೀಹರಿಯು ತನ್ನ ಭಕ್ತರ ವಿರೋಧಿಯನ್ನು ತಾನೂ ಕಾಪಾಡಲಾಗುವುದಿಲ್ಲ ವೆಂದು ಹೇಳಿ, ಪುನಃ ಅಂಬರೀಷನ ಮನೆಗೆ ಹೋಗಿ, ಪಾರಣೆಮಾಡಿ ಅವನ ಇಷ್ಟಾರ್ಥವನ್ನು ಕೈಗೂಡಿಸಿ ಅವನ ಅನುಗ್ರಹಕ್ಕೆ ಪಾತ್ರನಾಗಬೇಕೆಂದು ದೂರ್ವಾಸನಿಗೆ ಹೇಳಿದನು. ಆಗ ಭಕ್ತರ ಮಾಹಾತ್ಮ್ಯವನ್ನು ಚೆನ್ನಾಗಿ ತಿಳಿದ ದೂರ್ವಾಸನು, ಒಂದು ವರ್ಷದಿಂದಲೂ ಉಪವಾಸಮಾಡಿಕೊಂಡು ಪಾರಣೆಗಾಗಿ ಕಾದಿದ್ದ ಅಂಬರೀಷಮಹಾರಾಜನ ಮಂದಿರಕ್ಕೆ ತೆರಳಿದನು.

--॥ ಓಂ ॥--

-॥ ಶ್ರೀ ಗಣೇಶಾಯ ನಮಃ ॥-

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಶ್ರೀಕೃಷ್ಣಜನ್ಮಖಂಡೇ

॥ ಷಡ್ತ್ರಿಂಶೋಽಧ್ಯಾಯಃ ॥

॥ ನಾರದ ಉವಾಚ ॥

ದ್ವಾದಶೀಲಂಘನೇ ದೋಷಃ ಶ್ರುತಸ್ತ್ವನ್ಮುಖತೋ ಮುನೇ ।
ಪರಾಭವೋ ಮುನೇಶ್ಚೈವ ನೃಪತ್ರಾಣಂ ಹರೇರಹೋ ॥ ೧ ॥

ಅಧುನಾ ಶ್ರೋತುಮಿಚ್ಛಾಮಿ ಸರ್ವೇಷಾಮೀಪ್ಸಿತಂ ಚ ಮೇ ।
ಏಕಾದಶೀವ್ರತಸ್ಯಾಸ್ಯ ವಿಧಾನಂ ವದ ನಿಶ್ಚಿತಂ ॥ ೨ ॥

ಅಹೋ ಶ್ರುತೌ ಶ್ರುತಂ ಕಿಂಚಿನ್ಮತಭೇದಾನ್ನ ನಿಶ್ಚಿತಂ ।
ಶ್ರುತೀನಾಂ ಕಾರಣಮುಖಾಚ್ಛ್ರೋತುಂ ಕೌತೂಹಲಂ ಮಮ ॥ ೩ ॥

ಇಪ್ಪತ್ತಾರನೆಯ ಅಧ್ಯಾಯವು

೧. ನಾರದಮಹರ್ಷಿ :—ಎಲೈ ನಾರಾಯಣಮಹರ್ಷಿಯೇ, ದ್ವಾದಶೀ ಪಾರಣೆಯನ್ನು ಉಲ್ಲಂಘಿಸುವುದರಿಂದ ಸಂಘಟಿಸುವ ದೋಷವನ್ನೂ, ಶ್ರೀಹರಿಯು ಅಂಬರೀಷಮಹಾರಾಜನನ್ನು ರಕ್ಷಿಸುವ ಸಲುವಾಗಿ ದೂರ್ವಾಸಮುನಿಗೆ ಪರಾಭವವನ್ನುಂಟುಮಾಡಿದುದನ್ನೂ ನಿನ್ನ ಬಾಯಿನಿಂದ ಕೇಳಿದುದಾಯಿತು.

೨. ಈಗ ಎಲ್ಲರಿಗೂ ಅಭೀಪ್ಸಿತವೂ, ವಿಶೇಷವಾಗಿ ನನಗೆ ಇಷ್ಟತಮವೂ ಆದ ಏಕಾದಶೀ ವ್ರತಾಚರಣೆಯ ವಿಧಾನವನ್ನು ನಾನು ಕೇಳಬಯಸುತ್ತೇನೆ ದಯವಿಟ್ಟು ನಿಶ್ಚಿತವಾದ ವಿಧಾನವನ್ನು ತಿಳುಹು.

೩. ವೇದದಲ್ಲಿ ಒಂದುರೀತಿ ನಿರೂಪಿತವಾಗಿದ್ದರೂ ಆಚರಣೆಯು ಭಿನ್ನಭಿನ್ನವಾಗಿರುವುದರಿಂದ ನಿಶ್ಚಿತವಾಗಿಲ್ಲ. ಶ್ರುತ್ಯಾಧಾರದಿಂದ ಈ ವ್ರತಾಚರಣೆಯ ವಿಧಾನವನ್ನು ನಾನು ತಿಳಿಯಲು ಕುತೂಹಲಿಯಾಗಿದ್ದೇನೆ.

॥ ನಾರಾಯಣ ಉವಾಚ ॥

ಏಕಾದಶೀವ್ರತಮಿದಂ ದೇವಾನಾಮಪಿ ದುರ್ಲಭಂ ।
ಶ್ರೀಕೃಷ್ಣಪ್ರೀತಿಜನಕಂ ತಪಃಶ್ರೇಷ್ಠಂ ತಪಸ್ವಿನಾಂ ॥ ೪ ॥

ದೇವಾನಾಂ ಚ ಯಥಾ ಕೃಷ್ಣೋ ದೇವೀನಾಂ ಪ್ರಕೃತಿರ್ಯಥಾ ।
ಆಶ್ರಮಾಣಾಂ ಯಥಾ ವಿಪ್ರೋ ವೈಷ್ಣವಾನಾಂ ಯಥಾ ಶಿವಃ ॥ ೫ ॥

ಯಥಾ ಗಣೇಶಃ ಪೂಜ್ಯಾನಾಂ ಯಥಾ ವಾಣೀ ವಿಪಶ್ಚಿತಾಂ ।
ಶಾಸ್ತ್ರಾಣಾಂ ಚ ಯಥಾ ವೇದಾಸ್ತೀರ್ಥಾನಾಂ ಜಾಹ್ನವೀ ಯಥಾ ॥ ೬ ॥

ತೈಜಸಾನಾಂ ಯಥಾ ಸ್ವರ್ಣಂ ಪ್ರಾಣಿನಾಂ ವೈಷ್ಣವೋ ಯಥಾ ।
ಧನಾನಾಂ ಚ ಯಥಾ ವಿದ್ಯಾ ಸಂಗಿನಾಂ ಚ ಯಥಾ ಪ್ರಿಯಾ ॥ ೭ ॥

ಪ್ರಮಥಾನಾಂ ಯಥಾ ರುದ್ರಃ ಶ್ರೇಯಸಾಂ ಚ ಯಥಾ ಮತಿಃ ।
ಆತ್ಮಾ ಯಥೇಂದ್ರಿಯಾಣಾಂ ಚ ಚಂಚಲಾನಾಂ ಯಥಾ ಮನಃ ॥ ೮ ॥

---

೪. ನಾರಾಯಣಮಹರ್ಷಿ:—ಶ್ರೀಕೃಷ್ಣನಲ್ಲಿ ಭಕ್ತಿಯನ್ನು ಹುಟ್ಟಿಸಿ ಆತನ ಪ್ರೀತಿಗೆ ಪಾತ್ರರನ್ನಾಗಿ ಮಾಡುವ ಈ ಏಕಾದಶೀವ್ರತವು ದೇವತೆಗಳಿಗೂ ದುರ್ಲಭವಾದುದು. ತಪಸ್ವಿಗಳಿಗೆ ಈ ವ್ರತಾಚರಣೆಯೇ ಶ್ರೇಷ್ಠವಾದ ತಪಸ್ಸು.

೫-೬. ದೇವತೆಗಳಲ್ಲಿ ಶ್ರೀಕೃಷ್ಣನೂ, ದೇವಿಯರಲ್ಲಿ ಪ್ರಕೃತಿಯೂ, ಆಶ್ರಮಗಳಲ್ಲಿ ಬ್ರಹ್ಮಚರ್ಯಾಶ್ರಮವೂ, ವಿಷ್ಣುಭಕ್ತರಲ್ಲಿ ಶಿವನೂ, ಪೂಜ್ಯರಲ್ಲಿ ಗಣೇಶನೂ, ಜ್ಞಾನಿಗಳಲ್ಲಿ ಸರಸ್ವತಿಯೂ, ಶಾಸ್ತ್ರಗಳಲ್ಲಿ ವೇದವೂ, ಪುಣ್ಯತೀರ್ಥಗಳಲ್ಲಿ ಜಾಹ್ನವಿಯೂ ಪ್ರಧಾನವಾಗಿರುವಂತೆ ವ್ರತಗಳಲ್ಲಿ ಏಕಾದಶೀವ್ರತವು ಪ್ರಧಾನವಾದುದು.

೭-೮. ಸುವರ್ಣವು ತೈಜಸದ್ರವ್ಯಗಳಲ್ಲಿಯೂ, ವಿಷ್ಣುಭಕ್ತರು ಮನುಜರಲ್ಲಿಯೂ, ವಿದ್ಯೆಯು ಧನಗಳಲ್ಲಿಯೂ, ಪ್ರಿಯೆಯು ಪ್ರೀತಿಪಾತ್ರರಲ್ಲಿಯೂ, ರುದ್ರನು ಪ್ರಮಥರಲ್ಲಿಯೂ, ಬುದ್ಧಿಯು ಶ್ರೇಯಸ್ಸಾಧನಗಳಲ್ಲಿಯೂ, ಆತ್ಮವು ಇಂದ್ರಿಯಗಳಲ್ಲಿಯೂ, ಮನಸ್ಸು ಚಂಚಲವಾದವುಗಳಲ್ಲಿಯೂ, ಮುಖ್ಯವಾಗಿರುವಂತೆ ಏಕಾದಶೀವ್ರತವು ವ್ರತಗಳಲ್ಲಿ ಮುಖ್ಯವಾದುದು.

ಗುರೂಣಾಂ ಚ ಯಥಾ ಮಾತಾ ಬಂಧೂನಾಂ ಚ ಯಥಾ ಪತಿಃ ।
ಬಲಿಷ್ಠಾನಾಂ ಯಥಾ ದೈವಂ ಕಾಲಂ ಕಲಯತಾಂ ಯಥಾ ॥ ೯ ॥

ಸುಶೀಲಂ ಚೈವ ಮಿತ್ರಾಣಾಂ ಶತ್ರೂಣಾಂ ರುಗ್ಯಥಾ ಮುನೇ ।
ಯಥಾ ಕೀರ್ತಿಃ ಕೀರ್ತಿಮತಾಂ ಗೃಹಿಣಾಂ ಚ ಯಥಾ ಗೃಹಂ ॥ ೧೦ ॥

ಯಥಾ ಖಲೋ ಹಿಂಸಕಾನಾಂ ದುಷ್ಟಾನಾಂ ಚೈವ ಪುಂಶ್ಚಲೀ ।
ತೇಜಸ್ವಿನಾಂ ಗ್ರಹೇಶಶ್ಚ ಸಹಿಷ್ಣೂನಾಂ ಯಥಾ ಕ್ಷಿತಿಃ ॥ ೧೧ ॥

ಯಥಾಽಮೃತಂ ಭಕ್ಷಣಾನಾಂ ದಾಹಕಾನಾಂ ಯಥಾಽನಲಃ ।
ಯಥಾ ಶ್ರೀರ್ಧನದಾತ್ರ್ಯಾಣಾಂ ಸತೀನಾಂ ಚ ಯಥಾ ಸತೀ ॥ ೧೨ ॥

ಪ್ರಜೇಶಾನಾಂ ಯಥಾ ಬ್ರಹ್ಮಾ ಸರಿತಾಂ ಸಾಗರೋ ಯಥಾ ।
ಯಥಾ ಸಾಮ ಶ್ರುತೀನಾಂ ಚ ಗಾಯತ್ರೀ ಛಂದಸಾಂ ಯಥಾ ॥ ೧೩ ॥

೯-೧೦. ಗುರುಗಳಲ್ಲಿ ಮಾತೆಯೂ, ಬಂಧುಗಳಲ್ಲಿ ಪತಿಯೂ, ಬಲಿಷ್ಠರಲ್ಲಿ ದೈವವೂ, ಗಣನೀಯವಾದವುಗಳಲ್ಲಿ ಕಾಲವೂ, ಮಿತ್ರರಲ್ಲಿ ಒಳ್ಳೆಯ ನಡತೆಯೂ, ಶತ್ರುಗಳಲ್ಲಿ ರೋಗವೂ, ಕೀರ್ತಿವಂತರಲ್ಲಿ ಕೀರ್ತಿಯೂ, ಗೃಹಸ್ಥರಲ್ಲಿ ಗೃಹವೂ ಗಣ್ಯವಾಗಿರುವಂತೆ ವ್ರತಗಳಲ್ಲಿ ಏಕಾದಶೀವ್ರತವು ಗಣ್ಯವಾಗಿರುವುದು.

೧೧-೧೨. ದುಷ್ಟನು ಹಿಂಸಕರಲ್ಲಿಯೂ, ವೇಶ್ಯೆಯು ದುಷ್ಟಸ್ತ್ರೀಯರಲ್ಲಿಯೂ, ಸೂರ್ಯನು ತೇಜಸ್ವಿಗಳಲ್ಲಿಯೂ, ಭೂದೇವಿಯು ಸಹನಶೀಲರಲ್ಲಿಯೂ, ಅಮೃತವು ಭಕ್ಷ್ಯದ್ರವ್ಯಗಳಲ್ಲಿಯೂ, ಅಗ್ನಿಯು ದಾಹಕವಸ್ತುಗಳಲ್ಲಿಯೂ, ಲಕ್ಷ್ಮೀದೇವಿಯು ಧನಪ್ರದರಲ್ಲಿಯೂ, ಸತೀದೇವಿಯು ಪತಿವ್ರತೆಯರಲ್ಲಿಯೂ, ಶ್ರೇಷ್ಠವಾಗಿರುವಂತೆ ಏಕಾದಶೀವ್ರತವು ವ್ರತಗಳಲ್ಲಿ ಶ್ರೇಷ್ಠವಾದುದು.

೧೩-೧೪. ಪ್ರಜಾಪತಿಗಳಿಗೆ ಬ್ರಹ್ಮನೂ, ನದಿಗಳಿಗೆ ಸಾಗರವೂ, ಶ್ರುತಿಗಳಿಗೆ ಸಾಮವೂ, ಛಂದಸ್ಸುಗಳಿಗೆ ಗಾಯತ್ರಿಯೂ, ವೃಕ್ಷಗಳಿಗೆ ಅಶ್ವತ್ಥವೂ, ಪುಷ್ಪಗಳಿಗೆ

ವೃಕ್ಷಾಣಾಂ ಚ ಯಥಾಶ್ವತ್ಥಃ ಪುಷ್ಪಾಣಾಂ ತುಲಸೀ ಯಥಾ ।
ಯಥಾ ಮಾರ್ಗೋ ಹಿ ಮಾಸಾನಾಮೃತೂನಾಂ ಚ ಯಥಾ ಮಧುಃ ॥ ೧೪ ॥

ಆದಿತ್ಯಾನಾಂ ಯಥಾ ಸೂರ್ಯೋ ರುದ್ರಾಣಾಂ ಶಂಕರೋ ಯಥಾ ।
ಯಥಾ ಭೀಷ್ಮೋ ವಸೂನಾಂ ಚ ವರ್ಷಾಣಾಂ ಭಾರತಂ ಯಥಾ ॥ ೧೫ ॥

ದೇವರ್ಷೀಣಾಂ ಯಥಾ ತ್ವಂ ಚ ಮಹರ್ಷೀಣಾಂ ಯಥಾ ಭೃಗುಃ
ನೃಪಾಣಾಂ ಚ ಯಥಾ ರಾಮಃ ಸಿದ್ಧಾನಾಂ ಕಪಿಲೋ ಯಥಾ । ॥ ೧೬ ॥

ಯಥಾ ಸನತ್ಕುಮಾರಶ್ಚ ಯೋಗಿನಾಂ ಜ್ಞಾನಿನಾಂ ವರಃ ।
ಐರಾವತೋ ಗಜೇಂದ್ರಾಣಾಂ ಪಶೂನಾಂ ಶರಭೋ ಯಥಾ ॥ ೧೭ ॥

ಯಥಾ ಹಿಮಾದ್ರಿಃ ಶೈಲಾನಾಂ ಮಣೀನಾಂ ಕೌಸ್ತುಭೋ ಯಥಾ ।
ಸರಸ್ವತೀ ನದೀನಾಂ ಚ ಯಥಾ ಪುಣ್ಯಸ್ವರೂಪಿಣೀ ॥ ೧೮ ॥

ತುಲಸಿಯೂ, ಮಾಸಗಳಿಗೆ ಮಾರ್ಗಶೀರ್ಷವೂ, ಋತುಗಳಿಗೆ ವಸಂತವೂ ಮೇಲಾಗಿರುವಂತೆ ವ್ರತಗಳಿಗೆ ಏಕಾದಶೀವ್ರತವು ಮೇಲಾದುದು.

೧೫-೧೬. ಸೂರ್ಯನು ದ್ವಾದಶಾದಿತ್ಯರಲ್ಲಿಯೂ, ಶಂಕರನು ಏಕಾದಶರುದ್ರರಲ್ಲಿಯೂ, ಭೀಷ್ಮನು ಅಷ್ಟವಸುಗಳಲ್ಲಿಯೂ, ಭಾರತವು ವರ್ಷಗಳಲ್ಲಿಯೂ, ನೀನು (ನಾರದನು) ದೇವರ್ಷಿಗಳಲ್ಲಿಯೂ, ಭೃಗುವು ಮಹರ್ಷಿಗಳಲ್ಲಿಯೂ, ರಾಮನು ರಾಜರುಗಳಲ್ಲಿಯೂ, ಕಪಿಲನು ಸಿದ್ಧರಲ್ಲಿಯೂ ಪ್ರಧಾನರಾಗಿರುವಂತೆ ಏಕಾದಶೀ ವ್ರತವು ವ್ರತಗಳಲ್ಲಿ ಪ್ರಧಾನವಾದುದು.

೧೭-೧೮. ಯೋಗಿಗಳಲ್ಲಿಯೂ, ಜ್ಞಾನಿಗಳಲ್ಲಿಯೂ ಸನತ್ಕುಮಾರನು ಶ್ರೇಷ್ಠನಾಗಿರುವಂತೆಯೂ, ಗಜೇಂದ್ರಗಳಲ್ಲಿ ಐರಾವತವು ಶ್ರೇಷ್ಠವಾಗಿರುವಂತೆಯೂ ಪಶುಗಳಲ್ಲಿ ಶರಭಮೃಗವು ಶ್ರೇಷ್ಠವಾಗಿರುವಂತೆಯೂ, ಪರ್ವತಗಳಲ್ಲಿ ಹಿಮವಂತನು ಶ್ರೇಷ್ಠನಾಗಿರುವಂತೆಯೂ, ಮಣಿಗಳಲ್ಲಿ ಕೌಸ್ತುಭಮಣಿಯು ಶ್ರೇಷ್ಠವಾಗಿರುವಂತೆಯೂ, ನದಿಗಳಲ್ಲಿ ಪುಣ್ಯಸ್ವರೂಪಿಣಿಯಾದ ಸರಸ್ವತೀನದಿಯು ಶ್ರೇಷ್ಠವಾಗಿರುವಂತೆಯೂ ವ್ರತಗಳಲ್ಲಿ ಏಕಾದಶೀವ್ರತವು ಶ್ರೇಷ್ಠವಾಗಿರುವುದು.

ಗಂಧರ್ವಾಣಾಂ ಚಿತ್ರರಥೋ ಯಥಾ ಶ್ರೇಷ್ಠಶ್ಚ ನಾರದ ।
ಯಥಾ ಕುಬೇರೋ ಯಕ್ಷಾಣಾಂ ಸುಮಾಲೀ ರಕ್ಷಸಾಂ ಯಥಾ ॥ ೧೯ ॥

ಯಥಾ ಶ್ರೇಷ್ಠಾ ಚ ನಾರೀಣಾಂ ಶತರೂಪಾ ವರಾ ಪರಾ ।
ಮನೂನಾಂ ಚ ಯಥಾ ಶ್ರೇಷ್ಠಃ ಸ್ವಯಂ ಸ್ವಾಯಂಭುವೋ ಮನುಃ ॥ ೨೦ ॥

ಸುಂದರೀಣಾಂ ಯಥಾ ರಂಭಾ ಯಥಾ ಮಾಯಾ ಚ ಮಾಯಿನಾಂ ।
ಏಕಾದಶೀವ್ರತಮಿದಂ ವ್ರತಾನಾಂ ಚ ವರಂ ತಥಾ ॥ ೨೧ ॥

ಕರ್ತವ್ಯಂ ಚ ಚತುರ್ಣಾಂ ಚ ವರ್ಣಾನಾಂ ನಿತ್ಯಮೇವ ಚ ।
ಯತೀನಾಂ ವೈಷ್ಣವಾನಾಂ ಚ ಬ್ರಾಹ್ಮಣಾನಾಂ ವಿಶೇಷತಃ ॥ ೨೨ ॥

ಸತ್ಯಂ ಸರ್ವಾಣಿ ಪಾಪಾನಿ ಬ್ರಹ್ಮಹತ್ಯಾದಿಕಾನಿ ಚ ।
ಸಂತ್ಯೇವೌದನಮಾಶ್ರಿತ್ಯ ಶ್ರೀಕೃಷ್ಣವ್ರತವಾಸರೇ ॥ ೨೩ ॥

೧೯-೨೦. ಎಲೈ ನಾರದನೇ, ಚಿತ್ರರಥನು ಗಂಧರ್ವರಲ್ಲಿಯೂ, ಕುಬೇರನು ಯಕ್ಷರಲ್ಲಿಯೂ, ಸುಮಾಲಿಯು ರಾಕ್ಷಸರಲ್ಲಿಯೂ, ಶತರೂಪೆಯು ಪತಿವ್ರತಾ ಸ್ತ್ರೀಯರಲ್ಲಿಯೂ, ಸ್ವಾಯಂಭುವಮನುವು ಮನುಗಳಲ್ಲಿಯೂ, ಶ್ರೇಷ್ಠರೆನಿಸಿರುವಂತೆ ಏಕಾದಶೀವ್ರತವು ವ್ರತಗಳಲ್ಲಿ ಶ್ರೇಷ್ಠವೆನಿಸಿದೆ

೨೧. ಸುಂದರಿಯರಲ್ಲಿ ರಂಭೆಯೂ, ಮಾಯಿಗಳಲ್ಲಿ ಮಾಯೆಯೂ, ಮೇಲಾಗಿರುವಂತೆ ವ್ರತಗಳಲ್ಲಿ ಏಕಾದಶೀವ್ರತವು ಮೇಲಾಗಿರುವುದು.

೨೨. ಈ ಏಕಾದಶೀವ್ರತವು ಚಾತುರ್ವರ್ಣ್ಯದವರ ನಿತ್ಯವ್ರತವಾಗಿದೆ. ಅದರಲ್ಲೂ ಯತಿಗಳು, ವಿಷ್ಣುಭಕ್ತರು ಮತ್ತು ಬ್ರಾಹ್ಮಣರು ಈ ವ್ರತವನ್ನು ಅವಶ್ಯವಾಗಿ ಆಚರಿಸಲೇ ಬೇಕು.

೨೩. 'ಹರಿವಾಸರ'ದ ದಿವಸ ಬ್ರಹ್ಮಹತ್ಯಾದಿ ಸಕಲಪಾಪಗಳೂ ಅನ್ನದಲ್ಲಿ ಬಂದು ನೆಲೆಸುವವೆಂದು ಪ್ರಾಚೀನಮಹರ್ಷಿಗಳು ಹೇಳಿದ್ದಾರೆ.

ಭುಕ್ತ್ವೈತಾನಿ ಚ ಪಾಪಾನಿ ಯೋ ಭುಂಕ್ತೇ ತತ್ರ ಮಂದಧೀಃ ।
ಇಹಾತಿಪಾತಕೀ ಸೋಽಪಿ ಯಾಂತ್ಯಂತೇ ನರಕಂ ಧ್ರುವಂ ॥ ೨೪ ॥

ಏಕಾದಶೀಪ್ರಮಾಣಾನಿ ಯುಗಸಂಖ್ಯಾಕೃತಾನಿ ಚ ।
ಕುಂಭೀಪಾಕೇ ಮಹಾಘೋರೇ ಸ್ಥಿತ್ವಾ ಚಾಂಡಲತಾಂ ವ್ರಜೇತ್ ॥ ೨೫ ॥

ಗಲಿತವ್ಯಾಧಿಯುಕ್ತಶ್ಚ ತತಃ ಸಪ್ತಸು ಜನ್ಮಸು ।
ಪಶ್ಚಾನ್ಮುಕ್ತೋ ಭವೇತ್ಪಾಪಾದಿತ್ಯಾಹ ಕಮಲೋದ್ಭವಃ ॥ ೨೬ ॥

ಇತ್ಯೇವಂ ಕಥಿತಂ ಬ್ರಹ್ಮನ್ ಯೋ ದೋಷಸ್ತತ್ರ ಭೋಜನೇ ।
ದ್ವಾದಶೀಲಂಘನೇ ದೋಷೋ ಮಯೋಕ್ತಶ್ಚ ಶ್ರುತಃ ಪುರಾ ॥ ೨೭ ॥

ದಶಮೀಲಂಘನೇ ದೋಷಂ ನಿಬೋಧ ಕಥಯಾಮಿ ತೇ ।
ಪುರಾ ಶ್ರುತೋ ಧರ್ಮವಕ್ತ್ರಾದ್ವೇದಸಾರೋದ್ಧೃತೋಽಪಿ ಚ ॥ ೨೮ ॥

---

೨೪. ಆದಕಾರಣ ಆ ದಿವಸ ಊಟಮಾಡುವ ಮಂದಬುದ್ಧಿಯು ಸಕಲ ಪಾಪಗಳಿಗೂ ಭಾಗಿಯಾಗಿ ಮಹಾಪಾತಕಿಯೆನಿಸಿ ಅಂತ್ಯಕಾಲದಲ್ಲಿ ನರಕಕ್ಕೆ ಹೋಗಿ ಬೀಳುವುದು ನಿಶ್ಚಯ.

೨೫. ಆ ಯುಗದಲ್ಲಿ ಎಷ್ಟು ಏಕಾದಶಿಗಳು ಬರುವುವೋ ಅಷ್ಟು ದಿವಸ ಮಹಾಭಯಂಕರವಾದ ಕುಂಭೀಪಾಕವೆಂಬ ನರಕದಲ್ಲಿ ನರಳಿ ಅನಂತರ ಚಂಡಾಲನಾಗಿ ಹುಟ್ಟುವನು.

೨೬. ಅನಂತರ ಏಳು ಜನ್ಮಗಳಲ್ಲಿ ಕುಷ್ಠರೋಗದಲ್ಲಿ ನರಳಿ ಮುಂದೆ ಆ ಪಾಪದಿಂದ ಮುಕ್ತನಾಗುವನೆಂದು ಕಮಲಸಂಭವನು ಹೇಳಿರುವನು.

೨೭. ಎಲೈ ದ್ವಿಜೋತ್ತಮನೇ, ಈ ರೀತಿಯಾಗಿ ಹರಿವಾಸರದ ದಿವಸ ಊಟ ಮಾಡುವುದರಿಂದ ಸಂಭವಿಸುವ ಪಾಪವನ್ನು ನಿರೂಪಿಸಿದೆನು. ಮೊದಲು ನಾನು ಹೇಳಿದ 'ದ್ವಾದಶೀ ಲಂಘನದೋಷ'ವನ್ನು ನೀನು ಕೇಳಿಯೇ ಇದ್ದೀಯೆ.

೨೮. ಈಗ ದಶಮೀ ತಿಥಿಯನ್ನು ಅನುಸರಿಸದೆ ಮೀರುವುದರಿಂದ ಸಂಘಟಿಸುವ ದೋಷವನ್ನು ನಿನಗೆ ಹೇಳುವೆನು, ಕೇಳು. ವೇದದ ಸಾರದಂತಿರುವ ಆ ವಿಷಯವನ್ನು ಪೂರ್ವದಲ್ಲಿ ನಾನು ಧರ್ಮಪುರುಷನ ಬಾಯಿನಿಂದ ಕೇಳಿದನು.

ದಶಮೀಂ ಯಃ ಕಲಾಮಾತ್ರಾಂ ಮೂಢೋಽಜ್ಞಾನೇನ ಲಂಘಯೇತ್ ।
ಯಾತಿ ಶ್ರೀಸ್ತದ್ಗೃಹಾತ್ತೂರ್ಣಂ ಶಾಪಂ ದತ್ತ್ವಾತು ದಾರುಣಂ ॥ ೨೯ ॥

ಇಹ ತದ್ವಂಶಹಾನಿಶ್ಚ ಯಶೋಹಾನಿರ್ಭವೇದ್ಧ್ರುವಂ ।
ಅಂತೇ ಮನ್ವಂತರಶತಮಂಧಕೂಪೇ ವಸೇದ್ದ್ವಿಜ ॥ ೩೦ ॥

ದಶಮ್ಯೇಕಾದಶೀ ವಾಽಪಿ ದ್ವಾದಶೀ ಯತ್ರ ವಾಸರೇ ।
ತತ್ರ ಭುಕ್ತ್ವಾ ಪರದಿನೇ ಉಪೋಷ್ಯ ವ್ರತಮಾಚರೇತ್ ॥ ೩೧ ॥

ದ್ವಾದಶ್ಯಾಂ ಚ ವ್ರತಂ ಕೃತ್ವಾ ತ್ರಯೋದಶ್ಯಾಂ ಚ ಪಾರಣಂ ।
ದ್ವಾದಶೀಲಂಘನೇ ದೋಷೋ ವ್ರತಿನಾಂ ತನ್ನ ವಿದ್ಯತೇ ॥ ೩೨ ॥

---

೨೯. ಯಾವ ಮೂಢನು ಅಜ್ಞಾನದಿಂದ ದಶಮೀತಿಥಿಯನ್ನು ಒಂದು ಕಲೆಯಷ್ಟಾದರೂ ಮೀರುವನೋ (ಅಂದರೆ ದಶಮೀವೇಧೆಯಿರುವ ಏಕಾದಶಿಯನ್ನಾ ಚರಿಸುವನೋ) ಅವನಿಗೆ ಲಕ್ಷ್ಮಿಯು (ಸಂಪತ್ತು) ದಾರುಣವಾಗಿ ಶಾಪವನ್ನಿತ್ತು ಅವನ ಮನೆಯಿಂದ ಜಾಗ್ರತೆ ಹೊರಟುಹೋಗುವಳು.

೩೦. ಇಹಲೋಕದಲ್ಲಿ ಅವನ ವಂಶವೂ, ಕೀರ್ತಿಯೂ ಹಾನಿಹೊಂದುವು ದಲ್ಲದೆ, ಅವನು ಸತ್ತನಂತರ ನೂರು ಮನ್ವಂತರಗಳ ಕಾಲ ಅಂಧಕೂಪವೆಂಬ ನರಕದಲ್ಲಿ ಬಿದ್ದು ತೊಳಲುವನು.

೩೧. ಯಾವ ದಿವಸ ದಶಮೀ ಏಕಾದಶೀ ಮತ್ತು ದ್ವಾದಶೀ ತಿಥಿಗಳು ಸೇರುವುವೋ 'ಅವಮ' ಎನಿಸಿಕೊಳ್ಳುವ ಆ ದಿವಸ ಊಟಮಾಡಿ ಮರುದಿವಸ ಉಪವಾಸಮಾಡಿ ಏಕಾದಶೀವ್ರತವನ್ನಾ ಚರಿಸಬೇಕು.

೩೨. ಅಂಥ ಸಂದರ್ಭದಲ್ಲಿ ದ್ವಾದಶೀ ದಿವಸ ವ್ರತಮಾಡಿ ತ್ರಯೋದಶೀ ದಿವಸ ಪಾರಣೆ ಮಾಡುವುದರಿಂದ ಏಕಾದಶೀವ್ರತವನ್ನಾ ಚರಿಸುವವರಿಗೆ 'ದ್ವಾದಶೀ ಲಂಘನ' ದೋಷವು ಸಂಘಟಿಸುವುದಿಲ್ಲ.

ಸಂಪೂರ್ಣೈಕಾದಶೀ ಯತ್ರ ಪ್ರಭಾತೇ ಕಿಂಚಿದೇವ ಸಾ ।
ತತ್ರೋಪೋಷ್ಯಾ ದ್ವಿತೀಯಾ ಚ ಪರಾ ಚೇದ್ವ್ಯಧಿ ವರ್ಧತೇ ॥ ೩೩ ॥

ಷಷ್ಟಿದಂಡಾತ್ಮಿಕಾ ಯತ್ರ ಪ್ರಭಾತೇ ಚ ತಿಥಿತ್ರಯಂ ।
ಕುರ್ವಂತಿ ಗೃಹಿಣಃ ಪೂರ್ವಂ ಚೈವ ಯತ್ಯಾದಯಸ್ತಥಾ ॥ ೩೪ ॥

ಪರತ್ರಾನಶನಂ ಕೃತ್ವಾ ನಿತ್ಯಕೃತ್ಯಂ ಸಮಾಚರೇತ್ ।
ವ್ರತೇ ಜಾಗರಣಂ ಸರ್ವಂ ಪೂರ್ವತ್ರೈವಾಚರೇದ್ಬುಧಃ ॥ ೩೫ ॥

ತತ್ಪೂರ್ವದಿವಸೇ ನಿತ್ಯಂ ವ್ರತಂ ಕೃತ್ವಾ ಪರೇಽಹನಿ ।
ಏಕಾದಶ್ಯಾಂ ವ್ಯತೀತಾಯಾಂ ಪಾರಣಂ ತು ಸಮಾಚರೇತ್ ॥ ೩೬ ॥

ವೈಷ್ಣವಾನಾಂ ಯತೀನಾಂ ಚ ವಿಧವಾನಾಂ ತಥೈವ ಚ ।
ಸರ್ವೇಷಾಂ ಸಮಾ ಉಪೋಷ್ಯಾಸ್ತಾ ಭಿಕ್ಷೂಣಾಂ ಬ್ರಹ್ಮಚಾರಿಣಾಂ ॥ ೩೭ ॥

---

೩೩. ಮೊದಲಿನ ದಿವಸ ಪೂರ್ಣೈಕಾದಶಿಯು ಇದ್ದು ಮರುದಿವಸ ಪ್ರಭಾತದಲ್ಲಿಯೂ ಸ್ವಲ್ಪ ಏಕಾದಶಿ ಇದ್ದು ಅದರ ಮಾರನೆಯ ದಿವಸ ಪ್ರಭಾತದಲ್ಲಿ ದ್ವಾದಶಿ ಇರುವುದಾದರೆ ಹಿಂದಿನ ಎರಡು ದಿವಸಗಳಲ್ಲಿಯೂ ಉಪವಾಸ ಮಾಡಬೇಕು.

೩೪–೩೫. ಮೊದಲಿನ ದಿವಸ ಅರವತ್ತು ಘಳಿಗೆ ಏಕಾದಶಿ ಇದ್ದು ಮರುದಿವಸ ತಿಥಿತ್ರಯ ಯೋಗವಿದ್ದರೆ, ಗೃಹಸ್ಥರು ಮೊದಲನೆಯ ದಿವಸವೇ ಉಪವಾಸ ಮಾಡುತ್ತಾರೆ. ಯತಿ, ಬ್ರಹ್ಮಚಾರಿ ಮುಂತಾದವರು ಮರುದಿವಸವೂ ಉಪವಾಸ ಮಾಡಿ ನಿತ್ಯಕೃತ್ಯವನ್ನಾಚರಿಸಬೇಕು. ವ್ರತಮಾಡುವವರು ಜಾಗರಣೆಯನ್ನು ಹಿಂದಿನ ದಿವಸ ರಾತ್ರಿಯೇ ಆಚರಿಸಬೇಕು.

೩೬. ಪೂರ್ಣೈಕಾದಶಿಯಿರುವ ದಿವಸವೇ ವ್ರತವನ್ನಾಚರಿಸಿ ಮರುದಿವಸ ಏಕಾದಶಿ ತಿಥಿಯು ಕಳೆದನಂತರ ಪಾರಣೆಯನ್ನು ಆಚರಿಸಬೇಕು.

೩೭. ವೈಷ್ಣವರು, ಯತಿಗಳು, ವಿಧವೆಯರು, ಭಿಕ್ಷುಗಳು ಮತ್ತು ಬ್ರಹ್ಮಚಾರಿಗಳು ಉಪವಾಸ ವಿಧಾನದಲ್ಲಿ ಒಂದೇಕ್ರಮವನ್ನನುಸರಿಸುವರು.

ಶುಕ್ಲಾಮೇವ ತು ಕುರ್ವಂತಿ ಗೃಹಿಣೋ ವೈಷ್ಣವೇತರಾಃ ।
ನ ಕೃಷ್ಣಾಲಂಘನೇ ದೋಷಸ್ತೇಷಾಂ ವೇದೇಷು ನಾರದ ॥ ೩೮ ॥

ಶಯನೀಬೋಧಿನೀಮಧ್ಯೇ ಯಾ ಕೃಷ್ಣೈಕಾದಶೀ ಭವೇತ್ ।
ಸೈವೋಪೋಷ್ಯಾ ಗೃಹಸ್ಥೇನ ನಾನ್ಯಾ ಕೃಷ್ಣಾ ಕದಾಚನ ॥ ೩೯ ॥

ಇತ್ಯೇವಂ ಕಥಿತೋ ಬ್ರಹ್ಮನ್ನಿರ್ಣಯೋಽಯಂ ಶ್ರುತೌ ಶ್ರುತಃ ।
ವ್ರತಸ್ಯಾಸ್ಯ ವಿಧಾನಂ ಚ ನಿಬೋಧ ಕಥಯಾಮಿ ತೇ ॥ ೪೦ ॥

ಕೃತ್ವಾ ಹವಿಷ್ಯಂ ಪೂರ್ವಾಹ್ಣೇ ನ ಚ ಭುಂಕ್ತೇ ಪುನರ್ಜಲಂ ।
ಏಕಾಕೀ ಕುಶಶಯ್ಯಾಯಾಂ ನಕ್ತಂ ಶಯನಮಾಚರೇತ್ ॥ ೪೧ ॥

ಬ್ರಾಹ್ಮೇ ಮುಹೂರ್ತೇ ಚೋತ್ಥಾಯ ಪ್ರಾತಃಕೃತ್ಯಂ ವಿಧಾಯ ಚ ।
ನಿತ್ಯಕೃತ್ಯಂ ವಿಧಾಯಾಥ ತತಃ ಸ್ನಾನಂ ಸಮಾಚರೇತ್ ॥ ೪೨ ॥

---

೩೮. ವೈಷ್ಣವರಲ್ಲದ ಗೃಹಸ್ಥರು ಶುಕ್ಲಪಕ್ಷದ ಏಕಾದಶಿಯನ್ನು ಮಾತ್ರ ಆಚರಿಸುವರು. ಎಲೈ ನಾರದನೇ, ಕೃಷ್ಣಪಕ್ಷದ ಏಕಾದಶಿಯನ್ನು ಅವರು ಆಚರಿಸ ದಿದ್ದರೆ ದೋಷವಿಲ್ಲವೆಂದು ವೇದದಲ್ಲಿ ನಿರೂಪಿತವಾಗಿದೆ.

೩೯. ಶಯನದ್ವಾದಶೀ ಮತ್ತು ಉತ್ಥಾನ ದ್ವಾದಶಿಯ ಮಧ್ಯದಲ್ಲಿ ಬರುವ (ಚಾತುರ್ಮಾಸ್ಯದ) ಕೃಷ್ಣಪಕ್ಷದ ಏಕಾದಶಿಗಳನ್ನು ಮಾತ್ರ ಗೃಹಸ್ಥನು ಆಚರಿಸ ಬೇಕೇ ಹೊರತು ಉಳಿದ ಕೃಷ್ಣೈಕಾದಶಿಗಳನ್ನು ಆಚರಿಸಬೇಕಾದುದಿಲ್ಲ.

೪೦. ಎಲೈ ಬ್ರಾಹ್ಮಣೋತ್ತಮನೇ, ಶ್ರುತ್ಯುಕ್ತವಾದ ಏಕಾದಶಿಯ ನಿರ್ಣಯವನ್ನು ಈ ರೀತಿ ತಿಳಿಸಿದೆನು. ಈಗ ಆ ವ್ರತಾಚರಣೆಯ ವಿಧಾನವನ್ನು ಹೇಳುವೆನು ಕೇಳು.

೪೧. ದಶಮಿಯ ದಿವಸ ಹವಿಷ್ಯಾನ್ನವನ್ನು ಒಂದು ಹೊತ್ತು ಊಟಮಾಡಬೇಕು. ಅನಂತರ ನೀರನ್ನೂ ಸಹ ಕುಡಿಯಬಾರದು. ರಾತ್ರಿ ದರ್ಭಶಯನದಲ್ಲಿ ಏಕಾಕಿಯಾಗಿ ಮಲಗಿ ನಿದ್ರಿಸಬೇಕು.

೪೨. ಮಾರನೆಯ ದಿವಸ ಬ್ರಾಹ್ಮಮುಹೂರ್ತದಲ್ಲೆದ್ದು ಪ್ರಾತರ್ವಿಧಿಯನ್ನೂ, ನಿತ್ಯಕೃತ್ಯವನ್ನೂ ಆಚರಿಸಿ ಅನಂತರ ಸ್ನಾನವನ್ನು ಮಾಡಬೇಕು.

ವ್ರತೋಪವಾಸಂ ಸಂಕಲ್ಪ್ಯ ಶ್ರೀಕೃಷ್ಣ ಪ್ರೀತಿಪೂರ್ವಕಂ ।
ಕೃತ್ವಾ ಸಂಧ್ಯಾಂ ತರ್ಪಣಂ ಚ ವಿಧಾಯಾಽಽಹ್ನಿಕಮಾಚರೇತ್ || ೪೩ ||

ನಿತ್ಯಪೂಜಾಂ ದಿನೇ ಕೃತ್ವಾ ವ್ರತದ್ರವ್ಯಂ ಸಮಾಹರೇತ್ ।
ಕೃತ್ವಾ ಷೋಡಶೋಪಚಾರಂ ಪ್ರದೃಷ್ಟಂ ವಿಧಿಬೋಧಿತಂ || ೪೪ ||

ಆಸನಂ ವಸನಂ ಪಾದ್ಯಮರ್ಘ್ಯಂ ಪುಷ್ಪಾನುಲೇಪನಂ ।
ಧೂಪ ದೀಪಂ ಚ ನೈವೇದ್ಯಂ ಯಜ್ಞಸೂತ್ರಂ ಚ ಭೂಷಣಂ || ೪೫ ||

ಗಂಧಂ ಸ್ನಾನಿಯತಾಂಬೂಲೇ ಮಧುಪರ್ಕಂ ಪುನರ್ಜಲಂ ।
ಏತಾನ್ಯಾಹೃತ್ಯ ದಿವಸೇ ವ್ರತಂ ನಕ್ತಂ ಸಮಾಚರೇತ್ || ೪೬ ||

ಉಪವಿಷ್ಯಾಸನೇಪೂತೋ ಧೃತ್ವಾ ಧೌತೇ ಚ ವಾಸಸೀ ।
ಆಚಮ್ಯ ಶ್ರೀಹರಿಂ ನತ್ವಾ ಸ್ವಸ್ತಿವಾಚನಮಾಚರೇತ್ || ೪೭ ||

---

೪೩. ಶ್ರೀಕೃಷ್ಣನ ಪ್ರೀತ್ಯರ್ಥವಾಗಿ ವ್ರತ ಮತ್ತು ಉಪವಾಸಮಾಡುವುದಾಗಿ ಸಂಕಲ್ಪಿಸಿ, ಸಂಧ್ಯಾವಂದನೆ, ದೇವರ್ಷಿಪಿತೃತರ್ಪಣ ಮತ್ತು ಆಹ್ನಿಕವನ್ನು ಆಚರಿಸಬೇಕು.

೪೪. ದಿನದ ನಿತ್ಯಪೂಜೆಯನ್ನು ಮಾಡಿ ವ್ರತೋಪಯುಕ್ತವಾದ ಸಾಮಗ್ರಿಗಳನ್ನು ಸಿದ್ಧಪಡಿಸಿಕೊಳ್ಳಬೇಕು. ಪ್ರಸಿದ್ಧವೂ, ವಿಧ್ಯುಕ್ತವೂ ಆದ ಷೋಡಶೋಪಚಾರ ಪೂಜೆಯ ದ್ರವ್ಯಗಳನ್ನು ತಂದಿಡಬೇಕು.

೪೫-೪೬. ಆಸನವಸನಗಳನ್ನೂ, ಪಾದ್ಯ ಮತ್ತು ಅರ್ಘ್ಯಗಳನ್ನೂ, ಪುಷ್ಪ ಮತ್ತು ಅನುಲೇಪನದ್ರವ್ಯವನ್ನೂ, ಧೂಪದೀಪನೈವೇದ್ಯಗಳನ್ನೂ, ಯಜ್ಞೋಪವೀತ ಮತ್ತು ಭೂಷಣವನ್ನೂ, ಗಂಧ, ಸ್ನಾನೀಯ ಮತ್ತು ತಾಂಬೂಲಗಳನ್ನೂ, ಮಧುಪರ್ಕ ಮತ್ತು ಪುನರಾಚಮನವನ್ನೂ ಹಗಲಿನಲ್ಲಿ ಸಿದ್ಧಪಡಿಸಿಕೊಂಡು ರಾತ್ರಿಯಹೊತ್ತು ಈ ವ್ರತವನ್ನಾಚರಿಸಬೇಕು.

೪೭. ಸ್ನಾನದಿಂದ ಶುದ್ಧನಾಗಿ, ಶುಭ್ರವಾದ ಎರಡುವಸ್ತ್ರವನ್ನು ಧರಿಸಿ, ಆಸನದಲ್ಲಿ ಕುಳಿತುಕೊಂಡು, ಆಚಮನವಾಡಿ, ಶ್ರೀಹರಿಗೆ ವಂದಿಸಿ ಸ್ವಸ್ತಿವಾಚನ ಮಾಡಬೇಕು.

ಆರೋಪ್ಯ ಮಂಗಲಘಟಂ ಧಾನ್ಯಾಧಾರೇ ಶುಭೇ ಕ್ಷಣೇ ।
ಫಲಶಾಖಾಚಂದನಾಕ್ತಂ ವೇದೋಕ್ತಂ ಮುನಿಭಿರ್ಮುದಾ ॥ ೪೮ ॥

ದೇವಷಟ್ಕಂ ಸಮಾವಾಹ್ಯ ಪೃಥಕ್‌ಧ್ಯಾನೈಃ ಸಮಾಚರೇತ್ ।
ಪೂಜಾಂ ಪಂಚೋಪಚಾರೈಶ್ಚ ಪ್ರಕೃಷ್ಟೈಶ್ಚ ವಿಚಕ್ಷಣಃ ॥ ೪೯ ॥

ಗಣೇಶ್ವರಂ ದಿನಕರಂ ವಹ್ನಿಂ ವಿಷ್ಣುಂ ಶಿವಂ ಶಿವಾಂ ।
ಸಂಪೂಜ್ಯೈತಾನ್ ಪ್ರಣಮ್ಯಾಥ ವ್ರತಂ ಕುರ್ಯಾದ್ಧರಿಂ ಸ್ಮರನ್ ॥ ೫೦ ॥

ನಾಽಽರಾಧ್ಯ ದೇವಷಟ್ಕಂ ಚ ಯದಿ ಕರ್ಮ ಸಮಾಚರೇತ್ ।
ನಿತ್ಯಂ ನೈಮಿತ್ತಿಕಂ ಚಾಪಿ ತತ್ಸರ್ವಂ ನಿಷ್ಫಲಂ ಭವೇತ್ ॥ ೫೧ ॥

ಇತ್ಯೇವಂ ಕಥಿತಂ ಸರ್ವಂ ವ್ರತಾಂಗಭೂತಮೇವ ಚ ।
ಕಣ್ವಶಾಖೋಕ್ತಮಿಷ್ಟಂ ಚ ವ್ರತಂ ಶೃಣು ಮಹಾಮುನೇ ॥ ೫೨ ॥

೪೮–೪೯. ಶುಭಮುಹೂರ್ತದಲ್ಲಿ ಧ್ಯಾನರಾಶಿಯಮೇಲೆ ಪೂರ್ಣಫಲ ಮತ್ತು ಶಾಖೆಯಿಂದ ಕೂಡಿ ಚಂದನಲಿಪ್ತವಾಗಿರುವ ಮಂಗಳಕಲಶವನ್ನಿಟ್ಟು ವೇದೋಕ್ತವೂ, ಮುನಿಗಳಿಂದ ಪೂಜಿತವೂ, ಆದ ಆರು ದೇವತೆಗಳನ್ನು ಆವಾಹನೆಮಾಡಿ ಪ್ರತ್ಯೇಕವಾಗಿ ಧ್ಯಾನಮಾಡಿ, ಪ್ರಕೃಷ್ಟದ್ರವ್ಯಗಳಿಂದ ಪಂಚೋಪಚಾರಪೂಜೆಯನ್ನು ಸಮರ್ಪಿಸಬೇಕು.

೫೦. ಗಣೇಶ, ದಿನೇಶ, ವಹ್ನಿ, ವಿಷ್ಣು, ಶಿವ ಮತ್ತುಶಿವೆಯರನ್ನು ಭಕ್ತಿಯಿಂದ ಪೂಜಿಸಿ, ನಮಿಸಿ, ಶ್ರೀಹರಿಯನ್ನು ಸ್ಮರಿಸುತ್ತ ವ್ರತವನ್ನು ಪ್ರಾರಂಭಿಸಬೇಕು.

೫೧. ಮೇಲೆ ಹೇಳಿದ ಆರು ದೇವತೆಗಳನ್ನು ಪೂಜಿಸದೆ, ಆಚರಿಸುವ ನಿತ್ಯ ನೈಮಿತ್ತಿಕ ಕರ್ಮಗಳೆಲ್ಲವೂ ನಿಷ್ಫಲವಾಗುವುದರಲ್ಲಿ ಸಂದೇಹವಿಲ್ಲ.

೫೨. ಈ ರೀತಿಯಾಗಿ ಏಕಾದಶೀವ್ರತದ ಅಂಗಭೂತವಿಷಯಗಳನ್ನು ತಿಳಿಸಿದುದಾಯಿತು ಎಲೈ ಮಹಾಮುನಿಯೇ, ಈಗ ಕಾಣ್ವಶಾಖೋಕ್ತವೂ ನಿನಗೆ ಇಷ್ಟವೂ, ಆದ ವ್ರತವಿಧಾನವನ್ನು ಹೇಳುವೆನು ಕೇಳು.

ಸಾಮವೇದೋಕ್ತಧ್ಯಾನೇನ ಧ್ಯಾತ್ವಾ ಕೃಷ್ಣಂ ಪರಾತ್ಪರಂ ।
ಪುಷ್ಪಂ ಚ ಶಿರಸಿ ನ್ಯಸ್ಯ ಪುನರ್ಧ್ಯಾನಂ ಸಮಾಚರೇತ್ ॥ ೫೩ ॥

ಧ್ಯಾನಂ ಶೃಣು ನಿಗೂಢಂ ಚ ಸರ್ವೇಷಾಮಪಿ ವಾಂಛಿತಂ ।
ನ ಪ್ರಕಾಶ್ಯಮಭಕ್ತಾಯ ಭಕ್ತಪ್ರಾಣಾಧಿಕಂ ಪರಂ ॥ ೫೪ ॥

ನವೀನನೀರದೋ ಯದ್ವಚ್ಛ್ಯಾಮಸುಂದರವಿಗ್ರಹಂ ।
ಶರತ್ಪಾರ್ವಣಚಂದ್ರಾಭಾವಿನಿಂದಾಸ್ಯಮನುತ್ತಮಂ ॥ ೫೫ ॥

ಶರತ್ಪ್ರಾಯೋದಯಾಬ್ಜಾನಾಂ ಪ್ರಭಾಮೋಚನಲೋಚನಂ ।
ಸ್ವಾಂಗಸೌಂದರ್ಯಶೋಭಾಭೀ ರತ್ನಭೂಷಣಭೂಷಿತಂ ॥ ೫೬ ॥

ಗೋಪೀಲೋಚನಕೋಣೈಶ್ಚ ಪ್ರಸನ್ನೈ ರತಿಸೂಚಕೈಃ ।
ಶಶ್ವನ್ನಿರೀಕ್ಷ್ಯಮಾಣಂ ತತ್ಪ್ರಾಣೈರಿವ ವಿನಿರ್ಮಿತಂ ॥ ೫೭ ॥

---

೫೩. ಸಾಮವೇದೋಕ್ತವಾದ ಧ್ಯಾನಸ್ತೋತ್ರದಿಂದ ಪರಾತ್ಪರನಾದ ಶ್ರೀಕೃಷ್ಣನನ್ನು ಧ್ಯಾನಿಸಿ, ಶಿರಸ್ಸಿನಲ್ಲಿ ಪುಷ್ಪವನ್ನಿಟ್ಟು ಪುನಃ ಧ್ಯಾನಮಾಡಬೇಕು.

೫೪. ಎಲ್ಲರಿಗೂ ಪ್ರಿಯವಾದುದೂ, ಗೋಪ್ಯವಾದುದೂ ಆದ ಧ್ಯಾನಕ್ರಮವನ್ನು ಹೇಳುವೆನು, ಕೇಳು. ಭಕ್ತರ ಪ್ರಾಣಕ್ಕಿಂತಲೂ ಪ್ರೀತಿಪಾತ್ರವಾದ ಈ ಧ್ಯಾನಸ್ತೋತ್ರವನ್ನು ಭಕ್ತನಲ್ಲದವನಿಗೆ ಹೇಳಕೂಡದು.

೫೫-೫೬. ನವಮೇಘದಂತೆ ಶ್ಯಾಮಸುಂದರಶರೀರನೂ, ಶರತ್ಪೂರ್ಣಿಮಾಚಂದ್ರನನ್ನು ಧಿಕ್ಕರಿಸುವ ಮನೋಹರವಾದ ಮುಖವುಳ್ಳವನೂ, ಶರದೃತುವಿನ ಪ್ರಾತಃಕಾಲದ ಕಮಲದ ಕಾಂತಿಯನ್ನು ಅಲ್ಲಗಳೆಯುವ ಕಣ್ಣುಳ್ಳವನೂ, ರತ್ನಭೂಷಣಗಳಿಂದ ಭೂಷಿತವಾದ ಸುಂದರಾವಯವಗಳುಳ್ಳವನೂ, ಆದ ಪರಮಾತ್ಮನನ್ನು ಭಜಿಸುವೆನು.

೫೭. ಪ್ರಸನ್ನವೂ, ಪ್ರೇಮಸೂಚಕವೂ ಆದ ಗೋಪಿಯರ ಕಡೆಗಣ್ಣಿನಿಂದ ಕ್ಷಣಕ್ಷಣಕ್ಕೂ ನೋಡಲ್ಪಡುವ ಮತ್ತು ಅವರ ಪ್ರಾಣಗಳಿಂದ ನಿರ್ಮಿತನಾಗಿರುವನೋ ಎಂಬಂತಿರುವ ಶ್ರೀಕೃಷ್ಣಪರಮಾತ್ಮನನ್ನು ಭಜಿಸುವೆನು.

ರಾಸಮಂಡಲಮಧ್ಯಸ್ಥಂ ರಾಸೋಲ್ಲಾಸಸಮುತ್ಸುಕಂ ।
ರಾಧಾವಕ್ತ್ರಶರಚ್ಚಂದ್ರಸುಧಾಪಾನಚಕೋರಕಮ್ ॥ ೫೮ ॥

ಕೌಸ್ತುಭೇಣ ಮಣೀಂದ್ರೇಣ ವಕ್ಷಃಸ್ಥಲಸಮುಜ್ಜ್ವಲಂ ।
ಪಾರಿಜಾತಪ್ರಸೂನಾನಾಂ ಮಾಲಾಜಾಲೈರ್ವಿರಾಜಿತಂ ॥ ೫೯ ॥

ಸದ್ರತ್ನಸಾರನಿರ್ಮಾಣಂ ಕಿರೀಟೋಜ್ಜ್ವಲಶೇಖರಂ ।
ವಿನೋದಮುರಲೀನ್ಯಸ್ತಹಸ್ತಂ ಪೂಜ್ಯಂ ಸುರಾಸುರೈಃ ॥ ೬೦ ॥

ಧ್ಯಾನಾಸಾಧ್ಯಂ ದುರಾರಾಧ್ಯಂ ಬ್ರಹ್ಮಾದೀನಾಂ ಚ ವಂದಿತಂ ।
ಕಾರಣಂ ಕಾರಣಾನಾಂ ಯಸ್ತಮೀಶ್ವರಮಹಂ ಭಜೇ ॥ ೬೧ ॥

---

೫೮. ರಾಸಮಂಡಲದ ಮಧ್ಯದಲ್ಲಿರುವ, ರಾಸಕ್ರೀಡೆಯಲ್ಲಿ ಸಮುತ್ಸುಕನಾಗಿರುವ ಮತ್ತು ರಾಧೆಯ ಮುಖವೆಂಬ ಶರಚ್ಚಂದ್ರನ ಅಮೃತವನ್ನು ಪಾನ ಮಾಡಲು ಚಕೋರಪಕ್ಷಿಯಂತಿರುವ ಶ್ರೀಹರಿಯನ್ನು ಭಜಿಸುವೆನು.

೫೯. ವಕ್ಷಃಸ್ಥಲದಲ್ಲಿ ಶೋಭಿಸುವ ಶ್ರೇಷ್ಠವಾದ ಕೌಸ್ತುಭಮಣಿಯಿಂದಲೂ, ಪಾರಿಜಾತಕುಸುಮಗಳ ಮಾಲಾಜಾಲಗಳಿಂದಲೂ ಭೂಷಿತನಾದ ಪರಮಾತ್ಮನನ್ನು ಭಜಿಸುವೆನು.

೬೦. ಶ್ರೇಷ್ಠರತ್ನಗಳನ್ನು ಮೆಟ್ಟಿರುವ ಉಜ್ಜ್ವಲವಾದ ಕಿರೀಟವನ್ನು ತಲೆಯಲ್ಲಿ ಧರಿಸಿ, ಕೈಯಲ್ಲಿ ವಿನೋದಾರ್ಥವಾಗಿ ಕೊಳಲನ್ನು ಹಿಡಿದಿರುವ ಸುರಾಸುರ ವಂದಿತನಾದ ದೇವನನ್ನು ಧ್ಯಾನಿಸುವೆನು.

೬೧. ಧ್ಯಾನಕ್ಕೆ ಸುಲಭವಲ್ಲದವನೂ, ಪೂಜೆಗೆ ಸಿಲುಕದವನೂ, ಬ್ರಹ್ಮಾದಿ ದೇವತೆಗಳಿಂದ ವಂದಿತನೂ, ಕಾರಣಗಳಿಗೆಲ್ಲ ಆದಿಕಾರಣನೂ ಆದ ಸರ್ವೇಶ್ವರನನ್ನು ಭಜಿಸುವೆನು.

ಧ್ಯಾತ್ವಾನೇನ ತಮಾವಾಹ್ಯ ಚೋಪಚಾರಾಣಿ ಷೋಡಶ ।
ದತ್ವಾ ಸಂಪೂಜಯೇದ್ಭಕ್ತ್ಯಾ ಮಂತ್ರೈರೇಭಿಶ್ಚ ನಾರದ ॥ ೬೨ ॥

ಆಸನಂ ಸ್ವರ್ಣನಿರ್ಮಾಣಂ ರತ್ನಸಾರಪರಿಚ್ಛದಂ ।
ನಾನಾಚಿತ್ರವಿಚಿತ್ರಾಢ್ಯಂ ಗೃಹ್ಯತಾಂ ಪರಮೇಶ್ವರ ॥ ೬೩ ॥

ವಹ್ನಿಪ್ರಕ್ಷಾಲಿತಂ ವಸ್ತ್ರಂ ನಿರ್ಮಿತಂ ವಿಶ್ವಕರ್ಮಣಾ ।
ಮೂಲ್ಯಾನಿರ್ವಚನೀಯಂ ಚ ಗೃಹ್ಯತಾಂ ರಾಧಿಕಾಪತೇ ॥ ೬೪ ॥

ಪಾದಪ್ರಕ್ಷಾಳನಾರ್ಹಂ ಚ ಸುವರ್ಣಪಾತ್ರಸಂಸ್ಥಿತಂ ।
ಸುವಾಸಿತಂ ಶೀತಲಂ ಚ ಗೃಹ್ಯತಾಂ ಕರುಣಾನಿಧೇ ॥ ೬೫ ॥

ಇದಮರ್ಘ್ಯಂ ಪವಿತ್ರಂ ಚ ಶಂಖತೋಯಸಮನ್ವಿತಂ ।
ಪುಷ್ಪದೂರ್ವಾಚಂದನಾಕ್ತಂ ಗೃಹ್ಯತಾಂ ಭಕ್ತವತ್ಸಲ ॥ ೬೬ ॥

---

೬೨. ಎಲೈ ನಾರದನೇ, ಈ ಸ್ತೋತ್ರಗಳಿಂದ ಶ್ರೀಹರಿಯನ್ನು ಧ್ಯಾನಿಸಿ, ಆವಾಹನೆಮಾಡಿ, ಷೋಡಶೋಪಚಾರಗಳನ್ನು ಸಮರ್ಪಿಸಿ, ಮುಂದೆ ಹೇಳುವ ಮಂತ್ರಗಳಿಂದ ಭಕ್ತಿಪೂರ್ವಕವಾಗಿ ಪೂಜಿಸಬೇಕು.

೬೩. (ಷೋಡಶೋಪಚಾರಪೂಜೆ) ಎಲೈ ಪರಮೇಶ್ವರನೇ, ಸುವರ್ಣದಿಂದ ನಿರ್ಮಿತವೂ, ಶ್ರೇಷ್ಠರತ್ನಗಳಿಂದ ಖಚಿತವೂ, ವಿಚಿತ್ರಚಿತ್ರಗಳಿಂದ ಶೋಭಿತವೂ ಆದ ದಿವ್ಯಪೀಠವನ್ನು ಆಸನವಾಗಿ ಸ್ವೀಕರಿಸು.

೬೪. ವಿಶ್ವಕರ್ಮನಿಂದ ನಿರ್ಮಿತವಾಗಿ ಅನಿರ್ವಚನೀಯವಾದ ಮೂಲ್ಯವುಳ್ಳ ಅಗ್ನಿಯಂತೆ ಪರಿಶುದ್ಧವಾದ ದಿವ್ಯವಸ್ತ್ರವನ್ನು ರಾಧಿಕಾಪತಿಯಾದ ನೀನು ಸ್ವೀಕರಿಸು.

೬೫. ಎಲೈ ಕರುಣಾನಿಧಿಯೇ, ಸುವರ್ಣಕಲಶದಲ್ಲಿರುವ ಸುವಾಸಿತವೂ, ಶೀತಲವೂ ಆದ ಜಲವನ್ನು ಪಾದಪ್ರಕ್ಷಾಲನಾರ್ಥವಾಗಿ ಸ್ವೀಕರಿಸು.

೬೬. ಎಲೈ ಭಕ್ತವತ್ಸಲನೇ, ಹೂವು, ಗರಿಕೆ ಮತ್ತು ಚಂದನಗಳಿಂದ ಮಿಶ್ರಿತವಾಗಿ ಪವಿತ್ರವಾಗಿರುವ ಶಂಖೋದಕವನ್ನು ಅರ್ಘ್ಯಕ್ಕಾಗಿ ಸ್ವೀಕರಿಸು.

ಸುವಾಸಿತಂ ಶುಕ್ಲಪುಷ್ಪಂ ಚಂದನಾಗುರುಸಂಯುತಂ ।
ಸದ್ಯಸ್ತೇ ಪ್ರೀತಿಜನಕಂ ಗೃಹ್ಯತಾಂ ಸರ್ವಕಾರಣ ॥ ೬೭ ॥

ಚಂದನಾಗುರುಕಸ್ತೂರೀ ಕುಂಕುಮೋಶೀರಮುತ್ತಮಂ ।
ಸರ್ವೇಪ್ಸಿತಮಿದಂ ಕೃಷ್ಣ ಗೃಹ್ಯತಾಮನುಲೇಪನಂ ॥ ೬೮ ॥

ರಸೋ ವೃಕ್ಷವಿಶೇಷಸ್ಯ ನಾನಾದ್ರವ್ಯಸಮನ್ವಿತಃ ।
ಸುಗಂಧಿಯುಕ್ತಃ ಸುಖದೋ ಧೂಪೋಽಯಂ ಪ್ರತಿಗೃಹ್ಯತಾಂ ॥ ೬೯ ॥

ದಿವಾನಿಶಂ ಸುಪ್ರದೀಪ್ತೋ ರತ್ನಸಾರವಿನಿರ್ಮಿತಃ ।
ಪುನರ್ಧ್ವಾಂತನಾಶಬೀಜಂ ದೀಪೋಽಯಂ ಪ್ರತಿಗೃಹ್ಯತಾಂ ॥ ೭೦ ॥

ನಾನಾವಿಧಾನಿ ದ್ರವ್ಯಾಣಿ ಸ್ವಾದೂನಿ ಸುರಭೀಣಿ ಚ ।
ಚೋಷ್ಯಾದೀನಿ ಪವಿತ್ರಾಣಿ ಸ್ವಾತ್ಮಾರಾಮ ಪ್ರಗೃಹ್ಯತಾಂ ॥ ೭೧ ॥

---

೬೭. ಎಲೈ ಸರ್ವಕಾರಣನೇ, ಚಂದನ, ಅಗುರು ಮುಂತಾದ ಸುಗಂಧ ದ್ರವ್ಯಗಳಿಂದ ಸುವಾಸಿತವಾಗಿರುವ ಮತ್ತು ನಿನಗೆ ಸಂತೋಷದಾಯಕವಾಗಿರುವ ಶುಕ್ಲಪುಷ್ಪವನ್ನು ಅಲಂಕಾರಕ್ಕಾಗಿ ಸ್ವೀಕರಿಸು.

೬೮. ಎಲೈ ಕೃಷ್ಣನೇ, ಚಂದನ, ಅಗುರು, ಕಸ್ತೂರಿ, ಕುಂಕುಮಕೇಸರಿ ಮತ್ತು ಲಾಮಂಚಗಳಿಂದ ಮಿಶ್ರಿತವಾಗಿ, ಸಕಲರಿಗೂ ಅಭೀಪ್ಸಿತವಾಗಿರುವ ದಿವ್ಯಾನುಲೇಪನವನ್ನು ಸ್ವೀಕರಿಸು.

೬೯. ನಾನಾವಿಧ ಸುಗಂಧದ್ರವ್ಯಗಳಿಂದ ಕೂಡಿ ಸುಖದಾಯಕವಾಗಿರುವ ಹಾಲುಮಡ್ಡಿ ಮರದ ಹಾಲಿನಿಂದ ನಿರ್ಮಿತವಾದ ದಿವ್ಯಧೂಪವನ್ನು ಸ್ವೀಕರಿಸು.

೭೦. ಶ್ರೇಷ್ಠರತ್ನಗಳಿಂದ ನಿರ್ಮಿತವಾಗಿ, ಗಾಢಾಂಧಕಾರನಾಶಕವಾಗಿ ಹಗಲೂರಾತ್ರಿ ಉಜ್ಜ್ವಲವಾಗಿ ಪ್ರಕಾಶಿಸುವ ಈ ದಿವ್ಯದೀಪವನ್ನು ಸ್ವೀಕರಿಸು.

೭೧. ಎಲೈ ಆತ್ಮಾರಾಮನೇ, ರುಚಿಕರವೂ, ಸುವಾಸಿತವೂ, ಪವಿತ್ರವೂ ಆದ ನಾನಾವಿಧ ರಸವಸ್ತುಗಳನ್ನು ನೈವೇದ್ಯಕ್ಕಾಗಿ ಸ್ವೀಕರಿಸು.

ಸಾವಿತ್ರೀಗ್ರಂಥಿಸಂಯುಕ್ತಂ ಸ್ವರ್ಣತಂತುವಿನಿರ್ಮಿತಂ।
ಗೃಹ್ಯತಾಂ ದೇವದೇವೇಶ ರಚಿತಂ ಚಾರುಕಾರುಣಾ ॥ ೭೨ ॥

ಅಮೂಲ್ಯರತ್ನರಚಿತಂ ಸರ್ವಾವಯವಭೂಷಣಂ ।
ತ್ವಿಷಾ ಜಾಜ್ವಲ್ಯಮಾನಂ ಚ ಗೃಹ್ಯತಾಂ ನಂದನಂದನ ॥ ೭೩ ॥

ಪ್ರಧಾನೋ ವರ್ಣನೀಯಶ್ಚ ಸರ್ವಮಂಗಲಕರ್ಮಣಿ ।
ಪ್ರಗೃಹ್ಯತಾಂ ದೀನಬಂಧೋ ಗಂಧೋಽಯಂ ಮಂಗಲಪ್ರದಃ ॥ ೭೪ ॥

ಧಾತ್ರೀಶ್ರೀಫಲಪತ್ರೋತ್ಥಂ ವಿಷ್ಣುತೈಲಂ ಮನೋಹರಂ ।
ವಾಂಛಿತಂ ಸರ್ವಲೋಕಾನಾಂ ಭಗವನ್ಪ್ರತಿಗೃಹ್ಯತಾಂ ॥ ೭೫ ॥

ವಾಂಛನೀಯಂ ಚ ಸರ್ವೇಷಾಂ ಕರ್ಪೂರಾದಿಸುವಾಸಿತಂ ।
ಮಯಾ ನಿವೇದಿತಂ ನಾಥ ತಾಂಬೂಲಂ ಪ್ರತಿಗೃಹ್ಯತಾಂ ॥ ೭೬ ॥

---

೭೨. ಎಲೈ ದೇವದೇವನೇ, ಚತುರನಾದ ಶಿಲ್ಪಿಯಿಂದ ಸುವರ್ಣತಂತುಗಳಿಂದ ನಿರ್ಮಿತವಾಗಿರುವ ಮತ್ತು ಸಾವಿತ್ರೀಗ್ರಂಥಿ (ಬ್ರಹ್ಮಗಂಟು) ಯಿಂದ ಕೂಡಿರುವ ದಿವ್ಯಯಜ್ಞೋಪವೀತವನ್ನು ಸ್ವೀಕರಿಸು.

೭೩. ಎಲೈ ನಂದನಂದನನೇ, ಅಮೂಲ್ಯರತ್ನಗಳಿಂದ ಖಚಿತವಾಗಿ ಕಾಂತಿಯಿಂದ ಉಜ್ಜ್ವಲವಾಗಿರುವ, ಆಯಾಯ ಅವಯವಗಳಿಗೆ ಅನುಗುಣವಾದ ದಿವ್ಯಾಭರಣಗಳನ್ನು ಸ್ವೀಕರಿಸು.

೭೪. ಎಲೈ ದೀನಬಂಧುವೇ, ಸಕಲವಾದ ಮಂಗಳಕಾರ್ಯಗಳಲ್ಲಿಯೂ ಪ್ರಧಾನವೂ, ಮಂಗಳಪ್ರದವೂ ಆದ ದಿವ್ಯಗಂಧವನ್ನು ಸ್ವೀಕರಿಸು.

೭೫. ಎಲೈ ಭಗವಂತನೇ, ಆಮಲಕ ಮತ್ತು ಬಿಲ್ವಪತ್ರದಿಂದ ತೆಗೆದ ಮನೋಹರವೂ, ಸರ್ವಾಭೀಪ್ಸಿತವೂ ಆದ ವಿಷ್ಣುತೈಲವನ್ನು ಸ್ವೀಕರಿಸು.

೭೬. ಎಲೈ ಲೋಕನಾಥನೇ, ಪಚ್ಚಕರ್ಪೂರಾದಿಗಳಿಂದ ಸುವಾಸಿತವಾಗಿ, ಸಕಲರಿಗೂ ಅಭೀಪ್ಸಿತವಾದ ದಿವ್ಯತಾಂಬೂಲವನ್ನು ನಾನು ಸಮರ್ಪಿಸುವೆನು ಸ್ವೀಕರಿಸು.

ಸರ್ವೇಷಾಂ ಪ್ರೀತಿಜನಕಂ ಸುಮಿಷ್ಟಂ ಮಧುರಂ ಮಧು ।
ಸದ್ರತ್ನಸಾರಪಾತ್ರಸ್ಥಂ ಗೋಪೀಕಾಂತ ಪ್ರಗೃಹ್ಯತಾಂ ॥ ೭೭ ॥

ನಿರ್ಮಲಂ ಜಾಹ್ನವೀ ತೋಯಂ ಸುಪವಿತ್ರಂ ಸುವಾಸಿತಂ ।
ಪುನರಾಚಮನೀಯಂ ಚ ಗೃಹ್ಯತಾಂ ಮಧುಸೂದನ ॥ ೭೮ ॥

ಇತಿ ಷೋಡಶೋಪಚಾರಾನ್ದತ್ತ್ವಾ ಭಕ್ತೋ ಮುದಾನ್ವಿತಃ ।
ಮಂತ್ರೇಣಾನೇನ ಪುಷ್ಪಾಣಿ ಮಾಲ್ಯಂ ದತ್ತ್ವಾ ಪ್ರಯತ್ನತಃ ॥ ೭೯ ॥

ನಾನಾಪ್ರಕಾರಪುಷ್ಪೈಶ್ಚ ಗ್ರಥಿತಂ ಶುಕ್ಲತಂತುನಾ ।
ಪ್ರವರಂ ಭೂಷಣಾನಾಂ ಚ ಮಾಲ್ಯಂ ಚ ಗೃಹ್ಯತಾಂ ಪ್ರಭೋ ॥ ೮೦ ॥

ಇತಿ ಪುಷ್ಪಾಂಜಲಿಂ ದದ್ಯಾನ್ಮೂಲಮಂತ್ರೇಣ ಚ ವ್ರತೀ ।
ಕುರ್ಯಾತ್ತತ್ಸ್ತವನಂ ಭಕ್ತ್ಯಾ ಪುಟಾಂಜಲಿ ಯುತಃ ಸುಧೀಃ ॥ ೮೧ ॥

---

೭೭. ಎಲೈ ಗೋಪೀಕಾಂತನೇ, ಸಕಲರಿಗೂ ಪ್ರೀತಿಜನಕವಾಗಿ ಶ್ರೇಷ್ಠವಾದ ರತ್ನದ ಪಾತ್ರೆಯಲ್ಲಿರುವ ಮಧುರವೂ, ಮನೋಹರವೂ ಆದ ಮಧುಪರ್ಕವನ್ನು ಸ್ವೀಕರಿಸು.

೭೮. ಎಲೈ ಮಧುಸೂದನನೇ, ಪವಿತ್ರವೂ, ನಿರ್ಮಲವೂ, ಸುವಾಸಿತವೂ ಆದ ಗಂಗಾಜಲವನ್ನು ಪುನರಾಚಮನಕ್ಕಾಗಿ ಸ್ವೀಕರಿಸು

೭೯. ಮೇಲೆ ಹೇಳಿದ ರೀತಿಯಲ್ಲಿ ಭಕ್ತನು ಪರಮಾತ್ಮನಿಗೆ ಷೋಡಶೋಪಚಾರಗಳನ್ನು ಸಮರ್ಪಿಸಿ, ಮುಂದೆ ಹೇಳುವ ಮಂತ್ರವನ್ನುಚ್ಚರಿಸಿ ಪುಷ್ಪಮಾಲೆಯನ್ನು ಸಮರ್ಪಿಸಬೇಕು.

೮೦. ಎಲೈ ಪ್ರಭುವೇ, ನಾನಾವಿಧ ಪುಷ್ಪಗಳನ್ನು ಶುಕ್ಲತಂತುವಿನಲ್ಲಿ ಪೋಣಿಸಿ, ದಿವ್ಯಭೂಷಣದಂತೆ ಮಾಡಿರುವ ಪುಷ್ಪಮಾಲೆಯನ್ನು ಸ್ವೀಕರಿಸು.

೮೧ ವ್ರತನಿಷ್ಠನು ಈ ರೀತಿ ಮೂಲಮಂತ್ರೋಚ್ಚಾರಣಪೂರ್ವಕವಾಗಿ ಪುಷ್ಪಾಂಜಲಿಯನ್ನು ಸಮರ್ಪಿಸಿ, ಅಂಜಲಿಬದ್ಧನಾಗಿ ಭಕ್ತಿಯಿಂದ ಪರಮಾತ್ಮನನ್ನು ಸ್ತುತಿಸಬೇಕು.

॥ ಭಕ್ತ ಉವಾಚ ॥

ಹೇ ಕೃಷ್ಣ ರಾಧಿಕಾನಾಥ ಕರುಣಾಸಾಗರಪ್ರಭೋ ।
ಸಂಸಾರಸಾಗರೇ ಘೋರೇ ಮಾಮುದ್ಧರ ಭಯಾನಕೇ ॥ ೮೨ ॥

ಶತಜನ್ಮಕೃತಾಯಾಸಾದುದ್ವಿಗ್ನಸ್ಯ ಮಮ ಪ್ರಭೋ ।
ಸ್ವಕರ್ಮಪಾಶನಿಗಡೈರ್ಬದ್ಧಸ್ಯ ಮೋಕ್ಷಣಂ ಕುರು ॥ ೮೩ ॥

ಪ್ರಣತಂ ಪಾದಪದ್ಮೇ ತೇ ಪಶ್ಯ ಮಾಂ ಶರಣಾಗತಂ ।
ಭವಪಾಶಭಯಾದ್ಭೀತಂ ಪಾಹಿ ತ್ವಂ ಶರಣಾಗತಂ । ೮೪ ॥

ಭಕ್ತಿಹೀನಂ ಕ್ರಿಯಾಹೀನಂ ವಿಧಿಹೀನಂ ಚ ವೇದತಃ ।
ವಸ್ತುಮಂತ್ರವಿಹೀನಂ ಯತ್ತತ್ಸಂಪೂರ್ಣಂ ಕುರು ಪ್ರಭೋ ॥ ೮೫ ॥

ವೇದೋಕ್ತವಿಹಿತಾಜ್ಞಾನಾತ್ಸ್ವಾಂಗಹೀನೇ ಚ ಕರ್ಮಣಿ ।
ತ್ವನ್ನಾಮೋಚ್ಚಾರಣೇನೈವ ಸರ್ವಂ ಪೂರ್ಣಂ ಭವೇದ್ಧರೇ ॥ ೮೬ ॥

---

೮೨. ಭಕ್ತ :—ಎಲೈ ಕೃಷ್ಣನೇ, ರಾಧಾರಮಣನೇ, ಕರುಣಾಸಿಂಧುವೇ, ಪ್ರಭುವೇ, ಅತಿಭಯಂಕರವಾದ ಸಂಸಾರಸಾಗರದಲ್ಲಿ ಮುಳುಗುತ್ತಿರುವ ನನ್ನನ್ನು ಉದ್ಧರಿಸು.

೮೩. ಎಲೈ ಪ್ರಭುವೇ, ನೂರಾರು ಜನ್ಮಗಳ ಜಂಜಡದಿಂದ ಬಳಲುತ್ತಿರುವ ಮತ್ತು ಜನ್ಮಾಂತರ ಕರ್ಮಗಳೆಂಬ ಪಾಶಗಳಿಂದ ಬದ್ಧನಾಗಿರುವ ನನಗೆ ಮೋಕ್ಷವನ್ನು ದಯಪಾಲಿಸು

೮೪. ನಿನ್ನ ಪಾದಪದ್ಮಗಳಲ್ಲಿ ಸಾಷ್ಟಾಂಗವೆರಗಿ ನಿನ್ನನ್ನು ಮರೆಹೊಕ್ಕಿದ್ದೇನೆ. ಸಂಸಾರ ಬಂಧನದಿಂದ ಭೀತನಾಗಿ ನಿನ್ನ ಶರಣಾಗತನಾಗಿರುವ ನನ್ನನ್ನು ಸಂರಕ್ಷಿಸು.

೮೫. ಎಲೈ ಪ್ರಭುವೇ, ನಾನು ಮಾಡಿದ ಈ ವ್ರತದಲ್ಲಿ ಭಕ್ತಿಲೋಪ, ಕ್ರಿಯಾಲೋಪ, ವಿಧಿಲೋಪ, ವಸ್ತುಲೋಪ ಮತ್ತು ಮಂತ್ರಲೋಪಗಳಿದ್ದರೂ ಕೂಡ ಕ್ಷಮಿಸಿ ಅವನ್ನು ಪೂರ್ಣಗೊಳಿಸು.

೮೬. ಎಲೈ ಶ್ರೀಹರಿಯೇ, ವೇದವಿಹಿತವಾದ ಕ್ರಮವನ್ನು ಅರಿಯದೆ ಮಾಡುವ ಕರ್ಮವು ಅಂಗಹೀನವಾಗುವುದಾದರೂ, ನಿನ್ನ ದಿವ್ಯನಾಮೋಚ್ಚಾರಣೆ ಮಾಡಿದ ಮಾತ್ರದಿಂದಲೇ ಆ ಕರ್ಮವು ಪರಿಪೂರ್ಣವಾಗುವುದು.

ಇತಿ ಸ್ತುತ್ವಾ ತಂ ಪ್ರಣಮ್ಯ ದತ್ವಾ ವಿಪ್ರಾಯ ದಕ್ಷಿಣಾಂ ।
ಮಹೋತ್ಸವಂ ವಿಧಾಯಾಽಥ ಕುರ್ಯಾಜ್ಜಾಗರಣಂ ವ್ರತೀ ॥ ೮೭ ॥

ಕೃತ್ವಾ ವ್ರತೋಪವಾಸಂ ಚ ಯದಿ ನಿದ್ರಾಂ ನಿಷೇವತೇ ।
ಪುನರೇವ ಜಲಂ ಭುಂಕ್ತೇ ವ್ರತಾರ್ಧಫಲಭಾಗ್ಭವೇತ್ ॥ ೮೮ ॥

ಯತ್ನೇನ ಚ ಹವಿಷ್ಯಾನ್ನಂ ಸಕೃದೇವ ಸಮಾಚರೇತ್ ।
ಮಂತ್ರೇಣಾನೇನ ವಿಪ್ರೇಂದ್ರ ಶ್ರೀಕೃಷ್ಣ ಚರಣಂ ಸ್ಮರನ್ ॥ ೮೯ ॥

ಹೇ ಅನ್ನ ಪ್ರಾಣಿನಾಂ ಪ್ರಾಣಾ ಬ್ರಹ್ಮಣಾ ನಿರ್ಮಿತಂ ಪುರಾ ।
ದೇಹಿ ಮೇ ವಿಷ್ಣುರೂಪ ತ್ವಂ ವ್ರತೋಪವಾಸಯೋಃ ಫಲಂ ॥ ೯೦ ॥

ಏವಂ ಯಃ ಕುರುತೇ ಭಕ್ತ್ಯಾ ಭಾರತೇ ವ್ರತಮುತ್ತಮಂ ।
ಪೂರ್ವಾನ್ಸಪ್ತ ಪರಾನ್ಸಪ್ತ ಸ್ವಾತ್ಮಾನಮುದ್ಧರೇದ್ಧ್ರುವಂ ॥ ೯೧ ॥

---

೮೭. ವ್ರತನಿಷ್ಠನು ಈ ರೀತಿಯಾಗಿ ಸ್ತುತಿಸಿ ಶ್ರೀಹರಿಗೆ ವಂದಿಸಿ, ಪುರೋಹಿತನಿಗೆ ದಕ್ಷಿಣೆಯನ್ನು ಕೊಟ್ಟು, ಮಹೋತ್ಸವವನ್ನಾಚರಿಸಿ ರಾತ್ರಿ ಜಾಗರಣೆಮಾಡಬೇಕು.

೮೮. ಈ ರೀತಿ ವ್ರತೋಪವಾಸಗಳನ್ನು ಮಾಡಿ ನಿದ್ರೆಮಾಡಿದರಾಗಲೀ, ಜಲಪಾನಮಾಡಿದರಾಗಲೀ ಆ ವ್ರತದ ಅರ್ಧ ಫಲಕ್ಕೆ ಭಾಗಿಯಾಗುವನು.

೮೯. ಅಶಕ್ತನಾದರೆ ಮುಂದೆ ಹೇಳುವ ಮಂತ್ರವನ್ನುಚ್ಚರಿಸುತ್ತ, ಶ್ರೀಹರಿಯ ಚರಣಕಮಲಗಳನ್ನು ಸ್ಮರಿಸಿಕೊಂಡು ಒಂದೇ ಹೊತ್ತು ಹವಿಷ್ಯಾನ್ನವನ್ನು ಮಿತವಾಗಿ ಭುಂಜಿಸಬಹುದು.

೯೦. 'ಎಲೈ ಅನ್ನವೇ, ನೀನು ಪ್ರಾಣಿಗಳ ಪ್ರಾಣಸ್ವರೂಪನಾಗಿ ಬ್ರಹ್ಮನಿಂದ ನಿರ್ಮಿತವಾಗಿರುವೆ. ವಿಷ್ಣುಸ್ವರೂಪನಾದ ನೀನು ನನಗೆ ವ್ರತೋಪವಾಸಗಳ ಫಲವನ್ನು ಕೊಡುವವನಾಗು,' ಎಂದು ಪ್ರಾರ್ಥಿಸಬೇಕು.

೯೧. ಈ ರೀತಿಯಾಗಿ ಭರತಖಂಡದಲ್ಲಿ ಭಕ್ತಿಯಿಂದ ಈ ಉತ್ತಮ ವ್ರತವನ್ನಾಚರಿಸುವವರು ತಮ್ಮ ವಂಶದ ಪಿತೃಪಿತಾಮಹಾದಿ ಏಳು ಜನರನ್ನೂ ಪುತ್ರಪೌತ್ರಾದಿ ಏಳು ಜನರನ್ನೂ ನರಕದಿಂದ ಉದ್ಧರಿಸುವುದಲ್ಲದೆ ತಾನೂ ಉದ್ಧಾರವಾಗುವುದರಲ್ಲಿ ಸಂಶಯವಿಲ್ಲ.

ಮಾತರಂ ಭ್ರಾತರಂ ಚೈವ ಶ್ವಶ್ರೂಂ ಚ ಶ್ವಶುರಂ ಸುತಾಂ ।
ಜಾಮಾತರಂ ತಥಾ ಭೃತ್ಯಮುದ್ಧರೇನ್ನಿಶ್ಚಿತಂ ನರಃ || ೯೨ ||

ಇತ್ಯೇವಂ ಕಥಿತಂ ವಿಪ್ರ ಶ್ರೀಕೃಷ್ಣಚರಿತವ್ರತಂ ।
ಸುಖದಂ ಮೋಕ್ಷದಂ ಸಾರಮುಪರಂ ಕಥಯಾಮಿ ತೇ || ೯೩ ||

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ಶ್ರೀಕೃಷ್ಣಜನ್ಮಖಂಡೇ ನಾರದ
ನಾರಾಯಣಸಂವಾದೇ ಏಕಾದಶೀವ್ರತನಿರೂಪಣಂ ನಾಮ
ಷಡ್ತ್ರಿಂಶೋಽಧ್ಯಾಯಃ

---

೯೨. ಅಷ್ಟೇ ಅಲ್ಲದೆ ತನ್ನ ತಾಯಿ ಮತ್ತು ಸಹೋದರರನ್ನೂ, ಅತ್ತೆ ಮಾವಂದಿರನ್ನೂ, ಮಗಳು ಮತ್ತು ಅಳಿಯನನ್ನೂ, ಸೇವಕನನ್ನೂ ಸಹ ನಿಶ್ಚಯವಾಗಿ ಉದ್ಧರಿಸುವರು

೯೩. ಎಲೈ ವಿಪ್ರೋತ್ತಮನೇ, ಈ ರೀತಿ ಸಾರತರವೂ, ಸುಖಕರವೂ, ಮೋಕ್ಷದಾಯಕವೂ ಆದ ಶ್ರೀಕೃಷ್ಣಚರಿತ್ರೆಯನ್ನೂ, ಏಕಾದಶೀವ್ರತದ ಪ್ರಭಾವವನ್ನೂ ನಿನಗೆ ಹೇಳಿದೆನು. ಮುಂದೆಯೂ ಶ್ರೀಕೃಷ್ಣನ ಲೀಲೆಯನ್ನು ಹೇಳುವೆನು.

ಇಲ್ಲಿಗೆ ಬ್ರಹ್ಮವೈವರ್ತಮಹಾಪುರಾಣದ ಶ್ರೀಕೃಷ್ಣಜನ್ಮಖಂಡದಲ್ಲಿ
ಏಕಾದಶೀವ್ರತನಿರೂಪಣಾತ್ಮಕವಾದ ಇಪ್ಪತ್ತಾರನೆಯ
ಅಧ್ಯಾಯವು ಮುಗಿದುದು.

ಇಪ್ಪತ್ತಾರನೆಯ ಅಧ್ಯಾಯದ ಸಾರಾಂಶ

ಈ ಅಧ್ಯಾಯದಲ್ಲಿ ಏಕಾದಶೀವ್ರತಾಚರಣೆಯ ವಿಧಾನವೂ, ಆ ವ್ರತದ ಮಾಹಾತ್ಮ್ಯವೂ ಸವಿಸ್ತರವಾಗಿ ನಿರೂಪಿತವಾಗಿದೆ. ಈ ವ್ರತವು ಚಾತುರ್ವರ್ಣ್ಯದವರ ನಿತ್ಯವ್ರತವಾಗಿದೆ. ಅದರಲ್ಲೂ ಯತಿಗಳು, ವೈಷ್ಣವರು ಮತ್ತು ಬ್ರಾಹ್ಮಣರು ಈವ್ರತವನ್ನು ಆಚರಿಸಲೇಬೇಕು. ಏಕಾದಶೀವ್ರತವನ್ನಾಚರಿಸುವವರು ದಶಮೀವೇಧೆಯಿರುವ ಏಕಾದಶೀತಿಥಿಯ ದಿವಸ ಆ ವ್ರತವನ್ನು ಆಚರಿಸಕೂಡದು. 'ತಿಥಿತ್ರಯಂ ಸ್ಪೃಶತ್ಯೇಕಂ ದಿನಂ ಸ್ಯಾದವಮಂ ಹಿ ತತ್' ಎಂಬಂತೆ ದಶಮೀ, ಏಕಾದಶೀ ಮತ್ತು ದ್ವಾದಶೀ ತಿಥಿಗಳು ಒಂದೇದಿನ ಸೇರುವುದಾದರೆ ಆ ದಿವಸ ಊಟಮಾಡಿ ಮರುದಿವಸ ಏಕಾದಶೀವ್ರತವನ್ನು ಆಚರಿಸಿ ತ್ರಯೋದಶೀ ದಿವಸ ಪಾರಣೆಮಾಡಬಹುದು. ಎರಡು ದಿವಸ ಏಕಾದಶಿಯಿದ್ದು ಮೂರನೆಯದಿವಸ ಪ್ರಭಾತದಲ್ಲಿ ದ್ವಾದಶಿ ಇರುವುದಾದರೆ ಹಿಂದಿನ ಎರಡು ದಿವಸಗಳೂ ಉಪವಾಸ ಮಾಡಬೇಕು. ವ್ರತಮಾಡುವವರು ಪೂರ್ಣೈಕಾದಶಿಯ ದಿವಸವೇ ವ್ರತವನ್ನಾಚರಿಸಿ, ಮರುದಿವಸ ಏಕಾದಶೀತಿಥಿಯು ಕಳೆದನಂತರ ಪಾರಣೆಮಾಡಬೇಕು. ಈ ಮೇಲೆಹೇಳಿದ ನಿಯಮ ಎಲ್ಲ ಯತಿಗಳಿಗೂ, ಬ್ರಹ್ಮಚಾರಿಗಳಿಗೂ, ವಿಧವೆಯರಿಗೂ ಮತ್ತು ವೈಷ್ಣವರಿಗೂ ಸಂಬಂಧಪಟ್ಟುದು. ಗೃಹಸ್ಥರು ಮಾತ್ರ ಪ್ರತಿತಿಂಗಳಿನ ಶುಕ್ಲಪಕ್ಷದ ಏಕಾದಶಿಗಳನ್ನು ಮಾತ್ರ ಆಚರಿಸಿದರೆ ಸಾಕು ಆದರೆ ಚಾತುರ್ಮಾಸ್ಯದ ಕೃಷ್ಣಪಕ್ಷದ ಏಕಾದಶಿಗಳನ್ನೂ ಆಚರಿಸಬೇಕು. ಇತರ ಕೃಷ್ಣೈಕಾದಶಿಗಳನ್ನು ಆಚರಿಸದಿದ್ದರೆ ಅವರಿಗೆ ದೋಷವಿಲ್ಲ. ಏಕಾದಶಿಯ ವ್ರತವನ್ನಾಚರಿಸುವವರು ದಶಮಿಯದಿವಸ ಒಂದು ಹೊತ್ತು ಹವಿಷ್ಯಾನ್ನವನ್ನು ಊಟಮಾಡಿ, ರಾತ್ರಿ ದರ್ಭಶಯನದಲ್ಲಿ ಮಲಗಿ ಮರುದಿವಸ ಬ್ರಾಹ್ಮಮುಹೂರ್ತದಲ್ಲೆದ್ದು ನಿತ್ಯಕೃತ್ಯಗಳನ್ನು ಆಚರಿಸಿ ವಿಧ್ಯುಕ್ತವಾಗಿ ರಾಧಾರಮಣನನ್ನು ಪೂಜಿಸಿ, ಅಂದು ನಿದ್ರಾಹಾರಗಳನ್ನು ತೊರೆದು ಸರ್ವದಾ ಪರಮಾತ್ಮನ ಧ್ಯಾನದಲ್ಲಿ ನಿರತರಾಗಿರಬೇಕು. ದ್ವಾದಶಿಯ ದಿವಸ ಅರುಣೋದಯದಲ್ಲೇ ಸ್ನಾನಮಾಡಿ ನಿತ್ಯಕೃತ್ಯಗಳನ್ನು ಆಚರಿಸಿ ಬ್ರಾಹ್ಮಣಭೋಜನಮಾಡಿಸಿ ತಾವೂ ಪಾರಣೆಮಾಡಬೇಕು. ಈ ರೀತಿ ಏಕಾದಶೀವ್ರತವನ್ನು ಅನನ್ಯಭಕ್ತಿಯಿಂದ ಆಚರಿಸುವವರು ಮುಕ್ತರಾಗುವುದರಲ್ಲಿ ಸಂಶಯವಿಲ್ಲ.

—॥ ಓಂ ॥—

—॥ ಶ್ರೀ ಗಣೇಶಾಯ ನಮಃ ॥—

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಶ್ರೀಕೃಷ್ಣಜನ್ಮಖಂಡೇ

॥ ಸಪ್ತವಿಂಶೋಽಧ್ಯಾಯಃ ॥

॥ ನಾರಾಯಣ ಉವಾಚ ॥

ಶೃಣು ನಾರದ ವಕ್ಷ್ಯಾಮಿ ಶ್ರೀಕೃಷ್ಣಚರಿತಂ ಪುನಃ ।
ಗೋಪೀನಾಂ ವಸ್ತ್ರಹರಣಂ ವರದಾನಂ ಮನೀಷಿತಂ ॥ ೧ ॥

ಹೇಮಂತೇ ಪ್ರಥಮೇ ಮಾಸಿ ಗೋಪಿಕಾಃ ಕಾಮಮೋಹಿತಾಃ ।
ಕೃತ್ವಾ ಹವಿಷ್ಯಂ ಭಕ್ತ್ಯಾ ಚ ಯಾವನ್ಮಾಸಂ ಸುಸಂಯತಾಃ ॥ ೨ ॥

ಸ್ನಾತ್ವಾ ಸೂರ್ಯಸುತಾತೀರೇ ಪಾರ್ವತೀಂ ವಾಲುಕಾಮಯೀಂ ।
ಕೃತ್ವಾಽವಾಹ್ಯ ಚ ಮಂತ್ರೇಣ ಪೂಜಾಂ ಕುರ್ವಂತಿ ನಿತ್ಯಶಃ ॥ ೩ ॥

ಇಪ್ಪತ್ತೇಳನೆಯ ಅಧ್ಯಾಯವು

೧. ನಾರಾಯಣ :—ಎಲೈ ನಾರದನೇ, ಈಗ ಗೋಪಿಯರ ವಸ್ತ್ರಗಳನ್ನು ಅಪಹರಿಸಿ ಅವರಿಗೆ ಅಭೀಪ್ಸಿತವಾದ ವರವನ್ನು ಕೊಟ್ಟ ಶ್ರೀಕೃಷ್ಣನ ಚರಿತ್ರೆಯನ್ನು ಹೇಳುವೆನು, ಕೇಳು.

೨-೩. ಕಾಮುಕಿಯರಾದ ಗೋಪಿಯರನೇಕರು ಹಿಮಂತಋತುವಿನ ಮೊದಲನೆಯ ಮಾಸದಲ್ಲಿ (ಮಾರ್ಗಶಿರ) ಒಂದುತಿಂಗಳು ಪೂರ್ತಿ ನಿಯಮಪೂರ್ವಕವಾಗಿ ಹವಿಷ್ಯಾನ್ನವನ್ನು ಭುಜಿಸಿಕೊಂಡಿದ್ದು, ಪ್ರತಿದಿನವೂ ಸ್ನಾನಮಾಡಿದನಂತರ ಯಮುನೆಯ ತೀರದಲ್ಲಿ ಮರಳಿನಲ್ಲಿ ಪಾರ್ವತಿಯನ್ನು ಆವಾಹನೆಮಾಡಿ ಧ್ಯಾನಾದಿ ಮಂತ್ರಗಳಿಂದ ನಿತ್ಯವೂ ಪೂಜಿಸುತ್ತಿದ್ದರು.

ಚಂದನಾಗುರುಕಸ್ತೂರೀ ಕುಂಕುಮೈಶ್ಚ ಮನೋಹರೈಃ ।
ನಾನಾಪ್ರಕಾರಪುಷ್ಪೈಶ್ಚ ಮಾಲ್ಯೈರ್ಬಹುವಿಧೈರಪಿ ॥ ೪ ॥

ಧೂಪೈರ್ದೀಪೈಶ್ಚ ನೈವೇದ್ಯೈರ್ವಸ್ತ್ರೈರ್ನಾನಾಫಲೈರ್ಮುನೇ ।
ಮಣಿಮುಕ್ತಾಪ್ರವಾಲೈಶ್ಚ ವಾದ್ಯೈರ್ನಾನಾವಿಧೈರಪಿ ॥ ೫ ॥

ಹೇ ದೇವಿ ಜಗತಾಂ ಮಾತಃ ಸೃಷ್ಟಿಸ್ಥಿತ್ಯಂತಕಾರಿಣಿ ।
ನಂದಗೋಪಸುತಂ ಕಾಂತಂ ಅಸ್ಮಭ್ಯಂ ದೇಹಿ ಸುವ್ರತೇ ॥ ೬ ॥

ಮಂತ್ರೇಣಾನೇನ ದೇವೇಶೀಂ ಪರಿಹಾರಂ ವಿಧಾಯ ಚ ।
ತತಃ ಕೃತ್ವಾ ತು ಸಂಕಲ್ಪಂ ಪೂಜಯೇನ್ಮೂಲಮಂತ್ರತಃ ॥ ೭ ॥

ಮಂತ್ರಸ್ತು ಸಾಮವೇದೋಕ್ತೋಽಯಾತಯಾಮಃ ಸಬೀಜಕಃ ।
ಓಂ ಶ್ರೀದುರ್ಗಾಯೈ ಸರ್ವವಿಘ್ನವಿನಾಶಿನ್ಯೈ ನಮ ಇತಿ ॥ ೮ ॥

೪–೫. ಎಲೈ ಮುನಿಯೇ, ಆ ಗೋಪಿಯರು ಮನೋಹರವಾದ ಚಂದನ, ಅಗುರು, ಕಸ್ತೂರಿ ಮತ್ತು ಕುಂಕುಮಗಳನ್ನೂ, ನಾನಾವಿಧ ಪುಷ್ಪಗಳನ್ನೂ, ವಿಧ ವಿಧ ಪುಷ್ಪಮಾಲೆಗಳನ್ನೂ, ಧೂಪದೀಪನೈವೇದ್ಯಗಳನ್ನೂ, ನಾನಾವಿಧಫಲಗಳನ್ನೂ ಮುತ್ತು, ಮಾಣಿಕ್ಯ, ಹವಳ ಮುಂತಾದ ಆಭರಣಗಳನ್ನೂ ಪಾರ್ವತಿಗೆ ಸಮರ್ಪಿಸಿ ನಾನಾವಿಧವಾದ ವಾದ್ಯಗಳನ್ನು ನುಡಿಸುತ್ತಿದ್ದರು.

೬–೭. 'ಜಗನ್ಮಾತೆಯೂ, ಸೃಷ್ಟಿಸ್ಥಿತಿಸಂಹಾರಕಾರಿಣಿಯೂ ಆದ ಎಲೌ ದೇವಿಯೇ, ನಮಗೆ ನಂದಗೋಪನ ಸುತನಾದ ಶ್ರೀಕೃಷ್ಣನು ಕಾಂತನಾಗುವಂತೆ ಅನುಗ್ರಹಿಸು' ಎಂಬ ಅರ್ಥವನ್ನು ಕೊಡುವ ಪ್ರಾರ್ಥನಾಮಂತ್ರದಿಂದ ದೇವಿಯನ್ನು ಪ್ರಾರ್ಥಿಸಿಕೊಂಡು ಅನಂತರ ಸಂಕಲ್ಪಮಾಡಿ ಮೂಲಮಂತ್ರೋ ಚ್ಚಾರಣಪೂರ್ವಕವಾಗಿ ದೇವಿಯನ್ನು ಪೂಜಿಸಿದರು.

೮. 'ಓಂ ಶ್ರೀದುರ್ಗಾಯೈ ಸರ್ವವಿಘ್ನವಿನಾಶಿನ್ಯೈ ನಮಃ' ಎಂಬುದೇ ಸಾಮವೇದೋಕ್ತವೂ, ಸಬೀಜವೂ, ಮನೋಹರವೂ ಆದ ಆ ಮೂಲಮಂತ್ರವು.

ಪುಷ್ಪಂ ಮಾಲ್ಯಂ ಚ ನೈವೇದ್ಯಂ ಧೂಪಂ ದೀಪಂ ತಥಾ ಶುಭಂ ।
ಮಂತ್ರೇಣಾನೇನ ತದ್ಭಕ್ತ್ಯಾ ದದುಃ ಸರ್ವಾ ಮುದಾನ್ವಿತಾಃ ॥ ೯ ॥

ಪ್ರವಾಲಮಾಲಯಾ ಭಕ್ತ್ಯಾ ಚೇಮಂ ಮಂತ್ರಂ ಸಹಸ್ರಧಾ ।
ಜಪಂ ಕೃತ್ವಾ ಚ ಸ್ತುತ್ವಾ ಚ ಪ್ರಣೇಮುಃ ಶಿರಸಾ ಸಹ ॥ ೧೦ ॥

ಸರ್ವಮಂಗಲಮಾಂಗಲ್ಯೇ ಸರ್ವಕಾಮಪ್ರದೇ ಶಿವೇ ।
ದೇಹಿ ಮೇ ವಾಂಛಿತಂ ದೇವಿ ನಮಸ್ತೇ ಶಂಕರಪ್ರಿಯೇ ॥ ೧೧ ॥

ಇತ್ಯುಕ್ತ್ವಾ ಚ ನಮಸ್ಕಾರಂ ಕೃತ್ವಾ ದತ್ವಾ ಚ ದಕ್ಷಿಣಾಂ ।
ನೈವೇದ್ಯಾನಿ ಚ ಸರ್ವಾಣಿ ಬ್ರಾಹ್ಮಣೇಭ್ಯೋ ಯಯುರ್ಗೃಹಂ ॥ ೧೨ ॥

॥ ಶ್ರೀ ನಾರಾಯಣ ಉವಾಚ ॥

ಸ್ತವರಾಜಂ ಶೃಣು ಮುನೇ ತುಷ್ಟುವುರ್ಯೇನ ಪಾರ್ವತೀಂ ।
ಭಕ್ತ್ಯಾ ಗೋಪಾಂಗನಾಃ ಸರ್ವಾಃ ಸರ್ವಾಭೀಷ್ಟಫಲಪ್ರದಾಂ ॥ ೧೩ ॥

---

೯. ಆ ಗೋಪಿಯರೆಲ್ಲರೂ ಉತ್ಸಾಹಭರಿತರಾಗಿ ಮಂತ್ರೋಚ್ಚಾರಣೆ ಮಾಡುತ್ತ, ಪುಷ್ಪಮಾಲೆಗಳನ್ನೂ ಧೂಪದೀಪ ನೈವೇದ್ಯಗಳನ್ನೂ ಭಕ್ತಿಯಿಂದ ದೇವಿಗೆ ಸಮರ್ಪಿಸಿದರು.

೧೦. ಮೇಲೆ ಹೇಳಿದ ಮೂಲಮಂತ್ರವನ್ನು ಹವಳದ ಜಪಸರದಿಂದ ಸಹಸ್ರಬಾರಿ ಜಪಿಸಿ, ದೇವಿಯನ್ನು ಸ್ತುತಿಸಿ, ಭೂಮಿಯ ಮೇಲೆ ಸಾಷ್ಟಾಂಗ ಪ್ರಣಾಮ ಮಾಡಿದರು

೧೧-೧೨. 'ಸಕಲಮಂಗಳಗಳಿಗೂ ಮಂಗಳಸ್ವರೂಪಳೇ, ಸಕಲರ ಕಾಮಿತಾರ್ಥವನ್ನು ನೀಡುವವಳೇ, ಶಂಕರಪ್ರಿಯಳೇ, ಎಲೌ ದೇವಿಯೇ ನಿನಗೆ ನಮಿಸುವೆನು. ನನ್ನ ಇಷ್ಟಾರ್ಥವನ್ನು ಕೈಗೂಡಿಸು' ಈ ರೀತಿ ಪ್ರಾರ್ಥಿಸಿಕೊಂಡು ನಮಸ್ಕಾರಮಾಡಿ ಬ್ರಾಹ್ಮಣರಿಗೆ ನೈವೇದ್ಯವನ್ನೂ ದಕ್ಷಿಣೆಯನ್ನೂ ಸಮರ್ಪಿಸಿ ತಮ್ಮ ತಮ್ಮ ಮಂದಿರಕ್ಕೆ ಹಿಂತಿರುಗಿದರು.

೧೩. ನಾರಾಯಣ :—ಎಲೈ ನಾರದಮುನಿಯೇ, ಆ ಗೋಪಾಂಗನೆಯರೆಲ್ಲರೂ ಸರ್ವಾಭೀಷ್ಟಫಲಪ್ರದಳಾದ ಪಾರ್ವತಿಯನ್ನು ಯಾವ ಸ್ತೋತ್ರದಿಂದ ಸ್ತುತಿಸಿದರೋ ಅದನ್ನು ಹೇಳುವೆನು, ಕೇಳು

ಜಗತ್ಯೇಕಾರ್ಣವೇ ಘೋರೇ ಚಂದ್ರಸೂರ್ಯವಿವರ್ಜಿತೇ ।
ಅಂಜನಾಕಾರತೋಯೇನ ಸಂಪ್ಲುತೇ ಚ ಚರಾಚರೇ ॥ ೧೪ ॥

ದತ್ತಂ ಪುರಾ ಬ್ರಹ್ಮಣೇ ಚ ಹರಿಣಾ ಜಲಶಾಯಿನಾ ।
ತಸ್ಮೈ ದತ್ವಾ ಸರ್ವಮಿದಂ ನಿದ್ರಾಂ ಭೇಜೇ ಜಗತ್ಪತಿಃ ॥ ೧೫ ॥

ನಾಭಿಪದ್ಮೇ ಜಗತ್ಸ್ರಷ್ಟಾ ಮಧುನಾ ಕೈಟಭೇನ ಚ ।
ಪೀಡಿತಃ ಪರಿತುಷ್ಟಾವ ಮೂಲಪ್ರಕೃತಿಮೀಶ್ವರೀಂ ॥ ೧೬ ॥

॥ ಬ್ರಹ್ಮೋವಾಚ ॥

ದುರ್ಗೇ ಶಿವೇಽಭಯೇ ಮಾಯೇ ನಾರಾಯಣಿ ಸನಾತನಿ ।
ಜಯೆಂ ಮೇ ಮಂಗಲಂ ದೇಹಿ ನಮಸ್ತೇ ಸರ್ವಮಂಗಲೇ ॥ ೧೭ ॥

ದೈತ್ಯನಾಶಾರ್ಥವಚನೋ ದಕಾರಃ ಪರಿಕೀರ್ತಿತಃ ।
ಉಕಾರೋ ವಿಘ್ನನಾಶಾರ್ಥವಾಚಕೋ ವೇದಸಂಮತಃ ॥ ೧೮ ॥

೧೪-೧೬. ಮಹಾಪ್ರಳಯದಲ್ಲಿ ಚಂದ್ರಸೂರ್ಯರೂ ಚರಾಚರಜಗತ್ತೂ ಕಾಡಿಗೆ ಬಣ್ಣದ ಭಯಂಕರವಾದ ನೀರಿನಲ್ಲಿ ಮುಳುಗಿ, ಜಗತ್ತೆಲ್ಲ ಅಗಾಧವಾದ ಒಂದೇ ಸಮುದ್ರವಾದಾಗ ಜಲಶಾಯಿಯಾದ ಶ್ರೀಹರಿಯು ತನ್ನ ನಾಭಿ ಕಮಲದಲ್ಲಿದ್ದ ಚತುರ್ಮುಖ ಬ್ರಹ್ಮನಿಗೆ ಈ ಸ್ತೋತ್ರವನ್ನುಪದೇಶಿಸಿ ತಾನು ನಿರ್ಲಿಪ್ತನಾಗಿ ನಿದ್ರೆಮಾಡುತ್ತಿದ್ದನು. ಆಗ ಮಧುಕೈಟಭರೆಂಬ ರಾಕ್ಷಸರಿಂದ ಪೀಡಿತನಾದ ಚತುರ್ಮುಖನು ವಿಷ್ಣುವಿನ ನಾಭಿಕಮಲದಲ್ಲೇ ಕುಳಿತು ಮೂಲಪ್ರಕೃತಿಯಾದ ಸರ್ವೇಶ್ವರಿಯನ್ನು ಮುಂದೆ ಹೇಳುವಂತೆ ಸ್ತುತಿಸಿದನು.

೧೭ ಬ್ರಹ್ಮ:— 'ದುರ್ಗೆ, ಶಿವೆ, ಅಭಯೆ, ಮಾಯೆ, ನಾರಾಯಣಿ, ಸನಾತನಿ, ಜಯೆ, ಸರ್ವಮಂಗಳೆ,' ನಿನಗೆ ನಮಿಸುವೆನು. ನನಗೆ ಮಂಗಳವನ್ನುಂಟುಮಾಡು.

೧೮–೧೯. 'ದುರ್ಗಾ' ಎಂಬ ಪದದಲ್ಲಿರುವ 'ದ'ಕಾರವು ದೈತ್ಯನಾಶವೆಂಬ ಅರ್ಥವನ್ನೂ 'ಉ'ಕಾರವು ವಿಘ್ನನಾಶವೆಂಬ ಅರ್ಥವನ್ನೂ, 'ರೇಫವು'

ರೇಫೋ ರೋಗಘ್ನವಚನೋ ಗಶ್ಚ ಪಾಪಘ್ನವಾಚಕಃ ।
ಭಯಶತ್ರುಘ್ನವಚನಶ್ಚಾಕಾರಃ ಪರಿಕೀರ್ತಿತಃ ॥ ೧೯ ॥

ಸ್ಮೃತ್ಯುಕ್ತಿಸ್ಮರಣಾದ್ಯಸ್ಯಾ ಏತೇ ನಶ್ಯಂತಿ ನಿಶ್ಚಿತಂ ।
ಅತೋ ದುರ್ಗಾ ಹರೇಃ ಶಕ್ತಿರ್ಹರಿಣಾ ಪರಿಕೀರ್ತಿತಾ ॥ ೨೦ ॥

ವಿಪತ್ತಿವಾಚಕೋ ದುರ್ಗಶ್ಚಾಕಾರೋ ನಾಶವಾಚಕಃ ।
ದುರ್ಗಂ ನಶ್ಯತಿ ಯಾ ನಿತ್ಯಂ ಸಾ ದುರ್ಗಾ ಪರಿಕೀರ್ತಿತಾ ॥ ೨೧ ॥

ದುರ್ಗೋ ದೈತ್ಯೇಂದ್ರವಚನೋಽಪ್ಯಾಕಾರೋ ನಾಶವಾಚಕಃ ।
ತಂ ನನಾಶ ಪುರಾ ತೇನ ಬುಧೈರ್ದುರ್ಗಾ ಪ್ರಕೀರ್ತಿತಾ ॥ ೨೨ ॥

ಶಶ್ಚ ಕಲ್ಯಾಣವಚನ ಇಕಾರೋತ್ಕೃಷ್ಟವಾಚಕಃ ।
ಸಮೂಹವಾಚಕಶ್ಚೈವ ವಾಕಾರೋ ದಾತೃವಾಚಕಃ ॥ ೨೩ ॥

ರೋಗನಾಶವೆಂಬ ಅರ್ಥವನ್ನೂ, ‘ಗ’ಕಾರವು ಭಯ ಮತ್ತು ಶತ್ರುಗಳ ನಾಶವೆಂಬ ಅರ್ಥವನ್ನೂ ವ್ಯಕ್ತಪಡಿಸುವುದೆಂದು ವೇದೋಕ್ತವಾಗಿದೆ.

೨೦. ಯಾವ ದೇವಿಯ ‘ದುರ್ಗಾ’ ಎಂಬ ನಾಮೋಚ್ಚಾರಣೆ ಮತ್ತು ಸ್ಮರಣೆಯಿಂದ ದೈತ್ಯಾದಿಗಳೂ ನಿಶ್ಚಿತವಾಗಿ ನಾಶವಾಗುವರು. ಆದ ಕಾರಣ ದುರ್ಗಿಯು ಹರಿಶಕ್ತಿಸ್ವರೂಪಿಣಿಯೆಂದು ಶ್ರೀಹರಿಯಿಂದ ಪರಿಕೀರ್ತಿತಳಾಗಿದ್ದಾಳೆ.

೨೧. ‘ದುರ್ಗ’ ಎಂಬುದು ವಿಪತ್ತೆಂಬ ಅರ್ಥವನ್ನೂ, ‘ಆ’ಕಾರವು ನಾಶವೆಂಬರ್ಥವನ್ನೂ ಕೊಡುವುದರಿಂದ ಯಾರು ನಿತ್ಯವೂ ವಿಪತ್ತನ್ನು ನಾಶಗೊಳಿಸುವಳೋ ಆ ದೇವಿಯು ‘ದುರ್ಗಾ’ ಎನಿಸಿಕೊಳ್ಳುವಳು.

೨೨. ‘ದುರ್ಗ’ ಎಂದರೆ ದೈತ್ಯೇಂದ್ರನೆಂದೂ ‘ಆ’ ಎಂದರೆ ನಾಶವೆಂದೂ ಅರ್ಥವಾಗುವುದರಿಂದ, ಪೂರ್ವದಲ್ಲಿ ಯಾರು ದೈತ್ಯೇಂದ್ರನನ್ನು (ಮಹಿಷಾಸುರನನ್ನು) ನಾಶಗೊಳಿಸಿದಳೋ ಆ ದೇವಿಯು ದುರ್ಗಾಯೆನಿಸಿಕೊಂಡಳು

೨೩. ‘ಶಿವಾ’ ಎಂಬ ಪದಕದಲ್ಲಿರುವ ‘ಶ್’ ಎಂಬುದು ಕಲ್ಯಾಣವೆಂಬ ಅರ್ಥವನ್ನೂ ‘ಇ’ ಎಂಬುದು ಉತ್ಕೃಷ್ಟವೆಂಬರ್ಥವನ್ನೂ ಮತ್ತು ಸಮೂಹವೆಂಬ ಅರ್ಥವನ್ನೂ ‘ವಾ’ಕಾರವು ದಾನಾರ್ಥವನ್ನೂ ಸೂಚಿಸುತ್ತದೆ.

ಶ್ರೇಯಃಸಂಘೋತ್ಕೃಷ್ಟದಾತ್ರೀ ಶಿವಾ ತೇನ ಪ್ರಕೀರ್ತಿತಾ ।
ಶಿವರಾಶಿರ್ಮೂರ್ತಿಮಯೀ ಶಿವಾ ತೇನ ಪ್ರಕೀರ್ತಿತಾ ॥ ೨೪ ॥

ಶಿವೋ ಹಿ ಮೋಕ್ಷವಚನಶ್ಚಾಕಾರೋ ದಾತೃವಾಚಕಃ ।
ಸ್ವಯಂ ನಿರ್ವಾಣದಾತ್ರೀ ಯಾ ಸಾ ಶಿವಾ ಪರಿಕೀರ್ತಿತಾ ॥ ೨೫ ॥

ಅಭಯೋ ಭಯನಾಶೋಕ್ತಶ್ಚಾಕಾರೋ ದಾತೃವಾಚಕಃ ।
ಪ್ರದದಾತ್ಯಭಯಂ ಸದ್ಯಃ ಸಾಭಯಾ ಪರಿಕೀರ್ತಿತಾ ॥ ೨೬ ॥

ರಾಜ್ಯಶ್ರೀರ್ವಚನೋ ಮಾಶ್ಚ ಯಾಶ್ಚ ಪ್ರಾಪಣವಾಚಕಃ ।
ತಾಂ ಪ್ರಾಪಯತಿ ಯಾ ಸದ್ಯಃ ಸಾ ಮಾಯಾ ಪರಿಕೀರ್ತಿತಾ ॥ ೨೭ ॥

ಮಾಶ್ಚ ಮೋಕ್ಷಾರ್ಥವಚನೋ ಯಾಶ್ಚ ಪ್ರಾಪಣವಾಚಕಃ ।
ತಾಂ ಪ್ರಾಪಯತಿ ಯಾ ನಿತ್ಯಂ ಸಾ ಮಾಯಾ ಪರಿಕೀರ್ತಿತಾ ॥ ೨೮ ॥

---

೨೪. ಆದುದರಿಂದ, ಉತ್ಕೃಷ್ಟವಾದ ಕಲ್ಯಾಣಪರಂಪರೆಗಳನ್ನು ಕೊಡುವವಳೇ 'ಶಿವಾ' ಎನಿಸಿಕೊಳ್ಳುವಳು ಅಥವಾ ಮೂರ್ತಿಮತ್ತಾದ ಮಂಗಳ (ಶಿವ)ಗಳ ರಾಶಿಯಂತಿರುವುದರಿಂದಲೇ 'ಶಿವಾ' ಯೆನಿಸಿಕೊಳ್ಳುವಳು.

೨೫. 'ಶಿವ' ಎಂಬುದು ಮೋಕ್ಷವೆಂಬರ್ಥವನ್ನೂ 'ಆ' ಎಂಬುದು ದಾನಾರ್ಥವನ್ನೂ ಕೊಡುವುದರಿಂದ, ಯಾರು ಸ್ವತಃ ಮೋಕ್ಷವನ್ನು ಕೊಡುವಳೋ ಆ ದೇವಿಯು 'ಶಿವಾ' ಎನ್ನಿಸಿಕೊಳ್ಳುವಳು.

೨೬. 'ಅಭಯ' ಎಂಬುದು ಭಯನಾಶವೆಂಬರ್ಥವನ್ನೂ, 'ಆ' ಎಂಬುದು ದಾನಾರ್ಥವನ್ನೂ ಕೊಡುವುದರಿಂದ ಭಕ್ತರಿಗೆ ಅಭಯದಾನಮಾಡುವ ದೇವಿಯು 'ಅಭಯಾ' ಎನ್ನಿಸಿಕೊಳ್ಳುವಳು.

೨೭. 'ಮಾ' ಎಂದರೆ ರಾಜ್ಯಸಂಪತ್ತೆಂದೂ, 'ಯಾ' ಎಂದರೆ ಒದಗಿಸಿ ಕೊಡುವುದೆಂದೂ ಅರ್ಥವಾಗುವುದರಿಂದ ಯಾವದೇವಿಯು ರಾಜ್ಯಸಂಪತ್ತನ್ನು ಕೊಡುವಳೋ ಅವಳು 'ಮಾಯಾ' ಎನಿಸಿಕೊಳ್ಳುವಳು.

೨೮. 'ಮಾ' ಎಂದರೆ ಮೋಕ್ಷವೆಂದೂ, 'ಯಾ' ಎಂದರೆ ಕೊಡುವುದೆಂದೂ ಅರ್ಥವಾಗುವುದರಿಂದ, ಮೋಕ್ಷವನ್ನು ಕೊಡುವ ದೇವಿಯೇ 'ಮಾಯಾ' ಎನಿಸಿಕೊಳ್ಳುವಳು.

ನಾರಾಯಣಾರ್ಧಾಂಗಭೂತಾ ತೇನ ತುಲ್ಯಾ ಚ ತೇಜಸಾ ।
ಸದಾ ತಸ್ಯ ಶರೀರಸ್ಥಾ ತೇನ ನಾರಾಯಣೀ ಸ್ಮೃತಾ ॥ ೨೯ ॥

ನಿರ್ಗುಣಸ್ಯ ಚ ನಿತ್ಯಸ್ಯ ವಾಚಕಶ್ಚ ಸನಾತನಃ ।
ಸದಾ ನಿತ್ಯಾ ನಿರ್ಗುಣಾ ಯಾ ಕೀರ್ತಿತಾ ಸಾ ಸನಾತನೀ ॥ ೩೦ ॥

ಜಯಃ ಕಲ್ಯಾಣವಚನೋ ಆಕಾರೋ ದಾ ತೃವಾಚಕಃ ।
ಜಯಂ ದದಾತಿ ಯಾ ನಿತ್ಯಂ ಸಾ ಜಯಾ ಪರಿಕೀರ್ತಿತಾ ॥ ೩೧ ॥

ಸರ್ವಮಂಗಲಶಬ್ದಶ್ಚ ಸಂಪೂರ್ಣೈಶ್ವರ್ಯವಾಚಕಃ ।
ಆಕಾರೋದಾತೃವಚನ ಸ್ತದ್ದಾತ್ರೀ ಸರ್ವಮಂಗಳಾ ॥ ೩೨ ॥

ನಾಮಾಷ್ಟಕಮಿದಂ ಸಾರಂ ನಾಮಾರ್ಥಸಹಸಂಯುತಂ ।
ನಾರಾಯಣೇನ ಯದ್ದತ್ತಂ ಬ್ರಹ್ಮಣೇ ನಾಭಿಪಂಕಜೇ ॥ ೩೩ ॥

---

೨೯. ನಾರಾಯಣನ ಅರ್ಧಾಂಗಿಯಾಗಿಯೂ, ತೇಜಸ್ಸಿನಲ್ಲಿ ಅವನಿಗೆ ಸಮಳಾಗಿಯೂ, ಸರ್ವದಾ ಅವನ ಶರೀರದಲ್ಲಿರುವ ದೇವಿಯೇ '<u>ನಾರಾಯಣೀ</u>' ಎನ್ನಿಸಿಕೊಳ್ಳುವಳು.

೩೦. 'ಸನಾತನ' ಎಂಬ ಪದವು ನಿತ್ಯ ಮತ್ತು ನಿರ್ಗುಣ ಎಂಬರ್ಥವನ್ನು ಕೊಡುವುದರಿಂದ ನಿತ್ಯಳೂ, ನಿರ್ಗುಣಳೂ ಆಗಿರುವ ದೇವಿಯೇ 'ಸನಾತನೀ' ಎಂದು ಪ್ರಖ್ಯಾತಳಾಗಿರುವಳು.

೩೧. 'ಜಯ' ಎಂದರೆ ಕಲ್ಯಾಣವೆಂದೂ 'ಆ' ಎಂದರೆ ಕೊಡುವುದೆಂದೂ ಅರ್ಥವಾಗುವುದರಿಂದ ಯಾವದೇವಿಯು ನಿತ್ಯವೂ ಕಲ್ಯಾಣವನ್ನು ಕೊಡುವಳೋ ಆ ದೇವಿಯು '<u>ಜಯಾ</u>' ಎನಿಸಿಕೊಳ್ಳುವಳು.

೩೨. 'ಸರ್ವಮಂಗಲ'ವೆಂಬ ಶಬ್ದವು ಸಂಪೂರ್ಣವಾದ ಐಶ್ವರ್ಯಾರ್ಥವನ್ನೂ, 'ಆ' ಎಂಬುದು ದಾನಾರ್ಥವನ್ನೂ ಕೊಡುವುದರಿಂದ ಪೂರ್ಣೈಶ್ವರ್ಯವನ್ನು ಕೊಡುವ ದೇವಿಯೇ 'ಸರ್ವಮಂಗಲಾ' ಎನಿಸಿಕೊಳ್ಳುವಳು.

೩೩. ಸಾರಭೂತವೂ, ಅರ್ಥಯುತವೂ ಆದ ಈ ಎಂಟು ದಿವ್ಯನಾಮಗಳನ್ನು ನಾರಾಯಣನು ತನ್ನ ನಾಭಿಕಮಲದಲ್ಲಿದ್ದ ಬ್ರಹ್ಮನಿಗೆ ಉಪದೇಶಿಸಿದನು.

ತಸ್ಮೈ ದತ್ವಾ ನಿದ್ರಿತಶ್ಚ ಬಭೂವ ಜಗತಾಂ ಪತಿಃ ।
ಮಧುಕೈಟಭೌ ದುರ್ದಾಂತೌ ಬ್ರಹ್ಮಾಣಂ ಹಂತುಮುದ್ಯತೌ ॥ ೩೪ ॥

ಸ್ತೋತ್ರೇಣಾನೇನ ಸ ಬ್ರಹ್ಮಾ ಸ್ತುತಿಂ ನತ್ವಾ ಚಕಾರ ಹ ।
ಸಾಕ್ಷಾತ್ಸ್ತುತಾ ತದಾ ದುರ್ಗಾ ಬ್ರಹ್ಮಣೇ ಕವಚಂ ದದೌ ॥ ೩೫ ॥

ಶ್ರೀಕೃಷ್ಣ ಕವಚಂ ದಿವ್ಯಂ ಸರ್ವರಕ್ಷಣನಾಮಕಂ ।
ದತ್ವಾ ತಸ್ಮೈ ಮಹಾಮಾಯಾ ಸಾಂತರ್ಧಾನಂ ಚಕಾರ ಹ ॥ ೩೬ ॥

ಸ್ತೋತ್ರಂ ಕುರ್ವಂತಿ ನಿದ್ರಾಂ ಚ ಸಂರಕ್ಷ್ಯ ಕವಚೇನ ವೈ ।
ನಿದ್ರಾನುಗ್ರಹತಃ ಸದ್ಯಃ ಸ್ತೋತ್ರಸ್ಯೈವ ಪ್ರಭಾವತಃ ॥ ೩೭ ॥

ತತ್ರಾಜಗಾಮ ಭಗವಾನ್ವೃಷರೂಪೀ ಜನಾರ್ದನಃ ।
ಶಕ್ತ್ಯಾ ಚ ದುರ್ಗಯಾ ಸಾರ್ಧಂ ಶಂಕರಸ್ಯ ಜಯಾಯ ಚ ॥ ೩೮ ॥

---

೩೪. ಉಪದೇಶಿಸಿದನಂತರ ಜಗತ್ಪತಿಯಾದ ನಾರಾಯಣನು ನಿದ್ರಾ ಪರವಶನಾದನು. ಆಗ ದುಷ್ಟರಾದ ಮಧುಕೈಟಭರು ಬ್ರಹ್ಮನನ್ನು ಕೊಲ್ಲಲುದ್ಯುಕ್ತ ರಾದರು.

೩೫. ಆಗ ಬ್ರಹ್ಮನು ಮೇಲೆ ಹೇಳಿದ ಸ್ತೋತ್ರದಿಂದ ಮಾಯೆಯನ್ನು ಸ್ತುತಿಸಿದನು. ಇಂತು ಸ್ತುತಿಸಲ್ಪಟ್ಟ ದುರ್ಗಾದೇವಿಯು ಬ್ರಹ್ಮನಿಗೆ ದಿವ್ಯಕವಚವನ್ನು ಅನುಗ್ರಹಿಸಿದಳು.

೩೬. ಸರ್ವರಕ್ಷಣ 'ವೆಂಬ ಶ್ರೀಕೃಷ್ಣನ ದಿವ್ಯಕವಚವನ್ನು ಬ್ರಹ್ಮನಿಗೆ ಅನುಗ್ರಹಿಸಿ ಮಹಾಮಾಯೆಯು ಅಂತರ್ಧಾನಹೊಂದಿದಳು.

೩೭-೩೮. ಬ್ರಹ್ಮನು ಆ ಕವಚದಿಂದ ಆತ್ಮಸಂರಕ್ಷಣೆ ಮಾಡಿಕೊಂಡು ನಿದ್ರಾದೇವಿಯನ್ನು ಸ್ತುತಿಸಲಾಗಿ, ಆ ಸ್ತೋತ್ರದ ಪ್ರಭಾವದಿಂದಲೂ, ನಿದ್ರಾದೇವಿಯ ಅನುಗ್ರಹದಿಂದಲೂ ಷಡ್ಗುಣೈಶ್ವರ್ಯಸಂಪನ್ನನಾದ ಜನಾರ್ದನನು ವೃಷಭಾಕಾರ ವನ್ನು ಧರಿಸಿ, ಶಕ್ತಿಸ್ವರೂಪಿಣಿಯಾದ ದುರ್ಗಿಯೊಡನೆಯೂ, ಶಂಕರನೊಡನೆಯೂ ಆ ರಾಕ್ಷಸರ ಜಯಕ್ಕಾಗಿ ಅಲ್ಲಿಗೆ ಬಂದನು.

ಸರಥಂ ಶಂಕರಂ ಮೂರ್ಧ್ನಿ ಕೃತ್ವಾ ಚ ನಿರ್ಭಯಂ ದದೌ ।
ಅತ್ಯೂರ್ಧ್ವಂ ಪ್ರಾಪಯಾಮಾಸ ಜಯಾ ತಸ್ಮೈ ಜಯಂ ದದೌ || ೩೯ ||

ಸ್ತೋತ್ರಸ್ಯೈವ ಪ್ರಭಾವೇಣ ಸಂಪ್ರಾಪ್ಯ ಕವಚಂ ವಿಧಿಃ ।
ವರಂ ಚ ಕವಚಂ ಪ್ರಾಪ್ಯ ನಿರ್ಭಯಂ ಪ್ರಾಪ ನಿಶ್ಚಿತಂ || ೪೦ ||

ಬ್ರಹ್ಮಾ ದದೌ ಮಹೇಶಾಯ ಸ್ತೋತ್ರಂ ಚ ಕವಚಂ ವರಂ ।
ತ್ರಿಪುರಸ್ಯ ಚ ಸಂಗ್ರಾಮೇ ಸರಥೇ ಪತಿತೇ ಹರೌ || ೪೧ ||

ಬ್ರಹ್ಮಾಸ್ತ್ರಂ ಚ ಗೃಹೀತ್ವಾ ಚ ಸನಿದ್ರಂ ಶ್ರೀಹರಿಂ ಸ್ಮರನ್ ।
ಸ್ತೋತ್ರಂ ಚ ಕವಚಂ ಪ್ರಾಪ್ಯ ಜಘಾನ ತ್ರಿಪುರಂ ಹರಃ || ೪೨ ||

---

೩೯. ಶಂಕರಪಾರ್ವತಿಯರನ್ನು ತಲೆಯ ಮೇಲೆ ಧರಿಸಿದ್ದ ಆ ವೃಷಭನು ಬ್ರಹ್ಮನಿಗೆ ಅಭಯದಾನಮಾಡಿ ಬಹಳ ಎತ್ತರವಾದ ಪ್ರದೇಶಕ್ಕೆ ಒಯ್ದನು. ಆಗ ಜಯಸ್ವರೂಪಿಣಿಯಾದ ದುರ್ಗೆಯು ಅವನಿಗೆ ಜಯವನ್ನು ಅನುಗ್ರಹಿಸಿದಳು.

೪೦. ಬ್ರಹ್ಮನು ದುರ್ಗಾಸ್ತೋತ್ರದ ಪ್ರಭಾವದಿಂದ 'ಸರ್ವರಕ್ಷಣ'ವೆಂಬ ಶ್ರೀಹರಿಯ ಕವಚವನ್ನು ಪಡೆದು, ಆ ಶ್ರೇಷ್ಠವಾದ ಕವಚದ ದೆಸೆಯಿಂದ ನಿಶ್ಚಯವಾಗಿಯೂ ನಿರ್ಭಯನಾದನು.

೪೧. ಅನಂತರ ತ್ರಿಪುರಾಸುರನೊಡನೆ ಯುದ್ಧಮಾಡುತ್ತಿದ್ದಾಗ ರಥಸಹಿತ ಕೆಳಕ್ಕೆ ಬಿದ್ದ ಮಹೇಶ್ವರನಿಗೆ ಈ ಸ್ತೋತ್ರವನ್ನೂ, ಕವಚವನ್ನೂ ಬ್ರಹ್ಮನು ಅನುಗ್ರಹಿಸಿದನು.

೪೨. ಆಗ ಮಹೇಶ್ವರನು ಶ್ರೀಹರಿಯನ್ನೂ ನಿದ್ರಾದೇವಿಯನ್ನೂ ಸ್ಮರಿಸುತ್ತ, ದುರ್ಗಾಸ್ತೋತ್ರವನ್ನು ಪಠಿಸಿ, ಶ್ರೀಹರಿಯ ಕವಚವನ್ನು ಪಡೆದು, ಬ್ರಹ್ಮಾಸ್ತ್ರವನ್ನು ತೆಗೆದುಕೊಂಡು ತ್ರಿಪುರಾಸುರನನ್ನು ಸಂಹರಿಸಿದನು.

ಸ್ತೋತ್ರೇಣಾನೇನ ತಾಂ ದುರ್ಗಾಂ ಕೃತ್ವಾ ಗೋಪಾಲಿಕಾಃ ಸ್ತುತಿಂ ।
ಲೇಭಿರೇ ಶ್ರೀಹರಿಂ ಕಾಂತಂ ಸ್ತೋತ್ರಸ್ಯಾಸ್ಯ ಪ್ರಭಾವತಃ ॥ ೪೩ ॥

ಗೋಪಕನ್ಯಾಕೃತಂ ಸ್ತೋತ್ರಂ ಸರ್ವಮಂಗಲನಾಮಕಂ ।
ವಾಂಛಿತಾರ್ಥಪ್ರದಂ ಸದ್ಯಃ ಸರ್ವವಿಘ್ನವಿನಾಶನಂ ॥ ೪೪ ॥

ತ್ರಿಸಂಧ್ಯಂ ಯಃ ಪಠೇನ್ನಿತ್ಯಂ ಭಕ್ತಿಯುಕ್ತಶ್ಚ ಮಾನವಃ ।
ಶೈವೋ ವಾ ವೈಷ್ಣವೋ ವಾಽಪಿ ಶಾಕ್ತೋ ದುರ್ಗಾತ್ಪ್ರಮುಚ್ಯತೇ ॥ ೪೫ ॥

ರಾಜದ್ವಾರೇ ಶ್ಮಶಾನೇ ಚ ದಾವಾಗ್ನೌ ಪ್ರಾಣಸಂಕಟೇ ।
ಹಿಂಸ್ರಜಂತುಭಯಗ್ರಸ್ತೋ ಮಗ್ನಃ ಪೋತೇ ಮಹಾರ್ಣವೇ ॥ ೪೬ ॥

ಶತ್ರುಗ್ರಸ್ತೇ ಚ ಸಂಗ್ರಾಮೇ ಕಾರಾಗಾರೇ ವಿಪದ್ಗತೇ ।
ಗುರುಶಾಪೇ ಬ್ರಹ್ಮಶಾಪೇ ಬಂಧುಭೇದೇ ಚ ದುಸ್ತರೇ ॥ ೪೭ ॥

---

೪೩. ಆ ಗೋಪಾಲಿಕೆಯರು ಮೇಲೆ ಹೇಳಿದ ಸ್ತೋತ್ರದಿಂದ ದುರ್ಗಾದೇವಿಯನ್ನು ಸ್ತುತಿಸಿ. ಆ ಸ್ತೋತ್ರದ ಮಹಿಮೆಯಿಂದ ಶ್ರೀಹರಿಯನ್ನು ಕಾಂತನನ್ನಾಗಿ ಪಡೆದರು.

೪೪–೪೫. ಗೋಪಕನ್ಯೆಯರು ಮಾಡಿದ ಇಷ್ಟಾರ್ಥದಾಯಕವೂ, ಸರ್ವವಿಘ್ನನಾಶಕವೂ ಆದ 'ಸರ್ವಮಂಗಲ' ವೆಂಬ ಈ ಸ್ತೋತ್ರವನ್ನು ನಿತ್ಯವೂ ಭಕ್ತಿಪೂರ್ವಕವಾಗಿ ತ್ರಿಸಂಧ್ಯೆಯಲ್ಲೂ ಪಠಿಸುವ ಮಾನವನು ಶೈವನಾಗಲೀ, ವೈಷ್ಣವನಾಗಲೀ, ಶಾಕ್ತನಾಗಲೀ ಸಂಕಟದಿಂದ ಮುಕ್ತನಾಗುವನು.

೪೬. ರಾಜದ್ವಾರದಲ್ಲಾಗಲೀ, ಸ್ಮಶಾನದಲ್ಲಾಗಲೀ, ದಾವಾಗ್ನಿಗೆ ಸಿಲುಕಿ ಪ್ರಾಣಸಂಕಟಕ್ಕೊಳಗಾದರಾಗಲೀ, ದುಷ್ಟಪ್ರಾಣಿಗಳ ಭಯಕ್ಕೆ ಸಿಲುಕಿದಾಗಾಗಲೀ, ದೊಡ್ಡ ಸಮುದ್ರದಲ್ಲಿ ಹಡಗಿನಲ್ಲಿ ಹೋಗುವಾಗ ಮುಳುಗಿದಾಗಾಗಲೀ ಈ ಸ್ತೋತ್ರವನ್ನು ಸ್ಮರಿಸಿಕೊಂಡ ಮಾತ್ರದಿಂದ ಮುಕ್ತರಾಗಿ ನಿರ್ಭಯರಾಗುವರು.

೪೭. ಶತ್ರುಗಳಿಗೆ ಸಿಲುಕಿದಾಗಲೂ, ಯುದ್ಧರಂಗದಲ್ಲೂ, ಕಾರಾಗೃಹದಲ್ಲಿರುವಾಗಲೂ, ವಿಪತ್ತಿಗೆ ಸಿಲುಕಿದಾಗಲೂ, ಗುರುಶಾಪ ಮತ್ತು ಬ್ರಹ್ಮಶಾಪಕ್ಕೆ ಒಳಗಾದಾಗಲೂ, ಬಂಧುವಿರಹಕಾಲದಲ್ಲೂ ಈ ಸ್ತೋತ್ರವನ್ನು ಸ್ಮರಿಸಿಕೊಂಡಮಾತ್ರಕ್ಕೆ ಮುಕ್ತರಾಗುವರು.

ಸ್ಥಾನಭ್ರಷ್ಟೇ ಧನಭ್ರಷ್ಟೇ ಜಾತಿಭ್ರಷ್ಟೇ ಶುಚಾನ್ವಿತೇ ।
ಪತಿಭೇದೇ ಪುತ್ರಭೇದೇ ಖಲಸರ್ಪವಿಷಾನ್ವಿತೇ ॥ ೪೮ ॥

ಸ್ತೋತ್ರಸ್ಮರಣಮಾತ್ರೇಣ ಸದ್ಯೋ ಮುಚ್ಯೇತ ನಿರ್ಭಯಃ ।
ವಾಂಛಿತಂ ಲಭತೇ ಸದ್ಯಃ ಸರ್ವೈಶ್ವರ್ಯಮನುತ್ತಮಂ ॥ ೪೯ ॥

ಇಹ ಲೋಕೇ ಹರೇರ್ಭಕ್ತಿಂ ದೃಢಾಂ ಚ ಸತತಂ ಸ್ಮೃತಿಂ ।
ಅಂತೇ ದಾಸ್ಯಂ ಚ ಲಭತೇ ಪಾರ್ವತ್ಯಾಶ್ಚ ಪ್ರಸಾದತಃ ॥ ೫೦ ॥

ಇತಿ ಶ್ರೀ ಬ್ರಹ್ಮವೈವರ್ತೇ ಗೋಪಕನ್ಯಾಕೃತಂ
ಸರ್ವಮಂಗಲಾಸ್ತೋತ್ರಂ

ಅನೇನ ಸ್ತವರಾಜೇನ ತುಷ್ಟುವುರ್ನಿತ್ಯಮೀಶ್ವರೀಂ ।
ಪ್ರಣೇಮುಃ ಪರಯಾ ಭಕ್ತ್ಯಾ ಯಾವನ್ಮಾಸಂ ವ್ರಜಾಂಗನಾಃ ॥ ೫೧ ॥

೪೮-೪೯. ಸ್ಥಾನಭ್ರಷ್ಟರಾದಾಗಲೂ, ಧನವನ್ನು ಕಳೆದುಕೊಂಡಾಗಲೂ, ಜಾತಿಭ್ರಷ್ಟರಾದಾಗಲೂ, ದುಃಖಿತರಾದಾಗಲೂ, ಸ್ತ್ರೀಯರು ಪತಿಪುತ್ರವಿರಹದಿಂದಿರುವಾಗಲೂ, ದುಷ್ಟಸರ್ಪಗಳ ವಿಷಕ್ಕೆ ಸಿಲುಕಿದಾಗಲೂ ಈ ಸ್ತೋತ್ರವನ್ನು ಸ್ಮರಿಸಿಕೊಂಡ ಮಾತ್ರದಿಂದ ಭಯದಿಂದ ಮುಕ್ತರಾಗುವರಲ್ಲದೆ, ತಮ್ಮ ಇಷ್ಟಾರ್ಥವನ್ನೂ ಸಕಲೈಶ್ವರ್ಯವನ್ನೂ ಪಡೆಯುವುದರಲ್ಲಿ ಸಂಶಯವಿಲ್ಲ.

೫೦. ಪಾರ್ವತೀದೇವಿಯ ಅನುಗ್ರಹದಿಂದ ಇಹಲೋಕದಲ್ಲಿರುವವರೆಗೆ. ಶ್ರೀಹರಿಯಲ್ಲಿ ದೃಢವಾದ ಭಕ್ತಿಯನ್ನೂ, ಅಂತ್ಯಕಾಲದಲ್ಲಿ ಶ್ರೀಹರಿಯ ದಾಸ್ಯವನ್ನೂ ಪಡೆಯುವುದರಲ್ಲಿ ಸಂದೇಹವಿಲ್ಲ.

ಇಲ್ಲಿಗೆ ಬ್ರಹ್ಮವೈವರ್ತಮಹಾಪುರಾಣದಲ್ಲಿ ಗೋಪಕನ್ಯೆಯರು
ಮಾಡಿದ ಸರ್ವಮಂಗಲಾಸ್ತೋತ್ರವು ಮುಗಿದುದು

೫೧. ವ್ರಜಾಂಗನೆಯರೆಲ್ಲರೂ ಒಂದು ತಿಂಗಳಕಾಲ ದುರ್ಗಾದೇವಿಯನ್ನು ಮೇಲಿನ ಸ್ತೋತ್ರದಿಂದ ಪ್ರತಿದಿನವೂ ಸ್ತುತಿಸಿ ಪರಮಭಕ್ತಿಯಿಂದ ವಂದಿಸುತ್ತಿದ್ದರು

ಏವಂ ಪೂರ್ಣೇ ಚ ಮಾಸೇ ಚ ಸಮಾಪ್ತಿದಿವಸೇ ತಥಾ ।
ಸ್ನಾತುಂ ಪ್ರಜಗ್ಮುರ್ಗೋಪ್ಯಶ್ಚ ವಸ್ತ್ರಾಣ್ಯಾದಾಯ ತತ್ತಟೇ ॥ ೫೨ ॥

ನಾನಾವಿಧಾನಿ ದ್ರವ್ಯಾಣಿ ರತ್ನಮಾಲ್ಯಾನಿ ನಾರದ ।
ಪೀತಲೋಹಿತಶುಕ್ಲಾನಿ ಚಾರೂಣಿ ಮಿಶ್ರಿತಾನಿ ಚ ॥ ೫೩ ॥

ತೀರಾವೃತಾನ್ಯಸಂಖ್ಯಾನಿ ತೈಶ್ಚ ತೀರಂ ಸುಶೋಭನಂ ।
ಚಂದನಾಗುರುಕಸ್ತೂರೀ ವಾಯುನಾ ಸುರಭೀಕೃತಂ ॥ ೫೪ ॥

ನೈವೇದ್ಯೈಶ್ಚ ಬಹುವಿಧೈಃ ಕಾಲದೇಶೋದ್ಭವೈಃ ಫಲೈಃ ।
ಧೂಪೈಃ ಪ್ರದೀಪೈಃ ಸಿಂದೂರೈಃ ಕುಂಕುಮೈಶ್ಚ ವಿರಾಜಿತಂ ॥ ೫೫ ॥

ಜಲೇ ಕ್ರೀಡೋನ್ಮುಖಾ ಗೋಪ್ಯೋ ಬಭೂವುಃ ಕೌತುಕೇನ ಚ ।
ನಗ್ನಾಃ ಕ್ರೀಡಾರಸಾಸಕ್ತಾಃ ಶ್ರೀಕೃಷ್ಣಾರ್ಪಿತಮಾನಸಾಃ ॥ ೫೬ ॥

---

೫೨. ಈ ರೀತಿ ಒಂದುತಿಂಗಳು ಪೂರ್ಣವಾದನಂತರ ಸಮಾಪ್ತಿಯ ದಿವಸ ಆ ಗೋಪಿಯರೆಲ್ಲರೂ ತಮ್ಮ ವಸ್ತ್ರಗಳನ್ನು ತೆಗೆದುಕೊಂಡು ಸ್ನಾನಮಾಡಲು ಯಮುನೆಯತೀರಕ್ಕೆ ಹೋದರು.

೫೩. ಎಲೈ ನಾರದನೇ, ಆ ಗೋಪಿಯರು ತಮ್ಮ ಜತೆಯಲ್ಲಿ ನಾನಾವಿಧ ಪೂಜಾದ್ರವ್ಯಗಳನ್ನೂ, ಹಳದಿ, ಕೆಂಪು ಮತ್ತು ಬಿಳುಪು ವರ್ಣಗಳಿಂದ ಕೂಡಿದ ರತ್ನಮಾಲೆಗಳನ್ನೂ ತೆಗೆದುಕೊಂಡುಹೋದರು.

೫೪. ಯಮುನೆಯ ತೀರವು ಆ ಪೂಜಾದ್ರವ್ಯಗಳಿಂದ ಶೋಭಿಸುತ್ತಿದ್ದುದಲ್ಲದೆ ಚಂದನ, ಅಗುರು ಮತ್ತು ಕಸ್ತೂರಿ ಮುಂತಾದ ಸುಗಂಧದ್ರವ್ಯಗಳಿಂದ ಸುವಾಸಿತವಾಗಿದ್ದಿತು.

೫೫. ಬಹುವಿಧ ನೈವೇದ್ಯಗಳಿಂದಲೂ, ಕಾಲದೇಶಾನುಗುಣವಾದ ಫಲಗಳಿಂದಲೂ, ಧೂಪದೀಪಗಳಿಂದಲೂ, ಕುಂಕುಮ, ಚಂದ್ರ ಮುಂತಾದ ಮಂಗಳ ದ್ರವ್ಯಗಳಿಂದಲೂ ಯಮುನೆಯ ತೀರವು ವಿರಾಜಿಸುತ್ತಿತ್ತು.

೫೬. ಅತ್ತ ಗೋಪಿಯರೆಲ್ಲರೂ ಕುತೂಹಲದಿಂದ ಕೂಡಿ, ಶ್ರೀಕೃಷ್ಣನನ್ನು ಮನಸ್ಸಿನಲ್ಲೇ ಧ್ಯಾನಿಸುತ್ತ, ವಸ್ತ್ರರಹಿತರಾಗಿ ಯಮುನೆಯಲ್ಲಿ ಜಲಕ್ರೀಡೆ ಮಾಡುತ್ತಿದ್ದರು.

ದೃಷ್ಟ್ವಾ ಕೃಷ್ಣಶ್ಚ ವಸ್ತ್ರಾಣಿ ದ್ರವ್ಯಾಣಿ ವಿವಿಧಾನಿ ಚ ।
ವಾಸಾಂಸ್ಯಾದಾಯ ವಸ್ತೂನಿ ಚಖಾದ ಶಿಶುಭಿಃ ಸಹ ॥ ೫೭ ॥

ಗತ್ವಾ ದೂರಂ ಚ ಗೋಪಾಲಾಸ್ತಸ್ಥುಃ ಸರ್ವೇ ಮುದಾನ್ವಿತಾಃ ।
ವಸ್ತ್ರಾಣಿ ಪುಂಜೀಕೃತ್ಯಾಽಽದಾವೂಹುಃ ಸ್ಕಂಧೇಽತಿಲೋಲುಪಾಃ ॥ ೫೮ ॥

ಶ್ರೀದಾಮಾ ಚ ಸುದಾಮಾ ಚ ವಸುದಾಮಾ ತಥೈವ ಚ ।
ಸುಬಲಶ್ಚ ಸುಪಾರ್ಶ್ವಶ್ಚ ಶುಭಾಂಗಃ ಸುಂದರಸ್ತಥಾ ॥ ೫೯ ॥

ಚಂದ್ರಭಾನೋ ವೀರಭಾನಃ ಸೂರ್ಯಭಾನಸ್ತಥೈವ ಚ ।
ವಸುಭಾನೋ ರತ್ನಭಾನೋ ಗೋಪಾಲಾ ದ್ವಾದಶ ಸ್ಮೃತಾಃ ॥ ೬೦ ॥

ಶ್ರೀಕೃಷ್ಣೋ ಬಲದೇವಶ್ಚ ಪ್ರಧಾನಾಶ್ಚ ಚತುರ್ದಶ ।
ಗೋಪಾ ಹರೇರ್ವಯಸ್ಯಾಶ್ಚ ಕೋಟಿಶಃ ಕೋಟಿಶೋ ಮುನೇ ॥ ೬೧ ॥

---

೫೭. ಶ್ರೀಕೃಷ್ಣನಾದರೋ ಯಮುನೆಯ ತೀರದಲ್ಲಿದ್ದ ಗೋಪಿಯರ ವಸ್ತ್ರಗಳನ್ನೂ, ವಿವಿಧ ಪೂಜಾದ್ರವ್ಯಗಳನ್ನೂ ನೋಡಿ, ಆ ವಸ್ತ್ರಗಳನ್ನೆಲ್ಲ ಅಪಹರಿಸಿದ್ದಲ್ಲದೆ ನೈವೇದ್ಯಸಾಮಗ್ರಿಗಳನ್ನೆಲ್ಲ ಗೋಪಬಾಲಕರೊಡನೆ ತಿಂದುಬಿಟ್ಟನು.

೫೮. ಚಂಚಲಸ್ವಭಾವದವರಾದ ಆ ಗೋಪಬಾಲಕರೆಲ್ಲರೂ ಗೋಪಿಯರ ವಸ್ತ್ರಗಳನ್ನೆಲ್ಲ ಮೂಟೆಕಟ್ಟಿ ಹೆಗಲಮೇಲಿರಿಸಿಕೊಂಡು ಬಹಳದೂರ ಹೋಗಿ ನಗುನಗುತ್ತಾ ನಿಂತುಕೊಂಡರು.

೫೯. ಅವರಲ್ಲಿ ಶ್ರೀದಾಮ, ಸುದಾಮ, ವಸುದಾಮ, ಸುಬಲ, ಸುಪಾರ್ಶ್ವ, ಶುಭಾಂಗ ಮತ್ತು ಸುಂದರನೆಂಬ ನಾಮಧೇಯುಳ್ಳ ಗೋಪಾಲರಿದ್ದರು.

೬೦. ಚಂದ್ರಭಾನ, ವೀರಭಾನ, ಸೂರ್ಯಭಾನ, ವಸುಭಾನ ಮತ್ತು ರತ್ನಭಾನರೂ ಸೇರಿ ದ್ವಾದಶಗೋಪಾಲರು ಶ್ರೀಕೃಷ್ಣನ ಆಪ್ತಗೆಳೆಯರಾಗಿದ್ದರು.

೬೧. ಶ್ರೀಕೃಷ್ಣ ಮತ್ತು ಬಲರಾಮನೂ ಸೇರಿ ಹದಿನಾಲ್ಕು ಜನ ಪ್ರಧಾನ ಗೋಪರು ಅಲ್ಲಿದ್ದುದಲ್ಲದೆ ಶ್ರೀಹರಿಯ ಸಮಾನವಯಸ್ಕರಾದ ಗೋಪರು ಕೋಟಿ ಸಂಖ್ಯಾಕವಾಗಿ ಅಲ್ಲಿದ್ದರು.

ವಸ್ತ್ರಾಣ್ಯಾದಾಯ ತೇ ಸರ್ವೇ ತಸ್ಥುರೇಕತ್ರ ದೂರತಃ ।
ಶತಶಃ ಪುಂಜಿಕಾಸ್ತತ್ರ ಸ್ಥಾಪಯಾಮಾಸುರುನ್ಮುಖಾಃ ॥ ೬೨ ॥

ಕಿಂಚಿದ್ವಸ್ತ್ರಂ ಸಮಾದಾಯ ಕೃತ್ವಾ ಚ ಪುಂಜಿಕಾಂ ಮುದಾ ।
ಸಮಾರುಹ್ಯ ಕದಂಬಾಗ್ರಮುವಾಚ ಗೋಪಿಕಾ ಹರಿಃ ॥ ೬೩ ॥

॥ ಶ್ರೀಕೃಷ್ಣ ಉವಾಚ ॥

ಭೋ ಭೋ ಗೋಪಾಲಿಕಾಃ ಸರ್ವಾ ವಿನಷ್ಟಾ ವ್ರತಕರ್ಮಣಿ ।
ಕೃತ್ವಾ ವಿಧಾನಂ ಮದ್ವಾಕ್ಯಂ ಶ್ರುತ್ವಾ ಕ್ರೀಡತ ಮನ್ಮಥಾತ್ ॥ ೬೪ ॥

ಸಂಕಲ್ಪಿತೇ ವ್ರತಾರ್ಹೇ ಚ ಮಾಸೇ ಮಂಗಲಕರ್ಮಣಿ ।
ಯೂಯಂ ನಗ್ನಾಃ ಕಥಂ ತೋಯೇ ವ್ರತಾಂಗಹಾನಿಕಾರಿಕಾಃ ॥ ೬೫ ॥

---

೬೨. ಅವರುಗಳೆಲ್ಲರೂ ವಸ್ತ್ರಗಳನ್ನು ತೆಗೆದುಕೊಂಡು ದೂರಹೋಗಿ ನೂರಾರು ಮೂಟೆಗಳನ್ನಾಗಿ ಕಟ್ಟಿ ಅವುಗಳನ್ನು ಎತ್ತರವಾದ ಸ್ಥಳದಲ್ಲಿರಿಸಿ ಕತ್ತೆತ್ತಿಕೊಂಡು ಏನೂ ಅರಿಯದವರಂತೆ ನಿಂತುಕೊಂಡರು.

೬೩. ಶ್ರೀಕೃಷ್ಣನೂ ಕೂಡ ಕೆಲವು ವಸ್ತ್ರಗಳನ್ನು ತೆಗದುಕೊಂಡು ಮೂಟೆ ಕಟ್ಟಿ ಕದಂಬವೃಕ್ಷದ ತುದಿಯನ್ನೇರಿ ಸಂತೋಷದಿಂದ ಗೋಪಿಯರನ್ನು ಕುರಿತು ಇಂತೆಂದನು.

೬೪. ಶ್ರೀಕೃಷ್ಣ :—ಎಲೌ ಗೋಪಿಯರೇ, ನಿಮ್ಮ ವ್ರತವೆಲ್ಲವೂ ಭಂಗ ವಾಯಿತು. ನಾನು ಹೇಳುವ ಮಾತನ್ನು ಸಾವಧಾನದಿಂದ ಕೇಳಿ, ನೀವೆಲ್ಲರೂ ಮನ್ಮಥಕ್ರೀಡೆಗೆ ಸಿದ್ಧರಾಗಿ.

೬೫, ವ್ರತಮಾಡಲು ಯೋಗ್ಯವಾದ ಈ ಮಾರ್ಗಶಿರಮಾಸದಲ್ಲಿ ನೀವು ಮಂಗಳಕರವಾದ ವ್ರತವನ್ನಾಚರಿಸುವುದಾಗಿ ಸಂಕಲ್ಪಿಸಿ ಈಗ ನೀರಿನಲ್ಲಿ ವಸ್ತ್ರ ರಹಿತರಾಗಿ ಸ್ನಾನಮಾಡುತ್ತ ವ್ರತಕ್ಕೆ ಹಾನಿತಂದಿರುವಿರಲ್ಲ? ('ನಾಪ್ಸು ಮೂತ್ರ ಪುರೀಷಂ ಕುರ್ಯಾತ್, ನ ನಿಷ್ಠೀವೇತ್, ನವಿವಸನಸ್ನಾಯಾತ್' ಎಂದು ವೇದೋಕ್ತವಾಗಿದೆ).

ಪರಿಧೇಯಾನಿ ವಾಸಾಂಸಿ ಪುಷ್ಪಮಾಲ್ಯಾನಿ ಯಾನಿ ಚ ।
ವ್ರತಾರ್ಹಾಣಿ ಚ ವಸ್ತೂನಿ ಕೇನ ನೀತಾನಿ ವೋಽಧುನಾ ॥ ೬೬ ॥

ವ್ರತೇ ತು ನಗ್ನಾ ಯಾ ಸ್ನಾತಿ ತಾಂ ರುಷ್ಟೋ ವರುಣಃ ಸ್ವಯಂ ।
ವರುಣಾನುಚರಾಶ್ಚಕ್ರುರ್ವಾಸೋ ವಸ್ತ್ವಪನಿರ್ಹೃತಿಂ ॥ ೬೭ ॥

ಕಥಂ ಯಾಸ್ಯಥ ನಗ್ನಾಶ್ಚ ವ್ರತಸ್ಯ ಕಿಂ ಭವಿಷ್ಯತಿ ।
ವ್ರತಾರಾಧ್ಯಾ ಕಥಂ ಸಾತ್ರ ವಸ್ತೂನಿ ಕಿಂ ನ ರಕ್ಷತಿ ॥ ೬೮ ॥

ಚಿಂತಾಂ ಕುರುತ ತಾಂ ಪೂಜ್ಯಾಂ ತುಷ್ಟಾಂ ಬಲಿಭಿರೀಶ್ವರೀಂ ।
ಯುಷ್ಮಾಕಮೀದೃಶೀ ದೇವೀ ನ ಶಕ್ತಾ ವಸ್ತು ರಕ್ಷಣೇ ॥ ೬೯ ॥

---

೬೬. ನೀವು ಧರಿಸುವ ವಸ್ತ್ರಗಳನ್ನೂ, ಮುಡಿಯುವ ಹೂಮಾಲೆಗಳನ್ನೂ, ನಿಮ್ಮ ವ್ರತಕ್ಕೆ ಯೋಗ್ಯವಾದ ಪೂಜಾದ್ರವ್ಯಗಳನ್ನೂ ಅಪಹರಿಸಿದವರಾರು ?

೬೭ ವ್ರತಾಂಗವಾಗಿ ಸ್ನಾನಮಾಡುವಾಗ ಯಾರು ವಸ್ತ್ರರಹಿತರಾಗಿರುವರೋ ಅವರ ವಿಷಯದಲ್ಲಿ ಸ್ವಯಂ ವರುಣನೇ ಕೋಪಗೊಳ್ಳುವನು ಆದುದರಿಂದ ವರುಣನ ಸೇವಕರು ನಿಮ್ಮ ವಸ್ತ್ರಗಳನ್ನೂ, ಪೂಜಾಸಾಮಗ್ರಿಗಳನ್ನೂ ಅಪಹರಿಸಿರುವರು.

೬೮. ಈಗ ನೀವೆಲ್ಲರೂ ವಸ್ತ್ರರಹಿತರಾಗಿ ಹೇಗೆ ಹೋಗುವಿರಿ? ನೀವು ಹೋಗದಿದ್ದರೆ ವ್ರತವು ಪೂರ್ಣವಾಗುವುದೆಂತು? ನಿಮ್ಮ ವ್ರತದಿಂದ ಆರಾಧ್ಯಳಾದ ದೇವಿಯು ನಿಮ್ಮ ವಸ್ತುಗಳನ್ನೇಕೆ ರಕ್ಷಿಸಲಿಲ್ಲ ?

೬೯. ನಿಮ್ಮ ಪೂಜೆಯಿಂದ ತುಷ್ಟಳಾಗಿರುವ ಪೂಜ್ಯಳಾದ ಆ ದೇವಿಯನ್ನು ಧ್ಯಾನಿಸಿರಿ. ನಿಮ್ಮ ಆರಾಧ್ಯದೇವಿಯು ಪೂಜಾಸಾಮಗ್ರಿಗಳನ್ನು ರಕ್ಷಿಸಿಕೊಡಲು ಅಸಮರ್ಥಳಾಗಿದ್ದಾಳೆ.

ಕಥಂ ವ್ರತಫಲಂ ಸಾ ವಾ ದಾತುಂ ಶಕ್ತಾ ಸುರೇಶ್ವರೀ ।
ಫಲಂ ಪ್ರದಾತುಂ ಯಾ ಶಕ್ತಾ ಸಾ ಶಕ್ತಾ ಸರ್ವಕರ್ಮಣಿ ॥ ೭೦ ॥

ಶ್ರೀಕೃಷ್ಣಸ್ಯ ವಚಃಶ್ರುತ್ವಾ ಚಿಂತಾವಾಪುರ್ವ್ರಜಾಂಗನಾಃ ।
ದದೃಶುರ್ಯಮುನಾತೀರಂ ವಸ್ತ್ರವಸ್ತುವಿಹೀನಕಂ ॥ ೭೧ ॥

ಚಕ್ರುರ್ವಿಷಾದಂ ತೋಯೇ ಚ ನಗ್ನಾಸ್ತಾ ರುರುದುರ್ಭೃಶಂ ।
ಕ್ವ ಗತಾನಿ ಚ ವಸ್ತ್ರಾಣಿ ವಸ್ತೂನಿತ್ಯೂಚುರತ್ರ ನಃ ॥ ೭೨ ॥

ಕೃತ್ವಾ ವಿಷಾದಂ ತತ್ರೈವ ತಮೂಚುಗೋಪಕನ್ಯಕಾಃ ।
ಪುಟಾಂಜಲಿಯುತಾಃ ಸರ್ವಾ ಭಕ್ತ್ಯಾವಿನಯಪೂರ್ವಕಂ ॥ ೭೩ ॥

---

೭೦. ಅಂಥ ಸುರೇಶ್ವರಿಯು ನಿಮ್ಮ ವ್ರತಫಲವನ್ನು ತಾನೇ ನಿಮಗೆ ಹೇಗೆ ಕೊಟ್ಟಾಳು? ಯಾರು ಫಲಪ್ರದಾನದಲ್ಲಿ ಸಮರ್ಥಳೋ ಆ ದೇವಿಯು ಸಕಲ ಕರ್ಮಗಳಲ್ಲೂ ಶಕ್ತಳಾಗಿರಬೇಕು.

೭೧. ಶ್ರೀಕೃಷ್ಣನಾಡಿದ ಈ ಮಾತುಗಳನ್ನು ಕೇಳಿ, ಗೋಪಾಂಗನೆಯರೆಲ್ಲರೂ ಚಿಂತಾಕ್ರಾಂತರಾಗಿ ತಮ್ಮ ವಸ್ತ್ರಗಳೂ, ಪೂಜಾಸಾಮಗ್ರಿಗಳೂ, ಯಮುನಾತೀರದಿಂದ ಮಾಯವಾಗಿರುವುದನ್ನು ನೋಡಿದರು.

೭೨ ಅವರು ವಸ್ತ್ರರಹಿತರಾಗಿ ನೀರಿನಲ್ಲಿ ನಿಂತಿದ್ದಂತೆಯೇ 'ನಮ್ಮ ವಸ್ತ್ರಗಳೂ ಪೂಜಾಸಾಮಗ್ರಿಗಳೂ ಎಲ್ಲಿ ಹೋದವು? ಈಗ ನಮಗೇನು ಗತಿ?' ಎಂದು ಚಿಂತಾಕ್ರಾಂತರಾಗಿ ಅತ್ತು ಗೋಳಾಡಿದರು.

೭೩. ಇಂತು ಬಹಳ ಹೊತ್ತು ಗೋಳಾಡಿದರೂ ಪ್ರಯೋಜನವಿಲ್ಲದೆ ಆ ಗೋಪಕನ್ನಿಕೆಯರೆಲ್ಲರೂ ಭಕ್ತಿವಿನಯಪೂರ್ವಕವಾಗಿ ಕೈಮುಗಿದುಕೊಂಡು ಶ್ರೀಕೃಷ್ಣನನ್ನು ಕುರಿತಿಂತೆಂದರು.

॥ ಗೋಪಾಲಿಕಾ ಊಚುಃ ॥

ಪರಿಧೇಯಾನಿ ವಸ್ತ್ರಾಣಿ ಕಿಂಕರೀಣಾಂ ಸದೀಶ್ವರ ।
ನಿಬೋಧಯಾತ್ಮನಾಮೇವ ಸ್ಪರ್ಶಂ ಕರ್ತುಂ ತ್ವಮರ್ಹಸಿ ॥ ೭೪ ॥

ವ್ರತಾರ್ಹಾಣಿ ಚ ವಸ್ತೂನಿ ದೇವಸ್ವಾನಿ ಚ ಸಾಂಪ್ರತಂ ।
ಅದತ್ತಾನಿ ನೋಚಿತಾನಿ ಗ್ರಹೀತುಂ ವೇದವಿದ್ವದ ॥ ೭೫ ॥

ದೇಹಿ ಧೌತಾನಿ ಧೃತ್ವಾ ಚ ಕರಿಷ್ಯಾಮೋ ವ್ರತಂ ವಯಂ ।
ವಸ್ತುನಾನ್ಯೇನ ಗೋವಿಂದ ವಸ್ತೂನಾಂ ಭಕ್ಷಣಂ ಕುರು ॥ ೭೬ ॥

ಏತಸ್ಮಿನ್ನಂತರೇ ತತ್ರ ಶ್ರೀದಾಮಾ ವಸ್ತ್ರಪುಂಜಿಕಾಂ ।
ದರ್ಶಯಿತ್ವಾ ಚ ತಾಃ ಸರ್ವಾಃ ದೂರಂ ದುದ್ರಾವ ತತ್ಪುರಃ ॥ ೭೭ ॥

---

೭೪. ಗೋಪಾಲಿಕೆಯರು :—ಎಲೈ ಸದೀಶ್ವರನೇ, ನಿನ್ನ ಸೇವಕಿಯರಾದ ನಾವು ಧರಿಸುವ ವಸ್ತ್ರಗಳನ್ನು ನೀನಲ್ಲದೆ ಮತ್ತಾರು ಮುಟ್ಟಬಲ್ಲರೆಂಬುದನ್ನು ನೀನೇ ಪರ್ಯಾಲೋಚಿಸಿ ನೋಡು.

೭೫. ಎಲೈ ವೇದಜ್ಞನೇ, ವ್ರತಾರ್ಹವಾದ ಆ ವಸ್ತುಗಳೆಲ್ಲವೂ ಈಗ ದೇವಸ್ವತ್ತಾಗಿದೆ. ದೇವರಿಗೆ ಸಮರ್ಪಿಸದಿರುವ ಆ ವಸ್ತುಗಳನ್ನು ನೀನು ತೆಗೆದುಕೊಂಡಿರುವುದುಚಿತವಲ್ಲ.

೭೬. ಹೋಗಲಿ. ಒಗೆದ ನಮ್ಮ ವಸ್ತ್ರಗಳನ್ನಾದರೂ ಕೊಡು. ಅದನ್ನು ಧರಿಸಿ ಬೇರೆ ಪೂಜಾಸಾಮಗ್ರಿಗಳನ್ನು ಸಿದ್ಧಪಡಿಸಿಕೊಂಡು ವ್ರತವನ್ನು ಪೂರ್ಣಗೊಳಿಸುತ್ತೇವೆ. ಆ ನೈವೇದ್ಯದ್ರವ್ಯಗಳನ್ನು ನೀನೇ ತಿನ್ನು.

೭೭. ಗೋಪಿಯರು ಹೀಗೆ ಹೇಳುತ್ತಿರುವಾಗಲೇ ಶ್ರೀದಾಮನೆಂಬ ಗೋಪನು ಅಲ್ಲಿಗೆ ಬಂದು ವಸ್ತ್ರದ ಗಂಟೊಂದನ್ನು ಆ ಗೋಪಿಯರಿಗೆ ತೋರಿಸಿ, ಅವರು ನೋಡುತ್ತಿರುವಂತೆಯೇ ದೂರ ಓಡಿದನು.

ದೃಷ್ಟ್ವಾ ಸವಸ್ತ್ರಂ ಗೋಪಾಲಂ ಸರ್ವಾಸಾಮೀಶ್ವರೀ ಪರಾ ।
ಸರ್ವಾ ವಯಸ್ಯಾಶ್ಚೋವಾಚ ಕೋಪಯುಕ್ತಾ ಜಲಪ್ಲುತಾ ॥ ೭೮ ॥

॥ ಶ್ರೀ ರಾಧಿಕೋವಾಚ ॥

ಹೇ ಸುಶೀಲೇ ಶಶಿಕಲೇ ಹೇ ಚಂದ್ರಮುಖಿ ಮಾಧವಿ ।
ಕದಂಬಮಾಲೇ ಹೇ ಕುಂತಿ ಯಮುನೇ ಸರ್ವಮಂಗಳೇ ॥ ೭೯ ॥

ಹೇ ಪದ್ಮಮುಖಿ ಸಾವಿತ್ರಿ ಪಾರಿಜಾತೇ ಚ ಜಾಹ್ನವಿ ।
ಸುಧಾಮುಖಿ ಶುಭೇ ಪದ್ಮೇ ಹೇ ಗೌರಿ ಹೇ ಸ್ವಯಂಪ್ರಭೇ ॥ ೮೦ ॥

ಕಾಲಿಕೇ ಕಮಲೇ ದುರ್ಗೇ ಹೇ ಸರಸ್ವತಿ ಭಾರತಿ ।
ಅಪೂರ್ಣೇ ರತಿ ಹೇ ಗಂಗೇ ಚಾಂಬಿಕೇ ಸತಿ ಸುಂದರಿ ॥ ೮೧ ॥

ಕೃಷ್ಣಪ್ರಿಯೇ ಮಧುಮತಿ ಚಂಪೇ ಚಂದನನಂದಿನಿ ।
ಯೂಯಂ ಸರ್ವಾಃ ಸಮುತ್ಥಾಯ ಬದ್ಧ್ವಾನಯತ ವಲ್ಲವಂ ॥ ೮೨ ॥

---

೭೮. ಈ ರೀತಿ ವಸ್ತ್ರಸಮೇತನಾಗಿ ಓಡುತ್ತಿರುವ ಗೋಪಾಲನನ್ನು ನೋಡಿ ಗೋಪಿಯರಲ್ಲಿ ಪ್ರಧಾನಳಾದ ರಾಧೆಯು ಬಹಳ ಹೊತ್ತು ನೀರಿನಲ್ಲಿ ನೆನೆದು ಕೋಪಗೊಂಡವಳಾಗಿ ತನ್ನ ಗೆಳತಿಯರನ್ನು ಕುರಿತು ಇಂತೆಂದಳು.

೭೯-೮೦. ಶ್ರೀರಾಧಿಕಾ :—ಎಲೌ ಸುಶೀಲೆ ಶಶಿಕಲೆಯರೇ, ಚಂದ್ರಮುಖಿ ಮಾಧವಿಯರೇ, ಕದಂಬಮಾಲೆ, ಕುಂತಿ, ಯಮುನೇ ಮತ್ತು ಸರ್ವಮಂಗಳೆಯರೇ, ಪದ್ಮಮುಖಿ, ಸಾವಿತ್ರಿ, ಪಾರಿಜಾತೇ ಮತ್ತು ಜಾಹ್ನವಿಯರೇ, ಸುಧಾಮುಖಿ, ಶುಭೆ ಪದ್ಮೆ, ಗೌರಿ ಮತ್ತು ಸ್ವಯಂಪ್ರಭೆಯರೇ ನೀವೆಲ್ಲರೂ ಹೋಗಿ ಆ ಗೋಪಬಾಲನನ್ನು ಬಂಧಿಸಿ ಇಲ್ಲಿಗೆ ಕರೆತನ್ನಿರಿ.

೮೧-೮೨. ಕಾಲಿಕೆ, ಕಮಲೆ, ದುರ್ಗೆ, ಸರಸ್ವತಿ ಮತ್ತು ಭಾರತಿಯರೇ, ಅಪೂರ್ಣೆ, ರತಿ, ಗಂಗೆ, ಅಂಬಿಕೆ, ಸತಿ ಮತ್ತು ಸುಂದರಿಯರೇ ನೀವೆಲ್ಲರೂ ಹೋಗಿ ಆ ಗೋಪಬಾಲನನ್ನು ಬಂಧಿಸಿ ಕರೆತನ್ನಿರಿ.

ಸರ್ವಾ ರಾಧಾಜ್ಞಯಾ ತೂರ್ಣಂ ಸಮುತ್ಥಾಯ ಜಲಾತ್ಕ್ರುಧಾ ।
ಪ್ರಜಗ್ಮುರ್ಗೋಪಿಕಾ ನಗ್ನಾ ಯೋನಿಮಾಚ್ಛಾದ್ಯ ಪಾಣಿನಾ ॥ ೮೩ ॥

ಏತಾಸಾಂ ಸಹಚಾರಿಣ್ಯೋ ಗೋಪ್ಯಸ್ತೂರ್ಣಂ ಸಹಸ್ರಶಃ ।
ಪ್ರಜಗ್ಮುಸ್ತೇನ ರೂಪೇಣ ಕೋಪಾದಾರಕ್ತಲೋಚನಾಃ ॥ ೮೪ ॥

ವೇಗೇನ ದುದ್ರುವುಃ ಸರ್ವಾಃ ಶ್ರೀದಾಮಾನಂ ಚ ಬಾಲಿಕಾಃ ।
ವೇಗೇನ ಚ ಪ್ರಧಾವಂತಂ ಬಿಭ್ರತಂ ವಸ್ತ್ರಪುಂಜಿಕಾಂ ॥ ೮೫ ॥

ಜಗಾಮ ಶೀಘ್ರಂ ಶ್ರೀದಾಮಾ ಯತ್ರ ಗೋಪಾಃ ಸಹಾಂಶುಕಾಃ ।
ಜವೇನ ದುದ್ರುವುರ್ಗೋಪ್ಯಸ್ತತ್ಪಶ್ಚಾದ್ಬಲಸಂಯುತಾಃ ॥ ೮೬ ॥

ವಸ್ತ್ರಚೋರಾಂಶ್ಚ ಗೋಪಾಂಶ್ಚ ವೇಷ್ಟಯಾಮಾಸುರಾಶು ತಾಃ ।
ಭಿಯಾ ಪ್ರದುದ್ರುವುರ್ಬಾಲಾ ಯತ್ರ ಕೃಷ್ಣಃ ಸಹಾಂಶುಕಃ ॥ ೮೭ ॥

---

೮೩. ರಾಧೆಯ ಆಜ್ಞಾವಚನವನ್ನು ಕೇಳಿ, ಆ ಗೋಪಿಯರೆಲ್ಲರೂ ಜಾಗ್ರತೆಯಾಗಿ ನೀರಿನಿಂದ ಹೊರಕ್ಕೆ ಬಂದು ತಮ್ಮ ಕೈಯ್ಯಿಂದ ಯೋನಿಪ್ರದೇಶವನ್ನು ಮುಚ್ಚಿಕೊಂಡು ಆ ಗೋಪನನ್ನು ಅಟ್ಟಿಸಿಕೊಂಡು ಹೋದರು.

೮೪ ಇವರ ಸಖಿಯರಾದ ಸಾವಿರಾರು ಗೋಪಿಯರೂ ಕೂಡ ಕೋಪದಿಂದ ಕಣ್ಣುಗಳನ್ನು ಕೆಂಪಗೆಮಾಡಿಕೊಂಡು ನಗ್ನರಾಗಿಯೇ ಅವರನ್ನು ಹಿಂಬಾಲಿಸಿದರು.

೮೫. ಆ ಎಲ್ಲ ಗೋಪಿಯರೂ ಕೂಡ, ಬಟ್ಟೆಯ ಗಂಟನ್ನು ಎತ್ತಿಕೊಂಡು ವೇಗದಿಂದ ಓಡಿಹೋಗುತ್ತಿರುವ ಶ್ರೀದಾಮನನ್ನು ಹಿಂಬಾಲಿಸಿಕೊಂಡು ಓಡಿದರು.

೮೬. ಇತರ ಗೋಪರೆಲ್ಲರೂ ವಸ್ತ್ರಸಹಿತ ಕುಳಿತಿದ್ದ ಸ್ಥಳಕ್ಕೆ ಶ್ರೀದಾಮನು ಜಾಗ್ರತೆ ಓಡಿದನು. ಗೋಪಿಯರೂ ಕೂಡ ಬಲವನ್ನು ಪ್ರಯೋಗಿಸಿ, ಬಹಳ ವೇಗವಾಗಿ ಅವನನ್ನು ಹಿಂಬಾಲಿಸಿದರು.

೮೭. ಅಲ್ಲಿ ಅವರೆಲ್ಲರೂ ವಸ್ತ್ರಗಳನ್ನು ಅಪಹರಿಸಿಕೊಂಡು ಹೋಗಿದ್ದ ಗೋಪಾಲರನ್ನು ಮುತ್ತಿದರು. ಆಗ ಹೆದರಿದ ಆ ಗೋಪಬಾಲರೆಲ್ಲರೂ, ಬಟ್ಟೆಯ ಗಂಟಿನೊಡನೆ ಕುಳಿತಿದ್ದ ಶ್ರೀಕೃಷ್ಣನ ಸಮೀಪಕ್ಕೆ ಓಡಿದರು.

ಶ್ರೀಕೃಷ್ಣಸಹಿತಾನ್ಬಾಲಾನ್ವಾರಯಾಮಾಸುರಾಶು ಚ ।
ಗೋಪಿಕಾನಾಂ ಭಿಯಾ ಗೋಪಾದದುರ್ವಸ್ತ್ರಾಣಿ ಮಾಧವಂ ॥ ೮೮ ॥

ಮಾಧವಃ ಸ್ಥಾಪಯೊಮಾಸ ಸ್ಕಂಧೇ ಸ್ಕಂಧೇ ತರೋಸ್ತಥಾ ।
ಕದಂಬವೃಕ್ಷಃ ಶುಶುಭೇ ವಸ್ತ್ರೈರ್ನಾನಾವಿಧೈರಪಿ ॥ ೮೯ ॥

ವಸ್ತ್ರಾಣಾಂ ಪುಂಜಿಕಾಃ ಸರ್ವಾಃ ಸ್ಕಂಧೇಷು ವಿನಿಧಾಯ ಚ ।
ಉವಾಚ ಗೋಪಿಕಾಃ ಕೃಷ್ಣಃ ಪರಿಹಾಸಪರಂ ವಚಃ ॥ ೯೦ ॥

॥ ಶ್ರೀಕೃಷ್ಣ ಉವಾಚ ॥

ಭೋ ಭೋ ಗೋಪಾಲಿಕಾ ನಗ್ನಾ ಇದಾನೀಂ ಕಿಂ ಕರಿಷ್ಯಥ ।
ವಸ್ತ್ರಯಾಙ್ಞಾಂ ಪ್ರಕರ್ತುಂ ಚ ಕುರುತಾಶು ಪುಟಾಂಜಲಿಂ ॥ ೯೧ ॥

---

೮೮. ಆಗ ಆ ಗೋಪಿಯರು ಜಾಗ್ರತೆಯಾಗಿ ಬಂದು ಶ್ರೀಕೃಷ್ಣನೊಡನಿದ್ದ ಆ ಗೋಪಾಲಕರನ್ನು ತಡೆದರು. ಕೂಡಲೇ ಆ ಗೋಪಾಲಕರು ಹೆದರಿ ತಮ್ಮಲ್ಲಿದ್ದ ವಸ್ತ್ರಗಳನ್ನು ಮಾಧವನಿಗೆ ಕೊಟ್ಟರು.

೮೯. ಮಾಧವನಾದರೋ ತಾನು ಕುಳಿತಿದ್ದ ಕದಂಬವೃಕ್ಷದ ಕವಲು ಕವಲುಗಳಲ್ಲೂ ಆ ವಸ್ತ್ರದ ಗಂಟುಗಳನ್ನಿಟ್ಟನು. ಆ ವಿವಿಧವಸ್ತ್ರಗಳಿಂದ ಕದಂಬ ವೃಕ್ಷವು ಮನೋಹರವಾಗಿ ಕಂಗೊಳಿಸಿತು.

೯೦. ಇಂತು ವಸ್ತ್ರದ ಗಂಟುಗಳನ್ನೆಲ್ಲ ಮರದ ಕವಲುಗಳಲ್ಲಿಟ್ಟು ಶ್ರೀಕೃಷ್ಣನು ಆ ಗೋಪಿಯರನ್ನು ಕುರಿತು ಕೆಲವು ಪರಿಹಾಸ ವಚನಗಳನ್ನಾಡಿದನು.

೯೧. ಶ್ರೀಕೃಷ್ಣ :—ಎಲೌ ಗೋಪಾಲಿಕೆಯರೇ, ಬೆತ್ತಲೆಯಾಗಿರುವ ನೀವು ಈಗ ಏನುಮಾಡುವಿರಿ ? ವಸ್ತ್ರಗಳನ್ನು ನೀವು ಬೇಡಬೇಕಾದರೆ ಎರಡುಕೈಗಳನ್ನು ಜೋಡಿಸಿ ನನಗೆ ಕೈಮುಗಿಯಿರಿ.

ಗತ್ವಾ ವದತ ಯುಷ್ಮಾಕಮೀಶ್ವರೀಮಥ ರಾಧಿಕಾಂ ।
ಕರೋತು ಶೀಘ್ರಂ ವಸ್ತ್ರಾಣಾಂ ಯಾಚ್ಞಾಂ ಕೃತ್ವಾ ಪುಟಾಂಜಲಿಂ ॥ ೯೨ ॥

ಅನ್ಯಥಾಹಂ ನ ದಾಸ್ಯಾಮಿ ಯುಷ್ಮಭ್ಯಮಂಶುಕಾನಿ ಚ ।
ಯುಷ್ಮಾಕಮೀಶ್ವರೀ ರಾಧಾ ಕಿಂ ಕರಿಷ್ಯತಿ ಮೇಽಧುನಾ ॥ ೯೩ ॥

ವ್ರತಾರಾಧ್ಯಾ ಚ ಯಾ ದೇವೀ ಸಾ ವಾ ಮೇ ಕಿಂ ಕರಿಷ್ಯತಿ ।
ಇತ್ಯೇವಂ ಕಥಿತಂ ಸರ್ವಂ ಬ್ರೂತ ಯೂಯಂ ಚ ರಾಧಿಕಾಂ ॥ ೯೪ ॥

ಶ್ರೀಕೃಷ್ಣವಚನಂ ಶ್ರುತ್ವಾ ತಾಃ ಸರ್ವಾ ಗೋಪಕನ್ಯಕಾಃ ।
ವೀಕ್ಷ್ಯ ಲೋಚನಕೋಣೇನ ಪ್ರಜಗ್ಮೂ ರಾಧಿಕಾಂತಿಕಂ ॥ ೯೫ ॥

ಚಕ್ರುರ್ನಿವೇದನಂ ಗತ್ವಾ ಯದುವಾಚ ಹರಿಃ ಸ್ವಯಂ ।
ಶ್ರುತ್ವಾ ಜಹಾಸ ಸಾ ರಾಧಾ ಬಭೂವ ಕಾಮಪೀಡಿತಾ ॥ ೯೬ ॥

---

೯೨. ನಿಮ್ಮ ಒಡತಿಯಾದ ರಾಧೆಯ ಸಮೀಪಕ್ಕೆ ಹೋಗಿ ಈ ಮಾತನ್ನು ಹೇಳಿರಿ. ಅವಳು ಜಾಗ್ರತೆ ಬಂದು ಕೈಮುಗಿದುಕೊಂಡು ವಸ್ತ್ರಯಾಚನೆಯನ್ನು ಮಾಡಲಿ.

೯೩. ಇಲ್ಲವಾದರೆ ನಾನು ನಿಮ್ಮ ವಸ್ತ್ರಗಳನ್ನು ಹಿಂದಕ್ಕೆ ಕೊಡುವುದಿಲ್ಲ. ನಿಮ್ಮ ಒಡತಿಯಾದ ರಾಧೆಯು ನನ್ನನ್ನು ಈಗ ಏನು ಮಾಡಬಲ್ಲಳು ?

೯೪. ನಿಮ್ಮ ವ್ರತದಿಂದ ಆರಾಧ್ಯಳಾದ ಯಾವ ದೇವಿಯುಂಟೋ ಆ ದೇವಿಯು ತಾನೇ ನನ್ನನ್ನು ಏನು ಮಾಡಿಯಾಳು? ಈ ರೀತಿ ನಾನು ಹೇಳಿದೆನೆಂದು ನೀವು ಹೋಗಿ ರಾಧೆಗೆ ಹೇಳಿ.

೯೫. ಶ್ರೀಕೃಷ್ಣನಾಡಿದ ಮಾತುಗಳನ್ನು ಕೇಳಿ ಗೋಪಕನ್ನಿಕೆಯರೆಲ್ಲರೂ ತಮ್ಮ ಕಟಾಕ್ಷದಿಂದ ಅವನನ್ನು ಒಮ್ಮೆ ನೋಡಿ ರಾಧೆಯ ಸಮೀಪಕ್ಕೆ ತೆರಳಿದರು.

೯೬. ಅಲ್ಲಿ ರಾಧೆಗೆ ಶ್ರೀಹರಿಯಾಡಿದ ಮಾತನ್ನು ವಿಜ್ಞಾಪಿಸಿಕೊಂಡರು. ಆ ಮಾತನ್ನು ಕೇಳಿ ರಾಧೆಯು ನಸುನಕ್ಕು ಕಾಮಪೀಡಿತಳಾದ ಶ್ರೀಕೃಷ್ಣನಲ್ಲಿ ಅನುರಾಗವನ್ನು ಹೊಂದಿದಳು.

ಶ್ರುತ್ವಾ ತಾಸಾಂ ಚ ವಚನಂ ಪುಲಕಾಂಚಿತವಿಗ್ರಹಾ ।
ನ ಜಗಾಮ ಹರೇಃ ಸ್ಥಾನಂ ವ್ರೀಡಯಾ ಸಸ್ಮಿತಾ ಸತೀ ॥ ೯೭ ॥

ಜಲೇ ಯೋಗಾಸನಂ ಕೃತ್ವಾ ದಧ್ಯೌ ಕೃಷ್ಣಪದಾಂಬುಜಂ ।
ಬ್ರಹ್ಮೇಶಾನಂತಧರ್ಮಾಣಾಂ ವಂದ್ಯಮಿಷ್ಟಪ್ರದಂ ಪರಂ ॥ ೯೮ ॥

ಸ್ಮಾರಂ ಸ್ಮಾರಂ ಪದಾಂಭೋಜಂ ಸಾಶ್ರುಸಂಪೂರ್ಣಲೋಚನಾ ।
ಭಾವಾತಿರೇಕಾತ್ಪ್ರಾಣೇಶಂ ತುಷ್ಟಾವ ನಿರ್ಗುಣಂ ಪರಂ ॥ ೯೯ ॥

॥ ರಾಧಿಕೋವಾಚ ॥

ಗೋಲೋಕನಾಥ ಗೋಪೀಶ ಮದೀಶ ಪ್ರಾಣವಲ್ಲಭ ।
ಹೇ ದೀನಬಂಧೋ ದೀನೇಶ ಸರ್ವೇಶ್ವರ ನಮೋಽಸ್ತು ತೇ ॥ ೧೦೦ ॥

---

೯೭. ಅವರಾಡಿದಮಾತನ್ನು ಕೇಳಿ ರೋಮಾಂಚಿತಶರೀರಳಾಗಿ, ಶ್ರೀಹರಿಯ ಸನ್ನಿಧಿಗೆ ಹೋಗಲು ಲಜ್ಜೆಗೊಂಡು ನಸುನಗುತ್ತ ಅಲ್ಲಿಯೇ ಕುಳಿತಳು.

೯೮. ನೀರಿನಲ್ಲೇ ಯೋಗಾಸನವನ್ನು ಹಾಕಿಕೊಂಡು ಕುಳಿತು ಶ್ರೀಕೃಷ್ಣನ ಪಾದಕಮಲಗಳನ್ನು ಧ್ಯಾನಿಸಿದಳು. ಬ್ರಹ್ಮ, ಈಶ್ವರ, ಅನಂತ ಮತ್ತು ಧರ್ಮನೇ ಮುಂತಾದ ದೇವತೆಗಳಿಗೆ ವಂದ್ಯನೂ, ಇಷ್ಟಾರ್ಥದಾಯಕನೂ ಆದ ಪರಮಪುರುಷನನ್ನು ಧ್ಯಾನಿಸಿದಳು.

೯೯. ಆ ರಾಧೆಯು ತನ್ನ ಪ್ರಾಣನಾಥನ ಪಾದಕಮಲಗಳನ್ನು ಸ್ಮರಿಸಿಕೊಳ್ಳುತ್ತ, ಕಣ್ಣುಗಳಲ್ಲಿ ಆನಂದ ಬಾಷ್ಪವನ್ನು ಸುರಿಸುತ್ತ, ನಿರ್ಗುಣನಾದ ಪರಮಾತ್ಮನನ್ನು ಭಾವೋದ್ರೇಕದಿಂದ ಸ್ತುತಿಸಲು ಮೊದಲು ಮಾಡಿದಳು.

೧೦೦. ರಾಧೆ :—ಗೋಲೋಕದೊಡೆಯನೂ, ಗೋಪಿಯರ ಕಾಂತನೂ ನನ್ನ ಪ್ರಾಣವಲ್ಲಭನೂ, ದೀನಬಂಧುವೂ, ಸರ್ವೇಶ್ವರನೂ, ಅನಾಥರಕ್ಷಕನೂ ಆದ ನಿನಗೆ ನಮಸ್ಕರಿಸುವೆನು.

ಗೋಪೇಶ ಗೋಸಮೂಹೇಶ ಯಶೋದಾನಂದವರ್ಧನ ।
ನಂದಾತ್ಮಜ ಸದಾನಂದ ನಿತ್ಯಾನಂದ ನಮೋಽಸ್ತು ತೇ ॥ ೧೦೧ ॥

ಶತಮನ್ಯೋರ್ಮನ್ಯುರ್ಭಗ್ನ ಬ್ರಹ್ಮದರ್ಪವಿನಾಶಕ ।
ಕಾಲೀಯದಮನ ಪ್ರಾಣನಾಥ ಕೃಷ್ಣ ನಮೋಽಸ್ತು ತೇ ॥ ॥ ೧೦೨ ॥

ಶಿವಾನಂತೇಶ ಬ್ರಹ್ಮೇಶ ಬ್ರಾಹ್ಮಣೇಶ ಪರಾತ್ಪರ ।
ಬ್ರಹ್ಮಸ್ವರೂಪ ಬ್ರಹ್ಮಜ್ಞ ಬ್ರಹ್ಮಬೀಜ ನಮೋಽಸ್ತು ತೇ ॥ ೧೦೩ ॥

ಚರಾಚರತರೋರ್ಬೀಜ ಗುಣಾತೀತ ಗುಣಾತ್ಮಜ ।
ಗುಣಬೀಜ ಗುಣಾಧಾರ ಗುಣೇಶ್ವರ ನಮೋಽಸ್ತು ತೇ ॥ ೧೦೪ ॥

---

೧೦೧. ಗೋಪರಿಗೂ, ಗೋವುಗಳ ಸಮೂಹಕ್ಕೂ ಒಡೆಯನೂ, ಯಶೋದಾನಂದವರ್ಧನನೂ, ನಂದಾತ್ಮಜನೂ, ಸದಾನಂದನೂ ಆದ ನಿತ್ಯಾನಂದನಿಗೆ ನಮಿಸುವೆನು.

೧೦೨. ದೇವೇಂದ್ರನ ಮಮಕಾರವನ್ನು ಮುರಿದವನೂ, ಬ್ರಹ್ಮನ ದರ್ಪವನ್ನು ನಾಶಗೊಳಿಸಿದವನೂ, ಕಾಲಿಯನನ್ನು ದಮನಮಾಡಿದವನೂ, ನನ್ನ ಪ್ರಾಣನಾಥನೂ ಆದ ಎಲೈ ಕೃಷ್ಣನೇ ನಿನಗೆ ನಮಿಸುವೆನು.

೧೦೩. ಶಿವ, ಅನಂತ, ಬ್ರಹ್ಮ ಮುಂತಾದವರಿಗೊಡೆಯನೂ, ಬ್ರಾಹ್ಮಣರ ಈಶನೂ, ಬ್ರಹ್ಮಸ್ವರೂಪನೂ, ಬ್ರಹ್ಮಜನೂ, ಬ್ರಹ್ಮಬೀಜನೂ ಆದ ನಿನಗೆ ವಂದಿಸುವೆನು.

೧೦೪. ಚರಾಚರಸ್ವರೂಪವಾದ ವೃಕ್ಷಕ್ಕೆ ಬೀಜರೂಪನೂ, ತ್ರಿಗುಣಾತೀತನೂ, ಗುಣಾತ್ಮಜನೂ, ಗುಣಬೀಜನೂ, ಗುಣಗಳಿಗಾಧಾರನೂ, ಗುಣಗಳಿಗೆ ಒಡೆಯನೂ ಆದ ನಿನಗೆ ನಮಿಸುವೆನು.

ಅಣಿಮಾದಿಕಸಿದ್ಧೀಶ ಸಿದ್ಧೇಃ ಸಿದ್ಧಿಸ್ವರೂಪಕ |
ತಪಸ್ತಪಸ್ವಿಂಸ್ತಪಸಾಂ ಬೀಜರೂಪ ನಮೋಽಸ್ತು ತೇ || ೧೦೫ ||

ಯದನಿರ್ವಚನೀಯಂ ಚ ವಸ್ತು ನಿರ್ವಚನೀಯಕಂ |
ತತ್ಸ್ವರೂಪ ತಯೋರ್ಬೀಜ ಸರ್ವಬೀಜ ನಮೋಸ್ತು ತೇ || ೧೦೬ ||

ಅಹಂ ಸರಸ್ವತೀ ಲಕ್ಷ್ಮೀ ದುರ್ಗಾ ಗಂಗಾ ಶ್ರುತಿಪ್ರಸೂಃ |
ಯಸ್ಯ ಪಾದಾರ್ಚನಾನ್ನಿತ್ಯಂ ಪೂಜ್ಯಾ ತಸ್ಮೈ ನಮೋ ನಮಃ || ೧೦೭ ||

ಸ್ಪರ್ಶನೇ ಯಸ್ಯ ಭೃತ್ಯಾನಾಂ ಧ್ಯಾನೇನ ಚ ದಿವಾನಿಶಂ |
ಪವಿತ್ರಾಣಿ ಚ ತೀರ್ಥಾನಿ ತಸ್ಮೈ ಭಗವತೇ ನಮಃ || ೧೦೮

ಇತ್ಯೇವಮುಕ್ತ್ವಾ ಸಾ ದೇವೀ ಜಲೇ ಸಂನ್ಯಸ್ಯ ವಿಗ್ರಹಂ |
ಮನಃಪ್ರಾಣಾಂಶ್ಚ ಶ್ರೀಕೃಷ್ಣೇ ತಸ್ಥೌ ಸ್ಥಾಣುಸಮಾ ಸತೀ || ೧೦೯ ||

---

೧೦೫. ಅಣಿಮಾದಿ ಅಷ್ಟಸಿದ್ಧಿಗಳಿಗೆ ಒಡೆಯನೂ, ಸಿದ್ಧಿಗೆ ಸಿದ್ಧಿಸ್ವರೂಪನೂ, ತಪೋರೂಪನೂ, ತಪಸ್ವಿಯೂ, ತಪಸ್ಸುಗಳಿಗೆ ಬೀಜರೂಪನೂ ಆದ ನಿನಗೆ ವಂದಿಸುವೆನು.

೧೦೬. ಅವರ್ಣನೀಯ ಮತ್ತು ವರ್ಣನೀಯಾತ್ಮಕವಾದ ವಸ್ತುಗಳ ಸ್ವರೂಪನೂ, ಅವುಗಳಿಗೆ ಬೀಜರೂಪನೂ, ಸರ್ವಕಾರಣನೂ ಆದ ನಿನಗೆ ನಮಸ್ಕರಿಸವೆನು.

೧೦೭. ನಾನು, ಸರಸ್ವತಿ, ಲಕ್ಷ್ಮಿ, ದುರ್ಗಿ, ಗಂಗೆ ಮತ್ತು ಸಾವಿತ್ರೀದೇವಿಯರು ಯಾರ ಪಾದಕಮಲಗಳ ಅರ್ಚನೆಯಿಂದ ನಿತ್ಯವೂ ಪೂಜ್ಯರೆನಿಸುವೆವೋ ಆ ಮಹಾತ್ಮನಿಗೆ ನಮಸ್ಕಾರ ಮಾಡುವೆನು.

೧೦೮. ಯಾವ ಪರಮಾತ್ಮನ ಸೇವಕರ ಸ್ಪರ್ಶದಿಂದಲೂ, ಮತ್ತು ಅನವರತ ಧ್ಯಾನದಿಂದಲೂ ತೀರ್ಥಗಳೆಲ್ಲ ಪವಿತ್ರವೆನಿಸುವವೋ ಅಂಥ ಭಗವಂತನಿಗೆ ನಮಸ್ಕರಿಸುವೆನು.

೧೦೯. ಈ ರೀತಿಯಾಗಿ ಆ ರಾಧಾದೇವಿಯು ನೀರಿನಲ್ಲಿ ನಿಂತುಕೊಂಡೇ ಶ್ರೀಕೃಷ್ಣಪರಮಾತ್ಮನನ್ನು ಸ್ತುತಿಸಿ, ಮನಸ್ಸನ್ನೂ, ಪ್ರಾಣಗಳನ್ನೂ, ಶ್ರೀಕೃಷ್ಣನಲ್ಲೇ ಐಕ್ಯಗೊಳಿಸಿ ಅಚಲಳಾಗಿ ನಿಂತಳು.

ರಾಧಾಕೃತಂ ಹರೇಃ ಸ್ತೋತ್ರಂ ತ್ರಿಸಂಧ್ಯಂ ಯಃ ಪಠೇನ್ನರಃ ।
ಹರಿಭಕ್ತಿಂ ಚ ದಾಸ್ಯಂ ಚ ಲಭೇದ್ರಾಧಾಗತಿಂ ಧ್ರುವಂ ॥ ೧೧೦ ॥

ವಿಪತ್ತೌ ಯಃ ಪಠೇದ್ಭಕ್ತ್ಯಾ ಸದ್ಯಃ ಸಂಪತ್ತಿಮಾಪ್ನುಯಾತ್ ।
ಚಿರಕಾಲಗತಂ ದ್ರವ್ಯಂ ಹೃತಂ ನಷ್ಟಂ ಚ ಲಭ್ಯತೇ ॥ ೧೧೧ ॥

ಬಂಧುವೃದ್ಧಿರ್ಭವೇತ್ತಸ್ಯ ಪ್ರಸನ್ನಂ ಮಾನಸಂ ಪರಂ ।
ಚಿಂತಾಗ್ರಸ್ತಃ ಪಠೇದ್ಭಕ್ತ್ಯಾ ಪರಾಂ ನಿರ್ವೃತಿಮಾಪ್ನುಯಾತ್ ॥ ೧೧೨ ॥

ಪತಿಭೇದೇ ಪುತ್ರಭೇದೇ ಮಿತ್ರಭೇದೇ ಚ ಸಂಕಟೇ ।
ಮಾಸಂ ಭಕ್ತ್ಯಾ ಯದಿ ಪಠೇತ್ಸದ್ಯಃ ಸಂದರ್ಶನಂ ಭವೇತ್ ॥ ೧೧೩ ॥

---

೧೧೦. ರಾಧಾದೇವಿಯು ಮಾಡಿದ ಶ್ರೀಕೃಷ್ಣನ ಸ್ತೋತ್ರವನ್ನು ಮೂರು ಸಂಧ್ಯಾಕಾಲದಲ್ಲೂ ಪಠಿಸುವ ಮನುಜನು ಹರಿಭಕ್ತಿಯನ್ನೂ, ಹರಿದಾಸ್ಯವನ್ನೂ, ಪಡೆಯುವುದಲ್ಲದೆ ರಾಧಾದೇವಿಯ ಅನುಗ್ರಹಕ್ಕೆ ನಿಶ್ಚಯವಾಗಿಯೂ ಪಾತ್ರನಾಗುವನು.

೧೧೧. ವಿಪತ್ಕಾಲದಲ್ಲಿ ಇದನ್ನು ಪಠಿಸುವವನು ಕೂಡಲೇ ಸಂಪತ್ತನ್ನು ಪಡೆಯುವನು. ಬಹಳ ಹಿಂದೆ ಕಳೆದುಹೋದ ಮತ್ತು ಅಪಹೃತವಾದ ದ್ರವ್ಯವು ಪುನಃ ಅವನಿಗೆ ದೊರೆಯುವುದು.

೧೧೨ ಈ ಸ್ತೋತ್ರಪಾಠಕನ ಬಂಧುಗಳು ವೃದ್ಧಿಯಾಗುವುದಲ್ಲದೆ ಅವನ ಮನಸ್ಸು ಸರ್ವದಾ ಪ್ರಸನ್ನವಾಗಿರುವುದು. ಚಿಂತಾಗ್ರಸ್ತನು ಇದನ್ನು ಪಠಿಸಿದರೆ ಮನಶ್ಶಾಂತಿಯನ್ನು ಪಡೆಯುವನು.

೧೧೩. ಪತಿಪುತ್ರರ ವಿರಹಕಾಲದಲ್ಲಾಗಲೀ, ಮಿತ್ರರ ವಿರಹದಲ್ಲಾಗಲೀ ಒಂದು ತಿಂಗಳುಕಾಲ ಇದನ್ನು ಭಕ್ತಿಯಿಂದ ಪಠಿಸುವವರು ಕೂಡಲೇ ಅವರ ಸಂದರ್ಶನವನ್ನು ಪಡೆಯುವರು.

ಭಕ್ತ್ಯಾ ಕುಮಾರೀ ಸ್ತೋತ್ರಂ ಚ ಶೃಣುಯಾದ್ವತ್ಸರಂ ಯದಿ ।
ಶ್ರೀಕೃಷ್ಣಸದೃಶಂ ಕಾಂತಂ ಗುಣವಂತಂ ಲಭೇ ದ್ಧ್ರುವಂ ॥ ೧೧೪ ॥

ಇತಿ ಶ್ರೀ ಬ್ರಹ್ಮವೈವರ್ತೇ ಶ್ರೀಕೃಷ್ಣಜನ್ಮಖಂಡೇ
ರಾಧಾಕೃತಂ ಶ್ರೀಕೃಷ್ಣ ಸ್ತೋತ್ರಂ

ಜಲಸ್ಥಾ ರಾಧಿಕಾ ಧ್ಯಾತ್ವಾ ಶ್ರೀಕೃಷ್ಣ ಚರಣಾಂಬುಜಂ ।
ಸ್ತುತ್ವೈವಂ ಚಕ್ಷುರುನ್ಮೀಲ್ಯ ದೃಷ್ಟ್ವಾ ಕೃಷ್ಣಮಯಂ ಜಗತ್ ॥ ೧೧೫ ॥

ದದರ್ಶ ಯಮುನಾತೀರಂ ವಸ್ತ್ರದ್ರವ್ಯಮಯಂ ಮುನೇ ।
ದೃಷ್ಟ್ವಾ ತಂದ್ರಾಥವಾ ಸ್ವಪ್ನಮಿತಿ ಮೇನೇ ಚ ರಾಧಿಕಾ ॥ ೧೧೬ ॥

ಯತ್ರ ಸ್ಥಾನೇ ಯದಾಧಾರೇ ಯದ್ದ್ರವ್ಯಂ ಸಂಸ್ಥಿತಂ ಪುರಾ ।
ವಸ್ತ್ರೈಶ್ಚ ಸಹಿತಂ ಸರ್ವಂ ತತ್ಪ್ರಾಪುರ್ಗೋಪಕನ್ಯಕಾಃ ॥ ೧೧೭ ॥

---

೧೧೪. ಅವಿವಾಹಿತವಾದ ಕನ್ಯೆಯು ಭಕ್ತಿಪೂರ್ವಕವಾಗಿ ಈ ಸ್ತೋತ್ರವನ್ನು ಒಂದು ವರ್ಷಕಾಲ ಕೇಳಿದುದಾದರೆ ಗುಣವಂತನೂ, ಶ್ರೀಕೃಷ್ಣನಿಗೆ ಸಮಾನನೂ ಆದ ಪತಿಯನ್ನು ನಿಶ್ಚಯವಾಗಿಯೂ ಪಡೆಯುವಳು.

ಇಲ್ಲಿಗೆ ಬ್ರಹ್ಮವೈವರ್ತ ಮಹಾಪುರಾಣದ ಶ್ರೀಕೃಷ್ಣಜನ್ಮಖಂಡದಲ್ಲಿ
ರಾಧಾಕೃತವಾದ ಶ್ರೀಕೃಷ್ಣಸ್ತೋತ್ರವು ಮುಗಿದುದು.

೧೧೫. ಮೇಲೆ ಹೇಳಿದ ರೀತಿಯಲ್ಲಿ ರಾಧಾದೇವಿಯು ನೀರಿನಲ್ಲಿ ನಿಂತಿರುವಂತೆಯೇ ಶ್ರೀಕೃಷ್ಣನ ಚರಣಕಮಲಗಳನ್ನು ಸ್ಮರಿಸಿಕೊಂಡು ಸ್ತುತಿಸಿ ಕಣ್ದೆರೆದು ಜಗತ್ತೆಲ್ಲ ಕೃಷ್ಣಮಯವಾಗಿರುವಂತೆ ಕಂಡಳು.

೧೧೬. ಎಲೈ ನಾರದನೇ, ಯಮುನಾತೀರವು ಪೂಜಾದ್ರವ್ಯಗಳಿಂದಲೂ, ದಿವ್ಯವಸ್ತ್ರಗಳಿಂದಲೂ ಕೂಡಿರುವುದನ್ನು ನೋಡಿ, ರಾಧೆಯು 'ಇದೇನು! ನಿದ್ರಾವಸ್ಥೆಯೋ? ಅಥವಾ ಸ್ವಪ್ನಾವಸ್ಥೆಯೋ?' ಎಂದು ಸಂಶಯಪಟ್ಟಳು.

೧೧೭. ಮೊದಲು ಯಾವ ಸ್ಥಾನದಲ್ಲಿ ಯಾವ ಪೀಠದ ಮೇಲೆ ಯಾವ ಯಾವ ದ್ರವ್ಯಗಳನ್ನಿಟ್ಟಿದ್ದರೋ ಆಯಾ ಸ್ಥಾನದಲ್ಲಿ ಅದೇ ಪೀಠದ ಮೇಲೆ ಆಯಾಯ ದ್ರವ್ಯಗಳನ್ನೂ, ಮತ್ತು ವಸ್ತ್ರಗಳನ್ನೂ ಗೋಪಕನ್ನಿಕೆಯರು ಪಡೆದರು.

ಜಲಾದುತ್ಥಾಯ ತಾಃ ಸರ್ವಾಃ ವ್ರತಂ ಕೃತ್ವಾ ಮನೀಷಿತಂ ।
ಸಂಪ್ರಾಪ್ಯ ಚ ವರಂ ದೇವ್ಯಾಸ್ತಾಃ ಸರ್ವಾಃ ಸ್ವಾಲಯಂಯಯುಃ ॥ ೧೧೮ ॥

॥ ನಾರದ ಉವಾಚ ॥

ವ್ರತಸ್ಯ ಕಿಂ ವಿಧಾನಂ ಚ ಕಿಂ ನಾಮ ಕಿಂ ಫಲಂ ಪ್ರಭೋ ।
ಕಾನಿ ದ್ರವ್ಯಾಣಿ ದೇಯಾನಿ ಕಾ ದೇಯಾ ತತ್ರ ದಕ್ಷಿಣಾ ॥ ೧೧೯ ॥

ವ್ರತಾಂತೇ ಕಿಂ ರಹಸ್ಯಂ ಚ ಬಭೂವ ಸುಮನೋಹರಂ ।
ವ್ಯಾಸಂ ಕೃತ್ವಾ ಮಹಾಭಾಗ ವದ ನಾರಾಯಣೀಂ ಕಥಾಂ ॥ ೧೨೦ ॥

॥ ಸೂತ ಉವಾಚ ॥

ನಾರದಸ್ಯ ವಚಃ ಶ್ರುತ್ವಾ ಪ್ರಹಸ್ಯ ಮುನಿಪುಂಗವಃ ।
ಕಥಾಂ ಕಥಿತುಮಾರೇಭೇ ಕವೀಂದ್ರಾಣಾಂ ಗುರೋರ್ಗುರುಃ ॥ ೧೨೧ ॥

---

೧೧೮. ಅನಂತರ ಅವರೆಲ್ಲರೂ ನೀರಿನಿಂದ ಹೊರಕ್ಕೆ ಬಂದು ತಮ್ಮ ತಮ್ಮ ವಸ್ತ್ರಾಭರಣಗಳನ್ನು ಧರಿಸಿ, ತಮ್ಮ ಅಭೀಪ್ಸಿತವಾದ ವ್ರತವನ್ನು ಸಾಂಗಗೊಳಿಸಿ ದೇವಿಯ ವರವನ್ನು ಪಡೆದು ಅವರೆಲ್ಲರೂ ತಮ್ಮ ತಮ್ಮ ಮನೆಗೆ ಹೊರಟುಹೋದರು.

೧೧೯. ನಾರದ :—ಎಲೈ ಪ್ರಭುವಾದ ನಾರಾಯಣನೇ, ಆ ಗೋಪಿಯರು ಆಚರಿಸಿದ ವ್ರತದ ಹೆಸರನ್ನೂ, ಅದನ್ನು ಆಚರಿಸಬೇಕಾದ ಕ್ರಮವನ್ನೂ, ಅದರ ಫಲವನ್ನೂ, ಅದಕ್ಕೆ ಬೇಕಾದ ಪೂಜಾದ್ರವ್ಯಗಳನ್ನೂ, ಆ ವ್ರತದಲ್ಲಿ ಕೊಡಬೇಕಾದ ದಕ್ಷಿಣೆಯನ್ನೂ ವಿವರಿಸು.

೧೨೦. ಆ ಗೋಪಿಯರು ಈ ವ್ರತವನ್ನಾಚರಿಸಿದ ಮೇಲೆ ನಡೆದ ಮನೋಹರವಾದ ರಹಸ್ಯವೃತ್ತಾಂತವೇನು ? ಎಲೈ ಮಹಾಭಾಗ್ಯಶಾಲಿಯೇ, ನಾರಾಯಣನಿಗೆ ಸಂಬಂಧವಾದ ಈ ಕಥೆಯನ್ನು ವಿಸ್ತಾರವಾಗಿ ನನಗೆ ಹೇಳುವವನಾಗು.

೧೨೧. ಸೂತಮಹರ್ಷಿ :—ನಾರದನ ಈ ಪ್ರಶ್ನೆಯನ್ನು ಕೇಳಿ ಮುನಿಶ್ರೇಷ್ಠನೂ, ಕವಿಶ್ರೇಷ್ಠರ ಪರಮಗುರುವೂ ಆದ ನಾರಾಯಣನು ಆ ಕಥೆಯನ್ನು ವಿಸ್ತಾರವಾಗಿ ಹೇಳಲಾರಂಭಿಸಿದನು.

॥ ನಾರಾಯಣ ಉವಾಚ ॥

ಸರ್ವಂ ವ್ರತವಿಧಾನಂ ಚ ಮತ್ತೋ ವತ್ಸ ನಿಶಾಮಯ ।
ಖ್ಯಾತಂ ಗೌರೀವ್ರತಂ ನಾಮ ಮಾರ್ಗೇ ಮಾಸಿ ಕೃತಂ ಸ್ತ್ರಿಯಾ ॥ ೧೨೨ ॥

ಪುಂಸಾಂ ಚ ಧರ್ಮಾರ್ಥಕಾಮ ಮೋಕ್ಷದಂ ಕೃಷ್ಣ ಭಕ್ತಿದಂ ।
ದೇಶಭೇದೇ ಪ್ರಸಿದ್ಧಂ ಚ ವ್ರತಂ ಪೌರ್ವಾಪರಂ ಸ್ಮೃತಂ ॥ ೧೨೩ ॥

ಕಾಮದಂ ಕಾಮುಕಾನಾಂ ಚ ಫಲಂ ಕಾಂತನಿಮಿತ್ತಕಂ ।
ಉಪೋಷ್ಯ ಪೂರ್ವದಿವಸೇ ವಸ್ತ್ರಂ ಪ್ರಕ್ಷಾಳ್ಯ ಸಂಯುತಾ ॥ ೧೨೪ ॥

ಪ್ರಾತಶ್ಚ ಮಾರ್ಗಸಂಕ್ರಾಂತ್ಯಾಂ ಭಕ್ತ್ಯಾ ಗತ್ವಾ ಸರಿತ್ತಟಂ ।
ಧೃತ್ವಾ ಧೌತೇ ಚ ಸ್ನಾತ್ವಾ ಚ ನಾನಾಪ್ರನ್ಯೇಣ ಕನ್ಯಕಾ ॥ ೧೨೫ ॥

---

೧೨೨. ನಾರಾಯಣ :—ಎಲೈ ವತ್ಸ ನಾರದನೇ, ನಾನು ಹೇಳುವ ಈ ವ್ರತ ವಿಧಾನವನ್ನು ಸಾವಧಾನದಿಂದ ಕೇಳು. ಮಾರ್ಗಶಿರ ಮಾಸದಲ್ಲಿ ಆ ಗೋಪಿಯರು ಆಚರಿಸಿದ ಈ ವ್ರತಕ್ಕೆ ' ಗೌರೀವ್ರತ 'ವೆಂದು ಹೆಸರು.

೧೨೩. ಪುರುಷರೂ ಆ ವ್ರತವನ್ನಾಚರಿಸಿ ಧರ್ಮಾರ್ಥಕಾಮಮೋಕ್ಷಗಳೆಂಬ ಚತುರ್ವಿಧ ಪುರುಷಾರ್ಥಗಳನ್ನೂ, ಶ್ರೀಕೃಷ್ಣಭಕ್ತಿಯನ್ನೂ ಪಡೆಯಬಹುದು. ಕೆಲವು ದೇಶಗಳಲ್ಲಿ ಈ ವ್ರತವು ಪ್ರಸಿದ್ಧಿಗೊಂಡು ಸ್ವಲ್ಪ ಕಾಲ ಹಿಂದೆಅಥವಾ ಮುಂದೆ ಆಚರಿಸಲ್ಪಡುವುದು.

೧೨೪. ಈ ವ್ರತವು ಕಾಮುಕರಿಗೆ ಇಷ್ಟಾರ್ಥದಾಯಕವೂ, ಕಾಮಿನಿಯರಿಗೆ ಕಾಂತಪ್ರಾಪ್ತಿನಿಮಿತ್ತಕವೂ ಆಗಿದೆ. ಈ ವ್ರತವನ್ನಾಚರಿಸುವ ಕಾಮಿನಿಯು, ಈ ವ್ರತದ ಹಿಂದಿನ ದಿವಸ ಉಪವಾಸಮಾಡಿ, ನಿಯಮದಿಂದಿದ್ದು, ವಸ್ತ್ರಾದಿಗಳನ್ನು ಒಗೆದು ಮಡಿಮಾಡಿಕೊಳ್ಳಬೇಕು.

೧೨೫. ಈ ವ್ರತವನ್ನಾಚರಿಸುವ ಕನ್ನಿಕೆಯು ಮಾರ್ಗಶಿರ ಮಾಸದ ಸಂಕ್ರಾಂತಿಯ ದಿವಸ ಪ್ರಾತಃಕಾಲದಲ್ಲಿ ಹೊಳೆಗೆ ಹೋಗಿ ಭಕ್ತಿಯಿಂದ ಸ್ನಾನಮಾಡಿ ಶುಭವಸ್ತ್ರಗಳನ್ನು ಧರಿಸಿ, ಪೂಜೋಪಕರಣಗಳನ್ನು ಸಿದ್ಧಪಡಿಸಿಕೊಳ್ಳಬೇಕು.

ದೇವಷಟ್ಕಂ ಚ ಸಂಪೂಜ್ಯ ಕೃತ್ವಾ ಚಾವಾಹನಂ ಘಟೇ ।
ಗಣೇಶಂ ಚ ದಿನೇಶಂ ಚ ವಹ್ನಿಂ ನಾರಾಯಣಂ ಶಿವಂ ॥
ದುರ್ಗಾಂ ಪಂಚೋಪಚಾರೈಶ್ಚ ಸಂಪೂಜ್ಯ ವ್ರತಮಾರಭೇತ್ ॥ ೧೨೬ ॥

ಘಟಾಧಃ ಪಿಂಡಿಕಾಂ ಕೃತ್ವಾ ಚತುರಸ್ರಾಂ ಸುವಿಸ್ತೃತಾಂ ।
ಚಂದನಾಗುರುಕಸ್ತೂರೀ ಕುಂಕುಮೈಶ್ಚ ಸುಸಂಸ್ಕೃತಾಂ ॥ ೧೨೭ ॥

ನಿರ್ಮಾಯ ವಾಲುಕಾನಾಂ ಚ ದುರ್ಗಾಂ ದಶಭುಜಾಂ ಪರಾಂ ।
ಧೃತ್ವಾ ಕಪಾಲೇ ಸಿಂದೂರಂ ತದಧಶ್ಚಂದನೇಂದುಕಂ ॥ ೧೨೮ ॥

ತಾಂ ಧ್ಯಾತ್ವಾವಾಹಯೇದ್ದೇವೀಂ ತತೋ ಭೂತ್ವಾ ಪುಟಾಂಜಲಿಃ ।
ಇಮಂ ಮಂತ್ರಂ ಪಠಿತ್ವಾದೌ ತತಃ ಪೂಜಾಂ ಸಮಾರಭೇತ್ ॥ ೧೨೯ ॥

ಹೇ ಗೌರಿ ಶಂಕರಾರ್ಧಾಂಗಿ ಯಥಾ ತ್ವಂ ಶಂಕರಪ್ರಿಯಾ ।
ತಥಾ ಮಾಂ ಕುರು ಕಲ್ಯಾಣಿ ಕಾಂತಕಾಂತಾಂ ಸುದುರ್ಲಭಾಂ ॥ ೧೩೦ ॥

---

೧೨೬. ಅನಂತರ ಕಲಶದಲ್ಲಿ ಗಣೇಶ, ದಿನೇಶ, ಅಗ್ನಿ, ನಾರಾಯಣ, ಶಿವ ಮತ್ತು ದುರ್ಗಿ ಈ ಆರುದೇವತೆಗಳನ್ನು ಆವಾಹನೆ ಮಾಡಿ ಪಂಚೋಪಚಾರಗಳಿಂದ ಪೂಜಿಸಿ ವ್ರತವನ್ನಾರಂಭಿಸಬೇಕು.

೧೨೭-೧೨೯. ಕಲಶದ ಕೆಳಗೆ ಚಂದನ, ಅಗುರು, ಕಸ್ತೂರಿ, ಮುಂತಾದ ಸುಗಂಧದ್ರವ್ಯಗಳಿಂದ ಸುಸಂಸ್ಕೃತವಾಗಿರುವ ಮರಳಿನ ವೇದಿಕೆಯನ್ನು ಚತುರಸ್ರವಾಗಿಯೂ ವಿಸ್ತಾರವಾಗಿಯೂ ನಿರ್ಮಿಸಿ, ದಶಭುಜಗಳುಳ್ಳ ದುರ್ಗಿಯನ್ನು ಅಲ್ಲಿ ಆವಾಹನೆಮಾಡಿ ಆ ದೇವಿಯ ಹಣೆಯಲ್ಲಿ ಸಿಂದೂರವನ್ನೂ, ಅದರ ಕೆಳಗೆ ಚಂದ್ರಾಕಾರವಾದ ಚಂದನವನ್ನೂ ಇಟ್ಟು, ಅಂಜಲಿಬದ್ಧರಾಗಿ ಆ ದೇವಿಯನ್ನು ಧ್ಯಾನಿಸಿ, ಮುಂದೆ ಹೇಳುವ ಮಂತ್ರವನ್ನು ಭಕ್ತಿಯಿಂದ ಪಠಿಸಿ ಅನಂತರ ಪೂಜೆಯನ್ನಾರಂಭಿಸಬೇಕು.

೧೩೦. ಶಂಕರನ ಅರ್ಧಾಂಗಿಯಾದ ಎಲೌ ಗೌರಿದೇವಿಯೇ, ಮಂಗಳಕರಳಾದ ನೀನು ಶಂಕರನಿಗೆ ಪ್ರಿಯಳಾಗಿರುವೆ. ನಾನೂ ಸುಂದರನಾದ ಕಾಂತನ ಪ್ರಿಯಳಾಗುವ ಹಾಗೆ ಅನುಗ್ರಹಿಸು.

ಇಮಂ ಮಂತ್ರಂ ಪಠಿತ್ವಾ ತು ಧ್ಯಾಯೇದ್ದೇವೀಂ ಜಗತ್ಪ್ರಸೂಂ।
ಧ್ಯಾನಂ ತತ್ಸಾಮವೇದೋಕ್ತಂ ನಿಗೂಢಂ ಸರ್ವಕಾಮದಂ ॥ ೧೩೧ ॥

ಶೃಣು ನಾರದ ವಕ್ಷ್ಯಾಮಿ ಮುನೀಂದ್ರಾಣಾಂ ಚ ದುರ್ಲಭಂ।
ಧ್ಯಾಯಂತ್ಯನೇನ ಸಿದ್ಧಾಶ್ಚ ದುರ್ಗಾಂ ದುರ್ಗತಿನಾಶಿನೀಂ ॥ ೧೩೨ ॥

ಶಿವಾಂ ಶಿವಪ್ರಿಯಾಂ ಶೈವಾಂ ಶಿವವಕ್ಷಃಸ್ಥಲಸ್ಥಿತಾಂ।
ಈಷದ್ಧಾಸ್ಯಪ್ರಸನ್ನಾಸ್ಯಾಂ ಸುಪ್ರಸನ್ನಾಂ ಸುಲೋಚನಾಂ ॥ ೧೩೩ ॥

ನವಯೌವನಸಂಪನ್ನಾಂ ರತ್ನಾಭರಣಭೂಷಿತಾಂ।
ರತ್ನಕಂಕಣಕೇಯೂರ ರತ್ನನೂಪುರಭೂಷಿತಾಂ ॥ ೧೩೪ ॥

ರತ್ನಕುಂಡಲಯುಗ್ಮೇನ ಗಂಡಸ್ಥಲವಿರಾಜಿತಾಂ।
ಮಾಲತೀಮಾಲ್ಯಸಂಸಕ್ತ ಕಬರೀಭ್ರಮರಾನ್ವಿತಾಂ ॥ ೧೩೫ ॥

---

೧೩೧. ಮೇಲೆ ಹೇಳಿದ ಅರ್ಥವನ್ನು ಕೊಡುವ ಮಂತ್ರವನ್ನು ಹೇಳಿ ಜಗನ್ಮಾತೆಯಾದ ದೇವಿಯನ್ನು ಮುಂದೆ ಹೇಳುವಂತೆ ಧ್ಯಾನಿಸಬೇಕು. ಸಾಮವೇದೋಕ್ತವಾದ ಆ ಧ್ಯಾನಸ್ತೋತ್ರವು ಗೋಪ್ಯವೂ, ಸರ್ವಕಾಮಫಲಪ್ರದವೂ ಆಗಿದೆ.

೧೩೨. ಎಲೈ ನಾರದನೇ, ಮುನೀಂದ್ರರಿಗೂ ದುರ್ಲಭವಾದ ಆ ಧ್ಯಾನಸ್ತೋತ್ರವನ್ನು ಹೇಳುವೆನು ಕೇಳು. ಈ ಸ್ತೋತ್ರದಿಂದ ಸಿದ್ಧರೂ ಕೂಡ ದುರ್ಗತಿನಾಶಿನಿಯಾದ ದುರ್ಗೆಯನ್ನು ಧ್ಯಾನಿಸುವರು.

೧೩೩. ಶಿವ (ಮಂಗಳ)ಪ್ರದಳೂ, ಶಿವಪ್ರಿಯಳೂ, ಶಿವನಿಗೆ ಅಭಿನ್ನಳೂ, ಶಿವನ ವಕ್ಷಃಸ್ಥಳದಲ್ಲಿ ನೆಲೆಸಿರುವವಳೂ, ಮಂದಹಾಸದಿಂದ ಪ್ರಸನ್ನಮುಖಿಯೂ, ವಿಶಾಲನೇತ್ರೆಯೂ ಆದ ದೇವಿಯನ್ನು ಭಜಿಸುವೆನು.

೧೩೪. ನವಯೌವನಸಂಪನ್ನಳೂ, ರತ್ನಾಭರಣಭೂಷಿತಳೂ, ರತ್ನನಿರ್ಮಿತವಾದ ಕಂಕಣ, ಕೇಯೂರ ಮತ್ತು ನೂಪುರಗಳಿಂದ ಶೋಭಿತಳೂ ಆದ ದೇವಿಯನ್ನು ಭಜಿಸುವೆನು.

೧೩೫. ಕಪೋಲಸ್ಥಲದಲ್ಲಿ ಪ್ರತಿಬಿಂಬಿಸಿರುವ ರತ್ನಕುಂಡಲದ್ವಯದಿಂದಲೂ, ಮಾಲತೀಹೂಮಾಲೆಯಿಂದ ಶೋಭಿಸುತ್ತಿರುವ ಹೆರಳೆಂಬ ಭ್ರಮರಗಳಿಂದಲೂ ಶೋಭಿಸುವ ದೇವಿಯನ್ನು ಭಜಿಸುವೆನು.

ಸಿಂದೂರತಿಲಕಂ ಚಾರು ಕಸ್ತೂರೀಬಿಂದುನಾ ಸಹ ।
ವಹ್ನಿಶುದ್ಧಾಂಶುಕಾಂ ರತ್ನಕಿರೀಟಾಂ ಸುಮನೋಹರಾಂ ॥ ೧೩೬ ॥

ಮಣೀಂದ್ರಸಾರಸಂಸಕ್ತ ರತ್ನಮಾಲಾಸಮುಜ್ಜ್ವಲಾಂ ।
ಪಾರಿಜಾತಪ್ರಸೂನಾನಾಂ ಮಾಲಾಜಾಲಾನುಲಂಬಿತಾಂ ॥ ೧೩೭ ॥

ಸುಪೀನಕಠಿನಶ್ರೋಣೀಂ ಬಿಭ್ರತೀಂ ಚ ಸ್ತನಾನತಾಂ ।
ನವಯೌವನಭಾರೌಘಾದೀಷನ್ನಮ್ರಾಂ ಮನೋಹರಾಂ ॥ ೧೩೮ ॥

ಬ್ರಹ್ಮಾದಿಭಿಃ ಸ್ತೂಯಮಾನಾಂ ಸೂರ್ಯಕೋಟಿಸಮಪ್ರಭಾಂ ।
ಪಕ್ವಬಿಂಬಾಧರೋಷ್ಠೀಂ ಚ ಚಾರುಚಂಪಕಸನ್ನಿಭಾಂ ॥ ೧೩೯ ॥

---

೧೩೬. ಕಸ್ತೂರಿಯ ಬೊಟ್ಟುಗಳಿಂದ ಶೋಭಿಸುವ ಸಿಂದೂರದ ತಿಲಕವನ್ನಿಟ್ಟು, ಅಗ್ನಿಯಂತೆ ಪರಿಶುದ್ಧವಾದ ವಸ್ತ್ರವನ್ನುಟ್ಟು, ಮನೋಹರವಾದ ರತ್ನಕಿರೀಟವನ್ನು ಧರಿಸಿರುವ ದೇವಿಯನ್ನು ಭಜಿಸುವೆನು.

೧೩೭. ಶ್ರೇಷ್ಠವಾದ ಮಣಿಗಳನ್ನು ಮೆಟ್ಟಿರುವ ರತ್ನಮಾಲೆಯಿಂದಲೂ ಆಜಾನುಪರ್ಯಂತವಾದ ಪಾರಿಜಾತಪುಷ್ಪಗಳ ಮಾಲೆಯಿಂದಲೂ ಶೋಭಿಸುವ ದೇವಿಯನ್ನು ಸ್ತುತಿಸುವೆನು.

೧೩೮. ನವಯೌವನದಿಂದ ಪೀನೋನ್ನತವೂ, ಅತಿಕಠಿಣವೂ ಆದ ಶ್ರೋಣೀಬಿಂಬದಿಂದಲೂ, ಸ್ತನದ್ವಯದಿಂದಲೂ ಆ ನತಾಂಗಿಯಾದ ಮನೋಹರೆಯನ್ನು ಧ್ಯಾನಿಸುವೆನು.

೧೩೯. ಬ್ರಹ್ಮಾದಿ ದೇವತೆಗಳಿಂದ ಸ್ತುತಿಸಲ್ಪಡುವವಳೂ, ಕೋಟಿಸೂರ್ಯರಿಗೆ ಸಮನಾದ ದೇಹಕಾಂತಿಯುಳ್ಳವಳೂ, ಪಕ್ವವಾದ ತೊಂಡೆಹಣ್ಣಿನಂತಿರುವ ಕೆಳತುಟಿಯಿಂದಲೂ, ಮನೋಹರವಾದ ಸಂಪಿಗೆಯ ವರ್ಣದಿಂದಲೂ ಶೋಭಿತಳೂ ಆದ ದೇವಿಯನ್ನು ಭಜಿಸುವೆನು.

ಮುಕ್ತಾಪಂಕ್ತಿವಿನಿಂದ್ಯೈಕ ದಂತರಾಜಿವಿರಾಜಿತಾಂ ।
ಮುಕ್ತಿಕಾಮಪ್ರದಾಂ ದೇವೀಂ ಶರಚ್ಚಂದ್ರಮುಖೀಂ ಭಜೇ ॥ ೧೪೦ ॥

ಧ್ಯಾತ್ವೈವಂ ಮಸ್ತಕೇ ಪುಷ್ಪಂ ವಿನ್ಯಸ್ಯ ಚ ವ್ರತೀ ಮುದಾ ।
ಪುಷ್ಪಂ ಗೃಹೀತ್ವಾ ಭಕ್ತ್ಯಾ ಚ ಪುನರ್ಧ್ಯಾತ್ವಾ ಚ ಪೂಜಯೇತ್ ॥ ೧೪೧ ॥

ದತ್ವಾ ಷೋಡಶೋಪಚಾರಾನ್ಸ್ಪೃಹೃಷ್ಟಂ ತತ್ರ ನಿತ್ಯಶಃ ।
ಪೂರ್ವೋಕ್ತೇನೈವ ಮಂತ್ರೇಣ ಮುದಾ ಭಕ್ತ್ಯಾ ವ್ರತೇ ವ್ರತೀ ॥ ೧೪೨ ॥

ಪೂರ್ವೋಕ್ತೇನೈವ ಸ್ತೋತ್ರೇಣ ಸ್ತುತ್ವಾ ಚ ಪ್ರಣಮೇತ್ತದಾ ।
ಕೃತ್ವಾ ಪ್ರಣಾಮಂ ಭಕ್ತ್ಯಾ ಚ ಸಂಯತಃ ಶೃಣುಯಾತ್ಕಥಾಂ ॥ ೧೪೩ ॥

॥ ನಾರದ ಉವಾಚ ॥

ವ್ರತಂ ವ್ರತವಿಧಾನಂ ಚ ಫಲಂ ಚ ಸ್ತೋತ್ರಮದ್ಭುತಂ ।
ಅಧುನಾ ಶ್ರೋತುಮಿಚ್ಛಾಮಿ ಗೌರೀವ್ರತಕಥಾಂ ಶುಭಾಂ ॥ ೧೪೪ ॥

---

೧೪೦. ಮುತ್ತಿನಸಾಲುಗಳನ್ನು ಅಲ್ಲಗಳೆಯುವ ದಂತಪಂಕ್ತಿಗಳಿಂದ ವಿರಾಜಿಸುತ್ತಿರುವ ಮುಕ್ತಿಕಾಮಪ್ರದಳೂ ಶರಚ್ಚಂದ್ರವದನೆಯೂ ಆದ ದೇವಿಯನ್ನು ಭಜಿಸುವೆನು.

೧೪೧. ವ್ರತನಿಷ್ಠಳಾದ ಸ್ತ್ರೀಯು ದೇವಿಯ ತಲೆಯ ಮೇಲೆ ಪುಷ್ಪವನ್ನಿಟ್ಟು ಮೇಲೆ ಹೇಳಿದಂತೆ ಧ್ಯಾನಿಸಿ, ಪ್ರಸಾದವನ್ನು ಸ್ವೀಕರಿಸಿ, ಪುನಃ ಧ್ಯಾನಮಾಡಿ ಪೂಜಿಸಬೇಕು.

೧೪೨–೧೪೩. ವ್ರತಾಸಕ್ತಳಾದ ಕಾಮಿನಿಯು ಹಿಂದೆ ಹೇಳಿದ ಮಂತ್ರದಿಂದ ದೇವಿಗೆ ಷೋಡಶೋಪಚಾರಗಳನ್ನು ಭಕ್ತಿಯಿಂದ ಸಮರ್ಪಿಸಿ, ಪೂರ್ವೋಕ್ತವಾದ ಸ್ತೋತ್ರದಿಂದ ಸ್ತುತಿಸಿ, ವಿನಯಭಕ್ತಿಗಳಿಂದ ನಮಸ್ಕರಿಸಿದನಂತರ ಇಂದ್ರಿಯ ನಿಗ್ರಹಪರಳಾಗಿ ಕಥೆಯನ್ನು ಕೇಳಬೇಕು.

೧೪೪-೧೪೫. ನಾರದ :—ಗೌರೀವ್ರತವನ್ನೂ, ಅದನ್ನು ಆಚರಿಸುವ ವಿಧಾನವನ್ನೂ, ಅವರ ಫಲವನ್ನೂ, ಅದ್ಭುತವಾದ ಸ್ತೋತ್ರವನ್ನೂ ಕೇಳಿ ಸಂತೋಷಪಟ್ಟೆನು. ಈಗ ಶುಭಕರವಾದ 'ಗೌರೀವ್ರತ'ದ ಕಥೆಯನ್ನು ಕೇಳಬಯಸುತ್ತೇನೆ. ಈ ವ್ರತವನ್ನು

ವ್ರತಂ ಕೇನ ಕೃತಂ ಪೂರ್ವಂ ಭೂಮೌ ಕೇನ ಪ್ರಕಾಶಿತಂ ।
ಏತತ್ಸರ್ವಂ ಸುವಿಸ್ತಾರ್ಯ ವದ ಸಂದೇಹಭಂಜನ ॥ ೧೪೫ ॥

॥ ಶ್ರೀ ನಾರಾಯಣ ಉವಾಚ ॥

ಕುಶಧ್ವಜಸ್ಯ ಹಿ ಸುತಾ ನಾಮ್ನಾ ವೇದವತೀ ಸತೀ ।
ತಯಾ ಕೃತಂ ವ್ರತಮಿದಂ ಮಹಾತೀರ್ಥೇ ಚ ಪುಷ್ಕರೇ ॥ ೧೪೬ ॥

ಸಮಾಪ್ತಿದಿವಸೇ ಸಾಕ್ಷಾದ್ಬಭೂವ ಜಗದಂಬಿಕಾ ।
ಯೋಗಿನೀಲಕ್ಷಸಂಯುಕ್ತಾ ಸೂರ್ಯಕೋಟಿಸಮಪ್ರಭಾ ॥ ೧೪೭ ॥

ಶಾತಕುಂಭವಿನಿರ್ಮಾಣರಥಸ್ಥಾ ಪರಮೇಶ್ವರೀ ।
ಈಷದ್ಧಾಸ್ಯಪ್ರಸನ್ನಾಸ್ಯಾ ತಾಮುವಾಚ ಸುಸಂಯುತಾಂ ॥ ೧೪೮ ॥

ಮೊಟ್ಟಮೊದಲು ಆಚರಿಸಿದವರಾರು? ಇದನ್ನು ಭೂಮಂಡಲದಲ್ಲಿ ಪ್ರಚಾರಮಾಡಿದವರಾರು? ಸಕಲರ ಸಂದೇಹಪರಿಹಾರಕನಾದ ನೀನು ಇವೆಲ್ಲವನ್ನೂ ನನಗೆ ವಿಸ್ತರಿಸಿ ಹೇಳು.

೧೪೬. ಶ್ರೀನಾರಾಯಣ :—ಕುಶಧ್ವಜನೆಂಬ ರಾಜನಿಗೆ ವೇದವತಿಯೆಂಬ ಮಹಾಪತಿವ್ರತೆಯಾದ ಮಗಳೊಬ್ಬಳಿದ್ದಳು. ಆಕೆಯು ಪುಷ್ಕರಮಹಾಕ್ಷೇತ್ರದಲ್ಲಿ ಈ ವ್ರತವನ್ನಾಚರಿಸಿದಳು

೧೪೭. ವ್ರತಸಮಾಪ್ತಿಯ ದಿವಸ, ಕೋಟಿಸೂರ್ಯರ ಸಮಾನಪ್ರಭೆಯುಳ್ಳ ಜಗದಂಬಿಕೆಯು ಲಕ್ಷಯೋಗಿನಿಯರೊಡಗೂಡಿ ಆ ವೇದವತಿಗೆ ಪ್ರತ್ಯಕ್ಷಳಾದಳು.

೧೪೮. ಸುವರ್ಣನಿರ್ಮಿತವಾದ ರಥದಲ್ಲಿ ಕುಳಿತು ಮಂದಹಾಸದಿಂದ ಪ್ರಸನ್ನಮುಖಿಯಾಗಿದ್ದ ಆ ದೇವಿಯು ನಿಯಮದಿಂದಿದ್ದ ವೇದವತಿಯನ್ನು ಕುರಿತಿಂತೆಂದಳು

|| ಪಾರ್ವತ್ಯುವಾಚ ||

ಹೇ ವೇದವತಿ ಭದ್ರಂ ತೇ ವರಂ ವೃಣು ಯಥೇಪ್ಸಿತಂ |
ತವ ವ್ರತೇನ ಸಂತುಷ್ಟಾಽಹಂ ತುಭ್ಯಂ ದಾಸ್ಯಾಮಿ ವಾಂಛಿತಂ || ೧೪೯ ||

ಪಾರ್ವತೀವಚನಂ ಶ್ರುತ್ವಾ ದೃಷ್ಟ್ವಾ ತಾಂ ಹೃಷ್ಟಮಾನಸಾಂ |
ಪುಟಾಂಜಲಿಯುತಾ ಸಾಧ್ವೀ ಪ್ರಣಮ್ಯೋವಾಚ ನಾರದ || ೧೫೦ ||

|| ವೇದವತ್ಯುವಾಚ ||

ದೇವಿ ನಾರಾಯಣಂ ಕಾಂತಂ ಮಹ್ಯಂ ದೇಹಿ ಮನೀಷಿತಂ |
ವರೇಽನ್ಯಸ್ಮಿನ್ಸ್ಪೃಹಾ ನಾಸ್ತಿ ದೃಢಾಂ ಭಕ್ತಿಂ ಚ ತತ್ಪದೇ || ೧೫೧ ||

ಶ್ರುತ್ವಾ ವೇದವತೀವಾಕ್ಯಂ ಪ್ರಹಸ್ಯ ಜಗದಂಬಿಕಾ |
ಅವರುಹ್ಯ ರಥಾತ್ತೂರ್ಣಂ ತಾಮುವಾಚ ಹರಿಪ್ರಿಯಾಂ || ೧೫೨ ||

---

೧೪೯. ಪಾರ್ವತಿ :—ಎಲೌ ವೇದವತಿಯೇ, ನಿನಗೆ ಮಂಗಳವಾಗಲಿ. ನಿನಗೆ ಅಭೀಷ್ಟವಾದ ವರವನ್ನು ಬೇಡಿಕೋ. ನೀನು ಆಚರಿಸಿದ ವ್ರತದಿಂದ ಸಂತುಷ್ಟಳಾದ ನಾನು ನಿನ್ನ ಇಷ್ಟಾರ್ಥವನ್ನು ಸಲ್ಲಿಸುವೆನು.

೧೫೦. ಎಲೈ ನಾರದನೆ, ಈ ರೀತಿಯಾದ ಪಾರ್ವತಿಯ ಮಾತನ್ನು ಕೇಳಿ ವೇದವತಿಯು ಪ್ರಸನ್ನಹೃದಯಳಾದ ಆ ದೇವಿಯನ್ನು ನೋಡಿ ನಮಸ್ಕರಿಸಿ ಕೈಗಳನ್ನು ಜೋಡಿಸಿಕೊಂಡು ಮುಂದೆ ಹೇಳುವಂತೆ ಬೇಡಿದಳು.

೧೫೧. ವೇದವತಿ :—ಎಲೌ ದೇವಿಯೇ, ನನಗೆ ಅಭೀಪ್ಸಿತನಾದ ನಾರಾಯಣನು ನನ್ನ ಕಾಂತನಾಗುವಂತೆಯೂ, ಅವನ ಚರಣಕಮಲಗಳಲ್ಲಿ ದೃಢಭಕ್ತಿಯುಂಟಾಗುವಂತೆಯೂ ನನಗೆ ವರವನ್ನು ಅನುಗ್ರಹಿಸು. ಬೇರೆ ಯಾವ ವರವೂ ನನಗೆ ಬೇಕಿಲ್ಲ.

೧೫೨. ವೇದವತಿಯ ಬೇಡಿಕೆಯನ್ನು ಕೇಳಿ ಜಗದಂಬಿಕೆಯು ನಸುನಕ್ಕು ಜಾಗ್ರತೆ ರಥದಿಂದ ಕೆಳಗಿಳಿದು ಹರಿಪ್ರಿಯಳಾದ ಅವಳನ್ನು ಕುರಿತಿಂತೆಂದಳು.

॥ ಪಾರ್ವತ್ಯುವಾಚ ॥

ಜ್ಞಾತಂ ಸರ್ವಂ ಜಗನ್ಮಾತಃ ತ್ವಂ ಚ ಲಕ್ಷ್ಮೀಃ ಸ್ವಯಂ ಸತಿ ।
ಭಾರತಂ ಪಾದರಜಸಾ ಪೂತಂ ಕರ್ತುಂ ಸಮಾಗತಾ ॥ ೧೫೩ ॥

ತ್ವತ್ಪಾದರಜಸಾ ಸಾಧ್ವಿ ಸದ್ಯಃ ಪೂತಾ ವಸುಂಧರಾ ।
ನಿಖಿಲಾನಿ ಚ ತೀರ್ಥಾನಿ ಪೂತಾನಿ ಪರಮೇಶ್ವರಿ ॥ ೧೫೪ ॥

ವ್ರತಂ ತೇ ಲೋಕಶಿಕ್ಷಾರ್ಥಂ ತಪಶ್ಚರ ತಪಸ್ವಿನಿ ।
ನಾರಾಯಣಸ್ಯ ಕಾಂತಾ ತ್ವಂ ಪ್ರಿಯಾ ಜನ್ಮನಿ ಜನ್ಮನಿ ॥ ೧೫೫ ॥

ಭಾರಾವತರಣೇ ವಿಷ್ಣುರ್ವಸುಧಾಮಾಗಮಿಷ್ಯತಿ ।
ರಾಮೋ ದಾಶರಥಿಃ ಪೂರ್ಣಂ ಕರ್ತುಂ ದಸ್ಯುವಿನಿಗ್ರಹಂ ॥ ೧೫೬ ॥

---

೧೫೩. ಪಾರ್ವತಿ:— ಎಲೌ ಜಗನ್ಮಾತೆಯೇ, ನೀನು ಎಲ್ಲವನ್ನೂ ಬಲ್ಲೆ. ಸ್ವಯಂ ಲಕ್ಷ್ಮೀದೇವಿಯಾದ ನೀನು ನಿನ್ನ ಪಾದಧೂಳಿಯಿಂದ ಭರತಖಂಡವನ್ನು ಪವಿತ್ರಗೊಳಿಸಲು ಅವತರಿಸಿದ್ದೀಯೆ.

೧೫೪. ಸಾಧ್ವೀಮಣಿಯಾದ ನಿನ್ನ ಪಾದಧೂಳಿಯಿಂದ ವಸುಂಧರೆಯು ಪವಿತ್ರಳಾಗುವಳು. ಎಲೌ ಪರಮೇಶ್ವರಿಯೇ; ನಿನ್ನ ಸ್ಪರ್ಶದಿಂದ ಸಕಲ ತೀರ್ಥಗಳೂ ಪವಿತ್ರವೆನಿಸುವುವು.

೧೫೫. ಲೋಕಶಿಕ್ಷಾರ್ಥವಾಗಿ ನೀನು ವ್ರತವನ್ನಾಚರಿಸಿದ್ದೀಯೆ. ತಪಸ್ವಿನಿಯಾದ ನೀನು ತಪಸ್ಸನ್ನಾಚರಿಸುತ್ತಿರು. ಜನ್ಮಜನ್ಮದಲ್ಲಿಯೂ ನೀನು ನಾರಾಯಣನ ಕಾಂತೆಯೂ ಪ್ರೀತಿಪಾತ್ರಳೂ ಆಗುವೆ.

೧೫೬. ವಿಷ್ಣುವು ದುಷ್ಟರನ್ನು ನಿಗ್ರಹಿಸಿ ಭೂಭಾರವನ್ನಿಳುಹಿ ನಿನ್ನ ಮನೋರಥವನ್ನು ಪೂರ್ಣಗೊಳಿಸಲು ಭೂಮಂಡಲದಲ್ಲಿ ದಶರಥನ ಪುತ್ರನಾಗಿ ಅವತರಿಸಿ ರಾಮನೆಂದು ಪ್ರಖ್ಯಾತಿಗೊಳ್ಳುವನು.

ಬ್ರಹ್ಮಶಾಪಾಚ್ಚ ಚ್ಯುತಯೋರ್ಮೋಕ್ಷಣಾಯ ಚ ಭಕ್ತಯೋಃ ।
ಅಯೋಧ್ಯಾಯಾಂ ಚ ತ್ರೇತಾಯಾಮಾವಿರ್ಭಾವೋ ಹರೇರಪಿ ॥ ೧೫೭ ॥

ತ್ವಮೇವ ಮಿಥಿಲಾಂ ಗಚ್ಛ ವಿಧಾಯ ಶಿಶುವಿಗ್ರಹಂ ।
ತ್ವಾಮಿಮಾಂ ಪ್ರಾಪ್ಯ ಜನಕೋಽಪ್ಯಯೋನಿಸಂಭವಾಂ ಸುತಾಂ ॥ ೧೫೮ ॥

ಪಾಲಯಿಷ್ಯತಿ ಯತ್ನೇನ ಸೀತಾ ತ್ವಂ ಚ ಭವಿಷ್ಯಸಿ ।
ಗತ್ವಾ ರಾಮೋಽಪಿ ಮಿಥಿಲಾಂ ತ್ವದ್ವಿವಾಹಂ ಕರಿಷ್ಯತಿ ॥ ೧೫೯ ॥

ನಾರಾಯಣಸ್ಯ ಕಾಂತಾ ತ್ವಂ ಕಲ್ಪೇ ಕಲ್ಪೇ ಭವಿಷ್ಯಸಿ ।
ಇತ್ಯುಕ್ತ್ವಾ ತಾಂ ಸಮಾಲಿಂಗ್ಯ ಪಾರ್ವತೀ ಸ್ವಾಲಯಂ ಯಯೌ ॥ ೧೬೦ ॥

ಗತ್ವಾ ಸಾ ಮಿಥಿಲಾಂ ಸಾಧ್ವೀ ಶಿಶುರೂಪಂ ವಿಧಾಯ ಚ ।
ಲಾಂಗಲಸ್ಯ ಚ ರೇಖಾಯಾಂ ಸುಖಾತ್ತಸ್ಥೌ ಚ ಮಾಯಯಾ ॥ ೧೬೧ ॥

---

೧೫೭. ಬ್ರಹ್ಮಶಾಪದಿಂದ ಪತಿತರಾಗಿರುವ ಭಕ್ತರಾದ ರಾವಣಕುಂಭಕರ್ಣರ ಮೋಕ್ಷಕ್ಕಾಗಿ ಶ್ರೀಹರಿಯು ತ್ರೇತಾಯುಗದಲ್ಲಿ ಅಯೋಧ್ಯೆಯಲ್ಲಿ ಶ್ರೀರಾಮನಾಗಿ ಅವತಾರಮಾಡುವನು.

೧೫೮-೧೫೯. ನೀನೂ ಕೂಡ ಶಿಶುರೂಪಧಾರಿಣಿಯಾಗಿ ಮಿಥಿಲಾನಗರಿಗೆ ಹೋಗು. ಅಯೋನಿಜಳಾದ ನಿನ್ನನ್ನು ಮಗಳಾಗಿ ಪಡೆದ ಜನಕನು ಪ್ರಯತ್ನದಿಂದ ಪರಿಪಾಲಿಸುವನು. ನೀನು ಸೀತೆ ಎಂದು ಪ್ರಖ್ಯಾತಳಾಗುವೆ. ಆಗ ಶ್ರೀರಾಮನು ಮಿಥಿಲೆಗೆ ಬಂದು ನಿನ್ನನ್ನು ವಿವಾಹಮಾಡಿಕೊಳ್ಳುವನು

೧೬೦. ನೀನು ಪ್ರತಿಕಲ್ಪದಲ್ಲೂ ನಾರಾಯಣನ ಕಾಂತೆಯಾಗುವೆ. ಇಂತು ನುಡಿದು ಪಾರ್ವತಿಯು ಆ ವೇದವತಿಯನ್ನು ಆಲಿಂಗಿಸಿಕೊಂಡು ಹರಸಿ ತನ್ನ ಮಂದಿರಕ್ಕೆ ತೆರಳಿದಳು.

೧೬೧. ಅನಂತರ ಸಾಧ್ವೀಮಣಿಯಾದ ಆ ವೇದವತಿಯು ಶಿಶುರೂಪವನ್ನು ಧರಿಸಿ ಮಿಥಿಲೆಗೆ ಹೋಗಿ ತನ್ನ ಮಾಯಾಶಕ್ತಿಯಿಂದ ನೇಗಿಲಿನ ಗೆರೆಯೊಳಗೆ ಅಡಗಿಕೊಂಡಳು.

ವಿಲೋಕ್ಯ ಜನಕಸ್ತಾಂ ಚ ನಗ್ನಾಂ ಮುದ್ರಿತಲೋಚನಾಂ ।
ತಪ್ತಕಾಂಚನ ವರ್ಣಾಂ ಚ ರುದಂತೀಂ ತೇಜಸಾನ್ವಿತಾಂ ॥ ೧೬೨ ॥

ದೃಷ್ಟ್ವಾ ತಾಂ ಚ ಗೃಹೀತ್ವಾ ಚ ಕೃತ್ವಾ ವಕ್ಷಸಿ ನಾರದ ।
ಗಚ್ಛಂತಂ ಪ್ರತಿ ತತ್ರೈವ ವಾಗ್ಬಭೂವಾಶರೀರಿಣೀ ॥ ೧೬೩ ॥

ಅಯೋನಿ ಸಂಭವಾಂ ಕಾಂತಾಂ ಕಮಲಾಂ ಗ್ರಹಣಂ ಕುರು ।
ನಾರಾಯಣ ಸ್ತೇ ಜಾಮಾತಾ ಭವಿತೇತ್ಯೇವ ಮೇ ವಚಃ ॥ ೧೬೪ ॥

ಶ್ರುತ್ವಾ ತದಾ ದೇವವಾಣೀಂ ಗೃಹೀತ್ವಾ ಕನ್ಯಕಾಮೃಷಿಃ ।
ಗತ್ವಾ ದದೌ ಸ್ವಕಾಂತಾಯೈ ಪಾಲನಾಯ ಮುದಾನ್ವಿತಃ ॥ ೧೬೫ ॥

ಸಾ ಲಬ್ಧ ಯೌವನಾ ಪ್ರಾಪ ರಾಮಂ ದಾಶರಥಿಂ ಸತೀ ।
ವ್ರತಸ್ಯಾಸ್ಯ ಪ್ರಭಾವೇಣ ಕಾಂತಂ ತ್ರಿಜಗತಾಂ ಪತಿಂ ॥ ೧೬೬ ॥

---

೧೬೨. ಪುಟಕ್ಕೆ ಹಾಕಿದ ಚಿನ್ನದಂತೆ ತೇಜಸ್ವಿನಿಯಾದ ಆ ಕನ್ಯೆಯು ಬೆತ್ತಲೆಯಾಗಿ ಕಣ್ಣುಮುಚ್ಚಿಕೊಂಡು ಅಳುತ್ತ ಕುಳಿತಿರುವುದನ್ನು ಜನಕಮಹಾರಾಜನು ನೋಡಿದನು.

೧೬೩. ಎಲೈ ನಾರದನೇ, ಜನಕಮಹಾರಾಜನು ಆ ಶಿಶುವನ್ನೆತ್ತಿಕೊಂಡು ತನ್ನ ಎದೆಗಪ್ಪಿಕೊಂಡು ಮನೆಗೆ ಹೋಗುತ್ತಿರುವಾಗ ಮುಂದೆ ಹೇಳುವಂತೆ ಅಶರೀರವಾಣಿಯಾಯಿತು.

೧೬೪. ಅಯೋನಿಜೆಯೂ ಮನೋಹರಳೂ, ಆದ ಈ ಲಕ್ಷ್ಮೀದೇವಿಯನ್ನು ನೀನು ಕಾಪಾಡು ನಾರಾಯಣನು ಇವಳನ್ನು ಸ್ವೀಕರಿಸಿ ನಿನ್ನ ಅಳಿಯನಾಗುವನು. ಇದು ಸತ್ಯವಾದುದು.

೧೬೫. ಈ ರೀತಿಯಾದ ದೇವವಾಣಿಯನ್ನು ಕೇಳಿ ಆ ರಾಜರ್ಷಿಯು ಆ ಕನ್ನಿಕೆಯನ್ನು ಕರೆದೊಯ್ದು ಸಂತೋಷದಿಂದ ತನ್ನ ಪತ್ನಿಗೆ ಕೊಟ್ಟು ಪರಿಪಾಲಿಸಬೇಕೆಂದು ಹೇಳಿದನು.

೧೬೬. ಆ ಕನ್ಯೆಯು ಪ್ರಾಪ್ತವಯಸ್ಕಳಾದಾಗ ಈ ಗೌರೀವ್ರತಾಚರಣೆಯ ಪ್ರಭಾವದಿಂದ ಮೂರುಲೋಕಗಳ ಒಡೆಯನೂ ದಶರಥನ ಪುತ್ರನೂ ಆದ ಶ್ರೀರಾಮನನ್ನು ಕಾಂತನನ್ನಾಗಿ ಪಡೆದಳು.

ಪ್ರಕಾಶಿತಂ ವಸಿಷ್ಠೇನ ಪೃಥಿವ್ಯಾಂ ಭಕ್ತಿಭಾವತಃ ।
ರಾಧಾ ಕೃತ್ವಾ ವ್ರತಮಿದಂ ಶ್ರೀಕೃಷ್ಣಂ ಪ್ರಾಣವಲ್ಲಭಂ ॥ ೧೬೭ ॥

ಗೋಪಾಂಗನಾಶ್ಚ ತಂ ಪ್ರಾಪುರ್ವ್ರತಸ್ಯಾಸ್ಯ ಪ್ರಭಾವತಃ ।
ಇತ್ಯೇವಂ ಕಥಿತಾ ವಿಪ್ರ ಕಥಾ ಗೌರೀವ್ರತಸ್ಯ ಚ ॥ ೧೬೮ ॥

ಭಾರತೇ ಚ ವ್ರತಮಿದಂ ಯಾ ಕರೋತಿ ಕುಮಾರಿಕಾ ।
ಸ್ವಾಮಿನಂ ಕೃಷ್ಣತುಲ್ಯಂ ಚ ಸಾ ಪ್ರಾಪ್ನೋತಿ ನ ಸಂಶಯಃ ॥ ೧೬೯ ॥

॥ ಶ್ರೀ ನಾರಾಯಣ ಉವಾಚ ॥

ಏವಂ ವ್ರತಂ ಚ ಚಕ್ರುಸ್ತಾ ಯಾವನ್ಮಾಸಂ ಚ ಗೋಪಿಕಾಃ ।
ಪೂರ್ವಸ್ತೋತ್ರೇಣ ತಾಂ ದೇವೀಂ ತುಷ್ಟುವುಶ್ಚ ದಿನೇದಿನೇ ॥ ೧೭೦ ॥

ಸಮಾಪ್ತಿದಿವಸೇ ಗೋಪ್ಯೋ ವ್ರತಂ ಕೃತ್ವಾ ಮುದಾನ್ವಿತಾಃ ।
ಕಣ್ವಶಾಖೋಕ್ತಸ್ತೋತ್ರೇಣ ತುಷ್ಟುವುಃ ಪರಮೇಶ್ವರೀಂ ॥ ೧೭೧ ॥

---

೧೬೭. ವಸಿಷ್ಠಮಹರ್ಷಿಯು ಈ ವ್ರತವನ್ನು ಭೂಮಂಡಲದಲ್ಲಿ ಪ್ರಚಾರಗೊಳಿಸಿದನು. ರಾಧಾದೇವಿಯು ಈ ವ್ರತವನ್ನಾಚರಿಸಿ ಶ್ರೀಕೃಷ್ಣನನ್ನು ಪ್ರಾಣಕಾಂತನನ್ನಾಗಿ ಪಡೆದಳು.

೧೬೮. ಗೋಪಾಂಗನೆಯರೂ ಕೂಡ ಈ ವ್ರತದ ಪ್ರಭಾವದಿಂದಲೇ ಶ್ರೀಕೃಷ್ಣನನ್ನು ಪ್ರಾಣಪ್ರಿಯನನ್ನಾಗಿ ಪಡೆದರು. ಎಲೈ ದ್ವಿಜೋತ್ತಮನೇ, ಈ ರೀತಿಯಾಗಿ ಗೌರೀವ್ರತದ ಕಥೆಯನ್ನು ನಿನಗೆ ನಿರೂಪಿಸಿದೆನು.

೧೬೯. ಭರತಖಂಡದಲ್ಲಿ ಈ ವ್ರತವನ್ನು ಭಕ್ತಿಯಿಂದ ಆಚರಿಸುವ ಕುಮಾರಿಯರು ಶ್ರೀಕೃಷ್ಣನಿಗೆ ಸಮಾನನಾದ ಪತಿಯನ್ನು ಪಡೆಯುವುದರಲ್ಲಿ ಸಂಶಯವಿಲ್ಲ.

೧೭೦. ಶ್ರೀನಾರಾಯಣ :—ಈ ರೀತಿಯಾಗಿ ಗೋಪಿಯರೆಲ್ಲರೂ ಒಂದು ತಿಂಗಳುಕಾಲ ಗೌರೀವ್ರತವನ್ನಾಚರಿಸಿ, ಪೂರ್ವೋಕ್ತವಾದ ಸ್ತೋತ್ರದಿಂದ ಆ ದೇವಿಯನ್ನು ಪ್ರತಿದಿನವೂ ಸ್ತುತಿಸಿದರು.

೧೭೧. ಸಮಾಪ್ತಿಯ ದಿವಸ ಆ ಗೋಪಿಯರೆಲ್ಲರೂ ಸಂತೋಷದಿಂದ ವ್ರತವನ್ನಾಚರಿಸಿ, ಕಣ್ವಶಾಖೋಕ್ತವಾದ ಸ್ತೋತ್ರದಿಂದ ಪರಮೇಶ್ವರಿಯನ್ನು ಸ್ತುತಿಸಿದರು.

ಯೇನ ಸ್ತೋತ್ರೇಣ ತಾಂ ಸ್ತುತ್ವಾ ಸೀತಾ ಸತ್ಯಪರಾಯಣಾ ।
ಸದ್ಯಃ ಸಂಪ್ರಾಪ ಕಾಂತಂ ಚ ರಾಮಂ ರಾಜೀವಲೋಚನಂ ॥ ೧೭೨ ॥

॥ ಜಾನಕ್ಯುವಾಚ ॥

ಶಕ್ತಿಸ್ವರೂಪೇ ಸರ್ವೇಷಾಂ ಸರ್ವಾಧಾರೇ ಗುಣಾಶ್ರಯೇ ।
ಸದಾ ಶಂಕರಯುಕ್ತೇ ಚ ಪತಿಂ ದೇಹಿ ನಮೋಽಸ್ತು ತೇ ॥ ೧೭೩ ॥

ಸೃಷ್ಟಿಸ್ಥಿತ್ಯಂತರೂಪೇಣ ಸೃಷ್ಟಿಸ್ಥಿತ್ಯಂತ ಕಾರಿಣಿ ।
ಸೃಷ್ಟಿಸ್ಥಿತ್ಯಂತಬೀಜಾನಾಂ ಬೀಜರೂಪೇ ನಮೋಽಸ್ತು ತೇ ॥ ೧೭೪ ॥

ಸರ್ವಮಂಗಲಮಾಂಗಲ್ಯೇ ಸರ್ವಮಂಗಲಸಂಯುತೇ ।
ಸರ್ವಮಂಗಲಬೀಜೇ ಚ ನಮಸ್ತೇ ಸರ್ವಮಂಗಲೇ ॥ ೧೭೫ ॥

---

೧೭೨. ಅದೇ ಸ್ತೋತ್ರದಿಂದಲೇ ಸತ್ಯಪರಾಯಣೆಯಾದ ಸೀತಾದೇವಿಯೂ ಕೂಡ ಪರಮೇಶ್ವರಿಯನ್ನು ಸ್ತುತಿಸಿ, ಕಮಲದಳಾಯತಾಕ್ಷನಾದ ಶ್ರೀರಾಮನನ್ನು ಕಾಂತನನ್ನಾಗಿ ಪಡೆದಳು.

೧೭೩. ಜಾನಕಿ:— ಸರ್ವರಿಗೂ ಶಕ್ತಿಸ್ವರೂಪಿಣಿಯೂ, ಸರ್ವಾಧಾರಳೂ, ಗುಣಾಶ್ರಯಳೂ, ಸರ್ವದಾ ಶಂಕರನೊಡಗೂಡಿದವಳೂ ಆದ ದೇವಿಯೇ, ನಿನಗೆ ನಮಿಸುವೆನು. ನನಗೆ ಪತಿಭಿಕ್ಷೆಯನ್ನು ನೀಡು.

೧೭೪. ಸೃಷ್ಟಿ, ಸ್ಥಿತಿ ಮತ್ತು ಲಯರೂಪದಿಂದಿದ್ದು ಸೃಷ್ಟಿಸ್ಥಿತಿಲಯಗಳನ್ನು ಮಾಡುವ, ಸೃಷ್ಟಿಸ್ಥಿತಿಲಯಗಳಿಗೆ ಬೀಜರೂಪರಾದ ಬ್ರಹ್ಮಾದಿ ತ್ರಿಮೂರ್ತಿಗಳಿಗೂ ಬೀಜಸ್ವರೂಪಿಣಿಯಾದ ನಿನಗೆ ನಮಿಸುವೆನು.

೧೭೫. ಸರ್ವಮಂಗಳಗಳಿಗೂ ಮಂಗಳಸ್ವರೂಪಳೂ, ಸರ್ವಮಂಗಳ ಸಮನ್ವಿತಳೂ, ಸರ್ವಮಂಗಳಕಾರಣಳೂ ಆದ ಸರ್ವಮಂಗಳೆಯೇ, ನಿನಗೆ ವಂದಿಸುವೆನು.

ಹೇ ಗೌರಿ ಪತಿಮರ್ಮಜ್ಞೇ ಪತಿವ್ರತಪರಾಯಣೇ ।
ಪತಿವ್ರತೇ ಪತಿರತೇ ಪತಿಂ ದೇಹಿ ನಮೋಽಸ್ತು ತೇ ॥ ೧೭೬ ॥

ಸರ್ವಪ್ರಿಯೇ ಸರ್ವಬೀಜೇ ಸರ್ವಾಶುಭವಿನಾಶಿನಿ ।
ಸರ್ವೇಶೇ ಸರ್ವಜನಕೇ ನಮಸ್ತೇ ಶಂಕರಪ್ರಿಯೇ ॥ ೧೭೭ ॥

ಪರಮಾತ್ಮಸ್ವರೂಪೇ ಚ ನಿತ್ಯರೂಪೇ ಸನಾತನಿ ।
ಸಾಕಾರೇ ಚ ನಿರಾಕಾರೇ ಸರ್ವರೂಪೇ ನಮೋಽಸ್ತು ತೇ ॥ ೧೭೮ ॥

ಕ್ಷುತ್ತೃಷ್ಣೇಚ್ಛಾ ದಯಾ ಶ್ರದ್ಧಾ ನಿದ್ರಾ ತಂದ್ರಾ ಸ್ಮೃತಿಃ ಕ್ಷಮಾ ।
ಏತಾಸ್ತವ ಕಲಾಃ ಸರ್ವಾ ನಾರಾಯಣಿ ನಮೋಽಸ್ತು ತೇ ॥ ೧೭೯ ॥

ಲಜ್ಜಾ ಮೇಧಾ ತುಷ್ಟಿಪುಷ್ಟೀ ಶಾಂತಿಸಂಪತ್ತಿವೃದ್ಧಯಃ ।
ಏತಾಸ್ತವ ಕಲಾಃಸರ್ವಾಃ ಶರ್ವರೂಪೇ ನಮೋಽಸ್ತು ತೇ ॥ ೧೮೦ ॥

---

೧೭೬. ಪತಿಯ ಮರ್ಮವನ್ನು ತಿಳಿದವಳೂ, ಪತಿವ್ರತೆಯರಲ್ಲಿ ಪ್ರೀತಿಯುಳ್ಳವಳೂ, ಪತಿವ್ರತೆಯೂ, ಪತಿಯಲ್ಲಿ ಅನುರಕ್ತಳೂ ಆದ ಎಲೌ ಗೌರಿಯೇ, ನಿನಗೆ ನಮಿಸುವೆನು. ನನಗೆ ಪತಿಭಿಕ್ಷೆಯನ್ನು ನೀಡು.

೧೭೭. ಸರ್ವಪ್ರಿಯಳೂ, ಸರ್ವಕಾರಣಳೂ, ಸರ್ವಾಶುಭವಿನಾಶಿನಿಯೂ, ಸರ್ವೇಶ್ವರಿಯೂ, ಸರ್ವಜಗನ್ಮಾತೆಯೂ ಆದ ಶಂಕರಪ್ರಿಯಳೇ, ನಿನಗೆ ನಮಸ್ಕರಿಸುವೆನು.

೧೭೮. ಪರಮಾತ್ಮಸ್ವರೂಪಿಣಿಯೂ, ನಿತ್ಯರೂಪಳೂ, ಸನಾತನಿಯೂ, ಸಾಕಾರಳೂ, ನಿರಾಕಾರಳೂ ಆದ ಸರ್ವರೂಪಳಿಗೆ ಸಾಷ್ಟಾಂಗವೆರಗುವೆನು.

೧೭೯. 'ಕ್ಷುತ್', ತೃಷ್ಣೆ, ಇಚ್ಛೆ. ದಯೆ, ಶ್ರದ್ಧೆ, ನಿದ್ರೆ, ತಂದ್ರೆ, ಸ್ಮೃತಿ ಮತ್ತು ಕ್ಷಮಾ' ರೂಪವಾದ ಸಕಲ ಶಕ್ತಿಗಳೂ ಯಾವದೇವಿಯ ಕಲಾಮಾತ್ರವೋ ಅಂಥ ನಾರಾಯಣಿಗೆ ನಮಿಸುವೆನು

೧೮೦. 'ಲಜ್ಜೆ, ಮೇಧೆ, ತುಷ್ಟಿ, ಪುಷ್ಟಿ, ಶಾಂತಿ, ಸಂಪತ್ತಿ ಮತ್ತು ವೃದ್ಧಿ' ಮುಂತಾದ ಶಕ್ತಿಗಳು ಯಾರ ಕಲಾಮಾತ್ರವೋ ಸರ್ವರೂಪಳಾದ ಆ ದೇವಿಗೆ ನಮಸ್ಕರಿಸುವೆನು.

ದೃಷ್ಟಾಽದೃಷ್ಟಸ್ವರೂಪೇ ಚ ತಯೋರ್ಬೀಜಫಲಪ್ರದೇ ।
ಸರ್ವಾನಿರ್ವಚನೀಯೇ ಚ ಮಹಾಮಾಯೇ ನಮೋಽಸ್ತು ತೇ　　॥ ೧೮೧ ॥

ಶಿವೇ ಶಂಕರಸೌಭಾಗ್ಯಯುಕ್ತೇ ಸೌಭಾಗ್ಯದಾಯಿನಿ ।
ಹರಿಂ ಕಾಂತಂ ಚ ಸೌಭಾಗ್ಯಂ ದೇಹಿ ದೇವಿ ನಮೋಽಸ್ತು ತೇ　　॥ ೧೮೨ ॥

ಸ್ತೋತ್ರೇಣಾನೇನ ಯಾಃ ಸ್ತುತ್ವಾ ಸಮಾಪ್ತಿದಿವಸೇ ಶಿವಾಂ ।
ನಮಂತಿ ಪರಯಾ ಭಕ್ತ್ಯಾ ತಾ ಲಭಂತೇ ಹರಿಂ ಪತಿಂ　　॥ ೧೮೩ ॥

ಇಹ ಕಾಂತಸುಖಂ ಭುಕ್ತ್ವಾ ಪತಿಂ ಪ್ರಾಪ್ಯ ಪರಾತ್ಪರಂ ।
ದಿವ್ಯಂ ಸ್ಯಂದನಮಾರುಹ್ಯ ಯಾತ್ಯಂತೇ ಕೃಷ್ಣಸನ್ನಿಧಿಂ　　॥ ೧೮೪ ॥

॥ ಇತಿ ಬ್ರಹ್ಮವೈವರ್ತಪುರಾಣೇ ಸೀತಾಕೃತಂ ಪಾರ್ವತೀಸ್ತೋತ್ರಂ ॥

---

೧೮೧. ದೃಷ್ಟಾದೃಷ್ಟಸ್ವರೂಪಳೂ, ದೃಶ್ಯಾದೃಶ್ಯ ವಸ್ತುಗಳ ಬೀಜರೂಪಳೂ, ಅವುಗಳಿಗೆ ಫಲದಾಯಕಳೂ, ಸರ್ವರಿಂದಲೂ ಅನಿರ್ವಚನೀಯಳೂ ಆದ ಮಹಾಮಾಯೆಗೆ ನಮಸ್ಕರಿಸುವೆನು.

೧೮೨. ಶಂಕರನ ಸೌಭಾಗ್ಯದಿಂದ ಕೂಡಿದವಳೇ, ಸೌಭಾಗ್ಯಪ್ರದಳೇ, ಶಿವೆಯೇ, ನಿನಗೆ ನಮಿಸುವೆನು. ಶ್ರೀಹರಿಯು ನನಗೆ ಕಾಂತನಾಗುವಂತೆ ಅನುಗ್ರಹಿಸಿ ಪತಿಸೌಭಾಗ್ಯವನ್ನು ಕೊಡು.

೧೮೩. ವ್ರತಸಮಾಪ್ತಿಯ ದಿವಸ ಈ ಸ್ತೋತ್ರವನ್ನು ಪಠಿಸಿ ಪರಮ ಭಕ್ತಿಯಿಂದ ದೇವಿಗೆ ನಮಸ್ಕರಿಸುವ ಸ್ತ್ರೀಯರು ಶ್ರೀಹರಿಯನ್ನು ಕಾಂತನನ್ನಾಗಿ ಪಡೆಯುವರು.

೧೮೪. ಇಂತು ಪರಾತ್ಪರನಾದ ಪತಿಯನ್ನು ಪಡೆದು ಇಹಲೋಕದಲ್ಲಿ ಕಾಂತನ ಸುಖವನ್ನನುಭವಿಸಿ, ಅಂತ್ಯಕಾಲನಲ್ಲಿ ದಿವ್ಯರಥವನ್ನೇರಿ ಶ್ರೀಕೃಷ್ಣನ ಸನ್ನಿಧಿಗೆ ತೆರಳುವರು.

ಇಲ್ಲಿಗೆ ಬ್ರಹ್ಮವೈವರ್ತಮಹಾಪುರಾಣದಲ್ಲಿ ಸೀತಾದೇವಿಕೃತವಾದ
ಪಾರ್ವತೀ ಸ್ತೋತ್ರವು ಮುಗಿದುದು.

ಸಮಾಪ್ತಿದಿವಸೇ ರಾಧಾ ಗೋಪೀಭಿಃ ಸಹ ಸಂಯುತಾ ।
ದೇವೀಂ ಪ್ರಣಮ್ಯ ಸ್ತುತ್ವಾ ಚ ವ್ರತಂ ಪೂರ್ಣಂ ಚಕಾರ ಹ ॥ ೧೮೫ ॥

ಗೋಸಹಸ್ರಂ ಬ್ರಾಹ್ಮಣೇಭ್ಯಃ ಸುವರ್ಣಶತಕಂ ಮುದಾ ।
ವಿಪ್ರಾಯ ದಕ್ಷಿಣಾಂ ದತ್ವಾ ಸ್ವಗೃಹಂ ಗಂತುಮುದ್ಯತಾ ॥ ೧೮೬ ॥

ಬ್ರಾಹ್ಮಣಾನಾಂ ಸಹಸ್ರಂ ಚ ಭೋಜಯಾಮಾಸ ಸಾದರಂ ।
ವಾದ್ಯಾನಿ ವಾದಯಾಮಾಸ ಭಿಕ್ಷುಕಾಯ ಧನಂ ದದೌ ॥ ೧೮೭ ॥

ಏತಸ್ಮಿನ್ನಂತರೇ ತತ್ರ ದುರ್ಗಾ ದುರ್ಗತಿನಾಶಿನೀ ।
ಆವಿರ್ಬಭೂವ ಗಗನಾಜ್ಜ್ವಲಂತೀ ಬ್ರಹ್ಮತೇಜಸಾ ॥ ೧೮೮ ॥

ಈಷದ್ಧಾಸ್ಯಪ್ರಸನ್ನಾಸ್ಯಾ ಯೋಗಿನೀಶತಸಂಯುತಾ ।
ಸಿಂಹಸ್ಥಾ ಚ ದಶಭುಜಾ ರತ್ನಾಲಂಕಾರಭೂಷಿತಾ ॥ ೧೮೯ ॥

---

೧೮೫. ವ್ರತಸಮಾಪ್ತಿಯ ದಿವಸ ರಾಧಾದೇವಿಯು ಇತರ ಗೋಪಿಯರೊಡಗೂಡಿ, ದೇವಿಯನ್ನು ಸ್ತುತಿಸಿ ನಮಿಸಿ ವ್ರತವನ್ನು ಸಂಪೂರ್ಣಗೊಳಿಸಿದಳು.

೧೮೬. ಅನಂತರ ಬ್ರಾಹ್ಮಣರಿಗೆ ಸಾವಿರಾರು ಗೋವುಗಳನ್ನೂ, ನೂರಾರು ಸುವರ್ಣನಾಣ್ಯಗಳನ್ನೂ ದಾನಮಾಡಿ, ಪುರೋಹಿತನಿಗೆ ದಕ್ಷಿಣೆಯನ್ನು ಕೊಟ್ಟು ತನ್ನ ಮನೆಗೆ ಹೊರಡಲನುವಾದಳು.

೧೮೭. ಸಾವಿರಾರು ಬ್ರಾಹ್ಮಣರನ್ನು ಭೋಜನದಿಂದ ತೃಪ್ತಿಪಡಿಸಿ ಮಂಗಳ ವಾದ್ಯಗಳನ್ನು ಮೊಳಗಿಸಿ, ಭಿಕ್ಷುಕರಿಗೆ ಯಥೇಚ್ಛವಾಗಿ ದ್ರವ್ಯದಾನಮಾಡಿದಳು.

೧೮೮. ಈ ಸಮಯಕ್ಕೆ ಸರಿಯಾಗಿ ದುರ್ಗತಿನಾಶಿನಿಯಾದ ದುರ್ಗಾದೇವಿಯು, ಬ್ರಹ್ಮ ತೇಜಸ್ಸಿನಿಂದ ಪ್ರಜ್ವಲಿಸುತ್ತ ಆಕಾಶದಲ್ಲಿ ಆವಿರ್ಭವಿಸಿದಳು.

೧೮೯ ಮಂದಹಾಸದಿಂದ ಪ್ರಸನ್ನಮುಖಿಯಾದ ಆ ದೇವಿಯು ಹತ್ತು ಭುಜಗಳಿಂದ ಕೂಡಿ ರತ್ನಾಲಂಕಾರಭೂಷಿತಳಾಗಿ, ನೂರಾರು ಯೋಗಿನಿಯರಿಂದ ಪರಿವೃತಳಾಗಿ ಸಿಂಹದ ಮೇಲೆ ಕುಳಿತಿದ್ದಳು.

ಶಾತಕುಂಭಮಯಾದ್ದಿವ್ಯಾದ್ರತ್ನಸಾರ ಪರಿಚ್ಛದಾತ್ ।
ಅವರುಹ್ಯ ರಥಾತ್ತೂರ್ಣಮಾಲಿಂಗ್ಯೋರಸಿ ರಾಧಿಕಾಂ ॥ ೧೯೦ ॥

ದೃಷ್ಟ್ವಾ ಗೋಪಾಂಗನಾ ದೇವೀಂ ಪ್ರಣೇಮುಶ್ಚ ಮುದಾನ್ವಿತಾಃ ।
ಆಶಿಷಂ ಯುಯುಜೇ ದುರ್ಗಾ ವಾಂಛಾಸಿದ್ಧಿರ್ಭವತ್ವಿತಿ ॥ ೧೯೧ ॥

ಗೋಪಿಕಾಭ್ಯೋ ವರಂದತ್ವಾ ತಾಃ ಸಂಭಾಷ್ಯ ಚ ಸಾದರಂ ।
ಉವಾಚ ರಾಧಿಕಾಂ ದುರ್ಗಾ ಸ್ಮೇರಾನನಸರೋರುಹಾ ॥ ೧೯೨ ॥

॥ ಪಾರ್ವತ್ಯುವಾಚ ॥

ರಾಧೇ ಸರ್ವೇಶ್ವರಪ್ರಾಣಾದಧಿಕೇ ಜಗದಂಬಿಕೇ ।
ವ್ರತಂ ತೇ ಲೋಕಶಿಕ್ಷಾರ್ಥಂ ಮಾಯಾಮಾನುಷರೂಪಿಣಿ ॥ ೧೯೩ ॥

---

೧೯೦. ಶ್ರೇಷ್ಠರತ್ನಗಳನ್ನು ಮೆಟ್ಟಿರುವ ಸುವರ್ಣವಿಕಾರವಾದ ದಿವ್ಯ ರಥದಿಂದಿಳಿದು ರಾಧಾದೇವಿಯನ್ನು ತನ್ನ ಎದೆಗೆ ಅಪ್ಪಿಕೊಂಡಳು.

೧೯೧. ಆ ಗೋಪಾಂಗನೆಯರೆಲ್ಲರೂ ದುರ್ಗಾದೇವಿಯನ್ನು ನೋಡಿ ಸಂತೋಷದಿಂದ ನಮಸ್ಕರಿಸಿದರು. ನಿಮ್ಮ ಇಷ್ಟಾರ್ಥವು ಸಿದ್ಧಿಸಲೆಂದು ದೇವಿಯು ಅವರಿಗೆ ಆಶೀರ್ವದಿಸಿದಳು.

೧೯೨. ಈ ರೀತಿ ಗೋಪಿಕಾ ಸ್ತ್ರೀಯರಿಗೆ ವರವನ್ನು ಕೊಟ್ಟು, ಅವರನ್ನೆಲ್ಲ ಆದರದಿಂದ ಮಾತನಾಡಿಸಿದ ನಂತರ ದುರ್ಗಾದೇವಿಯು ನಗುಮುಖದಿಂದ ಕೂಡಿದವಳಾಗಿ ರಾಧೆಯನ್ನು ಕುರಿತಿಂತೆಂದಳು.

೧೯೩. ಪಾರ್ವತಿ :—ಸರ್ವೇಶ್ವರನಾದ ಶ್ರೀಕೃಷ್ಣನ ಪ್ರಾಣಕ್ಕಿಂತ ಅಧಿಕಳೂ, ಜಗದಂಬಿಕೆಯೂ ಆದ ಎಲೌ ರಾಧೆಯೇ, ಮಾಯಾಮಾನುಷರೂಪಿಣಿಯಾದ ನೀನು ಲೋಕಶಿಕ್ಷಾರ್ಥವಾಗಿ ವ್ರತವನ್ನಾಚರಿಸಿದೆ.

ಗೋಲೋಕನಾಥಂ ಗೋಲೋಕಂ ಶ್ರೀ ಶೈಲಂ ಗಿರಿಜಾತಟಂ ।
ಶ್ರೀರಾಸಮಂಡಲಂ ದಿವ್ಯಂ ಬೃಂದಾವನ ಮನೋಹರಂ ॥ ೧೯೪ ॥

ಚರಿತಂ ರತಿಚೋರಸ್ಯ ಸ್ತ್ರೀಣಾಂ ಮಾನಸಹಾರಕಂ ।
ವಿದುಷಃ ಕಾಮಶಾಸ್ತ್ರಾಣಾಂ ಕಿಂಸ್ವಿತ್ಸ್ಮರಸಿ ಸುಂದರಿ ॥ ೧೯೫ ॥

ಶ್ರೀಕೃಷ್ಣಾರ್ಧಾಂಗಸಂಭೂತಾ ಕೃಷ್ಣತುಲ್ಯಾ ಚ ತೇಜಸಾ ।
ತವಾಂಶಕಲಯಾ ದೇವ್ಯಃ ಕಥಂ ತ್ವಂ ಮಾನುಷೀ ಸತೀ ॥ ೧೯೬ ॥

ಭವತೀ ಚ ಹರೇಃ ಪ್ರಾಣಾ ಭವತ್ಯಾಶ್ಚ ಹರಿಃ ಸ್ವಯಂ ।
ವೇದೇ ನಾಸ್ತಿ ದ್ವಯೋರ್ಭೇದಃ ಕಥಂ ತ್ವಂ ಮಾನುಷೀ ಸತೀ ॥ ೧೯೭ ॥

ಕೃಷ್ಣಾಜ್ಞಯಾ ಚ ತ್ವಂ ದೇವಿ ಗೋಪೀರೂಪಂ ವಿಧಾಯ ಚ ।
ಆಗತಾಸಿ ಮಹೀಂ ಶಾಂತೇ ಕಥಂ ತ್ವಂ ಮಾನುಷೀ ಸತೀ ॥ ೧೯೮ ॥

೧೯೪-೧೯೫. ಎಲೌ ಸುಂದರಿಯೇ, ನೀನು ಗೋಲೋಕವನ್ನೂ, ಗೋಲೋಕನಾಥನನ್ನೂ, ಶ್ರೀಶೈಲವನ್ನೂ, ಗಿರಿಜಾತಟವನ್ನೂ, ದಿವ್ಯವಾದ ರಾಸಮಂಡಲವನ್ನೂ ಮನೋಹರವಾದ ಬೃಂದಾವನವನ್ನೂ, ಕಾಮಶಾಸ್ತ್ರವಿಶಾರದನೂ ಸ್ತ್ರೀಯರ ಮನಸ್ಸನ್ನು ಅಪಹರಿಸುವವನೂ ರತಿಚೋರನೂ ಆದ ಶ್ರೀಕೃಷ್ಣನ ಚರಿತ್ರೆಯನ್ನೂ ನೆನಪಿಟ್ಟುಕೊಂಡಿರುವೆಯಾ ?

೧೯೬. ಶ್ರೀಕೃಷ್ಣನ ಅರ್ಧಾಂಗದಿಂದ ಸಂಭೂತಳೂ, ತೇಜಸ್ಸಿನಲ್ಲಿ ಶ್ರೀಕೃಷ್ಣನಿಗೆ ಸಮಾನಳೂ ಆದ ನಿನ್ನ ಅಂಶ ಮತ್ತು ಕಲೆಯಿಂದ ಇತರ ದೇವಿಯರು ಜನಿಸಿರುವಾಗ ನೀನು ಮನುಷ್ಯಸಾಮಾನ್ಯಳೆಂದರೇನು ?

೧೯೭. ನೀನು ಶ್ರೀಹರಿಯ ಪ್ರಾಣರೂಪಳೂ, ಶ್ರೀಹರಿಯು ನಿನ್ನ ಪ್ರಾಣರೂಪನೂ ಆಗಿರುವುದರಿಂದ ನಿಮ್ಮಿಬ್ಬರಿಗೂ ಭೇದವಿಲ್ಲವೆಂದು ವೇದದಲ್ಲಿ ನಿರೂಪಿತವಾಗಿರುವಾಗ ನೀನು ಮನುಷ್ಯಸ್ತ್ರೀಯೆಂದರೇನು ?

೧೯೮. ಎಲೌ ದೇವಿಯೇ, ನೀನು ಶ್ರೀಕೃಷ್ಣನ ಆಜ್ಞೆಯಂತೆ ಗೋಪಿರೂಪಧಾರಿಣಿಯಾಗಿ ಭೂಲೋಕಕ್ಕೆ ಬಂದಿರುವುದರಿಂದ ನೀನು ಮನುಷ್ಯಸ್ತ್ರೀಮಾತ್ರಳಲ್ಲ.

ಷಷ್ಟಿವರ್ಷಸಹಸ್ರಾಣಿ ಬ್ರಹ್ಮಾ ತಪ್ತ್ವಾ ತಪಃ ಪುರಾ ।
ನ ತೇ ದದರ್ಶ ಪಾದಾಬ್ಜಂ ಕಥಂ ತ್ವಂ ಮಾನುಷೀ ಸತೀ ॥ ೧೯೯ ॥

ಸುಯಜ್ಞೋ ಹಿ ಮುನಿಶ್ರೇಷ್ಠೋ ಮನುವಂಶಸಮುದ್ಭವಃ ।
ತ್ವತ್ತೋ ಜಗಾಮ ಗೋಲೋಕಂ ಕಥಂ ತ್ವಂ ಮಾನುಷೀ ಸತೀ ॥ ೨೦೦ ॥

ತ್ರಿಃಸಪ್ತಕೃತ್ವೋ ನಿರ್ಭೂಪಾಂ ಚಕಾರ ಪೃಥಿವೀಂ ವಿಭುಃ ।
ತವ ಮಂತ್ರೇಣ ಕವಚಾತ್ಕಥಂ ತ್ವಂ ಮಾನುಷ ಸತೀ ॥ ೨೦೧ ॥

ಶಂಕರಾತ್ಪ್ರಾಪ್ಯ ತ್ವನ್ಮಂತ್ರಂ ಸಿದ್ಧಂ ಕೃತ್ವಾ ಚ ಪುಷ್ಕರೇ ।
ಜಘಾನ ಕಾರ್ತವೀರ್ಯಂ ಚ ಕಥಂ ತ್ವಂ ಮಾನುಷೀ ಸತೀ ॥ ೨೦೨ ॥

ಬಭಂಜ ದರ್ಪಾದ್ದಂತಂ ಚ ಗಣೇಶಸ್ಯ ಮಹಾತ್ಮನಃ ।
ತ್ವತ್ತೋ ನಾಮ ಭಯಂ ಚಕ್ರೇ ಕಥಂ ತ್ವಂ ಮಾನುಷೀ ಸತೀ ॥ ೨೦೩ ॥

---

೧೯೯. ಪೂರ್ವದಲ್ಲಿ ಬ್ರಹ್ಮನು ಅರವತ್ತುಸಾವಿರ ವರ್ಷ ತಪಸ್ಸುಮಾಡಿದರೂ ನಿನ್ನ ಪಾದಕಮಲಗಳ ಸಂದರ್ಶನವನ್ನು ಪಡೆಯಲಾಗಲಿಲ್ಲ. ಅಂಥ ನೀನು ಮನುಷ್ಯಸಾಮಾನ್ಯಳೇ ?

೨೦೦. ಮನುವಂಶೋತ್ಪನ್ನನಾದ ಸುಯಜ್ಞನೆಂಬ ಮುನಿಶ್ರೇಷ್ಠನು ನಿನ್ನ ಅನುಗ್ರಹದಿಂದ ಗೋಲೋಕಕ್ಕೆ ತೆರಳಿದನು. ಇಂಥ ಮಹಿಮೆಯುಳ್ಳ ನೀನು ಮನುಷ್ಯಸಾಮಾನ್ಯಳೇ ?

೨೦೧. ಪರಶುರಾಮನು ನಿನ್ನ ಕವಚ ಮತ್ತು ಮಂತ್ರದ ಪ್ರಭಾವದಿಂದ ಇಪ್ಪತ್ತೊಂದು ಸಾರಿ ಭೂಪ್ರದಕ್ಷಿಣೆಮಾಡಿ ಕ್ಷತ್ರಿಯರನ್ನು ನಿರ್ಮೂಲಗೊಳಿಸಿದನು. ಅಂಥ ಪ್ರಭಾವಶಾಲಿನಿಯಾದ ನೀನು ಮನುಜಸಾಮಾನ್ಯಳೇ ?

೨೦೨. ಪರಶುರಾಮನು ಶಂಕರನಿಂದ ನಿನ್ನ ಮಂತ್ರೋಪದೇಶವನ್ನು ಪಡೆದು, ಪುಷ್ಕರಕ್ಷೇತ್ರದಲ್ಲಿ ಜಪಿಸಿ ಸಿದ್ಧಿಯನ್ನು ಹೊಂದಿ ಕಾರ್ತವೀರ್ಯನನ್ನು ಸಂಹರಿಸಿದನು. ಅಂಥ ಮಹಾಮಹಿಮಳಾದ ನೀನು ಯೋಷಿತ್ಸಾಮಾನ್ಯಳೇ ?

೨೦೩. ದರ್ಪಾಂಧನಾದ ಪರಶುರಾಮನು ಮಹಾತ್ಮನಾದ ಗಣಪತಿಯ ದಂತವನ್ನು ಮುರಿದರೂ, ನಿನಗೆ ಹೆದರಿ ನಡುಗಿದನು. ಅಂಥ ನೀನು ಸ್ತ್ರೀಸಾಮಾನ್ಯಳೇ ?

ಮಯ್ಯುದ್ಧತಾಯಾಂ ಕೋಪೇನ ಭಸ್ಮಸಾತ್ಕರ್ತುಮೀಶ್ವರಃ ।
ರರಕ್ಷಾಗತ್ಯ ಮತ್ಪ್ರೀತ್ಯಾ ಕಥಂ ತ್ವಂ ಮಾನುಷೀ ಸತೀ ॥ ೨೦೪ ॥

ಕಲ್ಪೇ ಕಲ್ಪೇ ತವ ಪತಿಃ ಕೃಷ್ಣೋ ಜನ್ಮನಿ ಜನ್ಮನಿ ।
ವ್ರತಂ ಲೋಕಹಿತಾರ್ಥಾಯ ಜಗನ್ಮಾತಸ್ತ್ವಯಾ ಕೃತಂ ॥ ೨೦೫ ॥

ಅಹೋ ಶ್ರೀದಾಮಶಾಪೇನ ಭಾರಾವತರಣೇನ ಚ ।
ಭೂಮೌ ತವಾಧಿಷ್ಠಾನಂ ಚ ಕಥಂ ತ್ವಂ ಮಾನುಷೀ ಸತೀ ॥ ೨೦೬ ॥

ಅಯೋನಿಸಂಭವಾ ತ್ವಂ ಚ ಜನ್ಮಮೃತ್ಯುಜರಾಪಹಾ ।
ಕಲಾವತೀ ಸುತಾ ಪುಣ್ಯಾ ಕಥಂ ತ್ವಂ ಮಾನುಷೀ ಸತೀ ॥ ೦೦೭ ॥

---

೨೦೪. ನಾನು ಕೋಪದಿಂದ ಉದ್ಧತಳಾಗಿದ್ದಾಗ ಈಶ್ವರನು ನನ್ನನ್ನು ಬೂದಿಮಾಡುವೆನೆಂದು ಬರಲು ಆಗ ನೀನು ಬಂದು ನನ್ನನ್ನು ಪ್ರೀತಿಯಿಂದ ಕಾಪಾಡಿದೆ. ಅಂಥ ಸರ್ವೇಶ್ವರಿಯಾದ ನೀನು ಮನುಜ ಸಾಮಾನ್ಯಳೇ ?

೨೦೫. ಪ್ರತಿಕಲ್ಪದಲ್ಲೂ, ಪ್ರತಿಯೊಂದು ಅವತಾರದಲ್ಲೂ ಶ್ರೀಕೃಷ್ಣನು ನಿನಗೆ ಪತಿಯಾಗಿರುವನು. ಎಲೌ ಜಗನ್ಮಾತೆಯೇ, ನೀನು ಈಗ ಮಾಡಿದ ವ್ರತವು ಲೋಕಕಲ್ಯಾಣಕ್ಕಾಗಿಯೇ ಹೊರತು ಸ್ವಾರ್ಥಕ್ಕಾಗಿಯಲ್ಲ.

೨೦೬. ಶ್ರೀದಾಮನ ಶಾಪದಿಂದ ನೀನು ಭೂಭಾರವನ್ನಿಳುಹಲು ಮಾನುಷ ಸ್ತ್ರೀಯಾಗಿ ಭೂಮಿಯಲ್ಲಿ ಅವತರಿಸಿರುವೆಯೇ ಹೊರತು ನೀನು ನಿಜವಾಗಿಯೂ ಮನುಷ್ಯಸ್ತ್ರೀಯಲ್ಲ.

೨೦೭. ಅಯೋನಿಸಂಭವಳೂ, ಜನ್ಮಮೃತ್ಯುಜರಾಪರಿಹಾರಿಣಿಯೂ, ಪುಣ್ಯತಮಳೂ ಆದ ನೀನು ಕಲಾವತಿಯ ಸುತೆಯೆನಿಸಿರುವೆಯೇ ಹೊರತು, ನೀನು ನಿಜವಾಗಿಯೂ ಮನುಷ್ಯಸ್ತ್ರೀಯಲ್ಲ.

ತ್ರಿಷು ಮಾಸೇಷ್ವತೀತೇಷು ಮಧುಮಾಸೇ ಮನೋಹರೇ ।
ನಿರ್ಮಲೇ ನಿರ್ಜನೇ ರಾತ್ರೌ ಸುಯೋಗ್ಯೇ ರಾಸಮಂಡಲೇ　　|| ೨೦೮ ||

ಸಮಾಗಾಭಿರ್ಗೋಪಿಕಾಭಿಶ್ಚ ಸಾರ್ಧಂ ವೃಂದಾವನೇ ವನೇ ।
ಹರ್ಷೇಣ ಹರಿಣಾ ಸಾರ್ಧಂ ಕ್ರೀಡಾ ತೇ ಭವಿತಾ ಸತಿ　　|| ೨೦೯ ||

ವಿಧಾತ್ರಾ ಲಿಖಿತಾ ಕ್ರೀಡಾ ಕಲ್ಪೇ ಕಲ್ಪೇ ಮಹೀತಲೇ ।
ತವ ಶ್ರೀಹರಿಣಾ ಸಾರ್ಧಂ ಕೇನ ರಾಧೇ ನಿವಾರ್ಯತೇ　　|| ೨೧೦ ||

ಯಥಾ ಸೌಭಾಗ್ಯಯುಕ್ತಾಹಂ ಹರಸ್ಯ ಶ್ರೀಹರಿಪ್ರಿಯೇ ।
ತಥಾ ಸೌಭಾಗ್ಯಯುಕ್ತಾ ತ್ವಂ ಭವ ಕೃಷ್ಣಸ್ಯ ಸುಂದರಿ　　|| ೨೧೧ ||

ಯಥಾ ಕ್ಷೀರೇಷು ಧಾವಲ್ಯಂ ಯಥಾ ವಹ್ನೌ ಚ ದಾಹಿಕಾ ।
ಭುವಿ ಗಂಧೋ ಜಲೇ ಶೈತ್ಯಂ ತಥಾ ಕೃಷ್ಣೇ ಸ್ಥಿತಿಸ್ತವ　　|| ೨೧೨ ||

೨೦೮–೨೦೯. ಎಲೌ ಸತೀಮಣಿಯೇ, ಇನ್ನು ಮೂರು ತಿಂಗಳು ಕಳೆದ ನಂತರ ಮನೋಹರವಾದ ಮಧುಮಾಸದಲ್ಲಿ, ಬೆಳದಿಂಗಳಿನಿಂದ ನಿರ್ಮಲವೂ, ನಿರ್ಜನವೂ ಆದ ರಾತ್ರಿಯಲ್ಲಿ ವೃಂದಾವನದ ಸುಸಜ್ಜಿತವಾದ ರಾಸಮಂಡಲದಲ್ಲಿ ನಿನಗೂ, ನಿನ್ನ ಸಖಿಯರಾದ ಗೋಪಿಯರಿಗೂ ಶ್ರೀಕೃಷ್ಣನೊಡನೆ ಸಮಾಗಮವೂ, ರತಿಸುಖವೂ ದೊರೆಯುವುದು.

೨೧೦. ಎಲೌ ರಾಧೆಯೇ, ಪ್ರತಿಕಲ್ಪದಲ್ಲೂ ನೀನು ಭೂಮಂಡಲದಲ್ಲಿ ಅವತರಿಸಿ ಶ್ರೀಹರಿಯೊಡನೆ ಕ್ರೀಡಿಸಬೇಕೆಂದು ಬರೆದಿರುವ ವಿಧಿಲಿಖಿತವನ್ನು ಯಾರು ತಾನೇ ಅಳಿಸಬಲ್ಲರು?

೨೧೧. ಎಲೌ ಹರಿಪ್ರಿಯಳೇ, ನಾನು ಹರನಿಂದ ಹೇಗೆ ಸೌಭಾಗ್ಯವತಿಯಾಗಿರುವೆನೋ ಹಾಗೆ ಸುಂದರಿಯಾದ ನೀನು ಶ್ರೀಕೃಷ್ಣನಿಂದ ಸೌಭಾಗ್ಯವತಿಯಾಗುವೆ.

೨೧೨. ಹಾಲಿನಲ್ಲಿ ಬಿಳುಪೂ, ಅಗ್ನಿಯಲ್ಲಿ ದಾಹಶಕ್ತಿಯೂ, ಭೂಮಿಯಲ್ಲಿ ಗಂಧವೂ, ನೀರಿನಲ್ಲಿ ಶೈತ್ಯವೂ ಸಮವಾಯಸಂಬಂಧದಿಂದಿರುವಂತೆ, ನೀನು ಶ್ರೀಕೃಷ್ಣನಲ್ಲಿ ಐಕ್ಯಳಾಗಿರುವೆ.

ದೈವೀ ವಾ ಮಾನುಷೀ ವಾಪಿ ಗಾಂಧರ್ವೀ ರಾಕ್ಷಸೀ ತಥಾ ।
ತ್ವತ್ತಃ ಪರಾ ಚ ಸೌಭಾಗ್ಯಾ ನ ಭೂತಾ ನ ಭವಿಷ್ಯತಿ ॥ ೨೧೩ ॥

ಪರಾತ್ಪರೋ ಗುಣಾತೀತಃ ಬ್ರಹ್ಮಾದೀನಾಂ ಚ ವಂದಿತಃ ।
ಸ್ವಯಂ ಕೃಷ್ಣಸ್ತವಾಧೀನೋ ಮದ್ವರೇಣ ಭವಿಷ್ಯತಿ ॥ ೨೧೪ ॥

ಬ್ರಹ್ಮಾನಂತಶಿವಾರಾಧ್ಯೋ ಭವಿತಾ ತ್ವದ್ವಶಃ ಪತಿಃ ।
ಧ್ಯಾನಾಸಾಧ್ಯೋ ದುರಾರಾಧ್ಯೋ ಸರ್ವೇಷಾಮಪಿ ಯೋಗಿನಾಂ ॥ ೨೧೫ ॥

ತ್ವಂ ಚ ಬಾಗ್ಯವತೀ ರಾಧೇ ಸ್ತ್ರೀಜಾತಿಷು ನ ತೇ ಪರಾ ।
ಕೃಷ್ಣೇನ ಸಾರ್ಧಂ ಪಶ್ಚಾತ್ತ್ವಂ ಗೋಲೋಕಂ ಚ ಗಮಿಷ್ಯಸಿ ॥ ೨೧೬ ॥

ಇತ್ಯುಕ್ತ್ವಾ ಪಾರ್ವತೀ ಸದ್ಯಸ್ತತ್ರೈವಾಂತರ್ಧಧೇ ಮುನೇ ।
ಸಾರ್ಧಂ ಗೋಪಾಲಿಕಾಭಿಶ್ಚ ರಾಧಿಕಾ ಗಂತುಮುದ್ಯತಾ ॥ ೨೧೭ ॥

---

೨೧೩. ದೈವಯೋನಿಯಲ್ಲಾಗಲೀ, ಮಾನುಷಯೋನಿಯಲ್ಲಾಗಲೀ, ಗಂಧರ್ವಯೋನಿಯಲ್ಲಾಗಲೀ ನಿನಗಿಂತ ಮೇಲಾದ ಸೌಭಾಗ್ಯವತಿಯು ಹಿಂದೆಯೂ ಇರಲಿಲ್ಲ. ಮುಂದೆಯೂ ಇರುವುದಿಲ್ಲ

೨೧೪. ನನ್ನ ವರದಿಂದ ಪರಾತ್ಪರನೂ, ಗುಣಾತೀತನೂ, ಬ್ರಹ್ಮಾದಿಗಳಿಂದ ವಂದಿತನೂ ಆದ ಸ್ವಯಂ ಶ್ರೀಕೃಷ್ಣನೇ ನಿನ್ನ ಅಧೀನನಾಗುವನು.

೨೧೫. ಬ್ರಹ್ಮ, ಅನಂತ, ಶಿವ ಮುಂತಾದವರಿಂದ ಆರಾಧ್ಯನೂ, ಸಕಲ ಯೋಗಿಗಳ ಧ್ಯಾನಕ್ಕೆ ಸಿಲುಕದವನೂ, ಮನುಜಸಾಮ್ಯರಿಂದ ದುರಾರಾಧ್ಯನೂ ಆದ ಶ್ರೀಹರಿಯು ನಿನ್ನ ಪತಿಯಾಗಿ ನಿನಗೆ ವಶವರ್ತಿಯಾಗುವನು.

೨೧೬. ಎಲೌ ರಾಧೆಯೇ, ನೀನೇ ಭಾಗ್ಯವಂತೆ. ಸ್ತ್ರೀಯರಲ್ಲಿ ನಿನಗಿಂತ ಶ್ರೇಷ್ಠರಾದವರಿಲ್ಲ. ನಿನ್ನ ಅವತಾರದ ಉದ್ದಿಶ್ಯವು ಪೂರ್ಣವಾದನಂತರ ಶ್ರೀಕೃಷ್ಣನೊಡನೆ ನೀನು ಗೋಲೋಕಕ್ಕೆ ತೆರಳುವೆ.

೨೧೭. ಎಲೈ ನಾರದಮುನಿಯೇ, ಪಾರ್ವತಿಯು ಈ ರೀತಿ ಹೇಳಿ ಅಂತರ್ಧಾನಹೊಂದಿದಳು. ಅನಂತರ ರಾಧೆಯು ಗೋಪಿಯರೊಡನೆ ಮನೆಗೆ ಹೊರಡಲನುವಾದಳು.

ಏತಸ್ಮಿನ್ನಂತರೇ ಕೃಷ್ಣೋ ಜಗಾಮ ರಾಧಿಕಾಪುರಃ ।
ರಾಧಾ ದದರ್ಶ ಶ್ರೀಕೃಷ್ಣಂ ಕಿಶೋರಂ ಶ್ಯಾಮಸುಂದರಂ ॥ ೨೧೮ ॥

ಪೀತವಸ್ತ್ರಪರೀಧಾನಂ ನಾನಾಲಂಕಾರಭೂಷಿತಂ ।
ಆಜಾನುವ ಲತೀಮಾಲಾವನಮಾಲಾವಿಭೂಷಿತಂ ॥ ೨೧೯ ॥

ಈಷದ್ಧಾಸ್ಯಪ್ರಸನ್ನಾಸ್ಯಂ ಭಕ್ತಾನುಗ್ರಹಕಾರಕಂ ।
ಚಂದನೋಕ್ಷಿತಸರ್ವಾಂಗಂ ಶರತ್ಪಂಕಜಲೋಚನಂ ॥ ೨೨೦ ॥

ಶರತ್ಪಾರ್ವಣಚಂದ್ರಾಸ್ಯಂ ಸದ್ರತ್ನಮುಕುಟೋಜ್ಜ್ವಲಂ ।
ಪಕ್ವದಾಡೀಮಬೀಜಾಭದಶನಂ ಸುಮನೋಹರಂ ॥ ೨೨೧ ॥

ವಿನೋದಮುರಲೀಹಸ್ತನ್ಯಸ್ತಲೀಲಾಸರೋರುಹಂ ।
ಕೋಟಿಕಂದರ್ಪಲಾವಣ್ಯಂ ಲೀಲಾಧಾಮಮನೋಹರಂ ॥ ೨೨೨ ॥

---

೨೧೮. ಇಷ್ಟರೊಳಗೆ ಶ್ರೀಕೃಷ್ಣನು ರಾಧೆಯ ಎದುರಿನಲ್ಲಿ ಬಂದು ನಿಂತನು. ರಾಧೆಯು ಶ್ಯಾಮಸುಂದರನೂ, ನವಯುವಕನೂ ಆದ ಶ್ರೀಕೃಷ್ಣನನ್ನು ನೋಡಿದಳು.

೨೧೯. ಪೀತಾಂಬರವನ್ನುಟ್ಟು ನಾನಾಭರಣಗಳಿಂದ ಭೂಷಿತನಾಗಿದ್ದ ಅವನು ಮುಂಡಿಯವರೆಗೆ ಜೋಲಾಡುತ್ತಿರುವ ಜಾಜೀಹೂಮಾಲೆಯಿಂದಲೂ, ವನಮಾಲೆಯಿಂದಲೂ ಶೋಭಿಸುತ್ತಿದ್ದನು.

೨೨೦. ಭಕ್ತಾನುಗ್ರಹಕಾರಕನೂ, ಶರದೃತುವಿನ ಕಮಲದಂತೆ ವಿಶಾಲ ನಯನನೂ ಆದ ಶ್ರೀಕೃಷ್ಣನು ಸರ್ವಾಂಗಗಳಿಗೂ ಚಂದನವನ್ನು ಲೇಪಿಸಿಕೊಂಡು ಮಂದಹಾಸದಿಂದ ಪ್ರಸನ್ನವದನನಾಗಿದ್ದನು.

೨೨೧. ಶರತ್ಪೂರ್ಣಿಮಾಚಂದ್ರನಂತೆ ಆಹ್ಲಾದಕವಾದ ಮುಖವುಳ್ಳ ಶ್ರೀಹರಿಯು ಉಜ್ವಲವಾದ ರತ್ನಕಿರೀಟವನ್ನು ಧರಿಸಿದ್ದನು. ಅವನ ದಂತಪಂಕ್ತಿಗಳು ಪಕ್ವವಾದ ದಾಳಿಂಬೆಯ ಬೀಜದಂತೆ ಮನೋಹರವಾಗಿದ್ದವು.

೨೨೨. ಕೈಯಲ್ಲಿ ವಿನೋದಾರ್ಥವಾಗಿ ಕೊಳಲನ್ನೂ ಲೀಲಾಕಮಲವನ್ನೂ ಧರಿಸಿರುವ ಆ ಕೃಷ್ಣನು ಕೋಟಿಮನ್ಮಥರ ಲಾವಣ್ಯಕ್ಕೆ ಆಕರದಂತೆ ಮನೋಹರನಾಗಿದ್ದನು.

ಗುಣಾತೀತಂ ಸ್ತೂಯಮಾನಂ ಬ್ರಹ್ಮಾನಂತಶಿವಾದಿಭಿಃ ।
ಬ್ರಹ್ಮಸ್ವರೂಪಂ ಬ್ರಹ್ಮಜ್ಞಂ ಶ್ರುತಿಭಿಶ್ಚಾನಿರೂಪಿತಂ ॥ ೨೨೩ ॥

ಅವ್ಯಕ್ತಮಕ್ಷರಂವ್ಯಕ್ತಂ ಜ್ಯೋತೀರೂಪಂ ಸನಾತನಂ ।
ಮಾಂಗಲ್ಯಂ ಮಂಗಲಾಧಾರಂ ಮಂಗಲಂ ಮಂಗಲಪ್ರದಂ ॥ ೨೨೪ ॥

ದೃಷ್ಟ್ವಾ ತದದ್ಭುತಂ ರೂಪಂ ಸಂಭ್ರಮಾತ್ಪ್ರಣನಾಮ ತಂ ।
ತಂ ದೃಷ್ಟ್ವಾ ಮೂರ್ಛಿತಾ ರಾಧಾ ಕಾಮಬಾಣಪ್ರಪೀಡಿತಾ ॥ ೨೨೫ ॥

ದರ್ಶಂ ದರ್ಶಂ ಮುಖಾಂಭೋಜಂ ಸಸ್ಮಿತಾ ವಕ್ರಲೋಚನಾ ।
ಮುಖಸ್ಯಾಚ್ಛಾದನಂ ಚಕ್ರೇ ವ್ರೀಡಯಾ ಚ ಪುನಃ ಪುನಃ ॥ ೨೨೬ ॥

ದೃಷ್ಟ್ವಾ ಹರಿಸ್ತಾಮುವಾಚ ಪ್ರಸನ್ನವದನೇಕ್ಷಣಃ ।
ಗೋಪಾಲಿಕಾಸಮೂಹಾನಾಂ ಸರ್ವೇಷಾಂ ಪುರತಃ ಸ್ಥಿತಃ ॥ ೨೨೭ ॥

---

೨೨೩. ತ್ರಿಗುಣಾತೀತನೂ, ಬ್ರಹ್ಮ ಅನಂತ ಮತ್ತು ಶಂಕರನೇ ಮುಂತಾದವರಿಂದ ಸ್ತುತಿಸಲ್ಪಡುವನೂ, ಬ್ರಹ್ಮಸ್ವರೂಪನೂ, ಬ್ರಹ್ಮಜ್ಞನೂ ಶ್ರುತಿಗಳಿಂದ ಅನಿರೂಪಿತನೂ ಆದ ಶ್ರೀಕೃಷ್ಣನನ್ನು ರಾಧೆಯು ನೋಡಿದಳು.

೨೨೪, ಅವ್ಯಕ್ತನೂ, ಅವಿನಾಶಿಯೂ, ವ್ಯಕ್ತರೂಪನೂ, ಜ್ಯೋತಿಃಸ್ವರೂಪನೂ, ಅನಾದಿಯೂ, ಮಂಗಲಾಧಾರನೂ, ಮಂಗಲಪ್ರದನೂ ಆದ ಮಂಗಳಸ್ವರೂಪನನ್ನು ರಾಧೆಯು ನೋಡಿದಳು.

೨೨೫. ಈ ರೀತಿ ಅತ್ಯದ್ಭುತವಾದ ಅವನ ರೂಪವನ್ನು ನೋಡಿ ರಾಧಾದೇವಿಯು ಸಂಭ್ರಮದಿಂದ ನಮಸ್ಕರಿಸಿದಳು. ಅಲ್ಲದೆ ಅವನ ಸೌಂದರ್ಯಕ್ಕೆ ಮನಸೋತು ಕಾಮಬಾಣಪೀಡಿತಳಾಗಿ ಮೂರ್ಛೆಗೊಂಡಳು.

೨೨೬. ಮೂರ್ಛೆ ತಿಳಿದ ಮೇಲೆ ಮುಗುಳು ನಗೆಯನ್ನು ಬೀರುತ್ತ ವಕ್ರಕಟಾಕ್ಷದಿಂದ ಅವನ ಮುಖಕಮಲವನ್ನು ದೃಷ್ಟಿಸಿ ನೋಡಿ ಲಜ್ಜೆಯಿಂದ ತನ್ನ ಮುಖವನ್ನು ಸೆರಗಿನಿಂದ ಮರೆಮಾಡಿಕೊಂಡಳು.

೨೨೭. ಅದನ್ನು ಕಂಡು ಪ್ರಸನ್ನವಾದ ಮುಖ ಮತ್ತು ದೃಷ್ಟಿಯುಳ್ಳ ಶ್ರೀಹರಿಯು ಆ ಗೋಪಿಯರೆಲ್ಲರ ಎದುರಿನಲ್ಲೇ, ರಾಧೆಯನ್ನು ಕುರಿತಿಂತೆಂದನು.

॥ ಶ್ರೀಕೃಷ್ಣ ಉವಾಚ ॥

ಪ್ರಾಣಾಧಿಕೇ ರಾಧಿಕೇ ತ್ವಂ ವರಂ ವೃಣು ಮನೀಷಿತಂ ।
ಭೋ ಭೋ ಗೋಪಾಲಿಕಾಃ ಸರ್ವಾ ವರಂ ವೃಣುತ ವಾಂಛಿತಂ ॥ ೨೨೮ ॥

ಕೃಷ್ಣಸ್ಯ ವಚನಂ ಶ್ರುತ್ವಾ ವರಂ ವವ್ರೇ ಚ ರಾಧಿಕಾ ।
ಗೋಪಾಲಿಕಾಃ ಪ್ರಹೃಷ್ಟಾಶ್ಚ ಸರ್ವಸಂಕಲ್ಪಪಾದಪಾತ್ ॥ ೨೨೯ ॥

॥ ರಾಧಿಕೋವಾಚ ॥

ತ್ವತ್ಪಾದಾಬ್ಜೇ ಮನ್ಮನಾಲಿಃ ಸತತಂ ಭ್ರಮತು ಪ್ರಭೋ ।
ಪಾತುಂ ಭಕ್ತಿರಸಂ ಪದ್ಮೇ ಮಧುಪಶ್ಚ ಯಥಾ ಮಧು ॥ ೨೩೦ ॥

ಮದೀಯಪ್ರಾಣನಾಥಸ್ತ್ವಂ ಭವ ಜನ್ಮನಿ ಜನ್ಮನಿ ।
ತ್ವದೀಯಚರಣಾಂಭೋಜೇ ದೇಹಿ ಭಕ್ತಿಂ ಸುದುರ್ಲಭಾಂ ॥ ೨೩೧ ॥

---

೨೨೮. ಶ್ರೀಕೃಷ್ಣ :—ನನ್ನ ಪ್ರಾಣಕ್ಕಿಂತಲೂ ಹೆಚ್ಚು ಪ್ರೀತಿಪಾತ್ರಳಾದ ಎಲೌ ರಾಧೆಯೇ, ನಿನಗೆ ಇಷ್ಟವಾದ ವರವನ್ನು ಬೇಡು. ಎಲೌ ಗೋಪಿಕಾಸ್ತ್ರೀಯರೇ, ನೀವೆಲ್ಲರೂ ನಿಮನಿಮಗೆ ಬೇಕಾದ ವರವನ್ನು ಬೇಡಿಕೊಳ್ಳಿ.

೨೨೯. ಈ ರೀತಿಯಾದ ಶ್ರೀಕೃಷ್ಣನ ಮಾತುಗಳನ್ನು ಕೇಳಿ ರಾಧಾದೇವಿಯೂ, ಗೋಪಿಯರೂ ಸಹ ಬೇಡಿದ ಇಷ್ಟಾರ್ಥವನ್ನು ಕೊಡಲು ಕಲ್ಪವೃಕ್ಷದಂತಿರುವ ಅವನನ್ನು ಕುರಿತು ಮುಂದೆ ಹೇಳುವಂತೆ ವರವನ್ನು ಬೇಡಿದರು.

೨೩೦. ರಾಧಾ :—ಎಲೈ ಪ್ರಭುವೇ, ದುಂಬಿಯು ಜೇನನ್ನು ಕುಡಿಯಲು ತಾವರೆಹೂವಿನಲ್ಲಿ ಪ್ರವೇಶಿಸುವಂತೆ ನನ್ನ ಮನಸ್ಸೆಂಬ ದುಂಬಿಯು ನಿನ್ನ ಚರಣವೆಂಬ ಕಮಲಗಳಲ್ಲಿ ಭಕ್ತಿಯೆಂಬ ಮಧುರಸವನ್ನು ಪಾನಮಾಡಲು ಪ್ರವೇಶಿಸಲಿ.

೨೩೧. ನೀನು ಪ್ರತಿಜನ್ಮದಲ್ಲಿಯೂ ನನ್ನ ಪ್ರಾಣನಾಥನಾಗು. ನನಗೆ ನಿನ್ನ ಚರಣಕಮಲಗಳಲ್ಲಿ ಸರ್ವಸುಲಭವಲ್ಲದ ಭಕ್ತಿಯನ್ನು ಅನುಗ್ರಹಿಸು.

ತವಸ್ಮೃತೌ ಗುಣೇ ಚಿತ್ತಂ ಸ್ವಪ್ನೇ ಜ್ಞಾನೇ ದಿವಾನಿಶಂ ।
ಭವೇನ್ನಿಮಗ್ನಂ ಸತತಮೇತನ್ಮಮ ಮನೀಷಿತಂ ॥ ೨೩೨ ॥

॥ ಗೋಪಾಲಿಕಾ ಊಚುಃ ॥

ಯಥಾ ರಾಧಾಂ ತಥಾ ನಶ್ಚ ಪ್ರಾಣಬಂಧೋ ದಿವಾನಿಶಂ ।
ಭವಿಷ್ಯಸಿ ಪ್ರಾಣನಾಥಃ ಪಾಸ್ಯಸಿ ಪ್ರತಿಜನ್ಮನಿ ॥ ೨೩೩ ॥

ಆಸಾಂ ಚ ವಚನಂ ಶ್ರುತ್ವಾ ತಥಾಽಸ್ತ್ವೇವಮುವಾಚ ಹ ।
ಪ್ರಸನ್ನವದನಃ ಶ್ರೀಮಾನ್ ಯಶೋದಾನಂದವರ್ಧನಃ ॥ ೨೩೪ ॥

ಕ್ರೀಡಾಪದ್ಮಂ ರಾಧಿಕಾಯೈ ಸಹಸ್ರದಲಸಂಯುತಂ ।
ಲಲಿತಾಂ ಮಾಲತೀಮಾಲಾಂ ದದೌ ಪ್ರೀತ್ಯಾ ಜಗತ್ಪತಿಃ ॥ ೨೩೫ ॥

---

೨೩೨. ನನ್ನ ಮನಸ್ಸು ಜಾಗ್ರತ್ಸ್ವಪ್ನಾವಸ್ಥೆಗಳಲ್ಲಿ ಸರ್ವದಾ ನಿನ್ನ ಸ್ಮರಣೆ ಮತ್ತು ಗುಣ ಕೀರ್ತನಗಳಲ್ಲಿ ನಿಶ್ಚಲವಾಗಿ ನೆಲೆಸಿರುವಂತೆ ಅನುಗ್ರಹಿಸು. ಇದೇ ನನಗೆ ಅಭೀಪ್ಸಿತವಾದ ವರವು.

೨೩೩. ಗೋಪಾಲಿಕೆಯರು :—ಎಲೈ ಪ್ರಾಣಬಂಧುವೇ, ರಾಧೆಗೆ ಹೇಗೋ ಹಾಗೆ ನಮಗೂ ಪ್ರತಿಜನ್ಮದಲ್ಲಿಯೂ ಪ್ರಾಣನಾಥನಾಗಿ ನಮ್ಮನ್ನು ಸರ್ವದಾ ಕಾಪಾಡು.

೨೩೪. ಅವರುಗಳ ಮಾತನ್ನು ಕೇಳಿ ಯಶೋದಾನಂದವರ್ಧನನಾದ ಶ್ರೀಹರಿಯು ಪ್ರಸನ್ನಮುಖನಾಗಿ 'ನಿಮ್ಮ ಇಷ್ಟಾರ್ಥವು ಸಿದ್ಧಿಸಲಿ' ಎಂಬುದಾಗಿ ವರವನ್ನು ಕೊಟ್ಟನು.

೨೩೫. ಅನಂತರ ಆ ಜಗತ್ಪತಿಯು ಸಹಸ್ರದಳದಿಂದ ಶೋಭಿಸುತ್ತಿರುವ ಕ್ರೀಡಾಕಮಲವನ್ನೂ, ಸುಂದರವಾದ ಮಾಲತೀಮಾಲೆಯನ್ನೂ ಪ್ರೀತಿಪೂರ್ವಕವಾಗಿ ರಾಧೆಗೆ ಕೊಟ್ಟನು.

ಮಾಲಾಸಮೂಹಂ ಪುಷ್ಪಾಣಿ ಗೋಪೀಭ್ಯೋ ಗೋಪಿಕಾಪತಿಃ ।
ಪ್ರಹಸ್ಯ ಪರಮಪ್ರೀತ್ಯಾ ಪ್ರದದಾವಿತ್ಯುವಾಚ ಹ || ೨೩೬ ||

|| ಶ್ರೀಕೃಷ್ಣ ಉವಾಚ ||

ತ್ರಿಷು ಮಾಸೇಷ್ವತೀತೇಷು ಯೂಯಂ ಕ್ರೀಡಾಂ ಮಯಾ ಸಹ ।
ರಾಸಮಂಡಲರಮ್ಯೇ ಚ ವೃಂದಾರಣ್ಯೇ ಕರಿಷ್ಯಥ || ೨೩೭ ||

ಯಥಾಹಂ ಚ ತಥಾ ಯೂಯಂ ನಾಹಂ ಭೇದೋ ಶ್ರುತೌ ಶ್ರುತಃ ।
ಪ್ರಾಣೋಽಹಂ ಚೈವ ಯುಷ್ಮಾಕಂ ಯೂಯಂ ಪ್ರಾಣಾ ಮಮ ಪ್ರಭೋಃ ||

ವ್ರತಂ ವೋ ಲೋಕರಕ್ಷಾರ್ಥಂ ನ ಹಿ ಸ್ವಾರ್ಥಮಿದಂ ಪ್ರಿಯಾಃ ।
ಸಹಾಗತಾಶ್ಚ ಗೋಲೋಕಾದ್ಗಮನಂ ಚ ಮಯಾ ಸಹ || ೨೩೯ ||

---

೨೩೬. ಇತರ ಗೋಪಿಯರಿಗೂ ಕೂಡ ಪುಷ್ಪಮಾಲೆಗಳನ್ನೂ, ಬಿಡಿ ಹೂವುಗಳನ್ನೂ ಪರಮಪ್ರೀತಿಯಿಂದ ಕೊಟ್ಟು ನಗುನಗುತ್ತ ಅವರನ್ನೆಲ್ಲ ಕುರಿತು ಹೇಳಿದನು.

೨೩೭. ಶ್ರೀಕೃಷ್ಣ :—ಇನ್ನು ಮೂರು ತಿಂಗಳು ಕಳೆದನಂತರ ನೀವು ವೃಂದಾವನದ ಮಧ್ಯವಲ್ಲಿರುವ ರಮ್ಯವಾದ ರಾಸಮಂಡಲದಲ್ಲಿ ನನ್ನೊಡನೆ ಕ್ರೀಡೆ ಯಾಡುವಿರಿ.

೨೩೮. ನಾನು ಹೇಗೋ ನೀವೂ ಹಾಗೆಯೇ, ನಾನು ಅಭಿನ್ನನೇ ಹೊರತು ಭಿನ್ನನೆಂದು ಪ್ರತ್ಯುಕ್ತವಾಗಿಲ್ಲ. ನಾನು ನಿಮಗೆ ಹೇಗೆ ಪ್ರಾಣಸ್ವರೂಪನಾಗಿರುವೆನೋ ಹಾಗೆಯೇ ನೀವೂ ಸಹ ನನಗೆ ಪ್ರಾಣಸ್ವರೂಪರಾಗಿರುವಿರಿ.

೨೩೯. ಎಲೌ ಪ್ರಿಯೆಯರೇ, ನೀವು ಆಚರಿಸಿದ ಈ ವ್ರತವು ಲೋಕರಕ್ಷಾರ್ಥವಾಗಿಯೇ ಹೊರತು ನಿಮ್ಮ ಸ್ವಾರ್ಥಕ್ಕಾಗಿಯಲ್ಲ ಗೋಲೋಕದಿಂದ ಇಲ್ಲಿಗೆ ನೀವು ನನ್ನೊಡನೆ ಬಂದಿದ್ದೀರಿ. ಪುನಃ ನನ್ನೊಡನೆಯೇ ಗೋಲೋಕಕ್ಕೆ ಬರುವಿರಿ

ಗಚ್ಛತ ಸ್ವಾಲಯಂ ಶ್ರೀಘ್ರಂ ವೋಽಹಂ ಜನ್ಮನಿ ಜನ್ಮನಿ ।
ಪ್ರಾಣೇಭ್ಯೋಽಪಿಗರೀಯಸ್ಯೋ ಯೂಯಂ ಮೇ ನಾತ್ರ ಸಂಶಯಃ ॥ ೩೪೦॥

ಇತ್ಯುಕ್ತ್ವಾ ಶ್ರೀಹರಿಸ್ತತ್ರ ತಸ್ಥೌ ಸೂರ್ಯಸುತಾತಟೇ ।
ತಸ್ಥುರ್ಗೋಪಾಲಿಕಾಃ ಸರ್ವಾ ವೀಕ್ಷ್ಯ ಕೃಷ್ಣಂ ಪುನಃ ಪುನಃ ॥ ೨೪೧ ॥

ಸರ್ವಾಃ ಪ್ರಹೃಷ್ಟವದನಾಃ ಸಸ್ಮಿತಾ ವಕ್ರಲೋಚನಾಃ ।
ಪ್ರೀತ್ಯಾ ಚಕ್ಷುಶ್ಚಕೋರಾಭ್ಯಾಂ ಮುಖಚಂದ್ರಂ ಪಪುರ್ಹರೇಃ ॥ ೨೪೨ ॥

ತಾಃ ಶೀಘ್ರಂ ಪ್ರಯಯುರ್ಗೇಹಂ ಜಯಂ ದತ್ವಾ ಪುನಃ ಪುನಃ ।
ಹರಿಶ್ಚ ಶಿಶುಭಿಃ ಸಾರ್ಧಂ ಪ್ರಸನ್ನಃ ಸ್ವಾಲಯಂ ಯಯೌ ॥ ೨೪೩ ॥

---

೨೪೦. ನೀವು ನಿಮ್ಮ ಮಂದಿರಕ್ಕೆ ಜಾಗ್ರತೆಯಾಗಿ ಹಿಂತಿರುಗಿರಿ. ನಾನೂ ಹಿಂತಿರುಗಿ ಹೋಗುವೆನು. ನೀವು ಪ್ರತಿಜನ್ಮದಲ್ಲಿಯೂ ನನ್ನ ಪ್ರಾಣಕ್ಕಿಂತಲೂ ಪ್ರೀತಿಪಾತ್ರರಾಗಿರುವುದರಲ್ಲಿ ಸಂಶಯವಿಲ್ಲ.

೨೪೧. ಶ್ರೀಕೃಷ್ಣನು ಈ ರೀತಿಯಾಗಿ ಹೇಳಿ ಆ ಯಮುನೆಯ ದಡದಲ್ಲಿ ಸುಮ್ಮನೆ ನಿಂತುಕೊಂಡನು. ಆ ಗೋಪಾಲಿಕೆಯರೂ ಕೂಡ ಪುನಃ ಪುನಃ ಶ್ರೀಕೃಷ್ಣನನ್ನು ನೋಡುತ್ತಾ ಅಲ್ಲಿಯೇ ನಿಂತುಕೊಂಡರು.

೨೪೨. ಎಲ್ಲರೂ ಕೂಡ ಪ್ರಸನ್ನಮುಖಿಯರಾಗಿ ಮಂದಹಾಸವನ್ನು ಬೀರುತ್ತ ಶ್ರೀಕೃಷ್ಣನನ್ನು ವಕ್ರಕಟಾಕ್ಷದಿಂದ ನೋಡಿದರು. ಮತ್ತು ತಮ್ಮ ಕಣ್ಣುಗಳೆಂಬ ಚಕೋರಪಕ್ಷಿಗಳಿಂದ ಶ್ರೀಹರಿಯ ಮುಖಚಂದ್ರಿಕೆಯನ್ನು ಪ್ರೀತಿಪೂರ್ವಕವಾಗಿ ಪಾನಮಾಡಿದರು

೨೪೩. ಅನಂತರ ಆ ಗೋಪಿಯರೆಲ್ಲರೂ ಜಯಜಯಕಾರಮಾಡಿಕೊಂಡು ಜಾಗ್ರತೆಯಾಗಿ ತಮ್ಮ ತಮ್ಮ ಮಂದಿರಕ್ಕೆ ಹೋದರು. ಶ್ರೀಕೃಷ್ಣನು ಕೂಡ ಪ್ರಸನ್ನನಾಗಿ ಗೋಪಾಲಕರೊಡನೆ ತನ್ನ ಮಂದಿರಕ್ಕೆ ತೆರಳಿದನು.

ಇತ್ಯೇವಂ ಕಥಿತಂ ಸರ್ವಂ ಹರೇಶ್ಚರಿತಮಂಗಳಂ।
ಗೋಪಿನಾಂ ವಸ್ತ್ರಹರಣಂ ಸರ್ವಲೋಕಸುಖಾವಹಂ　　॥ ೨೪೪ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ಶ್ರೀ ಕೃಷ್ಣಜನ್ಮಖಂಡೇ
ನಾರಾಯಣನಾರದಸಂವಾದೇ ಗೋಪೀವಸ್ತ್ರಾಪಹರಣ
ಪ್ರಸ್ತಾವೋ ನಾಮ ಸಪ್ತವಿಂಶೋಽಧ್ಯಾಯಃ

---

೨೪೪. ಈ ರೀತಿಯಾಗಿ ಮಂಗಳಕರವೂ, ಸಕಲಲೋಕಕ್ಕೆ ಸುಖದಾಯಕವೂ ಆದ 'ಗೋಪೀ ವಸ್ತ್ರಾಪಹಾರ' ವೆಂಬ ಶ್ರೀಹರಿಯ ಚರಿತ್ರೆಯನ್ನು ನಿನಗೆ ವಿವರಿಸಿದೆನು.

ಇಲ್ಲಿಗೆ ಬ್ರಹ್ಮವೈವರ್ತ ಮಹಾಪುರಾಣದ ಶ್ರೀಕೃಷ್ಣಜನ್ಮಖಂಡದಲ್ಲಿ
'ಗೋಪೀವಸ್ತ್ರಾಪಹರಣಪ್ರಸ್ತಾವ'ವೆಂಬ ಇಪ್ಪತ್ತೇಳನೆಯ
ಅಧ್ಯಾಯವು ಮುಗಿದುದು.

ಇಪ್ಪತ್ತೇಳನೆಯ ಅಧ್ಯಾಯದ ಸಾರಾಂಶ

ಹೇಮಂತಋತುವಿನ ಮೊದಲನೆಯ (ಮಾರ್ಗಶಿರ) ಮಾಸದಲ್ಲಿ ರಾಧೆಯೇ ಮುಂತಾದ ಗೋಪಿಯರು ಒಂದು ತಿಂಗಳಕಾಲ ನಿಯಮದಿಂದಿದ್ದು ಯಮುನೆಯಲ್ಲಿ ಸ್ನಾನಮಾಡಿ ಭಕ್ತಿಯಿಂದ 'ವಾಲುಕಾಮಯಳಾದ' (ಮರಳಿನಿಂದ ಮಾಡಿದ) ಪಾರ್ವತೀದೇವಿಯನ್ನು ಅರ್ಚಿಸುತ್ತಿದ್ದರು. ಈ ವ್ರತಕ್ಕೆ 'ಗೌರೀವ್ರತ'ವೆಂದು ಹೆಸರು. ಅಂತೆಯೇ ಒಮ್ಮೆ ಒಂದು ತಿಂಗಳುಕಾಲ ಗೌರಿಯನ್ನು ಪೂಜಿಸಿ, ಸಮಾಪ್ತಿಯ ದಿವಸ ಸಕಲ ಪೂಜಾಸಾಮಗ್ರಿಗಳನ್ನು ಸಿದ್ಧಪಡಿಸಿಕೊಂಡು ಅವುಗಳನ್ನೂ, ತಮ್ಮ ಸೀರೆಗಳನ್ನೂ ಯಮುನೆಯ ದಡದಲ್ಲಿಟ್ಟು ಸ್ನಾನಮಾಡುತ್ತಿದ್ದರು. ಆ ಸಮಯಕ್ಕೆ ಸರಿಯಾಗಿ ಲೀಲಾವಿನೋದಿಯಾದ ಶ್ರೀಕೃಷ್ಣನು ಗೋಪಾಲಕರೊಡನೆ ಅಲ್ಲಿಗೆ ಬಂದು ಅವರ ವಸ್ತ್ರಗಳನ್ನೂ, ಪೂಜಾಸಾಮಗ್ರಿಗಳನ್ನೂ ಎತ್ತಿಕೊಂಡು ಹೋಗಿ ಒಂದು ಕದಂಬವೃಕ್ಷದ ಮೇಲೆ ಮೂಟೆಕಟ್ಟಿಟ್ಟನು. ಸ್ನಾನಮುಗಿದ ನಂತರ ಗೋಪಿಯರು ಎಷ್ಟು ಬೇಡಿದರೂ ಅವರ ವಸ್ತ್ರವನ್ನು ಹಿಂದಕ್ಕೆ ಕೊಡಲಿಲ್ಲ. ಆಗ ರಾಧಾದೇವಿಯು ಪರಮ ಭಕ್ತಿಯಿಂದ ಶ್ರೀಕೃಷ್ಣನನ್ನು ಸ್ತುತಿಸಲು ಭಕ್ತವತ್ಸಲನಾದ ಶ್ರೀಕೃಷ್ಣನು ಅವರ ವಸ್ತ್ರಗಳನ್ನು ಹಿಂದಕ್ಕೆ ಕೊಟ್ಟನು. ಅನಂತರ ಆ ಗೋಪಿಯರೆಲ್ಲರೂ ತಮ್ಮ ತಮ್ಮ ವಸ್ತ್ರವನ್ನುಟ್ಟು, ಪೂಜಾಸಾಮಗ್ರಿಗಳನ್ನು ಸಿದ್ಧಪಡಿಸಿಕೊಂಡು ಗೌರಿಯ ಪೂಜೆಯನ್ನು ಮಾಡಿ ವ್ರತವನ್ನು ಪೂರ್ಣಗೊಳಿಸಿದರು. ಆ ವ್ರತದಿಂದ ಪ್ರಸನ್ನಳಾದ ದುರ್ಗಾದೇವಿಯು ಅವರಿಗೆ ಪ್ರತ್ಯಕ್ಷಳಾಗಿ ನಿಮ್ಮ ಇಷ್ಟಾರ್ಥವೇನೆಂದು ಕೇಳಿದಳು ಶ್ರೀಹರಿಯೇ ತಮಗೆ ಪತಿಯಾಗಬೇಕೆಂಬ ಇಷ್ಟಾರ್ಥವನ್ನು ಎಲ್ಲರೂ ವ್ಯಕ್ತಗೊಳಿಸಿದರು. ಆಗ ಪಾರ್ವತಿಯು 'ಮಧುಮಾಸದಲ್ಲಿ ಶ್ರೀಹರಿಯು ನಿಮ್ಮನ್ನೆಲ್ಲ ವರಿಸಿ ರಾಸಮಂಡಲದಲ್ಲಿ ನಿಮ್ಮೆಲ್ಲರೊಡನೆ ಕ್ರೀಡಿಸುವನು, ಎಂದು ವರವನ್ನು ಕೊಟ್ಟು ಅಂತರ್ಧಾನಳಾದಳು ಅನಂತರ ಶ್ರೀಕೃಷ್ಣನೂ ಅವರಿಗೆ ಪ್ರತ್ಯಕ್ಷನಾಗಿ 'ವಸಂತಋತುವಿನಲ್ಲಿ ಬೃಂದಾವನದಲ್ಲಿ ನಿಮ್ಮೊಡನೆ ಕ್ರೀಡಿಸುವೆನು' ಎಂದು ಅವರಿಗೆ ಅಭಯ ವಚನವನ್ನು ಕೊಟ್ಟು ಅವರನ್ನು ಅವರವರ ಮನೆಗೆ ಕಳುಹಿಸಿ ತಾನೂ ತನ್ನ ಮಂದಿರಕ್ಕೆ ತೆರಳಿದನು.

ಪೂರ್ವದಲ್ಲಿ ಕುಶಧ್ವಜನೆಂಬ ರಾಜನ ಮಗಳಾದ ವೇದವತಿಯೆಂಬಾಕೆಯು ಈ 'ಗೌರೀವ್ರತ'ವನ್ನಾಚರಿಸಿ ಪ್ರಸನ್ನಳಾದ ಗೌರೀದೇವಿಯ ಅನುಗ್ರಹದಿಂದ ಶ್ರೀಮನ್ನಾರಾಯಣನನ್ನು ತನ್ನ ಕಾಂತನನ್ನಾಗಿ ಪಡೆದಳು. ಅಂದರೆ ಆ ವೇದವತಿಯೇ ಅಯೋನಿಜೆಯಾದ ಸೀತಾದೇವಿಯಾಗಿ ಶ್ರೀರಾಮಚಂದ್ರನನ್ನು ವರಿಸಿದಳು. ಅಂತೆಯೇ ಈ ವ್ರತವನ್ನು ಶ್ರದ್ಧಾಭಕ್ತಿಯಿಂದ ಆಚರಿಸುವವರು ತಮ್ಮ ಇಷ್ಟಾರ್ಥವನ್ನು ಪಡೆಯುವುದರಲ್ಲಿ ಸಂಶಯವಿಲ್ಲ.

--|| ಓಂ ||—

—|| ಶ್ರೀ ಗಣೇಶಾಯ ನಮಃ ||—

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಶ್ರೀಕೃಷ್ಣಜನ್ಮಖಂಡೇ

|| ಅಷ್ಟಾವಿಂಶೋಽಧ್ಯಾಯಃ ||

|| ನಾರದ ಉವಾಚ ||

ತ್ರಿಷುಮಾಸೇಷ್ವತೀತೇಷು ತಾಸಾಂ ಚ ಹರಿಣಾ ಸಹ |
ಏವ ಕೇನ ಪ್ರಕಾರೇಣ ಬಭೂವ ತನುಸಂಗಮಃ || ೧ ||

ವೃಂದಾವನಂ ಕಿಂಪ್ರಕಾರಂ ಕಿಂವಿಧಂ ರಾಸಮಂಡಲಂ |
ಹರಿರೇಕಸ್ತಾಶ್ಚ ಬಹ್ವ್ಯಃ ಕೇನ ಕ್ರೀಡಾ ಬಭೂವ ಹ || ೨ ||

ಕುತೂಹಲಂ ಭವತಿ ಮ ಇದಂ ಶ್ರೋತುಂ ನವಂ ನವಂ |
ಕಥಯಸ್ವ ಮಹಾಭಾಗ ಪುಣ್ಯಶ್ರವಣಕೀರ್ತನ || ೩ ||

ಇಪ್ಪತ್ತೆಂಟನೆಯ ಅಧ್ಯಾಯ

೧. ನಾರದ :—ಎಲೈ ನಾರಾಯಣನೇ, ಮೂರು ತಿಂಗಳು ಕಳೆದನಂತರ ಆ ಗೋಪಿಯರಿಗೂ, ಶ್ರೀಹರಿಗೂ ಶರೀರಸಂಬಂಧವು ಹೇಗೆ ಉಂಟಾಯಿತು ?

೨. ವೃಂದಾವನವು ಯಾವ ರೀತಿಯಾಗಿರುವುದು ? ರಾಸಮಂಡಲವು ಹೇಗಿರುವುದು ? ಶ್ರೀಹರಿಯು ಒಬ್ಬನು, ಗೋಪಿಯರನೇಕರು. ಹೀಗಿರುವಾಗ ಎಲ್ಲರೂ ಅವನೊಡನೆ ಕ್ರೀಡಿಸಿದುದೆಂತು ?

೩. ಈ ನೂತನ ವಿಷಯವನ್ನು ಕೇಳಲು ನನಗೆ ಬಹಳ ಕುತೂಹಲವಿದೆ. ಪುಣ್ಯಕಥೆಗಳನ್ನು ಕೇಳಿ ಹೇಳುವ ಮಹಾಭಾಗ್ಯಶಾಲಿಯೇ, ಇವೆಲ್ಲವನ್ನೂ ನನಗೆ ವಿಸ್ತರಿಸಿ ಹೇಳು.

ಕಥಾ ಪುರಾಣಸಾರಾಣಾಂರಾಸಯಾತ್ರಾ ಹರೇರಹೋ ।
ಹರಿಲೀಲಾಃ ಪೃಥಿವ್ಯಾಂ ತು ಸರ್ವಾಃ ಶ್ರುತಿಮನೋಹರಾಃ ॥ ೪ ॥

॥ ಸೂತ ಉವಾಚ ॥

ನಾರದಸ್ಯ ವಚಃ ಶ್ರುತ್ವಾ ಋಷಿರ್ನಾರಾಯಣಃ ಸ್ವಯಂ ।
ಪ್ರಹಸ್ಯ ಸುಪ್ರಸನ್ನಾಸ್ಯಃ ಪ್ರವಕ್ತುಮುಪಚಕ್ರಮೇ ॥ ೫ ॥

॥ ನಾರಾಯಣ ಉವಾಚ ॥

ಏಕದಾ ಶ್ರೀಹರಿರ್ನಕ್ತಂ ವನಂ ವೃಂದಾವನಂ ಯಯೌ ।
ಶುಭೇ ಶುಕ್ಲತ್ರಯೋದಶ್ಯಾಂ ಪೂರ್ಣೇ ಚಂದ್ರೋದಯೇ ಮುನೇ ॥ ೬ ॥

ಯೂಥಿಕಾಮಾಲತೀಕುಂದಮಾಧವೀ ಪುಷ್ಪವಾಯುನಾ ।
ವಾಸಿತಂ ಕಲನಾದೇನ ಮಧುಭ್ರಾಣಾಂ ಮನೋಹರಂ ॥ ೭ ॥

---

೪. ಕಥೆ ಮತ್ತು ಪುರಾಣಗಳಲ್ಲಿ ಶ್ರೀಹರಿಯ ರಾಸಯಾತ್ರಾಪ್ರಕರಣವು ಸಾರತರವಾದುದು. ಶ್ರೀಹರಿಯು ಪೃಥಿವಿಯಲ್ಲಿ ಅವತರಿಸಿ ತೋರಿದ ಲೀಲೆಗಳೆಲ್ಲವೂ ಕೇಳಲು ಮನೋಹರವಾಗಿವೆ

೫. ಸೂತ :—ಈ ರೀತಿಯಾದ ನಾರದನ ಪ್ರಶ್ನೆಗಳನ್ನು ಕೇಳಿ ನಾರಾಯಣ ಮಹರ್ಷಿಯು ಪ್ರಸನ್ನವದನನಾಗಿ ಮಂದಹಾಸವನ್ನು ಬೀರಿ ಹೇಳಲುಪ ಕ್ರಮಿಸಿದನು.

೬. ಶ್ರೀನಾರಾಯಣ :—ಎಲೈ ನಾರದಮುನಿಯೇ, ಒಮ್ಮೆ ಶ್ರೀಹರಿಯು ಶುಭಕರವಾದ ಶುಕ್ಲಪಕ್ಷದ ತ್ರಯೋದಶಿಯ ರಾತ್ರಿ ಪೂರ್ಣಚಂದ್ರೋದಯದಲ್ಲಿ ವೃಂದಾವನಕ್ಕೆ ಹೋದನು.

೭. ಆ ವೃಂದಾವನವು ಗಿರಿಮಲ್ಲಿಕೆ, ಜಾಜಿ, ಮೊಲ್ಲೆ ಮತ್ತು ಮಾಧವೀ ಪುಷ್ಪಗಳ ಸುವಾಸನೆಗಳಿಂದಲೂ, ದುಂಬಿಗಳ ಇಂಚರದಿಂದಲೂ ಮನೋಹರ ವಾಗಿದ್ದಿತು.

ನವಪಲ್ಲವಸಂಯುಕ್ತಂ ಪುಂಸ್ಕೋಕಿಲರುತ ಶ್ರುತಂ ।
ನವಲಕ್ಷರಾಸವಾಸಸಂಯುಕ್ತಂ ಸುಮನೋಹರಂ ॥ ೮ ॥

ಚಂದನಾಗುರುಕಸ್ತೂರೀ ಕುಂಕುಮೇನ ಸುವಾಸಿತಂ ।
ಕರ್ಪೂರಾನ್ವಿತತಾಂಬೂಲ ಭೋಗದ್ರವ್ಯಸಮನ್ವಿತಂ ॥ ೯ ॥

ಪ್ರಸೂನೈಶ್ಚಂಪಕಾನಾಂ ಚ ಕಸ್ತೂರೀಚಂದನಾನ್ವಿತೈಃ ।
ರತಿಯೋಗ್ಯೈರ್ವಿರಚಿತೈರ್ನಾನಾತಲ್ಪೈಃ ಸುಶೋಭಿತಂ ॥ ೧೦ ॥

ದೀಪ್ತಂ ರತ್ನಪ್ರದೀಪೈಶ್ಚ ಧೂಪೇನ ಸುರಭೀಕೃತಂ ।
ನಾನಾಪುಷ್ಪೈಶ್ಚ ರಚಿತಂ ಮಾಲಾಜಾಲೈರ್ವಿರಾಜಿತಂ ॥ ೧೧ ॥

ಪರಿತೋ ವರ್ತುಲಾಕಾರಂ ತತ್ರೈವ ರಾಸಮಂಡಲಂ ।
ಚಂದನಾಗುರುಕಸ್ತೂರೀಕುಂಕುಮೇನ ಸುಸಂಸ್ಕೃತಂ ॥ ೧೨ ॥

---

೮. ಹೊಸ ಚಿಗುರುಗಳ ಸೊಂಪಿನಿಂದಲೂ, ಗಂಡುಕೋಗಿಲೆಗಳ ಕಲವರದ ಇಂಪಿನಿಂದಲೂ, ಒಂಭತ್ತುಲಕ್ಷ ರಾಸಮಂದಿರಗಳಿಂದಲೂ ಆ ಬೃಂದಾವನವು ಮನೋಹರವಾಗಿ ಕಂಗೊಳಿಸುತ್ತಿದ್ದಿತು.

೯. ಆ ರಾಸಮಂದಿರದಲ್ಲಿ ಚಂದನ, ಅಗುರು, ಕಸ್ತೂರಿ, ಕುಂಕುಮ ಮುಂತಾದ ಲೇಪನದ್ರವ್ಯಗಳೂ, ಪಚ್ಚಕರ್ಪೂರದಿಂದ ಸುವಾಸಿತವಾದ ತಾಂಬೂಲವೂ ಇತರ ಭೋಗದ್ರವ್ಯಗಳೂ ಸಿದ್ಧಗೊಳಿಸಲ್ಪಟ್ಟಿದ್ದವು.

೧೦. ಸಂಪಿಗೆಹೂಗಳಿಂದಲೂ, ಕಸ್ತೂರಿ ಚಂದನ ಮುಂತಾದವುಗಳಿಂದಲೂ, ಅಲಂಕೃತವಾಗಿ ರತಿಕ್ರೀಡೆಗೆ ಯೋಗ್ಯವಾದ ಅನೇಕ ಹಾಸಿಗೆಗಳು ಅಲ್ಲಿ ಸಿದ್ಧಗೊಳಿಸಲ್ಪಟ್ಟಿದ್ದವು.

೧೧. ರತ್ನಪ್ರದೀಪಗಳಿಂದ ಶೋಭಿತವೂ, ದಿವ್ಯಧೂಪಗಳಿಂದ ಸುವಾಸಿತವೂ ಆದ ಆ ರಾಸಮಂಡಪವು ಪ್ರತ್ಯೇಕವಾಗಿ ನಾನಾವಿಧ ಪುಷ್ಪಮಾಲೆಗಳಿಂದ ವಿರಾಜಿಸುತ್ತಿತ್ತು.

೧೨. ಸುತ್ತಲೂ ವರ್ತುಳಾಕಾರವಾಗಿದ್ದ ಆ ರಾಸಮಂಡಲವು ಚಂದನ, ಅಗುರು, ಕಸ್ತೂರಿ ಮತ್ತು ಕುಂಕುಮಗಳಿಂದ ಸುಸಂಸ್ಕೃತವಾಗಿದ್ದಿತು.

ಪುಷ್ಪೋದ್ಯಾನೈಃ ಪುಷ್ಪಿತೈಶ್ಚ ಯುಕ್ತಂ ಕ್ರೀಡಾಸರೋವರೈಃ ।
ಹಂಸಕಾರಂಡವಾಕೀರ್ಣೈರ್ಜಲಕುಕ್ಕುಟಕೂಜಿತೈಃ ॥ ೧೩ ॥

ಕ್ರೀಡನೀಯೈಃ ಸುಂದರೈಶ್ಚ ಸುರತಶ್ರಮಹಾರಿಭಿಃ ।
ಶುದ್ಧಸ್ಫಟಿಕಸಂಕಾಶತೋಯಪೂರ್ಣೈಃ ಸುನಿರ್ಮಲೈಃ ॥ ೧೪ ॥

ದಧಿಪೂರ್ಣಶುಕ್ಲಧಾನ್ಯಲಾಜೈರ್ನಿರ್ಮಂಛನೀಕೃತಂ ।
ರಂಭಾಸ್ತಂಭಸಮೂಹೇನ ಸುಂದರೇಣ ಸುಶೋಭಿತಂ ॥ ೧೫ ॥

ಆಮ್ರಪಲ್ಲವಯುಕ್ತೇನ ಸೂತ್ರಬಂಧೇನ ಚಾರುಣಾ ।
ಭೂಷಿತಂ ಮಂಗಲಘಟೈಃ ಸಿಂದೂರಚಂದನಾನ್ವಿತೈಃ ॥ ೧೬ ॥

ಮಾಲತೀಮಾಲ್ಯಸಂಯುಕ್ತೈರ್ನಾರಿಕೇಳಫಲಾನ್ವಿತೈಃ ।
ಸ ರಾಸಮಂಡಲಂ ದೃಷ್ಟ್ವಾ ಜಹಾಸ ಮಧುಸೂದನಃ ॥ ೧೭ ॥

---

೧೩. ಪುಷ್ಪಿತವಾದ ಪುಷ್ಪೋದ್ಯಾನಗಳಿಂದಲೂ, ಹಂಸ, ಕೊಕ್ಕರೆ ಮತ್ತು ನೀರುಕೋಳಿಗಳ ಮಧುರ ಕೂಜಿತದಿಂದ ಕೂಡಿದ ಕ್ರೀಡಾಸರೋವರಗಳಿಂದಲೂ ಆ ರಾಸಮಂಡಲವು ಪರಿವೃತವಾಗಿದ್ದಿತು.

೧೪. ಶುದ್ಧಸ್ಫಟಿಕಮಣಿಯಂತೆ ನಿರ್ಮಲವಾದ ತಿಳಿನೀರಿನಿಂದ ಶೋಭಿಸುತ್ತಿದ್ದ ಆ ಕೊಳಗಳು ಜಲಕ್ರೀಡೆಗೆ ಯೋಗ್ಯವೂ ಮತ್ತು ಸುರತಶ್ರಮವನ್ನು ಪರಿಹರಿಸ ತಕ್ಕವೂ ಆಗಿದ್ದವು.

೧೫. ದಧಿಪೂರ್ಣವಾದ ಕಲಶಗಳಿಂದಲೂ, ಶುಕ್ಲಧಾನ್ಯ ಮತ್ತು ಅರಳಿನ ರಾಶಿಗಳಿಂದಲೂ ಪೂರ್ಣವಾಗಿದ್ದ ಆ ರಾಸಮಂಡಲವು ಸುಂದರವಾದ ಬಾಳೆಯ ಕಂಭಗಳಿಂದ ಅಲಂಕೃತವಾಗಿದ್ದಿತು

೧೬. ದಾರದಿಂದ ಪೋಣಿಸಲ್ಪಟ್ಟ ಮಾವಿನ ಚಿಗುರಿನ ತೋರಣಗಳಿಂದ ಅಲಂಕೃತವಾದ ಆ ರಾಸಮಂಡಲವು ಸಿಂದೂರ ಚಂದನಾದಿಗಳಿಂದ ಅನುಲಿಪ್ತವಾದ ಮಂಗಲ ಕಲಶಗಳಿಂದ ಶೋಭಿಸುತ್ತಿದ್ದಿತು.

೧೭. ಜಾಜೀಹೂಮಾಲೆಗಳಿಂದ ಅಲಂಕೃತವಾಗಿ, ನಾರಿಕೇಳಫಲಗಳಿಂದ ಪರಿಪೂರ್ಣವಾಗಿದ್ದ ಆ ರಾಸಮಂಡಲವನ್ನು ನೋಡಿ ಮಧುಸೂದನನು ಆನಂದ ಪಟ್ಟನು.

ಚಕಾರ ತತ್ರ ಕುತುಕಾದ್ವಿನೋದಮುರಲೀರವಂ ।
ಗೋಪೀನಾಂ ಕಾಮುಕೀನಾಂ ಚ ಕಾಮವರ್ಧನಕಾರಣಂ ॥ ೧೮ ॥

ತಚ್ಛ್ರುತ್ವಾ ರಾಧಿಕಾ ಸದ್ಯೋ ಮುಮೋಹ ಮದನಾತುರಾ ।
ಬಭೂವ ಸ್ಥಾಣುವದ್ದೇಹಾ ಧ್ಯಾನೈಕತಾನಮಾನಸಾ ॥ ೧೯ ॥

ಕ್ಷಣೇನ ಚೇತನಾಂ ಪ್ರಾಪ್ಯ ಪುನಃ ಶುಶ್ರಾವ ಸಾ ಧ್ವನಿಂ ।
ಉವಾಸ ಸಾ ಸಮುತ್ತಸ್ಥೌ ಸಮುದ್ವಿಗ್ನಾ ಪುನಃ ಪುನಃ ॥ ೨೦ ॥

ತ್ಯಕ್ತ್ವಾ ಚಾಽಽವಶ್ಯಕಂ ಕರ್ಮ ನಿಃಸಸಾರ ದ್ರುತಂ ಗೃಹಾತ್ ।
ಯಯೌ ತದನುಸಾರೇಣ ಪ್ರಸಮೀಕ್ಷ್ಯ ಚತುರ್ದಿಶಂ ॥ ೨೧ ॥

---

೧೮. ಆ ರಾಸಮಂಡಲಕ್ಕೆ ಹೋಗಿ ಕುತೂಹಲಾನ್ವಿತನಾಗಿ ಕಾಮುಕಿಯರಾದ ಗೋಪಿಯರಿಗೆ ಕಾಮೋದ್ದೀಪಕವಾದ ಕೊಳಲಿನ ಮನೋಹರ ಧ್ವನಿಯನ್ನು ಮಾಡಿದನು.

೧೯. ಆ ಇಂಪಾದ ಸ್ವರವನ್ನು ಕೇಳಿ ಮದನಪರವಶಳಾದ ರಾಧೆಯು ಕೂಡಲೇ ಮೂರ್ಛೆಗೊಂಡಳು ಶ್ರೀಕೃಷ್ಣನ ಧ್ಯಾನದಲ್ಲೇ ಆಸಕ್ತವಾದ ಮನಸ್ಸುಳ್ಳ ಆ ರಾಧೆಯ ದೇಹವು ಮೋಟುಮರದಂತೆ ಅಚಲವಾಗಿದ್ದಿತು.

೨೦ ಕ್ಷಣಕಾಲದಲ್ಲೇ ಚೇತನವನ್ನು ಹೊಂದಿ ಪುನಃ ಆ ಕೊಳಲಿನ ಮನೋಹರ ಧ್ವನಿಯನ್ನು ಕೇಳಿದಳು. ಭ್ರಾಂತಳಾದ ಆ ರಾಧೆಯು ಪುನಃ ಪುನಃ ಕುಳಿತುಕೊಳ್ಳುತ್ತಿದ್ದಳು ಮತ್ತು ಮೇಲಕ್ಕೇಳುತ್ತಿದ್ದಳು.

೨೧. ಮಾಡಬೇಕಾದ ಆವಶ್ಯಕ ಕೆಲಸಗಳನ್ನು ಬಿಟ್ಟು ಮನೆಯಿಂದ ಜಾಗ್ರತೆ ಹೊರಕ್ಕೆ ಬಂದಳು. ನಾಲ್ಕು ದಿಕ್ಕುಗಳನ್ನೂ ಚಂಚಲದೃಷ್ಟಿಯಿಂದ ನೋಡಿ ಆ ಧ್ವನಿಯನ್ನು ಹಿಂಬಾಲಿಸಿ ಹೊರಟಳು.

ಧ್ಯಾಯಂತೀ ಚರಣಾಂಭೋಜಂ ಶ್ರೀಕೃಷ್ಣಸ್ಯ ಮಹಾತ್ಮನಃ ।
ತೇಜಸಾ ಚ ದ್ಯೋತಯಂತೀ ಸದ್ರತ್ನಸಾರಭೂಷಣೈಃ ॥ ೨೨ ॥

ಬಹಿರ್ಬಭೂವುಸ್ತಾಸ್ತ್ರಸ್ತಾ ರವೇಣ ಹೃತಚೇತನಾಃ ।
ಕುಲಧರ್ಮಂ ಪರಿತ್ಯಜ್ಯ ನಿಃಶಂಕಾಃ ಕಾಮಮೋಹಿತಾಃ ॥ ೨೩ ॥

ತ್ರಯಸ್ತ್ರಿಂಶದ್ವಯಸ್ಯಾಶ್ಚ ತಾಃ ಸುಶೀಲಾದಯಃ ಸ್ಮೃತಾಃ ।
ರಾಧಿಕಾಯಾಃ ಪ್ರಿಯತಮಾ ಗೋಪೀನಾಂ ಪ್ರವರಾ ಯಯುಃ ॥ ೨೪ ॥

ತಾಸಾಂ ಪಶ್ಚಾದ್ಯಯುರ್ಗೋಪ್ಯಸ್ತಾಸಾಂ ಸಂಖ್ಯಾಂ ನಿಬೋಧ ಮೇ ।
ಸಮಾ ವೇಷೇಣ ವಯಸಾ ರೂಪೇಣ ಚ ಗುಣೇನ ಚ ॥ ೨೫ ॥

ಯಯುಃ ಸುಶೀಲಾಸಂಗೇನ ಸಹಸ್ರಾಣಿ ಚ ಷೋಡಶ ।
ಯಯುಶ್ಚಂದ್ರಮುಖೀಪಶ್ಚಾತ್ ಸಹಸ್ರಾಣಿ ಚ ಷೋಡಶ ॥ ೨೬ ॥

---

೨೨. ಆ ರಾಧೆಯು ರತ್ನಾಲಂಕಾರಗಳ ಹೊಳಪಿನಿಂದ ದಶದಿಕ್ಕುಗಳನ್ನೂ ಬೆಳಗುತ್ತ ಮಹಾತ್ಮನಾದ ಶ್ರೀಕೃಷ್ಣನ ಚರಣಕಮಲಗಳನ್ನು ಧ್ಯಾನಿಸುತ್ತ ಬರುತ್ತಿದ್ದಳು.

೨೩. ಇತರ ಗೋಪಿಯರೂ ಕೂಡ ಆ ಮುರಲೀಧ್ವನಿಯಿಂದ ಅಪಹೃತ ಚೇತನರಾಗಿ, ಕಾಮಾತುರತೆಯಿಂದ ಶಂಕೆಯನ್ನು ತೊರೆದು, ಕುಲಧರ್ಮವನ್ನು ಬಿಟ್ಟು ಮನೆಯಿಂದ ಹೊರಕ್ಕೆ ಬಂದರು.

೨೪. ಅವರೇ ರಾಧಾದೇವಿಯ ಆಪ್ತಸಖಿಯರೂ, ಗೋಪಿಯರಲ್ಲಿ ಶ್ರೇಷ್ಠರೂ ಆದ ಸುಶೀಲೆಯೇ ಮುಂತಾದ ಮೂವತ್ತುಮೂರು ಜನ ಗೋಪಿಯರು.

೨೫. ವೇಷದಿಂದಲೂ, ವಯಸ್ಸಿನಿಂದಲೂ, ರೂಪದಿಂದಲೂ ಮತ್ತು ಗುಣದಿಂದಲೂ ಸಮಾನರಾದ ಅನೇಕ ಗೋಪಿಯರು ಮೇಲೆ ಹೇಳಿದ ಮೂವತ್ತುಮೂರು ಗೋಪಿಯರನ್ನು ಹಿಂಬಾಲಿಸಿದರು. ಅವರ ಸಂಖ್ಯೆಯನ್ನು ವಿವರಿಸುವೆನು ಸಾವಧಾನದಿಂದ ಕೇಳು.

೨೬. ಸುಶೀಲೆಯೆಂಬ ಗೋಪಿಯನ್ನು ಹಿಂಬಾಲಿಸಿಕೊಂಡು ಹದಿನಾರು ಸಾವಿರ ಸಖಿಯರು ಹೊರಟರು. ಚಂದ್ರಮುಖಿಯೆಂಬ ಗೋಪಿಯೊಡನೆಯೂ ಹದಿನಾರುಸಾವಿರ ಸಖಿಯರು ಹೊರಟರು.

ಏಕಾದಶಸಹಸ್ರಾಣಿ ಮಾಧವ್ಯಾಲ್ಯಶ್ಚ ನಿರ್ಯಯುಃ ।
ಜಗ್ಮುಃ ಕದಂಬಮಾಲಾಲ್ಯಃ ಸಹಸ್ರಾಣಿ ತ್ರಯೋದಶ ॥ ೨೭ ॥

ಯಯುಃ ಕುಂತೀವಯಸ್ಯಾಶ್ಚ ಸಹಸ್ರಾಣಿ ದಶ ಸ್ಮೃತಾಃ ।
ಚತುರ್ದಶ ಸಹಸ್ರಾಣಿ ಯಯುಸ್ತಾ ಯಮುನಾನುಗಾಃ ॥ ೨೮ ॥

ಜಾನ್ಹವೀಸಹಚಾರಿಣ್ಯಃ ಸಹಸ್ರಾಣಿ ಯಯುರ್ನವ ।
ಯಯುರ್ನವಸಹಸ್ರಾಣಿ ಪದ್ಮಮುಖ್ಯಾಲ್ಯ ಏವ ಚ ॥ ೨೯ ॥

ಸಾವಿತ್ರ್ಯಾಲ್ಯಃ ಪಂಚದಶ ಸಹಸ್ರಾಣಿ ಯಯುರ್ವ್ರಜಾತ್ ।
ಪಾರಿಜಾತಾವಯಸ್ಯಾಶ್ಚ ಸಹಸ್ರಾಣಿ ಯಯುರ್ದಶ ॥ ೩೦ ॥

ಸ್ವಯಂಪ್ರಭಾನುಗಾಃ ಸಪ್ತ ಸಹಸ್ರಾಣಿ ಯಯುರ್ವ್ರಜಾತ್ ।
ಯಯುಃ ಸುಧಾಮುಖೀಗೋಪ್ಯಃ ಸಹಸ್ರಾಣಿ ಚತುರ್ದಶ ॥ ೩೧ ॥

---

೨೭. ಮಾಧವಿ ಎಂಬ ಗೋಪಿಯೊಡನೆ ಹನ್ನೊಂದುಸಾವಿರ ಗೆಳತಿಯರೂ, ಕದಂಬಮಾಲೆಯೊಡನೆ ಹದಿಮೂರುಸಾವಿರ ಗೆಳತಿಯರೂ ಹೊರಟರು.

೨೮. ಕುಂತಿಯೆಂಬ ಗೋಪಿಯೊಡನೆ ಹತ್ತುಸಾವಿರ ಗೆಳತಿಯರೂ, ಯಮುನೆಯೆಂಬ ಗೋಪಿಯೊಡನೆ ಹದಿನಾಲ್ಕುಸಾವಿರ ಗೆಳತಿಯರೂ ಹೊರಟರು.

೨೯. ಜಾಹ್ನವಿ ಎಂಬ ಗೋಪಿಯೊಡನೆ ಒಂಭತ್ತುಸಾವಿರ ಗೆಳತಿಯರೂ, ಪದ್ಮಮುಖಿಯೆಂಬ ಗೋಪಿಯೊಡನೆ ಒಂಭತ್ತುಸಾವಿರ ಗೆಳತಿಯರೂ ಹೊರಟರು.

೩೦. ಹದಿನೈದುಸಾವಿರ ಗೆಳತಿಯರು ಸಾವಿತ್ರಿ ಎಂಬ ಗೋಪಿಯನ್ನೂ, ಹತ್ತುಸಾವಿರ ಗೆಳತಿಯರು ಪಾರಿಜಾತೆ ಎಂಬ ಗೋಪಿಯನ್ನೂ ಹಿಂಬಾಲಿಸಿಕೊಂಡು ಗೋಕುಲದಿಂದ ಹೊರಟರು.

೩೧. ಏಳುಸಾವಿರ ಸಖಿಯರು ಸ್ವಯಂಪ್ರಭೆಯೆಂಬ ಗೋಪಿಯನ್ನೂ, ಹದಿನಾಲ್ಕುಸಾವಿರ ಸಖಿಯರು ಸುಧಾಮುಖಿ ಎಂಬ ಗೋಪಿಯನ್ನೂ ಅನುಸರಿಸಿಕೊಂಡು ಹೊರಟರು.

ಶುಭಾನುಗಾ ಯಯುರ್ಗೋಪ್ಯಃ ಸಹಸ್ರಾಣಿ ಚತುರ್ದಶ।
ಪದ್ಮಾನುಗಾ ಯಯುರ್ಗೋಪ್ಯಃ ಸಹಸ್ರಾಣಿ ಚತುರ್ದಶ ॥ ೩೨ ॥

ಗೌರೀಪದ್ಮಾ ಯಯುರ್ಗೋಪ್ಯಃ ಸಹಸ್ರಾಣಿ ಚತುರ್ದಶ।
ಯಯುಃ ಸರ್ವಮಂಗಲಾಲ್ಯಃ ಸಹಸ್ರಾಣಿ ಚ ಷೋಡಶ ॥ ೩೩ ॥

ಕಾಲಿಕಾಲ್ಯೋ ಯಯುರ್ಗೋಪ್ಯಃ ಸಹಸ್ರಾಣಿ ಚ ಷೋಡಶ।
ನಿರ್ಯಯುಃ ಕಮಲಾಲ್ಯಶ್ಚ ಸಹಸ್ರಾಣಿ ತ್ರಯೋದಶ ॥ ೩೪ ॥

ದುರ್ಗಾನುಗಾ ಯಯುರ್ಗೋಪ್ಯಃ ಸಹಸ್ರಾಣಿ ಚ ಷೋಡಶ।
ಯಯುಃ ಸರಸ್ವತೀ ಪಶ್ಚಾತ್ಸಹಸ್ರಾಣಿ ತ್ರಯೋದಶ ॥ ೩೫ ॥

---

೩೨. ಹದಿನಾಲ್ಕುಸಾವಿರ ಗೆಳತಿಯರು ಶುಭೆ ಎಂಬ ಗೋಪಿಯನ್ನೂ ಹದಿನಾಲ್ಕುಸಾವಿರ ಗೆಳತಿಯರು ಪದ್ಮಾ ಎಂಬ ಗೋಪಿಯನ್ನೂ ಅನುಸರಿಸಿ ಹೊರಟರು.

೩೩. ಗೌರೀಪದ್ಮಾ ಎಂಬ ಗೋಪಿಯನ್ನು ಹದಿನಾಲ್ಕುಸಾವಿರ ಸಖಿಯರೂ ಸರ್ವಮಂಗಳಾ ಎಂಬ ಗೋಪಿಯನ್ನು ಹದಿನಾರು ಸಹಸ್ರ ಸಖಿಯರೂ ಅನುಸರಿಸಿ ಹೊರಟರು.

೩೪. ಹದಿನಾರು ಸಹಸ್ರಸಖಿಯರು ಕಾಳಿಕೆಯೆಂಬ ಗೋಪಿಯನ್ನೂ, ಹದಿಮೂರು ಸಾವಿರ ಸಖಿಯರು ಕಮಲಾ ಎಂಬ ಗೋಪಿಯನ್ನೂ ಹಿಂಬಾಲಿಸಿಕೊಂಡು ಹೊರಟರು.

೩೫. ದುರ್ಗಾ ಎಂಬ ಗೋಪಿಯನ್ನು ಹದಿನಾರು ಸಹಸ್ರ ಸಖಿಯರೂ, ಸರಸ್ವತೀ ಎಂಬ ಗೋಪಿಯನ್ನು ಹದಿಮೂರು ಸಾವಿರ ಸಖಿಯರೂ ಅನುಸರಿಸಿಕೊಂಡು ಹೊರಟರು.

ಪ್ರಜಗ್ಮುರ್ಭಾರತೀ ಪಶ್ಚಾತ್ಸಹಸ್ರಾಣಿ ದಶ ವ್ರಜಾತ್ ।
ಅಪರ್ಣಾ ಸಹಚಾರಿಣ್ಯಃ ಸಹಸ್ರಾಣಿ ಚತುರ್ದಶ ॥ ೩೬ ॥

ರತಿಪಶ್ಚಾದ್ವಯಸ್ಯಾಶ್ಚ ಸಹಸ್ರಾಣಿ ಯಯುರ್ದಶ ।
ಗಂಗಾವಯಸ್ಯಾಃ ಪ್ರಯಯುಃ ಸಹಸ್ರಾಣಿ ಚತುರ್ದಶ ॥ ೩೭ ॥

ಪ್ರಜಗ್ಮುರಂಬಿಕಾಪಶ್ಚಾತ್ಸಹಸ್ರಾಣಿ ಚ ಷೋಡಶ ।
ಸತೀಪಶ್ಚಾದ್ಯಯುರ್ಗೋಪ್ಯಃ ಸಹಸ್ರಾಣಿ ತ್ರಯೋದಶ ॥ ೩೮ ॥

ನಂದಿನೀಸಹಚಾರಿಣ್ಯಃ ಸಹಸ್ರಾಣಿ ಯಯುರ್ದಶ ।
ಪ್ರಯಯುಃ ಸುಂದರೀಪಶ್ಚಾತ್ಸಹಸ್ರಾಣಿ ತ್ರಯೋದಶ ॥ ೩೯ ॥

ಯಯುಃ ಕೃಷ್ಣಪ್ರಿಯಾ ಪಶ್ಚಾತ್ಸಹಸ್ರಾಣಿ ಚ ಷೋಡಶ ।
ಯಯುರ್ಮಧುಮತೀ ಪಶ್ಚಾತ್ಸಹಸ್ರಾಣಿ ಚ ಷೋಡಶ ॥ ೪೦ ॥

---

೩೬. ನಂದಗೋಕುಲದಿಂದ ಹತ್ತುಸಾವಿರ ಸಖಿಯರು ಭಾರತೀ ಎಂಬ ಗೋಪಿಯನ್ನೂ, ಹದಿನಾಲ್ಕುಸಾವಿರ ಸಖಿಯರು ಅಪರ್ಣಾ ಎಂಬ ಗೋಪಿಯನ್ನೂ ಅನುಸರಿಸಿಕೊಂಡು ಹೊರಟರು.

೩೭. ರತಿಯೆಂಬ ಗೋಪಿಯನ್ನು ಹತ್ತು ಸಾವಿರ ಸಖಿಯರೂ, ಗಂಗೆ ಎಂಬ ಗೋಪಿಯನ್ನು ಹದಿನಾಲ್ಕುಸಹಸ್ರ ಸಖಿಯರೂ ಹಿಂಬಾಲಿಸಿಕೊಂಡು ಹೊರಟರು.

೩೮. ಅಂಬಿಕೆಯೆಂಬ ಗೋಪಿಯ ಹಿಂದೆ ಹದಿನಾರುಸಹಸ್ರ ಸಖಿಯರೂ ಸತಿ ಎಂಬ ಗೋಪಿಯೊಡನೆ ಹದಿಮೂರುಸಾವಿರ ಸಖಿಯರೂ ಅನುಸರಿಸಿಕೊಂಡು ಹೊರಟರು.

೩೯. ಹತ್ತುಸಾವಿರ ಸಖಿಯರು ನಂದಿನಿಯೆಂಬ ಗೋಪಿಯೊಡನೆಯೂ, ಹದಿಮೂರುಸಾವಿರ ಸಖಿಯರು ಸುಂದರಿಯೆಂಬ ಗೋಪಿಯೊಡನೆಯೂ, ರಾಸ ಮಂಡಲಕ್ಕೆ ಹೊರಟರು.

೪೦. ಕೃಷ್ಣಪ್ರಿಯೆಯೆಂಬ ಗೋಪಿಯೊಡನೆ ಹದಿನಾರು ಸಹಸ್ರ ಗೋಪಿಯರೂ, ಮಧುಮತಿಯೆಂಬ ಗೋಪಿಯೊಡನೆ ಹದಿನಾರು ಸಹಸ್ರ ಗೋಪಿಯರೂ ರಾಸಮಂಡಲಕ್ಕೆ ಹೊರಟರು.

ಯಯುಶ್ಚಂಪಾನುಗಾ ಗೋಪ್ಯಃ ಸಹಸ್ರಾಣಿ ತ್ರಯೋದಶ ।
ಚಂದನಾಲ್ಯೋ ಯಯುಃ ಪಶ್ಚಾತ್ಸಹಸ್ರಾಣಿ ಚ ಷೋಡಶ ॥ ೪೧ ॥

ಸರ್ವಾ ಬಭೂವುರೇಕತ್ರ ತತ್ರ ತಸ್ಥುಃ ಪಲಂ ಮುದಾ ।
ತತ್ರಾಽಽಯಯುರ್ಗೋಪಿಕಾಶ್ಚ ಮಾಲಾಹಸ್ತಾಶ್ಚ ಕಾಶ್ಚನ ॥ ೪೨ ॥

ಚಾರುಚಂದನಹಸ್ತಾಶ್ಚ ಕಾಶ್ಚಿತ್ತತ್ರಾಽಽಯಯುರ್ವ್ರಜಾತ್ ।
ಶ್ವೇತಚಾಮರಹಸ್ತಾಶ್ಚ ಕಾಶ್ಚಿತ್ತತ್ರಾಽಽಯಯುರ್ಮುದಾ ॥ ೪೩ ॥

ತತ್ರಾಽಽಯಯುರ್ಗೋಪಕನ್ಯಾಃ ಕಾಶ್ಚಿತ್ಕಸ್ತೂರಿಕಾಕರಾಃ ।
ತತ್ರಾಽಽಯಯುರ್ಗೋಪಕನ್ಯಾಃ ಕಾಶ್ಚಿತ್ಕುಂಕುಮವಾಹಿಕಾಃ ॥ ೪೪ ॥

ಕಾಶ್ಚಿತ್ತತ್ರಾಽಽಯಯುರ್ಗೋಪ್ಯಸ್ತಾಂಬೂಲಪಾತ್ರವಾಹಿಕಾಃ ।
ಯೂವಕಾಂಜನವಸ್ತ್ರಾಣಾಂ ವಾಹಿಕಾ ಗೋಪಕನ್ಯಕಾಃ ॥ ೪೫ ॥

---

೪೧ ಚಂಪಾ ಎಂಬ ಗೋಪಿಯನ್ನು ಹದಿಮೂರುಸಹಸ್ರ ಸಖಿಯರೂ ಚಂದನಾ ಎಂಬ ಗೋಪಿಯನ್ನು ಹದಿನಾರುಸಹಸ್ರ ಸಖಿಯರೂ ಹಿಂಬಾಲಿಸಿ, ಹೊರಟರು.

೪೨. ಎಲ್ಲರೂ ಆ ರಾಸಮಂಡಲದ ಸಮೀಪದಲ್ಲಿ ಒಟ್ಟಾಗಿ ಸೇರಿ ಕ್ಷಣಕಾಲ ಸಂತೋಷದಿಂದಿದ್ದರು. ಅಷ್ಟು ಹೊತ್ತಿಗೆ ಕೆಲವು ಗೋಪಿಯರು ಹೂವಮಾಲೆಗಳನ್ನು ಹಿಡಿದು ಅಲ್ಲಿಗೆ ಬಂದರು.

೪೩. ನಂದಗೋಕುಲದಿಂದ ಬರುವಾಗ ಕೆಲವು ಗೋಪಿಯರು ಸುವಾಸಿತ ವಾದ ಚಂದನ ಗಂಧವನ್ನೂ ಮತ್ತೆ ಕೆಲವರು ಶ್ವೇತಚಾಮರಗಳನ್ನೂ ತೆಗೆದುಕೊಂಡು ಸಂತೋಷದಿಂದ ಬಂದಿದ್ದರು.

೪೪. ಕೆಲವು ಗೋಪಕನ್ಯೆಯರು ಕಸ್ತೂರಿಯನ್ನೂ ಮತ್ತೆ ಕೆಲವರು ಕುಂಕುಮವನ್ನೂ ತೆಗೆದುಕೊಂಡು ಆ ರಾಸಮಂಡಲಕ್ಕೆ ಬಂದಿದ್ದರು.

೪೫. ಕೆಲವು ಗೋಪಿಯರು ತಾಂಬೂಲದ ತಟ್ಟೆಯನ್ನು ಹಿಡಿದುಕೊಂಡಿದ್ದರು. ಮತ್ತೆ ಕೆಲವರು ಸುವರ್ಣದಂತೆ ಉಜ್ಜ್ವಲವಾದ ವಸ್ತ್ರಗಳನ್ನು ತೆಗೆದುಕೊಂಡು ಬಂದಿದ್ದರು.

ಕಾಶ್ಚಿತ್ತತ್ರಾಽಽಯಯುಃ ಶೀಘ್ರಂ ಯತ್ರ ಚಂದ್ರಾವಲೀ ಮುದಾ ।
ಸರ್ವಾಶ್ಚೈಕತ್ರ ಸಂಭೂಯ ಸಸ್ಮಿತಾಶ್ಚ ಮುದಾಽನ್ವಿತಾಃ ॥ ೪೭ ॥

ವಿಧಾಯ ರಾಧಿಕಾವೇಷಂ ಸ್ಥಾನಾಚ್ಚ ಪ್ರಯಯುರ್ಮುದಾ ।
ಚಕ್ರುಃ ಪುನಃಪುನಸ್ತಾಶ್ಚ ಹರಿಶಬ್ದಜಪಂ ಪಥಿ ॥ ೪೭ ॥

ಪ್ರಾಪ್ಯವೃಂದಾವನಂ ರಮ್ಯಂ ದದೃಶೂ ರಾಸಮಂಡಲಂ ।
ಸ್ವರ್ಗೇಭ್ಯಃ ಸುಂದರಂ ದೃಶ್ಯಂ ರಾಕಾಪತಿಕರಾನ್ವಿತಂ ॥ ೪೮ ॥

ಸುನಿರ್ಜನಂ ಕುಸುಮಿತಂ ವಾಸಿತಂ ಪುಷ್ಪವಾಯುನಾ ।
ನಾರೀಣಾಂ ಕಾಮಜನನಂ ಮುನಿಮೋಹನಕಾರಣಂ ॥ ೪೯ ॥

ಶುಶ್ರುವುಸ್ತತ್ರ ತಾಃ ಸರ್ವಾಃ ಪುಂಸ್ಕೋಕಿಲಕಲಧ್ವನಿಂ ।
ಅತಿಸೂಕ್ಷ್ಮಕಲಂ ಚಾಪಿ ಭ್ರಮರಾಣಾಂ ಮನೋಹರಂ ॥ ೫೦ ॥

---

೪೬. ಚಂದ್ರಾವಳಿ ಎಂಬ ಗೋಪಿಯು ಇದ್ದೆಡೆಗೆ ಕೆಲವು ಸಖಿಯರು ಬಹಳ ಸಂತೋಷದಿಂದ ಬಂದು ಸೇರಿದರು. ಈ ರೀತಿಯಾಗಿ ಎಲ್ಲರೂ ಒಂದೆಡೆ ಸೇರಿ ಹಸನ್ಮುಖಿಯರಾಗಿ ನಲಿದಾಡಿದರು.

೩೭. ಎಲ್ಲರೂ ರಾಧೆಯ ವೇಷಭೂಷಗಳನ್ನು ಧರಿಸಿಕೊಂಡು ಅಲ್ಲಿಂದ ಹೊರಟರು. ದಾರಿಯಲ್ಲಿ ಎಲ್ಲರೂ 'ಹರಿ, ಹರಿ' ಎಂದು ಜಪಮಾಡಿಕೊಂಡು ಹೋಗುತ್ತಿದ್ದರು.

೪೮. ಎಲ್ಲರೂ ರಮ್ಯವಾದ ಬೃಂದಾವನಕ್ಕೆ ಹೋಗಿ ಚಂದ್ರಿಕೆಯಿಂದ ಶೋಭಿತವೂ, ಸ್ವರ್ಗಲೋಕಕ್ಕಿಂತ ಮನೋಹರವೂ ಆದ ರಾಸಮಂಡಲವನ್ನು ನೋಡಿದರು.

೪೯. ಕುಸುಮ ಸೌರಭದಿಂದ ವ್ಯಾಪ್ತವಾದ ಆ ರಾಸಮಂಡಲವು ನಿರ್ಜನ ವಾಗಿದ್ದುದರಿಂದ ಮುನಿಗಳನ್ನೇ ಮೊಹಗೊಳಿಸುವಂತಿತ್ತು. ಅಂದಮೇಲೆ ಕಾಮಿನಿಯ ರಿಗೆ ಕಾಮಜನಕವಾಗಿತ್ತೆಂಬುದರಲ್ಲಿ ಆಶ್ಚರ್ಯವೇನು ?

೫೦. ಅಲ್ಲಿ ಆ ಗೋಪಿಯರೆಲ್ಲರೂ ಗಂಡುಕೋಗಿಲೆಗಳ ಕಲರವವನ್ನೂ, ದುಂಬಿಗಳ ಮನೋಹರವಾದ ಝೇಂಕಾರವನ್ನೂ ಕೇಳಿ ಆನಂದಿಸಿದರು.

ಪ್ರಸೂನಮಧುಮತ್ತಾನಾಂ ಭ್ರಮರೀಸಂಗಸಂಗಿನಾಂ ।
ಶುಭೇ ಕ್ಷಣೇ ಪ್ರವಿವೇಶ ರಾಧಿಕಾ ರಾಸಮಂಡಲಂ ॥ ೫೧ ॥

ಸರ್ವಾಭಿರಾಲಿಭಿಃ ಸಾರ್ಧಂ ಧ್ಯಾತ್ವಾ ಕೃಷ್ಣಪದಾಂಬುಜಂ ।
ರಾಧಾಮಾರಾತ್ತು ಸಂವೀಕ್ಷ್ಯ ಕೃಷ್ಣಸ್ತತ್ರ ಮುದಾಽನ್ವಿತಃ ॥ ೫೨ ॥

ಜಗಾಮಾನುವ್ರಜನ್ಪ್ರೀತ್ಯಾ ಸಸ್ಮಿತೋ ಮದನಾತುರಃ ।
ಮಧ್ಯಸ್ಥಾಂ ಸಖಿಸಂಘಾನಾಂ ರತ್ನಾಲಂಕಾರಭೂಷಿತಾಂ ॥ ೫೩ ॥

ದಿವ್ಯವಸ್ತ್ರಪರೀಧಾನಾಂ ಸಸ್ಮಿತಾಂ ವಕ್ರಲೋಚನಾಂ ।
ಗಜೇಂದ್ರಗಾಮಿನೀಂ ರಮ್ಯಾಂ ಮುನಿಮಾನಸಮೋಹಿನೀಂ ॥ ೫೪ ॥

ನವೀನವೇಷವಯಸಾ ರೂಪೇಣಾತಿ ಮನೋಹರಾಂ ।
ಸ್ತನಶ್ರೋಣೀನಿತಂಬಾನಾಂ ಭಾರಶೇಷಾನ್ವಿತಾಂ ಪರಾಂ ॥ ೫೫ ॥

---

೫೧. ಪುಷ್ಪರಸವನ್ನು ಕುಡಿದು ಮದಿಸಿರುವ ಹೆಣ್ಣುದುಂಬಿಗಳೊಡನೆ ಆ ಗೋಪಿಯರು ಕ್ರೀಡಿಸುತ್ತಿದ್ದ ಶುಭಕ್ಷಣದಲ್ಲಿ ರಾಧೆಯು ಆ ರಾಸಮಂಡಲವನ್ನು ಪ್ರವೇಶಿಸಿದಳು.

೫೨. ಎಲ್ಲ ಸಖಿಯರೊಡನೆ ಶ್ರೀಕೃಷ್ಣನ ಪಾದಕಮಲಗಳನ್ನು ಸ್ಮರಿಸುತ್ತ, ಹತ್ತಿರದಲ್ಲೇ ನಿಂತಿದ್ದ ರಾಧೆಯನ್ನು ನೋಡಿ ಶ್ರೀಕೃಷ್ಣನು ಆನಂದಪರವಶನಾದನು.

೫೩. ರತ್ನಾಲಂಕಾರಭೂಷಿತಳಾಗಿ ಸಖಿಯರ ಗುಂಪಿನ ಮಧ್ಯದಲ್ಲಿದ್ದ ಆ ರಾಧೆಯನ್ನು ಮದನಾತುರನಾದ ಶ್ರೀಕೃಷ್ಣನು ನಸುನಗುತ್ತ ಪ್ರೇಮದಿಂದ ಹಿಂಬಾಲಿಸಿದನು.

೫೪. ದಿವ್ಯವಾದ ವಸ್ತ್ರವನ್ನುಟ್ಟು ಸ್ಮಿತಮುಖಿಯಾಗಿ ಮನೋಹರವಾದ ಓರೆಗಣ್ಣಿನಿಂದ ನೋಡುತ್ತಿದ್ದ ಆ ಗಜಗಮನೆಯು ಮುನಿಗಳ ಮನಸ್ಸನ್ನೂ ಮೋಹಗೊಳಿಸುವಂತಿದ್ದಳು.

೫೫. ಹೊಸದಾದ ವೇಷ, ವಯಸ್ಸು ಮತ್ತು ರೂಪದಿಂದ ಮನೋಹರಳಾಗಿದ್ದ ಆ ರಾಧೆಯು, ಸ್ತನ, ಶ್ರೋಣಿ ಮತ್ತು ನಿತಂಬಗಳ ಭಾರದಿಂದ ಸ್ವಲ್ಪ ಅವನತಳಾಗಿದ್ದಳು.

ಚಾರುಚಂಪಕವರ್ಣಾಭಾಂ ಶರಚ್ಚಂದ್ರನಿಭಾನನಾಂ ।
ಬಿಭ್ರತೀಂ ಕಬರೀಭಾರಂ ಮಾಲತೀಮಾಲ್ಯಸಂಯುತಂ ॥ ೫೬ ॥

ರಾಧಾ ದದರ್ಶ ಶ್ರೀಕೃಷ್ಣಂ ಕಿಶೋರಂ ಶ್ಯಾಮಸುಂದರಂ ।
ನವಯೌವನಸಂಪನ್ನಂ ರತ್ನಾಭರಣಭೂಷಿತಂ ॥ ೫೭ ॥

ಕಂದರ್ಪಕೋಟಿಲಾವಣ್ಯಲೀಲಾಧಾಮ ಮನೋಹರಂ ।
ಪ್ರಾಣಾಧಿಕಾಂ ತಾಂ ಪಶ್ಯಂತಂ ಪಶ್ಯಂತೀಂ ವಕ್ರಚಕ್ಷುಷಾ ॥ ೫೮ ॥

ಪರಮಾದ್ಭುತರೂಪಂ ಚ ಸರ್ವತ್ರಾನುಪಮಂ ಪರಂ ।
ವಿಚಿತ್ರವೇಷಂ ಚೂಡಾಂ ಚ ಬಿಭ್ರತಂ ಸಸ್ಮಿತಂ ಮುದಾ ॥ ೫೯ ॥

ವಕ್ರಲೋಚನಕೋಣೇನ ದರ್ಶಂ ದರ್ಶಂ ಪುನಃ ಪುನಃ ।
ಮುಖಮಾಚ್ಛಾದಯಾಂಚಕ್ರೇ ವ್ರೀಡಯಾ ಸಸ್ಮಿತಾ ಸತೀ ॥ ೬೦ ॥

---

೫೬. ಸಂಪಿಗೆಯ ವರ್ಣದಂತಿರುವ ಮೈಬಣ್ಣದಿಂದಲೂ, ಶರಚ್ಚಂದ್ರನಂತಿರುವ ಮುಖದಿಂದಲೂ ಶೋಭಿಸುತ್ತಿದ್ದ ಆ ರಾಧೆಯು ತಲೆಗೂದಲಿನಲ್ಲಿ ಮಾಲತೀ ಹೂಮಾಲೆಯನ್ನು ಮುಡಿದಿದ್ದಳು.

೫೭. ಇತ್ತ ರಾಧೆಯೂ ಕೂಡ ಶ್ಯಾಮಸುಂದರನೂ, ನವಯೌವನ ಸಂಪನ್ನನೂ, ರತ್ನಾಭರಣಭೂಷಿತನೂ ಆದ ನಂದಕಿಶೋರನನ್ನು ನೋಡಿದಳು.

೫೮. ಕೋಟಿಮನ್ಮಥರ ಲಾವಣ್ಯಕ್ಕೆ ಆಧಾರನೂ, ಮನೋಹರನೂ ಆದ ಆ ಶ್ರೀಕೃಷ್ಣನು ತನ್ನನ್ನು ವಕ್ರಕಟಾಕ್ಷದಿಂದ ನೋಡುತ್ತಿದ್ದ ಪ್ರಾಣಾಧಿಕಳಾದ ರಾಧೆಯನ್ನು ಪ್ರೇಮದೃಷ್ಟಿಯಿಂದ ನೋಡುತ್ತಿದ್ದನು.

೫೯. ವಿಚಿತ್ರವಾದ ವೇಷವನ್ನೂ ಶಿಖೆಯನ್ನೂ ಧರಿಸಿ ಸ್ಮಿತವದನನಾಗಿದ್ದ ಆ ಗೋಪಕಿಶೋರನ ಅನುಪಮವೂ ಅತ್ಯದ್ಭುತವೂ ಆದ ರೂಪವನ್ನು ರಾಧೆಯು ನೋಡಿದಳು.

೬೦. ತನ್ನ ಕಣ್ಣಿನಿಂದ ಅವನನ್ನು ಪುನಃ ಪುನಃ ನೋಡಿ ಲಜ್ಜಿತಳಾದ ಆ ರಾಧೆಯು ಸ್ಮಿತಮುಖಿಯಾಗಿ ತನ್ನ ಮುಖವನ್ನು ಸೆರಗಿನಿಂದ ಮರೆಮಾಡಿ ಕೊಂಡಳು.

ಮೂರ್ಛಾಮವಾಪ ಸಾ ಸದ್ಯಃ ಕಾಮಬಾಣಪ್ರಪೀಡಿತಾ ।
ಪುಲಕಾಂಚಿತಸರ್ವಾಂಗೀ ಬಭೂವ ಹತಚೇತನಾ ॥ ೬೧ ॥

ಕಟಾಕ್ಷಕಾಮಬಾಣೈಶ್ಚ ವಿದ್ಧಃ ಕ್ರೀಡಾರಸೋನ್ಮುಖಃ ।
ಮೂರ್ಛಾಂ ಪ್ರಾಪ್ಯ ನ ಪಪಾತ ತಸ್ಥೌ ಸ್ಥಾಣುಸಮೋ ಹರಿಃ ॥ ೬೨ ॥

ಪಪಾತ ಮುರಲೀ ತಸ್ಯ ಕ್ರೀಡಾಕಮಲಮುಜ್ಜ್ವಲಂ ।
ದ್ವಿತೀಯಂ ಪೀತವಸ್ತ್ರಂ ಚ ಶಿಖಿಪಿಚ್ಛಂ ಶರೀರತಃ ॥ ೬೩ ॥

ಕ್ಷಣೇನ ಚೇತನಾಂ ಪ್ರಾಪ್ಯ ಯಯೌ ರಾಧಾಂತಿಕಂ ಮುದಾ ।
ಕೃತ್ವಾ ವಕ್ಷಸಿ ತಾಂ ಪ್ರೀತ್ಯಾ ಸಮಾಶ್ಲಿಷ್ಯ ಚುಚುಂಬ ಸಃ ॥ ೬೪ ॥

ಶ್ರೀಕೃಷ್ಣಸ್ಪರ್ಶಮಾತ್ರೇಣ ಸಂಪ್ರಾಪ್ಯ ಚೇತನಾಂ ಸತೀ ।
ಪ್ರಾಣಾಧಿಕಂ ಪ್ರಾಣನಾಥಂ ಸಮಾಶ್ಲಿಷ್ಯ ಚುಚುಂಬ ಹ ॥ ೬೫ ॥

---

೬೧. ಕಾಮಬಾಣಪೀಡಿತಳಾಗಿ ರೋಮಾಂಚಿತವಾದ ಸಕಲಾವಯವಗಳುಳ್ಳ ಆ ರಾಧೆಯು ಕೂಡಲೇ ಮೂರ್ಛೆಗೊಂಡು ನಿಶ್ಚೇಷ್ಟಳಾದಳು.

೬೨. ಅತ್ತ ಶ್ರೀಹರಿಯೂ ಕೂಡ ರಾಧೆಯ ಕಟಾಕ್ಷವೆಂಬ ಕಾಮಬಾಣಗಳ ಪಟ್ಟಿಗೆ ಸಿಲುಕಿ, ಮನ್ಮಥ ಕ್ರೀಡೆಯಲ್ಲಿ ಆಸಕ್ತನಾಗಿ ಮೂರ್ಛಾವಸ್ಥೆಯನ್ನು ಹೊಂದಿದರೂ ಕೆಳಕ್ಕೆ ಬೀಳದೆ ಮೋಟುಮರದಂತೆ ನಿಂತಿದ್ದನು

೬೩ ಆಗ ಅವನ ಕೈಯಲ್ಲಿದ್ದ ಕೊಳಲು ಮತ್ತು ಕ್ರೀಡಾಕಮಲವೂ, ಹೊದಿದಿದ್ದ ಪೀತಾಂಬರವೂ, ತಲೆಯಲ್ಲಿ ಧರಿಸಿದ್ದ ನವಿಲುಗರಿಯೂ ಕೆಳಕ್ಕೆ ಬಿದ್ದವು.

೬೪. ಕ್ಷಣಕಾಲ ಕಳೆದನಂತರ ಚೇತನವನ್ನು ಪಡೆದ ಶ್ರೀಹರಿಯು ಸಂತೋಷದಿಂದ ರಾಧೆಯ ಸಮೀಪಕ್ಕೆ ಹೋಗಿ ಆಕೆಯನ್ನು ಪ್ರೀತಿಯಿಂದ ಎದೆಗಪ್ಪಿಕೊಂಡು ಮುತ್ತಿಟ್ಟನು

೬೫. ಆ ರಾಧೆಯೂ ಕೂಡ ಶ್ರೀಕೃಷ್ಣನ ಸ್ಪರ್ಶಮಾತ್ರದಿಂದ ಚೇತನವನ್ನು ಹೊಂದಿ, ತನ್ನ ಪ್ರಾಣಕ್ಕಿಂತ ಅಧಿಕನಾದ ಆ ಪ್ರಾಣನಾಥನನ್ನು ಆಲಿಂಗಿಸಿಕೊಂಡು ಮುತ್ತಿಟ್ಟಳು.

ಮನೋ ಜಹಾರ ರಾಧಾಯಾಃ ಕೃಷ್ಣಸ್ತಸ್ಯ ಚ ಸಾ ಮುನೇ ।
ಜಗಾಮ ರಾಧಯಾ ಸಾರ್ಧಂ ರಸಿಕೋ ರತಿಮಂದಿರಂ ॥ ೬೬ ॥

ರತ್ನಪ್ರದೀಪಸಂಯುಕ್ತಂ ರತ್ನದರ್ಪಣಸಂಯುತಂ ।
ಚಾರುಚಂಪಕಶಯ್ಯಾಭಿಶ್ಚಂದನಾಕ್ತಾಭೀ ರಾಜಿತಂ ॥ ೬೭ ॥

ಕರ್ಪೂರಾನ್ವಿತತಾಂಬೂಲೈ ರ್ಭೋಗದ್ರವ್ಯೈಃ ಸಮನ್ವಿತಂ ।
ಉವಾಸ ರಾಧಯಾ ಸಾರ್ಧಂ ಕೃಷ್ಣಸ್ತತ್ರ ಮುದಾಽನ್ವಿತಃ ॥ ೬೮ ॥

ರಾಧಯಾ ದತ್ತತಾಂಬೂಲಂ ಚಖಾದ ಮಧುಸೂದನಃ ।
ರಾಸೇಶ್ವರೀ ಕೃಷ್ಣದತ್ತಂ ತಾಂಬೂಲಂ ಬುಭುಜೇ ಮುದಾ ॥ ೬೯ ॥

---

೬೬. ಶ್ರೀಕೃಷ್ಣನು ರಾಧೆಯ ಮನಸ್ಸನ್ನೂ ರಾಧೆಯು ಶ್ರೀಕೃಷ್ಣನ ಮನಸ್ಸನ್ನೂ ಅನ್ಯೋನ್ಯವಾಗಿ ಅಪಹರಿಸಿದರು. ಅನಂತರ ಆ ರಸಿಕೇಶ್ವರನು ಆ ರಾಧೆಯೊಡನೆ ರತಿಗೃಹಕ್ಕೆ ಹೋದನು.

೬೭. ಆ ರತಿಗೃಹದಲ್ಲಿ ರತ್ನದೀಪಗಳೂ, ರತ್ನಗನ್ನಡಿಗಳೂ ಶೋಭಿಸುತ್ತಿದ್ದುವಲ್ಲದೆ ಚಂದನಾಕ್ತವಾಗಿ ಮನೋಹರವಾಗಿರುವ ಸಂಪಿಗೆಹೂವಿನ ಹಾಸಿಗೆಗಳು ವಿರಾಜಿಸುತ್ತಿದ್ದವು.

೬೮. ಪಚ್ಚಕರ್ಪೂರದಿಂದ ಸುಸಂಸ್ಕೃತವಾದ ತಾಂಬೂಲದಿಂದಲೂ, ಇತರ ಭೋಗದ್ರವ್ಯಗಳಿಂದಲೂ ಪರಿಪೂರ್ಣವಾದ ಆ ರತಿಮಂದಿರದಲ್ಲಿ ಶ್ರೀಕೃಷ್ಣನು ರಾಧೆಯೊಡನೆ ಕುಳಿತುಕೊಂಡನು.

೬೯. ಅನಂತರ ಮಧುಸೂದನನು ರಾಧೆಯು ಕೊಟ್ಟ ತಾಂಬೂಲವನ್ನು ಚರ್ವಣಮಾಡಿದನು. ರಾಸೇಶ್ವರಿಯಾದ ರಾಧೆಯೂ ಕೂಡ ಶ್ರೀಕೃಷ್ಣನು ಕೊಟ್ಟ ತಾಂಬೂಲವನ್ನು ಭುಂಜಿಸಿದಳು.

ದತ್ತಂ ಚರ್ವಿತತಾಂಬೂಲಂ ರಾಧಾಯೈ ಪ್ರಭುಣಾ ಮುದಾ ।
ಚಖಾದ ಭಕ್ತ್ಯಾ ಸಾ ತೂರ್ಣಂ ಪ್ರಹಸ್ಯ ಮದನಾತುರಾ ॥ ೭೦ ॥

ರಾಧಾಚರ್ವಿತತಾಂಬೂಲಂ ಯಯಾಚೇ ಮಾಧವೋ ಮುದಾ ।
ನ ದದೌ ರಾಧಿಕಾ ಭೀತಾ ಪಪಾತ ಚರಣಾಂಬುಜೇ ॥ ೭೧ ॥

ಏತಸ್ಮಿನ್ನಂತರೇ ತತ್ರ ಸಕಾಮಃ ಸುರತೋನ್ಮುಖಃ ।
ಸುಷ್ವಾಪ ರಾಧಯಾ ಸಾರ್ಧಂ ರತಿತಲ್ಪೇ ಮನೋಹರೇ ॥ ೭೨ ॥

ಶೃಂಗಾರಾಷ್ಟಪ್ರಕಾರಂ ಚ ವಿಪರೀತಾದಿಕಂ ವಿಭುಃ ।
ನಖದಂತಕರಾಣಾಂ ಚ ಪ್ರಹಾರಂ ಚ ಯಥೋಚಿತಂ ॥ ೭೩ ॥

ಕಾಮಶಾಸ್ತ್ರೇಷು ಯದ್ಗೋಪ್ಯಂ ಚುಂಬನಾಷ್ಟವಿಧಂ ಪರಂ ।
ಕಾಮಿನೀನಾಂ ಮನೋಹಾರಿ ಚಕಾರ ರಸಿಕೇಶ್ವರಃ ॥ ೭೪ ॥

---

೭೦. ಪ್ರಭುವಾದ ಶ್ರೀಕೃಷ್ಣನು ತಾನು ಅಗಿದ ತಾಂಬೂಲವನ್ನು ಸಂತೋಷದಿಂದ ರಾಧೆಗೆ ಕೊಟ್ಟನು. ಮದನಪರವಶಳಾದ ಆ ರಾಧೆಯು ನಸುನಕ್ಕು ಭಕ್ತಿಪೂರ್ವಕವಾಗಿ ಅದನ್ನು ತಿಂದಳು.

೭೧. ಮಾಧವನೂ ಕೂಡ ಸಂತೋಷದಿಂದ ರಾಧೆಯು ಅಗಿದ ತಾಂಬೂಲವನ್ನು ಬೇಡಿದನು. ಆದರೆ ದೋಷಭೀತಳಾದ ಆ ದೇವಿಯು ಅದನ್ನು ಕೊಡದೆ ಅವನ ಚರಣಕಮಲಗಳ ಮೇಲೆ ಬಿದ್ದಳು.

೭೨. ಅಷ್ಟರೊಳಗೆ ಕಾಮೋದ್ರಿಕ್ತನಾದ ಶ್ರೀಕೃಷ್ಣನು ಸುರತಸುಖಾಸಕ್ತನಾಗಿ ಮನೋಹರವಾದ ರತಿತಲ್ಪದಲ್ಲಿ ರಾಧೆಯೊಡನೆ ಪವಡಿಸಿದನು.

೭೩. ಸರ್ವಜ್ಞನಾದ ಶ್ರೀಹರಿಯು ಆ ರಾಧೆಯೊಡನೆ ವಿಪರೀತರತವೇ ಮುಂತಾದ ಅಷ್ಟವಿಧ ಶೃಂಗಾರಸುಖವನ್ನು ಅನುಭವಿಸಿದುದಲ್ಲದೆ ನಖಕ್ಷತ ದಂತಕ್ಷತಗಳನ್ನೂ, ಕರಪ್ರಹಾರಾದಿಗಳನ್ನೂ ಯಥೋಚಿತವಾಗಿ ಮಾಡಿದನು.

೭೪ ಆ ರಸಿಕೇಶ್ವರನು ಕಾಮಶಾಸ್ತ್ರದಲ್ಲಿ ಗೋಪ್ಯವಾಗಿರುವ ಪರಮ ಕಾಮಿನಿಯರ ಮನಸ್ಸನ್ನು ಸೆಳೆಯುವ ಅಷ್ಟವಿಧ ಚುಂಬನಗಳನ್ನು ಮಾಡಿದನು.

ಅಂಗೈರಂಗಾನಿ ಪ್ರತ್ಯಂಗೈಃ ಪ್ರತ್ಯಂಗಾನಿ ಸ್ಮರಾತುರಃ ।
ಚಕಾರಾऽऽಶ್ಲೇಷಣಂ ತತ್ರ ಕಾಮುಕೀನಾಂ ಸುಖಾವಹಂ ॥ ೭೫ ॥

ಶೃಂಗಾರಕುಶಲೌ ತೌ ತು ಕಾಮಶಾಸ್ತ್ರಸುಪಂಡಿತೌ ।
ರತಿಯುದ್ಧವಿರಾಮಶ್ಚ ನ ಬಭೂವ ದ್ವಯೋರಪಿ ॥ ೭೬ ॥

ಏವಂ ಗೃಹೇ ಗೃಹೇ ರಮ್ಯೇ ನಾನಾಮೂರ್ತಿಂವಿಧಾಯ ಚ ।
ರೇಮೇ ಗೋಪಾಂಗನಾಭಿಶ್ಚ ಸುರಮ್ಯೇ ರಾಸಮಂಡಲೇ ॥ ೭೭ ॥

ಅಭ್ಯಂತರೇ ರತಿಂ ಕೃತ್ವಾ ಬಹಿಃ ಕ್ರೀಡಾಂ ಚಕಾರ ಹ ।
ಗೋಪೀಗೋಪಸಮಾಶ್ಲಿಷ್ಟಃ ಸರ್ವತ್ರ ರಾಸಮಂಡಲೇ ॥ ೭೮ ॥

ಗೋಪೀನಾಂ ನವ ಲಕ್ಷಾಣಿ ಗೋಪಾನಾಂ ಚ ತಥೈವ ಚ ।
ಲಕ್ಷಾಣ್ಯಷ್ಟಾದಶ ಮುನೇ ಯುಕ್ತಾನಿ ರಾಸಮಂಡಲೇ ॥ ೭೯ ॥

---

೭೫. ಸ್ಮರಾತುರನಾದ ಅವನು ಕಾಮುಕಿಯರಿಗೆ ಸುಖದಾಯಕವಾದ ಅಂಗ ಪ್ರತ್ಯಂಗ ಆಶ್ಲೇಷಗಳನ್ನು ಮಾಡಿದನು. ಅಂದರೆ ತನ್ನ ಎಲ್ಲ ಅವಯವಗಳೂ ರಾಧೆಯ ಎಲ್ಲ ಅವಯವಗಳ ಸಂಬಂಧ ಪಡೆಯುವಂತೆ ಆಲಿಂಗಿಸಿಕೊಂಡನು.

೭೬. ಅವರಿಬ್ಬರೂ ಶೃಂಗಾರಚತುರರೂ, ಕಾಮಶಾಸ್ತ್ರನಿಪುಣರೂ ಆಗಿದ್ದುದ ರಿಂದ ಇಬ್ಬರಿಗೂ ರತಿಯುದ್ಧದಲ್ಲಿ ತೃಪ್ತಿಯೇ ಆಗಲಿಲ್ಲ.

೭೭. ಇದೇ ರೀತಿಯಾಗಿ ರಮ್ಯವಾದ ಪ್ರತಿಯೊಂದು ರತಿಮಂದಿರದಲ್ಲೂ ಬೇರೆ ಬೇರೆ ಮೂರ್ತಿಯನ್ನು ಕಲ್ಪಿಸಿಕೊಂಡು ಶ್ರೀಕೃಷ್ಣನು ರಮ್ಯವಾದ ರಾಸ ಮಂಡಲದಲ್ಲಿ ಗೋಪಾಂಗನೆಯರೊಡನೆ ಕ್ರೀಡಿಸುತ್ತಿದ್ದನು.

೭೮. ರತಿಗೃಹದ ಒಳಗಡೆ ಕ್ರೀಡಿಸಿದನಂತರ ಹೊರಗಡೆ ಬಂದು ಗೋಪಿಯ ರಿಂದಲೂ, ಗೋಪರಿಂದಲೂ ಆಲಿಂಗಿಸಲ್ಪಟ್ಟು ರಾಸಮಂಡಲದಲ್ಲೆಲ್ಲ ಕ್ರೀಡಿಸಿದನು.

೭೯. ಎಲೈ ಮುನಿಯೇ, ಆ ರಾಸಮಂಡಲದಲ್ಲಿ ಒಂಭತ್ತುಲಕ್ಷ ಗೋಪಿಯರೂ, ಹದಿನೆಂಟುಲಕ್ಷ ಗೋಪರೂ ಶ್ರೀಕೃಷ್ಣನೊಡನೆ ಕ್ರೀಡಿಸಲು ಬಂದಿದ್ದರು.

ಮುಕ್ತಕೇಶಾನಿ ನಗ್ನಾನಿ ವಿಚ್ಛಿನ್ನಭೂಷಣಾನಿ ಚ ।
ವೇಷೋಚ್ಛಿನ್ನಾನಿ ಮತ್ತಾನಿ ಮೂರ್ಛಿತಾನಿ ಸ್ಮರೇಣ ಚ ॥ ೮೦ ॥

ಕಂಕಣಾನಾಂ ಕಿಂಕಿಣೀನಾಂ ವಲಯಾನಾಂ ಚ ನಾರದ ।
ಸದ್ರತ್ನನೂಪುರಾಣಾನಂ ಚ ಶಬ್ದಯುಕ್ತಾನಿ ಸಂತತಂ ॥ ೮೧ ॥

ಏವಂ ಕೃತ್ವಾ ಸ್ಥಲಕ್ರೀಡಾಂ ಯಯುಸ್ತಾನಿ ಜಲಂ ಮುದಾ ।
ಕೃತ್ವಾ ತತ್ರ ಚಿರಂ ಕ್ರೀಡಾಂ ಪರಿಶ್ರಾಂತಾನಿ ಸಾಂಪ್ರತಂ ॥ ೮೨ ॥

ತೂರ್ಣಂ ಜಲಾತ್ಸಮುತ್ಥಾಯ ವಾಸಾಂಸಿ ಪರಿಧಾಯ ಚ ।
ದದೃಶುರ್ಮುಖಪದ್ಮಾನಿ ಸದ್ರತ್ನದರ್ಪಣೇಷು ಚ ॥ ೮೩ ॥

ಚಂದನಾಗುರುಕಸ್ತೂರೀ ದ್ರವ್ಯಾಣಿ ಪುಷ್ಪಮಾಲಿಕಾಃ ।
ಮುದಾ ಪರಿಬಧುಸ್ತಾನಿ ಸಂಪ್ರಾಪುಶ್ಚೇತನಾನಿ ಚ ॥ ೮೪ ॥

---

೮೦. ಕಾಮಪೀಡಿತರಾದ ಅವರೆಲ್ಲರೂ ಕೆದರಿದ ತಲೆಗೂದಲುಗಳಿಂದಲೂ, ಅಸ್ತವ್ಯಸ್ತವಾದ ಉಡುಪುಗಳಿಂದಲೂ, ಅಲ್ಲಲ್ಲೇ ತ್ರುಟಿತವಾದ ಭೂಷಣಗಳಿಂದಲೂ ಕೂಡಿ ಮದಿಸಿದವರಂತೆ ತೋರುತ್ತಿದ್ದರು.

೮೧. ಎಲೈ ನಾರದನೇ, ಈ ರೀತಿ ಕ್ರೀಡೆಯಲ್ಲಿ ಆಸಕ್ತರಾಗಿದ್ದ ಆ ಗೋಪ ಗೋಪಿಯರ ಬಳಿ, ಡಾಬಿನ ಕಿರುಗೆಜ್ಜೆ ಮತ್ತು ರತ್ನನೂಪುರಗಳು ಝಣಝಣತ್ಕಾರ ಮಾಡುತ್ತಿದ್ದವು.

೮೨. ಹೀಗೆ ಸ್ವಲ್ಪಹೊತ್ತು ಸ್ಥಲದಲ್ಲಿ ಕ್ರೀಡಿಸಿದನಂತರ ಅವರೆಲ್ಲರೂ ಯಮುನೆಯ ನೀರಿಗಿಳಿದರು. ಅಲ್ಲಿಯೂ ಬಹಳ ಹೊತ್ತು ಕ್ರೀಡಿಸಿ ಆಯಾಸಗೊಂಡರು.

೮೩. ಅನಂತರ ಎಲ್ಲರೂ ನೀರಿನಿಂದ ಮೇಲಕ್ಕೆ ಬಂದು ತಮ್ಮ ತಮ್ಮ ವಸ್ತ್ರಗಳನ್ನು ಧರಿಸಿ, ರತ್ನಗನ್ನಡಿಗಳಲ್ಲಿ ತಮ್ಮ ಮುಖಗಳನ್ನು ನೋಡಿಕೊಂಡರು.

೮೪ ಚಂದನ, ಅಗುರು, ಕಸ್ತೂರಿ ಮತ್ತು ಕುಂಕುಮವೇ ಮುಂತಾದ ಸುಗಂಧದ್ರವ್ಯಗಳನ್ನು ಅಂಗಾಂಗಗಳಿಗೂ ಲೇಪಿಸಿಕೊಂಡು, ಪುಷ್ಪಮಾಲಿಕೆಯನ್ನು ಧರಿಸಿ, ಸಚೇತನರಾಗಿ ಎಲ್ಲರೂ ಸಂತಸಗೊಂಡರು.

ಸಕರ್ಪೂರಂ ಚ ತಾಂಬೂಲಂ ಭುಕ್ತ್ವಾ ಸರ್ವಾಣಿ ಕೌತುಕಾತ್ ।
ದದೃಶುರ್ಮುಖಪದ್ಮಾನಿ ಸದ್ರತ್ನೇ ದರ್ಪಣೇಽಮಲೇ ॥ ೮೫ ॥

ಕಾಚಿತ್ಕಾಮಾತುರಾ ಕೃಷ್ಣಂ ಬಲಾದಾಕೃಷ್ಯ ಕೌತುಕಾತ್ ।
ಹಸ್ತಾದ್ವಂಶೀಂ ನಿಜಗ್ರಾಹ ವಸನಂ ಚ ಚಕರ್ಷ ಹ ॥ ೮೬ ॥

ಕಾಚಿತ್ಕಾಮಪ್ರಮತ್ತಾ ಚ ನಗ್ನಂ ಕೃತ್ವಾ ತು ಮಾಧವಂ ।
ನಿಜಗ್ರಾಹ ಪೀತವಸ್ತ್ರಂ ಪರಿಹಸ್ಯ ಪುನರ್ದದೌ ॥ ೮೭ ॥

ಯುಕ್ತಿಂ ಶೃಣ್ವಿತ್ಯೇವಮುಕ್ತ್ವಾ ಕಾಚಿತ್ಸಂಗೃಹ್ಯ ಸ್ವಾಮಿನಂ ।
ಚುಚುಂಬ ಗಂಡೇ ಬಿಂಬೋಷ್ಠೇ ಸಮಾಶ್ಲಿಷ್ಯ ಪುನಃ ಪುನಃ ॥ ೮೮ ॥

ಸಸ್ಮಿತಂ ಸಕಟಾಕ್ಷಂ ಚ ಮುಖಚಂದ್ರಂ ಸ್ತನೋನ್ನತಂ ।
ಕಾಚಿಚ್ಛ್ರೋಣೀಂ ಸುಲಲಿತಾಂ ದರ್ಶಯಾಮಾಸ ಕಾಮತಃ ॥ ೮೯ ॥

---

೮೫ ಅನಂತರ ಎಲ್ಲರೂ ಪಚ್ಚಕರ್ಪೂರಾದಿಗಳಿಂದ ಸುವಾಸಿತವಾದ ತಾಂಬೂಲವನ್ನು ಸೇವಿಸಿ ಪುನಃ ರತ್ನದರ್ಪಣದಲ್ಲಿ ತಮ್ಮ ಮುಖಕಮಲವನ್ನು ನೋಡಿಕೊಂಡರು.

೮೬. ಕಾಮಾತುರಳಾದ ಒಬ್ಬ ಗೋಪಿಯು ಶ್ರೀಕೃಷ್ಣನನ್ನು ಬಲಾತ್ಕಾರದಿಂದ ಹಿಡಿದೆಳೆದು ಅವನ ಕೈಯಲ್ಲಿದ್ದ ಕೊಳಲನ್ನು ಕಿತ್ತುಕೊಂಡು ಅವನು ಧರಿಸಿದ್ದ ವಸ್ತ್ರವನ್ನೂ ಎಳೆದಳು.

೮೭. ಕಂದರ್ಪದರ್ಪಿತಳಾದ ಮತ್ತೊಬ್ಬ ಕಾಮಿನಿಯು ಶ್ರೀಹರಿಯ ಪೀತಾಂಬರವನ್ನು ಕಿತ್ತುಕೊಂಡು ಸ್ವಲ್ಪಹೊತ್ತು ನಗ್ನನಾಗಿರುವಂತೆ ಮಾಡಿ, ಹಾಸ್ಯ ಮಾಡಿ ಪುನಃ ಆ ವಸ್ತ್ರವನ್ನು ಹಿಂದಕ್ಕೆ ಕೊಟ್ಟಳು.

೮೮. ಒಬ್ಬ ಗೋಪಿಯು ಏನೋ ಯುಕ್ತಿಯನ್ನು ಹೇಳುವುದಾಗಿ ನಟಿಸಿ, ಶ್ರೀಕೃಷ್ಣನನ್ನು ತನ್ನ ಹತ್ತಿರಕ್ಕೆ ಎಳೆದು ಅವನನ್ನು ಆಲಿಂಗಿಸಿಕೊಂಡು ಅವನ ಕೆನ್ನೆಗೂ, ಕೆಳತುಟಿಗೂ ಮುತ್ತಿಟ್ಟಳು.

೮೯. ಮತ್ತೊಬ್ಬ ಕಾಮಿನಿಯು ಸ್ಮಿತವದನಳಾಗಿ ತನ್ನ ಚಂದ್ರಮುಖವನ್ನೂ, ಉನ್ನತವಾದ ಸ್ತನಗಳನ್ನೂ, ಮನೋಹರವಾದ ಶ್ರೋಣೀಬಿಂಬವನ್ನೂ ವ್ಯಕ್ತಪಡಿಸಿ ಶ್ರೀಕೃಷ್ಣನನ್ನು ಕಟಾಕ್ಷದಿಂದ ನೋಡಿದಳು.

ಕಾಚಿತ್ಕಾಂತಂ ಕರೇ ಕೃತ್ವಾ ಸಂಪ್ರಾಪ್ಯ ಶ್ರೋಣಿದೇಶತಃ ।
ಚಕಾರ ಚೂಡಾನಿರ್ಮಾಣಂ ಮಾಲತೀಮಾಲ್ಯಸಂಯುತಂ ॥ ೯೦ ॥

ಕಾಚಿಚ್ಚೂಡಾಂ ಸಮಾಕೃಷ್ಯ ಮಯೂರಪಿಚ್ಛಕಂ ದದೌ ।
ಗುಂಜಾಮಾಲ್ಯಂ ಚ ಚೂಡಾಯಾಂ ವೇಷ್ಟಯಾಮಾಸ ಕಾಚನ ॥ ೯೧ ॥

ಪ್ರದದೌ ಸ್ವಾಮಿನೇ ಕಾಮಾತ್ಪ್ರೇಮವರ್ಧನ ಹೇತವೇ ।
ಕಾಚಿತ್ಕಾಂಚಿತ್ಸಮಾಕೃಷ್ಯ ನಗ್ನಾಂ ಕೃತ್ವಾ ತು ಕಾಮತಃ ॥ ೯೨ ॥

ಪ್ರೇಷಯಾಮಾಸ ಕೃಷ್ಣಸ್ಯ ಕ್ರೋಡೇ ಚಂದನ ಚರ್ಚಿತೇ ।
ನನೃತುಶ್ಚ ಜಗುಃ ಕಾಶ್ಚಿತ್ಕಾಂತಂ ಕೃತ್ವಾ ತು ಕಾಮತಃ ॥ ೯೩ ॥

ನರ್ತನಂ ಕಾರಯಾಮಾಸ ತಂ ಚ ಕಾಚಿದ್ಬಲೇನ ಚ ।
ಕೃಷ್ಣಶ್ಚ ವಸ್ತ್ರಂ ಕಸ್ಯಾಶ್ಚ ವಿಚಕರ್ಷ ಕುತೂಹಲಾತ್ ॥ ೯೪ ॥

---

೯೦. ಒಬ್ಬ ಕಾಮಿನಿಯು ಕಾಂತನಾದ ಕೃಷ್ಣನನ್ನು ಕೈಹಿಡಿದೆಳೆದುಕೊಂಡು ತನ್ನ ತೊಡೆಯ ಮೇಲೆ ಕುಳ್ಳಿರಿಸಿಕೊಂಡು ಅವನ ಶಿಖೆಯನ್ನು ಕಟ್ಟಿ ಜಾಜೀ ಹೂಮಾಲೆಯನ್ನು ಮುಡಿಸಿದಳು.

೯೧. ಒಬ್ಬ ಗೋಪಿಯು ಶ್ರೀಹರಿಯ ಶಿಖೆಗೆ ನವಿಲುಗರಿಯನ್ನು ಸಿಕ್ಕಿಸಿದಳು. ಮತ್ತೊಬ್ಬಳು ಅವನ ಕೇಶಪಾಶದಲ್ಲಿ ಗುಲಗಂಜಿಯ ಮಾಲೆಯನ್ನು ಸುತ್ತಿದಳು.

೯೨. ಕಾಮುಕಿಯಾದ ಒಬ್ಬ ಗೋಪಿಯು ಮತ್ತೊಬ್ಬಳನ್ನು ಹಿಡಿದೆಳೆದು ಅವಳ ವಸ್ತ್ರವನ್ನು ಕಳಚಿ, ನಗ್ನಳನ್ನಾಗಿ ಮಾಡಿ ಪ್ರೇಮವೃದ್ಧಿಯಾಗಲೆಂದು ಅವಳನ್ನು ಶ್ರೀಹರಿಗೆ ಸಮರ್ಪಿಸಿದಳು.

೯೩. ಒಬ್ಬಳು ಚಂದನಾನುಲಿಪ್ತವಾದ ಶ್ರೀಕೃಷ್ಣನ ವಕ್ಷಃಸ್ಥಲಕ್ಕೆ ಮತ್ತೊಬ್ಬಳನ್ನು ಕಳುಹಿಸಿದಳು. ಕೆಲವರು ಕಾಂತನಾದ ಶ್ರೀಕೃಷ್ಣನನ್ನು ಇಷ್ಟಬಂದಂತೆ ಆಲಂಗಿಸಿಕೊಂಡು ಹಾಡಿ ನರ್ತನಮಾಡಿದರು.

೯೪. ಮತ್ತೊಬ್ಬಳು ಬಲಾತ್ಕಾರಮಾಡಿ ಶ್ರೀಕೃಷ್ಣನಿಂದ ನರ್ತನಮಾಡಿಸಿದಳು. ಕುತೂಹಲಿಯಾದ ಶ್ರೀಕೃಷ್ಣನೂ ಕೂಡ ಒಬ್ಬ ಗೋಪಿಯ ವಸ್ತ್ರವನ್ನು ಎಳೆದನು.

ಕಾಂಚಿತ್ಕೃತ್ವಾತು ನಗ್ನಾಂ ಚ ಕಸ್ಯೈಚಿದಂಶುಕಂ ದದೌ ।
ಕೃಷ್ಣೋ ರಾಧಾಂ ಸಮಾಕೃಷ್ಯ ವಾಸಯಾಮಾಸ ವಕ್ಷಸಿ ॥ ೯೫ ॥

ತಸ್ಯಾಶ್ಚ ಕಬರೀಂ ರಮ್ಯಾಂ ಸುನಿರ್ಮಾಣಂ ಚಕಾರ ಹ ।
ಸಿಂದೂರಂ ಚ ದದೌ ಭಾಲೇ ಕಸ್ತೂರೀಬಿಂದುಭಿಃ ಸಹ ॥ ೯೬ ॥

ಅತಿಸೂಕ್ಷ್ಮಂ ಚಂದನೇಂದುಂ ಕೌತುಕಾತ್ತದಧೋ ದದೌ ।
ಪತ್ರಾವಲೀಂ ಸುಲಲಿತಾಂ ಸುಕಪೋಲೇ ಚಕಾರ ಹ ॥ ೯೭ ॥

ವಹ್ನಿಶುದ್ಧಾಂಶುಕಂ ಚಾರು ಪರಿಧಾರ್ಯ ಪ್ರಯತ್ನತಃ ।
ದದೌ ಸದ್ರತ್ನಮಂಜೀರೇ ಗೃಹೀತ್ವಾ ಚರಣಾಂಬುಜೇ ॥ ೯೮ ॥

ನಖನಿರ್ಮಾರ್ಜನಂ ಕೃತ್ವಾ ಸುಂದರಂ ಯಾವಕಂ ದದೌ ।
ಭೂಷಣೈರ್ಭೂಷಿತಾಂ ಕೃತ್ವಾ ಸಂಪ್ರಲಿಪ್ಯಾನುಲೇಪನೈಃ ॥ ೯೯ ॥

---

೯೫. ಒಬ್ಬಳನ್ನು ನಗ್ನಳನ್ನಾಗಿ ಮಾಡಿ ಮತ್ತೊಬ್ಬಳಿಗೆ ಅವಳ ವಸ್ತ್ರವನ್ನು ಕೊಟ್ಟನು. ಅನಂತರ ಕೃಷ್ಣನು ರಾಧೆಯನ್ನು ಸೆಳೆದುಕೊಂಡು ತನ್ನ ವಕ್ಷಃಸ್ಥಳದಲ್ಲಿ ಕುಳ್ಳಿರಿಸಿಕೊಂಡನು.

೯೬. ಅವಳ ಮನೋಹರವಾದ ತಲೆಗೂದಲನ್ನು ಬಾಚಿ ಹೆರಳನ್ನು ಹಾಕಿದನು. ಅವಳ ಹಣೆಯಲ್ಲಿ ಕಸ್ತೂರಿ ಬೊಟ್ಟುಗಳನ್ನೂ ಸಿಂದೂರ ಬಿಂದುಗಳನ್ನೂ ಧಾರಣೆಮಾಡಿದನು.

೯೭. ಅದರ ಕೆಳಗೆ ಅತಿಸೂಕ್ಷ್ಮವಾದ ಚಂದ್ರಾಕಾರದ ಚಂದನವನ್ನು ರಚಿಸಿದನು. ಆಕೆಯ ಕೋಮಲವಾದ ಕಪೋಲದಲ್ಲಿ ಲಲಿತವಾದ ಪತ್ರಾವಳಿಯನ್ನು ಬರೆದನು.

೯೮. ಅಗ್ನಿಯಂತೆ ಪರಿಶುದ್ಧವಾದ ವಸ್ತ್ರವನ್ನು ಆಕೆಗೆ ಉಡಿಸಿ, ಆಕೆಯ ಚರಣಕಮಲಗಳನ್ನು ಹಿಡಿದು ರತ್ನದ ನೂಪುರಗಳನ್ನು ತೊಡಿಸಿದನು.

೯೯. ಆಕೆಯ ಉಗುರುಗಳನ್ನು ತೊಳೆದು ಅರಗಿನ ರಸವನ್ನು ಲೇಪಿಸಿದನು. ಅಂಗಾಂಗಗಳಿಗೂ ಅನುಲೇಪನದ್ರವ್ಯಗಳನ್ನು ಲೇಪಿಸಿ, ದಿವ್ಯಾಭರಣಗಳನ್ನು ತೊಡಿಸಿದನು.

ದತ್ವಾ ಚ ಮಾಲತೀಮಾಲಾಂ ಚುಚುಂಬ ಚ ಪುನಃ ಪುನಃ ।
ಚಾರುಲೋಚನಪದ್ಮೇ ಚ ಚಕಾರಾಂಜನಸಂಯುತೇ　　॥ ೧೦೦ ॥

ಪ್ರದದೌ ನಾಸಿಕಾ ಮಧ್ಯೇ ದುರ್ಲಭಂ ಗಜಮೌಕ್ತಿಕಂ ।
ಶ್ರೋಣೀ ದೇಶೇ ಚ ಸ್ತನಯೋರ್ನಖಚ್ಛಿದ್ರಂ ಚಕಾರ ಹ　　॥ ೧೦೧ ॥

ಚಕಾರ ದಂತದಲನಂ ಪಕ್ವಬಿಂಬಾಧರೇ ವರೇ ।
ಸರಸಶ್ಚ ತಟೇ ರಮ್ಯೇ ಪುಷ್ಪೋದ್ಯಾನೇ ಸುನಿರ್ಜನೇ　　॥ ೧೦೨ ॥

ಕೃತ್ವಾ ಕ್ರೀಡಾಂ ಪುನರಪಿ ಜಗಾಮ ರಾಸಮಂಡಲಂ ।
ರಾಸೇಶ್ವರಃ ಪೂರ್ಣರಾಸಂ ಚಕಾರ ರಾಸಮಂಡಲೇ　　॥ ೧೦೩ ॥

ಬಹಿಶ್ಚಂದ್ರೋದಯೇ ರಮ್ಯೇ ಪುಷ್ಪಚಂದನಚರ್ಚಿತೇ ।
ಅಗುರುಚಂದನಾಕ್ತೇನ ವಾಯುನಾಸುರಭೀಕೃತೇ　　॥ ೧೦೪ ॥

---

೧೦೦. ಆಕೆಗೆ ಜಾಜೀ ಹೂಮಾಲೆಯನ್ನು ಮುಡಿಸಿ, ಮತ್ತೆ ಮತ್ತೆ ಆಕೆಯನ್ನು ಚುಂಬಿಸಿದನು. ಆಕೆಯ ಲೋಚನಕಮಲಗಳೆರಡಕ್ಕೂ ದುಂಬಿಯ ಬಣ್ಣದ ಕಾಡಿಗೆಯನ್ನು ಹಚ್ಚಿದನು.

೧೦೧. ಆಕೆಯ ಮೂಗಿನ ತುದಿಯಲ್ಲಿ ಆನೆಯ ಕುಂಭಸ್ಥಳದ ಮುಕ್ತಾಮಣಿಯನ್ನು ಅಲಂಕರಿಸಿ, ನಿತಂಬ ಮತ್ತು ಸ್ತನಗಳಲ್ಲಿ ನಖಕ್ಷತವನ್ನು ಮಾಡಿದನು.

೧೦೨-೧೦೩. ಪಕ್ವವಾದ ತೊಂಡೆಯ ಹಣ್ಣಿನಂತಿದ್ದ ಆಕೆಯ ಅಧರ ಪ್ರದೇಶದಲ್ಲಿ ದಂತಕ್ಷತಮಾಡಿದನು. ಸರಸ್ತೀರದಲ್ಲಿದ್ದ ನಿರ್ಜನವೂ, ಮನೋಹರವೂ ಆದ ಪುಷ್ಪೋದ್ಯಾನದಲ್ಲಿ ಕ್ರೀಡಿಸಿದನಂತರ ಪುನಃ ರಾಸಮಂಡಲಕ್ಕೆ ಹೋಗಿ ರಾಸೇಶ್ವರನಾದ ಕೃಷ್ಣನು ಸಂಪೂರ್ಣವಾಗಿ ರಾಸಕ್ರೀಡೆಯಾಡಿದನು

೧೦೪. ಆ ರಾಸಮಂಡಲವು ಅಗುರು ಚಂದನಾದಿ ವೃಕ್ಷಗಳ ಸೌಗಂಧ್ಯದಿಂದಲೂ ಪುಷ್ಪಸೌರಭವನ್ನು ಹರಡುತ್ತಿರುವ ವಾಯುವಿನಿಂದಲೂ ಕೂಡಿದ್ದುದಲ್ಲದೆ ಚಂದ್ರಕಿರಣಗಳಿಂದ ಮನೋಹರವಾಗಿದ್ದಿತು.

ಭ್ರಮರಧ್ವನಿಸಂಯುಕ್ತೇ ಪುಂಸ್ಕೋಕಿಲರುತಶ್ರುತೇ ।
ಬಹುಮೂರ್ತೀಃ ಸಂವಿಧಾಯ ಯೋಗಿನಾಂ ಪರಮೋ ಗುರುಃ ॥ ೧೦೫ ॥

ಪುನಶ್ಚಕಾರ ಶೃಂಗಾರಂ ಗೋಪೀನಾಂ ಚಿತ್ತಹಾರಕಃ ।
ಕಿಂಕಿಣೀನಾಂ ಕಂಕಣಾನಾಂ ನೂಪುರಾಣಾಂ ಚ ನಾರದ ॥ ೧೦೬ ॥

ಶೃಂಗಾರೋದ್ರೇಕತಸ್ತತ್ರ ಬಭೂವ ಸುಂದರೋ ರವಃ ।
ಮೂರ್ಛಾಮವಾಪುಸ್ತಾಃ ಸರ್ವಾ ನವಸಂಗಮಮಾತ್ರತಃ ॥ ೧೦೭ ॥

ಬಭೂವುರಚಲಾಸ್ಸ್ಪಂದಾಃ ಪುಲಕಾಂಚಿತವಿಗ್ರಹಾಃ ।
ಶೃಂಗಾರವಿರತೇ ಭೂತೇ ಸಂಪ್ರಾಪುಶ್ಚೇತನಾಂ ಪುನಃ ॥ ೧೦೮ ॥

ನಖದಂತಪ್ರಹಾರಂ ಚ ಪ್ರಚಕಾರ ಪರಸ್ಪರಂ ।
ಕೃಷ್ಣಃ ಕರರುಹಾಘಾತಂ ದದೌ ತಾಸಾಂ ಕುಚೋಪರಿ ॥ ೧೦೯ ॥

---

೧೦೫. ದುಂಬಿಗಳ ಝೇಂಕಾರದಿಂದಲೂ, ಗಂಡುಕೋಗಿಲೆಗಳ ಇಂಚರದಿಂದಲೂ ಕಾಮೋದ್ದೀಪಕವಾಗಿದ್ದ ಆ ರಾಸಮಂಡಲದಲ್ಲಿ ಯೋಗಿಗಳ ಪರಮ ಗುರುವಾದ ಶ್ರೀಹರಿಯು ಅನೇಕ ಮೂರ್ತಿಗಳನ್ನು ಕಲ್ಪಿಸಿಕೊಂಡು ವಿಹರಿಸಿದನು.

೧೦೬-೧೦೭. ಎಲೈ ನಾರದನೇ, ಗೋಪಿಯರ ಮನೋಹಾರಿಯಾದ ಶ್ರೀಹರಿಯು ಪುನಃ ಶೃಂಗಾರಕ್ರೀಡೆಗೆ ತೊಡಗಿದಾಗ ಉದ್ರಿಕ್ತರಾದ ಗೋಪಸ್ತ್ರೀಯರ ಕಂಕಣ, ನೂಪುರ ಮತ್ತು ಕಿರುಗೆಜ್ಜೆಗಳು ಮನೋಹರವಾಗಿ ಧ್ವನಿಗೈಯ್ಯಲಾರಂಭಿಸಿದವು. ಆ ಗೋಪಿಯರೆಲ್ಲರೂ ಪುನಃ ಸಮಾಗಮ ಸುಖಕ್ಕೆ ಪರವಶರಾಗಿ ಮೂರ್ಛೆಗೊಂಡರು.

೧೦೮. ರೋಮಾಂಚಿತ ಶರೀರವುಳ್ಳ ಆ ಗೋಪಿಯರೆಲ್ಲರೂ ಮೂರ್ಛಾಪಾರವಶ್ಯತೆಯಿಂದ ಸ್ವಲ್ಪಹೊತ್ತು ಅಚಲರಾಗಿದ್ದರು ಶೃಂಗಾರಸುಖಾನುಭವವು ಮುಗಿದ ನಂತರ ಪುನಃ ಚೇತನವನ್ನು ಹೊಂದಿದರು.

೧೦೯. ಶ್ರೀಕೃಷ್ಣನೂ ಇತರ ಗೋಪಿಯರೂ ಅನ್ಯೋನ್ಯವಾಗಿ ದಂತಕ್ಷತ ನಖಕ್ಷತಾದಿಗಳನ್ನು ಮಾಡಿದರು. ಶ್ರೀಕೃಷ್ಣನು ಆ ಗೋಪಿಯರ ಕುಚಪ್ರದೇಶಗಳಲ್ಲಿ ನಖಕ್ಷತವನ್ನು ಮಾಡಿದನು.

ಶ್ರೋಣಿದೇಶೇ ಸುಕಠಿನೇ ನಖಚಿಹ್ನಂ ಚಕಾರ ಹ ।
ನೀವೀ ವಿಸ್ರಂಸಿತಾ ತಾಸಾಂ ಕಬರೀ ಕ್ಷುದ್ರಘಂಟಿಕಾಃ ॥ ೧೧೦ ॥

ದೂರೀಭೂತಂ ಸುವಸನಂ ಸುವೇಷಂ ಸುಮನೋಹರಂ ।
ಆಲಿಂಗನಂ ನವವಿಧಂ ಚುಂಬನಾಷ್ಟವಿಧಂ ಮುದಾ ॥ ೧೧೧ ॥

ಶೃಂಗಾರಂ ಷೋಡಶವಿಧಂ ಚಕಾರ ರಸಿಕೇಶ್ವರಃ ।
ಅಂಗೈರಂಗಾನಿ ಪ್ರತ್ಯಂಗೈಃ ಪ್ರತ್ಯಂಗಾನಿ ಚ ಯೋಷಿತಾಂ ॥ ೧೧೨ ॥

ಚಕಾರಾಽಽಲಿಂಗನಂ ಪ್ರೀತ್ಯಾ ಕಾಮುಕೀನಾಂ ಚ ಕಾಮುಕಃ ।
ನಾರೀಣಾಂ ಷೋಡಶಕಲಾಃ ಶೃಂಗಾರಸ್ತತ್ಪ್ರಮಾಣಕಃ ॥ ೧೧೩ ॥

ಕಾಲಭೇದೇನ ತದ್ಭೇದಂ ಕಾಮಶಾಸ್ತ್ರವಿದೋ ವಿದುಃ ।
ಪ್ರಾಕೃತಂ ದ್ವಾದಶವಿಧಂ ಚಕಾರ ರಸಿಕೇಶ್ವರಃ ॥ ೧೧೪ ॥

---

೧೧೦. ಅವರ ಅತಿಕಠಿಣವಾದ ಶ್ರೋಣೀಬಿಂಬಗಳಲ್ಲಿಯೂ ಕೂಡ ನಖಕ್ಷತವನ್ನು ಮಾಡಿದನು. ಆ ಗೋಪಿಯರ ವಸ್ತ್ರಗ್ರಂಥಿಯನ್ನೂ ಹೆರಳನ್ನೂ ಡಾಬಿನ ಕಿರುಗೆಜ್ಜೆಗಳನ್ನೂ ಬಿಚ್ಚಿಬಿಟ್ಟನು.

೧೧೧-೧೧೩. ಆ ಗೋಪಿಯರ ಮನೋಹರವಾದ ವೇಷಭೂಷಗಳೂ, ಸುಂದರ ವಸ್ತ್ರಗಳೂ ಶಿಥಿಲವಾದುವು. ರಸಿಕರಾಜನಾದ ಶ್ರೀಕೃಷ್ಣನು ಆ ಗೋಪಿಯರೊಡನೆ ಒಂಭತ್ತುವಿಧ ಆಲಿಂಗನೆಯನ್ನೂ, ಅಷ್ಟವಿಧ ಚುಂಬನವನ್ನೂ ಹದಿನಾರು ತರಹ ಶೃಂಗಾರಸುಖವನ್ನೂ ಅನುಭವಿಸಿದನು. ಕಾಮುಕನಾದ ಕೃಷ್ಣನು ಕಾಮುಕಿಯರಾದ ಗೋಪಾಂಗನೆಯರ ಪ್ರತ್ಯವಯವಗಳನ್ನೂ ಪ್ರೀತಿಯಿಂದ ಆಲಿಂಗಿಸಿಕೊಂಡನು. ನಾರಿಯರ ಶೃಂಗಾರವು ಷೋಡಶಕಲಾಪರಿಪೂರ್ಣವಾಗಿರುವುದೆಂದು ಕಾಮಶಾಸ್ತ್ರೋಕ್ತವಾಗಿದೆ.

೧೧೪. ಕಾಲಭೇದದಿಂದ ಕಲಾಭೇದವೂ ಉಂಟಾಗುವುದೆಂದು ಕಾಮಶಾಸ್ತ್ರವನ್ನು ಬಲ್ಲವರು ಹೇಳುವರು. ರಸಿಕೇಶ್ವರನಾದ ಶ್ರೀಕೃಷ್ಣನು ಪ್ರಾಕೃತವಾದ ದ್ವಾದಶವಿಧ ಶೃಂಗಾರಸುಖವನ್ನು ಅನುಭವಿಸಿದನು.

ನಿರೂಪಿತಂ ಕಾಮಶಾಸ್ತ್ರೇ ಚಕಾರೇಶಸ್ತತೋಽಧಿಕಂ ।
ಕ್ರೀಡಾರಂಭೇ ಚ ಮಧ್ಯೇ ಚ ವಿರತೌ ಕರ್ಮ ಯೋಷಿತಾಂ ॥ ೧೧೫ ॥

ಪ್ರೀತ್ಯರ್ಥಮಪಿ ಕರ್ತವ್ಯಂ ಚಕಾರೇಶಸ್ತತೋಽಧಿಕಂ ।
ಗೋಪೀಕಂಕಣರೇಖಾಭಿಃ ಪಾದಾಲಕ್ತಕಚಿಹ್ನಿತಃ ।
ಶುಶುಭೇ ಕೃಷ್ಣದೇಹಶ್ಚ ಯಥಾಽದ್ರಿರ್ಗೈರಿಕೇಣ ಚ ॥ ೧೧೬ ॥

ಏವಂ ಭೂತೇ ಪೂರ್ಣರಾಸೇ ಸಂಭೂತೇ ರಾಸಮಂಡಲೇ ।
ಸಮಾಜಗ್ಮುಃ ಸುರಾಃ ಸರ್ವೇ ಸಕಲತ್ರಾಶ್ಚ ಸಾನುಗಾಃ ॥ ೧೧೭ ॥

ಸುವರ್ಣಸ್ಯಂದನಸ್ಥಾಶ್ಚ ಕೌತುಕಾತ್ಸ್ವಗಣಾವೃತಾಃ ।
ಪುಲಕಾಂಚಿತಸರ್ವಾಂಗಾಃ ಕಾಮಬಾಣಪ್ರಪೀಡಿತಾಃ ॥ ೧೧೮ ॥

---

೧೧೫. ರತಿಕ್ರೀಡೆಯ ಆರಂಭದಲ್ಲೂ, ಮಧ್ಯಕಾಲದಲ್ಲೂ, ಅಂತ್ಯಕಾಲದಲ್ಲೂ ಕಾಮಶಾಸ್ತ್ರದಲ್ಲಿ ನಿರೂಪಿತವಾಗಿರುವಂತೆಯೂ, ಅವಕ್ಕಿಂತ ಅಧಿಕವಾಗಿಯೂ ಶ್ರೀಹರಿಯು ಗೋಪಿಯರ ಶೃಂಗಾರಸುಖವನ್ನು ಅನುಭವಿಸಿದನು.

೧೧೬. ಕಾಮಿನಿಯರ ಸಂತೋಷಾರ್ಥವಾಗಿಯಾದರೂ ರತ್ಯವಸಾನದಲ್ಲಿ ಪುನಃ ರತಿಕ್ರೀಡೆಯಾಡಬೇಕು. ಶ್ರೀಕೃಷ್ಣನು ಮತ್ತೂ ಅಧಿಕವಾಗಿ ಅವರೊಡನೆ ಕ್ರೀಡಿಸಿದನು. ಗೋಪಿಯರ ಕೈಬಳೆಗಳ ಗೆರೆಗಳಿಂದಲೂ, ಪಾದಗಳ ಅರಗಿನ ರಸಗಳಿಂದಲೂ, ಗುರುತುಮಾಡಲ್ಪಟ್ಟ ಶ್ರೀಕೃಷ್ಣನ ಶರೀರವು ಗೈರಿಕಾದಿ ಧಾತುಗಳಿಂದ ಲಿಪ್ತವಾದ ಪರ್ವತದಂತೆ ಕಾಣುತ್ತಿತ್ತು.

೧೧೭. ಈ ರೀತಿಯಾಗಿ ರಾಸಮಂಡಲವು ಗೋಪಗೋಪಿಯರಿಂದ ಪರಿಪೂರ್ಣವಾಗಿರುವುದನ್ನು ನೋಡಿ ದೇವತೆಗಳೆಲ್ಲರೂ ಬಂಧುಮಿತ್ರಕಳತ್ರಾದಿಗಳೊಡನೆ ಅಲ್ಲಿಗೆ ಬಂದರು.

೧೧೮. ಕಾಮಬಾಣಪೀಡಿತರಾಗಿದ್ದುದರಿಂದ ರೋಮಾಂಚಿತವಾದ ಶರೀರವುಳ್ಳ ಅವರೆಲ್ಲರೂ ತಮ್ಮ ಪರಿವಾರದೊಡಗೂಡಿ ಕುತೂಹಲಾನ್ವಿತರಾಗಿ ಸುವರ್ಣ ರಥದಲ್ಲಿ ಕುಳಿತು ಬಂದಿದ್ದರು.

ಋಷಯೋ ಮುನಯಶ್ಚೈವ ಸಿದ್ಧಾಶ್ಚ ಪಿತರಸ್ತಥಾ ।
ವಿದ್ಯಾಧರಾಶ್ಚ ಗಂಧರ್ವಾ ಯಕ್ಷರಾಕ್ಷಸಕಿನ್ನರಾಃ ।
ಸಸ್ತ್ರೀಕಾಶ್ಚ ಸರ್ವೇ ಜಗ್ಮುರ್ದದೃಶುಶ್ಚ ಮುದಾಽನ್ವಿತಾಃ ॥ ೧೧೯ ॥

ದಿವ್ಯಸ್ಯಂದನಮಾರುಹ್ಯ ಶಾತಕೌಂಭವಿನಿರ್ಮಿತಂ ।
ಸುಶೋಭಿತಂ ಚ ಮಣಿನಾ ರತ್ನಸಾರಪರಿಚ್ಛದಂ ॥ ೧೨೦ ॥

ವಹ್ನಿಶುದ್ಧಾಂಶುಕೇನೈವ ವೇಷ್ಟಿತಂ ಸುಮನೋಹರಂ ।
ಶ್ವೇತಚಾಮರಸಂಯುಕ್ತಂ ಸದ್ರತ್ನಚರಣಾಂಬುಜಂ ॥ ೧೨೧ ॥

ಶತಚಕ್ರಂ ಚಿತ್ರಯುಕ್ತಂ ಮನೋಯಾಯಿ ಮನೋಹರಂ ।
ಸದ್ರತ್ನಸಾರನಿರ್ಮಾಣಕಲಶೋಜ್ಜ್ವಲಶೇಖರಂ ॥ ೧೨೨ ॥

ಸಮಾಜಗಾಮ ಭಗವಾನ್ ಪಾರ್ವತ್ಯಾ ಸಹ ಶಂಕರಃ ।
ವಾಮಪಾರ್ಶ್ವೇ ಮಹಾಕಾಲೋ ದಕ್ಷಿಣೇ ನಂದಿಕೇಶ್ವರಃ ॥ ೧೨೩ ॥

---

೧೧೯. ಋಷಿಗಳೂ, ಮುನಿಗಳೂ, ಸಿದ್ಧರೂ, ವಿದ್ಯಾಧರರೂ, ಗಂಧರ್ವರೂ, ಯಕ್ಷರಾಕ್ಷಸಕಿನ್ನರರೂ ಮತ್ತು ಪಿತೃದೇವತೆಗಳೂ ಆ ಸಮೂಹದಲ್ಲಿದ್ದರು. ಅವರೆಲ್ಲರೂ ಸ್ತ್ರೀಪರಿವಾರದೊಡನೆ ಸಂತೋಷದಿಂದ ಅಲ್ಲಿಗೆ ಬಂದು ಶ್ರೀಕೃಷ್ಣನ ರಾಸಕ್ರೀಡೆಯನ್ನು ನೋಡಿದರು.

೧೨೦-೧೨೩. ಸುವರ್ಣನಿರ್ಮಿತವೂ, ಶ್ರೇಷ್ಠರತ್ನಗಳಿಂದ ಶೋಭಿತವೂ, ಅಗ್ನಿಯಂತೆ ಪರಿಶುದ್ಧವಾದ ಸೂಕ್ಷ್ಮವಸ್ತ್ರಗಳಿಂದ ಪರಿವೇಷ್ಟಿತವೂ, ಮನೋಹರವಾದ ಶ್ವೇತಚಾಮರಗಳಿಂದ ಅಲಂಕೃತವೂ, ರತ್ನದ ಪಾದಪೀಠಗಳಿಂದಲೂ, ನೂರು ಚಕ್ರಗಳಿಂದಲೂ, ಅನೇಕ ಚಿತ್ರಗಳಿಂದಲೂ ಕೂಡಿ ಮನೋಹರವೂ, ರತ್ನನಿರ್ಮಿತವಾದ ಕಲಶಗಳಿಂದ ಶಿಖರಪ್ರದೇಶದಲ್ಲಿ ಅಲಂಕೃತವೂ ಆದ ದಿವ್ಯರಥವನ್ನೇರಿ ಭಗವಂತನಾದ ಶಂಕರನು ಪಾರ್ವತಿಯೊಡನೆ ಅಲ್ಲಿಗೆ ಬಂದನು. ಆ ಶಂಕರನ ಎಡಭಾಗದಲ್ಲಿ ಮಹಾಕಾಲನೂ, ಬಲಭಾಗದಲ್ಲಿ ನಂದಿಕೇಶ್ವರನೂ ಇದ್ದನು.

ಪುರತಃ ಕಾರ್ತಿಕೇಯಶ್ಚ ಸ್ವಯಂ ದೇವೋ ಗಣೇಶ್ವರಃ |
ಪಿಂಗಲಾಕ್ಷಾದಯಃ ಸರ್ವೇ ಪಾರ್ಷದಾಃ ಪರಿತಸ್ತಯೋಃ || ೧೨೪ ||

ಕ್ಷೇತ್ರಪಾಲದಯಃ ಸರ್ವೇ ತಥಾಽಷ್ಟೌ ಭೈರವೇಶ್ವರಾಃ |
ವಕ್ಷಃ ಸ್ಥಲಸ್ಥಿತಾ ದುರ್ಗಾ ಸಸ್ಮಿತಾ ವಕ್ರಲೋಚನಾ || ೧೨೫ ||

ಭಾರತ್ಯಾ ಸಹ ಬ್ರಹ್ಮಾ ಚ ಶಾತಕೌಂಭರಥಸ್ಥಿತಃ |
ವಾಮೇ ಸಪ್ತರ್ಷಯಸ್ತಸ್ಯ ದಕ್ಷಿಣೇ ಸನಕಾದಯಃ || ೧೨೬ ||

ಸುವರ್ಣಸ್ಯಂದನಸ್ಥಶ್ಚ ಧರ್ಮಃ ಸಾಕ್ಷೀ ಚ ಕರ್ಮಣಾಂ |
ವಕ್ಷಃಸ್ಥಲಸ್ಥಿತಾ ತಸ್ಯ ಮೂರ್ತಿಃ ಸ್ಮೇರಾನನಾ ಸತೀ || ೧೨೭ ||

ಪಶ್ಯಂತೀ ಪೂರ್ಣರಾಸಂ ಚ ಸಕಾಮಾ ವಕ್ರಲೋಚನಾ |
ಪರಿತಃ ಪಾರ್ಷದಾಃ ಸರ್ವೇ ಜ್ವಲಂತೋ ಬ್ರಹ್ಮತೇಜಸಾ || ೧೨೮ ||

---

೧೨೪. ಮುಂಭಾಗದಲ್ಲಿ ಷಣ್ಮುಖನೂ, ಪೂಜ್ಯನಾದ ಗಣೇಶ್ವರನೂ ಇದ್ದರು. ಆ ಶಿವಪಾರ್ವತಿಯರ ಸುತ್ತಲೂ ಪಿಂಗಲಾಕ್ಷನೇ ಮೊದಲಾದ ಅನೇಕ ಪಾರ್ಷದರಿದ್ದರು.

೧೨೫. ಸಕಲ ಕ್ಷೇತ್ರಪಾಲರೂ, ಅಷ್ಟಭೈರವೇಶ್ವರರೂ ಅಲ್ಲಿಗೆ ಬಂದಿದ್ದರು. ಶಿವನ ವಕ್ಷಃಸ್ಥಲದಲ್ಲಿದ್ದ ದುರ್ಗಿಯು ಸ್ಮಿತಮುಖಿಯಾಗಿ ವಕ್ರಕಟಾಕ್ಷದಿಂದ ಎಲ್ಲರನ್ನೂ ನೋಡುತ್ತಿದ್ದಳು.

೧೨೬. ಬ್ರಹ್ಮನು ಸರಸ್ವತೀದೇವಿಯೊಡನೆ ಸುವರ್ಣನಿರ್ಮಿತವಾದ ರಥದಲ್ಲಿ ಕುಳಿತು ಬಂದಿದ್ದನು. ಅವನ ಎಡಭಾಗದಲ್ಲಿ ಸಪ್ತರ್ಷಿಗಳೂ, ಬಲಭಾಗದಲ್ಲಿ ಸನಕಾದಿಗಳೂ ಇದ್ದರು.

೧೨೭ ಕರ್ಮಸಾಕ್ಷಿಯಾದ ಧರ್ಮದೇವನು ಸುವರ್ಣರಥದಲ್ಲಿ ಕುಳಿತಿದ್ದನು. ಅವನ ವಕ್ಷಃಸ್ಥಳದಲ್ಲಿ ಕುಳಿತು ಮೂರ್ತಿದೇವಿಯು ಮಂದಹಾಸವನ್ನು ಬೀರುತ್ತಿದ್ದಳು.

೧೨೮. ಆ ಮೂರ್ತಿದೇವಿಯು ಸಕಾಮಳಾಗಿ ತನ್ನ ಕಡೆಗಣ್ಣಿನಿಂದ ರಾಸಮಂಡಲವನ್ನು ನೋಡುತ್ತಿದ್ದಳು. ಅವರ ಸುತ್ತಲೂ ತೇಜಸ್ವಿಗಳಾದ ಪಾರ್ಷದರು ಸುತ್ತುವರಿದಿದ್ದರು.

ಶಚ್ಯಾ ಸಹ ಮಹೇಂದ್ರಶ್ಚ ರೋಹಿಣ್ಯಾ ಚ ಕಲಾನಿಧಿಃ ।
ಸ್ವಾಹಾ ಸಾರ್ಧಂ ಸ್ವಯಂ ವಹ್ನಿಃ ಸೂರ್ಯಶ್ಚ ಸಂಜ್ಞಯಾ ಸಹ ॥ ೧೨೯ ॥

ಸಮಾಜಗಾಮ ಕಾಮಶ್ಚ ರತಿಂ ಕೃತ್ವಾ ಚ ವಕ್ಷಸಿ ।
ಸರ್ವೇ ಗ್ರಹಾಶ್ಚ ದಿಕ್ಪಾಲಾ ಆಜಗ್ಮುಃ ಸಕಲತ್ರಕಾಃ ॥ ೧೩೦ ॥

ಆಕಾಶಸ್ಥಾಶ್ಚ ದದೃಶುಃ ಸರಾಸಂ ರಾಸಮಂಡಲಂ ।
ಕೇಚಿಚ್ಚ ಮುಮುಹುಸ್ತತ್ರ ಮೂರ್ಛಾಮಾಪುಶ್ಚ ಕೇಚನ ॥ ೧೩೧ ॥

ಮುಹೂರ್ತಂ ಚ ಸುರಾಃ ಸರ್ವೇ ಸಸ್ಮಿತಾಶ್ಚ ಮುದಾಽನ್ವಿತಾಃ ।
ಚಂದನದ್ರವವೃಷ್ಟಿಂ ಚ ಪುಷ್ಪವೃಷ್ಟಿಂ ಚ ಚಿಕ್ಷಿಪುಃ ॥ ೧೩೨ ॥

---

೧೨೯. ಮಹೇಂದ್ರನು ಶಚೀದೇವಿಯೊಡನೆಯೂ, ಚಂದ್ರನು ರೋಹಿಣಿಯೊಡನೆಯೂ, ಅಗ್ನಿದೇವನು ಸ್ವಾಹಾದೇವಿಯೊಡನೆಯೂ, ಸೂರ್ಯನು ಸಂಜ್ಞಾದೇವಿಯೊಡನೆಯೂ ಅಲ್ಲಿಗೆ ಬಂದಿದ್ದರು.

೧೩೦. ಕಾಮದೇವನು ರತೀದೇವಿಯನ್ನು ವಕ್ಷಃಸ್ಥಳದಲ್ಲಿ ಕುಳ್ಳಿರಿಸಿಕೊಂಡು ಬಂದಿದ್ದನು. ನವಗ್ರಹಗಳೂ ದಿಕ್ಪಾಲಕರೂ ಪತ್ನೀಪರಿವಾರಸಮೇತರಾಗಿ ಅಲ್ಲಿಗೆ ಬಂದಿದ್ದರು.

೧೩೧. ಆ ದೇವತೆಗಳೆಲ್ಲರೂ ಆಕಾಶದಲ್ಲಿ ನಿಂತುಕೊಂಡೇ ರಸಭರಿತವಾದ ರಾಸಮಂಡಲವನ್ನು ನೋಡಿದರು. ಅದನ್ನು ನೋಡಿ ಕೆಲವರು ಭ್ರಾಂತರಾದರು. ಮತ್ತೆ ಕೆಲವರು ಮೂರ್ಛೆಗೊಂಡರು.

೧೩೨. ದೇವತೆಗಳೆಲ್ಲರೂ ಮುಹೂರ್ತಕಾಲ ಸ್ಮಿತವದನರಾಗಿ ನೋಡುತ್ತಿದ್ದು ಅನಂತರ ಆ ರಾಸಮಂಡಲದ ಮೇಲೆ ಚಂದನದ್ರವದ ವೃಷ್ಟಿಯನ್ನೂ, ಪುಷ್ಪವೃಷ್ಟಿಯನ್ನೂ ಸುರಿಸಿದರು.

ಕಸ್ತೂರೀಯುಕ್ತಮಾಲ್ಯಾನಾಂ ವೃಷ್ಟಿಂ ಚಕ್ರುರ್ಮುನೀಶ್ವರಾಃ ।
ರಾಸಂ ದೃಷ್ಟ್ವಾ ದೇವಪತ್ನ್ಯಃ ಕಾಮಬಾಣಪ್ರಪೀಡಿತಾಃ ॥ ೧೩೩ ॥

ಸ್ಥಲೇ ರತಿರಸಂ ಕೃತ್ವಾ ಜಗಾಮ ಯಮುನಾಜಲಂ ।
ರಾಧಾಯಾ ಸಹ ಕೃಷ್ಣಶ್ಚ ಪೂರ್ಣಬ್ರಹ್ಮ ಸನಾತನಃ ॥ ೧೩೪ ॥

ಗೋಪೀಭಿಃ ಸಹ ಜಗ್ಮುಶ್ಚ ಮಾಯಾ ಶ್ರೀಕೃಷ್ಣರೂಪಿಕಾಃ ।
ಪ್ರಪೀಡಿತಾಃ ಕಾಮಬಾಣೈಃ ಕ್ರೀಡಾಂ ಚಕ್ರುರ್ಜಲೇ ಮುದಾ ॥ ೧೩೫ ॥

ಜಲಂ ದದೌ ರಾಧಿಕಾಯೈ ಸಕಾಮೋ ಮಾಧವಃ ಸ್ವಯಂ ।
ದದೌ ಸಾ ಚ ಮಾಧವಾಯ ಕಾಮಾರ್ತಾಯಾಂಜಲಿತ್ರಯಂ ॥ ೧೩೬ ॥

ವಸ್ತ್ರಂ ಜಗ್ರಾಹ ತಸ್ಯಾಶ್ಚ ಸಾ ಚ ನಗ್ನಾ ಬಭೂವ ಹ ।
ಮಾಲಾಂ ಚಿಚ್ಛೇದ ಕಬರೀಂ ಚಕಾರ ಶಿಥಿಲಾಂ ಹರಿಃ ॥ ೧೩೭ ॥

---

೧೩೩. ಮುನೀಶ್ವರರು ಕಸ್ತೂರಿಯಿಂದ ಸುವಾಸಿತವಾದ ಹೂಮಾಲೆಗಳ ಮಳೆಯನ್ನು ಕರೆದರು. ಆ ರಾಸಕ್ರೀಡೆಯನ್ನು ನೋಡಿ ದೇವತಾಸ್ತ್ರೀಯರೆಲ್ಲರೂ ಕಾಮಬಾಣಪೀಡಿತರಾದರು.

೧೩೪. ಅತ್ತ ಪೂರ್ಣಬ್ರಹ್ಮನೂ ಅನಾದಿಯೂ, ಆದ ಶ್ರೀಕೃಷ್ಣನು ಸ್ಥಲದಲ್ಲಿ ರಾಸಕ್ರೀಡೆಯನ್ನಾಡಿ ಜಲಕ್ರೀಡೆಗಾಗಿ ರಾಧೆಯೊಡನೆ ಯಮುನೆಯ ನೀರಿಗಿಳಿದನು.

೧೩೫. ಆನಂತರ ಶ್ರೀಕೃಷ್ಣನ ಅನೇಕ ಮಾಯಾರೂಪಿಗಳು ಕಾಮಬಾಣ ಪೀಡಿತರಾಗಿ ಗೋಪಿಯರೊಡನೆ ಯಮುನೆಯ ಜಲದಲ್ಲಿ ಸಂತೋಷದಿಂದ ಕ್ರೀಡಿಸಿದರು.

೧೩೬. ಕಾಮಿಯಾದ ಮಾಧವನು ಮೊದಲು ಒಂದು ಬೊಗಸೆ ನೀರನ್ನು ರಾಧೆಯ ಮೇಲೆ ಎರಚಿದನು. ಆ ರಾಧೆಯೂ ಕೂಡ ಕಾಮಾರ್ತನಾದ ಮಾಧವನ ಮೇಲೆ ಮೂರು ಬೊಗಸೆ ನೀರನ್ನು ಎರಚಿದಳು.

೧೩೭. ಶ್ರೀಹರಿಯು ರಾಧೆಯ ಸೀರೆಯನ್ನು ಹಿಡಿದೆಳೆಯಲು ಅದು ಬಿಚ್ಚಿಹೋಗಿ ಅವಳು ನಗ್ನಳಾದಳು. ಅಲ್ಲದೆ ಅವಳ ಕಂಠಮಾಲೆಯನ್ನು ಕಿತ್ತು ಅವಳ ತಲೆಕೂದಲನ್ನೂ ಸಡಿಲಗೊಳಿಸಿದನು.

ಸಿಂದೂರಪತ್ರಕಂ ಲುಪ್ತಂ ವೇಷಂ ಚ ಜಲತಾಡನೈಃ ।
ಭ್ರೂವಿಚಿತ್ರಮೋಷ್ಠರಾಗಂ ಲುಪ್ತಂ ಕಜ್ಜಲಲೋಚನಂ ॥ ೧೩೮ ॥

ತಾಂ ಚ ನಗ್ನಾಂ ಸಮಾಶ್ಲಿಷ್ಯ ನಿಮಮಜ್ಜ ಜಲೇ ಹರಿಃ ।
ಪ್ರಕೃತ್ಯಾಭ್ಯಂತರೇ ಕ್ರೀಡಾಂ ಸುತಸ್ಥೌ ಚ ತಯಾ ಸಹ ॥ ೧೩೯ ॥

ತಾಂ ಚ ನಗ್ನಾಂ ದರ್ಶಯಿತ್ವಾ ಗೋಪಿಕಾಂ ವ್ರೀಡಯಾ ನತಾಂ ।
ಸಸ್ಮಿತಾಂ ಪ್ರೇರಯಾಮಾಸ ದೂರತೋ ಯಮುನಾ ಜಲೇ ॥ ೧೪೦ ॥

ಸಾ ವೇಗೇನ ಸಮುತ್ಥಾಯ ಬಲಾಜ್ಜಗ್ರಾಹ ಮಾಧವಂ ।
ಗೃಹೀತ್ವಾ ಮುರಲೀಂ ಕೋಪಾತ್ಪ್ರೇರಯಾಮಾಸ ದೂರತಃ ॥ ೧೪೧ ॥

ಗೃಹೀತ್ವಾ ಪೀತವಸನಂ ಚಕಾರ ತಂ ದಿಗಂಬರಂ ।
ವನಮಾಲಾಂ ಚ ಚಿಚ್ಛೇದ ದದೌ ತೋಯಂ ಪುನಃ ಪುನಃ ॥ ೧೪೨ ॥

---

೧೩೮. ನೀರಿನ ಎರಚಾಟದಿಂದ ಆಕೆಯ ಹಣೆಯಲ್ಲಿದ್ದ ಸಿಂದೂರದ ಬೊಟ್ಟುಗಳೂ, ಕಪೋಲದಲ್ಲಿದ್ದ ಪತ್ರಾವಳಿಗಳೂ, ಕೆಳತುಟಿಯ ರಾಗವೂ, ಹುಬ್ಬಿನ ತಿದ್ದುವಿಕೆಯೂ, ಕಣ್ಣಿಗೆ ಹಚ್ಚಿದ್ದ ಕಾಡಿಗೆಯೂ ಲುಪ್ತವಾಯಿತು.

೧೩೯. ನಗ್ನಳಾದ ಆ ರಾಧೆಯನ್ನು ಆಲಿಂಗಿಸಿಕೊಂಡು ಶ್ರೀಹರಿಯು ಯಮುನಾಜಲದಲ್ಲಿ ಮುಳುಗಿದನು. ಆ ಪ್ರಕೃತಿ ಮಾತೆಯೊಡನೆ ನೀರಿನಲ್ಲಿ ಅಭ್ಯಂತರ ಕ್ರೀಡೆಯನ್ನಾಡಿದನು.

೧೪೦. ವಸ್ತ್ರರಹಿತಳಾಗಿ ಲಜ್ಜೆಯಿಂದ ತಲೆಬಾಗಿ ನಿಂತಿರುವ ಆ ಸ್ಮಿತಮುಖಿಯಾದ ರಾಧೆಯನ್ನು ಶ್ರೀಕೃಷ್ಣನು ಗೋಪಿಯೊಬ್ಬಳಿಗೆ ತೋರಿಸಿ ಆಕೆಯನ್ನು ಯಮುನೆಯ ನೀರಿನಲ್ಲಿ ಬಹುದೂರಕ್ಕೆ ಎಸೆದನು.

೧೪೧. ಆ ರಾಧೆಯಾದರೋ ಬಹಳ ಜಾಗ್ರತೆಯಾಗಿ ಮೇಲಕ್ಕೆದ್ದು ಮಾಧವನನ್ನು ಬಲವಾಗಿ ಹಿಡಿದುಕೊಂಡು, ಕೋಪದಿಂದ ಅವನ ಕೊಳಲನ್ನು ಕಿತ್ತುಕೊಂಡು ಬಹಳ ದೂರಕ್ಕೆ ಎಸೆದಳು.

೧೪೨. ಅವನ ಪೀತಾಂಬರವನ್ನು ಕಿತ್ತುಕೊಂಡು ಅವನನ್ನು ದಿಗಂಬರನನ್ನಾಗಿ ಮಾಡಿದಳು. ಅವನ ವನಮಾಲೆಯನ್ನೂ ಕಿತ್ತು ಅವನ ಮೈಮೇಲೆ ಪುನಃ ಪುನಃ ನೀರನ್ನೆರಚಿದಳು.

ಹರಿಂ ಪುನಃ ಸಮಾಕೃಷ್ಯ ಪ್ರೇರಯಾಮಾಸ ಸಾಂಭಸಿ ।
ಗಭೀರೇ ಸ್ರೋತಸಿ ಮುನೇ ನಿಮಮಜ್ಜ ಜಗತ್ಪತಿಃ ॥ ೧೪೩ ॥

ಉತ್ಥಾಯ ಮಾಧವಃ ಶೀಘ್ರಂ ತಾಂ ಗೃಹೀತ್ವಾ ಪ್ರಹಸ್ಯ ಚ ।
ಕೃತ್ವಾ ವಕ್ಷಸಿ ನಗ್ನಾಂ ಚ ಚುಚುಂಬ ಚ ಪುನಃ ಪುನಃ ॥ ೧೪೪ ॥

ಏವಂ ತಾ ಮೂರ್ತಯಃ ಸರ್ವಾ ಗೋಪೀಭಿಃ ಸಹ ಕೌತುಕಾತ್ ।
ಕ್ರೀಡಾ ನಿಚಕ್ರುರ್ಯಮುನಾತೀರನೀರೇ ಮನೋಹರೇ ॥ ೧೪೫ ॥

ತೀರಂ ಗತ್ವಾ ತಯಾ ಸಾರ್ಧಂ ಹರಿರ್ನಗ್ನಶ್ಚ ನಗ್ನಯಾ ।
ಸಾ ತಂ ಯಯಾಚೇ ವಸನಂ ಸ ಚ ತಾಂ ಸಸ್ಮಿತಾಂ ಸತೀಂ ॥ ೧೪೬ ॥

ರಾಧಿಕಾಯೈ ದದೌ ವಸ್ತ್ರಂ ರಮ್ಯಾಂ ಮಾಲಾಂ ಚ ಮಾಧವಃ ।
ಪ್ರದದೌ ಹರಯೇ ವಸ್ತ್ರಂ ವಂಶೀಂ ರಾಸೇಶ್ವರೀ ಮುದಾ ॥ ೧೪೭ ॥

---

೧೪೩. ಪುನಃ ಶ್ರೀಹರಿಯನ್ನು ಎಳೆದು ನೀರಿನೊಳಕ್ಕೆ ನೂಕಿದಳು. ಎಲೈ ಮುನಿಯೇ, ಆಗ ಜಗತ್ಪತಿಯು ಬಹಳ ಆಳವಾದ ನೀರಿನ ಪ್ರವಾಹದಲ್ಲಿ ಮುಳುಗಿದನು.

೧೪೪. ಮಾಧವನು ಜಾಗ್ರತೆಯಾಗಿ ನೀರಿನಿಂದೆದ್ದು ನಗುತ್ತ ರಾಧೆಯನ್ನು ಹಿಡಿದುಕೊಂಡು ನಗ್ನಳಾದ ಅವಳನ್ನು ಎದೆಗಪ್ಪಿಕೊಂಡು ಪುನಃ ಪುನಃ ಚುಂಬಿಸಿದನು

೧೪೫. ಈ ರೀತಿಯಾಗಿ ಶ್ರೀಕೃಷ್ಣನ ಅನೇಕ ಮೂರ್ತಿಗಳೂ ಗೋಪಿಯರೊಡನೆ ಮನೋಹರವಾದ ಯಮುನೆಯ ಜಲದಲ್ಲಿ ಕುತೂಹಲದಿಂದ ಕ್ರೀಡಿಸಿದರು.

೧೪೬. ನಗ್ನನಾದ ಶ್ರೀಹರಿಯು ನಗ್ನಳಾದ ರಾಧೆಯೊಡನೆ ಯಮುನೆಯ ತೀರಕ್ಕೆ ಬಂದು ತನ್ನ ವಸ್ತ್ರವನ್ನು ಬೇಡಿದನು. ಸ್ಮಿತಮುಖಿಯಾದ ಆ ರಾಧೆಯೂ ಕೂಡ ತನ್ನ ವಸ್ತ್ರವನ್ನು ಬೇಡಿದಳು.

೧೪೭. ಆಗ ಮಾಧವನು ರಾಧೆಗೆ ವಸ್ತ್ರವನ್ನೂ, ಮನೋಹರವಾದ ಮಾಲೆಯನ್ನೂ ಕೊಟ್ಟನು. ರಾಸೇಶ್ವರಿಯಾದ ರಾಧೆಯೂ ಕೂಡ ಶ್ರೀಹರಿಯ ವಸ್ತ್ರವನ್ನೂ, ಕೊಳಲನ್ನೂ ಸಂತೋಷದಿಂದ ಹಿಂದಕ್ಕೆ ಕೊಟ್ಟಳು.

ಚಂದನಾಗುರುಕಸ್ತೂರೀಂ ಸರ್ವಾಂಗೇ ಕುಂಕುಮಾನ್ವಿತಾಂ ।
ಕೃಷ್ಣಸ್ಯ ಪರಯಾ ಭಕ್ತ್ಯಾ ದದೌ ಶ್ರೋಣಿಸ್ಥಿತಸ್ಯ ಚ ॥ ೧೪೮ ॥

ನಿರ್ಮಾಯ ಚೂಡಾಂ ಲಲಿತಾಂ ಕಾಮಿನೀಂ ಚಿತ್ತಮೋಹಿನೀಂ ।
ಶೋಭನೈರ್ಮಾಲತೀಮಾಲ್ಯೈಶ್ಚಕಾರ ವೇಷ್ಟನಂ ಪುನಃ ॥ ೧೪೯ ॥

ಶ್ರೀಕೃಷ್ಣೋ ರಾಧಿಕಾಯಾಶ್ಚ ಕಬರೀಂ ಸುಮನೋಹರಾಂ ।
ಕೃತ್ವಾ ಕುಂಡಲಸಂಸ್ಕಾರಂ ನಿರ್ಮಮೋ ಪತ್ರಕಾವಲೀಂ ॥ ೧೫೦ ॥

ದದೌ ಲಲಾಟೇ ಸಿಂದೂರಂ ಕಸ್ತೂರೀ ಬಿಂದುಭಿಃ ಸಹ ।
ತದಧಶ್ಚಂದನೇಂದುಂ ಚ ಸುಸೂಕ್ಷ್ಮಂ ಸುಮನೋಹರಂ ॥ ೧೫೧ ॥

ನಖಾಂಕಂ ಸ್ತನಯೋರೂರ್ವೋರುರಸ್ಯೇವ ಘನಂ ಮುದಾ ।
ದತ್ವಾ ತಾಂ ವಾಸಯಾಮಾಸ ವಹ್ನಿಶುದ್ಧಾಂಶುಕೇನ ವೈ ॥ ೧೫೨ ॥

---

೧೪೮. ಅನಂತರ ಶ್ರೀಕೃಷ್ಣನನ್ನು ತೊಡೆಯ ಮೇಲೆ ಕುಳ್ಳಿರಿಸಿಕೊಂಡು ಅವನ ಸರ್ವಾವಯವಗಳಿಗೂ ಚಂದನ, ಅಗುರು, ಕಸ್ತೂರಿ ಮತ್ತು ಕುಂಕುಮವನ್ನು ಪರಮಭಕ್ತಿಯಿಂದ ಲೇಪಿಸಿದಳು.

೧೪೯. ಶ್ರೀಹರಿಯ ತಲೆಗೂದಲನ್ನು ಬಾಚಿ ಮನಮೋಹಕವಾಗಿ ಶಿಖೆಯನ್ನು ಕಟ್ಟಿ ಸುವಾಸನೆಯಾದ ಮಾಲತೀ ಹೂಮಾಲೆಯನ್ನು ಅದಕ್ಕೆ ಸುತ್ತಿದಳು.

೧೫೦ ಶ್ರೀಕೃಷ್ಣನೂ ಕೂಡ ರಾಧೆಯ ತಲೆಗೂದಲನ್ನು ಬಾಚಿ, ಮನೋಹರವಾಗಿ ಹೆರಳುಹಾಕಿ, ಅವಳ ಕರ್ಣಕುಂಡಲಗಳನ್ನು ಹೊಳಪುಮಾಡಿ, ಕಪೋಲವಲ್ಲಿ ಪತ್ರಾವಳಿಯನ್ನು ರಚಿಸಿದನು.

೧೫೧. ಹಣೆಯಲ್ಲಿ ಕಸ್ತೂರೀ ಬಿಂದುಗಳನ್ನೂ, ಸಿಂದೂರದ ಬೊಟ್ಟನ್ನೂ ಅಂದವಾಗಿ ಇಟ್ಟು, ಅದರ ಕೆಳಗೆ ಸೂಕ್ಷ್ಮವೂ, ಮನೋಹರವೂ ಆದ ಚಂದ್ರಾಕಾರದ ಚಂದನವನ್ನು ರಚಿಸಿದನು.

೧೫೨. ಆಕೆಯ ಸ್ತನಪ್ರದೇಶಗಳಲ್ಲೂ ತೊಡೆ ಮತ್ತು ಎದೆಗಳಲ್ಲೂ ಘನವಾದ ನಖಕ್ಷತೆಯನ್ನು ಮಾಡಿ, ಅಗ್ನಿಯಂತೆ ಪರಿಶುದ್ಧವಾದ ವಸ್ತ್ರವನ್ನು ಆಕೆಗೆ ಉಡಿಸಿದನು.

ಚಂದನಾಗುರುಕಸ್ತೂರೀ ಕುಂಕುಮಾನಾಂ ದ್ರವೇಣ ಸಃ ।
ಕೃತ್ವಾ ವಕ್ಷಸಿ ಸಂಲಿಪ್ಯ ಚುಚುಂಬ ಚ ಮುಹುರ್ಮುಹುಃ ॥ ೧೫೩ ॥

ಪುನರಾಶ್ಲೇಷಣಂ ಕೃತ್ವಾ ದದೌ ಮಾಲಾಂ ಗಲೇ ಪುನಃ ।
ಭೂಷಣೈರ್ಭೂಷಿತಾಂ ಕೃತ್ವಾ ಮಂಜೀರಂ ಚರಣೇ ದದೌ ॥ ೧೫೪ ॥

ಅಲಕ್ತಕಂ ಚರಣಯೋರ್ನಖೇಷು ಚ ದದೌ ಪುನಃ ।
ಏವಂ ಗೋಪಶ್ಚ ಗೋಪೀನಾಂ ವಿದಧೌ ಚ ಪೃಥಕ್ ಪೃಥಕ್ ॥ ೧೫೫ ॥

ಪುನಃ ಪ್ರಜಗ್ಮುಸ್ತೇ ಮತ್ತಾಃ ಸುಂದರಂ ರಾಸಮಂಡಲಂ ।
ಪೂರ್ಣೇಂದುಚಂದ್ರಿಕಾಯುಕ್ತಂ ರತಿಯೋಗ್ಯಂ ಸುನಿರ್ಜನಂ ॥ ೧೫೬ ॥

ಮಾಧವೀಕೇತಕೀಕುಂದಮಾಲತೀನಾಂ ಮನೋಹರೈಃ ।
ಚಂಪಯೂಥೀಮಲ್ಲಿಕಾನಾಂ ಪುಷ್ಪೈಶ್ಚ ಸುರಭೀಕೃತಂ ॥ ೧೫೭ ॥

---

೧೫೩. ಚಂದನ, ಅಗುರು, ಕಸ್ತೂರಿ ಮತ್ತು ಕುಂಕುಮದ್ರವವನ್ನು ಮಿಶ್ರ ಮಾಡಿ, ಆಕೆಯ ವಕ್ಷಃಸ್ಥಲಕ್ಕೆ ಲೇಪಿಸಿ, ಮತ್ತೆ ಮತ್ತೆ ಆಕೆಯನ್ನು ಚುಂಬಿಸಿದನು.

೧೫೪. ಮತ್ತೊಮ್ಮೆ ಆಲಿಂಗಿಸಿಕೊಂಡು ಅವಳ ಕಂಠಕ್ಕೆ ಮಣಿಮಾಲೆಯನ್ನು ಹಾಕಿದನು. ಸಕಲ ಭೂಷಣಗಳಿಂದಲೂ ಅವಳನ್ನು ಅಲಂಕರಿಸಿ, ಅವಳ ಕಾಲುಗಳಿಗೆ ಕಾಲ್ಗೊಲಸನ್ನು ಹಾಕಿದನು.

೧೫೫. ಕಾಲಿನ ಉಗುರುಗಳಿಗೆ ಅರಗಿನ ರಸವನ್ನು ಲೇಪನಮಾಡಿದನು. ಈ ರೀತಿಯಾಗಿ ಪ್ರತಿಯೊಬ್ಬ ಗೋಪನೂ, ಪ್ರತಿಯೊಬ್ಬ ಗೋಪಿಗೂ ಪ್ರಸಾಧನವನ್ನು ಮಾಡಿದನು.

೧೫೬. ಮದಮತ್ತರಾದ ಅವರೆಲ್ಲರೂ ಪೂರ್ಣಚಂದ್ರಿಕೆಯಿಂದ ಸುಂದರವೂ, ನಿರ್ಜನವೂ, ರತಿಯೋಗ್ಯವೂ ಆದ ರಾಸಮಂಡಲಕ್ಕೆ ಮತ್ತೊಮ್ಮೆ ಹೋದರು.

೧೫೭. ಆ ರಾಸಮಂಡಲವು ಇರುವಂತಿಕೆ, ತಾಳೆ, ಮೊಲ್ಲೆ, ಜಾಜಿ, ಸಂಪಿಗೆ, ಸೇವಂತಿಗೆ, ಮಲ್ಲಿಗೆ ಮುಂತಾದ ಮನೋಹರವಾದ ಪುಷ್ಪಗಳಿಂದ ಸುವಾಸಿತವಾಗಿದ್ದಿತು.

ದೃಷ್ಟ್ವಾ ಚ ಸ್ಫುಟಿತಂ ಪುಷ್ಪಂ ಚಯನಂ ಕರ್ತುಮೀಶ್ವರೀ ।
ಗೋಪೀರ್ನಿಯೋಜಯಾಮಾಸ ಕೌತುಕೇನ ಚ ರಾಧಿಕಾ ॥ ೧೫೮ ॥

ಕಾಶ್ಚಿನ್ನಿಯೋಜಯಾಮಾಸ ಮಾಲಾನಿರ್ಮಾಣಕರ್ಮಣಿ ।
ಕಾಶ್ಚಿತ್ತಾಂಬೂಲಸಜ್ಜೇಷು ಕಾಶ್ಚಿಚ್ಚಂದನಘರ್ಷಣೇ ॥ ೧೫೯ ॥

ಮಾಲಾಚಂದನತಾಂಬೂಲಂ ಗೋಪೀದತ್ತಂ ಚ ಸುಂದರೀ ।
ದದೌ ಕೃಷ್ಣಾಯ ಸಂಪ್ರೀತ್ಯಾ ಸಸ್ಮಿತಾ ವಕ್ರಲೋಚನಾ ॥ ೧೬೦ ॥

ಕಾಶ್ಚಿನ್ನಿಯೋಜನಂ ಚಕ್ರೇ ಕೃಷ್ಣಸಂಗೀತಕರ್ಮಣಿ ।
ಮೃದಂಗಮುರಜಾದೀನಾಂ ವಾದನೇಷು ಚ ಕಾಶ್ಚನ ॥ ೧೬೧ ॥

ಏವಂ ರಾಸೇ ರತಿಂ ಕೃತ್ವಾ ಲೀಲಯಾ ಹರಿಣಾ ಸಹ ।
ವಿಜಹಾರ ಚ ಸರ್ವತ್ರ ನಿರ್ಜನೇಷು ಮನೋಹರಂ ॥ ೧೬೨ ॥

---

೧೫೮. ಅರಳಿದ ಆ ಹೂವುಗಳನ್ನು ನೋಡಿ ಸರ್ವೇಶ್ವರಿಯಾದ ರಾಧಾದೇವಿಯು ಅವುಗಳನ್ನೆಲ್ಲ ಕೊಯ್ಯಲು ಗೋಪಿಯರನ್ನು ನಿಯೋಜಿಸಿದಳು.

೧೫೯. ಕೆಲವು ಗೋಪಿಯರನ್ನು ಮಾಲೆ ಕಟ್ಟುವ ಕೆಲಸದಲ್ಲೂ, ಕೆಲವರನ್ನು ತಾಂಬೂಲ ಸಿದ್ಧತೆಯ ಕಾರ್ಯದಲ್ಲೂ, ಮತ್ತೆ ಕೆಲವರನ್ನು ಚಂದನಘರ್ಷಣ ಕಾರ್ಯದಲ್ಲೂ ನಿಯಮಿಸಿದಳು.

೧೬೦. ಆ ಗೋಪಿಯರು ರಚಿಸಿಕೊಟ್ಟ ಮಾಲೆ, ಚಂದನ, ತಾಂಬೂಲ ಮುಂತಾದವುಗಳನ್ನು ಸುಂದರಿಯಾದ ರಾಧೆಯು ತೆಗೆದುಕೊಂಡು ಸ್ಮಿತಮುಖಿಯಾಗಿ ಓರೆಗಣ್ಣಿನಿಂದ ನೋಡುತ್ತ, ಶ್ರೀಕೃಷ್ಣನಿಗೆ ಪ್ರೀತಿಯಿಂದ ಕೊಟ್ಟಳು.

೧೬೧. ಕೃಷ್ಣನ ಗುಣವರ್ಣನೆಯನ್ನು ಮಾಡುವ ಕೆಲಸದಲ್ಲಿ ಕೆಲವು ಗೋಪಿಯರನ್ನೂ, ಮೃದಂಗ, ಮುರಜ ಮುಂತಾದ ವಾದ್ಯಗಳನ್ನು ಬಾರಿಸುವ ಕೆಲಸದಲ್ಲಿ ಕೆಲವು ಗೋಪಿಯರನ್ನೂ ನಿಯಮಿಸಿದಳು.

೧೬೨. ಈ ರೀತಿಯಾಗಿ ರಾಧೆಯು ಶ್ರೀಹರಿಯೊಡನೆ ಲೀಲಾವಿಲಾಸವನ್ನಾಡಿ ಮನೋಹರವೂ, ನಿರ್ಜನವೂ ಆದ ಪ್ರದೇಶಗಳಲ್ಲೆಲ್ಲ ವಿಹರಿಸಿದಳು.

ಪುಷ್ಪೋದ್ಯಾನೇಷು ರಮ್ಯೇಷು ಸರಸಾಂ ಚ ತಟೇಷು ಚ ।
ಕಂದರೇ ಕಂದರೇ ರಮ್ಯೇ ನದೇಷು ಚ ನದೀಷು ಚ ॥ ೧೬೩ ॥

ಅತೀವ ನಿರ್ಜನಸ್ಥಾನೇ ಸ್ಮಶಾನೇ ಗಿರಿಗಹ್ವರೇ ।
ವಾಂಛಿತೇಷು ಚ ನಾರೀಣಾಂ ತ್ರಯಸ್ತ್ರಿಂಶದ್ವನೇಷು ಚ ॥ ೧೬೪ ॥

ಭಾಂಡೀರೇ ಶ್ರೀವನೇ ರಮ್ಯೇ ಕದಂಬಕಾನನೇ ತಥಾ ।
ತುಲಸೀಕಾನನೇ ಕುಂದವನೇ ಚಂಪಕಕಾನನೇ ॥ ೧೬೫ ॥

ನಿಂಬಾರಣ್ಯೇ ಮಧುವನೇ ಜಂಬೀರಕಾನನೇ ತಥಾ ।
ನಾಲಿಕೇರವನೇ ಪೂಗವನೇ ಚ ಕದಲೀವನೇ ॥ ೧೬೬ ॥

ಬದರೀಕಾನನೇ ಬಿಲ್ವವನೇ ನಾರಿಂಗಕಾನನೇ ।
ಅಶ್ವತ್ಥಕಾನನೇ ವಂಶವನೇ ದಾಡಿಮಕಾನನೇ ॥ ೧೬೭ ॥

---

೧೬೩. ರಮ್ಯವಾದ ಪುಷ್ಪೋದ್ಯಾನಗಳಲ್ಲೂ, ಸರಸ್ತೀರಗಳಲ್ಲೂ, ಮನೋಹರವಾದ ಗುಹೆಗಳಲ್ಲೂ, ನದನದಿಗಳಲ್ಲೂ ವಿಹಾರಮಾಡಿದಳು.

೧೬೪. ಅತ್ಯಂತ ನಿರ್ಜನವಾದ ಸ್ಥಳಗಳಲ್ಲೂ, ಸ್ಮಶಾನವಲ್ಲೂ, ಗಿರಿಗುಹೆಗಳಲ್ಲೂ. ಗೋಪಸ್ತ್ರೀಯರಿಗೆ ಅಭೀಪ್ಸಿತವಾದ ಮೂವತ್ತುಮೂರು ವನಗಳಲ್ಲೂ ಕ್ರೀಡಿಸಿದಳು.

೧೬೫. ರಮ್ಯವಾದ ಭಾಂಡೀರ ಮತ್ತು ಶ್ರೀವನವಲ್ಲೂ, ಕದಂಬ ಮತ್ತು ತುಲಸೀವನದಲ್ಲೂ, ಕುಂದ ಮತ್ತು ಚಂಪಕಕಾನನದಲ್ಲೂ ಆ ರಾಧೆಯು ವಿಹರಿಸಿದಳು.

೧೬೬. ನಿಂಬಾರಣ್ಯದಲ್ಲೂ, ಮಧುವನದಲ್ಲೂ, ಜಂಬೀರ(ನಿಂಬ) ಕಾನನದಲ್ಲೂ, ನಾಲಿಕೇರ(ತೆಂಗು) ಪೂಗ(ಅಡಿಕೆ) ಮತ್ತು ಕದಲೀವನದಲ್ಲೂ ಆ ರಾಧೆಯು ವಿಹರಿಸಿದಳು.

೧೬೭. ಬದರೀಕಾನನದಲ್ಲೂ, ಬಿಲ್ವವನದಲ್ಲೂ, ನಾರಂಗ (ಕಿತ್ತಲೆ) ವನದಲ್ಲೂ, ಅಶ್ವತ್ಥ, ವಂಶ (ಬಿದಿರು) ಮತ್ತು ದಾಡಿಮ ವನಗಳಲ್ಲೂ ಆ ರಾಧೆಯು ವಿಹರಿಸಿದಳು.

ಮಂದಾರಕಾನನೇ ತಾಲವನೇ ಚೂತವನೇ ತಥಾ ।
ಕೇತಕೀಕಾನನೇಽಶೋಕವನೇ ಖರ್ಜೂರಕಾನನೇ ॥ ೧೬೮ ॥

ಆಮ್ರಾತಕವನೇ ಜಂಬೂಗಹನೇ ಶಾಲಕಾನನೇ ।
ಕಂಟಕೇ ಕಾನನೇ ಪದ್ಮವನೇ ಜಾತಿವನೇ ಮುನೇ ॥ ೧೬೯ ॥

ನ್ಯಗ್ರೋಧಗಹನೇ ಘೋರೇ ಶ್ರೀಖಂಡಕಾನನೇ ತಥಾ ।
ಪ್ರಹೃಷ್ಟಕೇಸರವನೇ ಸರ್ವತೋಽಪಿ ವಿಲಕ್ಷಣೇ ॥ ೧೭೦ ॥

ಏವಂ ರೇಮೇ ಕೌತುಕೇನ ಕಾಮಾತ್ತ್ರಿಂಶದ್ದಿವಾನಿಶಂ ।
ತಥಾಽಪಿ ಮಾನಸಂ ಪೂರ್ಣಂ ನ ಚ ಕಿಂಚಿದ್ಬಭೂವಹ ॥ ೧೭೧ ॥

ನಕಾಮಿನೀನಾಂ ಕಾಮಶ್ಚ ಶೃಂಗಾರೇಣ ನಿವರ್ತತೇ ।
ಅಧಿಕಂ ವರ್ಧತೇ ಶಶ್ವದ್ಯಥಾಽಗ್ನಿರ್ಘೃತ ಧಾರಯಾ ॥ ೧೭೨ ॥

---

೧೬೮. ಮಂದಾರ (ಪಾರಿಜಾತ) ಕಾನನದಲ್ಲೂ, ತಾಲ ಮತ್ತು ಚೂತ (ಸಿಹಿಮಾವು) ವನಗಳಲ್ಲೂ ಕೇತಕಿ, ಅಶೋಕ ಮತ್ತು ಖರ್ಜೂರ ವೃಕ್ಷಗಳಿರುವ ಕಾನನಗಳಲ್ಲೂ ಆ ರಾಧೆಯು ವಿಹರಿಸಿದಳು.

೧೬೯. ಕಶಿಮಾವಿನ ವನದಲ್ಲೂ, ನೇರಳೆಯ ವನದಲ್ಲೂ, ಶಾಲಕಾನನದಲ್ಲೂ, ಕಂಟಕಕಾನನದಲ್ಲೂ, ಪದ್ಮ ಮತ್ತು ಜಾಜೀವನದಲ್ಲೂ ಆ ರಾಧೆಯು ಶ್ರೀಹರಿಯೊಡನೆ ಕ್ರೀಡಿಸಿದಳು.

೧೭೦. ದೊಡ್ಡದಾದ ಆಲದವನದಲ್ಲೂ, ಶ್ರೀಖಂಡಕಾನನದಲ್ಲೂ, ಎಲ್ಲಕ್ಕೂ ವಿಲಕ್ಷಣವಾಗಿ ವಿಕಸಿತವಾಗಿರುವ ಸುರಗೀವನದಲ್ಲೂ, ಆ ರಾಧೆಯು ಶ್ರೀಕೃಷ್ಣನೊಡನೆ ವಿಹರಿಸಿದಳು.

೧೭೧. ಈ ರೀತಿಯಾಗಿ ಮೂವತ್ತು ಹಗಲೂ ರಾತ್ರಿ ಸಕಾಮಳಾಗಿ ವಿಹರಿಸಿದಳು. ಆದರೂ ಆಕೆಯ ಮನಸ್ಸಿಗೆ ಸ್ವಲ್ಪವೂ ತೃಪ್ತಿಯಾಗಲಿಲ್ಲ.

೧೭೨. ಕಾಮಿನಿಯರ ಕಾಮಾಭಿಲಾಷೆಯು ಕಾಮಸುಖದಿಂದ ನಿವೃತ್ತಿಯಾಗುವುದಿಲ್ಲ ತುಪ್ಪದಧಾರೆಯಿಂದ ಅಗ್ನಿಯು ಅಭಿವೃದ್ಧಿಯಾಗುವಂತೆ ಕಾಮೋಪಭೋಗದಿಂದ ಕಾಮವೃದ್ಧಿಯಾಗುವುದು.

ಜಗ್ಮುರ್ದೇವಾಃ ಸ್ವಗೇಹಂ ಚ ದೇವ್ಯಶ್ಚ ಮುನಯಸ್ತಥಾ ।
ತೇ ಸರ್ವೇ ಪ್ರಶಶಂಸುಶ್ಚ ವಿಸ್ಮಯಂ ಚ ಯಯುರ್ಮುದಾ ॥ ೧೭೩ ॥

ಗೇಹೇ ಗೇಹೇ ನೃಪೇಂದ್ರಾಣಾಂ ಲೇಭಿರೇ ಜನ್ಮ ಭಾರತೇ ।
ದಗ್ಧಾಃ ಕಾಮಾಗ್ನಿನಾಂಽಶೇನ ದೇವ್ಯಃ ಶೃಂಗಾರಲಾಲಸಾಃ ॥ ೧೭೪ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ಶ್ರೀ ಕೃಷ್ಣ ಜನ್ಮ ಖಂಡೇ
ಪೂರ್ವಾರ್ಧೇ ನಾರದನಾರಾಯಣಸಂವಾದೇ
ರಾಸಕ್ರೀಡಾಪ್ರಸ್ತಾವೋ ನಾಮ
ಅಷ್ಟಾವಿಂಶೋಽಧ್ಯಾಯಃ

---

೧೭೩. ಈ ರೀತಿಯಾದ ರಾಸಕ್ರಿಡೆಯನ್ನು ನೋಡಿ ದೇವದೇವಿಯರೂ ಮುನಿಗಳೂ ತಮ್ಮ ತಮ್ಮ ಮಂದಿರಕ್ಕೆ ತೆರಳಿದರು ಅವರೆಲ್ಲರೂ ಆಶ್ಚರ್ಯಭರಿತರಾಗಿ ಶ್ರೀಕೃಷ್ಣನ ರಾಸಕ್ರೀಡೆಯನ್ನು ಹೊಗಳಿದರು.

೧೭೪. ಶೃಂಗಾರಲೋಲುಪರಾದ ದೇವಿಯರೆಲ್ಲರೂ ಕಾಮಾಗ್ನಿಯಿಂದ ದಗ್ಧರಾಗಿ ಭರತಖಂಡದಲ್ಲಿ ರಾಜಶ್ರೇಷ್ಠರ ಮನೆಗಳಲ್ಲಿ ತಮ್ಮ ತಮ್ಮ ಅಂಶದಿಂದ ಜನ್ಮವೆತ್ತಿದರು.

ಇಲ್ಲಿಗೆ ಶ್ರೀ ಬ್ರಹ್ಮವೈವರ್ತ ಮಹಾಪುರಾಣದ ಶ್ರೀಕೃಷ್ಣ ಜನ್ಮಖಂಡದಲ್ಲಿ
ರಾಸಕ್ರೀಡಾಪ್ರಸ್ತಾವವೆಂಬ ಇಪ್ಪತ್ತೆಂಟನೆಯ
ಅಧ್ಯಾಯವು ಮುಗಿದುದು.

ಇಪ್ಪತ್ತೆಂಟನೆಯ ಅಧ್ಯಾಯದ ಸಾರಾಂಶ

ಒಮ್ಮೆ ಶ್ರೀಹರಿಯು ಮಧುಮಾಸದ ಶುಕ್ಲ ತ್ರಯೋದಶಿಯ ರಾತ್ರಿ ಪೂರ್ಣ ಚಂದ್ರೋದಯ ಸಮಯದಲ್ಲಿ ಬೃಂದಾವನದಲ್ಲಿದ್ದ ರಾಸಮಂಡಲಕ್ಕೆ ಹೋದನು. ಆ ರಾಸಮಂಡಲವು ರತಿಕ್ರೀಡೆಗೆ ಉಚಿತವಾದ ಉದ್ದೀಪಕಸಾಮಗ್ರಿಗಳಿಂದ ಕೂಡಿದ ಒಂಭತ್ತುಲಕ್ಷ ರಾಸಮಂದಿರಗಳಿಂದ ಶೋಭಿಸುತ್ತಿದ್ದಿತು. ಕಾಮುಕನಾದ ಕೃಷ್ಣನು ಅಲ್ಲಿಗೆ ಬಂದು ಗೋಪಿಯರ ಕಾಮೋದ್ದೀಪನಾರ್ಥವಾಗಿ ತನ್ನ ಕೊಳಲನ್ನು ಬಾರಿಸಿದನು. ಅದರ ಮಧುರಧ್ವನಿಯನ್ನು ಕೇಳಿದ ಕೂಡಲೇ ಅವನ ಪ್ರಿಯತಮೆಯಾದ ರಾಧೆಯು ಮನೆಗೆಲಸವನ್ನು ಬಿಟ್ಟು ರಾಸಮಂಡಲಕ್ಕೆ ಹೊರಟಳು. ಕೂಡಲೇ ರಾಧೆಯ ಆಪ್ತಸಖಿಯರೆನಿಸಿದ ಸುಶೀಲೆಯೇ ಮುಂತಾದ ಮೂವತ್ತು ಮೂರು ಗೋಪಿಯರು ಸಪರಿವಾರರಾಗಿ ಸಂಭೋಗಸಾಧನಗಳೊಡನೆ ರಾಧೆಯ ಸಮೀಪಕ್ಕೆ ಬಂದರು. ಅನಂತರ ಎಲ್ಲರೂ ಒಟ್ಟಾಗಿ ರಾಸಮಂಡಲಕ್ಕೆ ತೆರಳಿದರು. ಶ್ರೀಹರಿಯು ರಾಧೆಯೇ ಮುಂತಾದ ಒಂಭತ್ತುಲಕ್ಷ ಗೋಪಿಯರನ್ನು ನೋಡಿ ಪರಮಾನಂದಭರಿತನಾಗಿ ತನ್ನ ಪ್ರಧಾನರೂಪದಿಂದ ರಾಧೆಯೊಡನೆಯೂ, ನಾನಾ ರೂಪಗಳಿಂದ ಇತರ ಗೋಪಿಯರೊಡನೆಯೂ ಮನಬಂದಂತೆ ಸ್ಥಲ ಮತ್ತು ಜಲದಲ್ಲಿ ವಿಹಾರಮಾಡಿದನು. ಶ್ರೀಹರಿಯ ರಾಸಕ್ರೀಡೆಯನ್ನು ದೇವತೆಗಳೆಲ್ಲರೂ ನೋಡಿ ಆನಂದದಿಂದ ಅವನ ಮೇಲೆ ಹೂಮಳೆಗರೆದರು.

ಗೌರೀವ್ರತವನ್ನಾಚರಿಸಿ ಶ್ರೀಕೃಷ್ಣನೇ ತಮಗೆ ಕಾಂತನಾಗಬೇಕೆಂದು ಬಯಸಿದ್ದ ಕಾಮಿನಿಯರ ಕಾಮಿತಾರ್ಥಗಳನ್ನೆಲ್ಲ ಶ್ರೀಕೃಷ್ಣನು ರಾಸಮಂಡಲದಲ್ಲಿ ಪೂರ್ಣಗೊಳಿಸಿದನು. ಆದರೂ ಕಾಮಶಾಂತಿಯಾಗದ ಅನೇಕ ದೇವಿಯರು ಭರತಖಂಡದಲ್ಲಿ ರಾಜಶ್ರೇಷ್ಠರ ಮನೆಗಳಲ್ಲಿ ಹುಟ್ಟಿ ಕಾಮಲಾಲಸೆಯರಾದರು.

'ನ ಜಾತು ಕಾಮಃ ಕಾಮಾನಾಮುಪಭೋಗೇನ ಶಾಮ್ಯತಿ
ಹವಿಷಾ ಕೃಷ್ಣವರ್ತ್ಮೇವ ಭೂಯ ಏವಾಭಿವರ್ಧತೇ' ॥

ಕಾಮಾಭಿಲಾಷೆಯು ಕಾಮೋಪಭೋಗದಿಂದ ಶಾಂತವಾಗುವುದಕ್ಕೆ ಬದಲು ಅಗ್ನಿಗೆ ಹವಿಸ್ಸನ್ನು ಹಾಕಿದರೆ ಹೇಗೋ ಹಾಗೆ ಇನ್ನೂ ಅಭಿವೃದ್ಧಿಯಾಗುತ್ತದೆ. ಆದಕಾರಣ ಇಂದ್ರಿಯಗಳನ್ನು ನಿಗ್ರಹಿಸಿ, ಕಾಮವನ್ನು ಜಯಿಸಬೇಕೆಂಬುದೇ ಈ ಅಧ್ಯಾಯದ ಸಾರಾಂಶ. ಈ ರೀತಿ ಇಂದ್ರಿಯಗಳನ್ನು ಜಯಿಸಿದವರು ಪ್ರಾಪಂಚಿಕವಾದ ವಿಷಯಗಳಿಂದ ನಿರ್ಲಿಪ್ತರಾಗಿ ಶ್ರೀಹರಿಯ ಧ್ಯಾನದಲ್ಲೇ ನಿರತರಾಗಿ ಕ್ರಮೇಣ ಮುಕ್ತರಾಗುವರು.

